ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು
ಬಿದರಿ ಚಂದ್ರಭಾಗಾ

ಮಾರ್ಗದರ್ಶಕರು
ಡಾ. ಶಿವಾನಂದ ಎಸ್. ವಿರಕ್ತಮಠ
ಪ್ರವಾಚಕರು,
ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩ ೨೭೬

೨೦೦೭

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು

ಬಿದರಿ ಚಂದ್ರಭಾಗಾ

ಮಾರ್ಗದರ್ಶಕರು

ಡಾ. ಶಿವಾನಂದ ಎಸ್. ವಿರಕ್ತಮಠ

ಪ್ರವಾಚಕರು,

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ-೫೮೩ ೨೭೬

೨೦೦೭



ಮಾರ್ಗದರ್ಶಕರ ದೃಢೀಕರಣ ಪತ್ರ

ಬಿದರಿ ಚಂದ್ರಭಾಗಾ ಅವರು 'ಹೈದರಾಬಾದ ಕರ್ನಾಟಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ' ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

27/9/07

ಸ್ಥಳ : ವಿದ್ಯಾರಣ್ಯ
ದಿನಾಂಕ : 27-9-2007

ಡಾ. ಶಿವಾನಂದ ವಿರಕ್ತಮಠ
ಪ್ರವಾಚಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರ ಪ್ರಮಾಣ ಪತ್ರ

'ಹೈದರಾಬಾದ ಕರ್ನಾಟಕದ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ' ಎಂಬ ಮಹಾ ಪ್ರಬಂಧವನ್ನು **ಡಾ. ಶಿವಾನಂದ ವಿರಕ್ತಮಠ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾ ಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 27-9-2007

ಬಿದರಿ ಚಂದ್ರಭಾಗಾ
ಶಿಕ್ಷಕ ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅರಿಕೆ

ಪ್ರಸ್ತುತ ಅಧ್ಯಯನಕ್ಕೆ ಮೂಲ ಪ್ರೇರಣೆ ನನ್ನ ಅವ್ವ ತಂಗೆಮ್ಮ ಬಿದರಿ. ಇದಕ್ಕೆ ಒತ್ತಾಸೆಯಾದವರು ಸಂಗಾತಿ ಶಂಕರ. ಕನ್ನಡ ವಿಶ್ವವಿದ್ಯಾಲಯದ ಪುನಃಶ್ಚೇತನ ಶಿಬಿರಕ್ಕೆ ಬಂದಿದ್ದಾಗ ಡಾ. ಶಿವಾನಂದ ಎಸ್. ವಿರಕ್ತಮಠರೊಂದಿಗಿನ ಮಾತೂ ಅದನ್ನು ಬೆಂಬಲಿಸಿದ ಪರಿಣಾಮವೇ ಈ ಸಂಶೋಧನಾ ಸಂಪ್ರಬಂಧ.

ಮಹಿಳಾ ವಿಷಯ ಈಹೊತ್ತಿನ ಜರೂರಾಗಿ ಬೆಳೆಯುತ್ತಿದೆ. ಆರಂಭದಿಂದಲೂ ಮಹಿಳಾ ವಿಷಯ ಕುರಿತು ಆಸಕ್ತಿ ಬೆಳೆಸಿಕೊಂಡಿದ್ದ ನಾನು ಸಾಹಿತ್ಯದಲ್ಲಿ ಮಹಿಳಾ ಬದುಕನ್ನು ಶೋಧಿಸಲು ಹೈದರಾಬಾದ ಕರ್ನಾಟಕ ಸಾಹಿತ್ಯದ ಚೌಕಟ್ಟನ್ನು ಇಟ್ಟುಕೊಂಡು ಅಧ್ಯಯನ ಕೈಗೊಂಡಾಗ, ಮೊದಲಿಗೆ ಎದುರಾದದ್ದು ಗ್ರಂಥಗಳನ್ನು ಹೇಗೆ ಸಂಪಾದಿಸುವುದೆಂಬ ಸಮಸ್ಯೆ. ಇದನ್ನು ಮಹಿಪಾಲರೆಡ್ಡಿ ಮುನ್ನೂರು, ಕಾಂಚನಾ ಗೌಡರ, ಬಂಡಯ್ಯ ಸ್ವಾಮಿ ಬೀದರ, ಅಮರೇಶ ನುಗಡೋಣಿ ಹಾಗೂ ಗವಿಸಿದ್ಧಪ್ಪ ಪಾಟೀಲರು ಹಗುರಗೊಳಿಸಿದರು.

ಮಹಿಳಾ ಬದುಕನ್ನು ಶೋಧಿಸಲು ಸಾಹಿತ್ಯದಲ್ಲಿ ಈಗಾಗಲೇ ಜಾರಿಯಲ್ಲಿರುವ ಮಾನದಂಡಗಳು ಸೂಕ್ತವಾಗಲಾರವು. ಹಾಗಾಗಿ ಮಹಿಳಾ ಅಧ್ಯಯನ ಡಿಪ್ಲೋಮಾಕ್ಕೆ ಸೇರಿಕೊಳ್ಳುವಂತೆ ಸೂಚಿಸಿ, ನನ್ನ ಗ್ರಹಿಕೆಯ ಗೊಂದಲಗಳನ್ನು ತಿಳಿಗೊಳಿಸುತ್ತಾ ಮಾರ್ಗದರ್ಶನ ನೀಡಿ ಸಂಪ್ರಬಂಧಕ್ಕೆ ಒಂದು ಸ್ವರೂಪ ಬರಲು ಕಾರಣರಾದವರು ಡಾ. ಶಿವಾನಂದ ಎಸ್. ವಿರಕ್ತಮಠರು ಡಿಪ್ಲೋಮಾದ ನನ್ನ ಅಧ್ಯಯನ ಮನನವಾಗುವಂತೆ ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಎಚ್.ಎಸ್. ಶ್ರೀಮತಿಯವರು ಪಾಠ ಹೇಳುತ್ತಾ ಹೇಳಿಸುತ್ತಾ ತಿಳುವಳಿಕೆ ಹೆಚ್ಚಿಸಿದರು.

ಕನ್ನಡ ಸಾಹಿತ್ಯ ವಿಭಾಗವು ಪಾಠ ಹೇಳಲು, ವಿಚಾರ ಸಂಕೀರ್ಣಗಳಲ್ಲಿ ಮತ್ತು ಪುನಃಶ್ಚೇತನ ಶಿಬಿರಗಳಲ್ಲಿ ಭಾಗವಹಿಸಲು ಅವಕಾಶವಿತ್ತು ಸಹಕರಿಸಿದೆ. ಇಲ್ಲಿಯ ವಿವಿಧ ಅಧ್ಯಯನ ವಿಭಾಗಗಳು ಅನ್ಯವಾಗದೆ ಅನ್ಯ ಜ್ಞಾನಗಳನ್ನು ಗ್ರಹಿಸಲು ಸಹಾಯಕವಾಗಿವೆ. ಹಂಪಿಯ ವಾಸ್ತವ್ಯ ಅಧ್ಯಯನಕ್ಕೆ ತುಂಬಾ ಉತ್ತಮ ಪರಿಸರವನ್ನು ಒದಗಿಸಿದೆ.

ಯು.ಜಿ.ಸಿ ಯೋಜನೆಯಡಿ ಎರಡು ವರ್ಷಗಳ ಕಾಲ ಮಹಾವಿದ್ಯಾಲಯದಿಂದ ಬಿಡುಗಡೆಗೊಳಿಸಿ ಸಂಶೋಧನಾ ಅಧ್ಯಯನ ಕೈಗೊಳ್ಳಲು ಅವಕಾಶವಿತ್ತ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಹಾಗೂ ನೃಪತುಂಗ ಮಹಾವಿದ್ಯಾಲಯಕ್ಕೆ ಶ್ರೇಯ ಸಲ್ಲುತ್ತದೆ.

ಓದುವ ಮಕ್ಕಳನ್ನು ಬಿಟ್ಟು ನಾನೇ ಓದಲು ಬಂದಾಗ ಸ್ವಲ್ಪವೂ ಬೇಸರಗೊಳ್ಳದೇ ಸಹಿಸಿದ ಚೇತನ್, ಸಚಿನ್ ಹಾಗೂ ವಿಜಯಲಕ್ಷ್ಮಿ ಇವರ ಪ್ರೀತಿ ದೊಡ್ಡದು. ಸಂಶೋಧನೆಯ ಸಂದರ್ಭದಲ್ಲಿ ಹಟಾತ್ತನೆ ಎರಗಿದ ಅನಾರೋಗ್ಯದಿಂದ ಒದಗಿದ ತೊಂದರೆಯನ್ನು ನೀಗಲು ಅವ್ವನನ್ನು ಕಳುಹಿಸಿ ಸಹಕರಿಸಿದ ತಮ್ಮಂದಿರಾದ ಬಸವರಾಜ ಹಾಗೂ ಜಯರಾಜ, ಕಾಳಜೀ ಪೂರ್ವಕ ಆರೈಕೆಗೈದ ತಂಗಿ ಶಕುಂತಲಾ

ಹಾಗೂ ಡಾ. ಸುಜಾತಾ ಅಕ್ಕಿ ಅವರ ಸಕಾಲಿಕ ಸಹಾಯವನ್ನು ಮರೆಯಲಾರೆ. ಅಧ್ಯಯನದ ಪ್ರಗತಿಯನ್ನು ಹಾಗೂ ಆರೋಗ್ಯವನ್ನು ವಿಚಾರಿಸುತ್ತಾ ನಾನಾ ರೀತಿಯ ಸಹಾಯ ನೀಡಿದ ಪದ್ಮರಾಜ ರಾಸಣಗಿ. ಅಧ್ಯಯನ ಚರ್ಚೆಗೆ ಸಮಯ ನೀಡಿದ ವಾಸುದೇವ ಅಗ್ನಿಹೋತ್ರಿ. ಆತ್ಮೀಯ ಸಹಾಯ ನೀಡಿದ ಶಕುಂತಲಾ ವಿರಕ್ತಮಠ ಹಾಗೂ ದಾಕ್ಷಾಯಿಣಿ ಮೈತ್ರಿ. ಒತ್ತಡ ತಂದಾಗಲೂ ಬೇಸರಿಸದೇ ಡಿ.ಟಿ.ಪಿ ಮಾಡಿದ ಇಂನ್‌ಟ್ರೈಡ್ ಗ್ರಾಫಿಕ್ಸ್‌ನ ಪ್ರಕಾಶ ಹಾಗೂ ಭರತ್ ಅವರಿಗೆ. ಸಕಾಲಕ್ಕೆ ಬೈಂಡಿಂಗ್ ಮಾಡಿಕೊಟ್ಟ ಮೃತುಂಜಯ ಝುರಾಕ್ಸ್‌ನ ಮಾಲೀಕರನ್ನು ಸ್ಮರಿಸುತ್ತೇನೆ.

— ಬಿದರಿ ಚಂದ್ರಭಾಗಾ

ಪರಿವಿಡಿ

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

೧. ಅಧ್ಯಯನದ ಉದ್ದೇಶ

೨.ಅಧ್ಯಯನದ ವ್ಯಾಪ್ತಿ

೩. ಅಧ್ಯಯನದ ವೈಧಾನಿಕತೆ

೩.೧ ವ್ಯಕ್ತಿನಿಷ್ಠ ದೃಷ್ಟಿಕೋನ

೩.೨ ಸ್ತ್ರೀವಾದಿ ಸೈದ್ಧಾಂತಿಕ ಚೌಕಟ್ಟಿನ ಅಳವಡಿಕೆ.

೩.೩ ಪ್ರತಿನಿಧೀಕರಣ

೪. ಈವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ ವಿಷಯವನ್ನು ಸಂಶೋಧನಾ ಅಧ್ಯಯನಕ್ಕೆ ಆಯ್ದುಕೊಳ್ಳುವಲ್ಲಿ ಮಹಿಳಾ ಬದುಕನ್ನು ಒಟ್ಟಂದದಲ್ಲಿ ಅರಿಯಬೇಕೆಂಬ ಕುತೂಹಲ ಮೊದಲನೆಯದು. ಈ ಹೊತ್ತಿನಲ್ಲಿ ಮಹಿಳಾ ಅನನ್ಯತೆಯನ್ನು ಕಟ್ಟಿಕೊಳ್ಳಬೇಕೆನ್ನುವ ಅರಿವು ಮೂಡಿರುವುದರಿಂದ ಶತಮಾನಗಳಿಂದ ಚರಿತ್ರೆಯುದ್ದಕ್ಕೂ ನಿರ್ಲಕ್ಷಕ್ಕೆ ಒಳಗಾಗಿದ್ದ ಮಹಿಳೆಯನ್ನು ಕುರಿತು ವಿವಿಧ ನೆಲೆಯಲ್ಲಿ ಅಧ್ಯಯನಗಳು ನಡೆಯುತ್ತಿವೆ. ಇದು ಈ ಹೊತ್ತಿನ ಜರೂರ ಕೂಡ ಆಗಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಮಹಿಳೆ ದಾಸ್ಯದ ನೊಗ ಹೇರಿಸಿಕೊಂಡ ಮೊಟ್ಟ ಮೊದಲ ಮಾನವ ಜೀವಿ ಎಂಬುದಕ್ಕೆ ಚರಿತ್ರೆ ನಮಗೆ ಆಧಾರ ಒದಗಿಸುತ್ತದೆ. ನಮ್ಮ ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಪರಂಪರಾನುಗತವಾಗಿ ಮಹಿಳೆಯರ ಬದುಕಿನ ನಿರ್ದೇಶನ ಪುರುಷಾಧೀನಗೊಂಡಿರುವುದರ ಹಿಂದೆ ಹಲವಾರು ಒತ್ತಡಗಳಿವೆ. ಮಹಿಳೆಯ ಬದುಕಿನ ಬಗೆಗೆ ಅಧ್ಯಯನಕ್ಕೆ ತೊಡಗಿ ಆಕೆಯ ಸ್ಥಾನಮಾನವನ್ನರಿಯಲು ಚರಿತ್ರೆಯ ಪದರಗಳನ್ನು ಬಿಡಿಸಬೇಕಾಗುತ್ತದೆ. ಆದಿಮ ಜನಾಂಗದ ಪ್ರಾರಂಭಿಕ ಹಂತದಲ್ಲಿ ಈಗಿರುವ ಅಸಮಾನತೆ ಕಾಣಿಸುವುದಿಲ್ಲ. ಮಾತೃ ಪ್ರಧಾನ ಸಮಾಜ ವ್ಯವಸ್ಥೆಯ ಸಂದರ್ಭದಲ್ಲಿ ಮಹಿಳೆಯ ಸ್ಥಾನ ಉನ್ನತವಾಗಿಯೆ ಇತ್ತು ಎನ್ನುವುದಕ್ಕೆ ಚರಿತ್ರೆ ಸಾಕ್ಷಿಗಳನ್ನು ಒದಗಿಸುತ್ತದೆ. ಬೇಟೆಯಾಡಿ, ಸ್ವಾವಲಂಬಿ, ಸ್ವಾಭಿಮಾನದ ಸ್ವತಂತ್ರ ಜೀವನ ನಡೆಸಿದ ಮಹಿಳೆ ನಂತರದ ಅವಧಿಯಲ್ಲಿ ಪರಾಧೀನತೆಗೆ ಸಂದದ್ದರ ಹಿಂದೆ ಪುರುಷ ಪ್ರಧಾನ ವ್ಯವಸ್ಥೆಯ ರಾಜಕಾರಣ ಕೆಲಸ ನಿರ್ವಹಿಸಿದೆ.

ಹನ್ನೆರಡನೇ ಶತಮಾನದ ವಚನ ಚಳುವಳಿಯ ಸಂದರ್ಭದಲ್ಲಿ ಸಮಾನ ನೆಲೆಯ ಸ್ಥಾನಮಾನವನ್ನು ಪಡೆದಿದ್ದ ಈ ಪ್ರದೇಶದ ಮಹಿಳೆ, ನಂತರದ ರಾಜಕೀಯ ಸ್ಥಿತ್ಯಂತರಗಳ ಪ್ರಭಾವದಲ್ಲಿ ಪುನಃ ಅಧೀನ ಸ್ಥಿತಿಗೆ ತಳ್ಳಲ್ಪಟ್ಟು ಅವಕಾಶ ವಂಚಿತಳಾದದ್ದು ಮಾತ್ರವಲ್ಲ, ಹೆಣ್ಣು ಶಿಶು ಮಾರಾಟ, ಭಾನಾಮತಿ, ಬೆತ್ತಲೆ ಸೇವೆ ಹಾಗೂ ಜೋಗತಿಯಂಥ ಅನಿಷ್ಠ ಸಂಪ್ರದಾಯ ಆಚರಣೆಗಳಿಗೆ ಸಿಲುಕಿ ನರಳುತ್ತಿದ್ದಾಳೆ. ಮೇಲ್‌ವರ್ಗದ ಮಹಿಳೆ ರಕ್ಷಣೆಯ ನೆಪದಲ್ಲಿ ಗೃಹಬಂಧಿಯಾಗಿದ್ದರೆ, ಕೆಳವರ್ಗದ ಮಹಿಳೆ ರಕ್ಷಣೆಯೇ ಇಲ್ಲದವಳಾಗಿದ್ದಾಳೆ. ಅವಿದ್ಯಾವಂತ ಮುಗ್ಧ ಮಹಿಳೆಯರ ಶೋಷಣೆ ನಿರಂತರ ನಡೆಯುತ್ತಿದೆ. ದೇವರು-ಧರ್ಮದ ಹೆಸರಲ್ಲಿ ಮೂಢ ನಂಬಿಕೆಗಳಿಗೆ, ತಂತ್ರ ಮಂತ್ರಗಳಿಗೆ ವಶರಾಗುವ ಇಂಥ ಮಹಿಳೆಯರು ಹಳ್ಳಿಯ ಜಮೀನ್ದಾರರಿಗೆ, ಧಣಿಗಳಿಗೆ, ಅಧಿಕಾರಿಗಳಿಗೆ ಪ್ರತಿಷ್ಠಿತ ವ್ಯಕ್ತಿಗಳಿಗೆ ಸುಲಭವಾಗಿ ಸಿಗುವ ಭೋಗದ ವಸ್ತುಗಳಾಗಿದ್ದಾರೆ.

ಧರ್ಮಕ್ಕಿರುವ ಶ್ರೀಮಂತರ ಆರ್ಥಿಕ ಬೆಂಬಲದ ಪ್ರತಿಫಲವಾಗಿ ಶ್ರೀಮಂತರಿಗೆ ಒದಗಿದ ಧರ್ಮದ ಕುಮ್ಮಕ್ಕು ಅವರ ಲೋಲುಪತೆಯನ್ನು ಧರ್ಮ ಬದ್ಧವಾಗಿಸಿ, ಮಹಿಳಾ ಶೋಷಣೆಗೆ ಮಾರ್ಗವಾಗಿದೆ. ತಂತ್ರಮಂತ್ರಗಳ ಬಲದಲ್ಲಿ 'ಭಾನಮತಿ' ಎಂಬ ಕುಟಿಲ ವಿದ್ಯೆಯನ್ನು ಪ್ರಯೋಗಿಸುವ ಮೂಲಕ ಮಹಿಳೆಯರನ್ನು ಶೋಷಿಸುವಲ್ಲಿ ಬೀದರ ಜಿಲ್ಲೆ ಹೆಸರಾಗಿದೆ. 'ಭಾನಾಮತಿ' ವಿದ್ಯೆಯನ್ನು ಸಾಧಿಸಲು ಬಾಲಕಿಯರನ್ನು ಬಲಿಕೊಡಲಾಗುತ್ತಿದೆ. 'ಜೋಗತಿ' ಅಥವಾ ದೇವದಾಸಿ ಪದ್ಧತಿ ದೇವರ ಹೆಸರಲ್ಲಿ ನಡೆಯುತ್ತಿದ್ದು ಹೆಣ್ಣುಗಳನ್ನು ವೇಶ್ಯಾವಾಟಿಕೆಗೆ ದೂಡುವ ಸುಲಭ ಮಾರ್ಗವಾಗಿದೆ. ಕಿತ್ತು ತಿನ್ನುವ ಬಡತನ, ಅಜ್ಞಾನ, ಅನಕ್ಷರತೆ ಮೂಢನಂಬಿಕೆಗಳಲ್ಲಿ ನರಳುತ್ತಿರುವ ಮಹಿಳೆಯರ ಬದುಕಿನ ವಾಸ್ತವವನ್ನು ಕಥನ ಸಾಹಿತ್ಯ ಪರಿಭಾವಿಸಿದ, ಗ್ರಹಿಸಿದ ವಿಶ್ಲೇಷಿಸಿದ ಪರಿ ಯಾವುದು ಎಂಬುದನ್ನು ಅಧ್ಯಯನ ಮಾಡುವುದಾಗಿದೆ.

೧. ಅಧ್ಯಯನದ ಉದ್ದೇಶ :

ಹೈದರಾಬಾದ ಕರ್ನಾಟಕದ ರಾಜಕೀಯ, ಭೌಗೋಳಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಹಿನ್ನೆಲೆಯನ್ನು ಗುರುತಿಸುವುದರ ಜೊತೆಗೆ ಇಲ್ಲಿಯ ಕಥನ ಸಾಹಿತ್ಯ ಮಹಿಳಾ ಬದುಕಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಸಂವೇದನೆಗಳನ್ನು ಹೇಗೆ ರೂಪಿಸಿದೆ ಎಂಬುದನ್ನು ಅಧ್ಯಯನಕ್ಕೆ ಒಡಪಡಿಸುವುದು, ಚರಿತ್ರೆ, ಜಾನಪದ ಹಾಗೂ ಸಮಕಾಲಿನ ಪರಿಸರದಲ್ಲಿ ರೂಪುಗೊಂಡ ಮಹಿಳಾ ಬದುಕು ಇಲ್ಲಿನ ಸಾಹಿತ್ಯದಲ್ಲಿ ಪ್ರತಿನಿಧೀಕರಣಗೊಂಡ ಬಗೆಯನ್ನು ಪರಿಶೀಲಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಮಹಿಳಾ ಬದುಕು ಕೇಂದ್ರಿತ ಅಧ್ಯಯನದಲಿ ಮಹಿಳೆಯ ಬದುಕನ್ನು ವಿವರಿಸುವ ವಿಧಾನಗಳತ್ತ ಗಮನಹರಿಸುವುದು ಮುಖ್ಯವಾಗಿದೆ. ಅದನ್ನು ವಿವರಿಸುವ ಸಂದರ್ಭದಲ್ಲಿ ಬೇರೆ ಬೇರೆ ಅಂಶಗಳು ಪ್ರಭಾವ ಬೀರುತ್ತವೆ. ಸ್ತ್ರೀತ್ವ, ಸ್ತ್ರೀಸತ್ವ ಕಲ್ಪನೆಗಳು ಪೂರ್ವ ನಿರ್ಧಾರಿತ ವಿಚಾರಗಳಿಂದ ಪ್ರೇರಣೆ ಪಡೆದಿರುವುದನ್ನು ಇಂದು ತಿಳಿದುಕೊಳ್ಳಲಾಗಿದೆ. ಸಂಪ್ರದಾಯ, ನಂಬಿಕೆ, ಚಾರಿತ್ರಿಕತೆ, ಸಾಂಸ್ಕೃತಿಕ ಪರಿಸರ, ಪುರುಷ ಕೇಂದ್ರಿತ ಪ್ರಜ್ಞೆ ಇವೇ ಮೊದಲಾದ ಅಂಶಗಳಿಂದ ಅವಳ ಬದುಕಿನ ಮೇಲೆ ಪ್ರಭಾವ ಬೀರಿರುತ್ತವೆ. ಈ ಅಂಶಗಳಿಂದ ಹೊರತು ಪಡಿಸಿ ಮಹಿಳೆಯ ನಿಜ ವ್ಯಕ್ತಿತ್ವವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಇಂದಿನ ಯೋಚನಾ ಕ್ರಮವಿದೆ.

ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯ ಬದುಕಿನ ಸ್ಥಿತಿಗತಿಗಳನ್ನು ಗುರುತಿಸಲು ಕೈಗೊಳ್ಳುವ ಪ್ರಯತ್ನ ಇಲ್ಲಿದೆ. ಶ್ರೀಮಂತ ಮಧ್ಯಮ ಮತ್ತು ದಲಿತ ವರ್ಗದ ಮಹಿಳಾ ಬದುಕು ಹೇಗೆ ರೂಪುಗೊಂಡಿದೆ. ಉಡುಗೆ, ತೊಡುಗೆ, ಶಿಕ್ಷಣ, ಉದ್ಯೋಗ, ಉತ್ಪಾದನೆಗಳು ಮಹಿಳೆಯ ಬದುಕನ್ನು ಹೇಗೆ ಪ್ರಭಾವಿಸಿವೆ? ಸಂಗೀತ, ನೃತ್ಯ ಮತ್ತು ಅಭಿನಯ ಕಲೆಗಳಲ್ಲಿ ತೊಡಗಿಸಿಕೊಂಡ ಮಹಿಳೆಯರು ಯಾರು? ಮತ್ತು ಅವರನ್ನು ಸಮಾಜ ಹೇಗೆ ಸ್ವೀಕರಿಸಿದೆ? ಬದುಕನ್ನು ಕುರಿತು ಮಹಿಳೆಯ ನಿಲುವೇನು? ನಿಜಾಮ ಆಡಳಿತದಲ್ಲಿ ಮಹಿಳೆಯ ಬದುಕಿನ ಸ್ಥಿತಿಗತಿಗೂ ಸ್ವಾತಂತ್ರ್ಯಾ ನಂತರದ ಮಹಿಳೆಯ ಬದುಕಿನ ಸ್ಥಿತಿಗತಿಗೂ ಇರುವ ವ್ಯತ್ಯಾಸ, ರಜಾಕಾರ ಚಳುವಳಿಯಲ್ಲಿ ಮಹಿಳೆಯ ಪಾತ್ರ, ಸಮಕಾಲೀನ ಸಂದರ್ಭದಲ್ಲಿ ಮಹಿಳಾ ಹೋರಾಟದ ನೆಲೆಗಳು, ಮಹಿಳೆಯ ಬದುಕಿನ ಪುರಾಣದ ವಾಸ್ತವವೇನು? ಈ ಕಲ್ಪನೆಗಳನ್ನು ಮಹಿಳೆ ಒಡೆದುಕೊಳ್ಳಲು

ಪ್ರಯತ್ನಿಸುತ್ತಿದ್ದಾಳೆಯೆ? ಅಥವಾ ಪುರುಷ ಚಿಂತನೆಯ ತತ್ವವನ್ನು ಅರಗಿಸಿಕೊಂಡಿದ್ದಾಳೆಯೆ? ಕರ್ನಾಟಕದ ಇತರ ಪ್ರದೇಶದ ಮಹಿಳೆಯರ ಬದುಕಿನ ಸ್ಥಿತಿಗತಿಯ ಅಂತರ, ಜನಪದ ಸಾಹಿತ್ಯ ಮಹಿಳಾ ಬದುಕನ್ನು ಕಟ್ಟಿಕೊಡುವ ರೀತಿ, ಚರಿತ್ರೆ ಮತ್ತು ಸಮಕಾಲೀನತೆಯನ್ನು ಪರಿಶೀಲಿಸಿ ಮಹಿಳಾ ಬದುಕಿನ ಒಟ್ಟಂದದ ಚಿತ್ರಣವನ್ನು ಗುರುತಿಸುವುದು ಈ ಅಧ್ಯಯನದ ಯೋಜನೆಯಾಗಿದೆ.

೨. ಅಧ್ಯಯನದ ವ್ಯಾಪ್ತಿ :

ಮಹಿಳಾ ಬದುಕಿಗೆ ಸಂಬಂಧಿಸಿದಂತೆ ಸಾಹಿತ್ಯ ಒದಗಿಸುವ ಕೆಲವು ಮಾದರಿಗಳು, ಮಹಿಳಾ ಬದುಕಿನ ವಿಭಿನ್ನ ನೆಲೆಗಳನ್ನು ಗುರುತಿಸಲು ಸಹಾಯಕವೆನಿಸುತ್ತವೆ. ಈ ವಿಭಿನ್ನ ಮಾದರಿಗಳ ಮೂಲಕ ಮಹಿಳಾ ಬದುಕನ್ನು ಅರಿಯುವ ಸಾಧ್ಯತೆ ಇದೆ ಎನ್ನುವ ದಿಕ್ಕಿನಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ, ಮಹಿಳಾ ಬದುಕಿನ ಪ್ರತಿನಿಧೀಕರಣ ಸಂಶೋಧನಾ ಅಧ್ಯಯನದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಪ್ರಕಾರವಾಗಿರುವ ಸಣ್ಣ ಕತೆ ಮತ್ತು ಕಾದಂಬರಿ ಪ್ರಕಾರವನ್ನು ಒಳಗೊಂಡಿರುವ ಕಥನ ಸಾಹಿತ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕಥನ ಸಾಹಿತ್ಯವನ್ನು ಮಹಿಳಾ ಕೇಂದ್ರಿತ ದೃಷ್ಟಿಕೋನದಿಂದ ಅಧ್ಯಯನಕ್ಕೆ ಒಳಪಡಿಸಲಾಗುವುದು. ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಥನ ಸಾಹಿತ್ಯಕ್ಕೆ ನೂರು ವರ್ಷಗಳ ಇತಿಹಾಸವಿದೆ. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕಥನ ಸಾಹಿತ್ಯದ ಆರಂಭವಾಗಿದೆ. ಆಧುನಿಕತೆ ಮತ್ತು ವೈಚಾರಿಕತೆಗಳು ಈ ಭಾಗಕ್ಕೆ ತಡವಾಗಿ ಪ್ರವೇಶವಾದುದರಿಂದ, ಉಳಿದ ಪ್ರದೇಶಗಳ ಸಾಹಿತ್ಯದಲ್ಲಿ ಕಂಡುಬರುವ ಪಾತ್ರಚಿತ್ರಣ, ತಂತ್ರ, ಕಲೆಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಗಮನಾರ್ಹ ಬದಲಾವಣೆ ಕಂಡು ಬರುವುದಿಲ್ಲ. ಆಯಾ ಕಾಲದ ಹಿನ್ನೆಲೆಯಲ್ಲಿ ಸಾಹಿತ್ಯ ಪರಿಕಲ್ಪನೆ ಮೂಡಿಬಂದಿದೆ. ಪ್ರಸ್ತುತ ಅಧ್ಯಯನವು ಮಹಿಳಾ ಕೇಂದ್ರಿತವಾಗಿರುವುದರಿಂದ ಸಾಹಿತ್ಯದಲ್ಲಿ ಮೂಡಿರುವ ಮಹಿಳಾ ಬದುಕನ್ನು ಕುರಿತ ಪರಿಕಲ್ಪನೆಯನ್ನು ತಿಳಿದುಕೊಳ್ಳುವುದು ಇಲ್ಲಿ ಮುಖ್ಯ ವಿಚಾರವಾಗಿದೆ. ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪರಿಕಲ್ಪನೆ ಆಯಾ ಕಾಲದ ಸಾಮಾಜಿಕ ಸಂದರ್ಭ, ರಾಜಕೀಯ ಬೆಳವಣಿಗೆ ಸಮಕಾಲೀನ ಚಿಂತನಾಕ್ರಮ ಮೊದಲಾದ ಅಂಶಗಳಿಂದ ಪ್ರಭಾವಗೊಂಡಿರುತ್ತವೆ. ಇವುಗಳಿಂದ ಹೊರತಾಗಿ ಬರಹಗಾರರ ಧೋರಣೆ, ನಿಲುವುಗಳೂ ಈ ಪರಿಕಲ್ಪನೆಯಲ್ಲಿ ಪಾಲುಗೊಳ್ಳುತ್ತವೆ. ಹೈದರಾಬಾದ ಕರ್ನಾಟಕ ಕಥನಗಳಲ್ಲಿ ಸ್ತ್ರೀಪಾತ್ರ ಚಿತ್ರಣದ ಮೂಲಕ ಮೂಡಿರುವ ಮಹಿಳಾ ಬದುಕಿನ ನಿರ್ವಚನದಲ್ಲಿ ಪಾಲುಗೊಂಡಿರುವ ಬೇರೆ ಬೇರೆ ವಿಚಾರಗಳನ್ನು ಗಮನಿಸುತ್ತ ಸಾಹಿತ್ಯದಲ್ಲಿ ಕಾಣಿಸಿರುವ ಮಹಿಳಾ ಬದುಕಿನ ಸ್ವರೂಪವನ್ನು ತಿಳಿದುಕೊಳ್ಳಲಾಗುವುದು.

ಅಧ್ಯಯನಕ್ಕೆ ಕಥನ ಸಾಹಿತ್ಯ ಪ್ರಕಾರವನ್ನೇ ಆಯ್ದುಕೊಳ್ಳುವಲ್ಲಿ ಅದರ ಲೌಕಿಕ ಗುಣದ ಲೋಕದೃಷ್ಟಿ ಪ್ರಧಾನವಾದುದು. ಕಾವ್ಯ ರೂಪಕಾತ್ಮಕ ಹಾಗೂ ಪ್ರತಿಮಾತ್ಮಕವಾಗಿದ್ದು, ವಾಸ್ತವವನ್ನು ಗ್ರಹಿಸಲು ಕಥನ ಸೂಕ್ತವೆನಿದ್ದರಿಂದ ಹೈದರಾಬಾದ ಪ್ರದೇಶದ ಕಥನ ಸಾಹಿತ್ಯದ ವ್ಯಾಪ್ತಿಯನ್ನು ಮಿತಿಯಾಗಿರಿಸಿಕೊಳ್ಳಲಾಗಿದೆ. ಸಾಹಿತ್ಯದ ಇತರ ಪ್ರಕಾರಗಳಿಗಿಂತ ಅತಿ ಹೆಚ್ಚು ಸಂಖ್ಯೆಯಲ್ಲಿ ಕಥನ ಸಾಹಿತ್ಯ ಕೃತಿಗಳು ಬೆಳಕು ಕಂಡಿವೆ. ಈ ಎಲ್ಲ ಕೃತಿಗಳನ್ನು ಸಮಗ್ರವಾಗಿ ಅಧ್ಯಯನದ ವ್ಯಾಪ್ತಿಗೆ ಒಳಪಡಿಸುವುದು ಕಷ್ಟ ಸಾಧ್ಯವಾಗಿರುವುದರಿಂದ

ಇಲ್ಲಿ ಸ್ಥೂಲವಾಗಿ ಸ್ತ್ರೀ ಪ್ರಧಾನತೆಗೆ ಅವಕಾಶ ನೀಡುವ ಕೃತಿ ಹಾಗೂ ಕೃತಿಕಾರರನ್ನಷ್ಟೇ ಗಮನಕ್ಕೆ ತರಲಾಗುವುದು. ಮಹಿಳಾ ಬದುಕನ್ನು ವಾಸ್ತವ ನೆಲೆಯಲ್ಲಿ ಗ್ರಹಿಸಲು ಹೈದರಾಬಾದ ಕರ್ನಾಟಕದ ಪ್ರಮುಖ ಬರಹಗಾರರನ್ನು ಪ್ರಾತಿನಿಧಿಕವೆಂದು ಆಯ್ಕೆಮಾಡಿಕೊಂಡು, ಅವರ ಮಹಿಳಾಕೇಂದ್ರಿತ ವಸ್ತುವನ್ನುಳ್ಳ ಕಥನ ಸಾಹಿತ್ಯವನ್ನು ಇಲ್ಲಿ ವಿವೇಚಿಸಿಕೊಳ್ಳಲಾಗುವುದು.

೩. ವೈಧಾನಿಕತೆ :

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿಯ ಮಹಿಳಾ ಬದುಕನ್ನು ಅಧ್ಯಯನ ಶಿಸ್ತಿಗೆ ಅಳವಡಿಸಲು ಈ ಕೆಳಗಿನ ವೈಧಾನಿಕತೆಯನ್ನು ಅನುಸರಿಸಲಾಗುವುದು.

೧. ವ್ಯಕ್ತಿನಿಷ್ಠ ದೃಷ್ಟಿಕೋನ

೨. ಸ್ತ್ರೀವಾದಿ ಸೈದ್ಧಾಂತಿಕ ಚೌಕಟ್ಟಿನ ಅಳವಡಿಕೆ.

೩. ಪ್ರತಿನಿಧೀಕರಣ

ಮುಂದೆ ಇವನ್ನು ಸಂಕ್ಷಿಪ್ತವಾಗಿ ವಿವರಿಸಿಕೊಳ್ಳೋಣ.

೧. ವ್ಯಕ್ತಿನಿಷ್ಠ ದೃಷ್ಟಿಕೋನ :

ಸಾಂಪ್ರದಾಯಿಕ ಸಂಶೋಧನಾ ವಿಧಾನ, ಸಂಶೋಧಕರು ತಮ್ಮ ಭಾವನೆ ಅನುಭವ ಹಂಚಿಕೊಳ್ಳುವುದನ್ನು ಮತ್ತು ಸಂಶೋಧನಾ ವಸ್ತುವಿನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವುದನ್ನು ನಿರಾಕರಿಸುತ್ತದೆ. ಏಕೆಂದರೆ ಸಂಶೋಧನೆಯು ಹೆಚ್ಚು ವಸ್ತುನಿಷ್ಠವಾಗಿರಬೇಕೆಂದು. ಆದರೆ ಸ್ತ್ರೀವಾದಿ ಸಂಶೋಧನೆಯಲ್ಲಿ ವಸ್ತುನಿಷ್ಠತೆಗಿಂತ ವ್ಯಕ್ತಿನಿಷ್ಠತೆಗೆ ಆದ್ಯತೆ ನೀಡಲಾಗುವುದು. Personal is political ಅಂದರೆ ವೈಯಕ್ತಿವು ರಾಜಕೀಯವಾದುದು ಅಥವಾ ಸಾರ್ವತ್ರಿಕವಾದುದು. ಯಾರೋ ಒಬ್ಬ ಹೆಣ್ಣಿನ ನೋವು ಎಲ್ಲ ಹೆಣ್ಣುಗಳ ನೋವಾಗಿರುತ್ತದೆ. ಅದು ಯಾರೊಬ್ಬಳದೆಂಬಲ್ಲ. ಅದು ವೈಯಕ್ತಿಕವಾಗಿದ್ದರೂ ಸಾರ್ವತ್ರಿಕವಾಗಿರುತ್ತದೆ. ಇಲ್ಲಿ ಇದು ವಸ್ತುನಿಷ್ಠತೆಗಿಂತ ವ್ಯಕ್ತಿ ನಿಷ್ಠವೇ ಆಗಿರುತ್ತದೆ. ಹೈದರಾಬಾದ ಕರ್ನಾಟಕದ ಅಥವಾ ಯಾವುದೇ ಒಂದು ಪ್ರದೇಶ-ಪರಿಸರದ ಜೀವಂತ ನೇರ ಸಂಪರ್ಕ ಅನುಭವವೂ ಸಂಶೋಧನೆಗೆ ಪೂರಕವಾದುದರಿಂದ ಸಹಭಾಗಿತ್ವ ಸಂಶೋಧನಾ ವಿಧಾನ (Participatety Research Method) ಇದಕ್ಕೆ ಬಹುಮುಖ್ಯ. ನಾನು ಹೈದರಾಬಾದ ಕರ್ನಾಟಕ ಪ್ರದೇಶದಲ್ಲೇ ಹುಟ್ಟಿ ಬೆಳೆದುದರಿಂದ ಈ ಭಾಗದ ಸ್ಥಿತಿಗತಿಯನ್ನು ವ್ಯಕ್ತಿಗತವಾಗಿ ಗ್ರಹಿಸಿದವಳಾಗಿದ್ದೇನೆ. ಹಾಗಾಗಿ ಸಾಹಿತ್ಯದ ಸಿದ್ಧ ಮಾನದಂಡಗಳಿಗಿಂತ ವ್ಯಕ್ತಿನಿಷ್ಠ ನೆಲೆಯಲ್ಲಿ ಇಲ್ಲಿ ಬದುಕನ್ನು ವಿಶ್ಲೇಷಿಸುವುದು ಸೂಕ್ತವೆಂದು ಕೊಂಡಿದ್ದೇನೆ.

೨. ಸ್ತ್ರೀವಾದದ ಸೈದ್ಧಾಂತಿಕ ಚೌಕಟ್ಟಿನ ಅಳವಡಿಕೆ

ಮನುಕುಲದ ಒಟ್ಟು ಸಂಖ್ಯಾ ಪ್ರಮಾಣದಲ್ಲಿ ಅರ್ಧದಷ್ಟು ಪಾಲು ಮಹಿಳೆಯರದ್ದಾದರೂ 'ಮಾನವ ಚರಿತ್ರೆ'ಯ ಅಧ್ಯಯನದಿಂದ ಮಾತ್ರ ಅವರು ಹೊರಗೇ ಉಳಿದಿದ್ದಾರೆ. ಮಹಿಳೆ ಮತ್ತು ಆಕೆಯ ಸ್ವಭಾವಗಳು ಮೊದಲಿನಿಂದಲೂ ಪುರುಷ ದೃಷ್ಟಿಕೋನದಿಂದ ರೂಪಿಸಲ್ಪಟ್ಟಿವೆ. ಪರಿಣಾಮವಾಗಿ ಅವಳ 'ಇರುವಿಕೆ'

ಹಾಗೂ ಅವಳನ್ನು 'ಕಾಣಿಸುವಿಕೆ'ಯ ನಡುವೆ ಅಗಾಧ ಅಂತರವೇರ್ಪಟ್ಟಿದೆ. ಇವೆರಡರ ನಡುವೆ ಇರುವ ಸಾಮಾಜಿಕ ಅಂತರವನ್ನು ಇಲ್ಲವಾಗಿಸಲು ಮಹಿಳೆಯರು ತಮ್ಮದೇ ಆದ ಅಸ್ಮಿತೆಯನ್ನು, ಅಭಿವ್ಯಕ್ತಿ ವಿಧಾನಗಳನ್ನು, ಲೋಕದೃಷ್ಟಿಯನ್ನು ಬೆಳೆಸಿಕೊಳ್ಳಬೇಕಾಗಿದೆ. ಪುರುಷ ಮನಸ್ಸೊಂದು ತನ್ನ ಕನಸಿನಲ್ಲಿಯೂ ಕಲ್ಪಿಸಿ ಕೊಂಡೇ ಇರದ ಮಹಿಳಾ ಅನುಭವದ ಅನೂಹ್ಯ ಪ್ರಪಂಚವನ್ನು ತೆರೆದಿಡಬೇಕಾದ ಅಗತ್ಯವಿದೆ. ಆ ಮೂಲಕ ಮಹಿಳಾ ಅನನ್ಯತೆಯನ್ನು ಉಳಿಸಿಕೊಳ್ಳಬೇಕಾಗಿದೆ.

ಸಮಾಜದಲ್ಲಿ ಲಿಂಗಾಧಾರಿತ ಅಸಮಾನತೆ ಇದೆ ಎಂಬ ಅರಿವಿನೊಂದಿಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಎದುರಿಸುವ ತಾರತಮ್ಯದ ಧೋರಣೆ, ದೌರ್ಜನ್ಯ ಹಾಗೂ ಶೋಷಣೆಗಳನ್ನು ಗುರುತಿಸುತ್ತಾ ಈ ಪ್ರವೃತ್ತಿಗಳನ್ನು ನಿವಾರಣೆ ಮಾಡಲು ನಡೆಸುವ ಪ್ರಜ್ಞಾಪೂರ್ವಕವಾದ, ಪ್ರಾಮಾಣಿಕವಾದ ಪ್ರಯತ್ನವನ್ನು 'ಸ್ತ್ರೀವಾದ' ಎಂದು ಹೇಳಬಹುದು. ಒಂದೆಡೆ ಇದು ಒಂದು ವಿಚಾರ ಧಾರೆಯೂ ಹೌದು. ಇನ್ನೊಂದೆಡೆ ಸಾಮಾಜಿಕ ಚಳುವಳಿಯೂ ಹೌದು. ಸ್ತ್ರೀವಾದವು ಪುರುಷ ದ್ವೇಷವಲ್ಲ.

ಮಹಿಳಾ ಬದುಕಿನ ವಿಭಿನ್ನ ನೆಲೆಗಳ ಹಿನ್ನೆಲೆಯಲ್ಲಿ ಮಹಿಳೆಯ ಸ್ವಭಾವವನ್ನು, ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳುವುದು ಮತ್ತು ಮಹಿಳೆಯ ಸ್ವರೂಪವನ್ನು ಅದರ ವಾಸ್ತವಿಕತೆಯೊಂದಿಗೆ ಅರ್ಥಮಾಡಿಕೊಳ್ಳುವುದು ಆಧುನಿಕ ಚಿಂತನಾಕ್ರಮದ ಒಂದು ವಿಧಾನವೂ ಆಗಿದೆ. ಸಾಹಿತ್ಯಾಭಿವ್ಯಕ್ತಿ ಭಾಷಾ ಮಾಧ್ಯಮದ ರೂಪದಲ್ಲಿ ಮಹಿಳಾ ಬದುಕನ್ನು ಶೋಧಿಸಲು ಸಾಧ್ಯವಿರುವುದರಿಂದ ಮಹಿಳಾ ಬದುಕನ್ನು ಕಟ್ಟಿಕೊಳ್ಳಲು ಪ್ರತಿನಿಧೀಕರಣದ ಪರಿಕಲ್ಪನೆಯ ಮೂಲಕ ಈ ಅಧ್ಯಯನವನ್ನು ನಡೆಸಲಾಗುವುದು. ಮಹಿಳಾ ಸಂಬಂಧಿ ಕೆಲವು ಚಿಂತನಾ ಕ್ರಮಗಳನ್ನು ಗಮನಿಸುವುದು ಹಾಗೂ ಬಹುಶಿಸ್ತೀಯ ಮತ್ತು ಅಂತರ್ ಶಿಸ್ತೀಯ ವಿಧಾನದ ನೆಲೆಯಿಂದ ಅದನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗುವುದು.

ಇಲ್ಲಿ ಮುಖ್ಯವಾಗಿ ಅಧ್ಯಯನಕ್ಕೆ ಒಳಪಡಸಲು ಆಯ್ಕೆ ಮಾಡಿಕೊಂಡ ಪಠ್ಯಗಳು ಹೊರಹಾಕುವ ಅರ್ಥವನ್ನು ತಿಳಿಯಲು ವಿಷಯ ವಿಶ್ಲೇಷಣಾ ವಿಧಾನವನ್ನು ಬಳಸಲಾಗುತ್ತದೆ. ಮಹಿಳೆಯನ್ನು ಪ್ರತಿನಿಧಿಸುವ ಕ್ರಮವನ್ನು ಅರ್ಥಮಾಡಿಕೊಳ್ಳುವಲ್ಲಿ ಮಹಿಳಾ ಬದುಕನ್ನು ಹೇಗೆ ಪ್ರತಿನಿಧಿಸಲಾಗಿದೆ. ವಿಭಿನ್ನ ಪಾತ್ರಗಳಲ್ಲಿ ಪ್ರತಿನಿಧೀಕರಣಗೊಂಡ ಮಹಿಳಾ ಬದುಕು, ಲಿಂಗವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವುದೆಂದು ಭಾವಿಸಲಾಗಿದೆ.

೩. ಪ್ರತಿನಿಧೀಕರಣ :

ಅಧ್ಯಯನವನ್ನು ಪ್ರತಿನಿಧೀಕರಣ ವಿಧಾನದಲ್ಲಿ ಕೈಗೊಳ್ಳಲಾಗುವುದು. ರೆಮಂಡ ವಿಲಿಯಮ್ಸ್-ಕೀ ವರ್ಡ್ಸ್ ಆಕ್ಸಫರ್ಡ್ ಡಿಕ್ಸ್‌ನರಿಯು ಪ್ರತಿನಿಧೀಕರಣವೆಂದರೆ ಚಿತ್ರಿಸು, ವರ್ಣಿಸು, ನಿರೂಪಿಸು, ಮೂಡಿಸು, ಬಿಂಬಿಸು ಎಂದು ಅರ್ಥೈಸುತ್ತದೆ.

ಸಂಶೋಧನೆ ಎಂಬುದು ಸತ್ಯಶೋಧನೆ ಎಂದು ಭಾವಿಸಲಾಗಿತ್ತು. ಆದರೆ ಯಾರ ಸತ್ಯ-ಲೇಖಕನ ಸತ್ಯವೆ, ಓದುಗನ ಸತ್ಯವೆ ಎಂಬ ಅನುಮಾನಗಳು ಆರಂಭವಾದವು. ಸತ್ಯವೆಂಬುದು ಒಂದಲ್ಲ ಹಲವು ಎಂಬ ವಾದ ಹುಟ್ಟಿಕೊಂಡಿತು. ಪಠ್ಯವನ್ನು ಗ್ರಹಿಸುವವರ ದೃಷ್ಟಿಕೋನವನ್ನು ಆಧರಿಸಿ ವಿಶ್ಲೇಷಣೆ ರೂಪಗೊಳ್ಳುತ್ತದೆ. ಪ್ರತಿನಿಧೀಕರಣವೆಂದರೆ ಯಾವುದೇ ಘಟನೆ, ಲೋಕಾನುಭವ, ವ್ಯಕ್ತಿ, ಸಮುದಾಯವನ್ನು

ಕುರಿತು ಭಾಷಿಕ, ಭಾಷಿಕೇತರ ಮಾಧ್ಯಮವನ್ನು ಬಳಸಿ ನಿರೂಪಿಸುವುದಾಗಿದೆ. ಹಾಗೆ ಗ್ರಹಿಸಿದ್ದನ್ನು ಪ್ರತಿನಿಧೀಕರರಿಸುವಲ್ಲಿ ಆಯಾ ವ್ಯಕ್ತಿಗಳ ದೃಷ್ಟಿಕೋನ ಕೆಲಸ ಮಾಡುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ ಎನ್ನುವಾಗ 'ಹೈದರಾಬಾದ ಕರ್ನಾಟಕ ಕಥನಗಳಲ್ಲಿ ಮಹಿಳೆಯನ್ನು ಯಾವ ರೀತಿ ಪ್ರತಿನಿಧಿಸಲಾಗಿದೆ. ಹೀಗೆ ಪ್ರತಿನಿಧಿಸುವಾಗ ಕಥನಕಾರರ ಗ್ರಹಿಕೆ ಏನಾಗಿರುತ್ತದೆ. ಹಾಗೂ ಈ ಕಥನಗಳು ಮಹಿಳೆಯನ್ನು ಪ್ರತಿನಿಧಿಸುವಲ್ಲಿ ಅದು ರೂಪಿಸುವ ವಾಸ್ತವ ಯಾವುದು ಎಂಬುದನ್ನು ನೋಡುವುದರ ಮೂಲಕ ಸಾಹಿತ್ಯ ಅಧ್ಯಯನದ ವಿದ್ಯಾರ್ಥಿಯಾದ ನಾನು ಯಾವ ರೀತಿ ಗ್ರಹಿಸುತ್ತೇನೆ ಮತ್ತು ಆ ಮೂಲಕ ನನ್ನ ದೃಷ್ಟಿಕೋನ ಮತ್ತು ಗ್ರಹಿಕೆಯನ್ನು ಅಭಿವ್ಯಕ್ತಿಸುವುದು ಮುಖ್ಯವಾಗುತ್ತದೆ.

ಒಟ್ಟನಲ್ಲಿ ಬೌದ್ಧಿಕ ಸಾಂಸ್ಕೃತಿಕ ಪ್ರಭಾವಗಳಿಗನುಗುಣವಾಗಿ ಪ್ರತಿನಿಧೀಕರಣವು ಭಿನ್ನವಾಗುತ್ತದೆ. ಅಲ್ಲದೆ ಸಾಮಾಜಿಕ ಚಿಂತನೆಗಳಿಗೆ ಅನುಗುಣವಾಗಿ ಸಾಹಿತ್ಯ ಪ್ರತಿನಿಧೀಕರಣಗೊಳ್ಳುತ್ತದೆ.

೪. ಅಧ್ಯಯನಗಳ ಸಮೀಕ್ಷೆ :

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕನ್ನು ಕುರಿತಂತೆ ವಿಸ್ತೃತ ನೆಲೆಯಲ್ಲಿ ಅಧ್ಯಯನಗಳು ನಡೆದಿಲ್ಲ. ಮೊದಲ ಬಾರಿಗೆ ೧೯೯೫ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡ ಜಿಲ್ಲೆಯ ಗದಗ ತಾಲ್ಲೂಕು ಲಕ್ಕುಂಡಿಯಲ್ಲಿ ನಡೆಸಿದ ಅತ್ತಿಮಬ್ಬೆ ಸಹಸ್ರಮಾನೋತ್ಸವ ಮತ್ತು ರಾಜ್ಯಮಟ್ಟದ ಮಹಿಳಾ ಸಾಹಿತ್ಯ ಸಮಾವೇಶದಲ್ಲಿ ಮಂಡಿತವಾದ ಪ್ರಬಂಧಗಳನ್ನೊಳಗೊಂಡ ಕೃತಿ 'ಸಂವೇಧನೆ' ಈ ಕೃತಿಯಲ್ಲಿ 'ಕಾದಂಬರಿಗಳಲ್ಲಿ ಮಹಿಳೆ' ವಿಷಯವನ್ನು ಕುರಿತು ಶ್ಯಾಮಸುಂದರ ಬಿದರಕುಂದಿ 'ಸಣ್ಣ ಕಥೆಗಳಲ್ಲಿ ಮಹಿಳೆ' ವಿಷಯವನ್ನು ಕುರಿತು ಕುಂ. ವೀರಭದ್ರಪ್ಪ ವಿಶ್ಲೇಷಿಸಿದ್ದಾರೆ. ಇವು ಮಹಿಳಾ ಸಮಾವೇಶ ಕುರಿತಾದ ಪ್ರಂಬಂಧಗಳಾದುದರಿಂದ ಇಲ್ಲಿ ಕೇವಲ ಮಹಿಳೆಯರ ಕೃತಿಗಳನ್ನು ಕುರಿತು ಚರ್ಚಿಲಾಗಿದೆ. ಈ ಚರ್ಚೆಯಲ್ಲಿ ಹೈದರಾಬಾದ ಕರ್ನಾಟಕಕ್ಕೆ ಸಂಬಂಧಿಸಿದಂತೆ ಗೀತಾ ನಾಗಭೂಷಣ ಹಾಗೂ ಬಿ.ಟಿ. ಲಲಿತಾ ನಾಯಕರ ಕಥನಗಳ ಮಹಿಳಾ ಪಾತ್ರಗಳನ್ನು ಪರಿಶೀಲಿಸಲಾಗಿದೆ.

'ಗೀತಾವರ ಕಥೆಗಳ ಮಹಿಳೆ ವೀಣಾ, ವೈದೇಹಿ ಕಮಲರ ನಾಯಕಿಯರಂತೆ ಸುಶಿಕ್ಷಿತೆಯರಲ್ಲ. ಪ್ರೀತಿ ಮತ್ತು ಲೈಂಗಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಮುಳ್ಳು ಬೇಲಿಗಳನ್ನು ಗೀತಾರ ಕಥಾ ನಾಯಕಿಯರು ಸುಲಭವಾಗಿ ದಾಟಿದಷ್ಟು ಉಳಿದ ಕಥೆಗಾರ್ತಿಯರ ನಾಯಕಿಯರಿಗೆ ಈ ಧೈರ್ಯವಿಲ್ಲ' ಎನ್ನುತ್ತಾರೆ ಕುಂ. ವೀ.

'ಈ ದಲಿತ ಹೆಂಗಸರ ದಿಟ್ಟತನದ ಹಿಂದೆ ವೈಚಾರಿಕತೆ, ಬೌದ್ಧಿಕತೆ ಯಾವುದೂ ಇಲ್ಲ. ಇಲ್ಲಿರುವುದು ವೈಯಕ್ತಿಕ ಬದುಕನ್ನು ಸ್ವಾಭಿಮಾನಕ್ಕಾಗಿ ದಕ್ಕಿಸಿಕೊಳ್ಳುವ ಹಟ, ಗ್ರಾಮೀಣ ಪರಿಸರದಲ್ಲಿ ಹಿಂಸೆಗೊಳಗಾಗುವ ಹೆಂಗಸರು ನಿರಕ್ಷರಿ ಹೆಂಗಸರು. ಅಜ್ಞಾನಿಯಾಗಿ ಪಾಳೆಗಾರಿಕೆ ಸಂಸ್ಕೃತಿಯ ಅಡಿಯಾಳಾದ ಹೆಂಗಸು ದುರ್ಬಲಳಾಗಿ ನುಚ್ಚು ನೂರಾಗುವ ಹಸೀ ವಾಸ್ತವವನ್ನು ಈ ಲೇಖಕಿಯರು ದಾಖಲಿಸಿದ್ದು ಕನ್ನಡ ಕಾದಂಬರಿಯ ಬೆಳವಣಿಗೆಯ ಲಕ್ಷಣ ಎನ್ನುತ್ತಾರೆ ಶ್ಯಾಮಸುಂದರ ಬಿದರಕುಂದಿ.

'ಬಿಸಿಲ ಹನಿಗಳು' ೧೯೯೫ ರಲ್ಲಿ ಅಮರೇಶ ನುಗಡೋಣಿಯವರ ಸಂಪಾದಕತ್ವದಲ್ಲಿ ಬೆಳಕು ಕಂಡ ಕೃತಿ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರು ಇದನ್ನು ಪ್ರಕಟಿಸಿದೆ. ಈ ಕೃತಿಯಲ್ಲಿ ಹೈದರಾಬಾದ ಕರ್ನಾಟಕದ ಇಪ್ಪತ್ತೈದು ಜನ ಕತೆಗಾರರ ತಲಾ ಒಂದರಂತೆ ಇಪ್ಪತ್ತೈದು ಪ್ರಾತಿನಿಧಿಕ ಕಥೆಗಳನ್ನು ಆಯ್ದು ಪ್ರಕಟಿಸಲಾಗಿದೆ.

ಈ ಕೃತಿಯ ಮುನ್ನುಡಿಯಲ್ಲಿ ಎಚ್.ಎಸ್. ರಾಘವೇಂದ್ರರಾವ ಅವರು ಒಟ್ಟು ಕಥೆಗಳನ್ನು ವಿಮರ್ಶಿಸುವಾಗ ಮಹಿಳಾ ಪಾತ್ರಗಳನ್ನು ಕುರಿತು ಈ ಸಂಕಲನದ ಮುಖ್ಯ ಕಥೆಗಳ ವಿಶಿಷ್ಟತೆಯಿರುವುದು ಅವರಿವರನ್ನು ಟೀಕಿಸುವುದರಲ್ಲಿ ಕಾಲ ಕಳೆಯದೆ ತಮ್ಮ ತೀವ್ರ ವಿಷಾದದ ಹಿಟ್ಟಿಗೆ ಕಷ್ಟ ಸಹಿಷ್ಣುತೆ ಹಾಗೂ ಧೈರ್ಯಗಳ ಕಾವು ಕೊಟ್ಟು ಹಿಗ್ಗು ಅನುಕಂಪಗಳನ್ನು ಹುಟ್ಟಿಸುವ ರೊಟ್ಟಿಗಳನ್ನು ತಯಾರಿಸಬಲ್ಲ ಪಾತ್ರಗಳಲ್ಲಿ ಅದರಲ್ಲೂ ಹೆಣ್ಣು ಪಾತ್ರಗಳಲ್ಲಿ ಇಂಥವರನ್ನು ಕಥೆಗಾರರು ಬೆರಗು ಮತ್ತು ಕೃತಜ್ಞತೆಗಳಿಂದ ನೋಡಿದ್ದಾರೆ ಆರಾಧಿಸಿದ್ದಾರೆ. (ಮುನ್ನುಡಿಯಿಂದ)ಎಂದು ವಿಶ್ಲೇಷಿಸಿದ್ದಾರೆ.

ಡಾ.ಎಲ್.ಜಿ. ಮೀರಾ ಅವರು ೨೦೦೪ರಲ್ಲಿ ಪ್ರಕಟಿಸಿರುವ ತಮ್ಮ 'ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ' ಎಂಬ ಕೃತಿಯ ಒಂದು ಉಪ ಶೀರ್ಷಿಕೆಯಲ್ಲಿ ಗೀತಾ ನಾಗಭೂಷಣರ 'ದಂಗೆ' ಕಾದಂಬರಿಯ ಬಹಳಷ್ಟು ಹೆಣ್ಣುಗಳು (ವಿದ್ಯಾವಂತ ಸಾತಿಯನ್ನು ಹೊರತು ಪಡಿಸಿ) ಬಡ, ದಲಿತ, ಅವಿದ್ಯಾವಂತ ವ್ಯಕ್ತಿಗಳು ಮತ್ತು ಹೊರ ಪ್ರಪಂಚದ ಪರಿಚಯ ಇಲ್ಲದವರು. ತಮ್ಮ ಮೇಲಾಗುತ್ತಿರುವ ಅನ್ಯಾಯ ಅನಾಚಾರಗಳನ್ನು ಇವರಲ್ಲಿ ಬಹಳಷ್ಟು ಜನ ಯಥಾಸ್ಥಿತಿ ಎಂದೇ ತಿಳಿದಿದ್ದಾರೆ. ತೀರಾ ಮೂಲೆಗೆ ದೂಡಲ್ಪಟ್ಟಾಗ ಅನ್ಯಾಯವನ್ನು ಪ್ರತಿಭಟಿಸುವ ಪ್ರಯತ್ನ ಮಾಡುತ್ತಾರಾದರೂ ವ್ಯವಸ್ಥೆಯನ್ನು ಬುಡಮೇಲುಗೊಳಿಸುವ ಶಕ್ತಿ ಅವರ ಪ್ರತಿಭಟನೆಗಿರುವುದಿಲ್ಲ ಎಂದು ಗುರುತಿಸುತ್ತಾರೆ. ಸಂಘಟನೆಯ ಕೊರತೆ ಇದಕ್ಕೆ ಕಾರಣವೆನ್ನುತ್ತಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ದಿ.೦೩/೦೮/೨೦೦೩ರಲ್ಲಿ ಗೀತಾ ನಾಗಭೂಷಣರ ಸಾಹಿತ್ಯವನ್ನು ಕುರಿತು ಏರ್ಪಡಿಸಿದ್ದ ಒಂದು ದಿನದ ವಿಚಾರ ಸಂಕಿರಣದ ಪುಸ್ತಕ ರೂಪ 'ಗೀತಾ ನಾಗಭೂಷಣ' ಈ ಕೃತಿಯನ್ನು ಡಾ. ಸರಸ್ವತಿ ಚಿಮ್ಮಲಗಿ ಸಂಪಾದಿಸಿದ್ದಾರೆ. ಇಲ್ಲಿ ಡಾ. ಮೀನಾಕ್ಷಿ ಬಾಳಿ 'ಗೀತಾ ನಾಗಭೂಷಣ ಅವರ ಕಾದಂಬರಿಗಳಲ್ಲಿ ಮಹಿಳಾ ಸಂವೇದನೆ' ಎಂಬ ಲೇಖನದಲ್ಲಿ 'ಶರಹದಲ್ಲಿಯ ಝೋಪಡ ಪಟ್ಟಿಯ ರೂಕ್ಷವಾದ ಬದುಕನ್ನು ಏನೇನೂ ವೈಭವೀಕರಿಸದೆ ಅದಿರುವ ಸ್ಥಿತಿಯಲ್ಲಿಯೇ ಬಟಾಬಯಲುಗೊಳಿಸುತ್ತಲೇ ಮುಖ್ಯವಾಗಿ ಅಂತಹ ಪ್ರದೇಶದಲ್ಲಿರುವ ಹೆಣ್ಣುಗಳ ಅಸಹಾಯಕ ಸ್ಥಿತಿಗೆ ಅಕ್ಷರದ ದನಿಯಾಗುವ ಕೆಲಸವನ್ನು ಗೀತಾ ಅವರು ಒಂದು ವ್ರತದಂತೆ ಪಾಲಿಸಿಕೊಂಡು ಬಂದಿದ್ದಾರೆ'. ಇವರ ಕಾದಂಬರಿಯ ನಾಯಕಿಯರು ತಮ್ಮಷ್ಟಕ್ಕೆ ಶಕ್ತಿಯಾಗಿ ಸೃಷ್ಟಿಯಾಗದೆ ಲೇಖಕಿಯ ಕೈಗೊಂಬೆಯಾಗಿ ನಿಲ್ಲುತ್ತಾರೆ. ಎಂಬ ನಿಲುವಿಗೆ ಬರುತ್ತಾರೆ.

'ಮಹಿಳಾ ಅಸ್ತಿತ್ವ ಸಂಕಥನ ಒಂದು ಪರಿಕಲ್ಪನಾತ್ಮಕ ಅಧ್ಯಯನ' ಎಂಬುದು ಕವಿತಾ ರೈ ಬಿ.ಆರ್. ಅವರು ೨೦೦೫ರಲ್ಲಿ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ. ಈ ಪ್ರಬಂಧದ ಅಧ್ಯಯನಕ್ಕೆ ಕವಿತಾ ಅವರು ವಿವಾಹ ಮತ್ತು ಕುಟುಂಬ ಪರಿಕಲ್ಪನೆಗಳನ್ನು ಆಯ್ದುಕೊಂಡಿದ್ದು ಗೀತಾ ನಾಗಭೂಷಣರ ಮೂರು ಕಾದಂಬರಿಗಳ ತಲಸ್ಪರ್ಶಿ ಅಧ್ಯಯನವಾಗಿದೆ. ವಿವಾಹ, ಕೂಡಿಕೆ, ಲೈಂಗಿಕತೆ, ದಾಂಪತ್ಯಗಳ ಸವಿವರ ಅಧ್ಯಯನದಲ್ಲಿ 'ಗಂಡಸರಿಗೆ ಶತಮಾನಗಳಿಂದಲೇ ಬೇಡವಾಗಿರುವ ಕುಟುಂಬ ವ್ಯವಸ್ಥೆ ಹೆಂಗಸರ ಆತ್ಮಸ್ಥೈರ್ಯ, ತ್ಯಾಗ, ಜೀವನದ ಮೇಲೆ ಮಾತ್ರವೇ ನಿಂತಿರುವಂತೆ ಕಾಣಬರುತ್ತದೆ. ಇದನ್ನು ಅತಿಶಕ್ತವಾಗಿ ಗೀತಾ ನಾಗಭೂಷಣ ಅವರ ಎಲ್ಲಾ ಕಾದಂಬರಿಗಳು ಬಿಂಬಿಸುತ್ತವೆ' ಎನ್ನುತ್ತಾರೆ.

ಕಾವ್ಯಶ್ರೀ ಅವರು 'ಹೈದರಾಬಾದ ಕರ್ನಾಟಕ ಪ್ರದೇಶದ ಕಾದಂಬರಿಗಳು' ಎಂಬ ಸಂಶೋಧನ ಮಹಾ ಪ್ರಬಂಧವನ್ನು ೨೦೦೫ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು ಅಧ್ಯಯನದ ಒಂದು ಭಾಗವಾಗಿ ಸ್ತ್ರೀ ಸಂವೇದನೆಯನ್ನು ಶೋಧಿಸಿದ್ದಾರೆ. ಇಲ್ಲಿ ಅವರು ಶಾಂತರಸ, ಚನ್ನಣ್ಣ ವಾಲಿಕಾರ, ಗೀತಾ ನಾಗಭೂಷಣ ಹಾಗೂ ಬಿ.ಟಿ. ಲಲಿತಾನಾಯಕರ ಕಾದಂಬರಿಗಳನ್ನು ಅಧ್ಯಯನಕ್ಕೆ ಆಯ್ದುಕೊಂಡಿದ್ದಾರೆ. ಮಹಿಳಾ ಬದುಕನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

'ಕನ್ನಡ ಕಾದಂಬರಿಗಳಲ್ಲಿ ವೇಶ್ಯಾ ಜೀವನ' ಕೆ. ಶ್ರೀಪತಿಯವರು ಕುವೆಂಪು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಮಹಾಪ್ರಬಂಧವಾಗಿದ್ದು, ವೇಶ್ಯಾ ಬದುಕಿನ ಅಧ್ಯಯನಕ್ಕೆ ಹೈದರಾಬಾದ ಕರ್ನಾಟಕದಿಂದ ಗೀತಾ ನಾಗಭೂಷಣ ಹಾಗೂ ಚನ್ನಣ್ಣ ವಾಲಿಕಾರರ ಕಾದಂಬರಿಗಳನ್ನು ಆಕರವಾಗಿ ಬಳಸಿಕೊಂಡಿದ್ದಾರೆ.

ಹೀಗೆ ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕು ಅಲ್ಲಲ್ಲಿ ಚದುರಿದಂತೆ ಅಂಶಿಕವಾಗಿ ಅಧ್ಯಯನಕ್ಕೆ ಒಳಪಟ್ಟಿದೆ. ಕೆಲ ಅಧ್ಯಯನಗಳು ಏಕಮುಖಿಯಾಗಿದ್ದು ಸೀಮಿತವಾಗಿವೆ. ಕೆಲವು ಬಹುಶಿಸ್ತೀಯ ಅಧ್ಯಯನಗಾಳಾಗಿದ್ದರೂ ಈ ಭಾಗದ ಒಂದೆರಡು ಕೃತಿಗಳಿಗೆ ಸೀಮಿತವಾಗಿವೆ. ಈ ಎಲ್ಲ ಅಧ್ಯಯಗಳನ್ನು ಗಮನಿಸುವಾಗ ಗೀತಾ ನಾಗಭೂಷಣರ ಕಥನಗಳ ಚರ್ಚೆಯೆ ಬಹುಪಾಲು ನಡೆದಿದ್ದು ಅಲ್ಲಿಯ ಮಹಿಳಾ ಬದುಕಿನ ಅನಾವರಣ ಸ್ವಲ್ಪ ಮಟ್ಟಿಗೆ ಆಗಿದೆ. ಪೂರ್ಣಪ್ರಮಾಣದ ಅಧ್ಯಯನಗಳಾಗಿಲ್ಲ. ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ ಆ ನಿಟ್ಟಿನಲ್ಲಿ ಒಂದು ಆಶಾದಾಯಕ ಪ್ರಯತ್ನವಾಗಿದೆ.

* * *

ಅಧ್ಯಾಯ : ಎರಡು

ಹೈದರಾಬಾದ ಕರ್ನಾಟಕದ ಬದುಕಿನ ಚಾರಿತ್ರಿಕ ಅವಲೋಕನ

ಅಧ್ಯಾಯ : ಎರಡು

ಹೈದರಾಬಾದ ಕರ್ನಾಟಕದ ಬದುಕಿನ ಚಾರಿತ್ರಿಕ ಅವಲೋಕನ

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಕಲಬುರಗಿ, ಬೀದರ್, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಸೇರಿವೆ. ಇವು ಹಿಂದೆ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದವು. ನವೆಂಬರ್ ೧-೧೯೫೬ ರಲ್ಲಿ ಭಾಷಾವಾರು ಪ್ರಾಂತ ರಚನೆಯಾಗಿ ಕರ್ನಾಟಕದಲ್ಲಿ ಸೇರಿದಂದಿನಿಂದ ಈ ಪ್ರದೇಶವನ್ನು 'ಹೈದರಾಬಾದ್ ಕರ್ನಾಟಕ'ವೆಂದು ಕರೆಯಲಾಗುತ್ತಿದೆ.

ಪ್ರಸ್ತುತ ಆಡಳಿತಾತ್ಮಕ ವಿಭಾಗೀಕರಣದ ಸಂದರ್ಭದಲ್ಲಿ ಹೈದರಾಬಾದ ಕರ್ನಾಟಕ ವಿಭಾಗಕ್ಕೆ ಬಳ್ಳಾರಿ ಜಿಲ್ಲೆಯನ್ನು ಸೇರಿಸಲಾಗಿದೆ. ನನ್ನ ಅಧ್ಯಯನದ ಲಕ್ಷ್ಯವಿರುವುದು ನಿಜಾಮ ಆಡಳಿತಕ್ಕೆ ಒಳಪಟ್ಟ ಅಂದಿನ ಹೈದರಾಬಾದ ಕರ್ನಾಟಕವನ್ನು ಕುರಿತು. ಆದ್ದರಿಂದ ಸಾಂಸ್ಕೃತಿಕ ವೈಲಕ್ಷಣ್ಯದ ಪ್ರದೇಶವನ್ನೇ ಪರಿಗಣಿಸಿರುವುದರಿಂದ ಬಳ್ಳಾರಿಯನ್ನು ಹೊರತುಪಡಿಸಲಾಗಿದೆ.

೨.೧ ಚಾರಿತ್ರಿಕ ಹಿನ್ನೆಲೆ :

ಚರಿತ್ರೆಯ ಎಲ್ಲ ಕಾಲಘಟ್ಟಗಳಲ್ಲಿ ಮಹಿಳೆ ಬದುಕಿ ಬಾಳಿದ್ದು ನಿಜವಾದರೂ ಪುರುಷ ನಿರ್ಮಿತ ಚರಿತ್ರೆ ರಚನೆಯಲ್ಲೆಲ್ಲೂ ಅವಳು ದಾಖಲೆಯಾಗಲಿಲ್ಲ. ಹಾಗಾಗಿ ಚರಿತ್ರೆ ಎಂಬುದು 'ಹಿಸ್‌ಸ್ಟೋರಿ' ಯಾಯ್ತು. ವಿನಃ 'ಹರ್‌ಸ್ಟೋರಿ' ಆಗಲೇ ಇಲ್ಲ. ಅದು ರಾಜ, ಮಹಾರಾಜರ ಕಥೆಯಾಯಿತು. ರಾಣಿ ರಾಜನ ಹೆಂಡತಿಯಾಗಿ ನಿಮಿತ್ತ ಮಾತ್ರಕ್ಕೆ ಕಾಣಿಸಿ ಕಣ್ಮರೆಯಾಗುತ್ತಾಳೆ. ಹೊರತು ಅವಳದೇ ಎಂದು ಹೇಳಲ್ಪಟ್ಟ ಸಂಗತಿಗಳಾವುವೂ ಅಲ್ಲಿಲ್ಲ. ಈ ಹಿನ್ನೆಲೆಯಲ್ಲಿ ಹೈದರಾಬಾದ ಕರ್ನಾಟಕದ ಚಾರಿತ್ರಿಕ ಹಿನ್ನೆಲೆಯನ್ನು ನೋಡಿದಾಗ ನಮಗೆ ಲಭ್ಯವಿರುವುದು ಅರಸುಗಳ ನವಾಬರ ಚರಿತ್ರೆಯೆ. ಎಲ್ಲಾ ಜ್ಞಾನ ವಲಯಗಳ ಚಿಂತನಾ ಕ್ರಮಗಳಲ್ಲಿ ಮಾನವ ಕೇಂದ್ರಿತ ಎಂಬ ಮಾತು 'ಪುರುಷ ಕೇಂದ್ರಿತ' ಎಂಬ ಅರ್ಥದಲ್ಲಷ್ಟೇ ಬಳಕೆಗೊಳ್ಳುತ್ತಿದ್ದು, ಮಾನವ ಚರಿತ್ರೆ ಎಂಬುದರಲ್ಲಿ ಸ್ತ್ರೀ ಒಳಗೊಂಡಿಲ್ಲ.

ಔರಂಗಜೇಬನು ದಕ್ಷಿಣ ಭಾರತದಲ್ಲಿ ತನ್ನ ದಂಡಯಾತ್ರೆ ಮುಗಿಸಿಕೊಂಡು ಮರಳುವಾಗ ತನ್ನ ಅಧೀನದಲ್ಲಿದ್ದ ದಖನ್ನಿನ ಅನೇಕ ಭಾಗಗಳನ್ನು ನೋಡಿಕೊಳ್ಳಲು ಸುಬೇದಾರರನ್ನು ನೇಮಿಸಿದ್ದ. ಈ ಸುಬೇದಾರರು ದೆಹಲಿಯ ಅಸ್ಥಿರತೆಯನ್ನು ಅರಿತುಕೊಂಡು ತಮ್ಮ ತಮ್ಮ ಅಧೀನದ ಪ್ರದೇಶಗಳಲ್ಲಿ ಸ್ವತಂತ್ರರಾಗಲು ಪ್ರಯತ್ನಿಸಿದರು. ೧೭೨೪ ರಲ್ಲಿ ಕಮರುದ್ದೀನ್ ಎಂಬ ಸುಬೇದಾರನು ಔರಂಗಬಾದನ್ನು ಕೇಂದ್ರವನ್ನಾಗಿ

ಮಾಡಿಕೊಂಡು ಸ್ವತಂತ್ರವಾಗಿ ಅಧಿಕಾರ ನಡೆಸತೊಡಗಿದ. ಇವನಿಂದಲೇ ನಿಜಾಮ ವಂಶಸ್ಥರ ಆಳ್ವಿಕೆ ಆರಂಭವಾಯಿತು. ಇವರ ಆಳ್ವಿಕೆಯಿಂದ ರೂಪುಗೊಂಡ ಹೈದರಾಬಾದ ಪ್ರಾಂತ್ಯವನ್ನು 'ನೈಜಾಂಪ್ರಾಂತ್ಯ'ವೆಂದು ಕರೆಯಲಾಯಿತು.

ಚರಿತ್ರೆಯಲ್ಲಿ ಈ ಪ್ರಾಂತ್ಯವು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹಲವು ವಿಶಿಷ್ಟ ಸಂದರ್ಭಗಳಲ್ಲಿ ಮತ್ತು ಕಾಲಾವಧಿಯಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದಿದೆ. ಚಕ್ರವರ್ತಿ ಅಶೋಕನ ಕಾಲದಲ್ಲಿ ಬೌದ್ಧಧರ್ಮದ ಪ್ರಸಾರ ಕೇಂದ್ರಗಳಾಗಿದ್ದ ಮಸ್ಕಿ, ಕೊಪ್ಪಳಗಳು ಈ ಪ್ರಾಂತ್ಯದಲ್ಲಿವೆ. ಬಾದಾಮಿಯ ಚಾಳುಕ್ಯರ ಅಧೀನಕ್ಕೆ ಈ ಪ್ರಾಂತ್ಯ ಬಂದ ಮೇಲೆ 'ಕನ್ನಡಿಗರಿಗೆ' ತಮ್ಮ ಸಂಸ್ಕೃತಿಯ ಸ್ವರೂಪವನ್ನು ರೂಪಿಸಿಕೊಳ್ಳಲು ಅನುಕೂಲವಾಯಿತು. ರಾಷ್ಟ್ರಕೂಟರ ಆಳ್ವಿಕೆಯಲ್ಲಿ ರಚನೆಗೊಂಡ ಕವಿರಾಜ ಮಾರ್ಗ ಕೃತಿಯಿಂದ ಕನ್ನಡ ಪ್ರದೇಶದ ಗಡಿರೇಖೆಗಳು ಕನ್ನಡಿಗರ ಪ್ರತಿಭೆ ಮತ್ತು ಅಂದಿನ ನಾಡು ಸಂಸ್ಕೃತಿಯ ಸತ್ವವನ್ನು ಅರಿಯಲು ಸಾಧ್ಯವಾಗಿದೆ.

೧೨ನೇ ಶತಮಾನದಲ್ಲಿ ವಚನಕಾರರ ಸಾಂಸ್ಕೃತಿಕ ಆಂದೋಲನಕ್ಕೆ ನೆಲೆಯಾದ ಕಲ್ಯಾಣ ಬಸವಣ್ಣನವರ ನೇತೃತ್ವದಲ್ಲಿ ಬೌದ್ಧಿಕ ತಾತ್ವಿಕ, ವೈಚಾರಿಕ ಸಂಘರ್ಷಗಳಿಗೆ ಕಾರಣವಾಯ್ತು. ಇಂದಿಗೂ ಪ್ರಜ್ಞಾವಂತರನ್ನು ಬೆರಗುಗೊಳಿಸುವ ವೈಚಾರಿಕ ಚಳುವಳಿ ನಡೆದದ್ದು ಈ ಪ್ರಾಂತ್ಯದಲ್ಲಿ. ಕನ್ನಡ ಸಾಹಿತ್ಯ ಚರಿತ್ರೆಗೆ ಮಹಿಳೆಯ ಪ್ರವೇಶವಾದದ್ದು ಇದೇ ಸಮಯದಲ್ಲಿ.

ಅನಂತರ ಉತ್ತರ ಭಾರತದ ಸುಲ್ತಾನರ ದಾಳಿಯಿಂದ ಅಸ್ಥಿರತೆ ಉಂಟಾಯಿತು. ಈ ಸುಲ್ತಾನರು ಈ ಪ್ರದೇಶದಲ್ಲಿ ಸ್ಥಿರವಾದ ರಾಜ್ಯವನ್ನೇನೂ ಕಟ್ಟಲಿಲ್ಲ. ಸುಮಾರು ನೂರು ವರ್ಷಗಳ ಕಾಲ ಈ ಪ್ರಾಂತ್ಯದ ಜನಸಮುದಾಯಗಳು ಯುದ್ಧದ ಭೀತಿಯಿಂದ ತಲ್ಲಣಿಸಿದವು. ಗುಲಬರ್ಗಾದಲ್ಲಿ ಬಹಮನಿ ರಾಜ್ಯ ಉದಯವಾದರೂ, ಅದು ಈ ಪ್ರಾಂತ್ಯದ ಜನರಿಗೆ ಪರಕೀಯವಾಗಿತ್ತು. ಆದರೆ ಕೆಲ ಕಾಲವಾದರೂ ಸ್ಥಿರವಾಗಿ ನಿಲ್ಲುವಂತೆ ಅದು ಕಂಡಿತು. ತುಂಗಭದ್ರಾ ನದಿಯ ಈಚೆಗೆ ವಿಜಯನಗರ ಸಾಮ್ರಾಜ್ಯವು ಆಗಲೇ ಉದಯವಾಗಿತ್ತು. 'ಬಹುಮನಿ ಅರಸರಿಗೂ ವಿಜಯನಗರ ಅರಸರಿಗೂ ಘರ್ಷಣೆ ನಡೆಯುತ್ತಿತ್ತು. ಇವೆರಡು ಪಡೆಗಳು ತಾವು ಆಕ್ರಮಿಸಿದ ಭಾಗವನ್ನೆಲ್ಲ ಕೊಳ್ಳೆ ಹೊಡೆಯುತ್ತ ಸೂರೆ ಮಾಡುತ್ತ ಪ್ರದೇಶಗಳ ಜೀವನಕ್ಕೆ ಘೋರ ಹಿಂಸೆಯನ್ನುಂಟು ಮಾಡಿದವು. ಇಷ್ಟೆಲ್ಲಕ್ಕೂ ಕಾರ್ಯ ಕ್ಷೇತ್ರವಾದುದು ಈಗಿನ ಹೈದರಾಬಾದ ಕರ್ನಾಟಕದ ಭಾಗ. ಈ ಕಥೆ ಒಂದೇ ವಿಧವಾಗಿ ಜರುಗಿದುದು ಸುಮಾರು ೨೫೦ ವರ್ಷಗಳವರೆಗೆ' ಈ ಯುದ್ಧಗಳಿಗೆ ಜನ ಸಮುದಾಯ ತತ್ತರಿಸಿ ಹೋಗಿತ್ತು. ಯುದ್ಧಗಳ ನೆರಳಲ್ಲೇ ಬದುಕುವಂತಾಗಿತ್ತು. ಇದೇ ಸಂದರ್ಭದಲ್ಲಿಯೇ ನೂರಾರು ಜನ ಸೂಫಿಗಳು ಅನುಭಾವಿಗಳು ಮತ್ತು ದಾಸರು ಕಾಣಿಸಿಕೊಂಡರು. ವಿಜಾಪುರದ ಆದಿಲ್‌ಶಾಹಿಗಳು ಈ ಪ್ರಾಂತ್ಯದಲ್ಲಿ ಸಾಮರಸ್ಯವನ್ನುಂಟು ಮಾಡಲು ಶ್ರಮಿಸಿದರು. ಭಿನ್ನ ಮತಧರ್ಮಿಯರು ಸಂಘರ್ಷಗಳ ನಡುವೆಯೂ ಕೂಡಿಬಾಳಿ ಸಂಕರ ಸಾಂಸ್ಕೃತಿಕ ಪರಿಸರವನ್ನು ನಿರ್ಮಾಣ ಮಾಡಿದರು.

ಮೊಗಲರು ಮರಾಠರು ನಂತರ ಬ್ರಿಟಿಷರು ಇಲ್ಲಿ ತಮ್ಮ ತಮ್ಮ ಪ್ರಭುತ್ವ ಸ್ಥಾಪಿಸಲು ನಿರಂತರ ಹೋರಾಟ ನಡೆಸಿದರು. ಕೃಷ್ಣ ಮತ್ತು ತುಂಗಭದ್ರಾ ನದಿಗಳ ನಡುವಿನ ಫಲವತ್ತಾದ ಪ್ರದೇಶ 'ಎಡದೊರ ನಾಡು (ದೋಆಬ್) ವಾಣಿಜ್ಯ ಬೆಳೆಗಳಿಂದ ಆರ್ಥಿಕವಾಗಿ ಮಹತ್ವದ್ದಾಗಿ ಆಳರಸರ ನಿರಂತರ ಸಂಘರ್ಷಗಳಿಗೆ ಗುರಿಯಾಗಿತ್ತು ಇದರಿಂದಾಗಿ ಈ ನಾಡ ಜನಸಮುದಾಯ ಅನೇಕ ಸಂಕಷ್ಟಗಳನ್ನು ಅನುಭವಿಸಬೇಕಾಯಿತು.

ಇನ್ನೂರೈವತ್ತು ವರ್ಷಗಳವರೆಗೆ ಆಳಿದರೂ ನಿಜಾಮರು ಬ್ರಿಟಿಷರ ಅಧೀನದಲ್ಲಿದ್ದುಕೊಂಡೇ ಅಧಿಕಾರ ನಡೆಸಿದರು. ಭಾರತದ ಸಂಸ್ಥಾನಗಳಲ್ಲೆಲ್ಲ ಹೈದ್ರಾಬಾದ್ ಸಂಸ್ಥಾನವೇ ದೊಡ್ಡದು. ಈ ಸಂಸ್ಥಾನದ ನಿಜಾಮರು ಬ್ರಿಟಿಷ್‌ರಿಗೆ ಅನೇಕ ಬಗೆಯಲ್ಲಿ ನೆರವಾಗಿ ನಾಡಿನ ಸ್ವಾತಂತ್ರ್ಯಕ್ಕಾಗಿ ನಡೆದ ಅನೇಕ ಚಳುವಳಿಗಳನ್ನು ಹತ್ತಿಕ್ಕಿದರು. ಅವರ ಸಹಾಯಕ ಸೈನ್ಯ ಪದ್ಧತಿಯ ನೀತಿಯಿಂದಾಗಿ ಜನ ಸಮುದಾಯ ಆರ್ಥಿಕ ಭಾರ ಹೊರಬೇಕಾಯಿತು. ೧೯೪೭ ಆಗಸ್ಟ್ ೧೫ ರಂದು ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದರೂ ಈ ಪ್ರಾಂತ್ಯವು ನಿಜಾಮರ ಆಳ್ವಿಕೆಯಿಂದ ಮುಕ್ತಿ ಪಡೆಯಲಿಲ್ಲ. ನಿಜಾಮನು ಹೈದರಾಬಾದ ಸಂಸ್ಥಾನವನ್ನು ಸ್ವತಂತ್ರ ಸಾಮ್ರಾಜ್ಯವನ್ನಾಗಿ ಉಳಿಸಿಕೊಂಡು ಆಳಲು ನಿರ್ಧರಿಸಿದನು. ಇದರಿಂದ ಸ್ವತಂತ್ರ ಭಾರತದಲ್ಲಿ ಈ ಪ್ರಾಂತ್ಯವು ಸೇರಿಸಿಕೊಳ್ಳಲಿಲ್ಲ. ನಿಜಾಮನ ನಿರ್ಧಾರವನ್ನು ಬೆಂಬಲಿಸಿದ ಮತೀಯ ಮನಸ್ಸಿನ 'ರಜಾಕಾರರು' ಈ ಪ್ರಾಂತ್ಯದಲ್ಲಿ ಸ್ವೇಚ್ಛಾಚಾರದಿಂದ ವರ್ತಿಸಿದರು. ಈ ರಜಾಕಾರರ ದೌರ್ಜನ್ಯದಿಂದ ಇಡೀ ಪ್ರದೇಶವು ತತ್ತರಿಸಿತು. ಅತ್ಯಾಚಾರ, ದರೋಡೆ, ಕೊಲೆ, ಸುಲಿಗೆ ದಿನನಿತ್ಯ ಸಹಜವೆಂಬಂತೆ ನಡೆದವು. ಇದರಿಂದ ಬೇಸತ್ತ ಜನರು ನೈಜಾಂ ಪ್ರಾಂತ್ಯ ತೊರೆದು ರಕ್ಷಣೆ ಪಡೆದರು. ಜನರೇ ಸಂಘಟಿತರಾಗಿ ರಜಾಕಾರರ ವಿರುದ್ಧ ಯುದ್ಧಗಳನ್ನು ಹೂಡಿದರು. ಇದರಿಂದ ಈ ಪ್ರದೇಶದಲ್ಲಿ ಬದುಕಿದ್ದ ಎಲ್ಲ ಜನ ಸಮುದಾಯಗಳು ದೌರ್ಜನ್ಯವನ್ನು ಅನುಭವಿಸಿದವು. ಕೊನೆಗೆ ಸ್ವತಂತ್ರ ಭಾರತದ ಪೋಲಿಸ್ ಕಾರ್ಯಾಚರಣೆಯಿಂದ ಈ ಪ್ರದೇಶಕ್ಕೆ ಸ್ವಾತಂತ್ರ್ಯ ದೊರೆಯುವಂತಾಯಿತು. 'ಈ ಪ್ರಾಂತ್ಯದಲ್ಲಿ ನಡೆದ ಎರಡು ದುರಂತಗಳಲ್ಲಿ ವಚನಕಾರರು ನಡೆಸಿದ ವೈಚಾರಿಕ ಪ್ರಯೋಗದಂತೆ ಕಾಣುವ ಅಂತರ ಜಾತಿ ವಿವಾಹದಿಂದ ಭುಗಿಲೆದ್ದುದು ಒಂದು ರಜಾಕಾರರ ದಾಳಿಯಿಂದ ಇಡೀ ನಾಡು ರಕ್ತಪಾತಕ್ಕೆ ಗುರಿಯಾದುದು ಎರಡನೆಯದು'

'ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನ, ಮುಂಬಯಿ ಕರ್ನಾಟಕ, ಮದರಾಸು ಕರ್ನಾಟಕ ಮತ್ತು ಕೊಡಗು ಈ ಪ್ರಾಂತ್ಯಗಳ ಸ್ಥಿತಿಗಿಂತ ಹೈದರಾಬಾದ ಕರ್ನಾಟಕದ ಸ್ಥಿತಿ ಭಿನ್ನವಾಗಿತ್ತು. ಕರ್ನಾಟಕದ ಈ ಪ್ರದೇಶಗಳಲ್ಲಿ ಬ್ರಿಟೀಷರ ಮತ್ತು ಸ್ಥಳೀಯ ಅರಸರ ಆಳ್ವಿಕೆಯಿತ್ತು. ಪರಂಪರಾಗತ ಸಂಸ್ಕೃತಿಯ ಮುಂದುವರಿಕೆಗೆ ಯಾವ ಅಡ್ಡಿಗಳಿರಲಿಲ್ಲ. ಬ್ರಿಟೀಷರ ವಸಾಹತು ವ್ಯವಸ್ಥೆಯಿಂದ ಆಧುನಿಕತೆ ಸಮಾಜದಲ್ಲಿ ಮೂಡುತ್ತಿದ್ದರಿಂದ ಬದಲಾವಣೆಯ ಪ್ರಕ್ರಿಯೆಗೂ ಜನರು ಸ್ಪಂದಿಸತೊಡಗಿದರು. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶವು ನಿಜಾಂ ಅಧೀನದಲ್ಲಿದ್ದದ್ದರಿಂದ ಪರಕೀಯ ಭಾಷೆ ಮತ್ತು ಸಂಸ್ಕೃತಿಯೇ ಅರಸರದ್ದಾಗಿರುವಾಗ ಕನ್ನಡಿಗರ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಅನೇಕ ಅಡ್ಡಿ ಆತಂಕಗಳು ಇದ್ದವು. ಮೈಸೂರು ಸಂಸ್ಥಾನದಲ್ಲಿ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಯ ಬೆಳವಣಿಗೆಗೆ ಆಳರಸರ ಪ್ರೋತ್ಸಾಹವಿತ್ತು. ಅಂಥ ವಾತಾವರಣವು ಈ ಪ್ರಾಂತ್ಯದಲ್ಲಿ ಎಂದೋ ಮಾಯವಾಗಿ ಹೋಗಿತ್ತು. ಪರಂಪರಾಗತ ಜ್ಞಾನಕ್ಕೂ ಹೊಸ ಜ್ಞಾನ ಪಡೆಯುವುದಕ್ಕೂ ಅವಕಾಶಗಳು ಬೇರೆ ಪ್ರಾಂತ್ಯಗಳಲ್ಲಿದ್ದಂತೆ ಹೈದರಾಬಾದ ಕರ್ನಾಟಕ

ಪ್ರಾಂತ್ಯಕ್ಕೆ ಇರಲಿಲ್ಲ. ಈ ಶತಮಾನದ ಆದಿಯಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತದಿಂದ ಪಶ್ಚಿಮ ದೇಶಗಳಿಗೆ ಸಂಪರ್ಕ ಸಾಧ್ಯವಾಗಿ ಹೊಸ ಚಿಂತನ ಕ್ರಮಗಳು ಲಭ್ಯವಾಗತೊಡಗಿದವು. ರಾಜಕೀಯ ಸಾಮಾಜಿಕ ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಚಿಂತಕರಿಗೆ ಹೊಸ ಜ್ಞಾನ ಚಿಂತನೆಗಳು ದಕ್ಕತೊಡಗಿದವು. ಇದರಿಂದಾಗಿ ಅನೇಕ ಕ್ಷೇತ್ರಗಳಲ್ಲಿ ಹೊಸ ವಾತಾವರಣ ಮೂಡಿ ಹೊಸ ಹಾದಿ ಹಿಡಿದವು. ಸಾಹಿತ್ಯ ಕಲೆಗಳಿಗೂ ಇದು ಪ್ರೇರಕವಾಯಿತು. ಇಂಥ ಹೊಸ ಗಾಳಿ ಹೈದರಾಬಾದ್ ಕರ್ನಾಟಕ ಪ್ರಾಂತ್ಯದೊಳಗೆ ನುಗ್ಗಲು ಸಾಧ್ಯವಾಗಲಿಲ್ಲ. ಈ ಪ್ರಾಂತ್ಯದ ಒಡಲೊಳಗೇ ಅನೇಕ ಸಮಸ್ಯೆಗಳು ಆತಂಕ, ತಲ್ಲಣಗಳು ಇದ್ದವು. ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ತೀವ್ರವಾದಾಗ ಈ ಪ್ರಾಂತ್ಯದಲ್ಲಿ ನಿಜಾಂಶಾಹಿ ವಿರುದ್ಧ ಹೋರಾಟ ತೀವ್ರವಾಗತೊಡಗಿತ್ತು."[೬]

ಹೈದರಾಬಾದ್ ಕರ್ನಾಟಕ ಪ್ರದೇಶವು ಕರ್ನಾಟಕಕ್ಕೆ ಸೇರಿ ಅರ್ಧ ಶತಮಾನ ಕಳೆದರೂ, ಕರ್ನಾಟಕದ ಉಳಿದ ಭಾಗಗಳಿಗೆ ಸರಿಸಮವಾಗಿ ಮುನ್ನಡೆಯಲು ಸಾದ್ಯವಾಗಿಲ್ಲ. ಶೈಕ್ಷಣಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ಈಗಲೂ ಹಿಂದುಳಿದ ಪ್ರದೇಶವೆಂದೇ ಗುರುತಿಸಲ್ಪಡುತ್ತದೆ. ರಾಜಸತ್ತೆ ಕಳೆದು ಪ್ರಜಾಸತ್ತೆ ಜಾರಿಗೊಂಡರೂ ಈ ಪ್ರದೇಶದ ಸ್ಥಿತಿಗತಿಗಳು ಹೆಚ್ಚೇನೂ ಸುಧಾರಣೆಗೊಂಡಿಲ್ಲ.

೨.೨ ಜನಸಾಮಾನ್ಯರ ಸ್ಥಿತಿಗತಿ :

ಸಾಮಾನ್ಯರ ಬದುಕು ಚರಿತ್ರೆಯಾದದ್ದು ತೀರ ವಿರಳ. ಇಲ್ಲವೇ ಇಲ್ಲವೆಂದರೂ ಆದೀತು. ರಾಜ ಮಹಾರಾಜರ ಚರಿತ್ರೆಗೇನೂ ಬರವಿಲ್ಲ. ಇಂಥ ಚರಿತ್ರೆಗಳಲ್ಲೇ ಪೂರಕವಾಗಿಯೋ ಪ್ರಾಸಂಗಿಕವಾಗಿಯೇ ಜನ ಸಮಾನ್ಯರ ಚರಿತ್ರೆ ನುಸುಳಿರುತ್ತದೆ. ಹೀಗೆ ನಿರುದ್ದಿಶ್ಯವಾಗಿ ಸೇರಿದುದನ್ನೇ ಹೆಕ್ಕಿ ತೆಗೆದುದನ್ನೇ ಇಟ್ಟುಕೊಂಡು ಅವರ ಸ್ಥಿತಿಗತಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಸಾಮಾನ್ಯನೆಂಬ ಕಾರಣಕ್ಕೆ ಪುರುಷನೇ ಚರಿತ್ರೆಯಲ್ಲಿ ದಾಖಲಾಗಿಲ್ಲವೆಂದ ಮೇಲೆ ಮಹಿಳೆ ದಾಖಲೆಗೊಂಡದ್ದು ಇಲ್ಲವೇ ಇಲ್ಲ. ನಿಜಾಮ ಆಳ್ವಿಕೆಯ ಕಾಲಾವಧಿಯಲ್ಲಿ ಘೋಷಾದ ಮುಸುಕಿಗೆ ತಳ್ಳಲ್ಪಟ್ಟ ಮಹಿಳೆ ಅದರಿಂದಾಚೆ ಕಾಣಿಸಿಕೊಂಡಿದ್ದೇ ಇಲ್ಲ. ಹೀಗಿರುವಾಗ ಅವಳ ಬದುಕಿನ ವಿವರಗಳು ಅನಾವರಣಗೊಳ್ಳುವುದೆಂತು? ಇತ್ತೀಚಿಗೆ ಪಾರಂಪರಿಕ ವಿಧಾನಗಳಿಗೆ ಬದಲಾಗಿ ಅನ್ಯಜ್ಞಾನವಲಯಗಳನ್ನು ಬಳಸಿಕೊಳ್ಳುವ ಮೂಲಕ ಅಂಥ ವಿವರಗಳನ್ನು ಪಡೆಯುವ ಪ್ರಯತ್ನಗಳು ನಡೆಯುತ್ತಿವೆ.

ಹೈದ್ರಾಬಾದ್ ಸಂಸ್ಥಾನದ ಆಡಳಿತದಲ್ಲಿ ಬ್ರಿಟೀಷರ ಅಧೀನದಲ್ಲಿ ನಿಜಾಮರು, ನಿಜಾಮರ ಅಧೀನದಲ್ಲಿ ಜಹಗೀರುದಾರರು, ಜಹಗೀರದಾರರ ಅಧೀನದಲ್ಲಿ ದೇಶಮುಖ್, ದೇಸಾಯಿ, ಪಟೇಲ್ ಮುಂತಾದವರು ಇದ್ದರು. ಇವರ ಅಧೀನದಲ್ಲಿ ದುಡಿಯುವ ಸಾಮಾನ್ಯ ಜನರಿದ್ದರು.[೭]

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷ ಸರಕಾರದ ನಿಷ್ಠಾವಂತನೆಂದು ಸಾಬೀತುಪಡಿಸಲು ನಿಜಾಮನು ತನ್ನ ಸಂಸ್ಥಾನದಲ್ಲಿ ಕೋಮುವಾದಿ ಹಾಗೂ ದಮನಕಾರಿ ನೀತಿಯನ್ನು ಜಾರಿಗೆ ತಂದನು ಬ್ರಿಟೀಷರಿಗೆ ಬೇಕಾದುದು ಕೂಡಾ ಇದೇ ಆಗಿತ್ತು. ನಿಜಾಮ ಜನತೆಯ ಆಶೋತ್ತರಗಳಿಗೆ ಕಿವುಡಾಗಿದ್ದನು. ಜನರು ನಿಜಾಮನ ನೇತೃತ್ವದಲ್ಲಿ ಜನಪ್ರಿಯ ಸರಕಾರ ರಚಿಸುವ ಕನಸು ಕಟ್ಟಿದರು. ಆದರೆ ಕಾಸಿಂ ರಜವಿಯ

ನಾಯಕತ್ವದಲ್ಲಿ ರಜಾಕಾರರು ಹೈದ್ರಾಬಾದ ಸಂಸ್ಥಾನದಲ್ಲಿ ನಡೆಸಿದ ಅತ್ಯಾಚಾರಗಳು ಅವರ್ಣನೀಯ. ಒಂದು ಕೈಯಲ್ಲಿ ಕುರಾನ್, ಇನ್ನೊಂದು ಕೈಯಲ್ಲಿ ಕತ್ತಿ ಹಿಡಿದ ಭಾರತದ ನಾಲ್ಕೂವರೆ ಕೋಟಿ ಮುಸ್ಲೀಮರೇ ನಮ್ಮ ಸೈನ್ಯ ಎಂಬ ಮಾತುಗಳಿಂದ ಪ್ರಚೋದಿಸುತ್ತಿದ್ದರು'[೫]

'ನಿಜಾಮ ಜನ ಸಾಮಾನ್ಯರ ಸುಖ-ದುಃಖಗಳನ್ನರಿಯದ ನಿರಂಕುಶ ಪ್ರಭುವಾಗಿದ್ದ ಎಂದು ಹಿರಿಯರು ಹೇಳಿದ ಒಂದು ವೃತ್ತಾಂತ ಹೀಗಿದೆ. ನಿಜಾಮ ಮಹಬೂಬ ಅಲಿಖಾನ್ ರಾಜ್ಯವಾಳುತ್ತಿದ್ದ ಕಾಲಕ್ಕೆ ಸಂಸ್ಥಾನದಲ್ಲಿ ಬರಗಾಲ ಬಿತ್ತು. ಜನರ ನಿಯೋಗವೊಂದು ನಿಜಾಮನನ್ನು ಭೇಟಿಯಾಗಿ ರಾಜ್ಯದಲ್ಲಿ ಬರಗಾಲ ಬಿದ್ದಿದೆ. ಜನರು ಹಸಿವೆಯಿಂದ ಕಂಗಾಲಾಗಿದ್ದಾರೆ. ಸರ್ಕಾರ್ ಏನಾದರೂ ಕ್ರಮ ಕೈಗೊಳ್ಳಬೇಕು ಎಂದು ತಮ್ಮ ಅಹವಾಲನ್ನು ಸಲ್ಲಿಸಿದರು. ಆಗ ನಿಜಾಮನು 'ಕ್ಯಾ ಲೋಗೋಂಕೊ ಘೀ ಖಿಚಡಿ ಭೀ ನಹಿ ಮಿಲ್ತಿ' ಜನರಿಗೆ ಹುಗ್ಗಿ ತುಪ್ಪ ಕೂಡ ಸಿಗುವುದಿಲ್ಲವೇ? ಎಂದು ಆಶ್ಚರ್ಯದಿಂದ ಕೇಳಿದನಂತೆ'[೬]

'ನಿಜಾಮ ಸಂಸ್ಥಾನದಲ್ಲಿ ಯಾವ ಪ್ರಜೆಗೂ ಯಾವ ವಿಷಯದ ಮೇಲೂ ತನ್ನ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವಿರಲಿಲ್ಲ. ನಿಜಾಮನ ಫರ್ಮಾನು (ಆಜ್ಞೆ)ಗಳನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಸಭೆ ಮೆರವಣಿಗೆಗಳನ್ನು ನಡೆಸಲು ಕೂಡ ಸರಕಾರದ ಅನುಮತಿ ಪಡೆಯಬೇಕಾಗಿದ್ದಿತು. ಯಾವ ಬರಹವೂ ಪತ್ರಿಕಾ ಬರಹವೂ ಕೂಡಾ ಸರಕಾರದ ಕಣ್ಣು ತಪ್ಪಿಸಿ ಪ್ರಕಟವಾಗುವಂತಿರಲಿಲ್ಲ. ಸೆನ್ಸಾರ್ ಅಷ್ಟು ಬಿಗಿಯಾಗಿತ್ತು. ದೇಶಾದ್ಯಂತ ಸ್ವಾತಂತ್ರ್ಯ ಚಳುವಳಿಯ ನೇತಾರ ಪಕ್ಷವಾಗಿದ್ದ ಕಾಂಗ್ರೆಸ್ ಕೂಡ ಹೈದರಾಬಾದ ಸಂಸ್ಥಾನದಲ್ಲಿ ನಿಷೇಧಕ್ಕೆ ಒಳಗಾಗಿತ್ತು.'[೭]

ಹೈದರಾಬಾದ ಸಂಸ್ಥಾನದ ರಾಜಕೀಯ ಆರ್ಥಿಕ ವ್ಯವಸ್ಥೆ ನೂರಕ್ಕೆ ನೂರು ಪಾಳೆಯಗಾರಿ ಸ್ವರೂಪದ್ದಾಗಿತ್ತು. ಸಂಸ್ಥಾನದ ನೆಲದ ಒಟ್ಟು ೫೩,೦೦೦,೦೦೦ ಎಕರೆ ವಿಸ್ತೀರ್ಣದಲ್ಲಿ ಸುಮಾರು ೬೦% ದಷ್ಟು ಭೂಮಿ ದಿವಾನಿ ಅಥವಾ ಖಾಲ್ಸಾ ಪ್ರದೇಶವೆಂದು ಕರೆಸಿಕೊಂಡಿತ್ತು. ಅಂದರೆ ಇಲ್ಲಿ ರೆವೆನ್ಯೂ ಅಡಳಿತದ ಸಂಪೂರ್ಣ ಅಧಿಕಾರ ಸರಕಾರದ್ದೆ. ಹತ್ತು ಪ್ರತಿಶತದಷ್ಟು ಜಮೀನು ನಿಜಾಮನ ಸ್ವಂತ ಆಸ್ತಿ. ಈ ಜಮೀನಿನಲ್ಲಿ ದುಡಿಯುತ್ತಿದ್ದ ರೈತರು ನಿಜಾಮನ ಖಾಯಂ ಜೀತದಾಳುಗಳಿಂತಿದ್ದರು. ಸರ್ಫಕಾಸ್ ಎಂದು ಕರೆಯುತ್ತಿದ್ದ ಈ ಜಮೀನಿನಿಂದ ನಿಜಾಮನಿಗೆ ವರ್ಷಕ್ಕೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ೨೫,೦೦೦,೦೦೦ ರೂ.ಗಳಷ್ಟು ಆದಾಯವಿದ್ದಿತು. ಈ ಪ್ರದೇಶದ ರೈತರ ಬೆಳೆಯಲ್ಲಿ ಬಹುಭಾಗ ನಿಜಾಮನ ಸ್ವಂತ ಖಜಾನೆ ಸೇರಿದರೂ ಆತ ಈ ಪ್ರದೇಶದ ಅಭಿವೃದ್ಧಿಗೋಸ್ಕರ ಅಥವಾ ಅಲ್ಲಿ ದುಡಿಯುವ ಜನರ ಒಳತಿಗೋಸ್ಕರ ಒಂದು ಸವೆದ ಕಾಸನ್ನು ಖರ್ಚು ಮಾಡುತ್ತಿರಲಿಲ್ಲ.

ತಮ್ಮ ದೇಶದ ಊಳಿಗ ಮಾನ್ಯತೆಯ ವಿರುದ್ಧ ಪ್ರಗತಿಪರ ಹೋರಾಟವನ್ನು ನಡೆಸಿದ್ದಂತಹ ಬ್ರಿಟಿಷ್ ವಸಾಹತುಶಾಹಿ ಬಂಡವಾಳಿಗರು ಭಾರತದಲ್ಲಿ ಮಾತ್ರ ಊಳಿಗಮಾನ್ಯ ಶಕ್ತಿಗಳನ್ನೇ ಆಧರಿಸಿ ನೆಲೆ ನಿಂತರು. ವಸಾಹತುಶಾಹಿ ಲೂಟಿಗೆ ಅಗ್ಗದ ದರದಲ್ಲಿ ಕಚ್ಚಾವಸ್ತುಗಳು ಮತ್ತು ಅಗ್ಗದ ಶ್ರಮವೂ ಅಗತ್ಯವಾಗಿದ್ದವು. ನಮ್ಮ ದೇಶದ ಊಳಿಗಮಾನ್ಯ ರಚನೆಯು ಇವೆರಡನ್ನೂ ವಸಾಹತು ಶಾಹಿಗಳಿಗೆ ಒದಗಿಸಿತು.[೮]

'ಸಂಸ್ಥಾನದ ಜಮೀನದಾರರ ಮನೆಗೆಲಸ ಜಮೀನಿನ ಕೆಲಸ ಅಥವಾ ಅವರು ಹೇಳಿದ ಯಾವ ಕೇಲಸವನ್ನೇ ಆಗಲಿ ಅವರ ಆಳುಗಳು ಸಂಬಳ ತೆಗೆದುಕೊಳ್ಳದೆ ಮಾಡಬೇಕಾಗಿತ್ತು. ವರ್ಷದಲ್ಲಿ ಕೆಲವು

ದಿನ ಊರಿನ ಪ್ರತಿಯೊಂದು ಮನೆಯವರೂ ಜಮೀನುದಾರನ ಮನೆಯ ಕೆಲಸಗಳನ್ನು ಪ್ರತಿಫಲವಿಲ್ಲದೆ ಮಾಡಬೇಕಾಗಿತ್ತು. ಇದಕ್ಕೆ ಬಿಟ್ಟಿ ಚಾಕರಿ ಎನ್ನುತ್ತಿದ್ದರು. ಬುಡಕಟ್ಟು ಜನರು ವಾಸಿಸುವ ಪ್ರದೇಶಗಳು ಮತ್ತು ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಈ ಬಿಟ್ಟಿ ಅಥವಾ ಬೇಗಾರು ಪದ್ಧತಿ ಈಗಲೂ ರೂಢಿಯಲ್ಲಿದೆ. ಆಗ ಈ ಬಿಟ್ಟಿ ದುಡಿಮೆ ಸಾರ್ವತ್ರಿಕವಾಗಿತ್ತು. ಇಲ್ಲಿನ ಹಳ್ಳಿಗಳಲ್ಲಿ ಪ್ರತಿಯೊಂದು ಹರಿಜನ ಕುಟುಂಬದಲ್ಲಿಯೂ ಒಬ್ಬರು, ಜಮೀನುದಾರರಲ್ಲಿ ಬಿಟ್ಟಿ ಕೆಲಸ ಮಾಡಲೇ ಬೇಕಾಗಿದ್ದಿತ್ತು. ಜಮೀನುದಾರರ ಕೆಲಸ ಮಾತ್ರವಲ್ಲದೆ ಜಮಾಬಂದಿಗೆಂದು ಹಳ್ಳಿಗೆ ಬರುವ ರೆವಿನ್ಯೂ ಆಡಳಿತದ ತಹಶಿಲ್ದಾರ, ಮಾಮಲೇದಾರ ಮುಂತಾದವರು ಹೇಳಿದ ಕೆಲಸಗಳನ್ನು ಬಿಟ್ಟಿಯಾಗಿ ಮಾಡಬೇಕಾಗಿದ್ದಿತು. ಅವರ ಅವಶ್ಯಕತೆಗಳನ್ನು ಪ್ರತಿಫಲವಿಲ್ಲದೆ ಪೂರೈಸಬೇಕಾಗಿತ್ತು. ಇದಕ್ಕೆ ಸರಬರಾಯಿ ಎನ್ನುತ್ತಿದ್ದರು. ಉದಾಹರಣೆಗೆ ಚರ್ಮದ ಕೆಲಸ ಮಾಡುವವರು ಜಮೀನುದಾರರ ಮೆಟ್ಟು, ಬಾವಿ ರಾಟೆಯ ಹಗ್ಗ ಮುಂತಾದವುಗಳನ್ನು ಕಾಸು ಪಡೆಯದೆ ಹೊಲಿದು ಕೊಡಬೇಕು. ಬೋಯಿಯರು, ಬೆಸ್ತರು ಜಮೀನುದಾರರ ಪಲ್ಲಕ್ಕಿಗಳನ್ನು ಹೊರಬೇಕು. ಕ್ಷೌರಿಕರು ನಿತ್ಯ ಕ್ಷೌರ ಮಾಡಿ ರಾತ್ರಿ ಕಾಲೊತ್ತಬೇಕು. ಹೆಂಡ ಇಳಿಸುವವರು ಜಮೀನುದಾರರ ಕುಡಿತಕ್ಕೆ ಐದರಿಂದ ಹತ್ತು ಮರಗಳನ್ನ ಅಲಾಯದ್(ಮೀಸಲು) ಇಡಬೇಕು. ಬಡಗಿಗಳು, ಕಮ್ಮಾರರು, ಕುಂಬಾರರು, ಜಮೀನುದಾರರ ಎಲ್ಲಾ ಗೃಹಕೃತ್ಯದ ಉಪಕರಣಗಳನ್ನು ಬಿಟ್ಟಿ ಒದಗಿಸಬೇಕು. ಹಬ್ಬದ ದಿನಗಳಲ್ಲಿ ಅಥವಾ ಜಮೀನುದಾರರ ಮನೆಗೆ ಅತಿಥಿಗಳು ಬಂದಾಗ ಕುರುಬರು ಕುರಿ ಕೊಡಬೇಕು. ಹಳ್ಳಿಗಳ ಕಡು ಬಡವರು ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಜಮೀನುದಾರರ ಮನೆಗಳಲ್ಲಿ ಜೀತದಾಳುಗಳಾಗಿ ಇರುವಂತೆ ಅವರು ಬಲಾತ್ಕರಿಸುತ್ತಿದ್ದರು. ಜಮೀನುದಾರರ ಮನೆಗಳಲ್ಲಿ ಮದುವೆಗಳಾದಾಗ ಹೆಣ್ಣುಕೊಟ್ಟ ಮಾವಂದಿರು ಬೀಗರಿಗೆ ಉಡುಗೊರೆ ಬಳುವಳಿಗಳ ಜೊತೆ ಈ ಹೆಣ್ಣುಮಕ್ಕಳನ್ನು ಮದುಮಗಳ ಜೊತೆ ಕಳುಹಿಸುತ್ತಿದ್ದರು. ಈ ನತದೃಷ್ಟ ಹುಡುಗಿಯರು ಅನೇಕ ವೇಳೆ ಜಮೀನುದಾರರ ದೈಹಿಕ ತೀಟೆಗಳನ್ನು ತೀರಿಸಬೇಕಾಗಿದ್ದಿತು.[೯] ಹೀಗೆ ಸಾಮಾನ್ಯರ ಬದುಕು ಜಮೀನುದಾರರ ಮರ್ಜಿ ಆಧರಿಸಿ ನಡೆಯುವಂಥದಾಗಿತ್ತು. ಈಗಲೂ ಸಾಮಾನ್ಯ ಜನ ಶ್ರೀಮಂತರನ್ನು ಜಮೀನುದಾರರನ್ನು ದೊರೆ, ಗೌಡ, ಮಹಾರಾಜ ಎಂದೆಲ್ಲ ಓಲೈಸುತ್ತ ಜೀ ಹುಜೂರಿ ಸಂಪ್ರದಾಯವನ್ನು ಅನುಸರಿಸಿಕೊಂಡು ಹೋಗುವುದನ್ನು ಹಳ್ಳಿ ಪರಿಸರಗಳಲ್ಲಿ ಕಾಣಬಹುದಾಗಿದೆ. ಅಕ್ಷರ ಜ್ಞಾನವಿಲ್ಲದ, ಆರ್ಥಿಕ ಭದ್ರತೆಯಿಲ್ಲದ, ಬಡತನದಿಂದ ನಲುಗಿದ, ಅಂಧಾನುಕರಣೆಗಳ ಆಗರವಾಗಿರುವ ಜನ ಸುಧಾರಣೆಯ ಸೋಂಕಿಲ್ಲದೆ ಬದುಕುತ್ತಿದ್ದಾರೆ.

೨.೩ ಧಾರ್ಮಿಕ ಸ್ಥಿತಿ :

ವಿಶ್ವದಾದ್ಯಂತ ಇಂದಿಗೂ ಜನಜೀವನ ಹಾಗೂ ಸಂಸ್ಕೃತಿಗಳ ಮೇಲೆ ಪ್ರಭಾವವನ್ನು ಬೀರುತ್ತಿರುವುದು ಧರ್ಮ. ಸಮಾಜವನ್ನು ಕುರಿತು ವ್ಯವಸ್ಥಿತ ಅಧ್ಯಯನ ಪ್ರಾರಂಭವಾಗುವ ಮೊದಲೇ ಸಮಕಾಲೀನ ಸಮಾಜವನ್ನು ಕುರಿತ ಚಿತ್ರಣ ಧರ್ಮ ಗ್ರಂಥಗಳಲ್ಲಿ ದೊರೆಯುತ್ತಿದ್ದು, ಧರ್ಮ ಸಮಾಜದ ಒಂದು ಅವಿಭಾಜ್ಯ ಅಂಗವಾಗಿದೆ. ಧರ್ಮ ಎಂಬ ಪದವನ್ನು ಆಂಗ್ಲ ಭಾಷೆಯ 'ರಿಲಿಜಿಯನ್' ಎಂಬ ಪದಕ್ಕೆ ತತ್ಸಮಾನವಾಗಿ ಬಳಸಲಾಗುತ್ತಿದೆ.[೧೦]

ಧರ್ಮ ಸಾಮಾಜಿಕ ಮೌಲ್ಯಗಳನ್ನು ರೂಪಿಸುವಲ್ಲಿ ಹಾಗೂ ಆಚರಣೆಗಳನ್ನು ನಿರ್ದೇಶಿಸುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿರುವುದರಿಂದ ಮಹಿಳೆಯರನ್ನು ಕುರಿತ ಸಮಾಜದ ಧೋರಣೆಗಳು ಯಾವ ಸ್ವರೂಪವನ್ನು ಪಡೆಯುತ್ತಿವೆ ಎಂಬುದನ್ನು ಪ್ರಭಾವಿಸುತ್ತದೆ. ಧಾರ್ಮಿಕ ವ್ಯವಸ್ಥೆ ಸಂಪೂರ್ಣವಾಗಿ

ಪುರುಷ ಪ್ರಧಾನವಾದದ್ದು. ಪುರುಷರ ಚಿಂತನೆಯಲ್ಲಿಯೇ ಉಗಮವಾಗಿ ಅವರ ನಿಯಂತ್ರಣದಲ್ಲಿಯೇ ಬೆಳೆದು ಬಂದಿರುವಂಥ ಒಂದು ವ್ಯವಸ್ಥೆ ಮಹಿಳೆಗೆ ಸ್ವತಂತ್ರವಾದ ವ್ಯಕ್ತಿತ್ವವಿದೆ. ಆಕೆಗೂ ಜ್ಞಾನವನ್ನು ಪಡೆಯುವ ಹಾಗೂ ಆ ಜ್ಞಾನದಿಂದ ಲಭಿಸುವ ಅನುಕೂಲಗಳನ್ನು ಅನುಭವಿಸುವ ಹಕ್ಕಿದೆ ಎಂಬುದಕ್ಕೆ ಧರ್ಮ ಮಾನ್ಯತೆ ನೀಡಿಲ್ಲ. ಧರ್ಮಗಳು ಮಾನವೀಯ ಮೌಲ್ಯಗಳಿಗೆ ಮಹತ್ವ ನೀಡಿದ್ದರೂ ಮಹಿಳೆಯರ ವಿರುದ್ಧ ನಡೆಯುವ ಅನೇಕ ದೌರ್ಜನ್ಯಗಳಿಗೆ ಧರ್ಮದ ಪ್ರತ್ಯಕ್ಷ ಅಥವಾ ಪರೋಕ್ಷವಾದ ಬೆಂಬಲವಿರುವುದು ಕಂಡು ಬರುತ್ತದೆ. ಪುರುಷ ಪ್ರಧಾನತೆಯನ್ನು ಸ್ತ್ರೀಯ ಪರಾಧೀನತೆಯನ್ನು ಬೆಂಬಲಿಸುವ ವ್ಯವಸ್ಥೆ ಜಗತ್ತಿನ ಎಲ್ಲಾ ಧರ್ಮಗಳಲ್ಲೂ ಕಂಡು ಬರುತ್ತದೆ. ಧಾರ್ಮಿಕ ಮೂಲಭೂತವಾದಿಗಳಂತೂ ಸ್ತ್ರೀಯರ ವಿಮೋಚನೆಗೆ ಎಲ್ಲ ಬಗೆಯ ಅಡ್ಡಿಗಳನ್ನು ಉಂಟುಮಾಡಿದ್ದಾರೆ. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಹನ್ನೆರಡನೆಯ ಶತಮಾನದ ಧಾರ್ಮಿಕ ಕ್ರಾಂತಿಯಿಂದ ಸ್ವಲ್ಪ ನಿರಾಳವಾಗಿ ಉಸಿರಾಡಿದ್ದ ಮಹಿಳೆಯರು ಅನಂತರದಲ್ಲಿ ಮುಸ್ಲಿಂ ಆಳರಸರ ಮೂಲಭೂತವಾದಿ ಧೋರಣೆಯಿಂದ ಘೋಷಾ ಪದ್ಧತಿಗೆ ಒಳಗಾಗಿ ನಿಯಂತ್ರಿಸಲ್ಪಟ್ಟರು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಹಿಂದೂ ಜನಾಂಗದ ರಕ್ತದೋಕುಳಿಯ ಮೇಲೆ ಮುಸ್ಲಿಂ ಸಾಮ್ರಾಜ್ಯ ನಿರ್ಮಿಸಲು ಬೇಕಾದ ನೀತಿಗಳನ್ನು ನಿಜಾಮ ಮತ್ತು ಅವನ ಇತ್ತೆಹಾದ್ ರೂಪಿಸುತ್ತಿದ್ದವು. ಹಿಂದೂಗಳಿಗೆ ಧಾರ್ಮಿಕ ಸ್ವಾತಂತ್ರ್ಯವಿರಲಿಲ್ಲ. ದೇವಾಲಯ ನಿರ್ಮಿಸಿಕೊಳ್ಳುವ ಅವಕಾಶವಿರಲಿಲ್ಲ. ಧಾರ್ಮಿಕ ಕಾರ್ಯ ಕೈಗೊಳ್ಳಲು ಅನುಮತಿ ಇರಲಿಲ್ಲ. ಗುಲಬರ್ಗಾದ ಶರಣ ಬಸವೇಶ್ವರ ದೇವಾಲಯದ ಗೋಪುರದ ಮೇಲೆ ಕಳಸ ಸ್ಥಾಪಿಸಲು ಕೂಡ ಅನುಮತಿ ನೀಡಿರಲಿಲ್ಲ. ರಾಜ ಮಹಾರಾಜರ ನೆರವಿನಲ್ಲಿ ನಡೆಯುತ್ತಿದ್ದ ಧಾರ್ಮಿಕ ಸಂಸ್ಥೆಗಳು ಮುಸ್ಲಿಂ ರಾಜರ ಆಳ್ವಿಕೆಯಲ್ಲಿ ನಿರ್ಲಕ್ಷಕ್ಕೆ ಒಳಗಾದವು. ಹಿಂದುಗಳನ್ನು ಮುಸ್ಲಿಮರಾಗಿ ಮತಾಂತರಿಸುವ ಕಾರ್ಯ ಹಾಗೂ ದೇವಾಲಯಗಳನ್ನು ಮಸೀದಿಗಳಾಗಿ ಮಾಡುವ ಕಾರ್ಯವು ರಜಾಕಾರರ ನೇತೃತ್ವದಲ್ಲಿ ತೀವ್ರಗತಿಯಲ್ಲಿ ನಡೆಯಿತು. ಮುಸ್ಲಿಂ ಧರ್ಮೀಯನಾಗಿದ್ದ ನವಾಬನು ಆಡಳಿತ ಸೂತ್ರಗಳನ್ನು ಮುಸ್ಲಿಂ ಅಧಿಕಾರಿಗಳ ವಶಕ್ಕೆ ಕೊಟ್ಟಿದ್ದನು. ಇದರಿಂದ ಸಂಸ್ಥಾನದ ಪ್ರಜೆಗಳ ಮೇಲೆ ಉಂಟಾಗಬಹುದಾದ ದುಷ್ಪರಿಣಾಮಗಳ ಬಗ್ಗೆ ಅವನು ತಲೆಕೆಡಿಸಿಕೊಳ್ಳಲಿಲ್ಲ. ಖಜಾನೆಗೆ ಕಂದಾಯ ಸಂದಾಯವಾಗುವುದು ಮಾತ್ರ ನಿಜಾಮನಿಗೆ ಮುಖ್ಯವಾಗಿತ್ತು. ಈ ಪ್ರದೇಶದಲ್ಲಿ ಮುಸ್ಲಿಮರು ಗ್ರಾಮಾಂತರ ಪ್ರದೇಶಗಳಿಗಿಂತ ಹೆಚ್ಚಾಗಿ ಸಣ್ಣ ದೊಡ್ಡ ನಗರಗಳಲ್ಲಿ ನೆಲೆಸಲು ಬಯಸುತ್ತಿದ್ದರು. ಇದರಿಂದಾಗಿ ನಗರಗಳಲ್ಲಿ ಹಿಂದುಗಳ ಪ್ರಭಾವವನ್ನು ತಗ್ಗಿಸಲು ಬೇಕಾದ ಎಲ್ಲಾ ನೆರವನ್ನು ಮುಸ್ಲೀಮರಿಗೆ ಅಧಿಕಾರಿಗಳು ಒದಗಿಸುತ್ತಿದ್ದರು. ನಿಜಾಮನಿಗೆ ಮುಸ್ಲಿಮರು ಮಾತ್ರ ದೇವರ ಮಕ್ಕಳಾಗಿಯೂ ಇತರ ಧರ್ಮಾವಲಂಬಿಗಳು ಕಾಫಿರ್‌ರಾಗಿ ಕಾಣುತ್ತಿದ್ದರು. ಗ್ರಾಮಾಂತರ ಪ್ರದೇಶಗಳಲ್ಲಿ ಮಸೀದಿ ನಿರ್ಮಿಸಲು ಹಣಕಾಸು ನೆರವು ನೀಡಲಾಗುತ್ತಿತ್ತು. ಬ್ರಿಟಿಷ್ ಆಡಳಿತಗಾರರ ಸಮುದಾಯಕ್ಕೆ ಸೇರಿದ್ದ ಕ್ರಿಶ್ಚಿಯನ್ನರ ಬಗ್ಗೆ ನಿಜಾಮನ ಅಧಿಕಾರಿಗಳು ಮೃದುವಾಗಿರುತ್ತಿದ್ದರು. ಇದರಿಂದಾಗಿ ಹೆಚ್ಚಾಗಿ ಹಿಂದೂಗಳು ತೀವ್ರವಾಗಿ ನೋವು ಅನುಭವಿಸಬೇಕಾಗುತ್ತಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿನ ಜನರು ಎಷ್ಟು ಮುಗ್ಧರಾಗಿದ್ದರೆಂದರೆ ಅವರು ನಿಜಾಮನನ್ನು ದೇವರೆಂದೇ ಪರಿಗಣಿಸಿದ್ದರು. ಅವನು ಗ್ರಾಮಗಳಿಗೆ ಭೇಟಿ ನೀಡಿದಾಗ ನಜರಾನ್(ಉಡುಗೊರೆ) ಸಲ್ಲಿಸುತ್ತಿದ್ದರು.

ಬಿ.ಸಿ. ಮಹಾಬಲೇಶ್ವರಪ್ಪ ಅವರ ಈ ವಿವರಣೆಯಲ್ಲಿ ಆಳರಸರ ಧರ್ಮ, ಸಾಮಾನ್ಯರ ಮೇಲೆ ಹೇರಲ್ಪಡುವ ಮತ್ತು ಅದನ್ನೊಪ್ಪದ ಜನರನ್ನು ಹೀನಾಯವಾಗಿ ಕಾಣಲಾಗುತ್ತಿತ್ತೆಂಬ ವಿವರಗಳು ದೊರೆಯುತ್ತವೆ. ಅಲ್ಲದೆ ನವಾಬ ತನ್ನ ಸಂಸ್ಥಾನದಲ್ಲಿದ್ದ ಮುಸ್ಲಿಂ ಪ್ರಜೆಗಳಲ್ಲಿ ಹಿಂದುಗಳ ಬಗ್ಗೆ ದ್ವೇಷ ಕೆರಳುವಂತೆ ಮಾಡಿ

ಅವರನ್ನು ತನ್ನ ಪರವಾಗಿ ಹೋರಾಟಕ್ಕಿಳಿಸಲು ಪ್ರಯತ್ನಿಸುತ್ತಿದ್ದನು. ಆದರೆ ಈ ಪ್ರಯತ್ನಗಳಲ್ಲಿ ನವಾಬನು ಸಫಲನಾಗಲಿಲ್ಲ. ಸಂಸ್ಥಾನದ ಮುಸ್ಲಿಂರಲ್ಲಿ ಒಂದು ಸಣ್ಣ ವಿಭಾಗ ನಿಜಾಮನ ಪರವಾಗಿದ್ದರೂ ಬಹುಸಂಖ್ಯಾತ ಮುಸ್ಲಿಂ ಪ್ರಜೆಗಳು ಬೆಂಬಲ ಕೊಡಲಿಲ್ಲ. ಯಾಕೆಂದರೆ ನಿಜಾಮನ ಆಳ್ವಿಕೆಯಲ್ಲಿ ಅವರೂ ಕಡು ಬಡವರಾಗಿದ್ದರು, ಶೋಷಿತರಾಗಿದ್ದರು.

ಮುಸ್ಲಿಂ ಆಳ್ವಿಕೆ ಬಹುದೀರ್ಘಕಾಲ ನಡೆದುದರಿಂದ ಇಸ್ಲಾಂ ಧರ್ಮ, ಇತರ ಜನ ಸಮುದಾಯಗಳ ಮೇಲೆ ಬಹಳಷ್ಟು ಪ್ರಭಾವ ಬೀರಿತು. ಉತ್ತರದಿಂದ ಬಂದ ಸೂಫಿಗಳು ಈ ಪ್ರಾಂತ್ಯದ ಕೆಳ ಸಮುದಾಯಗಳ ಮೇಲೆ ತೀವ್ರ ಪರಿಣಾಮ ಬೀರಿದರು. ಈ ಪ್ರಾಂತ್ಯದ ಜನ ಸಮುದಾಯಗಳಲ್ಲೂ ಒಂದೇ ಬಗೆಯ ಧಾರ್ಮಿಕ ನಂಬಿಕೆ ಪದ್ಧತಿಗಳು ಇರಲಿಲ್ಲ. ಕೆಳ ವರ್ಗದ ಜನರ ಜೀವನ ಕ್ರಮಗಳೂ ಬೇರೆಯಾಗಿದ್ದವು. ಹೀಗಿರುವಾಗ ಮುಸ್ಲಿಂ ಆಳರಸರ ಆಳ್ವಿಕೆ ಮತ್ತು ಧಾರ್ಮಿಕತೆಯಿಂದ ಒಂದು ಬಗೆಯ ಸಂಕರ ಸಂಸ್ಕೃತಿ ರೂಪುಗೊಳ್ಳುವಂತಾಯಿತು. ಹಿಂದು ಮುಸ್ಲಿಂ ಸಂಸ್ಕೃತಿಗಳು ಒಂದರೊಳಗೊಂದು ಬೆರೆತು ಹೋದವು. ಇದನ್ನು ಕಪಟರಾಳ ಕೃಷ್ಣರಾವ್ ಅವರು ಹೀಗೆ ವ್ಯಕ್ತಪಡಿಸಿದ್ದಾರೆ. 'ಮುಸಲ್ಮಾನ ಫಕೀರರು ಗುರುಗಳಾದರು. ವೇದವು, ಕುರಾನವು ಒಂದೇಯಾಯಿತು. ಈ ಫಕೀರರ ಗೋರಿಗಳೆ ದೇವಸ್ಥಾನಗಳಾದವು. ಕನ್ನಡಿಗರಿಗೆ ಗೋರಿಗಳು ಕುಲದೈವಗಳಾದವು. ಸಮಾಜದ ಮಾರ್ಗದರ್ಶಿಗಳಾದ ಮೇಲ್ತರಗತಿಯ ಜನರ ಸ್ಥಿತಿಯು ಈ ರೀತಿಯಾಗಿ ಮಾನಸಿಕ ಬದಲಾವಣೆಯಾದಲ್ಲಿ ಸಮಾಜದ ಸಾಮಾನ್ಯ ಜನರು ಲಾಡಿ ಕಟ್ಟಿಕೊಂಡು ದೀನ್ ದೀನ್ ಎನ್ನುತ್ತ ಗೋರಿಗಳಿಗೂ ಪೀರ್‌ಗಳಿಗೂ ನೈವೆದ್ಯವನ್ನು ಕೊಡುವುದು ರೂಡಿಯಾದದ್ದೇನು ಆಶ್ಚರ್ಯದ ಮಾತಲ್ಲ.' ಧಾರ್ಮಿಕ ಹೇರಿಕೆಯ ಸಂದರ್ಭದಲ್ಲೂ ಆಯಾ ಧರ್ಮಿಯರು ತಮ್ಮ ತಮ್ಮ ಧಾರ್ಮಿಕತೆಯನ್ನು ಉಳಿಸಿಕೊಳ್ಳುವಲ್ಲಿ ಶ್ರಮಿಸಿದರು. ಆದರೂ ಮುಸ್ಲಿಂ ಧರ್ಮದ ಪ್ರಭಾವದಿಂದ ಹೊರಗುಳಿಯಲು ಸಾಧ್ಯವಾಗಲಿಲ್ಲ. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಮೊಹರಂ ಹಬ್ಬವನ್ನು ಜಾತ್ರೆ ಉತ್ಸವಗಳನ್ನು ಹಿಂದು ಮುಸ್ಲಿಮರು ಸೇರಿಯೇ ಆಚರಿಸುತ್ತಾರೆ. ಅಂದಿನ ಸಂದರ್ಭದಲ್ಲಿ ಮುಸ್ಲಿಂ ಧರ್ಮಕ್ಕೆ ಮಾತ್ರ ಪ್ರಾಶಸ್ತ್ಯ ದೊರೆತು ಇತರ ಧರ್ಮಗಳು ಆಶ್ರಯವಿಲ್ಲದೆ ಸೊರಗಿದವು. ನಿಜಾಮ ಕೃಪಾಪೋಷಿತ ಇತ್ತೇಹಾದ್ ಧಾರ್ಮಿಕ ಸಂಸ್ಥೆ, ಸಂಸ್ಥಾನದ ರಾಜಕೀಯ ಹಾಗೂ ಧಾರ್ಮಿಕ ಹಿತಾಸಕ್ತಿಗಳನ್ನು ಪೋಷಿಸುತ್ತಿದ್ದ ಬಹುಮುಖ್ಯ ಕೋಮುಶಕ್ತಿಯಾಗಿತ್ತು.

ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಆಡಳಿತ ರಾಜಕೀಯ ಚಟುವಟಿಕೆಗಳಲ್ಲಿ ಧರ್ಮ ಮತ್ತು ಆರಾಧನಾ ಪ್ರಕ್ರಿಯೆಗಳಲ್ಲಿ ಹೆಣ್ಣಿನ ಪ್ರವೇಶವನ್ನು ಉದ್ದೇಶಪೂರ್ವಕವಾಗಿ ತಡೆಹಿಡಿಯಲಾಗಿತ್ತು.

೨.೪ ಆರ್ಥಿಕ ಸ್ಥಿತಿಗತಿ :

ಆರ್ಥಿಕ ಸಂಸ್ಥೆಯ ಜವಾಬ್ದಾರಿ ಸಮಾಜದ ಸದಸ್ಯರ ಜೀವನಕ್ಕೆ ಅವಶ್ಯವಾದ ಹಾಗೂ ಅಭಿವೃದ್ಧಿಗೆ ಪೂರಕವಾದ ವಸ್ತುಗಳು ಹಾಗೂ ಸೇವೆಗಳನ್ನು ಒದಗಿಸುವುದೇ ಆಗಿರುತ್ತದೆ. ಸಾಮಾನ್ಯವಾಗಿ ಪ್ರಭುತ್ವ ಇದನ್ನು ವಹಿಸಿಕೊಂಡು ನಿರ್ವಹಿಸುತ್ತಿರುತ್ತದೆ. ಜೀವನಾವಶ್ಯಕತೆಗಳು ಎಂದರೆ ಪ್ರಮುಖವಾಗಿ ಆಹಾರ ಬಟ್ಟೆ, ವಸತಿ, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ ರಕ್ಷಣೆ, ಸಾರ್ವಜನಿಕ ಸೇವೆಗಳು ಮುಂತಾದವು. ಅಭಿವೃದ್ಧಿ ಎಂದರೆ ಜೀವನದ ಗುಣಮಟ್ಟವನ್ನು ಉತ್ತಮಪಡಿಸಲು ಇರುವಂಥ ಅವಕಾಶಗಳು, ಜೀವನ

ನಿರ್ವಹಣೆ ಮತ್ತು ಅಭಿವೃದ್ಧಿಯ ಸಾಧನೆ ಇವೆರಡಕ್ಕು, ಅವಶ್ಯವಾದ ನೆರವನ್ನು ಒದಗಿಸುವುದು ಆರ್ಥಿಕ ಸಂಸ್ಥೆಯೇ ಆಗಿರುವುದರಿಂದ ಯಾವುದೇ ಸಮಾಜದಲ್ಲಿ ಆರ್ಥಿಕ ವ್ಯವಸ್ಥೆಯ ಪಾತ್ರ ಬಹುಮುಖ್ಯವಾದುದು.

ಹೈದರಾಬಾದ್ ಸಂಸ್ಥಾನದ ಆದಾಯ ಭಾರತದಲ್ಲಿನ ೫೬೫ ಸಂಸ್ಥಾನಗಳಲ್ಲೇ ಹೆಚ್ಚಿನದಾಗಿತ್ತು. ಸಂಪನ್ಮೂಲಗಳ ಕೊರತೆ ಇರಲಿಲ್ಲ. ಆದರೂ ಜನರ ಜೀವನ ಮಟ್ಟ ಅತ್ಯಂತ ಕೆಳಮಟ್ಟದ್ದಾಗಿತ್ತು. ಜನತೆಯ ಕುರಿತ ಪ್ರಭುತ್ವದ ಧೋರಣೆಯೆ ಇದಕ್ಕೆ ಕಾರಣವಾಗಿತ್ತು. ೨೫,೬೯೮ ಚದರ ಮೈಲಿ ವಿಸ್ತೀರ್ಣ ಜಮೀನಿನ ಮೇಲೆ ಅಧಿಕಾರ ಪಡೆದಿದ್ದ ಜಮೀನ್ದಾರಿ ಪಾಳೆಗಾರಿಕೆಯಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಆರ್ಥಿಕ ಸ್ವಾತಂತ್ರವೇ ಇರಲಿಲ್ಲ. ಜಮೀನ್ದಾರರ ಕೃಪೆಯಲ್ಲಿ ಜನ ಬದುಕಬೇಕಾಗಿತ್ತು. 'ಜಮೀನ್ದಾರಿ ಪಾಳೆಗಾರಿಕೆ, ಸಾಂಪ್ರದಾಯಿಕ ಗುಲಾಮಿತನ, ಜೀತದ ದುಡಿಮೆ, ಅಮಾನವೀಯ ಹಾಗೂ ಭ್ರಷ್ಟ ಆಡಳಿತದಿಂದಾಗಿ ಆರ್ಥಿಕತೆಯು ಜರ್ಜರಿತವಾಗಿತ್ತು. ಸಾಮಾನ್ಯ ಜನರಿಂದ ಜಮೀನ್ದಾರರು ಜಮೀನನ್ನು ಮೋಸ-ಕಪಟಗಳಿಂದ ಕಬಳಿಸುತ್ತಿದ್ದರು. ಅಧಿಕಾರವನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದ ಇವರು ಜನರ ಗಮನಕ್ಕೆ ತಾರದೆ ಜಮೀನನ್ನು ತಮ್ಮ ಹೆಸರಿನಲ್ಲಿ ನೋಂದಾಯಿಸಿಕೊಂಡು ಕಾನೂನಿನ ಪ್ರಕಾರ ಮಾಲೀಕರಾಗಿ ಬಿಡುತ್ತಿದ್ದರು (ಬಿ.ಸಿ.ಮಹಾಬಲೇಶ್ವರಪ್ಪ ....) ಹೀಗೆ ಜನ ಸಾಮಾನ್ಯರ ಸಂಪನ್ಮೂಲಗಳನ್ನು ಕಸಿದುಕೊಳ್ಳುವ ಮೂಲಕ, ಅವರನ್ನು ನಿರ್ಗತಿಕರನ್ನಾಗಿ ಮಾಡಿ, ಜೀವನ ನಿರ್ವಹಣೆಗೆ ಜಮೀನುದಾರರನ್ನೇ ಅವಲಂಬಿಸುವಂತೆ ಮಾಡಲಾಗುತ್ತಿತ್ತು.

ಯಾವ ಜಾತಿಯವನ ಆಸ್ತಿಯನ್ನಾದೂ ಮುಸಲ್ಮಾನರು ಕೊಳ್ಳಬಹುದು ಆದರೆ ಮುಸಲ್ಮಾನರ ಆಸ್ತಿಯನ್ನು ಮುಸ್ಲಿಮೇತರರು ಕೊಳ್ಳಬಾರದು. ಮುಸ್ಲಿಂ ಮತಕ್ಕೆ ಮತಾಂತರಗೊಂಡರೆ ಅಂಥವರು 'ಹಿಂದೂ'ಗಳಲ್ಲಿ ಸಾಲ ಮಾಡಿದ್ದರೆ ಅದನ್ನು ಮರಳಿಸಬೇಕಾಗಿಲ್ಲ ಎಂಬ ಪರ್ಮಾನನ್ನು ನಿಜಾಮ ಹೊರಡಿಸಿದ್ದನು. ಜನರ ಆರ್ಥಿಕ ದುಸ್ಥಿತಿಯನ್ನು ನಿಜಾಮ ರಾಜಕೀಯಕ್ಕೆ ಬಳಸಿಕೊಳ್ಳುತ್ತಿದ್ದ ಹುನ್ನಾರ ಇಲ್ಲಿ ಸ್ಪಷ್ಟವಾಗುತ್ತದೆ, ಸಾಮಾಜಿಕ ಸ್ಥರದಲ್ಲಿ ಆರ್ಥಿಕ ಏರುಪೇರು ಅಜಗಜಾಂತರವಾಗಿತ್ತು. ಶ್ರೀಮಂತರು ಬಡವರ ಮಧ್ಯದ ಕಂದರ ತೀರ ದೊಡ್ಡದಾಗಿತ್ತು.

ನಿಜಾಮ ಸರಕಾರ ಅಭಿವೃದ್ಧಿ ಪ್ರಕ್ರಿಯೆಯನ್ನು ಮಾರುಕಟ್ಟೆ ಶಕ್ತಿಗಳಿಗೆ ಬಿಟ್ಟುಕೊಟ್ಟಿತ್ತು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಯಾವುದೇ ಅಮೂಲ್ಯ ನೈಸರ್ಗಿಕ ಸಂಪನ್ಮೂಲಗಳು ಇಲ್ಲದೇ ಇದ್ದಿದ್ದರಿಂದಲೂ ಹಾಗೂ ಬಹುಶಃ ಅಲ್ಲಿಯ ಜನರಿಗೆ ಉದ್ಯಮಶೀಲತೆಯ ಚೈತನ್ಯ ಇಲ್ಲದೇ ಇದ್ದುದರಿಂದಲೂ ಮಾರುಕಟ್ಟೆ ಶಕ್ತಿಗಳಿಂದ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಹೆಚ್ಚಿನ ಉಪಯೋಗವಾಗಲಿಲ್ಲ, ಈ ಎರಡನೆಯ ಕಾರಣ ಕರ್ನಾಟಕ ರಾಜ್ಯದ ಜನತೆಗೆ ಅನ್ವಯಿಸುವ ಸಾಮಾನ್ಯ ಸಮಸ್ಯೆಯಾದರೂ ಈ ಸಮಸ್ಯೆ ಹೈದರಾಬಾದ್ ಸಂಸ್ಥಾನದ ಆಗಿನ ನಿಜಾಮರ ಊಳಿಗಮಾನ್ಯ ಆಳ್ವಿಕೆಯಿಂದಾಗಿ ಅಲ್ಲಿಯ ಜನರಲ್ಲಿದ್ದ ಅಲ್ಪ ಸ್ವಲ್ಪ ಉದ್ಯಮಶೀಲತೆಯೂ ನಶಿಸಿಹೋಯಿತೆಂದು ಊಹಿಸುವುದು ಕಷ್ಟವೇನಲ್ಲ. ಉತ್ತಮ ರಸ್ತೆಗಳು, ಪ್ರಾಥಮಿಕ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳಂತಹ ಕೆಲವು ನಿರ್ದಿಷ್ಟ ಅವಶ್ಯಕ ಆರ್ಥಿಕ ಮತ್ತು ಸಾಮಾಜಿಕ ಸೌಲಭ್ಯಗಳು ನಿಜಾಮ ಸರಕಾರದ ಆದ್ಯತೆಗಳಾಗಿರಲಿಲ್ಲ, ಆದ್ದರಿಂದ ಜನ ಅನಕ್ಷರಸ್ಥರಾಗಿ ಅನಾರೋಗ್ಯ ಪೀಡಿತರಾಗಿ, ಬಡವರಾಗಿ ಹಾಗೂ ಇವೆಲ್ಲ ಕಾರಣಗಳಿಂದ ಉದ್ಯಮಶೀಲತೆ ಇಲ್ಲದವರಾಗಿ ಉಳಿದರು.

ಅವರು ಸ್ವಾತಂತ್ರ್ಯಕ್ಕಾಗಿ ಹಾತೊರೆಯುತ್ತಿದ್ದರು. ಹಾಗೂ ಸ್ವಾತಂತ್ರ್ಯ ಬಂದ ನಂತರ ಪುನರ್‌ರಚಿತ ಕರ್ನಾಟಕ ರಾಜ್ಯದಲ್ಲಿ ಸೇರಲು ಕಾತುರರಾಗಿದ್ದರು. ಕರ್ನಾಟಕದೊಂದಿಗೆ ವಿಲೀನಗೊಂಡ ನಂತರ ಹೈದರಾಬಾದ್ ಕರ್ನಾಟಕ ಪ್ರದೇಶದ ರಾಜಕೀಯ ನಾಯಕರು ತಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಚಟುವಟಿಕೆಗಳು ನಡೆಯಬೇಕೆಂದು ಕೇಳತೊಡಗಿದರು. ಇದು ಸಹಜವೇ ಆಗಿತ್ತು. ಈ ಪ್ರದೇಶದ ಬಗ್ಗೆ ಸೂಕ್ತ ಮಾಹಿತಿಯನ್ನು ಸಂಗ್ರಹಿಸಲು ನೇಮಿಸಲಾಗಿದ್ದ ವಿಶೇಷ ಸಮಿತಿ ಕರ್ನಾಟಕದ ಇತರ ಪ್ರಾಂತ್ಯಗಳಿಗೆ ಹೋಲಿಸಿದಂತೆ ಹೈದರಾಬಾದ್ ಕರ್ನಾಟಕ ಪ್ರಾಂತ್ಯ ಎಷ್ಟರ ಮಟ್ಟಿಗೆ ಹಿಂದುಳಿದಿದೆ ಎಂಬುದನ್ನು ಸೂಚಿಸುವ ವರದಿಯನ್ನು ಸಲ್ಲಿಸಿತು. ಎಂಬ ತಿಮ್ಮಯ್ಯನವರ ಹೇಳಿಕೆ ಈ ಪ್ರದೇಶದ ಆರ್ಥಿಕ ಸ್ಥಿತಿಗೆ ಹಿಡಿದ ಕನ್ನಡಿಯಂತಿದೆ.

ಈ ಭಾಗವು ಕರ್ನಾಟಕಕ್ಕೆ ಸೇರಿ ಅರ್ಧ ಶತಮಾನವಾಯಿತು. ಈ ಅವಧಿಯಲ್ಲಿ ನಡೆದ ಅಭಿವೃದ್ಧಿಯ ನಿರಂತರ ಪ್ರಕ್ರಿಯೆಯಿಂದ ಈ ಪ್ರದೇಶದ ಸ್ವರೂಪವನ್ನು ಪೂರ್ಣ ಬದಲಾಯಿಸಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಈ ಕನಸು ನನಸಾಗಲಿಲ್ಲ. ೧೯೮೦ರಲ್ಲಿ ರಾಜ್ಯದ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಅಭಿವೃದ್ಧಿಯ ಸೂಚಿಯನ್ನು ಸಿದ್ಧಪಡಿಸಲಾಯಿತು. ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಸೂಚ್ಯಂಕಗಳನ್ನು ಹೊಂದಿರುವ ಈ ಸೂಚಿಯು ೧೯೬೦ ರಿಂದ ೧೯೮೦ರವರೆಗೆ ವಿವಿಧ ಕಾಲಕ್ಕೆ ಸಂಬಂಧಿಸಿದಂತೆ ತಯಾರಿಸಲಾಗಿತ್ತು.

೧೯೮೦ರವರೆಗೆ ಈ ಭಾಗದ ಮೂರು ಜಿಲ್ಲೆಗಳು ರಾಜ್ಯದಲ್ಲಿರುವ ೧೯ ಜಿಲ್ಲೆಗಳಲ್ಲಿ ಕೆಳಗಿನ ಮೂರು ಸ್ಥಾನಗಳನ್ನು ಪಡೆದಿರುವುದು ಕಂಡು ಬಂತು. ಅಭಿವೃದ್ಧಿ ಸೂಚಿಯಲ್ಲಿ ವಿಶೇಷತಃ ರಾಯಚೂರು ಮತ್ತು ಬೀದರ್ ಜಿಲ್ಲೆಗಳು ಸ್ವಲ್ಪ ಮಟ್ಟಿಗೆ ಹೆಚ್ಚಳವಾಗಿ ಅವು ರಾಜ್ಯದ ಸರಾಸರಿಗೆ ಹತ್ತಿರ ಬಂದಿವೆ. ಆದರೆ ಗುಲಬರ್ಗಾ ಜಿಲ್ಲೆಯ ಸ್ಥಿತಿಗತಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

೨೦೦೦ ದಲ್ಲಿ ಇವೇ ಸೂಚ್ಯಂಕಗಳನ್ನು ಬಳಸಿ ಕೇವಲ ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳಿಗೆ ಸೂಚಿಯನ್ನು ತಯಾರಿಸಿದಾಗ ಅಭಿವೃದ್ಧಿಯಲ್ಲಿನ ಏರುಪೇರುಗಳು ಸ್ಪಷ್ಟವಾಗಿ ಕಂಡು ಬಂದವು. ಕಲಬುರ್ಗಿ ಜಿಲ್ಲೆಯ ಈಗ ಸ್ವಲ್ಪ ಸುಧಾರಿಸಿದೆ. ಉಳಿದೆರಡು ಜಿಲ್ಲೆಗಳು ಕುಸಿದಿವೆ.

ಒಟ್ಟಾರೆ ಹೈದರಾಬಾದ್ ಕರ್ನಾಟಕ ಪ್ರದೇಶವು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಕೆಳಮಟ್ಟದಲ್ಲಿರುವುದಲ್ಲದೆ, ಮಾನವ ಜೀವನಕ್ಕೆ ಬೇಕಾಗಿರುವ ಮೂಲ ಅವಶ್ಯಕತೆಗಳನ್ನು ನೀಡಲು ವಿಫಲವಾಗಿ ಮಾನವ ಅಭಿವೃದ್ಧಿಯಲ್ಲಿಯೂ ಅತಿ ಕೆಳಮಟ್ಟದಲ್ಲಿರುವುದು ಒಂದು ಗಂಭೀರ ಸಂಗತಿಯಾಗಿದೆ.

೨.೫ ಶೈಕ್ಷಣಿಕ ಸ್ಥಿತಿಗತಿ :

ಹೈದರಾಬಾದ್ ಕರ್ನಾಟಕ ಪ್ರದೇಶದ ಶೈಕ್ಷಣಿಕ ಹಿಂದುಳಿದಿರುವಿಕೆಯು ಪ್ರಸಿದ್ಧ ನಾಣ್ಣುಡಿಯಾಗಿ ಬಿಟ್ಟಿದೆ. ಭಾರತದ ಉಳಿದ ಭಾಗ ಪಾಶ್ಚಿಮಾತ್ಯ ಶಿಕ್ಷಣದ ಪ್ರಭಾವದಿಂದಾಗಿ ಗಣನೀಯ ಪ್ರಗತಿ ಹೊಂದುತ್ತಿದ್ದರೆ. ಹೈದರಾಬಾದ್ ಕರ್ನಾಟಕವು ವಿಶ್ವದಲ್ಲಿನ ಬೆಳವಣಿಗೆಗೆ ಸ್ಪಂದಿಸದೆ ಮೌಢ್ಯದಲ್ಲಿ ಮುಳುಗಿ ಬಿಟ್ಟಿತ್ತು. ಅಕ್ಷರ ಜ್ಞಾನದ ನಿರ್ಲಕ್ಷ್ಯದಿಂದಾಗಿ ಜನತೆಯು ಬಡತನ ಮತ್ತು ಅನಾರೋಗ್ಯದಿಂದ ನರಳುತ್ತಿತ್ತು. ಈ ಭಾಗದಲ್ಲಿದ್ದ ಆಂಗ್ಲ–ಭಾರತೀಯ ಭಾಷಾ ಸಂಯುಕ್ತ ಶಾಲೆಗಳನ್ನೆಲ್ಲಾ ನಿಜಾಮನು ಉರ್ದು ಶಿಕ್ಷಣ ಮಾಧ್ಯಮದ ಉಸ್ಮಾನಿಯಾ

ಪ್ರೌಢಶಾಲೆಗಳಾಗಿ ಪರಿವರ್ತಿಸಿದನು. ಪ್ರಧಾನವಾಗಿ ಗ್ರಾಮೀಣ ಲಕ್ಷಣವನ್ನು ಹೊಂದಿದ್ದ ಹೈದರಾಬಾದ್ ಸಂಸ್ಥಾನದಲ್ಲಿ ಜನರ ಶಿಕ್ಷಣಕ್ಕೆ ಯಾವುದೇ ಅನುಕೂಲಗಳನ್ನು ಒದಗಿಸಿರಲಿಲ್ಲ. ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಹೈದರಾಬಾದ್ ನಗರದಲ್ಲಿ ಪ್ರಾರಂಭವಾಗಿದ್ದ ಕೆಲವು ಶಾಲೆಗಳು ಶ್ರೀಮಂತ ಮತ್ತು ಉನ್ನತ ಮಧ್ಯಮ ವರ್ಗದ ಮುಸ್ಲಿಂ ಸಮುದಾಯದ ಹಾಗೂ ಕೆಲವೇ ಕೆಲವು ಶ್ರೀಮಂತ ಹಿಂದೂ ಮನೆತನಗಳ ಮಕ್ಕಳಿಗೆ ಮಾತ್ರ ಶಿಕ್ಷಣ ಒದಗಿಸುವ ಕೇಂದ್ರಗಳಾಗಿದ್ದವು.

೧೯೩೧ರಲ್ಲಿ ಹೈದರಾಬಾದ್ ಕರ್ನಾಟಕದಲ್ಲಿದ್ದ ಉನ್ನತ ಶಿಕ್ಷಣ ಮಟ್ಟವೆಂದರೆ ಮುಖ್ತಾಬ್ (ಮಾಧ್ಯಮಿಕ ಶಾಲೆ) ಆಗಿತ್ತು. ಇಂಥ ಶಾಲೆಗಳ ಸಂಖ್ಯೆಯನ್ನು ಬೆರಳಲ್ಲಿ ಎಣಿಸಬಹುದಾಗಿತ್ತು. ಶಾಲಾ ಅಧ್ಯಾಪಕರು ಮಾಸಿಕ ಮೂರು ರೂಪಾಯಿ ಸಂಬಳ ಪಡೆಯುತ್ತಿದ್ದರು. ಕೊಪ್ಪಳ ಮತ್ತು ರಾಯಚೂರು ವಿಭಾಗದ ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಣಕ್ಕಾಗಿ ಬಹುದೂರದ ಗುಲಬರ್ಗಾಕ್ಕೆ ಹೋಗಬೇಕಾಗಿತ್ತು. ಇಲ್ಲವೇ ಹೈದರಾಬಾದಿಗೆ ಹೋಗಬೇಕಾಗಿತ್ತು. ಇಡೀ ಹೈದರಾಬಾದ್ ಕರ್ನಾಟಕ ಪ್ರದೇಶದ ಶೈಕ್ಷಣಿಕ ಅವಶ್ಯಕತೆಯನ್ನು ಪೂರೈಸಲು ಗುಲಬರ್ಗಾದಲ್ಲಿನ ಒಂದೇ ಒಂದು ಪ್ರೌಢಶಾಲೆಯನ್ನು ಇಂಟರ್ ಮೀಡಿಯೇಟ್ ಕಾಲೇಜಾಗಿ ಉನ್ನತ ದರ್ಜೆಗೇರಿಸಲಾಯಿತು. ಹದಿನಾರು ಜಿಲ್ಲೆಗಳನ್ನು ಹೊಂದಿದ್ದ ಇಡೀ ಹೈದರಾಬಾದ್ ಸಂಸ್ಥಾನದಲ್ಲಿ ವಿದ್ಯಾರ್ಜನೆಯ ಕೇಂದ್ರವಾಗಿ ೧೯೧೭ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯ ಸ್ಥಾಪಿಸಲ್ಪಟ್ಟಿತು.

ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿತ್ತು. ಅವುಗಳಿಗೆ ಯಾವುದೇ ಬಗೆಯ ಪ್ರೋತ್ಸಾಹವಿರಲಿಲ್ಲ. ನಿಜಾಮನು ಒಡ್ಡಿದ ಎಲ್ಲಾ ಆತಂಕಗಳನ್ನು ಎದುರಿಸಿ ಹೈದರಾಬಾದ್ ಪ್ರದೇಶಗಳಲ್ಲಿ ಸ್ಥಾಪಿಸಿದ ರಾಷ್ಟ್ರೀಯ ಶಾಲೆಗಳಿಗೆ ಸರಕಾರದ ಮನ್ನಣೆ ಪಡೆಯಲು ಸ್ವಾಮಿ ರಮಾನಂದ ತೀರ್ಥರು ದೊಡ್ಡ ಹೋರಾಟ ನಡೆಸಬೇಕಾಯಿತು. ಹೈದರಾಬಾದ್ ಕರ್ನಾಟಕದ ಶೈಕ್ಷಣಿಕ ಹಿಂದುಳಿಕೆಯನ್ನು ಕೆಳಗಿನ ಪಟ್ಟಿಯಿಂದ ತಿಳಿದುಕೊಳ್ಳಬಹುದು.[೧೬]

ಜಾತಿಗಳು	ಶಾಲೆಗೆ ಹಾಜರಾಗುತ್ತಿದ್ದ ಬಾಲಕರು	ಬಾಲಕಿಯರು
ಕ್ರಿಶ್ಚಿಯನ್ನರು	೬೫.೭%	೧೧%
ಮುಸ್ಲಿಮರು	೨೦.೪%	೨.೭%
ಹಿಂದುಗಳು	೩.೨%	೦.೮%

ಹೈದರಾಬಾದ್ ಕರ್ನಾಟಕದ ಸ್ತ್ರೀ ಶಿಕ್ಷಣ ಸ್ಥಿತಿಯನ್ನರಿಯಲು ವಿಮಲಾಬಾಯಿ ಮೇಲುಕೋಟೆಯವರ ವಿವರ ಸಹಾಯಕವಾಗುತ್ತದೆ. 'ಈ ಭಾಗದಲ್ಲಿ ಇಪ್ಪತ್ತು ಸಾವಿರಕ್ಕೆ ಮೇಲ್ಪಟ್ಟ ಕನ್ನಡಿಗರಿದ್ದು ಅವರಿಗೆ ಕನ್ಯಾ ಪಾಠ ಶಾಲೆಯು ಬಹಳ ದಿನಗಳ ಅವಶ್ಯಕತೆಯಾಗಿತ್ತು. ಆ ಒಂದು ಅವಶ್ಯಕತೆಯನ್ನು ಇದೀಗ ಶ್ರೀ ಶಾರದಾ ಕನ್ಯಾಪಾಠ ಶಾಲೆಯು ಪೂರೈಸ ಹತ್ತಿದೆ. ಈ ಎರಡು ವರ್ಷಗಳ ಅವಧಿಯಲ್ಲಿಯೇ ಅದಕ್ಕೊಂದು ಸ್ಥಿರ ಸ್ವರೂಪ ಬರುತ್ತಿದ್ದುದನ್ನು ನೋಡಿದರೆ ಯಾರಿಗೆ ತಾನೆ ಸಂತೋಷವಾಗದು? ಕನ್ನಡಿಗರ ಕೇಂದ್ರಸ್ಥಾನವಾದ ಕಲಬುರ್ಗಿಯಲ್ಲಿ ಕನ್ನಡ ಮಕ್ಕಳಿಗೆ ಮೊನ್ನೆ ಮೊನ್ನೆಯವರೆಗೂ ಶಿಕ್ಷಣಕ್ಕೆ ಅವಕಾಶವಿರಲಿಲ್ಲ. ಅದರಲ್ಲಿಯಂತೂ ಹೆಣ್ಣುಮಕ್ಕಳ ಪಾಡು ದೇವರೇ ಬಲ್ಲ. ಆ ಒಂದು ಅನಾನುಕೂಲತೆಯನ್ನು ಅಕ್ಕಮಹಾದೇವಿ ಕನ್ಯಾ ಶಾಲೆಯು

ತಕ್ಕಮಟ್ಟಿಗೆ ಹೋಗಲಾಡಿಸಿದೆ. ಬೀದರಿನಲ್ಲಿ ಕನ್ನಡ ಹೋಗಿ ಅದರ ನೆರಳಿದೆ. ಅದೂ ಅಲ್ಲಿನ ಮೆಥಡಿಸ್ಟ್ ಚರ್ಚಿನವರ ಕೃಪೆಯಿಂದ. ಅದರಿಂದ ಸ್ಥಾಪಿತವಾದ ಕನ್ಯಾ ಶಾಲೆಯು ಬಹಳ ಶಿಸ್ತಿನಿಂದ ನಡೆದಿದೆ. ರಾಯಚೂರಾದರೂ ಈ ರಂಗದಲ್ಲಿ ಪ್ರಯತ್ನ ಮಾಡಹತ್ತಿದೆ. ಅಲ್ಲಿಯ ಶ್ರೀ ಶಾರದಾ ಕನ್ಯಾ ಪಾಠ ಶಾಲೆ ಬಹಳ ಚನ್ನಾಗಿ ನಡೆಯುತ್ತಲಿದೆ. ಕೊಪ್ಪಳದಂಥ ಸ್ಥಳದಲ್ಲಿ ಇದುವರೆಗೂ ಯಾವ ಕನ್ಯಾಶಾಲೆ ಇರದಿರುವುದು ವಿಷಾದದ ಸಂಗತಿ. ಈ ಪ್ರಕಾರದ ಖಾಸಗಿ ಪ್ರಯತ್ನಗಳು ಕನಿಷ್ಠ ಪಕ್ಷಕ್ಕೆ ಎಲ್ಲ ತಾಲ್ಲೂಕು ಸ್ಥಳಗಳಲ್ಲಿ ನಡೆದರೆ ಬಹಳ ನೆಟ್ಟಗಿದೆ.

ಈಗ ಈ ಪ್ರದೇಶದ ಶಿಕ್ಷಣದಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿ ಸಾಕ್ಷರತಾ ಪ್ರಮಾಣವು ಶೇ. ೮.೫ ರಿಂದ ಶೇ. ೫೪.೪ಕ್ಕೆ ಏರಿದೆ. ೨೦೦೧ ರಾಜ್ಯ ಸರಾಸರಿ ಶೇ ೬೭ರಷ್ಟು ಮಹಿಳೆಯರ ಸಾಕ್ಷರತಾ ಪ್ರಮಾಣವು ಶೇ ೧೭ ರಿಂದ ೪೨ಕ್ಕೆ ಏರಿದೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯು ೧೯೯೨ರಲ್ಲಿ ಅಸ್ತಿತ್ವಕ್ಕೆ ಬಂದ ನಂತರ ತೆಗೆದುಕೊಂಡ ಕ್ರಮಗಳು ಹಾಗೂ ಕಪ್ಪು ಹಲಗೆ ಕಾರ್ಯಕ್ರಮ, ಸರ್ವಶಿಕ್ಷಣ ಅಭಿಯಾನ ಮುಂತಾದ ಕಾರ್ಯಕ್ರಮಗಳ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಳವಾಗಿದೆ. ಶಿಕ್ಷಣ ಸೌಲಭ್ಯಗಳು ನಿಧಾನಗತಿಯಲ್ಲಿ ಹೆಚ್ಚುತ್ತಿದ್ದರೂ, ಸಾಕ್ಷರತೆಯ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಇನ್ನೂ ಕಂಡು ಬರುತ್ತಿಲ್ಲ. ೨೦೦೧ರ ಜನಗಣತಿಯ ಪ್ರಕಾರ ಈ ಭಾಗದ ಜಿಲ್ಲೆಗಳ ಸಾಕ್ಷರತಾ ಪ್ರಮಾಣವು ರಾಜ್ಯದ ಸರಾಸರಿಗಿಂತಲೂ ಬಹಳ ಕಡಿಮೆ ಇದೆ. ಶಿಕ್ಷಣದ ಪ್ರಮಾಣ ಕಡಿಮೆ ಇರುವುದರೊಂದಿಗೆ ಶಿಕ್ಷಣದ ಗುಣಮಟ್ಟವೂ ಕೂಡ ಕೆಳಮಟ್ಟದಲ್ಲಿದೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ತೀರ ಕಡಿಮೆ. ಇದಕ್ಕೆ ಆಂಗ್ಲ ಭಾಷಾಜ್ಞಾನದ ಮತ್ತು ಸರಿಯಾದ ತರಬೇತಿಯ ಕೊರತೆ ಕಾರಣವಾಗಿದೆ. ಹಾಗಾಗಿ ಜಾಗತೀಕರಣದ ಲಾಭಗಳು ಈ ಭಾಗದ ಜನತೆಗೆ ದೊರೆಯದಂತಾಗಿವೆ.

೨.೬ ಭಾಷಾ ಸ್ಥಿತಿಗತಿ :

ಹೈದರಾಬಾದ್ ಕರ್ನಾಟಕದ ಹಿಂದುಳಿದಿರುವಿಕೆಗೆ ಭಾಷಾ ಸ್ಥಿತಿಯೂ ಕಾರಣವಾಗಿದೆ. ನಿಜಾಂ ಆಳ್ವಿಕೆಯಲ್ಲಿ ಭಾಷಾ ದಬ್ಬಾಳಿಕೆಯ ಪಾತ್ರವು ಮಹತ್ವದ್ದಾಗಿದೆ. ಭಾಷಾ ದಬ್ಬಾಳಿಕೆಯೆಂದರೆ ಭಾಷೆಗಳ ನಡುವಿನ ತಾರತಮ್ಯವಾಗಿದೆ. ನಿಜಾಂ ಆಡಳಿತದಲ್ಲಿ ಉರ್ದು ಭಾಷೆಯು ಆಡಳಿತದ ಭಾಷೆಯಾಗಿ ಮತ್ತು ಶಿಕ್ಷಣ ಮಾಧ್ಯಮದ ಪ್ರಧಾನ ಭಾಷೆಯಾಗಿ ಅಸ್ತಿತ್ವಕ್ಕೆ ಬಂದಿತ್ತು.

ನಿಜಾಂ ಆಳ್ವಿಕೆಯ ಕಾಲದಲ್ಲಿ ಮೊದಲು ಫಾರಸಿ ಭಾಷೆಯು ಮುಂಚೂಣಿಯ ಸ್ಥಾನದಲ್ಲಿತ್ತು. ನಂತರ ಉರ್ದು ಭಾಷೆಯನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಕಡ್ಡಾಯಗೊಳಿಸಿದರು. ಅಂದರೆ ಹೈದರಾಬಾದಿನ ನಿಜಾಂನು ಉರ್ದು ಭಾಷೆಯನ್ನು ಅಭಿವೃದ್ಧಿಪಡಿಸಲು ಕ್ರಮವನ್ನು ಕೈಗೊಂಡನು. ಹೈದರಾಬಾದ್ ಸಂಸ್ಥಾನದ ಪ್ರಾಂತ್ಯಗಳಲ್ಲಿ ಕನ್ನಡ, ಮರಾಠಿ, ತೆಲುಗು ಭಾಷೆಗಳು ದೇಶಿಭಾಷೆಗಳಾಗಿದ್ದವು. ಬಹುಸಂಖ್ಯಾತರಾದ ಕನ್ನಡಿಗರು ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಬದಿಗೊತ್ತಿ ಪ್ರಭುತ್ವದ ಭಾಷೆಯಾದ ಉರ್ದು ಭಾಷೆಯನ್ನು ಕಲಿಯುವ ಒತ್ತಡಕ್ಕೊಳಗಾದರು.

'ಉರ್ದು ಭಾಷೆಯನ್ನು ದೇಶಿ ಭಾಷೆಯನ್ನಾಗಿ ಮಾಡಲು ನಿಜಾಂ ಸರಕಾರ ಪ್ರಯತ್ನಿಸಿತು. ಆದರೆ ಸಂಸ್ಥಾನದ ದೇಶಿ ಭಾಷೆಗಳು ಕನ್ನಡ, ತೆಲಗು ಮತ್ತು ಮರಾಠಿ ಆಗಿದ್ದವು'. ಬಹುಸಂಖ್ಯಾತರಾಗಿದ್ದ ಕನ್ನಡಿಗರು ಕನ್ನಡ ಭಾಷೆಯಲ್ಲಿ ಶಿಕ್ಷಣ ಪಡೆದು ಮುಂದೊಂದು ದಿನ ನಿಜಾಂ ಸಂಸ್ಥಾನಕ್ಕೆ ಮಾರಕವಾಗಬಹುದು ಎನ್ನುವ ದೃಷ್ಟಿಯಿಂದ ನಿಜಾಂ ಉರ್ದು ಭಾಷೆಯನ್ನು ಅಸ್ತಿತ್ವಕ್ಕೆ ತಂದನು. ಕನ್ನಡ ಭಾಷೆಯನ್ನಾಡುವ ಜನರು ಕಾಲದ ಒತ್ತಡಕ್ಕೆ ಮಣಿದು ಉರ್ದು ಮಾಧ್ಯಮದಲ್ಲಿಯೇ ಶಿಕ್ಷಣವನ್ನು ಪಡೆದರು. ಶೈಕ್ಷಣಿಕ ಅವಶ್ಯಕತೆಗಾಗಿ ಉರ್ದು ಭಾಷೆಯನ್ನು ಕಲಿಯಬೇಕಾಗಿತ್ತು. ಇದರಿಂದ ವಿದ್ಯಾರ್ಥಿಗಳು ಬಹಳಷ್ಟು ಸಂಕಷ್ಟಕ್ಕೆ ಒಳಗಾಗುತ್ತಿದ್ದರು. ವಿದ್ಯಾರ್ಥಿಗಳ ಸಂಖ್ಯೆಯು ಕೂಡ ಇಳಿಮುಖವಾಗತೊಡಗಿತು. ಇದಕ್ಕೆ ನಿಜಾಂ ಭಾಷಾ ನೀತಿ ಹಾಗೂ ಶಿಕ್ಷಣ ನೀತಿಗಳೇ ಕಾರಣವಾಗಿದ್ದವು. 'ಉರ್ದು ಶಿಕ್ಷಣದ ಉದ್ದೇಶವೇನೆಂದರೆ ಸರ್ಕಾರಿ ಸೇವೆಗೆ ನೇಮಕಗೊಳ್ಳಲು ಉರ್ದು ಭಾಷಿಕರನ್ನು ತಯಾರಿಸುವುದಾಗಿತ್ತು. ಈ ರೀತಿಯ ಉರ್ದು ಭಾಷೆಯ ಹೇರಿಕೆ ಬಹುಸಂಖ್ಯಾತ ಜನರ ಶೈಕ್ಷಣಿಕ ಅವಕಾಶಗಳನ್ನು ಮೊಟಕುಗೊಳಿಸಿತು. ಆ ಕಾಲದ ಪರಿಸ್ಥಿತಿಯನ್ನು ಹಿಂದೂ ರಾಷ್ಟ್ರೀಯವಾದಿ ಬರಹಗಾರರು ವಿಶ್ಲೇಷಿಸಲು ಯತ್ನಿಸಿದರು. ಅವರು ಮಾಡಿರುವ ಸಾಮಾನ್ಯೀಕರಣವು ಪ್ರಶ್ನಾರ್ಹವಾಗಿದೆ. ಮೇಲೆ ತಿಳಿಸಿದಂತೆ ಕನ್ನಡಿಗರಾದ ಈ ಪ್ರಾಂತ್ಯದ ಜನರು ಎಂದುಕೊಂಡರೆ ಇತರ ಭಾಷಿಕರು ಈ ಪ್ರಾಂತ್ಯದವರಾಗುವುದಿಲ್ಲ.

ಪ್ರಭುತ್ವದ ಈ ಬಗೆಯ ಧೋರಣೆಯಿಂದಾಗಿ ಕನ್ನಡ ಭಾಷೆಯ ಬೆಳವಣಿಗೆಯು ಕುಂಠಿತಗೊಂಡಿತು. ಆಳುವ ವರ್ಗದ ಭಾಷೆಯಾದ ಉರ್ದುವನ್ನು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಪದವಿಯವರೆಗೆ ಕಲಿಯಬೇಕಿತ್ತು. ರಾಜ ಮನೆತನಗಳ ಆಳ್ವಿಕೆಯಲ್ಲಿ ಕನ್ನಡ ಭಾಷೆ ಉನ್ನತ ಸ್ಥಾನದಲ್ಲಿತ್ತು ನಿಜಾಂ ಆಳ್ವಿಕೆಯಲ್ಲಿ ಕನ್ನಡ ಭಾಷೆ ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾಯಿತು.[೨೨]

ಒಟ್ಟಾರೆ ಹೈದರಾಬಾದ್ ಕರ್ನಾಟಕದ ಸಾಮಾಜಿಕ ವಾಸ್ತವ ಒಟ್ಟು ಕರ್ನಾಟಕದ ಸಾಮಾಜಿಕ ವಾಸ್ತವಕ್ಕಿಂತ ಹಿಂದುಳಿದುದಾಗಿದೆ. ಇದಕ್ಕೆ ಅನಿರ್ಬಂಧಿತವಾಗಿ ಬೆಳೆಯುತ್ತಿರುವ ಜನಸಂಖ್ಯೆ, ಬಡತನ, ಹಿಂದುಳಿದ ಸಾಮಾಜಿಕ ವ್ಯವಸ್ಥೆ, ಮಹಿಳೆಯರ ಅನಕ್ಷರತೆ ಹಾಗೂ ಕಡಿಮೆ ಮಟ್ಟದ ಸ್ಥಾನಮಾನ, ಮೂಢನಂಬಿಕೆಗಳು ಕಾರಣವಾಗಿವೆ ಎಂದು ಹೇಳಬಹುದಾಗಿದೆ.

ಟಿಪ್ಪಣಿಗಳು :

೧. ಜಾಗಿರದಾರ ಆ.ಜಿ: ವಿಠ್ಠಲರಾವ್ ಲಿಂಗಸೂರು: ಹೈದರಾಬಾದ್ ಕರ್ನಾಟಕ: ಪ್ರ. ಪ್ರೇಮನಗರ ಹೈದರಾಬಾದ್: ಪ್ರಮು. ೧೯೪೧

೨. ಅಮರೇಶ ನುಗಡೋಣಿ: ನುಡಿವ ಜೆಡಗು: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ: ೨೦೦೩: ಪು. ೪. ೪೧

೩. ಶಿವಕುಮಾರ ನಾಗವಾರ: ಹಣಾದಿ: ಲೋಹಿಯಾ ಪ್ರಕಾಶನ ಬಳ್ಳಾರಿ: ಪ್ರಮು: ೨೦೦೦: ಪು. XII

೪. ಅಮರೇಶ ನುಗಡೋಣಿ: ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನ ಚಳುವಳಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ: ಪ್ರಮು ೨೦೦೦: ಪು. ೨

೫. ಎಸ್.ಆರ್.ರಾಮಸ್ವಾಮಿ: ಸರ್ದಾರ ವಲ್ಲಭಬಾಯಿ ಪಟೇಲ: ಪ್ರ- ಸ್ವಪ್ನ ಬುಕ್ ಹೌಸ್ ಬೆಂಗಳೂರು: ಪ್ರಮು ೨೦೦೦: ಪು. ೨೮

೬. ಗೋಪಾಲ್‌ರಾವ್ ಹೇಜಿ ಬ: ಹೈದ್ರಬಾದ್ ಮುಕ್ತಿ ಸಂಘರ್ಷ: ರಾಷ್ಟ್ರೋತ್ಥಾನ ಸಾಹಿತ್ಯ ಬೆಂಗಳೂರು: ಪ್ರಮು ೨೦೦೧: ಪು. ೨೦

೭. ಜಿ.ರಾಜಶೇಖರ: ತೆಲಂಗಾಣ ರೈತ ಹೋರಾಟ: ಸಮುದಾಯ ಪ್ರಕಾಶನ, ಬೆಂಗಳೂರು ಪ್ರಮು-೧೯೮೧: ಪು. ೪

೮. ವಸಂತ ಬನ್ನಾಡಿ: ಸಂಸ್ಕೃತಿ ಚಿಂತನೆ: ಅರಿವು ಬರಹ ಪ್ರಕಾಶನ: ಪ್ರಮು: ೧೯೯೫. ಪು. ೪

೯. ಜಿ.ರಾಜಶೇಖರ: ತೆಲಂಗಾಣ ರೈತ ಹೋರಾಟ: ಸಮುದಾಯ ಪ್ರಕಾಶನ ಬೆಂಗಳೂರು. ಪ್ರಮು: ೧೯೮೧. ಪು. ೬-೮

೧೦. ಜಿ.ರಾಜಶೇಖರ: ತೆಲಂಗಾಣ ರೈತ ಹೋರಾಟ: ಸಮುದಾಯ ಪ್ರಕಾಶನ ಬೆಂಗಳೂರು. ಪ್ರಮು: ೧೯೮೧. ಪು. ೨೬

೧೧. ಡಾ. ಆರ್.ಇಂದಿರಾ: ಮಹಿಳೆ ಸಮಾಜ ಸಂಸ್ಕೃತಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ೨೦೦೨: ಪು. ೧೦

೧೨. ಶಿವಕುಮಾರ ನಾಗವಾರ: ಹಣಾದಿ: ಲೋಹಿಯಾ ಪ್ರಕಾಶನ ಬಳ್ಳಾರಿ: ೨೦೦೦: VIII

೧೩. ಡಾ. ಆರ್.ಇಂದಿರಾ: ಮಹಿಳೆ ಸಮಾಜ ಸಂಸ್ಕೃತಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ: ಪು. ೨೦-೨೧

೧೪. ಅಮರೇಶ ನುಗಡೋಣಿ: ೨೦೦೦: ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ ಕರ್ನಾಟಕ ವಿಮೋಚನಾ ಚಳುವಳಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು. ೩

೧೫. ಡಾ. ಜಿ. ತಿಮ್ಮಯ್ಯ ೧೯೯೪: ಯೋಜನಾ

೧೬. ಪ್ರೊ.ಛಾಯಾದೇಗಾಂವಕರ: ಅಭಿವೃದ್ಧಿಯ ಕಡೆಗೆ ಸಾಗುತ್ತಿದ್ದರೂ ಹಿಂದುಳಿದ ಹೈದರಾಬಾದ್ ಕರ್ನಾಟಕ: ಸಂಯುಕ್ತ ಕರ್ನಾಟಕ: ೧೭-೩-೨೦೦೫

೧೭. ಬಿ.ಸಿ.ಮಹಾಬಲೇಶ್ವರಪ್ಪ: ಹೈದರಾಬಾದ್ ಕರ್ನಟಕದಲ್ಲಿ ರಾಜಕೀಯ ಚಳುವಳಿಗಳು ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ. ೧೯೯೭: ಪು.೨೦

೧೮. ಜಾಗಿರದಾರ.ಆರ್.ಜಿ. ವಿಠಲರಾವ್ ಲಿಂಗಸೂಗೂರು: ಹೈದರಾಬಾದ್ ಕರ್ನಾಟಕ: ಪ್ರೇಮನಗರ ಹೈದರಾಬಾದ್: ೧೯೪೧: ಪು.೬೯

೧೯. ಪ್ರೊ. ಛಾಯಾದೇಗಾಂವಕರ್ ಲೇಖನ ಸಂಯುಕ್ತ ಕರ್ನಾಟಕ.

೨೦. ಅಮರೇಶ ನುಗಡೋಣಿ: ೨೦೦೩: ನುಡಿಯ ಬೆಡಗು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು.೩೩

೨೧. ಅದೇ ಪುಟ ೬೮

೨೨. ಎಂ.ಬಿ.ಪಾಟೀಲ್ (ಸಂ): ಗುಲಬರ್ಗಾ ಜಿಲ್ಲೆ (ಗೆಜೆಟಿಯರ್) ಕರ್ನಾಟಕ ರಾಜ್ಯ ಸರಕಾರದ ಪ್ರಕಟಣೆ: ೧೯೯೭: ೧೨೫

೨೩. ಮಹಾಬಲೇಶ್ವರಪ್ಪ ೧೯೯೭ ಹೈದರಾಬಾದ್ ಕರ್ನಟಕದಲ್ಲಿ ರಾಜಕೀಯ ಚಳುವಳಿಗಳು ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ. ಪು. ೨೪

* * *

ಅಧ್ಯಾಯ : ಮೂರು

ಹೈದರಾಬಾದ ಕರ್ನಾಟಕದ ಮಹಿಳಾ ಬದುಕಿನ ಸಾಮಾಜಿಕ ವಾಸ್ತವ

ಹೈದರಾಬಾದ ಕರ್ನಾಟಕದ ಮಹಿಳಾ ಬದುಕಿನ ಸಾಮಾಜಿಕ ವಾಸ್ತವ

೩.೧ ಮಹಿಳಾ ಬದುಕಿನ ಗ್ರಹಿಕೆಯ ಸ್ವರೂಪ

ಹೈದರಾಬಾದ ಕರ್ನಾಟಕದ ಮಹಿಳಾ ಬದುಕಿನ ಸಾಮಾಜಿಕ ವಾಸ್ತವವನ್ನು ಗ್ರಹಿಸಲು ಹಿರಿಯರೊಂದಿಗಿನ ಸಂವಾದ, ಚರಿತ್ರೆಯ ಪುಟಗಳಿಂದ ದೊರೆತ ಮಾಹಿತಿ, ಸಾಂದರ್ಭಿಕವಾಗಿ ಪ್ರಕಟಗೊಂಡ ಪತ್ರಿಕಾ ವರದಿಗಳನ್ನು, ವಿವಿಧ ನೆಲೆಯಲ್ಲಿ ಮಹಿಳಾ ಬದುಕನ್ನು ಕುರಿತು ಪ್ರಕಟವಾದ ಕೃತಿಗಳನ್ನು, ಟಿ.ವಿ ಮಾಧ್ಯಮದಲ್ಲಿ ಬಿಂಬಿತವಾದ ಈ ಭಾಗದ ಮಹಿಳಾ ಬದುಕಿನ ವಿವರಗಳನ್ನು, ಸಂಶೋಧನಾ ಪ್ರಬಂಧಗಳನ್ನು ಜನಪದ ಪರಂಪರೆ, ನಂಬಿಕೆ ಆಚರಣೆಗಳನ್ನು ದೈವಾರಾಧನೆಯ ರೂಢಿಯನ್ನು ಅನುಲಕ್ಷಿಸಲಾಗಿದೆ. ಇವುಗಳಿಂದ ಪ್ರಭಾವಿತವಾದ ಮಹಿಳಾ ಬದುಕಿನ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ರಾಜಕೀಯ ವಾಸ್ತವವೇನು? ಪ್ರಸ್ತುತ ಹೈದರಾಬಾದ ಕರ್ನಾಟಕದ ಮಹಿಳಾ ಬದುಕು ಒಟ್ಟು ಕರ್ನಾಟಕದ ಮಹಿಳಾ ಬದುಕಿಗಿಂತ ಹಿಂದುಳಿದಿರಲು ಇರಬಹುದಾದ ಕಾರಣಗಳೇನು ಎಂಬುದನ್ನು ಕಂಡುಕೊಳ್ಳಲು ಯತ್ನಿಸಲಾಗಿದೆ.

ಹೈದರಾಬಾದ ಕರ್ನಾಟಕ ಪ್ರದೇಶದ ಮಹಿಳೆಯರ ಸಾಮಾಜಿಕ ಜೀವನದ ವಾಸ್ತವ ಚಿತ್ರಣ ಜಾಗತಿಕ ಮಹಿಳೆಯ ಸಾಮಾಜಿಕ ಜೀವನದ ವಾಸ್ತವಕ್ಕಿಂತ ತೀರ ಭಿನ್ನವಲ್ಲವಾದರೂ, ಇಲ್ಲಿಯ ರಾಜಕೀಯ, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳು ನಿರಂತರ ಪರಕೀಯ ದಾಳಿಗಳಿಂದ ಪ್ರಭಾವಿತವಾದ ಕಾರಣ ಮಹಿಳೆಯ ಬದುಕು, ಇತರೆಡೆಗಿಂತ ಹೆಚ್ಚು ದಮನಿತವಾಗಿದೆ ಎಂಬುವುದರಲ್ಲಿ ಎರಡು ಮಾತು ಇಲ್ಲ. ಈ ಅಧ್ಯಾಯದಲ್ಲಿ ವಿಷಯವನ್ನು ಸಮಗ್ರವಾಗಿ ಅಧ್ಯಯನಕ್ಕೊಳಪಡಿಸಲಾಗಿದೆ. ಚರಿತ್ರೆ, ಸಂಪ್ರದಾಯ, ನಂಬಿಕೆಗಳು, ಗ್ರಾಮೀಣ, ನಗರೀಕರಣ, ಜಾಗತೀಕರಣಗಳು ಮಹಿಳೆಯ ಬದುಕನ್ನು ಪ್ರಭಾವಿಸಿದ ಕುರಿತು ಮತ್ತು ಅದರಿಂದಾದ ಪರಿಣಾಮದ ಕುರಿತು ಈ ಅಧ್ಯಾಯದಲ್ಲಿ ಕೂಲಂಕಷವಾಗಿ ಚರ್ಚಿಸುವುದಾಗಿದೆ.

ಇದುವರೆಗೆ ದಾಖಲಾದದ್ದು ಪುರೋಹಿತಶಾಹಿ ಹಿನ್ನೆಲೆಯಲ್ಲಿ ಬಲಗೊಂಡ ಪುರುಷ ಪ್ರಧಾನ ಚರಿತ್ರೆ, ಅಲ್ಲಿ ಮಹಿಳೆಯ ಏಳು-ಬೀಳುಗಳ ನೋವು-ನಿಟ್ಟುಸಿರಿನ ದಾಖಲಾತಿಗಳು ಹುಡುಕಿದರೂ ಸಿಗುವುದಿಲ್ಲ. ಧರ್ಮವನ್ನು ಪ್ರಧಾನವಾಗಿಟ್ಟುಕೊಂಡು ಕರ್ಮಸಿದ್ಧಾಂತದಡಿಯಲ್ಲಿ ಊಹಾಪೋಹಗಳ ರೂಪ ಪಡೆದು ಪುರಾಣ ಹಾಗೂ ಸಾಹಿತ್ಯಗಳಲ್ಲಿನ ಸಾಕ್ಷಿಗಳನ್ನಾಧರಿಸಿ ಮಹಿಳಾ ಚರಿತ್ರೆಯನ್ನು ಕಟ್ಟಲಾಗದು. ಅದಕ್ಕಾಗಿಯೇ ಚರಿತ್ರೆಯ ಪುನಾರಚನೆಯ ಅಗತ್ಯವಿದೆ. ಆದರಿಂದ ಅವಳ ಹುಟ್ಟು, ಹೆರಿಗೆ, ನೋವು, ನಿಟ್ಟುಸಿರು, ಸಾವುಗಳನ್ನೆಲ್ಲ

ದಾಖಲಿಸುತ್ತ ಮಹಿಳಾ ಚರಿತ್ರೆಯು ಪುರುಷ ಕೇಂದ್ರಿತ ವ್ಯವಸ್ಥೆಗೆ ಒಳಪಟ್ಟಿದ್ದರ ಎಲ್ಲ ಚಾರಿತ್ರಿಕ ಕ್ರಮಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಚರಿತ್ರೆಯನ್ನು ಅರ್ಥೈಸಿಕೊಳ್ಳದೆ ವರ್ತಮಾನದ ಸಂಕೀರ್ಣ ಶೋಷಣೆಯನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ.

ಧರ್ಮ ಮತ್ತು ರಾಜಕೀಯ ವ್ಯವಸ್ಥೆಗಳೆರಡೂ ಒಂದಕ್ಕೊಂದು ಕರುಳಬಳ್ಳಿಯ ಸಂಬಂಧ ಹೊಂದಿದ್ದು ಅವುಗಳು ಸಮಾಜವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿವೆ. ಸಮಾಜದ ಸದಸ್ಯರಾಗಿ ಅನುಸರಿಸಬೇಕಾದ ಸಾಮಾಜಿಕ ನಿಯಮಗಳು ಧರ್ಮದ ತಳಹದಿಯಲ್ಲಿ ರೂಪಗೊಂಡಿವೆ. ಅವುಗಳು ಅಲಿಖಿತವಾಗಿವೆ. ವ್ಯಕ್ತಿಯಾಗಿ ಎಲ್ಲರೂ ಸ್ವತಂತ್ರರು. ಆದರೆ ಸಮಾಜದ ಸದಸ್ಯರಾಗಿ ಅವರು ಸ್ವತಂತ್ರರಾಗಿರುವುದಿಲ್ಲ. ಮನುಷ್ಯರು ವ್ಯಕ್ತಿಗತವಾಗಿ ವರ್ತಿಸದಂತೆ ಸಮಾಜ ಅವರನ್ನು ನಿಯಂತ್ರಿಸುತ್ತದೆ. ಸಾಮಾಜಿಕ ಅಲಿಖಿತ ನಿಯಮಾವಳಿಗಳು ಪುರುಷರಿಗಿಂತಲೂ ಸ್ತ್ರೀಯರ ಮೇಲೆಯೇ ಹೆಚ್ಚಾಗಿ ಹೇರಲ್ಪಟ್ಟಿವೆ.

ಪುರುಷ ಪ್ರಧಾನ ಸಂಸ್ಕೃತಿಯು ಮಹಿಳೆಯನ್ನು ಕಂಡ ರೀತಿ, ನಿರ್ವಹಿಸಿದ ಬಗೆ ವಿಚಿತ್ರವಾಗಿದೆ. ಅದು ವಾಸ್ತವಕ್ಕಿಂತ ಕಲ್ಪನಾತ್ಮಕವಾಗಿರುವುದೆ ಹೆಚ್ಚು. ಮಹಿಳೆಯರಿಗೆ ನೋವನ್ನು ಸಹಿಸಿಕೊಳ್ಳುವ ಶಕ್ತಿಯಿರುವುದರಿಂದ ಅವಳು ಧರಣಿ, ನಾಲ್ಕು ಗೋಡೆಗಳ ಒಳಗಿರುವ ಅವಳ ಹೃದಯ ಮೃದು, ಶರೀರ ಕೋಮಲ, ಮೃದುಹೃದಯಿಯಾದ ಅವಳು ಕರುಣಾಮಯಿ ಹಾಗೂ ಭಾವನಾಮಯಿ. ಹೆಣ್ಣಿಗೆ ಕಣ್ಣೀರು ಸಹಜವಾಗಿರುವಂತೆ ಅದನ್ನು ತಡೆದುಕೊಳ್ಳುವ ಸಾಮರ್ಥ್ಯವೂ ಸಹಜವೆ. ಜೀವಿಗಳಿಗೆ ಜನ್ಮ ನೀಡುವ ಮಹಿಳೆಯಲ್ಲಿ ತ್ಯಾಗಗುಣ ನಿಸರ್ಗದತ್ತವಾಗಿದೆ. ಪುರುಷ ನಿಸರ್ಗದ ಮೇಲೆ ಸ್ವಾಮ್ಯವನ್ನು ಸಾಧಿಸಿದ್ದರಿಂದ ಆತ ಬಲಶಾಲಿ. ತನ್ನ ಶ್ರೇಷ್ಠತೆಯನ್ನು ತಾನೇ ನಿರ್ವಚಿಕೊಂಡ ಅವನು ಮಹಿಳೆಯನ್ನು ತನ್ನ ಅಗತ್ಯಕ್ಕನುಗುಣವಾಗಿ ಬಳಸಿಕೊಳ್ಳುತ್ತ ಬಂದಿದ್ದಾನೆ. ವಾಸ್ತವಾಗಿ ಆತನ ಗ್ರಹಿಕೆಗೆ ಹೊರತಾದ ಮನಸ್ಸು ಬುದ್ಧಿ ಶಕ್ತಿ ವಿವೇಕಗಳು ಮಹಿಳೆಯ ವ್ಯಕ್ತಿತ್ವಕ್ಕಿವೆ ಎಂಬುದನ್ನು ಇಂದಿನ ಅನೇಕ ಅಧ್ಯಯನಗಳು ಸ್ಪಷ್ಟಪಡಿಸಿವೆ.

೩.೨ ಪರಂಪರೆಯಲ್ಲಿ ಮಹಿಳೆ :

ಪರಪಂರೆಯಲ್ಲಿ ಅನೇಕ ಮಹನೀಯರು ತಮ್ಮ ಕೃತಿಗಳಲ್ಲಿ ಮಹಿಳೆಯರು ದ್ವಿತೀಯ ಸೃಷ್ಠಿಯೆಂದು ಪ್ರತಿಪಾದಿಸಿದ್ದಾರೆ.

ಕಾಳಿದಾಸನು ತನ್ನ 'ಕುಮಾರ ಸಂಭವದಲ್ಲಿ' ಆದಿಯಲ್ಲಿ ಶಕ್ತಿ ರೂಪನಾದ ಪರಮಾತ್ಮನು ಒಬ್ಬನೇ ಇದ್ದನು. ತಾನು ಅನೇಕವಾಗಲು ಸಂಕಲ್ಪಿಸಿ ಅವನು ತನ್ನನ್ನೇ ಎರಡಾಗಿ ವಿಭಾಗಿಸಿಕೊಂಡನು. ಈ ಎರಡು ಭಾಗಗಳೇ ಪುರುಷ ಮತ್ತು ಪ್ರಕೃತಿ ಎನಿಸಿಕೊಂಡವು. ಈ ಪ್ರಕೃತಿಯೇ ಸೃಷ್ಠಿಯಲ್ಲಿನ ಸ್ತ್ರೀ ಗುಣ ಲಕ್ಷಣಗಳ ಪ್ರತೀಕ.[೧] ಎಂದಿದ್ದಾನೆ.

ಕ್ರೈಸ್ತ ಮತದಲ್ಲಿ ಈವ್ ಆ್ಯಡಮ್‌ನ ಪಕ್ಕೆಲುಬಿನಿಂದ ಜನ್ಮ ತಾಳಿದಳೆಂದು ಹೇಳಲಾಗಿದೆ. ಅಂದರೆ ಪರಿಪೂರ್ಣನಾದ ಆ್ಯಡಮ್‌ನ ದೇಹದ ಒಂದು ಅಂಶದಿಂದ ಈವ್ ಸೃಷ್ಟಿಯಾದಳು. ಹಾಗಾಗಿ ಅವಳು ಪರಿಪೂರ್ಣಳಲ್ಲ.

ಎಮ್.ಡಬ್ಲ್ಯು. ಬೈನ್ ತನ್ನ 'ಡಿಜಿಟ್ ಆಫ್ ದಿ ಮೂನ್' ಎಂಬ ಕೃತಿಯಲ್ಲಿ ದೇವರು ಪುರುಷನನ್ನು ಸೃಷ್ಟಿಸುವುದರಲ್ಲಿಯೇ ಎಲ್ಲಾ ಸಾಮಗ್ರಿಗಳು ಮುಗಿದುಹೋಗಿದ್ದವು. ಗಟ್ಟಿಯಾದ ಯಾವ ವಸ್ತುವು ಸಿಗದ ಕಾರಣ ಅವನು ಸ್ತ್ರೀಯನ್ನು ಮೃದುವಾದ ವಸ್ತುಗಳಿಂದ ಸೃಷ್ಟಿಸಿ ಅವಳನ್ನು ಅಬಲೆಯನ್ನಾಗಿ ಮಾಡಿದನು ಎಂದಿದ್ದಾನೆ.

ಹೀಗೆ ಪ್ರಪಂಚದಾದ್ಯಂತ ಮಹಿಳೆಯನ್ನು ದ್ವಿತೀಯ ಸೃಷ್ಟಿ ಅಥವಾ ದ್ವಿತೀಯ ಲಿಂಗವೆಂದೇ ಗುರುತಿಸಲಾಗಿದೆ. ಮೇಲಿನ ಎಲ್ಲಾ ವಿವರಗಳು ನಿಸರ್ಗವೇ ಅದಕ್ಕೆ ಕಾರಣವೆಂದು ಸಮರ್ಥಿಸುವಂತಿವೆ. ಅಂದರೆ ಸ್ತ್ರೀ ಪುರುಷರ ನಡುವೆ ಬೆಳೆದುಬಂದ ಅಸಮಾನತೆ ಸಹಜವಾದುದೇ ಹೊರತು ಮಾನವ ನಿರ್ಮಿತವಲ್ಲವೆಂದೇ ಸಾಧಿಸಲಾಗಿದೆ. ಹೀಗೆ ಪ್ರಥಮ ಸೃಷ್ಟಿಯ ಮಿಥ್‌ನ್ನು ಆಶ್ರಯಿಸಿ ಪುರುಷ ಎಲ್ಲ ಸೌಲತ್ತು, ಸೌಲಭ್ಯಗಳನ್ನು ಅನುಭವಿಸುತ್ತಾ ಬಂದಿದ್ದಾನೆ. ಮಹಿಳೆಯನ್ನು ಸೌಲಭ್ಯ ವಂಚಿತಳನ್ನಾಗಿಸಿ ತನ್ನ ಅನುವರ್ತಿಯಾಗಿಸಿಕೊಂಡಿದ್ದಾನೆ.

ಮಾತೃ ಮೂಲೀಯ ಹಂತದಿಂದ ಪಿತೃಮೂಲೀಯ ಹಂತಕ್ಕೆ ವ್ಯವಸ್ಥೆ ಬದಲಾದಾಗ ಮಹಿಳೆ ತನ್ನ ಸ್ಥಾನ ಕಳೆದುಕೊಂಡು ಪಾಲಕಳೂ ಸೇವಕಳೂ ಆದಳು. ಹಕ್ಕು ಅಧಿಕಾರಗಳು ಪುರುಷನಿಗೆ ಸೇರಿದವು, ಪುರುಷನೇ ಮಕ್ಕಳ ಜೀವನಕ್ಕೆ ಪೂರ್ಣ ಜವಾಬ್ದಾರನೆಂದು, ಮಹಿಳೆ ಕೇವಲ ತಾನು ಪಡೆದ ಬೀಜವನ್ನು ಪೋಷಿಸುವಾಕೆ ಎಂದು ಪರಿಭಾವಿಸಲಾಯಿತು. ಹೀಗೆ ಮಕ್ಕಳ ಮೇಲೆ ಹಕ್ಕು ಪಡೆದ ಪುರುಷ ಮಹಿಳೆಯ ಮೇಲೆ ಆಧಿಪತ್ಯ ಸ್ಥಾಪಿಸಿದನು.

ಫ್ಯೂಡಲ್ ವ್ಯವಸ್ಥೆ :

ಹೈದರಬಾದ್ ಕರ್ನಾಟಕದಲ್ಲಿ ಫ್ಯೂಡಲ್ ವ್ಯವಸ್ಥೆ ಜಾರಿಯಲ್ಲಿದೆ. ಫ್ಯೂಡಲ್ ವ್ಯವಸ್ಥೆ ಎಂದರೆ ಊಳಿಗಮಾನ್ಯ ಪದ್ಧತಿ ಅಥವಾ ಜೀತಪದ್ಧತಿ. ಒಂದು ಆಳುವ ವರ್ಗ ಇನ್ನೊಂದು ಆಳಿಸಿಕೊಳ್ಳುವ ವರ್ಗ. ಈ ವ್ಯವಸ್ಥೆಯಲ್ಲಿ ಜನರ ಸ್ವಾತಂತ್ರ್ಯ ಯಜಮಾನನಿಂದ ನಿಯಂತ್ರಿಸಲ್ಪಡುತ್ತದೆ. ಗ್ರಾಮಾಡಳಿತ ಆರ್ಥಿಕತೆಗಳು ಊಳಿಗಮಾನ್ಯದ ಸ್ವತ್ತು. ಇಲ್ಲಿ ನೀತಿ ನಿಯಮಗಳು ಜನರಿಗಾಗಿ ಮಾತ್ರ ಇರುತ್ತವೆ. ಆಡಳಿತ ನಡೆಸುವವರಿಗೆ ಯಾವುದೇ ನಿರ್ಬಂಧಗಳು ಇರುವುದಿಲ್ಲ. ನ್ಯಾಯ ವ್ಯವಸ್ಥೆ ಇವರ ಕೈಯಲ್ಲಿರುತ್ತದೆ, ಜನ ಏನು ಮಾಡಬೇಕಾದರೂ ಅಂದರೆ ವಿವಾಹವಾಗಲು, ಊರು ಬಿಟ್ಟು ಹೋಗಲು, ಹೊಲ ಮನೆ ಮಾರಲು ಕೂಡ ಯಜಮಾನನ ಅನುಮತಿ ಪಡೆಯಬೇಕಾಗುತ್ತದೆ.

ಊಳಿಗಮಾನ್ಯತೆಗಿಂತ ಮೊದಲಿನ ವರ್ಣ ಸಮಾಜದಲ್ಲಿ ಪ್ರಮುಖ ಲಕ್ಷಣವಾಗಿದ್ದ ಮಹಿಳಾ ಅಧೀನತೆಯು ಊಳಿಗಮಾನ್ಯ ಸಮಾಜದಲ್ಲಿ ಮತ್ತಷ್ಟು ದೃಢಗೊಂಡಿತು. ಊಳಿಗಮಾನ್ಯತೆ ಒಂದು ಶೋಷಣಾ ಸಾಮಾಜಿಕ ವ್ಯವಸ್ಥೆಯಾಗಿದ್ದು, ಭೂಮಾಲಿಕರು ಹೆಚ್ಚುವರಿ ಉತ್ಪಾದನೆಯನ್ನು ತಮ್ಮದಾಗಿಸಿಕೊಳ್ಳುತ್ತಿದ್ದರು. ಶೋಷಿತರಾದ ಹೆಂಗಸರೂ ಗಂಡಸರೂ ಆಳುವವರ ಸೇವೆ ಮಾಡಲು ಬಹಳ ಕಷ್ಟ ಪಡಬೇಕಾಗಿತ್ತು. ಸಾಮಾಜಿಕ ಬೆಳವಣಿಗೆಯ ಈ ಹಂತದಲ್ಲಿ ತತ್ವಶಾಸ್ತ್ರ, ಧರ್ಮ ಸಂಸ್ಕೃತಿಗಳು ಆಳುವವರ ಕೃಪಾಕಟಾಕ್ಷದಲ್ಲಿ ವರ್ಗ, ಜಾತಿ, ಹಾಗೂ ಲಿಂಗಾಧಾರಿತವಾದ ತಾರತಮ್ಯವನ್ನು ಸಮರ್ಥಿಸಿದವು. ಇಲ್ಲಿ ಪುರುಷಾಧಿಪತ್ಯವು ಒಂದು ಸಿದ್ಧಾಂತವಾಗಿ ಅರಳಿತು.

ಫ್ಯೂಡಲ್ ವ್ಯವಸ್ಥೆಯಲ್ಲಿ ಹೆಣ್ಣು ಒಂದು ಸರಕು ಕಾಮ ಮಾರಾಟದವಸ್ತು. ಅಲ್ಲಿ ಲೈಂಗಿಕ ಸಂಬಂಧಗಳಿಗೆ ಯಾವುದೇ ನೈತಿಕ ಮಹತ್ವ ಇರುವುದಿಲ್ಲ. ಅದನ್ನು ಬೇಕಾಬಿಟ್ಟಿಯಾಗಿ ಬಳಸಲಾಗುತ್ತದೆ. ಹೊಲ ಮನೆಗಳಂತೆ ಹೆಣ್ಣು ಒಂದು ಆಸ್ತಿ, ಭೋಗದ ವಸ್ತು, ಹೆಚ್ಚು ಹೆಣ್ಣುಗಳನ್ನು ಇಟ್ಟುಕೊಳ್ಳುವುದು ಗಂಡಸುತನದ ಸಂಕೇತ. ಹೆಣ್ಣು ಸಹ ಊರ ಗೌಡನೊಡನೆ ಲೈಂಗಿಕ ಸಂಬಂಧ ಹೊಂದಿದ್ದರೆ ಮರ್ಯಾದೆಯೆಂದು ಭಾವಿಸುತ್ತಾಳೆ.

೩.೩ ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆ

ಸ್ವಾತಂತ್ರ್ಯ ಪೂರ್ವದಲ್ಲಿ ಹೈದರಾಬಾದ ಕರ್ನಾಟಕ ಪ್ರದೇಶದ ಮಹಿಳೆಯ ಸ್ಥಿತಿ ಅತ್ಯಂತ ಹೀನಾಯವಾಗಿತ್ತು. ಬಾಲ್ಯವಿವಾಹ ಪದ್ಧತಿ ಜಾರಿಯಲ್ಲಿತ್ತು. ಪರ್ದಾಪದ್ಧತಿಯನ್ನು ಮುಸ್ಲಿಂಮರೂ ಸಂಪ್ರದಾಯಸ್ಥ ಹಿಂದೂ ಮಹಿಳೆಯರೂ ಪಾಲಿಸಬೇಕಾಗಿತ್ತು. ಮಹಿಳೆಯರಿಗೆ ಶಿಕ್ಷಣವೆಂದರೆ ಅವರನ್ನು ಅನುಮಾನದ ದೃಷ್ಟಿಯಿಂದ ನೋಡಲಾಗುತ್ತಿತ್ತು. ಏಕೆಂದರೆ ಆಗಿನ ಕಾಲದಲ್ಲಿ ವೇಶ್ಯಾ ಸಂಪ್ರದಾಯದವರಿಗೆ ಮಾತ್ರ ನೃತ್ಯ ಸಂಗೀತದ ಜೊತೆಯಲ್ಲಿ ವಿದ್ಯಾಭ್ಯಾಸ ನೀಡಲಾಗುತ್ತಿತ್ತು. ಬಹುಪತ್ನಿತ್ವ ಸಾಮಾನ್ಯವಾಗಿತ್ತು. ವೇಶ್ಯಾವೃತ್ತಿಯಂತೂ ಬೃಹತ್ ರೂಪತಾಳಿತ್ತು. ದೇವದಾಸಿ, ಜೋಗತಿ ಪದ್ಧತಿಗಳು ಜಾರಿಯಲ್ಲಿದ್ದವು. ಒಟ್ಟಿನಲ್ಲಿ ಎಲ್ಲ ರೀತಿಯಿಂದಲೂ ಮಹಿಳೆಯ ಸ್ಥಿತಿ ಅತ್ಯಂತ ದಾರುಣವಾದುದಾಗಿತ್ತು.

ಸ್ವಾತಂತ್ರ್ಯ ಪೂರ್ವದ ಮಹಿಳೆಯ ಇಂಥ ಸ್ಥಿತಿಯನ್ನು ಸುಧಾರಿಸಲು ದೇಶದಲ್ಲಿ ಸಮಾಜ ಸುಧಾರಕರು, ಮಾನವತಾವಾದಿಗಳು ಮತ್ತು ಸಾಮಾಜಿಕ ಕಾರ್ಯಕರ್ತರು ಶ್ರಮಿಸಿದರು. ಆದರೆ ಹೈದರಾಬಾದ ಕರ್ನಾಟಕ ಪ್ರದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದ ಪ್ರಭುತ್ವದ ಸ್ವಾಯತ್ ಮತ್ತು ಸ್ವೇಚ್ಛಾ ಆಡಳಿತದ ಪರಿಣಾಮವಾಗಿ ದೇಶದಲ್ಲಿ ಬೀಸಿದ ಸುಧಾರಣೆಯ ಗಾಳಿ ಈ ಪ್ರದೇಶಕ್ಕೆ ಸೋಂಕಲಿಲ್ಲ ಇತ್ತೇಹಾದ್‌ವುಲ್ ಮುಸ್ಲಿಮೀನ್ ಸಂಸ್ಥೆಯ ಧರ್ಮಾಂಧತೆಯಿಂದ ದೌರ್ಜನ್ಯಗಳನ್ನು ಅತ್ಯಾಚಾರಗಳನ್ನು ಸಾವು–ನೋವು ಸಂಕಷ್ಟಗಳನ್ನು ಎದುರಿಸಬೇಕಾಯಿತು. ಇದರಿಂದ ಪಾರಾಗಿ ಬದುಕಿ ಉಳಿಯುವುದೇ ಒಂದು ಸಾಹಸ ಎಂಬಂಥ ಸ್ಥಿತಿ ನಿರ್ಮಾಣವಾಗಿತ್ತು.

ಹನ್ನೆರಡನೆ ಶತಮಾನದಲ್ಲಿ ಈ ಪ್ರದೇಶದಲ್ಲಾದ ಸಾಮಾಜಿಕ ಕ್ರಾಂತಿಯ ಸಂಚಲನೆಯಲ್ಲಿ ಮಹಿಳೆಯರಿಗೆ ದೊರಕಿದ ಪ್ರಾಶಸ್ತ್ಯ ಬಹುಶಃ ಇನ್ನಾವ ಕಾಲದಲ್ಲಿ ದೊರೆತಿಲ್ಲ. ಸಂಪ್ರದಾಯದ ಸಂಕೋಲೆಯಲ್ಲಿ ಬಂಧಿಯಾಗಿದ್ದ ಮಹಿಳೆ ಪುರುಷನಂತೆ ಸ್ವತಂತ್ರವಾಗಿ ಆಲೋಚಿಸಲು, ಶಿಕ್ಷಣ ಪಡೆದು ಧರ್ಮಗ್ರಂಥಗಳನ್ನು ಅರಗಿಸಿಕೊಳ್ಳಲು ಭಕ್ತಿಯ ಮೂಲಕ ಮುಕ್ತಿಯನ್ನು ಪಡೆಯಲು ಸಾಧ್ಯವೆಂಬುದು ಮನವರಿಕೆಯಾದದ್ದು ಆ ಕಾಲದಲ್ಲಿ.

ಅಂಥ ಮಹಾನ್ ಕ್ರಾಂತಿಯ ನೆಲೆವೀಡು ಮುಂದೆ ಪರಾಕ್ರಮಣದ ಧಾಳಿಗಳಿಂದ ಪುನಃ ಹೀನ ಸ್ಥಿತಿಗೆ ಸರಿಯಬೇಕಾಯ್ತು ಎಂಬುದು ಇತಿಹಾಸದ ದುರಂತವಲ್ಲದೆ ಬೇರಿಲ್ಲ. ಇದರಿಂದ ಹೆಚ್ಚು ಪ್ರಭಾವಿತವಾದದ್ದು ಮಹಿಳಾ ಬದುಕು. ಪರಿಣಾಮ ಮಹಿಳೆ ಅವಕಾಶ ವಂಚಿತಳಾಗಿ ಮನೆಯ ನಾಲ್ಕು ಗೋಡೆಗಳ ಮಧ್ಯ ಬಂಧಿತಳಾಗಬೇಕಾಯಿತು.

'ಸೂಫಿ ಪಂಥವು ಪುರುಷಾಧಿಪತ್ಯ ವಿರೋಧಿ ಲಕ್ಷಣಗಳನ್ನೊಳಗೊಂಡು ಹಳ್ಳಿಯಲ್ಲಿ ಬೇರೂರಿದ ಒಂದು ಮುಸ್ಲಿಂ ಸುಧಾರಣಾವಾದಿ ಚಳುವಳಿಯಾಗಿದೆ. ಮಹಿಳೆಯರಿಗೆ ದರ್ಗಾ ಪ್ರವೇಶಿಸುವ ಅವಕಾಶವನ್ನು

ಇದು ಮಾಡಿಕೊಟ್ಟಿತು. ಭಕ್ತಿ ಪಂಥದ ಕೀರ್ತನೆಗಳು ಮತ್ತು ಸೂಫಿ ಪಂಥದ ಚಕ್ಕಿ ನಾಮಾ ಮತ್ತು ಲೋಹಿನಾಮಗಳು ಮೂಲಭೂತವಾಗಿ ದೇವರನ್ನು ಹೊಗಳುವ ಹಾಡುಗಳೇ ಆಗಿದ್ದರೂ ಅವು ಜಾತಿ ಮತ್ತು ಲಿಂಗ ಭೇದಗಳ ಬಗ್ಗೆ ಸುಧಾರಣಾವಾದಿ ಧೋರಣೆಗಳನ್ನು ಕೂಡಾ ಒಳಗೊಂಡಿವೆ. ಅಲ್ಲದೆ ಅವು ಮಹಿಳಾ ದೃಷ್ಟಿಕೋನವನ್ನು ಹೊಂದಿದ್ದು ಇವನ್ನು ಮಹಿಳೆಯರೇ ಹಾಡುತ್ತಾರೆ. ಆದರೆ ಮೂಲಭೂತವಾದ ಹಾಗೂ ಪುರುಷ ಪ್ರಧಾನ್ಯದ ಪ್ರಾಬಲ್ಯದಲ್ಲಿ ಆಯಾ ಕಾಲದಲ್ಲಿ ಉದಿಸಿದ ಪ್ರಗತಿ ವಿಚಾರಗಳೂ ಸಾಧಿಸಬೇಕಾದ ಪ್ರಗತಿ ಸಾಧಿಸಲಿಲ್ಲ.'[5]

೩.೪ ಶ್ರೇಣಿಕೃತ ಸಮಾಜದಲ್ಲಿ ಮಹಿಳೆ :

ಹೈದರಾಬಾದ ಕರ್ನಾಟಕದ ಸಮಾಜ ರಚನೆಯು ವರ್ಣಾಶ್ರಮ ಹಾಗೂ ಜಾತಿ ಪದ್ಧತಿಯನ್ನು ಆಧರಿಸಿದ್ದರಿಂದ ಮಹಿಳೆಯರು ಈ ಶ್ರೇಣೀಕರಣದೊಳಗೆ ಹಂಚಿ ಹೋಗಿದ್ದಾರೆ. ಸಮಾಜದ ಪಿತೃಪ್ರಧಾನತೆಯು ಅತ್ಯಂತ ಸಂಕೀರ್ಣವಾದ ಸ್ವರೂಪದಲ್ಲಿ ಜಾತಿ ವ್ಯವಸ್ಥೆಯೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಂಡಿದೆ. ಇದರಿಂದಾಗಿ ಒಂದು ಹಂತದಲ್ಲಿ ಸ್ತ್ರೀ–ಪುರುಷರ ನಡುವೆ ಲಿಂಗಭೇದ ಆಧಾರಿತ ಮೌಲ್ಯಗಳು ಅಧಿಕಾರಗಳು ಹಂಚಿಕೆಯಾಗಿದ್ದರೂ ಜಾತಿ ವ್ಯವಸ್ಥೆಯ ಕಾರಣಕ್ಕಾಗಿ ಅವುಗಳೊಳಗೆ ಕೆಲವು ವರ್ತುಲಗಳು ಏರ್ಪಟ್ಟಿವೆ.

ಶ್ರೇಣೀಕರಣದ ಉತ್ತುಂಗದಲ್ಲಿನ ಬ್ರಾಹ್ಮಣ ಸಮಾಜದೊಳಗಿನ ಮಹಿಳೆ ಆ ಸಮಾಜದ ಪುರುಷನಿಗೆ ಸಂಪೂರ್ಣ ಅಧೀನವಾಗಿದ್ದರೂ ಕೆಳಗಿನ ಸಮಾಜದ ಸಂದರ್ಭದಲ್ಲಿ ಕೆಲವು ಸವಲತ್ತುಗಳನ್ನು ಹೊಂದಿದ್ದಳು. ಈ ಸವಲತ್ತುಗಳಿಗೆ ಪ್ರತಿಯಾಗಿ ಆಕೆ ತನ್ನ ಸಮಾಜದ ಪಾವಿತ್ರ್ಯವನ್ನು ಶ್ರೇಷ್ಠತೆಯನ್ನು ಎತ್ತಿ ಹಿಡಿಯುವ ಜವಾಬ್ದಾರಿಯನ್ನು ತಲೆ ಕೊಟ್ಟಾದರೂ ನಡೆಸಬೇಕಾಗಿತ್ತು.

ಜಾತಿ ಪದ್ಧತಿಯನ್ನು ಉಳಿಸಬೇಕಾದ ಜವಾಬ್ದಾರಿ ಒಂದು ಹಂತದಲ್ಲಿ ಪುರುಷನಿಗಿಂತ ಸ್ತ್ರೀಗೆ ಹೆಚ್ಚಿನದಾಗಿತ್ತು. ವರ್ಣಜಾತಿಗಳ ಈ ವಿಭಾಗ ಕ್ರಮಗಳು ವಾಸ್ತವಾರ್ಥದಲ್ಲಿ ಮಹಿಳೆಯ ನಡುವಿನ ಸಂಬಂಧಗಳನ್ನು ನಿರ್ದೇಶಿಸುತ್ತಿತ್ತು. ಪುರುಷರೊಳಗಿನ ಶ್ರೇಣೀಕರಣಕ್ಕೆ ಹೊಂದಿದ್ದಂತೆ ಮಹಿಳೆಯರೊಳಗೂ ಶ್ರೇಣೀಕರಣವೊಂದು ಏರ್ಪಟ್ಟಿತ್ತು.

ಜಾತಿಯಂತೆಯೇ ಧರ್ಮಗಳಿಗೆ ಕೂಡ ಮಹಿಳೆಯ ಲೈಂಗಿಕತೆಯ ಮೇಲೆ ಎಲ್ಲ ಬಗೆಯ ಹಕ್ಕಿತ್ತು. ಹಾಗಾಗಿ ಧರ್ಮಪತಾಕೆಗಳು ಹಲವು ಬಾರಿ ಮಹಿಳೆಯರ ಲೈಂಗಿಕತೆಯ ಮೇಲಿನ ಹಕ್ಕುಗಳಾಗಿಯೂ ಕಾಣಿಸಿಕೊಳ್ಳುತ್ತಿದ್ದವು.

ಧರ್ಮ ಜಾತಿಗಳೊಂದಿಗೆ ಪಿತೃಪ್ರಧಾನ ಕುಟುಂಬ, ವಿವಾಹ ಸಂಸ್ಥೆಗಳಿಗೆ ಕೂಡ ಮಹಿಳೆಯ ಲೈಂಗಿಕತೆಯ ಮೇಲೆ ಹಕ್ಕಿದ್ದರಿಂದ ಮಹಿಳೆಯ ಪವಿತ್ರ ಅಪವಿತ್ರ ಸ್ಥಿತಿಗಳು ಮೇಲಿನೆಲ್ಲ ಅಂಶಗಳ ಒತ್ತಡದಲ್ಲಿ ನಿರ್ಮಾಣಗೊಳ್ಳುತ್ತಿದ್ದವು. ವಿವಾಹ ಸಂಸ್ಥೆಯ ಪಾವಿತ್ರ್ಯ ಕುಟುಂಬದ ಘನತೆ, ಜಾತಿ, ಕಟ್ಟು ಪಾಡು, ಧಾರ್ಮಿಕ ಸಂಹಿತೆ ಇವು ಮಹಿಳೆಯ ಬದುಕನ್ನು ನಿಯಂತ್ರಿಸುತ್ತಿದ್ದ ಪ್ರಮುಖ ಅಂಶಗಳಾಗಿದ್ದವು.

'ಧಾರ್ಮಿಕ ಹಾಗೂ ಜಾತಿ ವ್ಯವಸ್ಥೆಗನುಗುಣವಾಗಿ ವರ್ಗೀಕರಣದಿಂದಾಗಿ ಮಹಿಳೆಯರೊಳಗೇ ಪರಸ್ಪರ ಅನುಭವಗಳು, ಹಿತಾಸಕ್ತಿಗಳು ಭಿನ್ನವಾಗುಳಿದವು. ಅಂತೆಯೆ ಮಹಿಳೆಯರ ಮೇಲಿನ ದೌರ್ಜನ್ಯಗಳೂ

ಭಿನ್ನ ಸ್ವರೂಪವಾದವು. ಕೆಲವು ಮಹಿಳೆರು ವಿಪರೀತ ಕಟ್ಟುಪಾಡುಗಳಿಗೆ ಒಳಗಾದರೆ ಇನ್ನೂ ಕೆಲವು ಮಹಿಳೆಯರು ರಕ್ಷಣೆಯೇ ಇಲ್ಲದಂತಾದರು. ಮೇಲ್ವರ್ಗದ ಮಹಿಳೆಯರು ಮನೆಯಾಚೆಗಿನ ಬೆಳಕನ್ನೇ ಕಾಣದೆ ಗೃಹ ಬಂಧಿಯಾದರೆ, ಕೆಳವರ್ಗದ ಮಹಿಳೆಯರು ಸೂರಿನ ನೆರಳೇ ಇಲ್ಲದಂತಾದರು. ಮೇಲು ಸಮಾಜದ ಮಹಿಳೆಯು ಪಾವಿತ್ರ್ಯದ ಚೌಕಟ್ಟಿನೊಳಗೆ ಅಮಾನವೀಯವಾಗಿ ಸಿಲುಕಿದರೆ, ಕೆಳ ಸಮಾಜದ ಮಹಿಳೆಯ ದೇಹ ಅತಿ ಸುಲಭದಲ್ಲಿ ಎಲ್ಲ ಬಗೆಯ ದೌರ್ಜನ್ಯಕ್ಕೊಳಪಟ್ಟಿತು'.

೩.೫ ಪುರಾಣಗಳ ಆದರ್ಶ ಮಾದರಿ :

ಹೈದರಾಬಾದ ಕರ್ನಾಟಕ ಪ್ರದೇಶದ ಮಹಿಳೆಗೆ ಎರಡು ಮಾದರಿಗಳನ್ನು ಕಟ್ಟಿಕೊಡಲಾಗಿದೆ. ಒಂದು ಮಾತೃತ್ವದ್ದು ಎರಡನೆಯದು ಸತಿತ್ವದ್ದು. ಇಂದಿಗೂ ಈ ಎರಡು ಮಾದರಿಗಳು ನಂಬಿಗೆಯ ಸಂಗತಿಗಳಾಗಿದ್ದು ಮಹಿಳೆಯರಿಂದ ಅದೆ ಬಗೆಯ ಮೌಲ್ಯಗಳನ್ನು ನಿರೀಕ್ಷಿಸಲಾಗುತ್ತದೆ.

ಪುರಾಣ ಕಲ್ಪನೆಯಲ್ಲಿ ಮಹಿಳೆಯು ದೇವತಾ ಸ್ವರೂಪಿ ಮತ್ತು ಸತೀತ್ವದ ಮಾದರಿಯಾಗಿದ್ದಾಳೆ. ಪುರಣ ಕಥಾನಕಗಳಲ್ಲಿ ಸಮಸ್ತ ಮನುಕುಲವನ್ನು ರಕ್ಷಿಸುವ ನಿಯಂತ್ರಿಸುವ ಹಾಗು ಕಾಪಾಡುವ ಶಕ್ತಿಕೇಂದ್ರವಾಗಿದ್ದಾಳೆ. ಈ ಶಕ್ತಿ ಕೇಂದ್ರಗಳು ಬಹುಮಟ್ಟಿಗೆ ಸ್ವತಂತ್ರ ರೂಪವಾಗಿದ್ದು ಮಾತೃ ಸ್ವರೂಪವನ್ನು ಅಂತರ್ಗತಗೊಳಿಸಿಕೊಂಡಿವೆ. ಮಾತೃ ಕಲ್ಪನೆಯಲ್ಲಿ ಈಕೆ ರಕ್ಷಕಳು. ಅವಳ ಆರೈಕೆ ಸಾಮಿಪ್ಯವಿದ್ದರೆ ಮಾತ್ರ ಬದುಕು, ಆಕೆಯ ನಿರ್ಲಕ್ಷದಿಂದ ಸಾವು ಎಂಬ ಸಮಾಜದ ಹಿತದ ನಿರೀಕ್ಷೆಗಳಿವೆ. ಈ ಸ್ತ್ರೀ ಕಲ್ಪನೆಯಲ್ಲಿ ಅಸಾಮಾನ್ಯ ರೂಪ ಮತ್ತು ಅಸಾಮಾನ್ಯ ಸಾಮರ್ಥ್ಯವಿದ್ದು ಮಾನವ ಸ್ವಭಾವಕ್ಕೆ ಅತೀತವಾಗಿವೆ.

ಮೂಲದಲ್ಲಿ ಮಾತೃಸ್ವರೂಪಕ್ಕಿಂತ ಭಿನ್ನಸ್ವರೂಪವನ್ನು ಮತ್ತು ಭಿನ್ನ ನಿರೀಕ್ಷೆಯನ್ನು ಪಡೆದು ಪುರಾಣ ಕಲ್ಪನೆ ಮೂಡಿಸಿದ ಸ್ತ್ರೀ ಪರಿಕಲ್ಪನೆ ಸತೀತ್ವದ ಮಾದರಿಯದು. ಪಾವಿತ್ರ್ಯ, ಪತಿನಿಷ್ಠೆ, ಹಾಗೂ ಸೇವಾ ಮನೋಭಾವನೆಗಳನ್ನು ಬಯಸುವ ಪಾತಿವೃತ್ಯವೆಂಬುದು ಮಹಿಳೆಯನ್ನು ಮಾನವ ಸ್ಥಾನದಿಂದ ಮೇಲಿನ ಸ್ಥಾನದಲ್ಲಿ ಕಲ್ಪಿಸುತ್ತದೆ. ಪುರಾಣ ಕಥಾನಕಗಳಲ್ಲಿ ಬರುವ ರಾಜನ ಪತ್ನಿಯರು, ಋಷಿ ಪತ್ನಿಯರು ಈ ಸತಿತ್ವದ ಸಂಕೇತವಾಗಿದ್ದಾರೆ. ಸೀತೆ, ಸಾವಿತ್ರಿ, ದಮಯಂತಿ, ಅನಸೂಯೆ ಅಹಲ್ಯ, ರೇಣುಕ ಮೊದಲಾದವರು ಪತಿವ್ರತೆಯರು. ಪತಿವ್ರತಾ ಮೌಲ್ಯದ ಅನುಸರಣೆಯ ಕಾರಣವಾಗಿಯೆ ದೈವತ್ವವನ್ನು ಆರೋಪಿಸಿಕೊಂಡವರು.

ಹೀಗೆ ಕಥಾನಕಗಳ ಮೂಲಕ ಜಾರಿಗೊಳಿಸಲಾದ ಸಾಮಾಜೀಕರಣದ ಕಾರಣವಾಗಿ ಹೈದರಾಬಾದ ಕರ್ನಾಟಕ ಪ್ರದೇಶದ ಮಹಿಳೆಯರು ತಾವು ಪ್ರತಿವೃತೆಯರೆನ್ನಿಸಿಕೊಳ್ಳಲು ಯಾವುದೇ ತ್ಯಾಗಕ್ಕೆ ಸಿದ್ಧರಾಗುವ ಮನಸ್ಥಿತಿಯುಳ್ಳವರಾಗಿದ್ದಾರೆ. ಆಧುನಿಕತೆ ಶಿಕ್ಷಣಗಳು ಕೂಡ ಇವುಗಳನ್ನು ಅಲುಗಿಸುವುದು ಸಾಧ್ಯವಾಗಿಲ್ಲವೆಂದೇ ತೋರುತ್ತದೆ. ಮಿಥ್‌ಗಳನ್ನೇ ಸತ್ಯವಾಗಿ ನಂಬುವ ನಂಬಿಸುವ ಪ್ರಕ್ರಿಯೆ ಅನುಚಾನವಾಗಿ ನಡೆಯುತ್ತಲಿದೆ. ಮುತ್ತೈದೆಯೊಬ್ಬಳು ಸತ್ತಾಗ ಆ ಹೆಣದ ಕುಂಕುಮ ಹೂಗಳನ್ನು ಪಡೆದರೆ ಇತರ ಮಹಿಳೆಯರೂ ಮುತ್ತೈದೆಯರಾಗಿಯೇ ಸಾಯುತ್ತಾರೆಂಬುವಷ್ಟರ ಮಟ್ಟಿಗೆ ಈ ನಂಬುಗೆ ವಿಸ್ತರಿಸಿದೆ. ಮುತ್ತೈದೆಯಾಗಿ ಸತ್ತವಳನ್ನು ಹಾಡಿ ಹೊಗಳುವ ಮೂಲಕ ಇತರರಲ್ಲೂ ಆ ಬಯಕೆ ಬಲಗೊಳ್ಳುವಂತೆ ಮಾಡಲಾಗುತ್ತದೆ.

೩.೬ ಸಂಪ್ರದಾಯ ಆಚರಣೆ ಮತ್ತು ನಂಬಿಕೆಗಳಲ್ಲಿ ಮಹಿಳೆ :

ಸಂಸ್ಕೃತಿಯಲ್ಲಿ ಆಚರಣೆಗಳೇ ಬೆನ್ನೆಲುಬು. ಆಚರಣೆಗಳಿಲ್ಲದೇ ಬದುಕೆ ಇಲ್ಲ. ಸಂಪ್ರದಾಯ ಅಂಗೀಕರಿಸಿದ ಧಾರ್ಮಿಕ ಮತ್ತು ಮಾಂತ್ರಿಕ ಅಂಶಗಳ ಮೊತ್ತವೇ ಆಚರಣೆ ಎನಿಸುತ್ತದೆ. ನಂಬಿಕೆ ಆಚರಣೆಯ ಬೆನ್ನಲುಬು ನಂಬಿಕೆಯೆ ಆಚರಣೆಯನ್ನು ಮುಂದುವರಿಸಿಕೊಂಡು ಹೋಗುವಂತೆ ಮಾಡುತ್ತದೆ.

'ಒಂದು ವರ್ಗ ಪರಂಪರಾನುಗತವಾಗಿ ಒಪ್ಪಿರುವ ಮಾನವನ ಕ್ರಿಯಾವಿನ್ಯಾಸವನ್ನು ಸಂಪ್ರದಾಯವೆಂದು ಕರೆಯಬಹುದು. ಸಂಪ್ರದಾಯ ವೈಯಕ್ತಿಕವಾದುದಲ್ಲ. ಸಾಮೂಹಿಕವಾದದ್ದು. ಜನರು ಏನು ಮಾಡಬೇಕೆಂದು ತಿಳಿಸುವುದೇ ಸಂಪ್ರದಾಯ. ಏಕೆ ಅದನ್ನು ಮಾಡಬೇಕೆಂದು ತಿಳಿದಿದ್ದಾರೋ ಅದೇ ನಂಬಿಕೆ'[೨೫] ನಂಬಿಕೆ ಮತ್ತು ಆಚರಣೆಗಳ ಒಟ್ಟು ಮೊತ್ತವೇ ಪರಂಪರೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮಹಿಳೆಯನ್ನು ಕುರಿತು ಅಸಂಖ್ಯಾತ ಹೇಳಿಕೆಗಳಿವೆ. ಅವೆಲ್ಲವು ಸಾಮಾನ್ಯವಾಗಿ ವಾಸ್ತವ ವಿರೋಧಿಯಾಗಿವೆ. ಪುರುಷ ಪ್ರಧಾನ ಸಂಸ್ಕೃತಿಯು ಮಹಿಳೆಯನ್ನು ಕಂಡ ರೀತಿ ನಿರ್ವಚಿಸಿದ ಬಗೆ ವಿಚಿತ್ರವಾಗಿದೆ. ಮಹಿಳೆಯ ಹುಟ್ಟಿನಿಂದ ಸಾವಿನವರೆಗೆ ಚಾಚಿಕೊಂಡಿರುವ ಸಂಪ್ರದಾಯಗಳು ಸಮಾಜ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯ ಸ್ಥಾನಮಾನಗಳನ್ನು ವ್ಯಕ್ತಿತ್ವದ ಪರಿಕಲ್ಪನೆಯನ್ನು ಅರಿಯುವಲ್ಲಿ ಪೂರಕವಾಗುತ್ತವೆ.

ಮಹಿಳೆಯ ಸಮಸ್ತ ಬದುಕನ್ನು ನಿರ್ದೇಶಿಸಿ ನಿಯಂತ್ರಿಸಿದ ಪುರುಷ ಕೇಂದ್ರಿತ ಮೌಲ್ಯ ವ್ಯವಸ್ಥೆಯಲ್ಲಿ ಮಹಿಳಾ ಸಂಬಂಧಿ ಸಂಪ್ರದಾಯಗಳ ಸೃಷ್ಟಿಕರ್ತರು ಪುರಷರೇ ಆಗಿರುವುದರಿಂದ ಹೆಣ್ಣಿನ ವ್ಯಕ್ತಿತ್ವ ಸತ್ವದ ವಿಭಿನ್ನ ಮುಖಗಳನ್ನು ಪುರುಷ ಗುರುತಿಸಿದ. ಅರ್ಥೈಸಿದ ಆರೋಪಿಸಿದ ನಿಯಂತ್ರಿಸಿದ ತಿರುಚಿದ ರೀತಿಗಳನ್ನು ಇವು ಪರಿಚಯಿಸುತ್ತವೆ. ಇಂಥ ಸಂಪ್ರದಾಯ ನಂಬಿಕೆಗಳು ಪುರುಷ ಪ್ರಧಾನ ಆಶಯಗಳನ್ನು ಸಮರ್ಥವಾಗಿ ಧ್ವನಿಸುತ್ತವೆ. ಮಹಿಳೆಯನ್ನು ಕುರಿತು ಹರಡಿರುವ ಮೂಢನಂಬಿಕೆಗಳು ವ್ಯವಸ್ಥೆಯ ಜೀವ ವಿರೋಧಿ ನೆಲೆಯನ್ನು ಪ್ರತಿಗಾಮೀ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ನೀತಿ, ಧರ್ಮ, ತ್ಯಾಗ, ಬಲಿದಾನ, ಸತಿತ್ವ ಮಾತೃತ್ವಗಳನ್ನು ಮಹಿಳೆಯರಿಗೆ ಕಡ್ಡಾಯ ಮೌಲ್ಯಗಳಾಗಿಸಿದ ವ್ಯವಸ್ಥೆಯು ಗಂಡಿನ ಸ್ವಾರ್ಥಕ್ಕಾಗಿ ಅವಳನ್ನು ಬಳಸಿಕೊಂಡ ರೀತಿಯನ್ನು ಇವು ಪ್ರತಿಬಿಂಬಿಸುತ್ತವೆ.

ಆಧ್ಯಾತ್ಮ, ಆತ್ಮೋದ್ಧಾರ ಧರ್ಮ ಸಾಧನೆ, ಧಾರ್ಮಿಕ ಆಚರಣೆಗಳಿಂದ ಮಹಿಳೆಯನ್ನು ದೂರವಿರಿಸಿ, ಲೌಕಿಕ ನೆಲೆಯಲ್ಲಿ ಕೌಟುಂಬಿಕ ಕರ್ತವ್ಯ ಪಾಲನೆಯಲ್ಲಿಯೇ ಆತ್ಮೋದ್ಧಾರವನ್ನು ಅರಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕಲ್ಪಿಸಿದ ಪಿತೃ ಸಂಸ್ಕೃತಿಯಲ್ಲಿ ಮಹಿಳೆಗೆ ಧಾರ್ಮಿಕ ಸ್ಥಾನಮಾನ ನೀಡಿಲ್ಲ. 'ಹೆಣ್ಣಿನ ದೇಹ ಅಪವಿತ್ರ' ಆತ್ಮವಿಕಾಸಕ್ಕೆ ಅಡಚಣೆ ಎನ್ನುವ ನಂಬಿಕೆಯಿಂದಾಗಿ ಇಂದಿಗೂ ಅನೇಕ ದೇವಾಲಯಗಳ ಗರ್ಭಗುಡಿಗಳಲ್ಲಿ ಮಹಿಳೆಯರಿಗೆ ಪ್ರವೇಶವನ್ನು ನಿಷೇಧಿಸಲಾಗಿದೆ. (ಜಯಮಾಲ ಪ್ರಕರಣ ಇದಕ್ಕೊಂದು ಉತ್ತಮ ನಿದರ್ಶನ) ದೇವಾಲಯ ಪ್ರವೇಶಿಸಿದರೆ ಹೆಣ್ಣು ಮಕ್ಕಳು ಕಲ್ಲಾಗುತ್ತಾರೆಂದು ಹೇಳಿ ದೂರವಿರಿಸಲಾಯಿತು, ವಿರಕ್ತ ಸನ್ಯಾಸಿಗಳಿಗೆ ಹೆಣ್ಣು ಮಾಯೆ ಎಂದು ನಂಬಿಸಿ ಅವಳ ಮುಖದರ್ಶನವನ್ನು ನಿಷೇಧಿಸಲಾಗಿದೆ. ಮಹಿಳೆ ಅಸ್ಪೃಶ್ಯಳಾದ್ದರಿಂದ ಅವಳು ವೇದಾಧ್ಯಯನ ಮಾಡಬಾರದೆಂದು, ವೇದ ಮಂತ್ರ ಪಠಣಗಳಿಂದ ಅವಳ ಫಲವಂತಿಕೆ ಹ್ರಾಸವಾಗುತ್ತದೆಂದು ಜ್ಞಾನದ ಬಾಗಿಲನ್ನು ಮುಚ್ಚಲಾಯಿತು.

ಧಾರ್ಮಿಕ ಆಚರಣೆಗಳ ನೆಪದಲ್ಲಿ ದೇವದಾಸಿ ಪದ್ಧತಿ, ಬೆತ್ತಲೆ ಸೇವೆಗಳಂಥ ಅಮಾನವೀಯ ಸಂಪ್ರದಾಯಗಳನ್ನು ಹುಟ್ಟುಹಾಕಲಾಗಿದೆ. ಗಂಡನನ್ನು ದೇವನನ್ನಾಗಿ ಹೆಂಡತಿಯನ್ನು ದಾಸಿಯನ್ನಾಗಿ ಗುರುತಿಸಿ, ಗಂಡ-ಹೆಂಡಿರ ಸಹೃದಯ ಸಂಬಂಧವನ್ನು ವಿರೂಪಗೊಳಿಸಲಾಗಿದೆ. ವಿಧವೆಯನ್ನು ಅಮಂಗಲಗೊಳಿಸಿ ಬಂಜೆಯ ಬದುಕನ್ನು ನಿರರ್ಥಕವಾಗಿಸಿದೆ. ಹೆಣ್ಣಿಗೆ ವಿವಾಹ-ಸಂತಾನೋತ್ಪತ್ತಿಗಳನ್ನು ಮೋಕ್ಷದ ಮಾಧ್ಯಮವಾಗಿಸಿ, ಅವಳ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಹತ್ತಿಕ್ಕಿ ಒತ್ತಾಯದ ಬದುಕಿಗೆ ಕಟ್ಟಿಹಾಕಲಾಗಿದೆ.

ಹೈದರಾಬಾದ ಕರ್ನಾಟಕ ಸಮಾಜದಲ್ಲಿ ಮಹಿಳೆಯ ಮೇಲಿನ ಲೈಂಗಿಕ ಹಿಡಿತ ಹೆಚ್ಚುತ್ತಾ ಬಂದಂತೆ ಅದರ ಬಿಡುಗಡೆಯ ಸ್ವರೂಪವಾಗಿ ಜೋಗತಿ ಪಂಥ ಕಂಡುಬರುತ್ತದೆ. ಈ ದೇವದಾಸಿಯರು ಎಲ್ಲಮ್ಮನಿಗೆ ಅರ್ಪಿಸಿಕೊಂಡವರು. ಈ ಪಂಥದಲ್ಲಿ ಪುರಾಣದ ರೇಣುಕೆಯೊಂದಿಗೆ ಎಲ್ಲಮ್ಮನ ಸಂಬಂಧ ತಳುಕು ಹಾಕಿಕೊಂಡಿರುವುದನ್ನು ಕಾಣಬಹುದು. ದೇವದಾಸಿ ಸಂಪ್ರದಾಯ ಮುಖ್ಯವಾಗಿ ಎಲ್ಲಮ್ಮ ಚಿಂಚೂರು ಮಾಪುರತಾಯಿಯನ್ನು ಕುರಿತ ಸಂಪ್ರದಾಯ, ಪಿತೃಪ್ರಧಾನ ವ್ಯವಸ್ಥೆ ಕಾಲ ಕಳೆದಂತೆ ಈ ಸಂಪ್ರದಾಯವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡ ದುರಂತ ಈ ಆಚರಣೆಯಲ್ಲಿದೆ. ಎಲ್ಲಮ್ಮ ಸ್ತ್ರೀಯರನ್ನು ಲೈಂಗಿಕವಾಗಿ ಶೋಷಿಸುವ ಪುರುಷ ಸಮಾಜದ ಸಂಕೇತವಾಗಿ ರಾಜನನ್ನು ತನ್ನ ಭಕ್ತನನ್ನಾಗಿ ಪರಿವರ್ತಿಸಿಕೊಳ್ಳುತ್ತಾಳೆ ಮತ್ತು ಸ್ತ್ರೀ ಉಡುಪು ಧರಿಸುವಂತೆ ಮಾಡುತ್ತಾಳೆ. ಆಳಂದ ಚೌಡಮ್ಮನ ಮಕ ಧರಿಸುವ ಪುರುಷರು ಇಂದಿಗೂ ಹೆಣ್ಣು ವೇಶ ತೊಟ್ಟು ಉತ್ಸವದಲ್ಲಿ ಭಾಗವಹಿಸುತ್ತಾರೆ. ಈ ಸಂಪ್ರದಾಯದಲ್ಲಿ ಮೊದಲು ಸ್ತ್ರೀಯರಿಗೆ ಗೌರವವಿತ್ತು. ಇವರು ನಿತ್ಯ ಸುಮಂಗಲಿಯರೆಂದು ಮಾನ್ಯರಾಗಿದ್ದರು. ಪಿತೃ ಪ್ರಧಾನ ವ್ಯವಸ್ಥೆಯ ನಿರ್ಬಂಧಗಳನ್ನು ಮೀರುವ ಆಶಯ ಈ ಸಂಪ್ರದಾಯದಲ್ಲಿ ಕಂಡು ಬರುತ್ತದೆ. ಕಾಲ ಕಳೆದಂತೆ ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಈ ಸಂಪ್ರದಾಯ ಶೋಷಣೆಗೆ ಒಳಗಾಯಿತು. ಲೈಂಗಿಕ ಕಾರಣಕ್ಕಾಗಿಯೆ ಬಡವರ (ಕೆಳವರ್ಗದ) ಹೆಣ್ಣು ಮಕ್ಕಳನ್ನು ಈ ಆಚರಣೆಗೆ ತಳ್ಳುವುದು ಆರಂಭವಾಯ್ತು. ಈ ಸಂಪ್ರದಾಯದಲ್ಲಿ ದೇವದಾಸಿಯಾಗಿ ದೀಕ್ಷೆ ಪಡೆದ ಮಹಿಳೆ ಮಾಡಬೇಕಾದ ಆಚರಣೆಗಳು ಹಾಗೂ ನಂಬಿಕೆಗಳಿಗೆ ಅನಂತರದಲ್ಲಿ ಸ್ಥಾನವಿಲ್ಲದಂತಾಗಿ ವೇಶ್ಯಾವಾಟಿಕೆಯ ಲಕ್ಷಣವನ್ನು ಪಡೆಯಿತು. ಹೈದರಾಬಾದ ಕರ್ನಾಟಕದಲ್ಲಿ ಇದು ಇಂದಿಗೂ ಜಾರಿಯಲ್ಲಿದೆ.

ಗ್ರಾಮದೇವತೆಗಳ ಆಚರಣೆಗಳು :

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಗ್ರಾಮಗಳನ್ನು ರಕ್ಷಿಸುವವರಾಗಿ ಗ್ರಾಮದೇವತೆಗಳ ದೇವಸ್ಥಾನಗಳು ಕಂಡು ಬರುತ್ತವೆ. ರೋಗರುಜಿನಗಳಿಂದ ರಕ್ಷಿಸುವ, ಬೆಳೆಯನ್ನು ಕಾಯುವ ಈ ದೇವತೆಗಳು ತಮ್ಮನ್ನು ನಿರ್ಲಕ್ಷಿಸುವವರನ್ನು ಕಾಡುವರೆಂಬ ನಂಬಿಕೆ ಇದೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ, ಸ್ತ್ರೀ ದೇವತೆ, ಸ್ತ್ರೀ ಪೂಜಾರಿಣಿಯನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಬಹುತೇಕ ಆಚರಣೆಗಳಲ್ಲಿ ಹೆಣ್ಣಿನ ಪಾತ್ರ ಪ್ರಾಮುಖ್ಯತೆಯನ್ನು ಪಡೆದಿತ್ತು. ಗಂಡಸಿನ ಪಾತ್ರವಿಲ್ಲದೆ ಜನನ ಸಾಧ್ಯ ಎಂಬ ಕಲ್ಪನೆ ಬೆಳೆದದ್ದು ಈ ಸಂದರ್ಭದಲ್ಲಿಯೇ ಇರಬೇಕು. ಪ್ರಪಂಚದ ನಾನಾ ಕಡೆ ಅಂದರೆ ಕೃಷಿ ಸಂಸ್ಕೃತಿಯ ಪುರಾಣಗಳಲ್ಲಿ ಗಂಡಸಿನ ಅಗತ್ಯವಿಲ್ಲದೇ ಜನನ ಸಾಧ್ಯವಾಗಿದೆ. ಇನ್ನೂ ಕೆಲವು ಕಡೆ ಸ್ತ್ರೀದೇವತೆ ಪುರುಷದೇವತೆಯನ್ನು ಸೃಷ್ಟಿಸಿ ಅವರಲ್ಲಿ ಒಬ್ಬನನ್ನು ಮದುವೆಯಾಗುತ್ತಾಳೆ. ಹೀಗೆ ಅವಳು ಪತ್ನಿ ಮಾತ್ರವಲ್ಲ

ತಾಯಿಯೂ ಹೌದು. ನಮ್ಮ ಪುರಾಣದ ಆದಿಶಕ್ತಿ ತ್ರಿಮೂರ್ತಿಗಳನ್ನು ಸೃಷ್ಟಿಸಿ ಅವರಲ್ಲಿ ಒಬ್ಬನಾದ ಶಿವನನ್ನು ಮದುವೆಯಾದಳು. ಕೃಷಿ ಸಂಸ್ಕೃತಿಯ ಇನ್ನೊಂದು ಲಕ್ಷಣ ದೇವತೆಯ ಜೊತೆ ದೇವರಿರುವುದಿಲ್ಲ. ಶಿವನ ಸಹಾಯವಿಲ್ಲದೆ ಕೇವಲ ಪಾರ್ವತಿಯ ಮೈಯ ಮಣ್ಣಿನಿಂದ ಹುಟ್ಟುವ ಗಣಪತಿಯ ಪುರಾಣದ ಆಶಯವು ಒಂದು ರೀತಿಯಲ್ಲಿ ಸ್ತ್ರೀ ಮಹತ್ವವನ್ನು ಎತ್ತಿ ಹಿಡಿದು ಸೃಷ್ಟಿ ಕ್ರಿಯೆಯಲ್ಲಿ ಪುರುಷನ ಪಾತ್ರವನ್ನೇ ಕಡೆಗಣಿಸುತ್ತದೆ. ಜನಪದ ಏಳು ಮಂದಿಯ ಅಕ್ಕತಂಗಿಯರಾದ ಗ್ರಾಮದೇವತೆಗಳು ಮದುವೆಯಾದವರಲ್ಲ. ಇವರು ಪುರುಷ ಆಡಳಿತದ ವಿರುದ್ಧ ಹೋರಾಟವನ್ನು ಮಾಡಿದವರು. ಇವರೇ ಆದಿ-ಅಂತ್ಯ ಎಂಬ ನಂಬಿಕೆ ಇದೆ.

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಎಲ್ಲಮ್ಮನನ್ನು ಬ್ರಾಹ್ಮಣರು ರೇಣುಕಾ ಎಂದು, ವೀರಶೈವರು ಸತ್ಯಕ್ಕನೆಂದು, ಜೈನರು ಪದ್ಮಾವತಿಯಂದು ನಿಮ್ನ ವರ್ಗದವರು ಹುಲಿಗೆಮ್ಮ, ಸವಾರೆಮ್ಮ, ಮಾಪುರತಾಯಿ ಎಂದು ಭಿನ್ನ ಭಿನ್ನ ಹೆಸರುಗಳಿಂದ ಪೂಜಿಸುತ್ತಾರೆ.[೬]

ಬಗದಾಳ, ಕಲಬುರ್ಗಿ, ನೀರಮಾನ್ವಿ, ಹೊನ್ನಳ್ಳಿ, ದೇವಸೂಗೂರು, ಹಡಗಲಿ, ನಾಲವಾರ, ಹಂದರಕಿ, ಸೂಗೂರು, ಹುಲಿಗಿ, ಚಿಂಚನಸೂರುಗಳಲ್ಲಿ ಎಲ್ಲಮ್ಮನ ಆರಾಧನೆ ನಡೆಯುತ್ತದೆ.

ಕದ್ದರಗಿ, ಕೀರಣಗಿ ಕೌಂಟಗಿ, ಜೀವಣಗಿ, ನಾಲವಾರ, ಖೇಳಗಿ, ಮಾಲಗತ್ತಿ, ಕಲ್ಲೂರು, ಶಂಕರವಾಡಿ, ಹುರಸಿಗುಂಡಿ, ಕೊರಚೂರು, ಜವನಾಡ, ಕಮಲನಗರ, ಗೋಳಾ, ಮರತೂರುಗಳಲ್ಲಿ ಮಾರಮ್ಮ ಅಥವಾ ಮರೆಗಮ್ಮನ ಆರಾಧನೆ ನಡೆಯುತ್ತದೆ.

ಗುಲಬರ್ಗಾ ಜಿಲ್ಲೆಯಲ್ಲಿ ಕೀರಣಗಿ ಮರಗಮ್ಮ ತುಂಬ ಪ್ರಸಿದ್ಧ ದೇವತೆ. ರಾಯಚೂರಿನ ದೇವಸೂಗೂರಿನ ನಾಗರ ಎಲ್ಲಮ್ಮ ಕೂಡ ಪ್ರಸಿದ್ಧ ದೇವತೆಯಾಗಿದ್ದಾಳೆ. ರಾಯಚೂರಿನ ನೀರಮಾನ್ವಿ ತಾಲೂಕಿನಲ್ಲಿ ಮಾರೆಮ್ಮರಿಲ್ಲದ ಊರಿಲ್ಲ ಎಂಬಂತಿದೆ. ಇಲ್ಲಿ ಇಂದಿಗೂ ಪಟ್ಟದ ಕೋಣನ ಬಲಿ ನಡೆಯುತ್ತದೆ. ಮಾರೆಮ್ಮನ ಗುಡಿ ಇರುವಲ್ಲೆಲ್ಲ ಕೋಣ ಬಲಿ ಇಂದಿಗೂ ನಡೆಯುತ್ತಲೇ ಇದೆ.

ಹೈದರಾಬಾದ ಕರ್ನಾಟಕದ ಬಹುತೇಕ ಗ್ರಾಮಗಳಲ್ಲಿ ದ್ಯಾವಮ್ಮನ ಗುಡಿಗಳಿವೆ. ವಾಸ್ತವವಾಗಿ ದ್ಯಾಮಮ್ಮನೇ ಗ್ರಾಮದೇವತೆಯಾಗಿದ್ದು ಉಳಿದ ದೇವತೆಗಳು ಆಕೆಯ ಸಹಾಯಕರು ಇಲ್ಲವೆ ಅಕ್ಕತಂಗಿಯರೆಂಬ ಭಾವನೆ ಜನಪದದರಲ್ಲಿದೆ. ಬೆಳೆಗಳನ್ನು ರಕ್ಷಿಸುವ ಹೈನು ಹೆಚ್ಚಿಸುವ ಸಕಾಲಕ್ಕೆ ಮಳೆ ತರುವ ಒಡ್ಡುಗಳನ್ನು ಸಂರಕ್ಷಿಸುವ ಸಾಂಕ್ರಾಮಿಕ ರೋಗಗಳನ್ನು ಊರೊಳಗೆ ಬರದಂತೆ ತಡೆಯುವ ಭಕ್ತರ ರೋಗರುಜಿನಗಳನ್ನು ನಿವಾರಿಸುವ, ಶಿಶುಮರಣ ನಿಲ್ಲಿಸುವ, ಜಗಳಗಳನ್ನು ಪರಿಹರಿಸುವ, ಬಂಜೆತನವನ್ನು ಹೋಗಲಾಡಿಸಿ ಫಲಸಂತಾನ ನೀಡುವುದು ದ್ಯಾಮಮ್ಮನ ಕಾರ್ಯವಾಗಿದೆ.

ಸಪ್ತ ಮಾತೃಕೆಯರಾದ ದ್ಯಾಮವ್ವ, ಮರಗಮ್ಮ, ಪಾಲಕಮ್ಮ, ಎಲ್ಲಮ್ಮ, ದುರಗಮ್ಮ, ಚೌಡಮ್ಮ ಕಾಳಮ್ಮರೆಲ್ಲ ಕಾಡು ಮಾನವರು ಪೂಜಿಸುತ್ತ ಬಂದ ಶಕ್ತಿದೇವತೆಗಳು. ಜನಪದರಿಂದ ಕಥೆ ಸೃಷ್ಟಿಸಿಕೊಂಡು ಬರೀ ಮೌಖಿಕವಾಗಿರುವ ಶಕ್ತಿದೇವತೆಗಳಾದ ದ್ಯಾಮಮ್ಮ, ಮರಗಮ್ಮ, ಪಾಲಕಮ್ಮರು ಜನಪದ ಪರಿಕಲ್ಪನೆಯ ದೇವತೆಗಳಾದರು. ಶಕ್ತಿ ದೇವತೆಗಳಾದ ಎಲ್ಲಮ್ಮ, ಕಾಳಮ್ಮ, ಚೌಡಮ್ಮ, ದುರಗಮ್ಮರ ಸುತ್ತ ಪಂಡಿತರು ಕಥೆ ಸೃಷ್ಟಿಸಿ ಆರ್ಯೀಕರಣಗೊಳಿಸಿದ್ದಕ್ಕಾಗಿ ಇವರೆಲ್ಲ ಪಂಡಿತ ಪರಿಕಲ್ಪನೆಯ ದೇವತೆಗಳಾದರು.[೭]

ಹೈದರಾಬಾದ ಕರ್ನಾಟಕದಲ್ಲಿ ಮಾರಮ್ಮ ದುರ್ಗಮ್ಮ ಇವರಿಬ್ಬರಿಗೆ ಸಂಬಂಧಿಸಿದ ಪುರಾಣ ಆಚರಣೆ ಒಂದೆ ಬಗೆಯದು. ಹೊಲೆಯರ ತರುಣ ತಾನು ಬ್ರಾಹ್ಮಣರವನೆಂದು ಸುಳ್ಳುಹೇಳಿ ಬ್ರಾಹ್ಮಣ ಕನ್ಯೆಯೊಬ್ಬಳನ್ನು ಮದುವೆಯಾಗುತ್ತಾನೆ. ಕಾಲಾನು ಕ್ರಮದಲ್ಲಿ ಸತ್ಯ ಸಂಗತಿ ತಿಳಿದ ಬ್ರಾಹ್ಮಣ ಹೆಣ್ಣು ಶಾಪ ಹಾಕಿ ಸಾಯುತ್ತಾಳೆ. ಈಗ ಅವಳು ಮಾರಮ್ಮ ಅಥವಾ ದುರ್ಗಮ್ಮನಾಗಿ ಬಂದಿದ್ದಾಳೆ. ಆ ದೇವತೆಗೆ ಕಡಿಯುವ ಕೋಣ ಹಿಂದಿನ ಜನ್ಮದಲ್ಲಿ ಸುಳ್ಳು ಹೇಳಿ ಮದುವೆ ಆಗಿದ್ದ ಹೊಲೆಯನನ್ನು ಪ್ರತಿನಿಧಿಸುತ್ತದೆ. ಕೋಣನನ್ನು ಕಡಿಯುವ ಆಚರಣೆಗೆ ಸಾಮಾಜಿಕ ಮಹತ್ವವನ್ನು ಪಡೆದ ಈ ಪುರಾಣವನ್ನು ಜೋಡಿಸಲಾಗಿದೆ.[೯]

ಜಮದಗ್ನಿಯ ಕಥೆಯ ಪ್ರಕಾರ ರೇಣುಕೆ ತನ್ನ ಪಾತಿವ್ರತ್ಯಕ್ಕೆ ಭಂಗ ತಂದುಕೊಳ್ಳುವಂತೆ ಒಂದು ಜಲಕ್ರೀಡೆಯ ದೃಶ್ಯವನ್ನು ಆಸಕ್ತಿಯಿಂದ ವೀಕ್ಷಿಸಿದಳು. ಇದಕ್ಕವಳು ತನ್ನ ಜೀವನವನ್ನೇ ಬೆಲೆಯಾಗಿ ಕೊಡಬೇಕಾಯಿತು. ಮಾರಮ್ಮನ ಪುರಾಣ ಅಂತರ್ ಜಾತಿಯ ವಿವಾಹದ ಮೇಲೆ ಹೇರಿದ ನಿಷೇಧವಾಗಿದೆ. 'ಎಲ್ಲಮ್ಮನ ಪುರಾಣ ಪಾತಿವ್ರತ್ಯವನ್ನು ಎತ್ತಿ ಹಿಡಿಯುವುದಾಗಿದ್ದು ಪುರುಷ ಪ್ರಧಾನ ವ್ಯವಸ್ಥೆ ಇದನ್ನು ವ್ಯವಸ್ಥಿತವಾಗಿ ಕಾಪಾಡಿಕೊಂಡು ಬಂದಿದೆ. ಅನಂತರದಲ್ಲಿ ಗ್ರಾಮದೇವತೆಗಳನ್ನು ಪುರುಷ ದೇವರ ಹೆಂಡಿರಾಗಿ ಮಾಡಲಾಯಿತಾದರೂ ಅದರ ಪಳಿಯುಳಿಕೆಗಳು ಹಿಂದಿನ ಮಹತ್ವವನ್ನು ಸಾರುತ್ತವೆ'[೧೦]

'ಸಮೃದ್ಧಿಯ ಆಚರಣೆ ಮೂಲದಲ್ಲಿ ಹೆಣ್ಣಿಗೆ ಸಂಬಂಧಿಸಿದ ಹೆಣ್ಣಿನ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದ ಆಚರಣೆಯಾಗಿತ್ತು. ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಗಂಡಿಗೆ ಪ್ರಾಧಾನ್ಯ ನೀಡಿದ್ದರೂ ಹೆಣ್ಣು ದೇವತೆ ಗಂಡಿನ ಕೋರಿಕೆಯನ್ನು ಈಡೇರಿಸದಿರಬಹುದೆಂಬ ಭೀತಿ ಇಲ್ಲಿ ನೆಲೆಗೊಂಡಿದೆ. ಹೆಣ್ಣು ಪ್ರಧಾನವಾಗಿದ್ದ ಸಾಂಸ್ಕೃತಿಕ ಘಟ್ಟವನ್ನು ಮರೆಯಲಾಗದೆ ಸಾಂಕೇತಿಕವಾಗಿ ಅದನ್ನು ಅಭಿನಯಿಸುವ ಆಚರಣೆಯಾಗಿ ಗಂಡು ಪೂಜಾರಿಯ ಸ್ತ್ರೀ ವೇಶಧಾರಣೆಯನ್ನು ಗಮನಿಸಬಹುದಾಗಿದೆ'.[೧೧] ಆಳಂದ ಚೌಡಮ್ಮನ ಮಕ, ಹುಲಿಗಿಯ ಹುಲಿಗೆಮ್ಮನು, ಜಗಹೊತ್ತ ಪೂಜಾರಿಗಳು ಹೆಣ್ಣು ವೇಶಧರಿಸುತ್ತಾರೆ.

ಗ್ರಾಮದೇವತೆಗಳ ಹೆಸರಲ್ಲಿ ಹುಟ್ಟಿಕೊಂಡ ಸಾಂಸ್ಕೃತಿಕ ವೈಷಮ್ಯ :

ಹೈದರಾಬಾದ ಕರ್ನಾಟಕದಲ್ಲಿ ಮನುಷ್ಯನ ಒಳಿತಿಗಾಗಿ ಸುಖಕ್ಕಾಗಿ ಗ್ರಾಮದೇವತೆ ಹುಟ್ಟಿಕೊಂಡರೂ ಕಾಲಾನಂತರದಲ್ಲಿ ಈ ಮೂಲ ತತ್ವಕ್ಕೆ ಜಂಗು ಹಿಡಿದು ಹೋಯಿತು. ಸ್ವಾರ್ಥಿ ಪೂಜಾರಿಗಳಿಂದ ದುಷ್ಟ ಗ್ರಾಮಾಧಿಕಾರಿಗಳಿಂದ ಸುಖಲೋಲುಪರಾದ ಸಾಹುಕಾರ ದೇಸಾಯಿ, ದೇಶಮುಖ ಸುಬೇದಾರ ಶ್ರೀಮಂತರಿಂದ ಜನರಕ್ಷಣೆಗಾಗಿ ಹುಟ್ಟಿದ ಗ್ರಾಮದೇವತೆಯನ್ನು ಶೋಷಣಾ ಅಸ್ತ್ರವನ್ನಾಗಿಸಿದರು.

'ಮೇಲ್ವರ್ಗದ ಊರ ಆಡಳಿತಾಧಿಕಾರಿಗಳು ತಮ್ಮ ಜನ ಬಲ ಧನ ಬಲದಿಂದ ಬಡಪೂಜಾರಿಯನ್ನು ಅಂಜಿಸಿ ತಮ್ಮಂತೆ ಹೇಳಿಕೆ ಮಾಡಿಸಿ. ನೀತಿ ನಿಯಮ ರಚಿಸಿದರು. ಉತ್ಸವ ಪೂಜೆ ಮಾಡಿಸಿದರು. ಕೆಳವರ್ಗದ ಜನರ ಹೆಣ್ಣು, ಹೊನ್ನು, ಮಣ್ಣನ್ನು ದೋಚಿದರು. ವಂಶಪಾರಂಪರ್ಯ ಅಧಿಕಾರವನ್ನುಳಿಸಿಕೊಂಡು ಬಂದರು. ಗ್ರಾಮ ದೇವತೆಯ ಹೆಸರಿನಲ್ಲಿ ಜಾತೀಯತೆಯ ಸ್ಥಿರೀಕರಣ ಅನೈತಿಕತೆಯ ಬೆಳವಣಿಗೆ ವ್ಯಾಜ್ಯ, ಕಲಹ, ಮೌಢ್ಯಗಳನ್ನು ಬೆಳೆಸಿದರು. ಅಸ್ಪೃಶ್ಯತಾ ಭಾವ, ಜೀತ ಪದ್ಧತಿಯ ವಿಷವರ್ತುಲದ ನಿರ್ಮಾಣವಾಯಿತು. ದೇವಿ ಹೆಸರಲ್ಲಿ ಕಳವು, ಕೊಲೆ, ಸುಲಿಗೆ, ಮಾರಾಟ, ಜೋಗತಿ ಪದ್ಧತಿ, ಖೋಜಾ ಪದ್ಧತಿ, ಸೋಮಾರಿತನ,

ಬೆತ್ತಲೆಸೇವೆ, ಆತ್ಮ ಬಲಿದಾನ, ಆತ್ಮಹಿಂಸೆ ಮುಂತಾದವುಗಳನ್ನು ಹುಟ್ಟುಹಾಕಿ ಜನತೆಯನ್ನು ಶೋಷಿಸಿದರು' ಇಲ್ಲಿ ಹೆಚ್ಚು ಶೋಷಣೆಗೊಳಗಾದವರು ಮಹಿಳೆಯರು ವಿಶೇಷವಾಗಿ ದಲಿತ ಮಹಿಳೆಯರು.

ಭಾನಾಮತಿ :

ನಾಗರೀಕತೆ ಬೆಳವಣಿಗೆಯಲ್ಲಿ ಬದುಕಿಗೆ ಹತ್ತು-ಹಲವು ಉದ್ಯೋಗಗಳನ್ನು ಸೃಷ್ಟಿಸಿಕೊಳ್ಳಲಾಗಿದೆ. ಈ ಉದ್ಯೋಗಗಳಿಗೆ ಸಮಯ, ಶಾರೀರಿಕ ಹಾಗೂ ಬೌದ್ಧಿಕ ಶ್ರಮದ ಅವಶ್ಯಕತೆ ಇರುತ್ತದೆ. ಬಹುಸಂಖ್ಯಾತರು ಇಂಥ ಶ್ರಮವನ್ನು ನಂಬಿ ಬದುಕಿದರೆ ಕೆಲವರು ಧಿಡೀರ್ ಶ್ರೀಮಂತಿಕೆ ಭೋಗ ಜೀವನವನ್ನು ಅನಾಯಾಸವಾಗಿ ಸಂಪಾದಿಸಲು ಭಾನಾಮತಿಯಂಥ ಕುಟಿಲ ತಂತ್ರಗಳನ್ನು ಆಶ್ರಯಿಸಿದರು.

ಭಾನಾಮತಿ ಒಂದು ಮಾಂತ್ರಿಕ ವಿದ್ಯೆ. ಈ ವಿದ್ಯೆಯನ್ನು ಮಹಿಳಾ ಶೋಷಣೆಗೆ ವಿಶೇಷವಾಗಿ ಬಳಸಿಕೊಳ್ಳಲಾಗುತ್ತದೆ. ನಮ್ಮ ಬಾಲ್ಯದಲ್ಲಿ ಸುಡಗಾಡು ಸಿದ್ಧರು ಭಿಕ್ಷೆಗೆ ಬಂದರೆ ಮನೆಯಲ್ಲಿ ಬಾಣಂತಿ ಇರುವಳೆಂದು ಹೇಳಬೇಡಿ ಎಂದು ಹಿರಿಯರು ತಾಕೀತು ಮಾಡುತ್ತಿದ್ದರು. ಇದಕ್ಕೆ ಕಾರಣ ಸುಡಗಾಡು ಸಿದ್ಧರು ಬಾಣಂತಿಯರು ಸಾಯುವಂತೆಮಾಡಿ ಅವರ ಎಲುಬುಗಳನ್ನು ತಮ್ಮ ಮಾಂತ್ರಿಕ ವಿದ್ಯೆಯ ಸಿದ್ಧಿಗೆ ಬಳಸಿಕೊಳ್ಳುತ್ತಾರೆ ಎಂದು ನಂಬಲಾಗಿತ್ತು. ಇಲ್ಲವೇ ಅವರ ಮೇಲೆ ಮಂಕುಬೂದಿ ಎರಚಿ ತಮ್ಮ ಹಿಂದೆ ಬರುವಂತೆ ಮಾಡುತ್ತಿದ್ದರೆಂದು ಹೇಳುತ್ತಿದ್ದರು. ಸುಡಗಾಡು ಸಿದ್ಧರ ವೇಶವು ಭಯಂಕರವಾಗೇ ಇರುತ್ತಿದ್ದರಿಂದ ಜನ ಹೆದರುತ್ತಿದ್ದರು.

ಹೈದರಾಬಾದ ಕರ್ನಾಟಕದಲ್ಲಿ ಭಾನಾಮತಿಯ ಪ್ರಯೋಗದ ಸಂಗತಿ ಆಗಾಗ ಕೇಳಿಬರುತ್ತಿರುತ್ತದೆ. ಇಲ್ಲಿಯ ಜನ ದಾಯಾದಿ ಮತ್ಸರಕ್ಕೆ, ತಮಗಾಗದವರನ್ನು ಮಟ್ಟ ಹಾಕುವುದಕ್ಕೆ, ಹಿಂಸಿಸುವುದಕ್ಕೆ ಬಳಸುವ ವಾಮ ಮಾರ್ಗವಿದು. ಈ ವಿದ್ಯೆಯ ಸಿದ್ಧಿಗೆ ಹೆಣ್ಣುಜೀವ ಬಲಿಕೊಡಲಾಗುತ್ತದೆ. ಅದಕ್ಕೆ ಸರ್ವಾಂಗ ಸುಂದರವಾದ ಹನ್ನೊಂದು ವರ್ಷದೊಳಗಿನ ಹೆಣ್ಣುಮಗುವೇ ಆಗಬೇಕು. ಹುಣ್ಣಿಮೆ ಅಥವಾ ಅಮವಾಸ್ಯೆಯ ದಿನ ಈ ಬಲಿ ನಡೆಯುತ್ತದೆ. ಇಲ್ಲಿ ಸಿದ್ಧಿಗೆ ಬಲಿಯಾಗಬೇಕಾದವಳು ಹೆಣ್ಣು. ಸಿದ್ಧಿಯ ನಂತರ ಬಹುತೇಕ ಇದರ ಪ್ರಯೋಗ ನಡೆಯುವುದು ಹೆಣ್ಣುಗಳ ಮೇಲೆಯೇ. 'ಬಲಿಯಾದ ಹೆಣ್ಣುಮಗುವಿನ ಸೊಂಟದಿಂದ ತಲೆಬರುಡೆಯವರೆಗೆ ದೇಹದ ಚರ್ಮವನ್ನು ಸುಲಿದು ಅದರಿಂದ ಬೊಂಬೆಯೊಂದನ್ನು ಮಾಡುತ್ತಾರೆ. ಆ ಮಗುವಿನ ಕೈಗಳನ್ನು ಭುಜದಿಂದ ಕತ್ತರಿಸಿ ಅದರ ಎಲುಬುಗಳನ್ನು ಮತ್ತು ಬೊಂಬೆಯನ್ನು ಭಾನಾಮತಿಯಲ್ಲಿ ಬಳಸಲಾಗುತ್ತದೆ. ಇಂಥ ಬರ್ಬರತೆಗೆ ಕಲಬುರ್ಗಿ ಜಿಲ್ಲೆಯ ಹೊನ್ನಕೀರಣಗಿಯ ರೇಣುಕಾ ಎಂಬ ಹೆಣ್ಣುಮಗು ಹಾಗೂ ಇದಕ್ಕೂ ಮೊದಲು ಹುಮನಾಬಾದ ತಾಲೂಕಿನ, ಆಳಂದ ತಾಲೂಕಿನ ಒಂದೊಂದು ಹೆಣ್ಣುಮಕ್ಕಳು ಬಲಿಯಾದುದನ್ನು ಪತ್ರಿಕೆಗಳು ವರದಿಮಾಡಿವೆ'. ಬೀದರ ಜಿಲ್ಲೆಯ ಕುರುಬ ಖೇಳಗಿ ಭಾನಾಮತಿಗೆ ಹೆಸರಾದ ಹಳ್ಳಿ'.

ಭಾನಾಮತಿ ಒಂದು ಜೀವ ವಿರೋಧಿ ಕ್ರಿಯೆ. ಭಾನಾಮತಿಯಲ್ಲಿ ಕೇರ ಮೈಮೇಲೆ ಬೀಳುವ, ಆಹಾರ ಕಕ್ಕಸಾಗಿ ಪರಿಣಮಿಸುವ, ಮನುಷ್ಯರನ್ನು ಚಿಕ್ಕ ಚಿಕ್ಕ ಮಾಡುಗಳಲ್ಲಿ ಕೂಡಿಸುವ, ಬಟ್ಟೆ ಹಾಗೂ ಮನೆಗಳಿಗೆ ಬೆಂಕಿ ಹಚ್ಚಿಸುವ, ಬಟ್ಟೆಯ ಹಾವಿನಿಂದ ಕಚ್ಚಿಸುವ, ಶರೀರದಿಂದ ಮೊಳೆಗಳನ್ನು ತೆಗೆಯುವ ಸಂಗತಿಗಳು ಕೇಳಿಬರುತ್ತವೆ. ಇಲ್ಲಿ ಇವೆಲ್ಲಕ್ಕೆ ಪ್ರಯೋಗ ಪಶುಮಾತ್ರ ಮಹಿಳೆಯೇ.

ಹಬ್ಬಗಳ ವ್ರತಗಳ ಆಚರಣೆ :

ಹೈದರಾಬಾದ ಕರ್ನಾಟಕದಲ್ಲಿ ಮಹಿಳೆ ಯಾವುದೇ ಹಬ್ಬ ವ್ರತವನ್ನು ಪುರುಷನ ಶ್ರೇಯಸ್ಸಿಗಾಗಿ ಆಚರಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಪುರುಷನ ಅಭಿವೃದ್ಧಿಗಾಗಿ ಆಯುಷ್ಯಕ್ಕಾಗಿ ಶ್ರೇಷ್ಠತೆಗಾಗಿ ಆಚರಿಸುವಂಥವಾಗಿವೆ. ಮುತ್ತೈದೆತನ ಸರ್ವಶ್ರೇಷ್ಠವಾದುದೆಂದು ಹೇಳುವ ಆಶಯವು ಅವಳನ್ನು ಬೇರಡಗೆ ಹೊರಳದಂತೆ ಮಾಡಿದೆ. ಈಕೆಗೆ ವಿಧಿಸಲಾದ ಈ ಕಟ್ಟಳೆಯು ಆತನ ಅಭಿವೃದ್ಧಿಗಾಗಿ ಈಕೆ ದುಡಿಯಬೇಕೆಂದು ಒತ್ತಾಯಿಸುತ್ತದೆ. ಸಂತಾನ ಪಡೆದು ಆತನ ವಂಶ ಅಭಿವೃದ್ಧಿಗೊಳಿಸಿ ಅವರ ಪಿತೃಗಳಿಗೆ ಮೋಕ್ಷ ದೊರಕಿಸಿಕೊಡಬೇಕು. ಐಶ್ವರ್ಯ ಆಸ್ತಿಗಳ ಒಡೆತನ ದೊರೆಯಲು ಸಹಾಯಕವಾಗಬೇಕು. ಇವುಗಳಲ್ಲಿ ಯಾವುದೂ ಅವಳ ಸ್ವಂತಕ್ಕಲ್ಲ. ಗಂಡನ ಅಧೀನದಲ್ಲಿ ಅವನ ಶ್ರೇಯಸ್ಸಿನಲ್ಲಿ ತನ್ನ ಶ್ರೇಯಸ್ಸನ್ನು ಕಾಣಬೇಕೆಂಬ ನಂಬಿಕೆ ಇಂತಹ ಆಚರಣೆಗಳ ಬೆನ್ನೆಲುಬಾಗಿದೆ. ಪರೋಕ್ಷವಾಗಿ ಇಂಥ ಆಚರಣೆಗಳು ಸ್ತ್ರೀಯನ್ನು ದಾಸ್ಯತ್ವದ ನೆಲೆಯಲ್ಲಿಟ್ಟು ನೋಡುತ್ತವೆ.

ಪಿತೃ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಮದುವೆಯ ಅನಂತರ ಮಹಿಳೆ ಗಂಡನ ಮನೆಯಲ್ಲಿ ವಾಸಮಾಡಬೇಕಾಗುತ್ತದೆ. ಹುಟ್ಟಿ ಬೆಳೆದ ಮನೆಯ ಸಂಬಂಧ ಕಡಿತವಾದಂತೆಯೆ. ತವರಿನ ಹಂಬಲವನ್ನು ಇಂಥ ಸಂದರ್ಭಗಳು ಪೂರೈಸುವಂತಿವೆ. ಹಬ್ಬಗಳು ತವರಿನೊಂದಿಗೆ ಹೆಣ್ಣಿನ ಬಾಂಧವ್ಯವನ್ನು ಸ್ವಲ್ಪ ಮಟ್ಟಿಗೆ ರಕ್ಷಿಸುವಂಥವಾಗಿವೆ. ರಾಖಿ, ದೀಪಾವಳಿ, ನಾಗರ ಪಂಚಮಿ, ಇಂಥ ಕೆಲ ಹಬ್ಬಗಳು ಇವು ಮಹಿಳೆಯ ಬದುಕನ್ನು ಸಹ್ಯವಾಗಿಸುತ್ತವೆ. ತವರ ಬಾಂಧವ್ಯ ಕಾಯ್ದುಕೊಳ್ಳುವ ರೀತಿಯಲ್ಲಿ ಈ ಸಂಪ್ರದಾಯಗಳು ಕಂಡುಬರುತ್ತವೆ.

ಆಚರಣೆಗಳು :

ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡು ಹೆಣ್ಣಿಗೆ ನಮಸ್ಕರಿಸುವ ಸಂಪ್ರದಾಯವೂ ಇದೆ. ತಾಯಿ ಅಕ್ಕ, ತಂಗಿ, ಅತ್ತಿಗೆ ಮತ್ತು ಹಿರಿಯ ಹೆಂಗಸರಿಗೆ ನಮಸ್ಕರಿಸುವ ಮೂಲಕ ಗೌರವ ಸೂಚಿಸಲಾಗುತ್ತದೆ ಎಂದು ಸಮರ್ಥನೆ ನೀಡಲಾಗುತ್ತದೆ. ಆದರೆ ಬಾಳಸಂಗಾತಿಯಾಗಿ ಬದುಕಿನುದ್ದಕ್ಕೂ ಜೊತೆಯಾಗಿ ಕಷ್ಟ ಸುಖ ಹಂಚಿಕೊಂಡು ಬದುಕಬೇಕಾದ ಹೆಂಡತಿಯನ್ನು ಗೌರವಿಸಿದ್ದು ಅಪರೂಪ. ತನ್ನ ಸಮಾನಳೆಂದು ಭಾವಿಸುವುದೂ ಅವಮಾನವೆಂದೇ ತಿಳಿಯಲಾಗುತ್ತದೆ. ಎಲ್ಲಿಡಬೇಕೋ ಅಲ್ಲಿಡಬೇಕು, ಸಲಿಗೆ ಕೊಟ್ಟರೆ ತಲೆಗೇರುತ್ತಾರೆ ಎಂದೆಲ್ಲ ಹೇಳುವ ವರ್ತನೆಯೆ ಹೆಚ್ಚಾಗಿ ಕಂಡುಬರುತ್ತದೆ. ಗಂಡ, ಹೆಂಡತಿ ಪರಸ್ಪರ ಅನ್ಯೋನ್ಯವಾಗಿರುವುದನ್ನು ಸಹಿಸುವುದಕ್ಕಿಂತ ಕೊಂಕು ನುಡಿಗಳಿಂದ ವ್ಯಕ್ತಪಡಿಸುವುದೆ ಹೆಚ್ಚು. ಹೆಂಡತಿ ಸೆರಗು ಹಿಡಿದು ಸುತ್ತುವವ, ಹೆಂಡತಿಯ ಗುಲಾಮ ಎಂದು ಹೀಯಾಳಿಸಲಾಗುತ್ತದೆ. ಮೇಲೆ ಹೇಳಿದ ಹೆಣ್ಣುಗಳನ್ನು ಗೌರವಿಸುವುದು ಅವರೇನು ತನ್ನ ಬದುಕಿಗೆ ಅಷ್ಟೊಂದು ಬಾಧಕರಲ್ಲ ಎಂಬ ಕಾರಣಕ್ಕೆ. ಹಕ್ಕು ಸ್ಥಾಪಿಸಬೇಕಾದವಳನ್ನು ಎಲ್ಲ ರೀತಿಯಿಂದ ನಿಯಂತ್ರಿಸಿ ಹತ್ತಿಕ್ಕಲಾಗುತ್ತದೆ.

ನಂಬಿಕೆಗಳು :

ಹೈದರಾಬಾದ ಕರ್ನಾಟಕದಲ್ಲಿ ವ್ಯಕ್ತಿತ್ವ ವಿಕಾಸದ ಸಾಧ್ಯತೆಗಳನ್ನು ಮೊಟಕುಗೊಳಿಸಿ ಉದ್ಯೋಗ ಶಿಲತೆ, ಕಾರ್ಯಕ್ಷಮತೆ, ಬೌದ್ಧಿಕ ಪ್ರಪಂಚದಿಂದ ವಂಚಿಸುವಲ್ಲಿ ಆಕೆಯ ವ್ಯಕ್ತಿತ್ವ, ಸತ್ವ, ಬುದ್ಧಿ, ಪ್ರತಿಭೆ,

ದೇಹ ಇವುಗಳ ಸುತ್ತ ಪಾರಂಪರಿಕವಾಗಿ ಹೆಣೆಯಲಾಗಿರುವ ಅನೇಕ ಅವೈಜ್ಞಾನಿಕ ನಂಬಿಕೆಗಳು ಕಾರಣವಾಗಿವೆ. ಹೆಣ್ಣಿನ ಬುದ್ಧಿ ಮೊಳಕಾಲ ಕೆಳಗೆ, ನಗುವ ಹೆಂಗಸನ್ನು ನಂಬಬಾರದು, ಹೆಣ್ಣು ಅಬಲೆ, ಭಾವನಾಶೀಲೆ, ಬುದ್ಧಿಹೀನೆ ಇತ್ಯಾದಿ ನೇತ್ಯಾತ್ಮಕ ವಿಚಾರಗಳಿಂದ ಉಂಟಾದ ಅಸಹಾಯಕತೆ, ಅವಲಂಬನೆ ಕೀಳರಿಮೆಗಳು ಮಹಿಳೆಯರ ಬದುಕನ್ನು ಅಧೀನ ನೆಲೆಗೆ ದೂಡಿವೆ.

ಹೈದರಾಬಾದ ಕರ್ನಾಟಕದಲ್ಲಿ ಹೆಣ್ಣಿನ ಬದುಕಿನ ಸುತ್ತ ಸುತ್ತಿಕೊಂಡಿರುವ ನಂಬಿಕೆಗಳು ಅವಳ ಬದುಕುವ ಹಕ್ಕನ್ನೇ ಕಸಿದುಕೊಂಡಿವೆ. ಶಾಸ್ತ್ರ, ಪುರಾಣ, ಐತಿಹ್ಯಗಳ ನೆಲೆಯಲ್ಲಿ ಇವು ತಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಂಡಿವೆ. ಸ್ತ್ರೀಬಲಿ, ಶಿಶುಬಲಿ, ದೇವದಾಸಿ, ಬೆತ್ತಲೆ ಸೇವೆ, ಕೆರೆಗೆ ಹಾರ ಇತ್ಯಾದಿ ಸಂಪ್ರದಾಯಗಳ ಹಿಂದಿರುವ ಅಮಾನವೀಯತೆ ಮಹಿಳೆಯ ಬದುಕನ್ನು ಅಸಹನೀಯವಾಗಿಸಿದೆ.

ಇದಕ್ಕೆ ವ್ಯತಿರಿಕ್ತವಾಗಿ ಜೀವಪರಕಾಳಜಿ ಮತ್ತು ಮಾನವೀಯ ಸ್ಪಂದನೆಯುಳ್ಳ ಕೆಲವು ನಂಬಿಕೆಗಳು ಜಾನಪದರ ಸ್ತ್ರೀಪರ ಚಿಂತನೆಯ ನೆಲೆಗಳನ್ನು ಪ್ರಕಟಿಸುತ್ತವೆ. ಜನನ, ಋತುಮತಿ, ವಿವಾಹ, ಬಸಿರು, ಹೆರಿಗೆ ಇತ್ಯಾದಿ ಅವಸ್ಥೆಗಳಿಗೆ ಸಂಬಂಧಿಸಿದ ಅನೇಕ ನಂಬಿಕೆಗಳು ಹೆಣ್ಣಿನ ದೈಹಿಕ–ಮಾನಸಿಕ ವಿಶ್ರಾಂತಿಗೆ ಒತ್ತು ನೀಡುತ್ತವೆ. ಬಸಿರು, ಬಯಕೆ, ಸೀಮಂತಕ್ಕೆ ಸಂಬಂಧಿಸಿದ ನಂಬಿಕೆಗಳು ಗರ್ಭಿಣಿ ಹಾಗೂ ಗರ್ಭಸ್ಥ ಶಿಶುವಿನ ಆರೋಗ್ಯ ಆರೈಕೆಯ ಆಶಯ ಹೊತ್ತಿವೆ. ಗರ್ಭಿಣಿಯ ಆಸೆ ಪೂರೈಸದಿದ್ದರೆ ಶಿಶುವಿನ ಕಿವಿ ಸೋರುತ್ತದೆ ಎಂದು ನಂಬಲಾಗಿದೆ. ಮೂರನೆಯ ತಿಂಗಳಲ್ಲಿ ಗರ್ಭಿಣಿಗೆ ಕಳ್ಳಕುಬಸ, ಏಳನೆಯ ತಿಂಗಳಲ್ಲಿ ಸೀಮಂತ, ಮೊದಲ ಹೆರಿಗೆ ತವರು ಮನೆಯಲ್ಲಿ ಎಂಬ ನಂಬಿಕೆಗಳು ಗರ್ಭಿಣಿಗೆ ಅಗತ್ಯವಾದ ಪ್ರೀತಿ–ಆರೈಕೆ ಒದಗಿಸುವ ಗುರಿಯನ್ನು ಹೊಂದಿವೆ. ಆದರೆ ಇದರೊಂದಿಗೆ ಆಚರಿಸುವ ಮೈಲಿಗೆ ಸೂತಕಗಳು ಮಹಿಳೆಯನ್ನು ದೂರವಿರಿಸಿ ಕಿರಿ ಕಿರಿ ಮುಜುಗರವನ್ನುಂಟು ಮಾಡುತ್ತವೆ. ಅವಳಲ್ಲಿ ಕೀಳರಿಮೆಯನ್ನುಂಟುಮಾಡುತ್ತವೆ. ಪರಾವಲಂಬಿಯಾಗುವಂತೆ ಮಾಡುತ್ತವೆ.

ವೈಧವ್ಯ ಬಂಜೆತನಗಳು ಮಹಿಳೆಯ ಬದುಕಿಗೆ ಶಾಪಗಳಾಗಿವೆ. ತಾಯ್ತನ ಮುತ್ತೈದೆತನಗಳ ಹೇರಿಕೆ ಜನಪದ ನಂಬಿಕೆಗಳ ಫಲಿತಗಳಾಗಿವೆ. ಹುಟ್ಟು ಸಾವುಗಳಂಥ ನೈಸರ್ಗಿಕ ಆಗು ಹೋಗುಗಳಿಗೂ ಹೆಣ್ಣನ್ನು ಹೊಣೆಗಾರಳನ್ನಾಗಿಸುವುದು ಶಿಕ್ಷಿಸುವುದು ವ್ಯವಸ್ಥೆಯ ಅಮಾನವೀಯ ಏಕಪಕ್ಷೀಯ ನೀತಿಯನ್ನು ಪ್ರಕಟಿಸುತ್ತದೆ.

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ವಿಧವೆಯರನ್ನು ಅಮಂಗಲೆಯರೆಂದು ಬಿಂಬಿಸಿ ಅವರ ಊಟ ಉಡಿಗೆ ತೊಡುಗೆಗಳ ಮೇಲೆ ನಿರ್ಬಂಧಗಳನ್ನು ವಿಧಿಸಲಾಗಿದೆ. ಶುಭ ಸಮಾರಂಭಗಳಲ್ಲಿ ಅವರ ಭಾಗವಹಿಸುವಿಕೆಯನ್ನು ನಿಷೇಧಿಸಲಾಗಿದೆ. ಕೆಳವರ್ಗದಲ್ಲಿ ವಿಧವೆಗೆ ಮರು ವಿವಾಹದ ಅವಕಾಶವಿದ್ದಾಗಲೂ ಅದನ್ನು ಮೊದಲ ವಿವಾಹದಂತೆ ಸಾರ್ವಜನಿಕವಾಗಿ ಮಾಡದೆ ರಾತ್ರಿ ವೇಳೆಯಲ್ಲಿ ಕೆಲವೇ ಜನ ಕೂಡಿಕೆ ವಿವಾಹಿತರ ಸಮ್ಮುಖದಲ್ಲಿ ಮಾಡಲಾಗುತ್ತದೆ. ವಿಧವಾ ವಿವಾಹದಲ್ಲಿ ಸದವೆಯರು ಭಾಗವಹಿಸ ಬಾರದೆಂಬುವಲ್ಲಿ ವಿಧವೆಯ ಕುರಿತ ಹೀನ ಭಾವ ವ್ಯಕ್ತವಾಗಿದೆ.[೧೪] ಪತಿ ಪರದೈವ ಎಂದು ಸಾರಿರುವ ಸಾಂಸ್ಕೃತಿಕ ಪರಿಸರದಲ್ಲಿ ಹೆಂಡತಿಗೆ ಪ್ರತ್ಯೇಕ ಸ್ವತಂತ್ರ ಅಸ್ತಿತ್ವದ ಕಲ್ಪನೆಯನ್ನು ನಿರಾಕರಿಸಲಾಗಿದೆ. ತನ್ನ ಸುಖದುಃಖಗಳನ್ನೆಲ್ಲ ಗಂಡನ ಬದುಕಿನೊಂದಿಗೆ ಸಮೀಕರಿಸಿಕೊಂಡು ಸತಿತ್ವ ಸಾಧನೆ ಮಾಡಲು ಒತ್ತಾಯಿಸುವ ನಂಬಿಕೆಗಳು ಆಕೆಯ ಅಧೀನ ನೆಲೆಯ ಆದರ್ಶವನ್ನು ಎತ್ತಿಹಿಡಿದಿವೆ. ಗಂಡನ ಊಟದ ನಂತರ ಹೆಂಡತಿ ಊಟ ಮಾಡಬೇಕು. ಗಂಡನ ಎಂಜಲು ತಾಟಿನಲ್ಲಿ ಊಟ ಮಾಡಬೇಕು. ಗಂಡನನ್ನು ಏಕ ವಚದಲ್ಲಿ

ಅಥವಾ ಹೆಸರು ಹಿಡಿದು ಸಂಬೋಧಿಸಿದರೆ ಅವನ ಆಯುಷ್ಯ ಕ್ಷೀಣಿಸುತ್ತದೆ. ವ್ರತ ಉಪವಾಸ ಪೂಜೆ ಪಾತಿವ್ರತ್ಯಗಳಿಂದ ಗಂಡನಿಗೆ ದೀರ್ಘಾಯುಷ್ಯ ಪ್ರಾಪ್ತಿಯಾಗುತ್ತದೆ. ಮುತ್ತೈದೆ ಸಾವಿನಿಂದ ಸ್ವರ್ಗ ಸಿಗುತ್ತದೆ ಇತ್ಯಾದಿ ನಂಬಿಕೆಗಳು ಮಹಿಳೆಯರ ಬದುಕನ್ನು ಆವರಿಸಿ ಇದಕ್ಕೆ ಹೊರತಾಗಿ ಆಲೋಚಿಸದಂತೆ ಎಚ್ಚರ ವಹಿಸುತ್ತವೆ.

೩.೭ ಮಹಿಳೆ ಪುರುಷರಿಗಿಂತ ಕೀಳೆ? :

ಹೈದರಾಬಾದ ಕರ್ನಾಟಕದಲ್ಲಿ ಮಹಿಳೆ ಕೀಳೆಂದು ಭಾವಿಸಲಾಗಿದೆ. ಪುರುಷ ಮತ್ತು ಮಹಿಳೆಯರಲ್ಲಿ ವ್ಯತ್ಯಾಸವಿದೆ ಎಂಬ ಮಾತನ್ನು ಒಂದು ಮಿತಿಯವರೆಗೆ ಒಪ್ಪಬಹುದು. ಅವರಿಬ್ಬರೂ ದೈಹಿಕವಾಗಿ ಭಿನ್ನರು. ಎಂಬುದು ಬದುಕಿನ ಸತ್ಯಗಳಲ್ಲಿ ಒಂದು. ಈ ವ್ಯತ್ಯಾಸವು ವ್ಯತ್ಯಾಸವೇ ಆಗಬೇಕಿರುವ ಒಂದು ವ್ಯತ್ಯಾಸ. (ಎಫಲ್ ಎಂ. ಆಲ್ಬರ್ಟ) ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವಿಗಳಾದ ಮಾನವರ ವ್ಯಕ್ತಿತ್ವವನ್ನು ಅರ್ಥೈಸುವುದು ಅವರು ಹೊಂದುವ ಮೌಲ್ಯ ಹಾಗೂ ನಂಬಿಕೆಗಳು. ಪ್ರಾಕೃತಿಕ ವ್ಯತ್ಯಾಸವಷ್ಟೇ ವ್ಯಕ್ತಿಗಳನ್ನು ರೂಪಿಸುವುದಿಲ್ಲ. ವ್ಯಕ್ತಿತ್ವ ರೂಪಣೆಗೆ ಅವರ ಸ್ವಂತಿಕೆ ಬೌದ್ಧಿಕ ಮಟ್ಟಗಳೂ ಅಷ್ಟೇ ಮುಖ್ಯವಾಗಿರುತ್ತವೆ. ಮಹಿಳೆ ದೈಹಿಕವಾಗಿ ಪುರುಷನಿಗಿಂತ ಬಲ ಹೀನಳು ಎಂಬುದೊಂದನ್ನು ಬಿಟ್ಟರೆ ಅವಳು ಯಾವ ರೀತಿಯಲ್ಲಿಯೂ ಪುರುಷನಿಗಿಂತ ಕೀಳಲ್ಲ ಎಂದು ಪ್ರಯೋಗಗಳು ಸಿದ್ಧ ಪಡಿಸಿವೆ. ಗಣಿತ ಮುಂತಾದ ವೈಜ್ಞಾನಿಕ ವಿಷಯಗಳಲ್ಲಿ ಪುರುಷರೇ ಹೆಚ್ಚಾಗಿ ಪರಿಣತಿ ಪಡೆಯಲು ಕಾರಣ, ಅವರಿಬ್ಬರನ್ನು ಬೆಳೆಸಿದ ರೀತಿಯಲ್ಲಿರುವ ವ್ಯತ್ಯಾಸ ಎಂದು ಕಂಡು ಬಂದಿದೆ.

ಪುರುಷ ಪ್ರಧಾನವಾದ ದೇಶಗಳಲ್ಲಿ ಪುರುಷನೇ ಉತ್ತಮನೆಂದು ಬುದ್ಧಿವಂತನೆಂದು ನಂಬಿಕೆಯಿದೆ. ಆದರೆ ಮಹಿಳಾ ಪ್ರಧಾನವಾದ ದೇಶಗಳನ್ನು ತೆಗೆದುಕೊಂಡರೆ, ಅಲ್ಲಿನ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವವರು ಮಹಿಳೆಯರೇ ಆಗಿರುತ್ತಾರೆ. ಮಹಿಳೆ ಬೌದ್ಧಿಕವಾಗಿ ಪುರುಷನಿಗಿಂತ ಉತ್ತಮಳು ಎಂಬ ಭಾವನೆ ಝುನಿ ಜನಾಂಗದಲ್ಲಿದೆ. ಕೆಲವು ಪುರುಷರು ಮಹಿಳೆಯರಿಗಿಂತ ಬುದ್ಧಿವಂತರು. ಮತ್ತು ಮಹಿಳೆಯರು ಪುರುಷರಿಗಿಂತ ಬುದ್ಧಿವಂತರು ಈ ಸತ್ಯದ ವಿರುದ್ಧವಾಗಿ ಯಾವ ಮಾತು ಆಡಿದರೂ ಅದು ಕೇವಲ ವಾದದ ಪ್ರಯತ್ನವಾಗುತ್ತದೆ.

'ದೈಹಿಕ ಶ್ರಮದ ಕೆಲಸ ಪುರುಷನಿಗೆ ಮಾತ್ರ ಎಂಬುದು ಇನ್ನೊಂದು ಅಭಿಪ್ರಾಯ. ಅನೇಕ ಜನಾಂಗಗಳಲ್ಲಿ ಅದು ಸತ್ಯಕೂಡ, ಆದರೆ ಅಮೇರಿಕದ ಇತಿಹಾಸದಲ್ಲಿಯೇ ಮಹಿಳೆಯರು ಬಲಿಷ್ಠರಾಗಿದ್ದ ಮತ್ತು ಸಶಕ್ತರಾಗಿದ್ದ (ಗೋರೂರು ರಾಮಸ್ವಾಮಿ ಅಯ್ಯಂಗಾರರು ತಮ್ಮ ಪ್ರವಾಸ ಕಥನ 'ಅಮೇರಿಕೆಯಲ್ಲಿ ಗೋರೂರು' ಕೃತಿಯಲ್ಲಿ ಉಲ್ಲೇಖಿಸಿದ್ದಾರೆ.) ಉದಾಹರಣೆ ಸಿಗುತ್ತದೆ. ವ್ಯವಸಾಯ ಮುಂತಾದ ಕೆಲಸಗಳಲ್ಲಿ ಅವರು ಪುರುಷರಷ್ಟೇ ಭಾಗವಹಿಸುತ್ತಿದ್ದರು. ಪುರುಷ ಮಿತ ಆಹಾರ ಸೇವನೆಯಿಂದ ದುರ್ಬಲನಾಗಿರುತ್ತಾನೆಂದು ಶ್ರಮದ ಕೆಲಸಗಳನ್ನು ಮಾಡಲು ಮಹಿಳೆಗೆ ಮಾತ್ರ ಸಾಧ್ಯವೆಂದೂ ಆಫ್ರಿಕನ್ನರು ಹೇಳುತ್ತಾರೆ.[೧೫]

ಹೈದರಾಬಾದ ಕರ್ನಾಟಕದಲ್ಲಿ ಗಂಡು ಶಿಶು ಜನನ ಸಂದರ್ಭದಲ್ಲಿ ತುಂಬ ನಾಜೂಕು ಅದನ್ನು ತುಂಬ ಜತನದಿಂದ ರಕ್ಷಿಸಬೇಕು ಎಂದು ಹೇಳಲಾಗುತ್ತದೆ. ಅದು ಎಷ್ಟು ನಾಜೂಕು ಎಂದರೆ ಒಂದು ಜೋಳದ ಕಾಳಿನಿಂದ ಅದರ ಶಿಶ್ನಕ್ಕೆ ಹೊಡೆದರೆ ಪ್ರಾಣ ಹೋಗುತ್ತದೆಂದು ಹಿರಿಯರು ಇಂದಿಗೂ ಹೇಳುತ್ತಾರೆ.

ಎಂಟನೇ ತಿಂಗಳಲ್ಲಿ ಹುಟ್ಟಿದ ಗಂಡು ಮಗು ಬದುಕುಳಿಯುವುದು ಅಪರೂಪ ಹೆಣ್ಣು ಮಗು ಬದುಕುತ್ತದೆ. ಹೆಣ್ಣು ಮಗು ಪರಿಸರಕ್ಕೆ ಬೇಗ ಹೊಂದಿಕೊಂಡು ಸಮರ್ಥವಾಗಿ ಬೆಳೆಯುತ್ತದೆ. ಪುರುಷ ಶಾರೀರಿಕವಾಗಿ ತೀರ ಸೂಕ್ಷ್ಮ ಪ್ರಕೃತಿಯವನೆಂದು ಹೇಳಿ ಕುಟುಂಬ ಯೋಜನಾ ಶಸ್ತ್ರ ಕ್ರಿಯೆಗೊಳಪಡುವುದಿಲ್ಲ. ಮೇಲಿನ ವಿವರಗಳಿಂದ ಹೆಣ್ಣು ಮಗು ಜನನ ಸಂದರ್ಭದಲ್ಲೇ ಪರಿಸರವನ್ನು ಎದುರಿಸುವ ಹೆಚ್ಚಿನ ಸಾಮರ್ಥ್ಯ ಪಡೆದಿದ್ದು ನಂತರದ ಪೋಷಣೆಯ ಹಂತದಲ್ಲಿ ದುರ್ಬಲಳನ್ನಾಗಿಸಲಾಗುತ್ತದೆ. ಜನಿಸುವಾಗ ಸಹಜವಾಗೇ ದುರ್ಬಲವಾಗಿದ್ದ ಗಂಡು ಮಗುವನ್ನು ಹೆಚ್ಚಿನ ಕಾಳಜಿವಹಿಸಿ ಗಟ್ಟಿಗನನ್ನಾಗಿಸಲಾಗುತ್ತದೆ. ನಂಬಿಕೆಗಳೇನೇ ಇರಲಿ ಮಗುವಿಗೆ ಸಿಗುವ ಪರಿಸರ ಮುಕ್ತ ವಾತಾವರಣ ಅದರ ಪೋಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇನ್ನು ಹೆಣ್ಣು ಮಕ್ಕಳಿಗೆ ಕುಟುಂಬ ಯೋಜನೆಗೊಳಪಡಿಸುವಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ರಾಜಕಾರಣ ಅಡಗಿದೆ. ಅಕಸ್ಮಾತ್ ಮಗು ಸಾವಿಗೀಡಾದರೆ ಮಕ್ಕಳೇ ಇಲ್ಲದಂತಾದರೆ ಮತ್ತೊಂದು ಮದುವೆಯಾಗಿ ಮತ್ತೆ ಮಕ್ಕಳನ್ನು ಪಡೆಯಬಹುದೆಂಬ ಮುಂದಾಲೋಚನೆ ಇಲ್ಲಿದೆ. ಮಹಿಳೆಯನ್ನು ಕುಟುಂಬ ಯೋಜನೆಗೆ ಒಳಪಡಿಸಿದ ಮಾತ್ರಕ್ಕೆ ಜನಸಂಖ್ಯೆ ನಿಯಂತ್ರಣವಾಗುತ್ತದೆಂಬುದೂ ಭ್ರಮೆಯೆ. ಲೈಂಗಿಕ ನಿರ್ಬಂಧವಿಲ್ಲದ ಪುರುಷ ನ್ಯಾಯಸಮ್ಮತ, ನ್ಯಾಯಬಾಹಿರ ಸಂತಾನಗಳಿಗೆ ಕಾರಣವಾಗುವಾಗ ವರ್ಷದಲ್ಲಿ ಒಂದು ಮಗುವಿಗೆ ಜನನ ನೀಡಬಹುದಾದ ಮಹಿಳೆಯನ್ನು ಕುಟುಂಬಯೋಜನೆಗೊಳಪಡಿಸಿ ಜನಸಂಖ್ಯೆಯನ್ನು ನಿಯಂತ್ರಿಸುವುದು ಅಸಾಧ್ಯವೆ ಸರಿ.

'ಭಾವನೆಗಳ ದೃಷ್ಟಿಯಿಂದ ಹೇಳುವುದಾದರೆ ಮಹಿಳೆ ಪುರುಷನಿಗಿಂತ ಸುಲಭವಾಗಿ ಭಾವುಕಳಾಗುತ್ತಾಳೆ ಎಂಬುವುದು ನಿಜ. ಅವಳು ಪುರುಷನಿಗಿಂತ ಹೆಚ್ಚು ಸಲ ಹೆಚ್ಚು ಸುಲಭವಾಗಿ ಅಳುತ್ತಾಳೆ. ಭಾವನೆಗಳನ್ನು ತೋರ್ಪಡಿಸಿಕೊಳ್ಳುತ್ತಾಳೆ. ಪುರುಷನು ಅವನ್ನು ಅಡಗಿಸಿಕೊಳ್ಳಲು ಹೆಚ್ಚು ಪ್ರಯತ್ನಿಸುತ್ತಾನೆ. ಆದರೆ ಎಡ್ವರ್ಡ್ ಟಿ. ಹಾಲ್ ಹೇಳುವಂತೆ ಇರಾನಿನ ಪುರುಷನಿಗೆ ಮೇಲೆ ಹೇಳಿದ ಎಲ್ಲ ಸ್ತ್ರೀ ಲಕ್ಷಣಗಳು ಇರುತ್ತವಂತೆ. ಮಹಿಳೆ ಹೆಚ್ಚು ವಾಸ್ತವ ಪ್ರಜ್ಞೆಯುಳ್ಳವಳಾಗಿರುತ್ತಾಳಂತೆ.[೧೬]

ಹೀಗೆ ಮಹಿಳೆ ಪುರುಷರ ವ್ಯತ್ಯಾಸಗಳಿಗೆ ಕಾರಣ ಆಯಾ ಕಾಲ ದೇಶಗಳ ನಂಬಿಕೆ ಮತ್ತು ಸಂಪ್ರದಾಯಗಳಾಗಿರುತ್ತವೆ ಎಂಬುದನ್ನು ಮನಗಾಣಬಹುದು. ಮಹಿಳೆಯಲ್ಲಿ ಬೆಳೆಸಲಾದ ಸಂಕೋಚ ಮತ್ತು ಭಯಗಳು ದೈಹಿಕವಾಗಿ ಬಲಿಷ್ಠನಾದ, ವಿದ್ಯಾವಂತನಾದ ಆರ್ಥಿಕವಾಗಿ ಸ್ವತಂತ್ರನಾದ, ಪುರುಷನಿಗೆ ಹೆದರುವಂತೆ ಮಾಡುತ್ತವೆ. ಗಂಡು ಹೆಣ್ಣನ್ನು ಚುಡಾಯಿಸುತ್ತಾನೆ. ಪ್ರತಿಯಾಗಿ ಹೆಣ್ಣು ಹೆದರುತ್ತಾಳೆ. ಒಂಟಿ ಗಂಡಿಗಿಲ್ಲದ ಭಯ ಒಂಟಿ ಹೆಣ್ಣನ್ನು ಕಾಡುತ್ತದೆ. 'ಉತ್ತಮ ವಿದ್ಯಾಭ್ಯಾಸ ಆರ್ಥಿಕ ಸ್ವಾತಂತ್ರ್ಯಗಳು ಈ ಭಯವನ್ನು ಹೋಗಲಾಡಿಸುತ್ತವೆ. ಎಂದು ಜೆ.ಡಿ. ಖೋಸ್ಲಾರವರು ಅಭಿಪ್ರಾಯ ಪಡುತ್ತಾರೆ.[೧೭]

೩.೮ ದುಡಿಯುವ ಗ್ರಾಮೀಣ ಮಹಿಳೆ :

ಹೈದರಾಬಾದ ಕರ್ನಾಟಕದ ಗ್ರಾಮಗಳಲ್ಲಿ ಬದುಕುವ ತೊಂಭತ್ತು ಪ್ರತಿಶತ ಮಹಿಳೆಯರು ಪುರುಷರಿಗೆ ಸಮನಾಗಿ ದುಡಿಯುತ್ತಾರೆ. ರೈತ ಮಹಿಳೆಯರಿಂದ ಒಳಗೊಂಡು ಉಳಿದ ಎಲ್ಲಾ ವರ್ಗದ ಮಹಿಳೆಯರು ತಮ್ಮ ತಮ್ಮ ಮನೆ ಮಕ್ಕಳ ಕೆಲಸದ ಜೊತೆಗೆ, ಗಂಡನ ಕೆಲಸದಲ್ಲೂ ಸಂಪೂರ್ಣವಾಗಿ ಸಹಕರಿಸುತ್ತಾಳೆ.

ಮಹಿಳೆಯ ಸಹಕಾರವಿಲ್ಲದೇ ರೈತ, ಕುಂಬಾರ, ಕಂಬಾರ, ನೇಕಾರ, ಅಗಸ ಯಾರೂ ತಮ್ಮ ತಮ್ಮ ಕೆಲಸಗಳನ್ನು ಸಮರ್ಪಕವಾಗಿ ಮಾಡಲಾರರು.

ಮನೆಯ ಸಾರಣೆ-ಕಾರಣೆ ದನಕರುಗಳ ಕೆಲಸ, ನೀರು ಹೊರುವುದು ಅಡಿಗೆ, ಮಕ್ಕಳ ಯೋಗಕ್ಷೇಮ, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ದವಸ-ಧಾನ್ಯ ಹಸನು ಮಾಡುವ ಮೊದಲಾದ ಬಿಡುವಿಲ್ಲದ ಕೆಲಸಗಳು ಗ್ರಾಮೀಣ ಮಹಿಳೆಯ ಸಂಪೂರ್ಣ ಸಮಯವನ್ನು ಕಬಳಿಸುತ್ತವೆ. ಇವುಗಳೊಂದಿಗೆ ವ್ಯವಸಾಯ ಸಂಬಂಧಿ ಕೆಲಸಗಳಿಗೆ ದಿನದ ಹೆಚ್ಚಿನ ಸಮಯ ವಿನಿಯೋಗಿಸಬೇಕಾಗುತ್ತದೆ. ಬಿತ್ತುವುದು, ನಾಟುವುದು, ಕಸ ತೆಗೆಯುವುದು, ಹತ್ತಿ ಬಿಡಿಸುವುದು, ಕಣ ಮಾಡುವುದು, ಎಂದು ಬೆಳಗಿನಿಂದ ಸಂಜೆಯವರೆಗೆ ಅದರಲ್ಲಿ ತೊಡಗಬೇಕಾಗುತ್ತದೆ. ಹೀಗೆ ಎಲ್ಲಾ ಕೆಲಸಗಳಿಗೆ ಸಮಯ ಹೊಂದಿಸಲು ಅವಳು ನಸುಕಿನಲ್ಲಿ ಎಲ್ಲರಿಗಿಂತ ಮೊದಲು ಏಳಬೇಕು. ರಾತ್ರಿ ಎಲ್ಲರಿಗಿಂತ ತಡವಾಗಿ ಮಲಗಬೇಕಾಗುತ್ತದೆ.

ನೇಕಾರ, ಕುಂಬಾರ, ಮುಂತಾದ ಮಹಿಳೆಯ ಕತೆಯೂ ಅಷ್ಟೆ. ಮಡಿಕೆ ಬಡಿಯುವ ಮಣ್ಣು ಕಲಸುವ ನೂಲು ಹೊಂದಿಸುವ, ಬಟ್ಟೆ ಒಗೆಯುವ ಮುಂತಾದ ಕೆಲಸಗಳನ್ನು ಹಗಲಿಡೀ ಮಾಡುತ್ತಿರಬೇಕಾಗುತ್ತದೆ.

ಇನ್ನು ಕೂಲಿಯ ಕೆಲಸಗಳಿಂದಲೇ ಹೊಟ್ಟೆ ಹೊರೆಯುವ ವರ್ಗದ ಮಹಿಳೆಯ ಸ್ಥಿತಿ ಇನ್ನೂ ಒಂದು ಮೆಟ್ಟಿಲು ಕೆಳಗಿನದು. ಉಳಿದವರ ಮನೆಯಲ್ಲಿ ಸಾಮಾನ್ಯವಾಗಿ ವರ್ಷದ ಊಟಕ್ಕೆ ಬೇಕಾಗುವ ದವಸಧಾನ್ಯಗಳ ಸಂಗ್ರಹವಾದರೂ ಇರುತ್ತದೆ. ಅಲ್ಲಿ ಬಡತನವಿದ್ದರೂ ನಾಳಿನ ಊಟದ ಪ್ರಶ್ನೆಯ ಭೂತ ಅವರನ್ನು ಕಾಡುವುದಿಲ್ಲ. ಜವಾಬ್ದಾರಿಯ ಹೊರೆ ದೊಡ್ಡದಾದರೂ ಹಳ್ಳಿಯ ಸಮಾಜದಲ್ಲಿ ಅವರಿಗೆ ತಮ್ಮದೇ ಆದ ಸ್ಥಾನಮಾನಗಳಿವೆ.

ಆದರೆ ನೆಲವಿಲ್ಲದ, ಬದುಕಲು ಬೇರೆ ಮಾರ್ಗವಿಲ್ಲದ ಜನರ ಬವಣೆ ಮಾತಿಗೆ ಮೀರಿದ್ದು. ಅಂದಂದಿನ ಊಟದ ಸಮಸ್ಯೆಯ ಪರಿಹಾರವೇ ಅವರ ಜೀವನದ ಗುರಿ. ಈ ವರ್ಗದ ಹೆಂಗಸರು ಗಂಡಸಿಗೆ ಸಮನಾಗಿ ಅಡವಿಗಳಿಗೆ ಹೋಗಿ ಕಟ್ಟಿಗೆ ಕಡಿದು. ಮೇವು ಸಂಗ್ರಹಿಸಿ ಅವನ್ನು ತಲೆ ಮೇಲೆ ಹೊತ್ತು ಪೇಟೆಯವರೆಗೂ ತಂದು ಮಾರಿ ಜೀವನ ಸಾಗಿಸಬೇಕಾಗುತ್ತದೆ.

ಇವರು ದುಡಿಯಲೆಂದೇ ತಮ್ಮ ಸೃಷ್ಟಿಯಾಗಿದೆಯೆಂದು ದೃಢವಾಗಿ ನಂಬಿಕೊಂಡು ಯುಗ ಯುಗಗಳಿಂದ ಉಸಿರೆತ್ತದೆ ದುಡಿಯುತ್ತಲೇ ಇದ್ದಾರೆ. ದಿನ ದಿನಕ್ಕೆ ಬದಲಾಗುತ್ತಿರುವ ಜಗತ್ತು ಅವರಲ್ಲಿ ಯಾವ ಬದಲಾವಣೆಯನ್ನು ತಂದಿಲ್ಲ. 'ಬಡತನದ ಜೊತೆಗೆ ಸಮಾಜದಲ್ಲಿ ಕಟ್ಟ ಕಡೆಯ ಸ್ಥಾನವೂ ಸೇರಿ ಒಂದು ರೀತಿಯ ವಿಚಿತ್ರವಾದ ನಿರಾಸಕ್ತಿ, ನಿರಾಸೆಗಳು ಇವರ ಮನದಲ್ಲಿ ಮನೆಮಾಡಿ ಬದುಕು ಎಂದರೆ ಹೊಟ್ಟೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಹೇಗೋ ಸಾಯುವವರೆಗೆ ಬದುಕಬೇಕು. ಬದುಕಬೇಕೆಂದರೆ ಹೊಟ್ಟೆ ತುಂಬಬೇಕು. ಹೇಗೋ ಯಾವ ಕೆಲಸಮಾಡಿಯೋ ಹೊಟ್ಟೆ ತುಂಬಿದರೆ ಸರಿ. ಈ ವೃತ್ತದ ಒಳಗೇ ಸುತ್ತುವ ಅವರು, ಬೇರೆ ಯಾವುದನ್ನು ಚಿಂತಿಸಲಾರರು. ಅಥವಾ ಸದಾ ಕಾಡುವ ಹೊಟ್ಟೆ ಅವರನ್ನು ಬೇರೆಯ ಚಿಂತನೆಗೆ ಅವಕಾಶವನ್ನೇ ಕೊಡದೆ ಹಿಂದಿಟ್ಟದೆ'[೧೮]

ಕೆಳವರ್ಗದ ಮಹಿಳೆಯರಲ್ಲಿ ಕೂಲಿ ಕೆಲಸ ಮಾಡುವವರೇ ಹೆಚ್ಚು. ಅರ್ಧಕ್ಕಿಂತಲೂ ಹೆಚ್ಚುಭಾಗ ಇವರೇ. ಉಳಿದವರಲ್ಲಿ ಕೆಲವರು ಮನೆಗಳಲ್ಲಿ ಕಸಮುಸುರೆ ಕೆಲಸ ಮಾಡಿದರೆ, ಕೆಲವರು ಬೀದಿಯ ಮಗ್ಗುಲಲ್ಲಿ ಕುಳಿತೋ ಇಲ್ಲವೇ ಬೀದಿಯಲ್ಲಿ ಹೊತ್ತುಕೊಂಡು ಹೋಗಿಯೋ ಸೊಪ್ಪು, ತರಕಾರಿ, ಹಣ್ಣುಗಳನ್ನು ಮಾರುತ್ತಾರೆ. ಮತ್ತೆ ಕೆಲವರು ದಿನಸಿ ಅಂಗಡಿಗಳು, ರೈಸ್ ಮಿಲ್ಲುಗಳು ಹಾಸ್ಪೆಲ್‌ಗಳಲ್ಲಿ ಆಯಾ ಕೆಲಸ, ಝಾಡಮಾಲಿಯ ಕೆಲಸ ಮಾಡುವವರು, ಮನೆಗಳಲ್ಲಿಯೇ ಕುಳಿತು ಬೀಡಿ, ಊದುಬತ್ತಿ ಮಾಡುವವರು ಊದುಬತ್ತಿಯ ಕೊಳವೆ ಸೀಮೆ ಎಣ್ಣೆಯ ಪಂಪ ಮುಂತಾದವನ್ನು ಮಾಡುವಲ್ಲಿ ಗಂಡಸರಿಗೆ ಸಹಾಯ ಮಾಡುವವರು, ಸಣ್ಣ ಪುಟ್ಟ ಪ್ಯಾಕ್ಟರಿಗಳಲ್ಲಿ ಮಿಲ್ಲುಗಳಲ್ಲಿ ಕೆಲಸ ಮಾಡುವವರು ಕುಳ್ಳು ಮಾರುವವರು ಹೀಗೆ ನಾನಾ ರೀತಿಯ ಕೆಲಸಗಳನ್ನು ಮಾಡುತ್ತಾರೆ.

ಅವರು ಮಾಡುವ ವಿವಿಧ ರೀತಿಯ ಕೆಲಸಗಳಿಂದ ಅವರ ವರಮಾನಗಳೂ ಬೇರೆ ಬೇರೆ ರೀತಿಯದಾಗಿರುತ್ತವೆ. ಹೊರನೋಟಕ್ಕೆ ಒಂದೇ ರೀತಿ ಕಂಡರೂ ಅವರ ಸ್ಥಿತಿಗತಿಗಳು ಭಿನ್ನವಾಗಿರುತ್ತವೆ.

ಹೀಗೆ ನಿರಂತರ ದುಡಿಯುತ್ತಿದ್ದರೂ ಮಹಿಳೆ ಸಮಾಜದ ದೃಷ್ಟಿಯಲ್ಲಿ ವ್ಯಕ್ತಿತ್ವ ಇರುವ ಜೀವವೇ ಅಲ್ಲ. ಅವಳೊಂದು ಕೂಲಿಯಾಳು, ಅದಕ್ಕಿಂತ ಹೆಚ್ಚು ಅವಳಿನ್ನೇನೂ ಅಲ್ಲ. ಮಾನಸಿಕವಾಗಿ ಅವಳು ಅನುಭವಿಸುತ್ತಿರುವ ಯಾತನೆ ಕಿರುಕುಳಗಳನ್ನು ಅವಳೇ ಗುರುತಿಸಲಾರಳು.

ಕೃಷಿಯೇ ಆರ್ಥಿಕ ಜೀವನದ ಬೆನ್ನೆಲುಬಾಗಿದ್ದಾಗ ಮಹಿಳೆಯ ದೌರ್ಬಲ್ಯ ದಾಸ್ಯದ ಪ್ರಶ್ನೆ ಇರಲಿಲ್ಲ. ಗಂಡಸಿನ ಕೆಲಸದ ಅವಶ್ಯಕತೆಯಷ್ಟೇ ಹೆಣ್ಣಿನದೂ ಇತ್ತು. ಅಲ್ಲದೆ ಭೂಮಿಯ ಕೆಲಸ ಮಾಡಲು ಹೆಚ್ಚು ಜನವಿದ್ದಷ್ಟು ಭಾಗ್ಯವಿದ್ದಂತೆ ಎಂದು ತಾಯಿತನ ಪಡೆದ ಮಹಿಳೆಗೆ ಗೌರವದ ಸ್ಥಾನವಿತ್ತು. ಚರಿತ್ರೆಯ ನಡಿಗೆಯಲ್ಲಿ ಕೃಷಿಯಲ್ಲದೆ ಬೇರೆ ಆರ್ಥಿಕ ವ್ಯವಸ್ಥೆಗಳು ಉಂಟಾದಾಗ ಮಹಿಳೆಯ ಪಾತ್ರ ಬದಲಾಯಿತು. ಬರು ಬರುತ್ತಾ ಬೇರೆ ಚರಾಸ್ತಿಗಳಂತೆ ಮಹಿಳೆಯೂ ಒಂದು ಸ್ವತ್ತು ಎಂಬ ಭಾವನೆ ಬಲವಾಗಿ ಬಂಡವಾಳ ಶಾಹೀ ವ್ಯವಸ್ಥೆಗಳಲ್ಲಿ ಮಾನವೀಯ ಮೌಲ್ಯಗಳು ತೊಡೆದು ಹೋದಂತೆ ಮಹಿಳೆಯ ಸ್ಥಾನಮಾನ ಇಳಿದು ಹೋಯಿತು. ಹೆಂಗಸಿಗೆ ಗಂಡು ಸಂಬಂಧದ ಹೊರತು ಜೀವನವಿರಲಿಲ್ಲ. ಮನೆಯೊಳಗೇ ಆಕೆ ಅನೇಕ ಜವಾಬ್ದಾರಿ, ಅಧಿಕಾರವನ್ನು ನಿರ್ವಹಿಸಿದರೂ ಹೊಸ್ತಿಲಿನಿಂದಾಚೆಗೆ ಆಕೆಯ ಪ್ರಪಂಚ ಚಾಚಲಿಲ್ಲ. ಅಲ್ಲದೆ ಬುದ್ಧಿ ತಿಳಿಯುವ ಹೊತ್ತಿಗೆ ವಿವಾಹವಾಗಿ ಗೃಹಿಣೀ ಪಟ್ಟಕ್ಕೇರಿದ ಹೆಣ್ಣಿಗೆ ಹೊರ ಪ್ರಪಂಚದ ಅರಿವಾಗಲೀ ಸೆಳೆತವಾಗಲೀ ಇರಲಿಲ್ಲ. ಗಂಡಸರಿಗೆ ಯಾವ ಬಗೆಯ ಪೈಪೋಟಿಯೂ ಇರಲಿಲ್ಲ. ತಂದೆ, ಗಂಡ ಹಾಗೂ ಮಗ ಮೂವರ ಆಸರೆಯೂ ತಪ್ಪಿದ ನಿಸ್ಸಾಂತಾನ ವಿಧವೆಯರಿಗೆ ಒಂದು ವಿಶೇಷವಾದ ನರಕ ಸಿದ್ಧವಾಗಿರುತ್ತದೆ. ಒಬ್ಬ ಗಂಡಸಿಗೆ ವಿಧುರತನ ವದಗಿದರೆ ಇನ್ನೊಬ್ಬ ಹೆಂಗಸನ್ನು ಮದುವೆಯಾಗುವ ಅವಕಾಶವಿತ್ತು. (ಈಗಲೂ ಇದೆ.) ಆದರೆ ಭೋಗವಸ್ತುವಾಗಿ ಪರಿಗಣಿತವಾದ ಹೆಂಗಸಿಗೆ ಮುದ್ರೆ ಒಡೆದ ಅಂಗಡಿಯ ಪದಾರ್ಥದಂತೆ ಮರು ಉಪಯೋಗ ಸಾಧ್ಯವಿರಲಿಲ್ಲ. ಗಂಡ ಸತ್ತರೆ ಹೆಂಗಸಿನ ಬಾಳು ಮುಗಿದಂತೆಯೇ. ಆಕೆಯ ಮೈಮನಸ್ಸು ಬುದ್ಧಿ ಚೇತನ ಅಷ್ಟೂ ನಿಷ್ಪ್ರಯೋಜಕವಾಗುತ್ತಿತ್ತು.

ಶ್ರಮಜೀವಿ ಹೆಂಗಸರ ಸ್ಥಾನ ಮಧ್ಯಮವರ್ಗದ ಹೆಂಗಸರಷ್ಟು ಅಸಹ್ಯವಾಗಿಲ್ಲ. ಕೆಲಸ ಮಾಡುವ ಹೆಂಗಸಿಗೆ ಅವರಲ್ಲಿ ಬೆಲೆ ಇದೆ. ವಿಧನೆಗೆ ಕೂಡಾವಳಿ ಸಾಧ್ಯವಿದೆ. ಗಂಡನ ಸಾವಿನ ಜೊತೆಗೆ ಆಕೆಯೂ ಮೂಲೆ ಗುಂಪಾಗಬೇಕಾಗಿಲ್ಲ. ವೈಧವ್ಯದ ಮೈಲಿಗೆ ಹೆಚ್ಚಿಲ್ಲ. ಒಬ್ಬ ಹೆಂಗಸು ಇನ್ನೊಬ್ಬ ಗಂಡನನ್ನು ಪಡೆಯುವ

ಸಾಧ್ಯತೆಯೂ ಇದೆ. ಆದರೆ ಶ್ರೀಮಂತಿಕೆಯ ಸೌಲಭ್ಯವೂ, ಬಡತನದ ಬಿಡುಬೀಸೂ ಇಲ್ಲದ ಅರ್ಥಹೀನ, ಕ್ರಿಯಾಹೀನ ಬಾಳು ಮಧ್ಯಮ ವರ್ಗದ ಮಹಿಳೆಯರದು ಮಾತ್ರ. ಎಲ್ಲಾ ಮಧ್ಯಮ ವರ್ಗದ ಮಹಿಳೆಯ ಸ್ಥಿತಿಯೂ ಒಂದೇ ಎಂದಲ್ಲ. ಸಂಸಾರದ ಒಳಗೆ ತಮ್ಮ ಬುದ್ಧಿ, ಕೌಶಲ್ಯ, ಜಾಣತನ, ಸಾಮರ್ಥ್ಯವನ್ನು ಬಳಸಿ ಕುಟುಂಬ ಪೋಷಿಸಿದವರೆಷ್ಟೋ ಜನರಿದ್ದಾರೆ.

ಸಮಾಜದಲ್ಲಿ ಮಹಿಳೆಯ ಸ್ಥಾನ ಎರಡನೆಯದಾಗಿದೆ. ಇದಕ್ಕೆ ಕಾರಣಗಳು ಅನೇಕ. ಎಲ್ಲಕ್ಕಿಂತಲೂ ಹೆಚ್ಚಾಗಿ ಮಹಿಳೆಯ ದೈಹಿಕ ಸಂಯೋಜನೆಯೇ ಆಕೆಯ ಜೀವನವನ್ನು ರೂಪಿಸಿದೆ. ಜನಾಂಗವನ್ನು ನಡೆಸಿಕೊಂಡು ಹೋಗುವ ಹೊಣೆ ಆಕೆಯ ಮೇಲೆ ಇರುವುದರಿಂದ ಆಕೆಯ ಪಾತ್ರ ಸೀಮಿತವಾಗಿತ್ತು. ಈಗ ಸುಮಾರು ಎರಡು ದಶಕಗಳಿಂದ ಈಚೆಗೆ ಮಾತ್ರವೇ ಮಹಿಳೆಗೆ ತನ್ನ ದೇಹದ ಕ್ರಿಯೆಯ ಮೇಲೆ ಹತೋಟಿ ದೊರಕಿದೆ.

೩.೯ ಉದ್ಯೋಗಸ್ಥ ನಗರ ಮಹಿಳೆ :

ಹೈದರಾಬಾದ ಕರ್ನಾಟಕದಲ್ಲಿ ನಗರ ವಾಸದ ನಿಜ ಸ್ವರೂಪ ಉದ್ಯೋಗಸ್ಥ ಮಹಿಳೆಯರಿಗೆ ಅರಿವಾಗುವಷ್ಟು ಚನ್ನಾಗಿ ಬೇರೆಯವರಿಗೆ ಅರಿವಾಗುವುದಿಲ್ಲ. ನಮ್ಮ ಸಮಾಜದಲ್ಲಿ ಉದ್ಯೋಗಸ್ಥ ಮಹಿಳೆಯರ ಜೀವನದಲ್ಲಿ ಉದ್ಯೋಗ ಜೀವನೋಪಾಯಕ್ಕೆಂದಾದರೂ, ಮಹಿಳೆಯಾಗಿ ನಡೆದುಕೊಳ್ಳುವುದು ಅದಕ್ಕಿಂತಲೂ ಮುಖ್ಯ. ನೂರರಲ್ಲಿ ತೊಂಭತ್ತೆಂಟು ಮನೆಗಳಲ್ಲಿ ಹೆಣ್ಣು ಮಕ್ಕಳಿಗೆ ಮೊದಲಿನಿಂದಲೂ ಅರೆದು ಕುಡಿಸಿರುವ ಮಂತ್ರವೆಂದರೆ, ಹೆಣ್ಣು ಮಕ್ಕಳು ಪರರ ಸ್ವತ್ತು. ತಂದೆ ತಾಯಿಗಳು ಬರೀ ಕೋಶಾಧಿಕಾರಿಗಳಂತೆ, ನಿಜವಾದ ಭಾಧ್ಯಸ್ಥರು ಬಂದು ತಮ್ಮ ಸ್ವತ್ತುವಹಿಸಿಕೊಳ್ಳುವವರೆಗೆ ವಸ್ತುವಿನ ಬೆಲೆ ಕಡಿಮೆಯಾಗದಂತೆ ನೋಡಿಕೊಳ್ಳುವುದು ತಮ್ಮ ಕರ್ತವ್ಯ ಇತ್ಯಾದಿ. ಈ ವಸ್ತು ಎಂಬ ಅಭಿಪ್ರಾಯ ಎಷ್ಟು ಆಳವಾಗಿ ಬೇರೂರಿದೆ ಎಂದರೆ ಅನೇಕರು ತಮ್ಮ ಹೆಣ್ಣು ಮಕ್ಕಳನ್ನು ಗಂಡಿನ ಕಡೆಯವರ ಅಭಿರುಚಿಗೆ ತಕ್ಕಂತೆ ರೂಪಿಸಲು ಪ್ರಯತ್ನಿಸುತ್ತಾರೆ.

ಉದ್ಯೋಗಸ್ಥೆಯಾದುದರಿಂದ ಹೀನಾಯವೆನಿಸುವ ಹೆಣ್ಣು ಪಾತ್ರದಿಂದ ಸ್ವಲ್ಪ ಮಟ್ಟಿನ ಮುಕ್ತತೆ ಸಿಗುತ್ತಿದೆ. ನಮ್ಮ ಸಮಾಜದಲ್ಲಿ ಇನ್ನೂ ಮಹಿಳೆಗೆ ಸ್ವತಂತ್ರ ಸುಖಜೀವನ ಸಾಧ್ಯ ಎಂಬುದು ಸಾಧ್ಯವಾಗಿಲ್ಲ. ಉದ್ಯೋಗಸ್ಥ ಅವಿವಾಹಿತೆಯನ್ನು ನೋಡುವುದರಲ್ಲಿ ಎರಡು ಬಗೆಯ ಕೊಂಕು ನೋಟಗಳಿವೆ. ಒಂದು ಏನೋ ಒಳಗಡೆ ಡೊಂಕಿರಬೇಕು ಇಲ್ಲದಿದ್ದರೆ ಮದುವೆ ಯಾಕೆ ಆಗಿಲ್ಲ? ಎನ್ನುವುದು ಇನ್ನೊಂದು. 'ಸಂಸಾರ ಇಲ್ಲ, ಜವಾಬ್ದಾರಿ ಇಲ್ಲ' ಕೈತುಂಬ ಸಂಪಾದನೆ ಊರೆಲ್ಲ ತಿರುಗಿಕೊಂಡು ಹಾಯಾಗಿದ್ದಾಳೆ ಎಂಬ ಅಸೂಯಾಪೂರಿತ ಮಾತು. ಒಟ್ಟಿನಲ್ಲಿ ಗಂಡ ಮಕ್ಕಳು ಇಲ್ಲದೇ ಇರುವ ಮಹಿಳೆಯೂ ಒಬ್ಬ ಮನುಷ್ಯಳು ಎಂದು ಪರಿಗಣಿಸುವವರು ತೀರಾ ಕೆಲವರು ಮಾತ್ರ. ಗಂಡು ಸಿಗುವವರೆಗೆ ಮಾತ್ರ ಕೆಲಸ ಎಂಬ ಧೋರಣೆಯೂ ಇದೆ. ಅನೇಕರು ದುಡಿದು ಸಂಪಾದಿಸಿ ವರದಕ್ಷಿಣೆ ಕೊಟ್ಟು ತಾಳಿ ಕಟ್ಟಿಸಿಕೊಳ್ಳುತ್ತಾರೆ.

ಉದ್ಯೋಗಸ್ಥ ಮಹಿಳೆಯರು ನಿರಂತರವಾಗಿ ದಿನವೊಂದಕ್ಕೆ ಎರಡು ದುಡಿಮೆಯ ದಿನಗಳನ್ನು ಪ್ರಾಸಂಗಿಕವಾಗಿ ಮೂರು ದುಡಿಮೆಯ ದಿನಗಳನ್ನು ದುಡಿಯುತ್ತಾರೆ. ಉದ್ಯೋಗದ ಕ್ಷೇತ್ರದಲ್ಲಿ ಒಂದು ಮನೆ ವಾರ್ತೆಯಲ್ಲಿ ಒಂದು ಬಸಿರು ಬಾಣಂತನ ತಾಯ್ತನಗಳಲ್ಲಿ ಹೆಚ್ಚುವರಿಯಾಗಿ ಇನ್ನೊಂದು ಹೀಗೆ

ಮೂರು ಮೂರು ಶಿಫ್ಟ್‌ಗಳಲ್ಲಿ ದುಡಿದರೂ ಗಳಿಕೆಯ ಪರಿಗಣನೆಗೆ ದಕ್ಕುವುದು ಉದ್ಯೋಗ ಕ್ಷೇತ್ರದ್ದು ಮಾತ್ರ. ಅದೂ ಅಸಮಾನವಾಗಿ[೨೦] ಇಷ್ಟಾದರೂ ಮಹಿಳೆಯ ಸಂಪಾದನೆಯನ್ನು ಪ್ರಧಾನವೆಂದು ಪರಿಗಣಿಸಲಾಗುವುದಿಲ್ಲ. ಅದೇನಿದ್ದರೂ ಪೂರಕ.

ಮಹಿಳೆಯ ಏಕೈಕ ಗುರಿ ಪತಿ ಮತ್ತು ಮಕ್ಕಳ ಸೇವೆ ಹಾಗೂ ಕುಟುಂಬದ ನಿರ್ವಹಣೆ ಎಂಬುದು ಸಾಮಾಜಿಕ ನಿರೀಕ್ಷೆ. ಅಂತೆಯೇ ಕುಟುಂಬದ ಅಸಡ್ಡೆ, ನೀರುತ್ತೇಜನ ಮತ್ತು ಅಸಹಕಾರಿ ಭಾವನೆಗಳು ಅನೇಕ ಮಹಿಳೆಯರು ವೃತ್ತಿಯಲ್ಲಿ ಬಡ್ತಿ ಅಥವಾ ವರ್ಗಾವಣೆಯನ್ನು ತಿರಸ್ಕರಿಸುವಂತೆ ಇಲ್ಲವೆ ಕೆಲಸವನ್ನೇ ಬಿಟ್ಟು ಗಂಡನನ್ನು ಅನುಸರಿಸಿಕೊಂಡು ಆತ ಹೋಗುವಲ್ಲಿಗೆ ಹೋಗುವಂತೆ ಮಾಡಲಾಗುತ್ತದೆ. 'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಅಸಂಗತ ಗಾದೆಯನ್ನು ಇಂದಿಗೂ ಉದಾಹರಿಸುತ್ತಾ ಮಹಿಳೆಯರು ಮಾಡುವ ಅತ್ಯಂತ ಮೂಲಭೂತವಾದ ಕೆಲಸಗಳನ್ನು ಅಲ್ಲಗಳೆಯುವುದು ಎಲ್ಲೆಡೆ ಕಂಡು ಬರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ದುಡಿಮೆಯ ಸಹಭಾಗಿತ್ವ ಪ್ರಮಾಣವು ೨೦೦೧ರಲ್ಲಿ ಶೇ ೩೧.೯ರಷ್ಟಿತ್ತು. ಆದರೆ ರಾಜ್ಯದ ಹಿಂದುಳಿದ ಪ್ರದೇಶವೆಂದು ಪರಿಗಣನೆಯಾದ ಹೈದರಾಬಾದ ಕರ್ನಾಟಕದಲ್ಲಿ ಈ ಪ್ರಮಾಣ ಅಧಿಕವಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಇದು ಶೇ. ೩೮ರಷ್ಟಿದ್ದರೆ ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಶೇ. ೩೫ರಷ್ಟಿದೆ.

ಹೈದರಾಬಾದ ಕರ್ನಾಟಕ ಭಾಗದಲ್ಲಿ ಮಹಿಳೆಯರ ದುಡಿಮೆ ಸಹಭಾಗಿತ್ವದ ಪ್ರಮಾಣ ಹೆಚ್ಚಾಗಿರುವುದು ಬಡತನದ ತೀವ್ರ ಒತ್ತಡದಿಂದ ಉಂಟಾದ ಪರಿಣಾಮವಾಗಿದೆ. ಇಲ್ಲಿ ಪ್ರಾಥಮಿಕ ವಲಯವನ್ನು ಅವಲಂಬಿಸಿರುವ ದುಡಿಮೆಗಾರರ ಪ್ರಮಾಣವು ಅಧಿಕವಾಗಿದೆ. ಆದರೆ ಇವರ ಕೂಲಿ ವರಮಾನವು ಅತ್ಯಂತ ಕಡಿಮೆ ಇದೆ. ಇದರಿಂದ ಅವರ ಬಡತನ ಇನ್ನೂ ಹೆಚ್ಚಾಗುತ್ತದೆ. ಬಡತನ ಎಲ್ಲಿ ತೀವ್ರಗೊಳ್ಳುತ್ತದೆಯೋ ಅಲ್ಲಿ ಅದು ಸಹಿಸಲಸಾಧ್ಯವಾಗುತ್ತದೆ. ಅದರ ನಿರ್ವಹಣೆಯ ಹೊಣೆ ಮಹಿಳೆಯರದ್ದಾಗುತ್ತದೆ. ಹಿಂದುಳಿದ ಪ್ರದೇಶಗಳಲ್ಲಿ ಕಂಡು ಬರುವ 'ಮಹಿಳೆಯರ ದುಡಿಮೆ ವಾಸ್ತವವಾಗಿ ಬಡತನದ ಕಾರಣವಾಗಿರುತ್ತದೆ.' ಎಂದು ಟಿ.ಆರ್. ಚಂದ್ರಶೇಖರ ಅವರು ಸರಿಯಾಗಿಯೆ ಗುರುತಿಸಿದ್ದಾರೆ. ಬಡತನವು ತೀವ್ರವಾದಾಗ ಅದನ್ನು ನಿರ್ವಹಿಸುವ ಹೊಣೆ ಮಹಿಳೆಯರ ಮೇಲೆ ಬೀಳುತ್ತದೆ. ಮಹಿಳೆಯರು ಅದನ್ನು ಎದುರಿಸಬಲ್ಲವರಾಗಿದ್ದಾರೆ. ಹಿಂದುಳಿದ ಜಿಲ್ಲೆಗಳಲ್ಲಿನ ದುಡಿಮೆ ಅಲ್ಲಿನ ಮಹಿಳೆಯರ ಬೆವರು ಕಣ್ಣೀರು ಮತ್ತು ರಕ್ತವನ್ನು ಆಧರಿಸಿದ್ದು, ಬದುಕನ್ನು ಕಟ್ಟಿಕೊಳ್ಳುವ ಹೋರಾಟವಾಗಿರುತ್ತದೆ.

ಹೈದರಾಬಾದ ಕರ್ನಾಟಕ ಪ್ರದೇಶ ಹಿಂದುಳಿಯಲು ಜನಸಂಖ್ಯೆಯ ಬೆಳವಣಿಗೆಯೂ ಒಂದು ಕಾರಣವಾಗಿದೆ. ಜನ ಸಂಖ್ಯೆ ಬೆಳವಣಿಗೆಯಿಂದಾಗಿ ಹಿಂದುಳಿದ ಪ್ರದೇಶದಲ್ಲಿ ಲಿಂಗ ಸಂಬಂಧಗಳು ತೀವ್ರ ಅಸಮಾನತೆಯಿಂದ ಕೂಡಿರುತ್ತದೆ ಎಂಬುದನ್ನು ಜೀನ್‌ಡ್ರೀಜ್ ಮತ್ತು ಅಮರ್ತ್ಯಸೇನ್ ಅವರು ತಮ್ಮ 'ಭಾರತ ಅಭಿವೃದ್ಧಿ ಮತ್ತು ಸಹಭಾಗಿತ್ವ (೨೦೦೩) ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ.[೨೧]

೩.೧೦ ಚಲನೆಯ ನಿಯಂತ್ರಣ :

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಮಹಿಳೆಯರ ಚಲನೆಯ ಮೇಲೆ ಹೆಚ್ಚಿನ ನಿಯಂತ್ರಣ ಹೇರಲಾಗಿದೆ. ಜಾತಿ ಅಂತಸ್ತು ಮತ್ತು ಹೆಂಗಸರ ಒಡನಾಟಗಳಲ್ಲಿ ಆಂತರ ಸಂಬಂಧಗಳು ಬಹು

ಆಸಕ್ತಿಕರವಾಗಿವೆ. ಉಚ್ಚ ಜಾತಿಯ ಮಹಿಳೆಯ ಮೇಲಿನ ಲೈಂಗಿಕ ನಿಯಂತ್ರಣಗಳು ಬಹು ತೀಕ್ಷ್ಣವಾಗಿವೆ. ಮಹಿಳೆಯರ ಲೈಂಗಿಕ ಪರಿಶುದ್ಧತೆಯನ್ನು ತಮ್ಮ ಮನೆತನದ ಹಾಗೂ ಜಾತಿಯ ಶ್ರೇಷ್ಠತೆಯ ಸಂಕೇತವೆಂದು ನಂಬುವ ಮೇಲು ಜಾತಿಯವರು ಕೆಳ ಜಾತಿಯ ಪುರುಷರೊಂದಿಗೆ ತಮ್ಮ ಮಹಿಳೆಯರ ವಿವಾಹ ಹಾಗೂ ಅನೈತಿಕ ಸಂಬಂಧಗಳ ಹೆದರಿಕೆಯ ಕಾರಣವನ್ನು ಮುಂದೊಡ್ಡಿ ನಿಯಂತ್ರಣವನ್ನು ಕಠಿಣಗೊಳಿಸುತ್ತಾರೆ. ಆದರೆ ಉಚ್ಚ ಜಾತಿಯ ಗಂಡಸರು ಹೀನ ಕುಲದ ಮಹಿಳೆಯರೊಂದಿಗೆ ಲೈಂಗಿಕ ಸಂಬಂಧ ಬೆಳೆಸಲು ಸಾಮಾಜಿಕ ಸಮ್ಮತಿ ಇದೆ. ಮಹಿಳೆಯರ ಲೈಂಗಿಕತೆಯ ನಿಯಂತ್ರಣವೇ ಅವರ ಪ್ರಾಕೃತಿಕ ಚಲನೆಯ ಮೇಲಿನ ನಿಯಂತ್ರಣದ ಕಾರಣವಾಗುತ್ತದೆ.

ಮಹಿಳೆಯರ ಓಡಾಟವನ್ನು ಸಾಂಪ್ರದಾಯಿಕ ಭ್ರಾಂತಿಗಳು ನಿರ್ಣಯಿಸುತ್ತವೆ. ಇದು ಯಾವ ಸ್ವತಂತ್ರ ವ್ಯಕ್ತಿಯ ಆಯ್ಕೆಯ ತಳಹದಿಯ ಮೇಲೆ ನಿಂತಿಲ್ಲ ಜಾತಿ, ಕುಲ ಹಾಗೂ ಮತೀಯ ನಿಯಮಗಳನ್ನು ಆರ್ಥಿಕ ಅಗತ್ಯಗಳಿಗೆ ಅನುಗುಣವಾಗಿ ಮಾರ್ಪಾಡು ಮಾಡಲಾಗುತ್ತದೆ. ಉದಾ : ಮಹಿಳೆಯ ಬುರಖಾ ಸಾಂಪ್ರದಾಯಿಕ ನಿಯಂತ್ರಣದ ಸಂಕೇತವಾಗಿದೆ. ಆದರೆ ಬಡ ಮಹಿಳೆಯರು ತಮ್ಮ ಮುಖವನ್ನು ಬಟ್ಟೆಯಿಂದ ಮರೆ ಮಾಚಿಕೊಂಡು ಕೆಲಸಕ್ಕಾಗಿ ಓಡಾಡಬಹುದಾಗಿದೆ. ಚಲನೆಯ ನಿಯಂತ್ರಣವು ಮಹಿಳೆಯರ ಲೈಂಗಿಕತೆಯ ಸಾಮಾಜಿಕ ಭಾವನೆಗಳಿಗೆ ಸಂಬಂಧಿಸಿದೆ.

ನಗರದ ಮಹಿಳೆಯರಿಗೆ ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳಿಗೆ ಹೋಗಲು ನಿರ್ಬಂಧಗಳು ಅಷ್ಟಾಗಿ ಇರುವುದಿಲ್ಲ. ಆದರೆ ಇವರಿಗೂ ಎಲ್ಲಿಗೆ ಹೋಗಬೇಕು ಎಂಬ ಬಗ್ಗೆ ಸಂಪೂರ್ಣ ಸ್ವಾತಂತ್ರ್ಯವಿರುವುದಿಲ್ಲ. ಅದು ಅವರ ಸಾಮಾಜಿಕ ಪಾತ್ರಗಳ ನಿರ್ವಹಣೆಗೆ ಮಾತ್ರ ಲಭಿಸಿರುತ್ತದೆ.

ಗ್ರಾಮೀಣ ಮಹಿಳೆಯರು ಓಡಾಟಕ್ಕೆ ಸಾರ್ವಜನಿಕ ವಾಹನಗಳನ್ನು ಬಳಸಬೇಕಾಗದರೆ ಒಂಟಿಯಾಗಿ ಹೋಗಲು ಅನುಮತಿ ಇರುವುದಿಲ್ಲ. ಅದೆ ನೀರು ತರಲು ಮತ್ತು ಅರಣ್ಯದಿಂದ ಸೌದೆ, ಹುಲ್ಲುಗಳನ್ನು ಸಂಗ್ರಹಿಸಲು ಅವಳು ಮೈಲುಗಟ್ಟಲೆ ಕಾಲುನಡಿಗೆಯಲ್ಲಿ ಒಂಟಿಯಾಗಿ ಸಂಚರಿಸಬಹುದು.

ಸಮಾಜದಲ್ಲಿ ಮಹಿಳೆಯರ ಶರೀರದ ಪ್ರಾಮಾಣಿಕತೆಯ ಮೇಲೆ ಸ್ವಲ್ಪವೂ ನಂಬಿಕೆ ಇಲ್ಲದಿರುವುದರಿಂದ ನಿರ್ಬಂಧ ಹೆಚ್ಚಾಗುತ್ತದೆ. ಇಚ್ಛಾನುಸಾರದ ಚಲನೆ ಮಹಿಳೆಯರನ್ನು ಹಿಂಸೆ, ಉಪದ್ರವ ಮತ್ತು ಲೈಂಗಿಕ ಅತ್ಯಾಚಾರದ ಭಯಕ್ಕೆ ಒಳಪಡಿಸುತ್ತದೆ. ಸಾಮಾಜಿಕ ಬದಲಾವಣೆಗಳು ಸ್ವತಂತ್ರವಾದ ಓಡಾಟವನ್ನು ಮಹಿಳೆಯರಿಗೆ ಒಂದು ಸುರಕ್ಷಿತ ಯೋಜನೆಯನ್ನಾಗಿ ಮಾಡುವವರೆಗೂ ಪ್ರಾಕೃತಿಕ ಚಲನವಲನಗಳು ಮಹಿಳೆಯರ ಸ್ಥಾನಮಾನಗಳನ್ನು ಉತ್ತಮ ಪಡಿಸಲಾರವು.

ಹೈದರಾಬಾದ ಕರ್ನಾಟಕದ ಸಂಪ್ರದಾಯಬದ್ಧ ಸಮಾಜದಲ್ಲಿ ಮೈಗಾವಲಿಲ್ಲದೆ ಸ್ವತಂತ್ರವಾಗಿ ತಿರುಗಾಡುವ ಮಹಿಳೆಯರನ್ನು ಗೌರವದಿಂದ ಕಾಣುವುದಿಲ್ಲ. ಅವರು ಲೈಂಗಿಕ ಕರೆಗಳಿಗೆ ಗುರಿಯಾಗಬೇಕಾಗುತ್ತದೆ. ಸಾರ್ವಜನಿಕ ವಾಹನಗಳಲ್ಲಿ ತಮ್ಮ ಕೆಲಸಕ್ಕೆ ಅಥವಾ ವಿದ್ಯಾಭ್ಯಾಸಕ್ಕೆ ಪ್ರಯಾಣ ಮಾಡುವ ಒಂಟಿ ಮಹಿಳೆಯರು ಬಹು ಅಸಹ್ಯವಾದ ಅನುಭವಗಳಿಗೆ ಗುರಿಯಾಗಬೇಕಾಗುತ್ತದೆ. ಇದರಿಂದ ಮಹಿಳೆಯರು ಮನೆಯಲ್ಲಿದ್ದರೇ ಕ್ಷೇಮವೆಂದು ಭಾವಿಸಲಾಗುತ್ತದೆ. ಪರಿಣಾಮ ಹೆಣ್ಣಿನ ವಿದ್ಯಾಭ್ಯಾಸದ

ಅವಕಾಶಗಳು ತಪ್ಪಿ ಹೋಗುತ್ತವೆ. ಹೊರಜಗತ್ತಿಗೆ ಅರಿವಿಲ್ಲದೆ ಅವರು ಗೃಹ ಬಂಧಿಗಳಾಗ ಬೇಕಾಗುತ್ತದೆ. ಇಂದರಿಂದ ನಿರ್ಣಯ ಕೈಗೊಳ್ಳಲಾಗದ ಪುರುಷರನ್ನು ಅವಲಂಬಿಸುವಂತಾಗುತ್ತದೆ.

೩.೧೧ ವಿಹಾಹ ವರದಕ್ಷಿಣೆ :

ವಿವಾಹವು ಜಗತ್ತಿನಾದ್ಯಂತ ಆಸ್ತಿತ್ವದಲ್ಲಿರುವಂಥ ಒಂದು ಸಾಮಾಜಿಕ ಸಂಸ್ಥೆ. ಮೂಲಭೂತವಾಗಿ ವಿವಾಹವು ಸ್ತ್ರೀ ಮತ್ತು ಪುರಷ ಈ ಇಬ್ಬರು ವ್ಯಕ್ತಿಗಳ ನಡುವೆ ಏರ್ಪಡುವ ಒಂದು ಸಂಬಂಧ. ವಿವಾಹವೆಂದರೆ ಗಂಡು ಹೆಣ್ಣಿನ ನಡುವೆ ಸಾಮಾಜಿಕ ಅಂಗೀಕಾರ ನೀಡುವಂಥ ಒಂದು ಸಂಸ್ಥೆಯಾದರೂ ಪ್ರತಿಯೊಂದು ಸಮಾಜದಲ್ಲಿ ವಿವಾಹಕ್ಕೆ ಇತರ ಸಾಮಾಜಿಕ ಅರ್ಥಿಕ ಹಾಗೂ ಭಾವನಾತ್ಮಕ ಕಾರ್ಯಗಳೂ ಇವೆ.

ಚರಿತ್ರೆಯಲ್ಲಿ ವರ್ಗ ಭೇದ ಕಾಣಿಸಿಕೊಂಡಿರುವುದು ಮತ್ತು ಗಂಡು ಹೆಣ್ಣಿನ ನಡುವೆ ವಿವಾಹ ಪದ್ಧತಿಯೊಂದಿಗೆ ಕಾಣಿಸಿಕೊಂಡ ವೈರುಧ್ಯಗಳು ಪರಸ್ಪರ ಒಂದೇ ಅವಧಿಯವುಗಳಾಗಿವೆ. ಮಹಿಳೆಯ ಮೇಲಿನ ಅಧಿಕಾರ ಸ್ಥಾಪನೆ ಇದೇ ಅವಧಿಯಲ್ಲಿ ವೈವಾಹಿಕ ಚೌಕಟ್ಟಿನೊಳಗೆ ಪ್ರಾರಂಭವಾಯಿತು ಎಂದು ಏಂಗೆಲ್ಸ್ ವಿವರಿಸುತ್ತಾನೆ.[೨೬]

ಕ್ಲಾಡ್ ಲೆವಿಸ್ಟ್ರಾಸ್ ಹೇಳುವ ಪ್ರಕಾರ ಮುಕ್ತ ಲೈಂಗಿಕ ಬದುಕಿನ ವಿಧಾನಕ್ಕೆ ಕಡಿವಾಣ ಹಾಕಿ ಸಮೀಪ ಬಂಧುಗಳ ನಡುವೆ ಲೈಂಗಿಕ ಸಂಬಂಧಗಳು ನಿಷೇಧಗೊಂಡು, ಮತ್ತೊಂದು ಗುಂಪಿನೊಡನೆ ಸಂಬಂಧದಲ್ಲಿ ವಿನಿಯಮ ಪದ್ಧತಿ ಪ್ರಾರಂಭವಾಗಿ ಹೆಣ್ಣು ಒಂದು ವಸ್ತುವಿನಂತೆ ಗುಂಪುಗಳ ನಡುವೆ ವಿನಿಮಯಕ್ಕೆ ಒಳಪಡಬೇಕಾಯಿತು. ವಿವಾಹ ಪದ್ಧತಿಗಳು ಮಹಿಳೆಯ ಅಧೀನ ಸ್ಥಿತಿಗೆ ಮತ್ತು ಅವಳನ್ನು ವ್ಯಕ್ತಿಗತ ನೆಲೆಯಿಂದ ಕೆಳಗಿಳಿಸಲು ಕಾರಣವಾದವು.[೨೭] ಎಂಬುದು ಈ ವಿಶ್ಲೇಷಣೆಗಳಲ್ಲಿ ತಿಳಿದು ಬರುವ ವಿಚಾರವಾಗಿದೆ. ಅಧಿಕಾರ ಕೇಂದ್ರಗಳು ಮಹಿಳೆಯ ವ್ಯಕ್ತಿತ್ವ ವಿಕಾಸಕ್ಕೆ ಅವಕಾಶ ನೀಡದಂತೆ ತಡೆಯುತ್ತದೆ.

ವಿವಾಹ ಸಂಸ್ಥೆ ಕುಟುಂಬ ವ್ಯವಸ್ಥೆಯ ಬಹು ಮುಖ್ಯ ಅಂಗ ವ್ಯವಸ್ಥೆಯಾಗಿದೆ. ವ್ಯಕ್ತಿಯ ಸಾಮಾಜಿಕ ಭಾವನಾತ್ಮಕ ಮತ್ತು ಆರ್ಥಿಕ ಭದ್ರತೆಗೆ ನೆಲೆಯಾಗಿ ವಿವಾಹ ಸಂಸ್ಥೆ ಕಾರ್ಯ ನಿರ್ವಹಿಸುತ್ತದೆ. ಇದು ಸಂಪ್ರದಾಯದ ಮತ್ತು ಸಾಮಾಜಿಕ ಮೌಲ್ಯಗಳಿಗೆ ತಾತ್ವಿಕ ವಿಧಾನಗಳ ಮೂಲಕ ಅವಕಾಶ ಕಲ್ಪಿಸಿಕೊಡುವ ವ್ಯವಸ್ಥೆಯೂ ಆಗಿದೆ. ಸ್ತ್ರೀ-ಪುರುಷರ ವೈವಾಹಿಕ ಸಂಬಂಧಗಳು ಕುಟುಂಬ ವ್ಯವಸ್ಥೆಯ ಸಾಂಸ್ಥಿಕತೆಗೆ ಕಾರಣವಾಗಿದೆ. ಇಂಥ ಸಂಬಂಧಗಳು ಸಮಾನತೆಯ ನೆಲೆಯಲ್ಲಿರದೆ ಸ್ತ್ರೀಗೆ ವಿವಾಹ ಸಂಸ್ಥೆ ಪುರುಷಾಶ್ರಯದ ಸ್ಥಿತಿಯನ್ನು ಲಿಂಗಭೇದಕ್ಕೆ ಸಾಂಸ್ಕೃತಿಕ ಪರಿಸರವನ್ನು ಒದಗಿಸಿಕೊಡುತ್ತದೆ.

ಹೈದರಾಬಾದ ಕರ್ನಾಟಕದ ಸಾಮಾಜಿಕ ಮುಖ್ಯಶಕ್ತಿ ಎಂದರೆ ಜಮೀನ್ದಾರಿ ಹಾಗೂ ಪಿತೃಯಜಮಾನ ಸಂಸ್ಕೃತಿ ಅಂದರೆ ಸಮಾಜದೊಳಗಿನ ಅಧಿಕಾರಗಳೆಲ್ಲ ಪುರುಷರದು ಎಂದೇ ಅರ್ಥ. ಹೆಣ್ಣು ಎಂದರೆ ಗಂಡನ ಮನೆಗೆ ಸಾಗಿಸುವ ವಸ್ತು ಅಥವಾ ಸ್ವತ್ತು ಎಂಬುದಾಗಿಯೇ ಇಲ್ಲಿಯ ದೃಷ್ಟಿಕೋನ. ಹೆಣ್ಣನ್ನು ಬೆಳೆಸುವಾಗಲೇ ಸಂಪ್ರದಾಯಗಳನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿಗೆ ಹಾಗೂ ಅವಳ ತಾಯ್ತನಕ್ಕೆ ಹೆಚ್ಚಿನ ಒತ್ತು ಕೊಡಲಾಗುತ್ತದೆ. ಇದು ಅವಳ ಕುರಿತ ಅಸಮಾನ ಮತ್ತು ಹೀನಸ್ಥಿತಿಯನ್ನು ಸಾರಿ ಹೇಳುತ್ತದೆ.

ವಿವಾಹ ನಿಶ್ಚಯದ ಸಂದರ್ಭದಲ್ಲಿ ಮಹಿಳೆ ಅನೇಕ ಅವಮಾನಕರ ಪ್ರಸಂಗಗಳನ್ನು ಎದುರಿಸ ಬೇಕಾಗುತ್ತದೆ. ಭಾವಿ ಪತಿ, ಅತ್ತೆ ಮಾವಂದಿರ ಎದುರು ಆಕೆ ಪ್ರದರ್ಶನದ ವಸ್ತು ಆಗಬೇಕಾಗುತ್ತದೆ. ಆ ಪ್ರದರ್ಶನದಲ್ಲಿ ಅವಳ ಆಯ್ಕೆ ಆದರೆ ಆಯ್ತು. ಇಲ್ಲದಿದ್ದರೆ ಮತ್ತೊಂದು ಗಂಡಿನ ಮುಂದೆ ಪ್ರದರ್ಶನ ಇಂಥ ಸಂಪ್ರದಾಯಗಳು ಹೆಣ್ಣಿನ ಆತ್ಮಗೌರವದ ನಾಶಕ್ಕೆ ಕಾರಣವಾಗುವುದಷ್ಟೆ ಅಲ್ಲ, ಅವಳು ಅನುಭವಿಸುವ ದೈನ್ಯತೆಯನ್ನು ಅಸಹಾಯಕತೆಯನ್ನು ಸ್ಪಷ್ಟಪಡಿಸುತ್ತದೆ.

ವಿವಾಹ ಒಂದು ವ್ಯವಹಾರವೆಂಬಂತಾಗಿ ಇಲ್ಲಿ ವರದಕ್ಷಿಣೆಯ ಪಾತ್ರ ದೊಡ್ಡದಾಗಿದೆ. ಹೆಣ್ಣನ್ನು ಮದುವೆಯ ನಂತರ ಗಂಡನ ಮನೆಗೆ ಕಳಿಸುವಾಗ ವರದಕ್ಷಿಣೆಯೊಂದಿಗೆ ಬಳುವಳಿಯೂ ನೀಡಬೇಕಾಗುತ್ತದೆ. ವರದಕ್ಷಿಣೆ ಸಂಪ್ರದಾಯ ಹೆಣ್ಣನ್ನು ಶಾಶ್ವತವಾಗಿ ಕೆಳಮಟ್ಟದಲ್ಲಿ ಇಡುವ ಸಂಪ್ರದಾಯ. ಇದೊಂದು ವಿಷವರ್ತುಲದಂತೆ ಮಗಳ ಮದುವೆಯ ಸಂದರ್ಭದಲ್ಲಿ ವಾಪಸು ಪಡೆಯುವ ಪದ್ಧತಿ ಬೆಳೆದು ಬರುತ್ತಿದೆ.

ರಾಜ್ಯದಲ್ಲಿ ಹೆಚ್ಚು ಹೆಚ್ಚು ವರದಕ್ಷಿಣೆ ಪ್ರಕರಣಗಳು ದಾಖಲಾಗುವ ಜಿಲ್ಲೆ ಬೀದರ ಎಂಬುದು ಜನವಾದಿ ಮಹಿಳಾ ಸಂಘಟನೆಯ ಅಭಿಪ್ರಾಯ, ಕಳೆದ ಎಪ್ರಿಲ್‌ನಿಂದ ಸಪ್ಟಂಬರ್ ಅವಧಿಯಲ್ಲಿ ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿ ೫೭ ಮಹಿಳೆಯರಿಗೆ ಬೆಂಕಿ ಹಚ್ಚಿದ ಪ್ರಕರಣಗಳು ದಾಖಲಾಗಿವೆ. ಅವರೆಲ್ಲಾ ಮದುವೆಯಾಗಿ ಕೇವಲ ಒಂದೋ ಅಥವಾ ಎರಡು ವರ್ಷ ಆದವರು. ಇಂಥವರಲ್ಲಿ ಶೇ. ೨೫ ಪ್ರತಿಶತ ಮಹಿಳೆಯರು ಅಸುನೀಗುತ್ತಾರೆ.

ಕೊಲೆ, ಆತ್ಮಹತ್ಯೆ, ಹಿಂಸೆ, ಬೆದರಿಕೆ, ಬಲಾತ್ಕಾರ, ಮೂದಲಿಕೆ ಸುಲಿಗೆ, ರೋಧನ, ಪೀಡನೆ ಈ ಎಲ್ಲ ಹಿಂಸೆಗಳಿಗೆ ವರದಕ್ಷಿಣೆಗೆ ಕಾರಣವಾಗುತ್ತಿದ್ದು ನವ ವಧುಗಳು ಬಾಳಿ ಬದುಕುವ ಮುನ್ನವೇ ಸಾವಿಗೀಡಾಗುತ್ತಿದ್ದಾರೆ.

ಇಂತಹ ಬರ್ಬರತೆ ನಡೆದ ಕೆಲವೇ ಗಂಟೆಗಳಲ್ಲಿ ರಾಜಕಾರಣದ ಆಶ್ರಯ ಪಡೆದು ಪ್ರಕರಣವನ್ನು ಮುಚ್ಚುವ ಹುನ್ನಾರಗಳು ನಡೆಯುತ್ತವೆ. ಹಣ ನೀಡಿ ಕೈತೊಳೆದುಕೊಳ್ಳುತ್ತಾರೆ. ಕೆಲವು ಪ್ರಕರಣಗಳಲ್ಲಿ ಸತ್ತವಳ ಸ್ಥಾನಕ್ಕೆ ಅವಳ ತಂಗಿಯನ್ನು ಕೊಟ್ಟು ಮದುವೆ ಮಾಡಿದ ಉದಾಹರಣೆಗಳಿವೆ. ಯುವತಿಯ ಪತಿಯ ಎರಡನೆಯ ಅಥವಾ ಮೂರನೆಯ ಮದುವೆಗೂ ವರದಕ್ಷಿಣೆ ನೀಡಲಾಗುತ್ತಿದೆ. ವರದಕ್ಷಿಣೆ ಹೆಣ್ಣಿನ ಜೀವ ಹಿಂಡುವ ಸಾಧನವಾಗುತ್ತಿದೆ.

ಈ ಅನಿಷ್ಟ ಸಂಪ್ರದಾಯವನ್ನು ತಡೆಗಟ್ಟಲು ೧೯೬೧ರಲ್ಲಿ ವರದಕ್ಷಿಣೆ ನಿಷೇದ ಅಧಿನಿಯಮ ಜಾರಿಗೆ ಬಂದಿದ್ದರೂ ಪ್ರಯೋಜನ ಕಾಣದ ಸಂದರ್ಭದಲ್ಲಿ ಹಲವಾರು ತಿದ್ದುಪಡಿಗೆ ಒಳಗಾಗಿದೆ. ಆದರೂ ಬದಲಾಗದ ಸ್ಥಿತಿಯೇ ಮುಂದುವರೆಯುತ್ತಿರುವುದು ಇದನ್ನು ತೊಡೆದು ಹಾಕುವಲ್ಲಿಯ ರಾಜಕೀಯ ಸಾಮಾಜಿಕ ಇಚ್ಛಾಶಕ್ತಿಯ ಕೊರತೆಯನ್ನು ಮನಗಾಣಬಹುದು.

ಬಾಲ್ಯ ವಿವಾಹ :

ಸಮಾಜ ಸುಧಾರಕರು ಮಹಿಳಾ ಸುಧಾರಣೆಯ ಬಗ್ಗೆ ಗಮನಹರಿಸಿದಾಗ ಮೊಟ್ಟ ಮೊದಲು ಅವರ ಗಮನ ಸೆಳೆದಿದ್ದು ವಿವಾಹ ಕೇಂದ್ರಿತವಾದ ಸಮಸ್ಯೆಗಳೆ, ಅದರಲ್ಲಿ ಮುಖ್ಯವಾದದ್ದು ಬಾಲ್ಯ ವಿವಾಹ ಹಾಗೂ ವೈಧವ್ಯ. ಅವರ ಪರಿಹಾರದ ಸೂತ್ರಗಳು ರೂಪಿತವಾದದ್ದು ವಿವಾಹದ ನೆಲೆಯಲ್ಲಿನ ಸುಧಾರಣೆಯ

ಸ್ವರೂಪದಲ್ಲಿ. ಉದಾಹರಣೆಗೆ ಬಾಲ್ಯ ವಿವಾಹ ಸಮಸ್ಯೆಗೆ ಪ್ರೌಢ ವಿವಾಹ, ವಿಧವಾ ಸಮಸ್ಯೆಗೆ ಪುನರ್‌ವಿವಾಹ ಆದರೆ ವಾಸ್ತವದಲ್ಲಿ ಈ ಯಾವ ಪರಿಹಾರಗಳು ವಿವಾಹ ಸಂಸ್ಥೆಯೊಂದಿಗಿನ ಮಹಿಳೆಯ ಸಂಬಂಧವನ್ನು ಆಮೂಲಾಗ್ರವಾಗಿ ಬದಲಾಯಿಸುವ ಅಂಶಗಳಾಗಿಲ್ಲ. ಹಾಗಾಗಿ ಅತ್ಯಲ್ಪ ಕಾಲದಲ್ಲಿಯೇ ಪರಿಹಾರಗಳಾಗಿ ಸೂಚಿತವಾದ ಪ್ರೌಢ ವಿವಾಹ ವಿಧವಾ ವಿವಾಹಗಳು ಸಮಸ್ಯೆಯ ಸುಳಿಯಲ್ಲಿ ಸಿಲುಕಿದವು. ಏಕೆಂದರೆ ಈ ಯಾವ ಪರಿಹಾರಗಳು ವಿವಾಹದ ಸಂದರ್ಭದಲ್ಲಿ ಮಹಿಳೆಯ ಆಯ್ಕೆಯ ಪ್ರಶ್ನೆಯಾಗಲಿಲ್ಲ. ವಿವಾಹ ಸಂಸ್ಥೆಯೊಳಗಿನ ಲಿಂಗ ತಾರತಮ್ಯದ ಸ್ವರೂಪವನ್ನಾಗಿಲೀ ಕುರಿತದ್ದಾಗಲಿಲ್ಲ. ಹಾಗಾಗಿ ವಿವಾಹ ಸಂಸ್ಥೆಯೊಂದಿಗೆ ಜೋಡಣೆಗೊಳ್ಳುವ ಸಮಸ್ಯೆಗಳು ಹೆಚ್ಚುತ್ತಲೇ ಹೋದುದೇ ಅಲ್ಲದೆ ಈ ಅಂಶವೇ ಉಳಿದ ಸಮಾಜೋಆರ್ಥಿಕ ಅಂಶಗಳನ್ನು ಪ್ರಭಾವಿಸತೊಡಗಿತು ಎಂಬ ಎಂ. ಉಷಾ, ಅವರ ಮಾತು ಸರಿಯಾಗಿಯೆ ಇದೆ.

ನಮ್ಮ ಸಮಾಜದಲ್ಲಿ ವಿವಾಹವೇ ಮಹಿಳೆಯ ಅಂತಿಮ ಗುರಿ ಎನ್ನುವ ಭಾವನೆ ರೂಪಗೊಂಡಿರುವುದರಿಂದ ವಿವಾಹೇತರವಾದ ಆಕೆಯ ಯಾವ ಚಟುವಟಿಕೆಗಳು ಸಮಾಜಕ್ಕೆ ಮುಖ್ಯವೆನಿಸುವುದಿಲ್ಲ. ಇದರ ಪರಿಣಾಮವಾಗಿ ಸ್ತ್ರೀ ಶಿಕ್ಷಣ, ಆರ್ಥಿಕ ಸ್ವಾತಂತ್ರ್ಯವೆನ್ನುವುದು ಅನಗತ್ಯವೆನ್ನುವಂತಾಯಿತು. ಆಧುನಿಕ ಸಂದರ್ಭದಲ್ಲಿ ಸ್ತ್ರೀ ಶಿಕ್ಷಣ ಪ್ರಸ್ತಾಪ ಬಂದಾಗಲೂ ಅದು ವಿವಾಹ ಹಾಗೂ ಕುಟುಂಬ ಕೇಂದ್ರಿತವಾದ ಅಂಶವಾಗಿಯೆ ಪರಿಗಣಿತವಾಗುತ್ತದೆ. ಇಂದಿಗೂ ಪ್ರಚಲಿತವಿರುವ ಬಾಲ್ಯವಿವಾಹ ಮಹಿಳೆಯ ಪ್ರಗತಿಗೆ ತಡೆಗೋಡೆಯಂತಿದೆ. ಸಾಮೂಹಿಕ ವಿವಾಹಗಳಲ್ಲಿ ಬಾಲ್ಯ ವಿವಾಹಗಳು ಪ್ರಭುತ್ವದ ಪ್ರತಿನಿದಿಗಳ ಸಮ್ಮುಖದಲ್ಲೇ ನೆರವೇರುತ್ತಿರುವುದು ಕಾನೂನು ಪಾಲನೆಯಲ್ಲಿ ಕೊರತೆಯನ್ನು ಮನಗಾಣಿಸುತ್ತದೆ. ಇಂಥ ಪರಿಸ್ಥಿತಿಯನ್ನು ಗಮನಿಸಿಯೇ ಡಾ. ಸರೋಜನಿ ಶಿಂತ್ರಿಯವರು 'ಮಹಿಳೆಯರಿಗೆ ವಿವಾಹವೇ ಪರಮೋನ್ನತ ಗುರಿಯಲ್ಲ ಆದ್ದರಿಂದ ಅವರಿಗೆ ಬರಿ ಮುಖ ಮೈಗಳ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವ ತರಬೇತಿಯನ್ನು ನೀಡದೆ. ಸಾಂಪ್ರದಾಯಿಕ ನಿಲುವುಗಳಿಗೆ ಅಂಟಿಕೊಂಡು ತಾನಿರುವುದೇ ಪುರುಷನನ್ನು ಸಂತೋಷ ಪಡಿಸಲು ಎಂಬುದನ್ನು ಬಿತ್ತದೆ, ತಮ್ಮ ಬೌದ್ಧಿಕ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿ ಸಮಾಜದ ಸಂಕುಚಿತ ಭಾವನೆಗಳನ್ನು ಧಿಕ್ಕರಿಸಿ ತಮ್ಮ ದೃಷ್ಟಿಕೋನವನ್ನೇ ಬದಲಾಯಿಸಿಕೊಳ್ಳುವಂತೆ ಪ್ರೇರೇಪಿಸುವುದು ಅತ್ಯಂತ ಅಗತ್ಯವೆನ್ನುತ್ತಾರೆ'.

೩.೧೨ ಕೌಟುಂಬಿಕ ದೌರ್ಜನ್ಯ :

ಹೈದರಾಬಾದ ಕರ್ನಾಟಕ ಸಮಾಜದಲ್ಲಿ ಶೇಕಡ ೭೦ರಷ್ಟು ಮಹಿಳೆಯರು ಅಂತಸ್ತು ಭೇದವಿಲ್ಲದೆ ಕೌಟುಂಬಿಕ ದೌರ್ಜನಕ್ಕೆ ಒಳಗಾಗುತ್ತಾರೆ ಇವರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಮಹಿಳೆಯರು ಅನಕ್ಷರಸ್ಥರು. ಕೇವಲ ಬಡತನ ಅನಕ್ಷರತೆಗಳು ಮಾತ್ರ ಇದಕ್ಕೆ ಕಾರಣಗಳಾಗಿರದೆ ಶತಶತಮಾನಗಳಿಂದಲೂ ನಮ್ಮ ಸಮಾಜದ ಸಾಗುವಳಿಯಲ್ಲೇ ಪುರುಷ ಪ್ರಧಾನ ಕುಟುಂಬವನ್ನು ಶ್ರೇಷ್ಠವೆಂದು ಬಿಂಬಿಸಿರುವುದು ಕೌಟುಂಬಿಕ ದೌರ್ಜನ್ಯಕ್ಕೆ ಮುಖ್ಯ ಕಾರಣವಾಗಿದೆ. ವಿಶ್ವಸಂಸ್ಥೆಯ ಜನಸಂಖ್ಯಾ ನಿಧಿಯು ದಕ್ಷಿಣ ಏಷ್ಯಾ ಪ್ರದೇಶದಲ್ಲಿ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಇಲ್ಲಿನ ಮಹಿಳೆಯರು ಗಂಡಂದಿರು ತಮ್ಮನ್ನು ಹೊಡೆಯುವುದು ಮತ್ತು ಇತರ ದೌರ್ಜನ್ಯಗಳಿಗೆ ಒಳಪಡಿಸುವುದನ್ನು ಸ್ವಾಭಾವಿಕವೆಂದು ಒಪ್ಪಿಕೊಂಡಿದ್ದಾರೆ. ಹಾಗೆಯೇ

ಗಂಡನು ಹೆಂಡತಿಯನ್ನು ಹೊಡೆಯುವುದು ಅವನ ಹಕ್ಕು ಎಂದೇ ತಿಳಿದುಕೊಂಡಿದ್ದಾನೆ. ಗಂಡು ತನ್ನನ್ನು ಮಹಿಳೆಯರಿಗಿಂತ ಉತ್ತಮನು ಎಂದು ನಂಬಿಕೊಂಡು ಬಂದಿರುವುದು ಮತ್ತು ಮಹಿಳೆಯರು ತಾವು ಪುರುಷರಿಗಿಂತ ಕೀಳು ಎಂದು ಕೀಳರಿಮೆಯನ್ನು ಹೊಂದಿರುವುದು ಸಹ ಕೌಟುಂಬಿಕ ದೌರ್ಜನ್ಯದ ಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಅಲ್ಲದೆ ಕಿರುಕುಳ ದೌರ್ಜನ್ಯಗಳನ್ನು ಕುಟುಂಬದ ಆಂತರಿಕ ವಿಚಾರಗಳೆಂದು ಭಾವಿಸಿದ್ದು, ಪೋಲಿಸ್‌ಠಾಣೆಯಲ್ಲಿ ದೂರು ದಾಖಲಿಸುವುದು ಮತ್ತು ನ್ಯಾಯಲಯದ ಮೊರೆ ಹೋಗುವುದು ತಮ್ಮ ಘನತೆಗೆ ಸಾಮಾಜಿಕ ಪ್ರತಿಷ್ಠೆಗಳಿಗೆ ಕುಂದು ಎಂಬ ಭಾವನೆ ಆಳವಾಗಿ ಬೇರು ಬಿಟ್ಟಿದೆ.

ಸಾಮಾಜಿಕ ಕಟ್ಟಳೆಗಳಿಂದ ತತ್ತರಿಸುವ ಮಹಿಳೆ ಆರ್ಥಿಕ ಮುಗ್ಗಟ್ಟಿನ ಭಯದಿಂದಾಗಿ ವಿದ್ಯಾವಂತ ಅವಿದ್ಯಾವಂತರೆನ್ನದೆ ಬಹುಪಾಲು ಮಹಿಳೆಯರು ಕೌಟುಂಬಿಕ ದೌರ್ಜನ್ಯದ ವಿರುದ್ಧ ಬಹಿರಂಗವಾಗಿ ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಹಿಂಜರಿಯುತ್ತಾರೆ. ನಮ್ಮ ಸಾಮಾಜಿಕ ಆಚರಣೆ ನಂಬಿಕೆಗಳಿಂದಾಗಿ ಮಹಿಳೆಯರು ಇಂದೂ ದೌರ್ಜನ್ಯಕ್ಕೆ ತುತ್ತಾಗುತ್ತಿದ್ದಾರೆ.

೩.೧೩ ಭ್ರೂಣ ಹತ್ಯೆ-ಹೆಣ್ಣು ಶಿಶು ಮಾರಾಟ :

ಹೆಣ್ಣು ಶಿಶು ಹತ್ಯೆ ಸ್ವಾತ್ರಂತ್ರ್ಯ ಪೂರ್ವಕಾಲದಲ್ಲಿ ಜಾರಿಯಲ್ಲಿದ್ದು, ಅದನ್ನು ತಡೆಯಲು ಸುಧಾರಣಾ ವಾದಿಗಳು ಪ್ರಯತ್ನಿಸಿ ಯಶ್ವಸ್ವಿಯಾಗಿದ್ದರು. ಅದರೆ ಹೆಣ್ಣು ಭ್ರೂಣ ಹತ್ಯೆ ಸ್ವಾತ್ರಂತ್ರ್ಯೋತ್ತರ ಕಾಲದಲ್ಲಿ ಹುಟ್ಟಿಕೊಂಡ ಹೊಸ ಸಮಸ್ಯೆಯಾಗಿದೆ. ಈ ಎರಡು ಅಂಶಗಳನ್ನು ಅಕ್ಕಪಕ್ಕದಲ್ಲಿಟ್ಟುಕೊಂಡು ಗ್ರಹಿಸುವುದಾದರೆ ಆಧುನಿಕತೆ ಪ್ರಗತಿ ವೈಜ್ಞಾನಿಕ ಕ್ರಾಂತಿ ಇತ್ಯಾದಿ ಅಂಶಗಳೆಲ್ಲವು ಹೇಗೆ ಮಹಿಳೆಯರ ಸಂದರ್ಭದಲ್ಲಿ ಶಾಪವಾಗಿ ಪರಿಣಾಮಿಸುತ್ತದೆ ಎಂಬುದರ ಅರಿವಾಗುತ್ತದೆ. ಹುಟ್ಟಿದ ಮಗುವನ್ನು ಕುಟುಂಬವೇ ಹತ್ಯೆಗೈಯುವ ಬರ್ಬರತೆ ಹಾಗೂ ಹುಟ್ಟುವ ಮೊದಲೆ ಲಿಂಗ ಪರೀಕ್ಷೆಗೆ ಒಳಪಡಿಸಿ ನಾಶಗೊಳಿಸುವ ಅಮಾನವೀಯತೆಗಳಲ್ಲಿ, ಯಾವುದು ಈ ಸಮಾಜದ ಕ್ರೌರ್ಯವನ್ನು ಹೆಚ್ಚು ಪ್ರತಿನಿಧಿಸುತ್ತದೆ ಎಂದು ವಿವರಿಸುವುದೇ ಕಷ್ಟದ್ದಾಗಿದೆ.

ಹೈದರಾಬಾದ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಕೊಂಚಾವರಂ ತಾಂಡಾ ಇತ್ತೀಚೆಗೆ ದೇಶ ವ್ಯಾಪ್ತಿ ಗಮನ ಸೆಳೆದದ್ದು ಹೆಣ್ಣು ಶಿಶುಗಳ ಮಾರಾಟ ಪ್ರಕರಣದಿಂದಾಗಿ. ಇಲ್ಲಿಯ ಲಂಬಾಣಿಗಳು ಕನ್ನಡಿಗರೊಂದಿಗೆ ಬೆರೆಯದೇ ಆಂದ್ರ ಮತ್ತು ಮಹಾರಾಷ್ಟ್ರಗಳ ಒಡನಾಟವನ್ನಿಟ್ಟುಕೊಂಡು ಒಂದು ಪ್ರತ್ಯೇಕ ಸಮುದಾಯವಾಗಿಯೇ ಉಳಿದಿದ್ದು, ಹತ್ತು ಹದಿನೈದು ವರ್ಷಗಳಿಂದ ನಿರಂತರ ನಡೆಯುತ್ತಿರುವ ಹೆಣ್ಣು ಶಿಶು ಮಾರಾಟ ಜಾಲ ೨೦೦೧ರವರೆಗೂ ಬೆಳಕಿಗೆ ಬಂದಿರಲಿಲ್ಲ.

ಈ ಲಂಬಾಣಿ ತಾಂಡಾಗಳ ಜೀವನ ಕಡು ಕಷ್ಟದ್ದು. ಗಂಡು ಹೆಣ್ಣು ತಂದೆ ತಾಯಿ ಸಹೋದರ ಸಹೋದರಿ ಎಂಬಂಥ ಬಾಂಧವ್ಯಗಳಿಗೆ ಅಲ್ಲಿ ಅರ್ಥವಿಲ್ಲ. ಹಣಕ್ಕಾಗಿ ಹೆಣ್ಣು ಶಿಶುಗಳ ಮಾರಾಟ ಮಾಡುವ ತಾಯಂದಿರಿಗೆ ಕೆಲವೊಮ್ಮೆ ಹಣವು ಸಿಗದೆ ಮಗುವೂ ಇಲ್ಲದ ಅಸಹಾಯ ಸ್ಥಿತಿ ಒದಗುತ್ತದೆ. ಇವರ ದಾರುಣ ಬದುಕಿಗೆ ಕಾರಣ ಇಲ್ಲಿ ಹುಟ್ಟುವ ಸಾಲು ಸಾಲು ಹೆಣ್ಣು ಶಿಶುಗಳು, ಬಡತನ, ಕುಲಾಚಾರದ ಕಟ್ಟು ನಿಟ್ಟು ಮತ್ತು ದುಡಿಮೆಯಿಲ್ಲದ ಗಂಡಸರು.

ತಮ್ಮ ಮೊದಲ ಒಂದೆರಡು ಹೆಣ್ಣುಮಕ್ಕಳನ್ನು ಹೇಗೋ ಕಷ್ಟಪಟ್ಟು ಪೋಷಿಸಲು ಇಚ್ಚಿಸುವ ಈ ಜನ, ಮುಂದಿನ ಹೆಣ್ಣು ಶಿಶುಗಳನ್ನು ಮಾರಾಟ ಮಾಡುತ್ತಾರೆ. ಇಲ್ಲವೆ ಹುಟ್ಟಿದ ಶಿಶುವಿಗೆ ಒಳಸಂಬಂಧಗಳಲ್ಲಿ ಮದುವೆ ಮಾಡುತ್ತಾರೆ. ಹಾಗೆ ಮದುವೆಯಾದ ಗಂಡು ಆ ಹೆಣ್ಣನ್ನು ಬಾಳಿಸುತ್ತಾನೆ ಎಂಬ ನಂಬಿಕೆ ಇಲ್ಲದಿದ್ದರೂ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವ ಧನ್ಯತೆ ಇವರದು. ಹೀಗಾಗಿ ಶಿಶು ಮಾರಾಟದೊಂದಿಗೆ ಬಾಲ್ಯ ವಿವಾಹದಂಥ ಅನಿಷ್ಟ ಪದ್ಧತಿಯೂ ಇಲ್ಲಿ ಜಾರಿಯಲ್ಲಿದೆ.

ವಿದ್ಯೆಯ ಗಂಧವಿಲ್ಲದ, ಅಂಧಾನುಕರಣೆಯಲ್ಲಿ ಜೀವನ ಸವೆಸುತ್ತಿರುವ ಇಲ್ಲಿಯ ಜನರಲ್ಲಿ ಶಿಶು ಮಾರಾಟ ಹುಟ್ಟುಹಾಕಿದ ಪಾರ್ವತಿಬಾಯಿ ಎಂಬಾಕೆ ಮಗುವನ್ನು ಆಂಧ್ರದ ತಾಂಡಾ ಒಂದರಲ್ಲಿ ಒಳ್ಳೆಯ ಶಾಲೆಗೆ ಸೇರಿಸುವ ಆಮಿಷ ಒಡ್ಡಿದಳು. ಅಲ್ಲದೆ ಒಂದು ಹೆಣ್ಣು ಶಿಶುವನ್ನು ಮಾರಿದರೆ ಒಂದು ಗಂಡು ಮಗು ಜನಿಸುವುದೆಂಬ ಮೂಢನಂಬಿಕೆಯನ್ನು ಬಿತ್ತಿದಳು. ಇದನ್ನು ನಂಬಿದ ಗೋಪಿಬಾಯಿ ತನ್ನ ಮೂರು ತಿಂಗಳ ಶಿಶುವನ್ನು ಐದುನೂರು ರೂಪಾಯಿಗೆ ಮಾರಿದಳು.[೨೯]

ಇದೇ ತಾಂಡಾದ ಸರಸ್ವತಿಬಾಯಿಗೆ ಇಪ್ಪತ್ತೆಂಟು ವರ್ಷ ವಯಸ್ಸಿಗೆ ಹನ್ನೊಂದು ಮಕ್ಕಳು ಅವಳ ಗಂಡ ಮುಂಬೈಯಲ್ಲಿ ಕೆಲಸ ಮಾಡುತ್ತಿದ್ದು, ವರ್ಷಕ್ಕೊಮ್ಮೆ ದೀಪಾವಳಿಗೆ ಬರುತ್ತಾನೆ. ಬಂದವನು ಏನಾದರು ಒಂದು ನೆಪ ತೆಗೆದು ಹೆಂಡತಿಯನ್ನು ಬಸುರಿ ಬಾಣಂತಿ ಎಂಬುದನ್ನು ಲೆಕ್ಕಿಸದೇ ಪ್ರಾಣ ಹೋಗುವಂತೆ ಬಡಿಯುತ್ತಾನೆ. ಊರಿನವರಿಗೆ ಹಬ್ಬದ ಸಂಭ್ರಮವಾದರೆ ಇವಳಿಗೆ ಬಡಿಸಿಕೊಳ್ಳುವ ಕರ್ಮ. ಇಂತಹ ಸಂಕಟದಿಂದ ಪರಿಹಾರ ಕಂಡುಕೊಳ್ಳಲು ಅವಳು ಎರಡು ಹೆಣ್ಣು ಶಿಶುಗಳನ್ನು ಮಾರಿದ್ದಾಳೆ. ಹೀಗೆ ತಾಂಡಾದ ಅನೇಕ ಕುಟುಂಬಗಳು ಹೆಣ್ಣು ಶಿಶುಗಳನ್ನು ಮಾರಾಟ ಮಾಡಿವೆ.

ಇಲ್ಲಿಯ ನೂರಾರು ತಾಂಡಾಗಳಲ್ಲಿ ಜನಿಸಿದ ಶಿಶುಗಳಲ್ಲಿ ಹೆಣ್ಣುಗಳೇ ಹೆಚ್ಚು. ಇವುಗಳನ್ನು ಬೆಳಸಿ ದೊಡ್ಡವರನ್ನು ಮಾಡಬೇಕು. ಅನಂತರ ಮದುವೆ ಮಾಡಬೇಕು ಗಂಡನ ಮನೆಗೆ ಹೊದ ಮಗಳು ಸುಖವಾಗಿರುತ್ತಾಳೆಂಬ ಭರವಸೆಯಿಲ್ಲ ಗಂಡ ಹೊಡೆದರೆ ಸತ್ತರೆ ತವರಿಗೆ ಬರುವವಳಿಂದ ಏನು ಲಾಭ? ಮದುವೆಗೆ ಮೊದಲೆ ಶೀಲಗೆಟ್ಟರೆ ಸಾಮಾಜಿಕ ಬಹಿಸ್ಕಾರ ಹಾಕುವ, ಮದುವೆಯ ನಂತರ ಗಂಡನ ಗೈರುಹಾಜರಿಯಲ್ಲಿ ಮನೆಯ ಗಂಡಸರು ಆಕೆಯನ್ನು ಲೈಂಗಿಕವಾಗಿ ಬಳಸಿಕೊಳ್ಳುವ ರೀತಿಗಳಲ್ಲದೆ, ಹುಟ್ಟಿದಾಗಿನಿಂದಲು ಹೆಣ್ಣು ಮಕ್ಕಳದು ಬರೀ ಗೋಳಿನದೇ ಜೀವನ ತಂದೆ ತಾಯಿಗಳ ಬದುಕು ದುಸ್ತರ. ಅದರಿಂದ ಶಿಶುವಾಗಿರುವಾಗಲೆ ಎಲ್ಲಿಯಾದರೂ ಸುಖವಾಗಿರಲಿ ಕಣ್ಮರೆಯಲ್ಲಿ ಹೇಗೋ ಬೆಳೆಯಲಿ ಎಂಬುದು ಶಿಶು ಮಾರಾಟಗಾರರ ಅಭಿಪ್ರಾಯ. ಈ ಭಾಗದ ಎಲ್ಲ ತಾಂಡಾಗಳ ಕತೆ ಇದು. ಪ್ರತಿಯೊಂದು ತಾಂಡಾಗಳಲ್ಲಿ ಮಕ್ಕಳನ್ನು ಮಾರಿದ್ದಾರೆ. ಹೆಣ್ಣು ಶಿಶು ಮಾರಾಟಕ್ಕೆ ಆರ್ಥಿಕ ದುಸ್ಥಿತಿಯೇ ಕಾರಣವೆಂದು ಭಾವಿಸಿದ ರಾಜ್ಯ ಸರ್ಕಾರ ಶಿಶು ಮಾರಾಟ ಮಾಡಿದವರಿಗೆ ಮನೆಕಟ್ಟಿಸಿಕೊಟ್ಟಿರುವುದು ಪರಿಹಾರ ಮಾರ್ಗವಾಗದೆ ಮಾರಾಟಕ್ಕೆ ಪ್ರಚೋದನೆ ನೀಡಿದಂತಾಗಿದೆ. ಶಿಶು ಮಾರಾಟದಿಂದ ಬರುವ ಅಲ್ಪ ಸ್ವಲ್ಪ ಹಣದೊಂದಿಗೆ ಸರಕಾರದಿಂದ ಮನೆಯೂ ಸಿಗುತ್ತದೆ ಎಂದಾದರೆ ಜನ ಸಹಜವಾಗಿಯೇ ಇದರ ಲಾಭ ಪಡೆಯಲು ಮುಂದಾಗುವುದರಲ್ಲಿ ಸಂದೇಹವಿಲ್ಲ.

ಹೆಣ್ಣುಗಳ ಸಾಗಾಣಿಕೆ ಒಂದು ಭಯಂಕರ ಪಿಡುಗಾಗಿ ವಿಶ್ವದಾದ್ಯಂತ ಹರಡುತ್ತಿದೆ. ಅನೇಕ ದೇಶಗಳಲ್ಲಿ ಶಾಂತಿ ಸ್ಥಾಪನೆ ಮಾಡಲು ನಿಂತ ವಿಶ್ವಸಂಸ್ಥೆಯ ಸಿಬ್ಬಂದಿಗಳೂ ಈ ಹಣಗಳಿಸುವ ಧಂದೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪಗಳಿವೆ. ಶಿಶುಕಲ್ಯಾಣ, ವನಿತಾ ಉದ್ಧಾರದ ತಲೆ ಪಟ್ಟಿ ಪಡೆದ ಸಂಸ್ಥೆಗಳೂ ಮುಗ್ಧ ಹೆಣ್ಣು ಮಕ್ಕಳನ್ನು ವೇಶ್ಯಾವೃತ್ತಿಗೆ ಒದಗಿಸುತ್ತಿರುವ ಉದಾಹರಣೆಗಳಿವೆ.

ಹೆಣ್ಣು ಮಕ್ಕಳನ್ನು ಮಾರಾಟ ಮಾಡುತ್ತಿರುವವರು ಮಾನವೀಯತೆಯ ಎಲ್ಲ ನೈತಿಕ ತಡೆಗಳನ್ನು ಉಲ್ಲಂಘಿಸುತ್ತಿದ್ದಾರೆ. ಕಳೆದ ಒಂದು ದಶಕದಲ್ಲಿ ಮೂರು ಕೋಟಿಗೂ ಹೆಚ್ಚಿನ ಮಹಿಳೆಯರು ಮತ್ತು ಎಳೆಯರನ್ನು ವೇಶ್ಯಾವಾಟಿಕೆ ಮತ್ತು ಅನೈತಿಕ ಗುಲಾಮಗಿರಿಗೆ ಇಳಿಸಿದ್ದಾರೆ. ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ದಕ್ಷಿಣ ಏಷ್ಯಾದ ದೇಶಗಳ ವಾರ್ಷಿಕ ಉತ್ಪನ್ನದಲ್ಲಿ ಸುಮಾರು ಪ್ರತಿಶತ ೧೪ರಷ್ಟು ಆದಾಯ ಬರುವುದು ಹೆಣ್ಣುಗಳ ಲೈಂಗಿಕ ಶೋಷಣೆಯಿಂದ. ಯಾವುದೇ ಬಹುರಾಷ್ಟ್ರೀಯ ಕಂಪನಿಗಿಂತ ಹೆಚ್ಚು ವೇಗವಾಗಿ ವೇಶ್ಯಾವಾಟಿಕೆಯ ಉದ್ದಿಮೆ ಬೆಳೆಯುತ್ತಿದೆ. ಹೆಣ್ಣುಗಳ ಬಡತನವನ್ನು ಶೋಷಣೆಯ ಸಾಧನವಾಗಿ ಬಳಸಿಕೊಂಡು ಇಂಥ ಅಮಾನವೀಯತೆಗೆ ದೂಡುತ್ತಿರುವುದು ಹಣ ಮತ್ತು ಅಧಿಕಾರಶಾಹಿ ವ್ಯವಸ್ಥೆ.

ಹಿಂದೆ ಹೆಣ್ಣು ಮಕ್ಕಳ ಸಾಗಣೆ ಮತ್ತು ಮಾರಾಟವಾಗುತ್ತಿತ್ತು. ಲೈಂಗಿಕ ಶೋಷಣೆಗಾಗಿ ಮನೆಕೆಲಸ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ಒತ್ತೆ ದುಡಿತಕ್ಕಾಗಿ ಮಾತ್ರ ಸೀಮಿತವಾಗಿತ್ತು. ಆದರೆ ಈಗ ಪರಿಸ್ಥಿತಿ ಇನ್ನೂ ವಿಕೃತಗೊಳ್ಳುತ್ತಿದೆ. ಪರದೇಶದ ಕಾಮುಕರು ಎಳೆಯ ಮಕ್ಕಳನ್ನು ದತ್ತು ಸ್ವೀಕರಿಸುವ ನೆಪದಲ್ಲಿ ಸರಬರಾಜು ಮಾಡುವುದರಿಂದ ಹಿಡಿದು, ಕಿಡ್ನಿ, ಕಣ್ಣಿನ ಪಾಪೆ, ಚರ್ಮ, ಮೂಳೆ, ಮಜ್ಜೆ, ಜಠರ ಮುಂತಾದ ಅಂಗಾಂಗಗಳ ಕಸಿಗೂ ಎಳೆ ಮಕ್ಕಳನ್ನು ಸಾಗಿಸಿ ಮಾರಾಟ ಮಾಡಲಾಗುತ್ತಿದೆ. ಸುಲಭದಲ್ಲಿ ಸಿಗುವವರು ಹೆಣ್ಣು ಮಕ್ಕಳು ಮಾತ್ರ. ಹೀಗಾಗಿ ಅವರ ಶೋಷಣೆಯೇ ನಿರಂತರವಾಗಿ ನಡೆಯುತ್ತಿದೆ.

ಭಾರತದ ಸೆಂಟ್ರಲ್ ಅಡಾಪ್ಷನ್ ಏಜೆನ್ಸಿ ಹಲವು ಅನಾಥಾಲಯಗಳ ಲೈಸನ್ಸ್ ರದ್ದು ಮಾಡಿದೆ. ಅಂಥವುಗಳಲ್ಲಿ ಹೈದರಾಬಾದಿನ ಸೈಂಟ್ ಥೇರೆಸಾ ಆಸ್ಪತ್ರೆಯ ಅಂಗವಾದ ಟೆಂಡರ್ ಲಿವಿಂಗ್ ಕೇರ್ ಸಂಸ್ಥೆಯನ್ನು (ಬಹುಶಃ ಕೊಂಚಾವರಂ ಮೊದಲಾದ ತಾಂಡಾಗಳ ಮಕ್ಕಳನ್ನು ಇಲ್ಲಿಗೇ ಕೊಂಡೊಯ್ದಿರಬಹುದು.) ತರಾಟೆಗೆ ತೆಗೆದುಕೊಳ್ಳಲಾಗಿದೆ.[೨೫]

ಲೈಸನ್ಸ್ ಮುಟ್ಟುಗೋಲಾದರೆ ಈ ಸಂಸ್ಥೆಗಳು ಇನ್ನೊಂದು ಹೆಸರಿನಿಂದ ಕೆಲಸ ಮುಂದುವರಿಸುತ್ತವೆ. ಇಲ್ಲಿನ ಕೆಲವು ಪ್ರಖ್ಯಾತ ಅನಾಥಾಶ್ರಮಗಳ ಬಳಿ ಏಜೆಂಟರು ಮತ್ತು ಸೂಲಗಿತ್ತಿಯರ ತಂಡಗಳಿವೆ. ಇವು ಗರ್ಭಿಣಿ ಲಂಬಾಣಿ ಮಹಿಳೆಯರನ್ನು ಹುಡುಕಿ ಹುಟ್ಟುವ ಮೊದಲೇ ಮಗುವನ್ನು ಬುಕ್ಕಿಂಗ್ ಮಾಡಿ ಒಂದಿಷ್ಟು ರೂಪಾಯಿಗಳಿಗೆ ಕಂದಮ್ಮಗಳನ್ನು ಖರೀದಿಸಿ ಅನಾಥಾಶ್ರಮಕ್ಕೆ ಒದಗಿಸುತ್ತಿವೆ. ತಮ್ಮದು 'ಧರ್ಮ ಕಾರ್ಯ' ಪಾಪದ ಲಂಬಾಣಿ ಆದಿವಾಸಿಗಳು ಹೆಣ್ಣುಮಗು ಹುಟ್ಟುತ್ತಲೇ ಅದನ್ನು ಕೊಂದು ಹಾಕುತ್ತಾರೆ. ಅವರಿಗೆ ಹಣ ಕೊಟ್ಟು ಮಗುವನ್ನು ಖರೀದಿಸುವುದರಿಂದ ತಾಯಿ ಮತ್ತು ಮಗು ಇಬ್ಬರಿಗೂ ಒಳ್ಳೆಯ ಭವಿಷ್ಯ ಕೊಡಲಾಗುತ್ತದೆ ಎಂದು ಈ ಸಂಸ್ಥೆಗಳು ಹೇಳಿಕೊಳ್ಳುತ್ತವೆ.

ಮಾನವಾಧಿಕಾರ ಆಯೋಗ ನಡೆಸಿದ ಅಧ್ಯಯನದಲ್ಲಿ ಶೇ ೨೪ರಷ್ಟು ಹೆಣ್ಣುಗಳು ೧೫ ವರ್ಷ ಪ್ರಾಯಕ್ಕಿಂತ ಮೊದಲೇ ವೇಶ್ಯಾವಾಟಿಕೆ ಸೇರಿದ್ದರು. ಭಾರತ ಮತ್ತು ಪೌರ್ವಾತ್ಯ ದೇಶಗಳಲ್ಲಿ ಎಳೆಯ ಪ್ರಾಯದ ಹೆಣ್ಣುಗಳಿಗೆ ಬೇಡಿಕೆ ಹೆಚ್ಚು. ಇವರಲ್ಲಿ ಕಾಯಿಲೆ ಇರುವುದಿಲ್ಲ ಎಂದು ನಂಬಿಕೆ. ಅಪ್ರಾಪ್ತ ವಯಸ್ಸಿನ ಹುಡುಗಿಯರನ್ನು ಕೂಡಿದರೆ ಸ್ತ್ರೀ ರೋಗಗಳು ಗುಣವಾಗುತ್ತವೆ ಎಂಬ ಮೂಢ ನಂಬಿಕೆಗಳು ಭಾರತದಲ್ಲಿವೆ. ಇಂಥವರ ಹಸಿವು ತುಂಬಿಸಲು ಸಾವಿರಾರು ಹೆಣ್ಣು ಮಕ್ಕಳ ಅಪಹರಣ ಕಳ್ಳಸಾಗಣೆ ನಡೆಯುತ್ತಿದೆ. ಇನ್ನೂ ಪ್ರಾಯ ತುಂಬದ ಮುಗ್ಧ ಮಕ್ಕಳು ಸೆಕ್ಸ್ ಮಾರುಕಟ್ಟೆಯ ಬಲಿಪಶುಗಳಾಗುತ್ತಿದ್ದಾರೆ. ಇವರಲ್ಲಿ ಕೊಂಚಾವರಂನ ಮಕ್ಕಳ ಸಂಖ್ಯೆ ಎಷ್ಟು ಬಲ್ಲವರಾರು.

ಹೆಣ್ಣು ಭ್ರೂಣ ಹತ್ಯೆಯ ಪ್ರಮಾಣ ಏರಿಕೆಯಾಗುತ್ತಿದೆ. ಲಿಂಗ ಪತ್ತೆ ಕಾನೂನು ಬಾಹಿರವಾಗಿದೆ. ೧೯೯೬ರಲ್ಲಿ ಕೇಂದ್ರ ಸರಕಾರ ಕಾನೂನನ್ನು ಜಾರಿಗೆ ತಂದಿದೆ. ಸಾಕಷ್ಟು ತಿದ್ದುಪಡಿಯನ್ನು ಮಾಡಲಾಗಿದೆ. ಆದರೂ ಹೆಚ್ಚಿನ ಪ್ರಯೋಜನ ಕಂಡು ಬಂದಿಲ್ಲ. ೨೦೦೧ರ ಜನಗಣತಿಯ ವರದಿಯಂತೆ ಪ್ರತಿಸಾವಿರ ಪುರುಷರಿಗೆ ೯೩೩ ಮಹಿಳೆಯರಿದ್ದಾರೆ. ೦.೬ ವಯಸ್ಸಿನ ಮಕ್ಕಳಲ್ಲಿ ಗಂಡಿಗೆ ೯೨೭ ಹೆಣ್ಣು ಮಕ್ಕಳಿವೆ. ಕಳೆದ ಆರು ವರ್ಷಗಳಲ್ಲಿ ಹೆಣ್ಣು ಭ್ರೂಣಹತ್ಯೆ ಇನ್ನೂ ಹೆಚ್ಚಾಗಿರುವುದು ಕಂಡುಬಂದಿದೆ.

ರಾಜ್ಯದಲ್ಲಿ ಸಾವಿರ ಗಂಡಿಗೆ ೯೪೯ ಹೆಣ್ಣು ಮಕ್ಕಳಿದ್ದರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರತಿಸಾವಿರ ಗಂಡಿಗೆ ೯೬೪ ಹೆಣ್ಣು, ಕೊಪ್ಪಳ ನಗರ ೯೯೩, ಕೊಪ್ಪಳ ಗ್ರಾಮೀಣ ೯೩೪, ಬೀದರ ೯೪೮, ಹೆಣ್ಣು ಮಕ್ಕಳಿದ್ದಾರೆ. ಇದೇ ಸ್ಥಿತಿ ಮುಂದುವರಿದರೆ ಹರಿಯಾಣ (೮೭೦) ದಲ್ಲಿ ಈಗಾಗಲೆ ಮಹಿಳೆಯರನ್ನು ಕೊಂಡು ತಂದು ಮದುವೆಯಾಗುತ್ತಿರುವ ಸ್ಥಿತಿ ಇಲ್ಲೂ ಬಂದರೆ ಆಶ್ಚರ್ಯ ಪಡಬೇಕಿಲ್ಲ.[೩೦]

ಭ್ರೂಣ ಲಿಂಗ ಪತ್ತೆ ಮಾಡುವುದು ಕಂಡುಬಂದರೆ ಮೊದಲ ಅಪರಾಧದಲ್ಲಿ ಮೂರು ವರ್ಷ ಜೈಲು ಮತ್ತು ೧೦ ಸಾವಿರ ರೂ. ದಂಡ ವಿಧಿಸಲಾಗುತ್ತದೆ. ಈ ಕಾನೂನು ಕಡ್ಡಾಯವಾಗಿ ಜಾರಿಗೊಳಸಿದ ಉದಾಹರಣೆಗಳು ಇಲ್ಲವೆಂದೇ ಹೇಳಬೇಕು.

ಹೆಣ್ಣು ಭ್ರೂಣಹತ್ಯೆಯಂತಹ ಜೀವ ವಿರೋಧಿ ಪದ್ಧತಿಗಳಿಗೆ ಒಟ್ಟಾರೆಯಾಗಿ ಹೇಳಬೇಕೆಂದರೆ ಪ್ರಬಲವಾದ ಪಿತೃಪ್ರಧಾನತೆಯೇ ಕಾರಣವನ್ನೆಬಹುದು. ಪಿತೃಪ್ರಧಾನತೆಯು ಬಿತ್ತುವ ಆನೇಕ ಮೌಲ್ಯಗಳು ಹೆಣ್ಣಿನ ಬಗೆಗಿನ ಸಾಮಾಜಿಕ ಸ್ಪಂದನವನ್ನೇ ಇಲ್ಲವಾಗಿಸಿ ಬಿಡುತ್ತವೆ. ಅವಳನ್ನು ಸಂಪೂರ್ಣವಾಗಿ ಬಳಸಿಕೊಳ್ಳತ್ತಿದ್ದರೂ ಅವಳ ಅಗತ್ಯವೇ ಇಲ್ಲ ಎನ್ನುವ ಧೋರಣೆಯನ್ನು ರೂಪಿಸುತ್ತವೆ. ಈ ಹಂತದಲ್ಲಿ ಕುಟುಂಬಗಳಿಗೆ ಹೊರೆಯಾಗಿ ಭಾವಿತವಾಗುವ ಹೆಣ್ಣನ್ನು ಕಡೆಗಣಿಸುವ ನಾಮಾವಶೇಷಗೊಳಿಸುವ ಎಲ್ಲ ಬಗೆಯ ಆಚರಣೆಗಳು ಚಾಲ್ತಿಗೆ ಬರುತ್ತಿವೆ. ಅದರ ಪರಿಣಾಮವಾಗಿ ಹುಟ್ಟುವುದೇ ಸಾಯುವುದಕ್ಕಾಗಿ ಎನ್ನುವ ರೀತಿಯಲ್ಲಿ ಭ್ರೂಣಹತ್ಯೆ ಶಿಶುಹತ್ಯೆಗಳು ನಡೆಯುತ್ತವೆ. ಮಾನವ ಜೀವನದಲ್ಲಿ ಅತ್ಯಂತ ಭಾವನಾತ್ಮಕವಾದುದು ಎಂದು ಗುರುತಿಸುವ ಕುಟುಂಬ, ತಂದೆ-ತಾಯಿ ಮೊದಲಾದ ಸಂಬಂಧಿಕರೆಲ್ಲರೂ ಮೃತ್ಯು ಸ್ವರೂಪವಾಗಿ ಬಿಡುತ್ತಾರೆ.

೩.೧೪ ಜೋಗತಿ ಅಥವಾ ವೇಶ್ಯೆಯಾಗಿ ಮಹಿಳೆ :

ಮಹಿಳಾ ಶೋಷಣೆಯ ಅತಿರೇಕವೆಂದರೆ ವೇಶ್ಯಾವಾಟಿಕೆ. ಪಿತೃಪ್ರಧಾನ ಸಮಾಜದ ಬಹುಮುಖ್ಯ ಅಂಶಗಳಲ್ಲಿ ಇದೂ ಒಂದು. ಮಹಿಳೆಯನ್ನು ಉಪಭೋಗದ ವಸ್ತುವಾಗಿ ಪರಿಗಣಿಸುವುದು. ನಿಸರ್ಗದ ಎಲ್ಲ ಜೀವಿಗಳಲ್ಲಿ ಲೈಂಗಿಕತೆಯ ಸರ್ವ ಸಾಧಾರಣ ಲಕ್ಷಣವಾಗಿರುವಂತೆ ಮಾನವನಲ್ಲಿ ಲೈಂಗಿಕ ಭಾವನೆಗಳು ಸಹಜವಾಗಿದ್ದರೂ, ಪಿತೃಪ್ರಧಾನ ಸಮಾಜವು ಅದರಲ್ಲಿ ಲಿಂಗಭೇದವನ್ನು ಅಳವಡಿಸಿ ದ್ವಿಮುಖ ಮೌಲ್ಯ ವ್ಯವಸ್ಥೆಯನ್ನು ರೂಪಿಸಿದೆ. ಪಿತೃಪ್ರಧಾನತೆಯೇ ತನ್ನ ಅನುಕೂಲಕ್ಕಾಗಿ ಸ್ತ್ರೀ ಪುರುಷರು ಲೈಂಗಿಕ ಚಟುವಟಿಕೆಯ ಬಗ್ಗೆ ಹಲವಾರು ಮಿಥ್‌ಗಳನ್ನು ರೂಪಿಸಿ ಅವುಗಳನ್ನು ಸಾಮಾಜೀಕರಣಗೊಳಿಸುವ ಮೂಲಕ ಸ್ತ್ರೀ ದೇಹದ ಮೇಲೆ ತನ್ನ ಹತೋಟಿಯನ್ನು ನಿರಂತರವಾಗಿ ಉಳಿಸಿಕೊಳ್ಳಲು ಪ್ರಯತ್ನಿಸಿದೆ. ಪುರುಷನಂತೆಯೇ ಮಹಿಳೆಗೂ ಇರುವ ಲೈಂಗಿಕ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಸಲುವಾಗಿ ಅವಳ ಮೇಲೆ ಅತಿಯಾಗಿ ಪಾವಿತ್ರ್ಯದ ನಿರ್ಬಂಧಗಳನ್ನು ಹೇರುತ್ತಿರುವಂತೆಯೇ ಪುರುಷನ ಲೈಂಗಿಕಾಸ್ತಕಿಗಳನ್ನು ತಣಿಸುವ ಪ್ರೋತ್ಸಾಹಿಸುವ ದಾರಿಯಾಗಿ ವೇಶ್ಯಾಪದ್ಧತಿಯನ್ನು ರೂಪಿಸಿಕೊಂಡಿದೆ. ಪುರುಷನ ಲೈಂಗಿಕಾಸಕ್ತಿಯನ್ನು ತೃಪ್ತಿ ಪಡಿಸುವ ಸಾಧನಾವಾಗಿ ಸಮಾಜದ ಕೆಲವು ಮಹಿಳೆಯರನ್ನು ಬಳಸಿಕೊಳ್ಳುತ್ತಲೇ ಅವರನ್ನು ಸಮಾಜ ಬಾಹಿರವಾಗಿ ಪರಿಗಣಿಸಲಾಗಿದೆ. ಪರಿಣಾಮವಾಗಿ ಈ ಸಮಾಜದಲ್ಲಿ ಒಂದೆಡೆ ಮಹಿಳೆ ಪಾವಿತ್ರ್ಯದಲ್ಲಿ ಬಂಧಿತಳಾಗಿ ನರಳುತ್ತಿದ್ದರೆ. ಇನ್ನೊಂದಡೆ ಅತಿಯಾದ ಲೈಂಗಿಕ ಆಕ್ರಮಣಕ್ಕೆ ಒಳಗಾಗಿ ನರಳುತ್ತಿದ್ದಾಳೆ. ಹೀಗೆ ಮಹಿಳೆಯರನ್ನು ಎರಡು ಅತಿಗಳಲ್ಲಿ ಇಡುವ ಮೂಲಕವೇ ಪುರುಷ ತನ್ನ ಸುಖವನ್ನು, ಕ್ಷೇಮವನ್ನು, ಅಧಿಕಾರವನ್ನು ಯಶಸ್ವಿಯಾಗಿ ಸಾಧಿಸಿಕೊಳ್ಳುತ್ತಾನೆ. ಆ ಕಾರಣಕ್ಕಾಗಿ ಸಾಮಾಜಿಕ ಮಾನವಶಾಸ್ತ್ರಜ್ಞರು ಎಲ್ಲಿಯವರೆಗೆ ಕುಟುಂಬ ಹಾಗೂ ಮದುವೆಗಳಂತಹ ಸಾಮಾಜಿಕ ಸಂಸ್ಥೆಗಳು ಲಿಂಗತಾರತಮ್ಯಕ್ಕೆ ಒಳಗಾಗುತ್ತವೆಯೋ ಅಲ್ಲಿಯವರೆಗೆ ವೇಶ್ಯಾ ಸಮಸ್ಯೆಯಂತಹವು ಜೀವಂತವಾಗಿರುತ್ತವೆ ಎನ್ನುತ್ತಾರೆ.

ಹೈದರಾಬಾದ ಕರ್ನಾಟಕದ ಸಂದರ್ಭದಲ್ಲಿ ವೇಶ್ಯಾಪದ್ಧತಿಯು ಧಾರ್ಮಿಕಾಸಕ್ತಿಯ ಜೊತೆಗೆ ತಳುಕು ಹಾಕಿಕೊಂಡಿರುವುದು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದ್ದಾಗಿದೆ. ಮಹಾರಾಷ್ಟ್ರ ಉತ್ತರ ಕರ್ನಾಟಕ ಇತ್ಯಾದಿ ಹಲವಾರು ಪ್ರದೇಶಗಳಲ್ಲಿ ಆಚರಣೆಯಲ್ಲಿರುವ ದೇವದಾಸಿ ಪದ್ಧತಿಯು ಅಂತಿಮವಾಗಿ ಮುಂಬೈಯಂತಹ ದೊಡ್ಡ ದೊಡ್ಡ ನಗರಗಳಲ್ಲಿ ವೇಶ್ಯಾವಾಟಿಕೆಯನ್ನು ಪೋಷಿಸುತ್ತದೆ ಎಂಬುದು ಹಲವಾರು ಅಧ್ಯಯನಗಳಿಂದ ಸಾಬೀತಾಗಿದೆ. ಲಿಂಗಭೇದದಷ್ಟೇ ಜಾತಿ ಭೇದವೂ ಪ್ರಬಲವಾಗಿರುವುದರಿಂದ ಮತ್ತು ಈ ಎರಡೂ ಮಹಿಳೆಯರ ಹಾಗೂ ಸಮಾಜದ ಕೆಳವರ್ಗದವರ ಆರ್ಥಿಕ ಸ್ಥಿತಿಗತಿಯ ಮೇಲೆ ಪರಿಣಾಮ ಬೀರುವುದರಿಂದಾಗಿ ಆ ಸಮಾಜದ ಮಹಿಳೆಯರಿಗೆ ವೇಶ್ಯಾವಾಟಿಕೆಯ ದಾರಿ ಹತ್ತಿರವಾಗುತ್ತದೆ. ಹಾಗಾಗಿ ದೇವದಾಸಿಯಂತಹ, ಜೋಗತಿಯಂತಹ ಆಚರಣೆಗಳು ಸಮಾಜದ ಕೆಳವರ್ಗದ ಹೆಣ್ಣು ಮಕ್ಕಳಿಗೆ ಮೀಸಲಾಗಿವೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಧರ್ಮದ ಹೆಸರಿನಲ್ಲಿ ನಡೆದಷ್ಟು ಶೋಷಣೆ ಮತ್ಯಾವ ರೀತಿಯಲ್ಲೂ ನಡೆದಿಲ್ಲ. ದೇವರ ಕುರಿತ ಭಯವನ್ನು ಬಳಸಿಕೊಂಡು ಒಂದು ವರ್ಗ ಇನ್ನೊಂದು ವರ್ಗದ ಪಾಲಿಗೆ

ಭಯೋತ್ಪಾದಕರಾದವದ್ದು ವಿಪರ್ಯಾಸ. ಮಹಿಳೆ ಅಂತಹ ಶೋಷಣೆಯ ಪ್ರತೀಕವಾಗಿದ್ದಾಳೆ. ದೇವರ ಹೆಸರಲ್ಲಿ ಆಕೆಗಾದ ಅವಮಾನ ಅತ್ಯಾಚಾರ ಹೇಳತೀರದು. ದೇವರಿಗೂ ಮಹಿಳೆಗೂ ದೇವಾಲಯಕ್ಕೂ ನಂಟನ್ನು ಕಟ್ಟಿ ಆಕೆಯನ್ನು ಅರೆ ಜೆತ್ತಲೆಯಾಗಿ, ಜೆತ್ತಲೆಯಾಗಿ, ಪಾತರದವರು, ದೇವಾದಾಸಿ, ಜೋಗತಿ, ಸೂಳೆ, ವೇಶ್ಯೆ ಎಂದೆಲ್ಲ ಕರೆಯಲಾಗಿದೆ.

ವೇಶ್ಯಾವೃತ್ತಿಗೆ ಪೂರಕವಾದ ಧಾರ್ಮಿಕ ಆಚರಣೆಗಳಾದ ದೇವದಾಸಿ ಹಾಗೂ ಗೆಜ್ಜೆಪೂಜೆಯನ್ನು ೧೯೦೯ರಲ್ಲಿಯೆ ನಿಷೇಧಿಸಲಾಗಿದ್ದರೂ ಇದುವರೆಗೆ ಈ ಆಚರಣೆ ಅಲ್ಲಲ್ಲಿ ಜೀವಂತವಾಗಿದೆ.

ಕೊಪ್ಪಳ ಜಿಲ್ಲೆಯ ಹೆಸರೂರು ಹಿರೆಸಿಂದೋಗಿ ಉಜ್ಜಯಿನಿ ಪೀಠವು ಶಾಖಾಮಠ ಮಾದಿಗ ಜನಾಂಗ, ದೇವದಾಸಿ ಪದ್ಧತಿಯನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ಇಲ್ಲಿಯ ಯುವತಿಯರು ವಿವಾಹವಾಗಲು ಬಯಸಿದರೂ ಸಮಾಜ ಅದಕ್ಕೆ ಅನುಮತಿ ನೀಡುತ್ತಿಲ್ಲ. ಸುಮಾರು ನೂರೈವತ್ತು ವರ್ಷಗಳ ಹಿಂದೆ ಈ ಮಠ ಸ್ಥಾಪನೆಯಾಗಿದೆ. ಆ ಜನಾಂಗದ ಮಹಿಳೆಯರನ್ನು ದೇವದಾಸಿಯರನ್ನಾಗಿ ಮಾಡಲೇಬೇಕು, ಇಲ್ಲವಾದರೆ ಜನಾಂಗ ನಾಶವಾಗುತ್ತದೆಂದು ನಂಬಿಸಲಾಗಿದೆ.

ಹುಡುಗಿ ಋತುಮತಿಯಾದೊಡನೆ ಅಕ್ಕಪಕ್ಕದ ಹಳ್ಳಿಯ ಶ್ರೀಮಂತನೊಬ್ಬ ೮೦೦ ರೂಗಳನ್ನು ಕೊಟ್ಟು ಊಟಕ್ಕೆ ಹಾಕಿಸುವ ಮೂಲಕ ಆಕೆಯನ್ನು ಖರೀದಿಸುತ್ತಾನೆ. ಅನಂತರ ತನಗಿಷ್ಟ ಬಂದಾಗ ಬಂದು ಹೋಗುತ್ತಾನೆ. ಹೀಗೆ ಹಗಲನ್ನು ಕಾಣದ ಇವರ ಬದುಕು ಆರಂಭವಾಗುತ್ತದೆ. ಬುದ್ಧಿ ಬಲಿಯುವ ಮೊದಲೇ ಬದುಕಿನ ಬಲಿಯಾಗಿರುತ್ತದೆ. ಆ ಊರವರಿಗೆ ಅದೊಂದು ವಿಶೇಷವಲ್ಲ ಸಮಸ್ಯೆ ಎಂದು ಭಾವಿಸಿಯೇ ಇಲ್ಲ. ಶಿವರಾತ್ರಿ ಮತ್ತು ಶ್ರಾವಣ ದಸರಾಗಳಿಗೆ ಇಲ್ಲಿ ಉತ್ಸವ ನಡೆಯುತ್ತದೆ. ಇಲ್ಲಿಯ ಹೆಣ್ಣು ಮಕ್ಕಳಿಗೆ ಮದುವೆ ನಿಷಿದ್ಧ. ಒಂದು ವೇಳೆ ಮದುವೆಯಾದರೆ ಮರುಳಸಿದ್ಧನ ಶಾಪಕ್ಕೆ ಬಲಿಯಾಗಬೇಕಾಗುತ್ತದೆ.

ಮಠದ ಪೂಜಾರಿಯೇ ದೇವದಾಸಿಯಾಗುವವಳಿಗೆ ತಾಳಿ ಕಟ್ಟುತ್ತಾನೆ. ೫೦೦೦ ರೂ ಸೀರೆ ಕುಪ್ಪಸ ಹಾಸಿಗೆ ಹೊದಿಗೆ ಕೊಟ್ಟು ಮೊದಲು ಅನುಭವಿಸುವವನು ಕೂಡಿಕೆ ಮಾಡಿಕೊಳ್ಳುತ್ತಾನೆ. ಈ ಎರಡು ಊರುಗಳಲ್ಲಿ ನೂರಾರು ಜನ ದೇವದಾಸಿಯರಿದ್ದಾರೆ. ಸರಕಾರದಿಂದ ಇವರಿಗೆ ಯಾವುದೇ ಸಹಾಯ ದೊರೆತಿಲ್ಲ. ಇಲ್ಲಿ ವಿದ್ಯಾವಂತ ಹೆಣ್ಣು ಮಕ್ಕಳಿದ್ದಾರೆ. ಆದರೂ ಅವರನ್ನು ಮದುವೆಯಾಗುವ ಯುವಕರಾರೂ ಇಲ್ಲ. ಇಂಥ ಅನಿಷ್ಟ ಕಂದಾಚಾರಕ್ಕೆ ವಿದಾಯ ಹೇಳಲು ಯುವತಿಯರು ಮುಂದೆ ಬಂದಾಗಲೂ ಯುವಕರು ಭಯಪಡುತ್ತಾರೆ. ಹೀಗಾಗಿ ಯಾರದೋ ಬಯಕೆಗೆ ಜೀವನ ತೇಯುವುದು ಇವರ ಬದುಕಿನ ಸ್ಥಿತಿಯಾಗಿದೆ. ಮಾದಿಗ, ವಾಲ್ಮೀಕಿ ಜನಾಂಗದವರನ್ನೇ ಹೆಚ್ಚಾಗಿ ದೇವದಾಸಿಯರನ್ನಾಗಿಸಲಾಗುತ್ತದೆ. ಕ್ವಚಿತ್ತಾಗಿ ಇತರ ಜನಾಂಗದವರೂ ಕಂಡುಬರುತ್ತಾರೆ. ಮೇಲುವರ್ಗದವರು ಗಂಡು ಸಂತಾನ ಪಡೆಯುವುದಕ್ಕಾಗಿ ತಮ್ಮ ಹೆಣ್ಣು ಮಗಳನ್ನು ದೇವದಾಸಿ ಬಿಟ್ಟಿದ್ದು ತಾನು ಬ್ರಾಹ್ಮಣಳೆಂದು ಎಲ್ಲೂ ಹೇಳಬಾರದೆಂದು ನಿರ್ಬಂಧಿಸಿದ್ದರೆಂದು ಚನ್ನಣ್ಣ ವಾಲಿಕಾರರು ಹೇಳುತ್ತಾರೆ. ದೇವದಾಸಿ ಆಚರಣೆಯ ಹಿಂದಿನ ಆಶಯವೇನೇ ಇರಲಿ ಅದು ಮಹಿಳೆಯ ಬದುಕನ್ನು ಹೀನಾಯವಾಗಿಸಿದ್ದು ಸುಳ್ಳಲ್ಲ.[೩೭]

೩.೧೫ ಕಲಾವಿದೆ. :

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಇಂದಿಗೂ ಸಂಗೀತ, ನೃತ್ಯ ಹಾಗೂ ಅಭಿನಯದಂಥ ಪ್ರದರ್ಶನ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವಿಲ್ಲವೆಂದೇ ಹೇಳಬೇಕು. ಮಹಿಳಾ ಕಲಾವಿದರನ್ನು ಕುರಿತು ಗೌರವವಿಲ್ಲ. ಅದರಿಂದಲೇ ಈ ಭಾಗದಲ್ಲಿ ಕಲೆ ಮೈದುಂಬಿ ಬೆಳೆಯಲು ಸಾಧ್ಯವಾಗಿಲ್ಲ.

ಕಲೆ ಎಂದರೆ ವಿವಿಧ ಮಾಧ್ಯಮಗಳ ಮೂಲಕ ತಮ್ಮಲ್ಲಿರುವ ಕೌಶಲ್ಯ ಅಥವಾ ಚತುರತೆಗೆ ವ್ಯಕ್ತಿಗಳು ಅಭಿವ್ಯಕ್ತಿಯನ್ನು ನೀಡುವ ಒಂದು ಕ್ರಮ. ಸಂಗೀತ, ನೃತ್ಯ, ಚಿತ್ರಕಲೆ, ಜನಪದ ಕಲೆಗಳು, ರಂಗಭೂಮಿ ಇವುಗಳು ಕಲಾ ಪ್ರಕಾರಗಳು. ಕಲೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಪ್ರಭಾವಿಸುವ ಅಂಶಗಳೆಂದರೆ ಜಾತಿ ಸಂಪ್ರದಾಯಗಳು ಹಾಗೂ ಆಯಾ ಕಾಲಗಳಲ್ಲಿ ಅಸ್ತಿತ್ವದಲ್ಲಿದ್ದಂಥ ಕಲೆಯನ್ನು ಕುರಿತು ಮನೋಭಾವನೆಗಳು.

ರಾಜಕೀಯ ಸ್ಥಿತ್ಯಂತರಗಳ ಸಂದರ್ಭದಲ್ಲಿ ಮಹಿಳೆಯರನ್ನು ಕೌಟುಂಬಿಕ ಬಂಧನಕ್ಕೆ ಸಿಲುಕಿಸುವ ಸಾಮಾಜಿಕ ವ್ಯವಸ್ಥೆ ಸೃಷ್ಟಿಯಾದಾಗ ಕಲೆಗಳಲ್ಲಿ ಮಹಿಳೆಯರ ಭಾಗವಹಿಸುಕೆಯ ಪ್ರಮಾಣ ಕಡಿಮೆಯಾಯ್ತು. ಜಾತಿ ಶ್ರೇಣಿಯಲ್ಲಿ ಮೇಲಿನ ಸ್ಥರಗಳಲ್ಲಿದ್ದಂಥ ಮಹಿಳೆಯರು ಬಹುಮಟ್ಟಿಗೆ ಮನೆಗೆ ಸೀಮಿತಗೊಳಿಸಲ್ಪಟ್ಟು, ಅವರ ಮೇಲಿನ ನಿರ್ಬಂಧಗಳು ಹೆಚ್ಚು ಬಿಗಿಯಾಗಿದ್ದವು. ಕೆಳಸ್ತರಗಳಲ್ಲಿದ್ದಂಥ ಮಹಿಳೆಯರು ವಿವಿಧ ಕಲಾ ಪ್ರಕಾರಗಳಲ್ಲಿ ಹೆಚ್ಚಾಗಿ ಭಾಗವಹಿಸುವಂತಹ ಸಂದರ್ಭಗಳಿದ್ದು, ಕಲೆ ಎಂಬುದು ಮೇಲ್ಜಾತಿ ಮಹಿಳೆಯರಿಗೆ ನಿಷಿದ್ಧ ಎಂಬ ಭಾವನೆ ಬೆಳೆದು ಬಂದಿತು.

ನೃತ್ಯ ಕಲೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಕ್ರಿ.ಪೂ. ೨ನೇ ಶತಮಾನದಲ್ಲಿ ಇತ್ತು ಎನ್ನುವುದಕ್ಕೆ ಕೆಲವು ದಾಖಲೆಗಳಿವೆ. ನೃತ್ಯ ಹೆಚ್ಚು ಕಡಿಮೆ ಮಹಿಳೆಯರಿಗೇ ಸೀಮಿತವಾದಂತಹ ಒಂದು ಕಲೆಯಾಗಿ ಬೆಳೆದು ಬಂದಿತ್ತು ಎಂದರೆ ಅತಿಶಯೋಕ್ತಿಯಾಗಲಾರದು.

ಕೆಳವರ್ಗದವರು ನೃತ್ಯ ಕಲೆಯನ್ನೇ ವೃತ್ತಿಯನ್ನಾಗಿ ಸ್ವೀಕರಿಸಿದವರು. ದೇವಾಲಯಗಳಲ್ಲಿ ಪವಿತ್ರ ಸ್ಥಳದಲ್ಲಿ ನೃತ್ಯವನ್ನು ದೇವರಿಗೆ ಅರ್ಪಿಸುವ ಪೂಜೆ ಎನ್ನುವಂತ ಭಾವನೆಗಳಿಂದ ಮಾಡುತ್ತಿದ್ದರು. ನೃತ್ಯ ಕಲೆಯನ್ನು ಅಭ್ಯಾಸ ಮಾಡುವುದು ಬಹುಕಾಲದವರೆಗೆ ಮೇಲ್ಜಾತಿಗೆ ಸೇರಿದ ಮಹಿಳೆಯರಿಗೆ ನಿಷಿದ್ಧವಾಗಿತ್ತು. ಆದರೆ ಕಾಲಕ್ರಮೇಣ ನೃತ್ಯ ದೇವಾಲಯದಿಂದ ರಾಜರ ಆಸ್ಥಾನಕ್ಕೂ ಪ್ರವೇಶ ಪಡೆಯಿತು. ಅಲ್ಲಿಂದ ಪ್ರತಿಷ್ಠಿತ ವ್ಯಕ್ತಿಗಳ ಮನೆಗಳಲ್ಲಿ, ಖಾಸಗಿ ನೃತ್ಯ ಪ್ರದರ್ಶನಗಳಲ್ಲಿ ಮಹಿಳೆಯರು ನೃತ್ಯ ಮಾಡುವಂಥ ಪರಂಪರೆ ಬೆಳೆದು ಬಂತು.

ನಮ್ಮ ಸಮಾಜದಲ್ಲಿ ದೇವದಾಸಿ ಪರಂಪರೆಗೆ ಸುದೀರ್ಘ ಇತಿಹಾಸವಿದೆ. ದೇವದಾಸಿಯರ ನೃತ್ಯಕಲೆಯನ್ನು, ದೇವತಾ ಸೇವೆ ಎಂದು ವೈಭವೀಕರಿಸುತ್ತಾ ಅವರನ್ನು ಲೈಂಗಿಕ ಶೋಷಣೆಗೆ ಒಳಪಡಿಸಿದಂತಹ ಉದಾಹರಣೆಗಳು ಚರಿತ್ರೆಯಲ್ಲಿ ಸಾಕಷ್ಟಿವೆ. ಜಾತಿ ವ್ಯವಸ್ಥೆ, ಮೂಢ ನಂಬಿಕೆಗಳು, ಆರ್ಥಿಕ ಮುಗ್ಗಟ್ಟು ಇವೆ ಮುಂತಾದ ಅಂಶಗಳು ದೇವದಾಸಿ ಪದ್ಧತಿಗೆ ಇಂಬು ನೀಡುವಂತವು. ವಿವಾಹ ಎನ್ನುವ ಸಂಸ್ಥೆಯೊಳಗೆ

ಅವರಿಗೆ ಪ್ರವೇಶ ನಿಷೇಧವಾದ್ದರಿಂದ ಅನೇಕ ದೇವದಾಸಿಯರು ವಿವಾಹಿತರ ಸಂಬಂಧಗಳನ್ನು ಹೊಂದಬೇಕಾದಂಥ ಪರಿಸ್ಥಿತಿ ನಿರ್ಮಾಣವಾಯಿತು. ಪುರುಷ ಪ್ರಧಾನ ಮೌಲ್ಯಗಳಿಂದ ಆವೃತ್ತವಾಗಿರುವ ಸಾಮಾಜಿಕ ವ್ಯವಸ್ಥೆ, ಅನೇಕ ಮೇಲ್‌ಜಾತಿಯ ಪುರುಷರು ವಿವಾಹವಾಗಿದ್ದರೂ ದೇವದಾಸಿಯರೊಡನೆ ಬೆಳೆಸಿದ ಸಂಬಂಧವನ್ನು ಒಪ್ಪಿಕೊಂಡಿತು. ಆದರೆ ದೇವದಾಸಿಯೋರ್ವಳು ವಿವಾಹವಾಗಿ ಕುಟುಂಬ ಜೀವನವನ್ನು ಪ್ರವೇಶಿಸಬೇಕೆಂದಾಗ ಆಕೆಗೆ ಸ್ವೀಕೃತಿಯನ್ನು ನೀಡಲಿಲ್ಲ ಇಂತಹ ದ್ವಂದ್ವ ನೈತಿಕ ಮೌಲ್ಯಗಳು ಸಮಾಜದಲ್ಲಿ ತಾಂಡವವಾಡುತ್ತಾ ಅನೇಕ ಮಹಿಳೆಯರನ್ನು ವೇಶ್ಯವೃತ್ತಿಗೆ ತಳ್ಳುವಂಥ ಪರಿಸ್ಥಿತಿಯನ್ನುಂಟು ಮಾಡಿವೆ. ನೃತ್ಯಗಾರ್ತಿಯರಿಗೆ ಒಂದು ರೀತಿಯ ನಕಾರಾತ್ಮಕ ಚಿತ್ರಣವನ್ನು ನೀಡಿದ್ದರಿಂದ ಆಸಕ್ತಿ ಇದ್ದರೂ ಆನೇಕ ಮಹಿಳೆಯರು ನೃತ್ಯವನ್ನು ಕಲಿಯಲು ಸಾಧ್ಯವಾಗಲಿಲ್ಲ. ನೃತ್ಯಕಲೆ ಅತ್ಯಂತ ಪ್ರಭಾವಿ ಹಾಗೂ ಸೂಕ್ಷ್ಮ ಸಂವೇದನೆಯ ಕಲೆಯಾಗಿದ್ದರೂ ಅದು ಮೇಲ್‌ಜಾತಿ, ಮೇಲ್‌ವರ್ಗದ ಮಹಿಳೆಯರು ಕಲಿತು ಪ್ರದರ್ಶಿಸುವಂತಹುದಲ್ಲ ಎಂಬ ಭಾವನೆ ಇದ್ದುದರಿಂದ ಜಾತಿ ವರ್ಗ ಭೇದಗಳನ್ನು ಮೆಟ್ಟಿ ಬೆಳೆಯಲು ಬಹುಕಾಲದವರೆಗೆ ಸಾಧ್ಯವಾಗಲಿಲ್ಲ.

ವೇಶ್ಯಾ ಪದ್ಧತಿ ಬೆಳೆದಂತೆಲ್ಲ ಕುಲೀನ ಮಹಿಳೆಯರ ಸಂಸಾರಕ್ಕೆ ಕಂಟಕವೊದಗಿದ ಕಾರಣ ಜನ ಲಲಿತ ಕಲೆಗಳನ್ನು ಧಿಕ್ಕರಿಸಲು ಪ್ರಾರಂಭಿಸಿದರು. ಹೆಣ್ಣು ಮಕ್ಕಳಿಗೆ ಆಸ್ಥೆಯಿಂದ ಕಲಿಸುತ್ತಿದ್ದ ಸಂಗೀತ ನೃತ್ಯ ನಾಟಕಾದಿ ಕಲೆಗಳನ್ನು ಜನ ಬಹಿಷ್ಕರಿಸಿದರು. ಈ ಕಲೆಗಳು ಹುಡುಗಿಯರನ್ನು ಕೆಟ್ಟ ದಾರಿಗೆಳೆಯುತ್ತವೆಂಬ ನಂಬಿಕೆಯೇ ಇದಕ್ಕೆ ಕಾರಣ. ಇದರಿಂದಾಗಿ ಮಹಿಳೆ ಮನೆಯಿಂದ ಹೊರಗೆ ಕಾಲಿಡಲು ಶಿಕ್ಷಣ ಪಡೆಯಲು ಸಹ ಸಾಧ್ಯವಾಗದೇ ಹೋಯಿತು.

ರಂಗಭೂಮಿಯ ಚರಿತ್ರೆಯನ್ನು ಪರಿಶೀಲಿಸಿದಾಗ ತಿಳಿದು ಬರುವ ವಿಷಯವೆಂದರೆ ರಂಗಭೂಮಿಯ ಮುಂಚೂಣಿಯಲ್ಲಿದ್ದಂಥವರೆಲ್ಲ ಹೆಚ್ಚು ಕಡಿಮೆ ಪುರುಷರೇ ಆಗಿದ್ದರು ಎನ್ನುವುದು. ದೇವಾಲಯಗಳಲ್ಲಿ ಹಾಗೂ ಇತರ ಸ್ಥಳಗಳಲ್ಲಿ ಪ್ರದರ್ಶಿಸುತ್ತಿದ್ದ ನಾಟಕಗಳಲ್ಲಿ ಮಹಿಳೆಯರು ಪಾತ್ರವಹಿಸುತ್ತಿದ್ದರು. ಅವರ ಪ್ರತಿಭೆಗೆ ವ್ಯಕ್ತಿತ್ವಕ್ಕೆ ಸಿಗಬೇಕಾದ ಗೌರವಸಿಗುತ್ತಿರಲಿಲ್ಲ. ಅದರಲ್ಲೂ ಸ್ತ್ರೀ ಪುರುಷರಿಬ್ಬರು ಒಟ್ಟಾಗಿ ನಟಿಸುತ್ತಿದ್ದ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದ ಮಹಿಳೆಯರನ್ನು ಕುರಿತಂತೆ ಅನೇಕ ತಪ್ಪು ಕಲ್ಪನೆಗಳಿದ್ದವು. ಇಂತಹ ಭಾವನೆಗಳಿದ್ದುದರಿಂದಲೇ ರಂಗಭೂಮಿಯಲ್ಲಿ ಒಂದು ರೀತಿಯ ಪ್ರತ್ಯೇಕತಾ ಭಾವನೆ ಬೆಳೆದು ಬಂದು ಪುರುಷ ಪಾತ್ರಗಳನ್ನು ಸ್ತ್ರೀಯರು ಸ್ತ್ರೀ ಪಾತ್ರಗಳನ್ನು ಪುರುಷರು ವಹಿಸುತ್ತಿದ್ದಂಥ ನಿದರ್ಶನಗಳಿವೆ. ಆದರೆ ಆಧುನಿಕ ರಂಗಭೂಮಿಯ ಉದಯವಾಗಿ ಸ್ತ್ರೀಯರು ನಾಟಕಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಆದರೂ ಇಂದಿಗೂ ಸ್ತ್ರೀಯರಿಗೆ ಮುಕ್ತವಾಗಿ ಅಭಿನಯಿಸಲು ಅವಕಾಶಗಳಿಲ್ಲ. ರಂಗಭೂಮಿ ಎಂದಾಕ್ಷಣ ಅನೇಕ ತಡೆಗಳನ್ನು ಒಡ್ಡಿ ಹೆಣ್ಣು ಮಕ್ಕಳನ್ನು ಹಿಂದೆ ಸರಿಯುವಂತೆ ಮಾಡಲಾಗುತ್ತದೆ. ನಾಟಕಗಳಲ್ಲಿ ಅಭಿನಯಿಸುವವರನ್ನು ಒಂದು ಬಗೆಯಲ್ಲಿ ಕಾಣಲಾಗುತ್ತದೆ. ಆದರೂ ಇಂದು ಅನೇಕ ಮಹಿಳೆಯರು ಹವ್ಯಾಸಿ ತಂಡಗಳಲ್ಲಿ ಅಭಿನಯಿಸುತ್ತಿದ್ದಾರೆ. ಕೆಲವರು ಉತ್ತಮ ಅಭಿನೇತ್ರಿಯರೆಂದು ಗುರುತಿಸಲ್ಪಟ್ಟು ಪ್ರಶಸ್ತಿಗೂ ಭಾಜನರಾಗಿದ್ದಾರೆ. ಇವರೆಲ್ಲ ಸಾಮಾನ್ಯವಾಗಿ ಮೇಲುವರ್ಗ, ಮೇಲ್‌ಜಾತಿಯ ವಿದ್ಯಾವಂತ ಮಹಿಳೆಯರು

ಹೈದರಾಬಾದ ಕರ್ನಾಟಕ ಪ್ರದೇಶದ ವೃತ್ತಿ ರಂಗಭೂಮಿ ಕಂಡ ಅನುಪಮ ಕಲಾವಿದೆ ರಹಿಮಾನವ್ವ ಕಲ್ಮನಿ ಯಲಬುರ್ಗ ತಾಲೂಕಿನ ಕುಕನೂರು ಗ್ರಾಮದ ಮುಸ್ಲಿಂ ಕೋಮಿನ ಸಾಮಾನ್ಯ ಮನೆತನದವರು. ತಮ್ಮ ಅಮೋಘ ಅಭಿನಯದಿಂದಾಗಿ ಕರ್ನಾಟಕದಲ್ಲೆಲ್ಲ ಹೆಸರು ಗಳಿಸಿದರು. ಮೈಂದರ್ಗಿ ಕಂಪನಿಯ ಡಿಗ್ಗಿಶಾಂತಾ ಅವರ ಅಭಿನಯ ಮನೋಜ್ಞವಾಗಿದ್ದು ಕಂಪನಿ ಬೆಳವಣಿಗೆಗೆ ಸಹಾಯಕವಾಗಿತ್ತು.

ಸಂಗೀತ ಕ್ಷೇತ್ರದಲ್ಲಿ ಹಿಂದೆ ಮಹಿಳೆಯರಿಗೆ ಪ್ರವೇಶವಿರಲಿಲ್ಲ ಸಂಗೀತವೆಂಬುದು ಕೇವಲ ಗಾನಾ ಪಾರ್ಟಿಯ ಮಹಿಳೆಯ ಕಲೆ ಎಂಬ ಮನೋಭಾವವಿತ್ತು. ಇತ್ತೀಚೆಗೆ ಈ ಭಾವನೆಯಲ್ಲಿ ಬದಲಾವಣೆ ಕಂಡು ಬರುತ್ತಿದ್ದು, ಕುಲೀನ ಮನೆತನದ ಮಹಿಳೆಯರು ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವುದು ಕಂಡು ಬರುತ್ತದೆ. ಇವರಲ್ಲಿ ಕೊಪ್ಪಳ ಜಿಲ್ಲೆಯ ಅಕ್ಕಮಹಾದೇವಿ ಹಿರೇಮಠ (ಪಿಟೀಲು) ಅನಸೂಯ ಜಹಗಿರದಾರ ಗಂಗೂ ಶಾಸ್ತ್ರೀ (ಸುಗಮ ಸಂಗೀತ) ಮುನಿರಾಬಾದಿನ ಪುಷ್ಪಾವತಿ (ಶಾಸ್ತ್ರಿಯ ಸಂಗೀತ) ಉತ್ತರಾದಿ ಹಾಗೂ ಕರ್ನಾಟಕ ಗಾಯಕಿ ರಂಗಭೂಮಿ ಕಲಾವಿದೆ ಯಂಕವ್ವ ಕಟ್ಟೀಮನಿ ಸಂಗೀತ ಹಾಗೂ ರಂಗ ಕಲಾವಿದೆಯಾಗಿದ್ದ ಕಾಶೀಬಾಯಿ ಕಟ್ಟೀಮನಿ ಮೊದಲಾದವರನ್ನು ಉಲ್ಲೇಖಿಸಬಹುದು.

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಉರ್ದು, ರಾಜ್ಯ ಭಾಷೆಯಾಗಿತ್ತು. ರಾಯಚೂರು ಜಿಲ್ಲೆಯಲ್ಲಿ ಸ್ಥಿತಿವಂತರಿಗೆ ಮನೋರಂಜನೆ ನೀಡುವ ಗಝುಲ್ ಖವ್ವಾಲಿಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಸಿರಿವಂತ ಪ್ರೇಕ್ಷಕರನ್ನು ರಂಜಿಸಲು ರಾಯಚೂರಿನಲ್ಲಿ ಮಾಚಾಲಿ ಮಾಣಿಕಮ್ಮ, ಗುಝುಲ್ ಗುಂಡಮ್ಮ, ಯಮನಮ್ಮ ಹಾಗೂ ಸಿಂಧನೂರು ನಾಗಮ್ಮನವರ ಗಾನಾ ಪಾರ್ಟಿಗಳಿದ್ದವು. ಗಾನಾಪಾರ್ಟಿಗೆ ಯಾವುದೇ ಸಾಮಾಜಿಕ ಮನ್ನಣೆ ಇರಲಿಲ್ಲ ಹಾಗಾಗಿ ಇಲ್ಲಿಯ ಕಲೆ ಎಷ್ಟೇ ಅಮೋಘವಾದುದಾದರು ಕಲಾವಿದರಿಗೆ ಗೌರವ ಲಭಿಸಿದ್ದು ಕಡಿಮೆಯೇ.

ಸಧ್ಯ ರಾಯಚೂರು ಜಿಲ್ಲೆಯ ಸಂಗೀತ ಕಲಾವಿದರಾಗಿ ಆರ್. ಶಿವಕುಮಾರಿ, ವಿ. ಲಕ್ಷ್ಮಿರೆಡ್ಡಿ ಪ್ರತಿಭಾ ಗೋನಾಳ, ಡಿ. ಸರಳಾ ಸುರೇಶ, ಶೋಭಾ ಹುಣಸಗಿ, ಅಂಜಲಿ ದೇಶಪಾಂಡೆ, ಮಂಜುಳಾ ಮೊದಲಾದವರು ಉತ್ತಮ ಸಾಧನೆ ತೋರುತ್ತಿದ್ದಾರೆ. ಸಂಗೀತಾ ಕಾಖಂಡಕಿ ರಾಜ್ಯಮಟ್ಟದ ಖ್ಯಾತಿ ಗಳಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇವರೆಲ್ಲ ಸಂಗೀತ ಹಿನ್ನೆಲೆಯಿಂದ ಬಂದ ಉನ್ನತ ಜಾತಿ ವರ್ಗದ ಮಹಿಳೆಯರು.

ಕಲಬುರ್ಗಿಯಲ್ಲಿ ಛಾಯಾ ಭರತನೂರ, ಕಲಾವತಿ ದೊರೆ, ಹನಿಫಾಶೇಖ್, ಶಕುಂತಲಾ ನಾಯಕ, ಗಿರಿಜಾ ಕರ್ಪುರ ಆಕಾಶವಾಣಿ ಕಲಾವಿದೆಯರಾಗಿದ್ದಾರೆ. ಮಾಲಾಶ್ರೀ ಕಣವಿ ರಾಜ್ಯಮಟ್ಟದಲ್ಲಿ ಗುರುತಿಸಲ್ಪಟ್ಟಿದ್ದಾರೆ.

ಜನಪದ ಸಂಪ್ರದಾಯಗಳಲ್ಲಿ ಮಹಿಳೆಯರಿಗೆ ಹಲವು ಸಂಧರ್ಭಗಳಲ್ಲಿ ತಮ್ಮ ಕಲೆಯನ್ನು ಪ್ರಯೋಗಿಸಲು ಅವಕಾಶವಿರುತಿತ್ತು. ಧಾರ್ಮಿಕ ಅಚರಣೆಗಳು ಹಬ್ಬಗಳು ಮುಂತಾದ ಸಂಧರ್ಭಗಳಲ್ಲಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಗೋಡೆಗಳು ಹಾಗೂ ನೆಲದ ಮೇಲೆ ಅತಿ ಸೂಕ್ಷ್ಮವಾದ ಸುಂದರವಾದ ಚಿತ್ರಗಳನ್ನು ರೂಪಿಸಿದ ಕೀರ್ತಿ ಮಹಿಳೆಯರಿಗೆ ಸಲ್ಲುತ್ತದೆ. ಈ ಕಲೆ ಕುಟುಂಬ ವ್ಯವಸ್ಥೆಯೊಳಗೆ ತಾಯಿಯಿಂದ ಮಗಳಿಗೆ ವರ್ಗಾವಣೆಯಾಗುತ್ತಿತ್ತು. ಆದರೆ ಅವರ ಪ್ರತಿಭೆ ವ್ಯಕ್ತವಾಗುತ್ತಿದ್ದುದು ಒಂದು ಸೀಮಿತ ಪರಿಸರದಲ್ಲಿ

ಪುರುಷರಂತೆ ತಮ್ಮ ಕಲಾ ನೈಪುಣ್ಯವನ್ನು ತಮಗೆ ಇಷ್ಟ ಬಂದಂತೆ ಉಪಯೋಗಿಸಲು ಅವರಿಗೆ ಸ್ವಾತಂತ್ರ್ಯವಿರಲಿಲ್ಲ. ಕುಟುಂಬ ಮತ್ತು ಗೃಹ ಕೃತ್ಯಗಳೇ ಅವರ ಜೀವನದ ಪ್ರಧಾನ ಗುರಿಗಳೆಂದು ಇಂದಿಗೂ ಭಾವಿಸಿರುವುದರಿಂದ ಅನೇಕ ಕಲಾವಿದೆಯರಿಗೆ ಮುಕ್ತ ಅವಕಾಶವಿರಲಿಲ್ಲ.

ಜನಪದ ಹಾಡಿನ ಜೊತೆಗೆ ಕುಣಿತ (ನೃತ್ಯ) ಜನಪದರ ಜೀವನದಲ್ಲಿ ಒಂದಾಗಿ ಬಿಟ್ಟಿತ್ತು. ಆದರೆ ಪುರುಷ ಪ್ರಧಾನ ಆಲೋಚನೆಯ ಪರಿಣಾಮವಾಗಿ ಕೋಲು ಹಾಕುತ್ತಿದ್ದ ಮಹಿಳೆಯರು ಅದನ್ನು ಬಿಟ್ಟು ಕೇವಲ ಕೈಚಪ್ಪಾಳೆ ತಟ್ಟುತ್ತ ಕೋಲಾಟದ ಹಾಡುಗಳನ್ನು ಹಾಡುವಂತಾಗಿದೆ. ಇದರಿಂದ ಕೋಲಾಟದಂಥ ಮಹಿಳೆಯರ ನೃತ್ಯ ಪ್ರಕಾರವೂ ಗಂಡಸರ ಕೈ ಸೇರುವಂತಾಯಿತು.[೩೪]

ಜನಪದ ಪ್ರದರ್ಶನ ಕಲೆಗಳಾದ ದೊಡ್ಡಾಟಗಳಲ್ಲಿ ಹಿಂದೆ ಮಹಿಳೆಯರಿಗೆ ಪ್ರವೇಶವಿರಲಿಲ್ಲ ಇಂದೂ ಇಲ್ಲ. ಜನಪದ ಹಾಡುಗಾರರಾಗಿ ಮಾತ್ರ ಮಹಿಳೆಯರು ಕಂಡುಬರುತ್ತಾರೆ. ಆದರೆ ಇವರು ಸಾಮಾನ್ಯವಾಗಿ ವೇಶ್ಯಾವೃತ್ತಿಗಿಳಿದ ಮಹಿಳೆಯರೇ ಆಗಿರುತ್ತಾರೆ.

'ರಂಗು ರಂಗಿನ ವೇಷ ಭೂಷಣಗಳೊಂದಿಗೆ ಆಕರ್ಷಿಸುವವರು ಬುಡಕಟ್ಟು, ಸಂಸ್ಕೃತಿಯ ಲಂಬಾಣಿಗರು. ತಮ್ಮ ವೃತ್ತಿ ಜೀವನ ಮಾಡುತ್ತ ಗುಡ್ಡಗಾಡುಗಳಲ್ಲಿ ಬೀಡು ಬಿಟ್ಟವರು, ಕೊಪ್ಪಳ ಜಿಲ್ಲೆಯ ಬಹದ್ದೂರ ಬಂಡಿಯಲ್ಲಿ ನಡೆಯುವ ಲಂಬಾಣಿಗರ ಉತ್ಸವದಲ್ಲಿ ಮಹಿಳೆಯರು ನರ್ತಿಸುತ್ತಾರೆ. ತಾವು ಧರಿಸಿದ ಉಡುಪು, ಕೈತುಂಬಿದ ಬಳೆಗಳು, ಗಾಜಿನ ಚೂರಿನಿಂದ ಚಿತ್ತಾಕರ್ಷಕವಾದ ವೇಷ-ಭೂಷಣ ನೃತ್ಯಕ್ಕೆ ಕಳೆಕಟ್ಟುತ್ತವೆ. ಗೋರೋಲಿ ಭಾಷೆಯ ಹಾಡಿನೊಂದಿಗಿನ ನೃತ್ಯ ಆಕರ್ಷಕವಾಗಿರುತ್ತದೆ'.[೩೫]

ಇತ್ತೀಚೆಗೆ ಕಲಾವಿದೆಯರ ಕುರಿತ ಸಾಮಾಜಿಕ ದೃಷ್ಟಿ ಬದಲಾಗುತ್ತಿದೆ. ಜಾತಿ ಶ್ರೇಣಿಯಲ್ಲಿ ಮೇಲಿನ ಸ್ಥರಗಳಲ್ಲಿರುವ ಜಾತಿಗಳ ಮಹಿಳೆಯರೂ ನೃತ್ಯವನ್ನು ಅಭ್ಯಸಿಸಲು, ಬೋಧಿಸಲು ಆರಂಭಿಸಿದ್ದಾರೆ. ಆದರೂ ನೃತ್ಯಗಾರ್ತಿಯರನ್ನು ನಾಚವಾಲಿ, ಕುಣಿತದವಳು ಎಂದೂ, ನಾಟಕಗಳಲ್ಲಿ ಅಭಿನಯಿಸುವವರನ್ನು ನಾಟಕದವಳೆಂದೂ ಹಗುರವಾಗಿ ಕಾಣಲಾಗುತ್ತದೆ. ಈಗಲೂ ಕಲಾವಿದೆಯರ ಸಂಖ್ಯೆ ತೀರ ಕಡಿಮೆ ಇರುವುದನ್ನು ಗಮನಿಸಬಹುದಾಗಿದೆ.

೩.೧೬ ರಜಾಕಾರ ಚಳುವಳಿಯಲ್ಲಿ ಮಹಿಳೆ :

'ಗಾಂಧೀಜಿ ಮಹಿಳೆಯರನ್ನು ಅಹಿಂಸೆಯ ಪ್ರತೀಕವೆಂದು ತಿಳಿದಿದ್ದರು ತಾಳ್ಮೆ, ದೃಢತೆಗಳನ್ನು ಹೆಚ್ಚು ಹೊಂದಿರುವ ಮಹಿಳೆಯರೇ ಪುರುಷರಿಗಿಂತ ಸತ್ಯಾಗ್ರಹ ಚಳುವಳಿಯಲ್ಲಿ ಜಯಗಳಿಸಬಲ್ಲರೆಂಬ ನಂಬಿಕೆ ಅವರಿಗಿತ್ತು. ಮಹಿಳೆ ಅಬಲೆ ಅವಳು ಪುರುಷನ ಆಶ್ರಯವಿಲ್ಲದೆ ಬಾಳಲಾರಳು ಎಂಬುದನ್ನು ಅವರು ಒಪ್ಪಲಿಲ್ಲ. ಅವರ ಅಭಿಪ್ರಾಯದಲ್ಲಿ ಬಲಾಬಲಗಳು ಶಾರೀರಿಕವಾಗಿರುವುದಕ್ಕಿಂತ ಹೆಚ್ಚಾಗಿ ಮಾನಸಿಕ ನೈತಿಕ ಮತ್ತು ದೈವಿಕ ಶಕ್ತಿಗಳಾಗಿದ್ದುವು. ಮಹಿಳೆ ಭೀತಿಗೊಳಗಾದರೆ ಮಾತ್ರ ಅಬಲೆ, ಸಾಹಸದಿಂದ ಅತ್ಯಾಚಾರ, ಅನ್ಯಾಯಗಳನ್ನು ಎದುರಿಸಿದರೆ ಸಬಲೆಯಾಗುವಳೆಂಬ ತತ್ವವನ್ನು ಎತ್ತಿ ಹಿಡಿದ ಗಾಂಧೀಜಿ ಭಾರತದ ರಾಜಕಾರಣದಲ್ಲಿ ಮಹಿಳೆಯರಿಗೆ ಮಹತ್ತರವಾದ ಗೌರವವನ್ನು ದೊರಕಿಸಿಕೊಟ್ಟರು'[೩೬] ಹೈದರಾಬಾದ ಕರ್ನಾಟಕದ ಮಹಿಳೆಗೂ ಈ ಮಾತು ಅನ್ವಯಿಸುತ್ತದೆ. ದೇಶದಲ್ಲಿ ವಸಾಹಾತು ಶಾಹಿ ಆಡಳಿತದ ವಿರುದ್ಧ

ಮಹಿಳೆಯರು ಮನೆಯಿಂದ ಹೊರಬಂದರೆ. ರಜಾಕಾರರ ದಬ್ಬಾಳಿಕೆಯನ್ನು ವೈಯಕ್ತಿಕ ನೆಲೆಯಲ್ಲಿ ಎದುರಿಸಿ ಹೋರಾಡಿದ್ದಾರೆ.

'ಮಹಿಳೆ ಜನ್ಮತಃ ಸಾಹಸಿಯಾದರೂ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಅವಳನ್ನು ದುರ್ಬಲಳನ್ನಾಗಿ ಮಾಡಲಾಗುತ್ತದೆ. ಅವಳ ಸಾಹಸ ಪ್ರವೃತ್ತಿಯನ್ನು ನಿಯಂತ್ರಿಸಲಾಗುತ್ತದೆ. ಅವಳಲ್ಲಿಯ ಧೈರ್ಯವನ್ನು ಕುಂದಿಸಲಾಗುತ್ತದೆ. ನೀನು ದುರ್ಬಲೆ, ಕೋಮಲೆ, ಮೃದು ಎಂದು ಮತ್ತೆ ಮತ್ತೆ ಹೇಳುವ ಮೂಲಕ ಆ ಗುಣಗಳನ್ನು ಪೋಷಿಸಲಾಗುತ್ತದೆ. ಆದರೂ ಮಹಿಳೆ ಚರಿತ್ರೆಯಲ್ಲಿ ತನಗೆ ಆಕಸ್ಮಿಕವಾಗಿ ದೊರೆತ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಂಡು ಸಾಹಸ ಮೆರೆದಿದ್ದಾಳೆ. ಸಮಾಜ ತನ್ನ ಮೇಲೆ ಹೇರಿದ ಹುಸಿ ಹೇರಿಕೆಗಳು ಸಹಜವಲ್ಲ ಎಂಬುದನ್ನು ಸಾಧಿಸಿ ತೋರಿಸಿದ್ದಾಳೆ. ಮಹಾಗಾಂವದಲ್ಲಿ ರಜಾಕಾರರು ನಿರಪರಾಧಿಗಳನ್ನು ದಂಡಿಸಿ ಹಿಂಸಿಸುತ್ತಿದ್ದಾಗ ಅನೇಕ ಮಹಿಳೆಯರು (ಸಂಗವ್ವ, ಗುರುಬಸವ್ವ ಹತ್ತಿ, ಅಕ್ಕಮಹಾದೇವಿ) ಮಾಳಿಗೆ ಏರಿ ರಜಾಕಾರರ ಮೇಲೆ ಕವಣೆ ಕಲ್ಲುಬೀಸಿ ಹಿಮ್ಮೆಟಿಸಿದರು'[೭೭]

ಪ್ರಭುತ್ವದ ಧರ್ಮವೆಂಬ ಕಾರಣಕ್ಕೆ ಅದನ್ನು ಬಳಸಿಕೊಂಡು ಹಿಂದು ಜನತೆಯ ಮೇಲೆ ದಾಳಿ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ವಿರುದ್ಧ ಹೋರಾಡುತ್ತಿದ್ದವರಿಗೆ ಮುಸ್ಲಿಂ ಮಹಿಳೆಯರು ಆಶ್ರಯನೀಡಿ ತಮ್ಮ ಬದುಕಿಗೆ ಸಂಚಕಾರ ತಂದುಕೊಂಡದನ್ನು ಹಿರಿಯರು ಹೇಳುತ್ತಾರೆ.

'ದೇಶಕ್ಕೆ ಸ್ವಾತಂತ್ರ್ಯ ದೊರೆತ ದಿನದಂದು ಹೈದರಾಬಾದ ಸಂಸ್ಥಾನದ ವಿರುದ್ಧ ಭಾರತೀಯ ಸ್ವಾತಂತ್ರ್ಯದ ಸಂಕೇತವಾದ ತ್ರಿವರ್ಣ ಧ್ವಜವನ್ನು ಆರೋಹಿಸಿ ಸೆರೆವಾಸವನ್ನು ಅನುಭವಿಸಿದವರು ಯಶೋದಾಬಾಯಿ ಹಾಗೂ ಬ್ರಿಜ್ ರಾಣಿಯರು. ವಿಮಲಾಬಾಯಿ ಮೇಲ್ಕೋಟೆ, ಉಷಾ ಪಂಗ್ರಿಕರ್, ಅಹಲ್ಯಾಬಾಯಿ ಮೊದಲಾದವರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ಪೋಲಿಸರ ಅಶ್ರುವಾಯು ದಾಳಿಯನ್ನು ಎದುರಿಸಬೇಕಾಯಿತು'.[೭೮]

ನಿಜಾಂ ವಿರುದ್ಧದ ಹೋರಾಟದಲ್ಲಿ ಹೋರಾಟಗಾರರಿಗೆ ಊಟಕ್ಕಿತ್ತು ಬೆಂಬಲವಾದವರು ಕೆಲವರಾದರೆ, ತಮ್ಮ ಆಭರಣಗಳನ್ನೆಲ್ಲ ಧಾರೆ ಎರೆದವರು ಹಲವರು. ಸ್ವತಃ ಹೋರಾಟದಲ್ಲಿ ಮಹಿಳೆಯರು ಭಾಗವಹಿಸಿದ್ದರು. ಅವರ ಹೆಸರನ್ನು ಬಳಸುವ ಸಂಪ್ರಾದಾಯವಿಲ್ಲದೆ ಆಳಂದಬಾಯಿ ಕೇಸರ ಜವಳಗಾಬಾಯಿ ಎಂದೇ ಸಂಭೋಧಿಸುತ್ತಿದ್ದುದರಿಂದ ಅಂಥ ಮಹಿಳೆಯರನ್ನು ನಿಖರವಾಗಿ ಗುರುತಿಸುವುದು ಕಷ್ಟ.

'ಶೆಳ್ಳಗಿಯ ತ್ರಿವೇಣಿಬಾಯಿ ಪಾಟೀಲ ಕ್ಯಾಂಪಿನ ಹೋರಾಟಗಾರರಿಗೆ ೨೦೦೦ ಬೆಳ್ಳಿ ರೂಪಾಯಿಗಳನ್ನು ನೀಡಿದ್ದಲ್ಲದೆ ಸ್ವತಃ ರೈಫಲ್ ಹಿಡಿದು ಹೋರಾಡಿದ ವೀರ ಮಹಿಳೆ ತನ್ನ ಸಾಹಸದಿಂದ ಬಿಜಲಿಬಾಯಿ ಎಂದು ಕರೆಸಿಕೊಂಡಳು. ಹೋರಾಟಗಾರರನ್ನು ಹುರಿದುಂಬಿಸುತ್ತ ರಜಾಕಾರರನ್ನು ಎದುರಿಸಿದ ಮೆಹಕರ್‌ಬಾಯಿ ಹೋರಾಡುತ್ತಲೇ ಅಸುನೀಗಿದಳು. ಅತ್ಯಾಚಾರವೆಸಗಲು ಬಂದ ರಜಾಕಾರರರನ್ನು ಕುಡುಗೋಲಿನಿಂದ ತುಂಡರಿಸಿದ ಗುಂಜೋಟಿ ಸೋನುಬಾಯಿ, ತನ್ನ ಗಂಡನನ್ನು ಕೊಂದ ರಜಾಕಾರರ ಮೇಲೆ ಗುಂಡಿನ ಮಳೆಗರೆಯುತ್ತಲೇ ಬೆಂಕಿಗೆ ಬಲಿಯಾದ ಇಟಗಾಂವನ ಗೋದಾವರಿಬಾಯಿ ಟೀಕೆ, ಭೂಗತರಾಗಿದ್ದುಕೊಂಡೇ ಹೋರಾಡಿದ ರುಕ್ಮಿಣಿ ತಾಯಿ ಕೋರಡೆ, ಗೀತಾಬಾಯಿ ಚಾರಟಣಕರ ಮೊದಲಾದವರು ಹೈದರಾಬಾದ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮದೇಯಾದ ಕೊಡುಗೆಯನ್ನು ನೀಡಿದವರಾಗಿದ್ದಾರೆ'.[೭೯]

ಆಗಿನ ರಾಯಚೂರು ಜಿಲ್ಲೆಯ ಇಟಗಿ ಸ್ವಾತಂತ್ರ್ಯ ಹೋರಾಟದಲ್ಲಿ ಬಹಳ ಮುಖ್ಯಪಾತ್ರ ವಹಿಸಿತ್ತು. ಇಟಗಿಯನ್ನೊಳಗೊಂಡು ನಿಜಾಮ ಸರಕಾರದ ಹದಿನೈದು ಅಧಿಕಾರಿಗಳನ್ನು ಹಾಗೂ ಪೋಲಿಸರನ್ನು ಹೊಡೆದೋಡಿಸಿ ೧೯೪೦ರ ಅಗಷ್ಟ ತಿಂಗಳಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿ ತಮ್ಮದೇ ಆದ ಪಂಚಾಯತ ಸರಕಾರವನ್ನು ರಚಿಸಿದ್ದವು. ಇಟಗಿಯ ಸ್ವಾತಂತ್ರ್ಯದ ವೈಶಿಷ್ಟ್ಯವೆಂದರೆ ಅಲ್ಲಿ ನಲ್ವತ್ತು ಮಹಿಳೆಯರನ್ನೊಳಗೊಂಡು ಸೈನ್ಯವಿತ್ತು. ತುಂಗಾ ಹಾಗೂ ಪದ್ಮಾ ಬಳ್ಳರಗಿ ಅವರು ಅದರ ಮುಖಂಡರಾಗಿದ್ದರು.[೪೧]

ರೊಟ್ಟಿ ಸಂದೇಶದ ದೂತರು ಮಹಿಳೆಯರಾಗಿದ್ದರು. ಜೈಲಿನಲ್ಲಿ ಬಂಧಿತರಾಗಿದ್ದ ಸ್ವಾತಂತ್ರ್ಯ ಯೋಧರಿಗೆ ರೊಟ್ಟಿಯ ಗಂಟಿನಲ್ಲಿ ರಜಾಕಾರರ ಚಟುವಟಿಕೆಗಳ ಕುರಿತು ಚೀಟಿ ಬರೆದು ಗಡಿ ಶಿಬಿರದ ಅಧಿಕಾರಿಗಳಿಗೆ ತಲುಪಿಸುತ್ತಿದ್ದರು. ಮರೆಯಲ್ಲಿದ್ದುಕೊಂಡೇ ಹೋರಾಟಕ್ಕೆ ಶ್ರಮಿಸಿದ ಮಹಿಳೆಯರು ಎಲೆ ಮರೆಯ ಕಾಯಿಯಂತಿರುವ ಅವರ ಸಾಹಸ ಸ್ಮರಣೀಯವಾದುದು.

ರಜಾಕಾರ ಚಳುವಳಿಯಲ್ಲಿ ಮಹಿಳೆಯರ ಮೇಲಾದ ಅತ್ಯಾಚಾರ ಹಿಂಸೆ ಮತ್ತು ಅದನ್ನು ಕೆಚ್ಚೆದೆಯಿಂದ ಎದುರಿಸಿದ ವಿಧಾನವನ್ನು ನಲವಡಿ ಶ್ರೀಕಂಠ ಶಾಸ್ತ್ರಿಗಳು ಹೃದಯ ಸ್ಪರ್ಶಿಯಾಗಿ ಲಾವಣಿಯೊಂದರಲ್ಲಿ ಕಟ್ಟಿ ಕೊಡುತ್ತಾರೆ.

ಹೈದರಾಬಾದಿನ ನಾಲ್ಕು ನಿಟ್ಟಿನಲ್ಲಿ ನಡೆಸಿದ ನಾಡಿನೊಳನ್ಯಾಯ
ಸುಲಿಗೆ ಕೊಳ್ಳೆ ಮಾಡಿರೆಂದು ರಜಾಕಾರರನಟ್ಟಿದ ಪಾಪಮಯ
ಅಕ್ಕ ತಂಗಿಯರ ಮಾನಭಂಗಕ ಮಾಡಿಸಿದನು ನಿಷ್ಕರುಣಾ ಹೃದಯ
ನಡೆದತ್ಯಾಚಾರ ಕೇಳಿದರೂ ಮಿಡುಕಲಿಲ್ಲ ಜಿನ್ನಾಹೃದಯ ॥೫॥

ಸಾವಿರಾರು ಜನ ನಿರಪರಾಧಿಗಳ ಸಜೀವ ಸುಡಿಸಿದ ಚಿತ್ರಗಳು
ಗಂಡರ ಕಂಬಕ್ಕೆ ಕಟ್ಟಿ ಹೆಂಡಿರನು ಕೆಡಸಿದ ಪಾಪದ ಕೃತ್ಯಗಳು
ಸಣ್ಣ ಕೂಸುಗಳು ಚಂಡನಾಡಿ ತೂರಾಡಿದ ರಾಕ್ಷಸ ನೃತ್ಯಗಳು
ಮಾನಕಂಜಿ ಭಾವಿಯ ಹಾರಿದರು ಅಸಂಖ್ಯ ಹಿಂದೂ ಮಾತೃಗಳು ॥೬॥

ಸುಡುವ ಕೊಲ್ಲುವ ಗುಂಡಿಕ್ಕುವ ಜಾತ್ಯಾಂತರಗೊಳಿಸುವ ಖಲಕೃತ್ಯಗಳು
ಹಿಡಿದೆಳೆಯುವ ಹಿಂದೂ ಹೆಂಗಳೆಯರ ಹರಿದವು ಮಂಗಲ ಸೂತ್ರಗಳು
ಹೊಡೆದು ಕೆಡಹಿ ಮಾಂಸವ ತಿನಿಸುವ ರಜಾಕಾರರ ಕಕ್ಕಸ ಬಲುಮೆಗಳು
ನಡೆದವು ಬೀದರ ಬಿಜವಾಡ ರಾಯಚೂರು ದುಧನಿ ಕೊಪ್ಪಳ ಗಡಿನಾಡಿನೊಳು

ಗಡಿಯಲ್ಲಿ ಕೊಪ್ಪಳ ಇಟಗಿ ಶಾಂತಗಿರಿ ಹೆಂಗಳೆಯರು ಹೋರಾಡಿದರು
ಕುಡುಗೋಲಿನ ಕೈಯಿಂದ ವೈರಿಗಳ ಸುಡುಗಾಡಿಗೆ ಎಡೆ ಮಾಡಿದರು
ಕಡುಗಲಿ ಕಿತ್ತೂರಿನ ಚೆನ್ನಮ್ಮನ ಕದನ ಶೌರ್ಯವನು ತೋರಿದರು
ತುಡುಗ ಪಠಾಣರು ಬರಲು ಮಾಳಿಗೆಯನೇರಿ ಕಲ್ಲು ಮಳೆ ಸುರಿಸಿದರು
ಹೆಡೆಯೆತ್ತಿದ ಸರ್ಪಕಾಣುವಂತೆ ರಜಾಕಾರರು ಹೇಳದೆ ಓಡಿದರು.[೪೨]

ಮಹಿಳೆಯರಲ್ಲಿ ಇಂತಹ ಸಾಮರ್ಥ್ಯ ಅಡಗಿದೆ. ಅದು ಅವಕಾಶ ಸಿಕ್ಕಾಗಲೆಲ್ಲ ಪ್ರಕಟವಾಗುವುದು. ಸಮಾಜವೂ ಅದನ್ನು ಪುಷ್ಟೀಕರಿಸಿ ಉಪಯೋಗಿಸಿಕೊಂಡಿರುವುದು ಇತಿಹಾಸದ ಪುಟಗಳಿಂದ ತಿಳಿಯುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಚಿತ್ರಿಸಿದಂತೆ ಮಹಿಳೆ ಅಬಲೆಯಲ್ಲ. ಅವಳಲ್ಲಿ ಕೆಚ್ಚು ಚತುರತೆ, ಅದಮ್ಯ ನಿಷ್ಠೆ ಪ್ರೇಮಗಳಿವೆ ಅದರೆ ಸಾಮಾಜಿಕ ಕಟ್ಟಳೆಯಿಂದಾಗಿ ಅವಳ ಈ ಸತ್ವವು ನಮ್ಮ ಸಮಾಜದಲ್ಲಿ ಅಸಾಮಾನ್ಯ ಸನ್ನಿವೇಶಗಳಲ್ಲಲ್ಲದೆ ದೈನಂದಿನ ಬದುಕಿನಲ್ಲಿ ಕಂಡುಬರುವುದಿಲ್ಲ. ಸರಿಯಾದ ಬೆಂಬಲ ಅವಕಾಶಗಳು ದೊರೆತರೆ ಸಾಮಾನ್ಯ ಮಹಿಳೆಯರು ಅತ್ಯಂತ ಕಷ್ಟಕರ ಗುರಿಯಾದ್ದರೂ ಅದನ್ನು ತಲುಪಲು ಎಷ್ಟೇ ಎಡರು ತೊಡರುಗಳು ಎದುರಾದರೂ ಅಳುಕದೆ ಮುನ್ನುಗ್ಗುತ್ತಾರೆ ಎಂಬುದನ್ನು ಲಾವಣಿ ಸ್ಪಷ್ಟಪಡಿಸುತ್ತದೆ.

೩.೧೭ ಮಹಿಳೆ ಮತ್ತು ಸಂತಾನಾರೋಗ್ಯ :

‘ಒಂದು ಕಾಲದಲ್ಲಿ ಕೇವಲ ಗಂಡಸರ ಕೈಯಲ್ಲಿದ್ದ ವಿಜ್ಞಾನ, ಮಾನವ ನಿರ್ಮಿತ ಅಸಮಾನತೆಯನ್ನು ಪ್ರಕೃತಿ ಸಹಜವೆಂದು ಹೇಳಲು ಬಳಕೆಯಾಯಿತು. ಹತ್ತೊಂಬತ್ತನೇ ಶತಮಾನದಲ್ಲಿ ಬಹಳಷ್ಟು ವಿಜ್ಞಾನಿಗಳು ಗಂಡು ಹೆಣ್ಣಿನ ಮಿದುಳಿನ ರಚನೆಯಲ್ಲಿ ವ್ಯತ್ಯಾಸವಿದೆ ಎಂದೂ, ಆ ಮೂಲಕ ವಿಕಾಸದ ದಾರಿಯಲ್ಲಿ ಹೆಣ್ಣು ಗಂಡಿಗಿಂತ ಹಿಂದುಳಿದಿದ್ದಾಳೆಂದು ಸಮರ್ಥಿಸಿದರು. ಅಲ್ಲದೆ ವಿಚಿತ್ರ ಸಿದ್ಧಾಂತವೊಂದನ್ನು ಹುಟ್ಟುಹಾಕಿ ಹೆಚ್ಚಿಗೆ ಓದಿದ ಹೆಣ್ಣು ಬಂಜೆಯಾಗುತ್ತಾಳೆಂಬ ನಂಬಿಕೆಯನ್ನು ಬಿತ್ತಿತು. ಡಾ. ಇ.ಎಚ್.ಕ್ಲಾರನ್ ವಿಜ್ಞಾನದ ಹೆಸರಿನಲ್ಲಿ ಪ್ರಕಟವಾದ ಕೃತಿ ಮಹಿಳೆಯ ಉನ್ನತ ವ್ಯಾಸಂಗ ಆಕೆಯ ಸಂತಾನೋತ್ಪತ್ತಿಗೆ ಮಾರಕ ಎಂದು ಸಾಧಿಸಿತು.’ ಇದು ಸ್ತ್ರೀ ವಿದ್ಯಾಭ್ಯಾಸದ ಬಗ್ಗೆ ಭೀತಿಯನ್ನು ಹುಟ್ಟು ಹಾಕಿತು. (ಭಾರತದಲ್ಲಿ ವೇದ ಓದಿದರೆ ಬಂಜೆತನ ಬರುತ್ತದೆಂಬ ನಂಬಿಕೆ ಇತ್ತು.) ಸ್ತ್ರೀವಾದಿಗಳು ವೈದ್ಯಕೀಯ ಸಹಾಯದಿಂದ ಈ ಸಂಗತಿಯಲ್ಲಿ ಹುರುಳಿಲ್ಲ ಎಂದು ತೋರಿಸಿದರು.

ಪುರುಷರು ವಿಜ್ಞಾನವನ್ನು ಎಷ್ಟರ ಮಟ್ಟಿಗೆ ತಿರುಚಿದ್ದರೆಂದರೆ ಹೆಣ್ಣನ್ನು ಕುರಿತು ಅನೇಕ ಮಿಥ್‌ಗಳನ್ನು ವಿಜ್ಞಾನದ ಹೆಸರಲ್ಲಿ ಸೃಷ್ಟಿಸಿದರು. ಇವು ಸ್ತ್ರೀತನ ಒಂದು ರೋಗ ಎಂದು ಸಾರಿದರು. ಪುರುಷರಿಗೆ ಸ್ತ್ರೀ ದೇಹದ ಬಸಿರು ಅರ್ಥವಾಗದ ಅತಂಕದ ವಿಷಯಗಳಾಗಿದ್ದವು. ಇವು ಸಹಜ ದೈಹಿಕ ಕ್ರಿಯೆಯಾಗದೆ ಅಸಹ್ಯ, ನೋವಿನ ಆತಂಕದ ವಿಷಯಗಳೆಂದು ಭಾವಿಸಿದರು. ಸ್ತ್ರೀ ಮನಸನ್ನು ನಿಯಂತ್ರಿಸುವ ಅಂಗ ಅಂಡಾಶಯವೆಂದು ನಂಬಿದ್ದರು. ವಾಸ್ತವವನ್ನು ಗುರುತಿಸಲು ವಿಜ್ಞಾನಕ್ಕೆ ಸ್ತ್ರೀವಾದಿ ದೃಷ್ಟಿಕೋನದ ಅಗತ್ಯವನ್ನು ಸ್ತ್ರೀವಾದಿಗಳು ಕಂಡುಕೊಂಡರು.

ಅವರ ದೃಷ್ಟಿಯಲ್ಲಿ ಪ್ರಕೃತಿ ಪುರುಷ ಒಬ್ಬರಿಂದೊಬ್ಬರು ಬೇರೆಯಲ್ಲ. ಹಾಗೆಯೇ ವಿಲೀನರೂ ಅಲ್ಲ. ಅವರ ನಡುವೆ ಸಹಯೋಗದ ಸಂಬಂಧವಿರಬೇಕು. ಅವರು ಪರಸ್ಪರ ಅವಲಂಬಿತರು. ವ್ಯತ್ಯಾಸ ಕೇವಲ ಗಂಡು ಹೆಣ್ಣಿನ ನಡುವಿಲ್ಲ. ಅದು ಗಂಡು ಗಂಡಿನ ನಡುವೆ ಮತ್ತು ಹೆಣ್ಣು ಹೆಣ್ಣಿನ ನಡುವೆಯೂ ಇದೆ.

ಮಹಿಳೆಯ ದೇಹದೊಳಗೆ ಸಂತಾನೋತ್ಪತ್ತಿ ಕ್ರಿಯೆ ಜರುಗುವ ಕಾರಣ ಮಹಿಳೆ ವೈದ್ಯರಂಗದ ಪ್ರಯೋಗ ಪಶುವಾಗಿದ್ದಾಳೆ. ಸಂತಾನ ನಿರೋಧಕಗಳು ಭಾರತದಲ್ಲಿ ಬಳಕೆಯಾಗುತ್ತಿದ್ದು ಮಹಿಳೆಯನ್ನು ಅತಿ ಸಂತಾನದಿಂದ ಮುಕ್ತಗೊಳಿಸಿವೆ ನಿಜ. ಆದರೆ ವಿದೇಶಗಳಲ್ಲಿ ನಿಷೇಧಿತವಾದ ನಾರ್‌ಪ್ಲಾಂಟ ಮೊದಲಾದ ಸಂತಾನ ನಿರೋಧಕಗಳಿಂದ ಮಹಿಳೆಯ ಆರೋಗ್ಯದ ಮೇಲೆ ದುಷ್ಪರಿಣಾಮವುಂಟಾಗುತ್ತಿದೆ. ಏಡ್ಸ್ ಜಾಹಿರಾತುಗಳು ಪುರುಷ ಕೇಂದ್ರಿತವಾಗಿದ್ದು ಕಾಂಡೊಮ್ ಧರಿಸಿ ಏಡ್ಸನಿಂದ ತಪ್ಪಿಸಿಕೊಳ್ಳಿ ಎಂದು ಕೇವಲ ಪುರುಷರ ಸಂರಕ್ಷಣೆಯನ್ನು ಮಾಡಲಾಗುತ್ತಿದೆಯೇ ಹೊರತು ಮಹಿಳೆಯ ರಕ್ಷಣೆಯತ್ತ ವಿಜ್ಞಾನ ಗಮನ ಹರಿಸುತ್ತಿಲ್ಲ.

ವಿಜ್ಞಾನ ಮಹಿಳೆಯ ಪಾಲಿಗೆ ವರದಾನವೂ ಆಗಿದೆ. ಒಂದು ಕಾಲದಲ್ಲಿ ಕುಟ್ಟುವ, ಬೀಸುವ, ರುಬ್ಬುವ ನಿತ್ಯಾವರ್ತನದ ಕೆಲಸಗಳು ಶ್ರಮದಾಯಕವಾಗಿದ್ದವು. ವಿಜ್ಞಾನ ಮತ್ತು ತಂತ್ರಜ್ಞಾನದ ಫಲವಾದ ಯಂತ್ರಗಳಿಂದ ಆ ಕೆಲಸಗಳು ಹಗುರವಾಗಿವೆ. ಅತ್ಯಾಚಾರದ ಕೇಸುಗಳಲ್ಲಿ ತಂದೆತನವನ್ನು ಗುರುತಿಸುವ ಡಿ.ಎನ್.ಎ., ಬೆರಳಚ್ಚು ತಂತ್ರ, ಫೊರೆನ್ಸಿಕ್ ಸಲಕರಣೆಯಾಗಿ ಅಪರಾಧಿಯ ಪತ್ತೆಗೆ ಸಹಾಯವಾಗಿದೆ. ಗರ್ಭಕೋಶದ ತೊಂದರೆ ಇರುವ ಮಹಿಳೆ ಬಾಡಿಗೆ ತಾಯಂದಿರಿಂದ ಮಕ್ಕಳನ್ನು ಪಡೆಯಬಹುದಾಗಿದೆ. ಹೀಗೆ ವಿಜ್ಞಾನ ಮತ್ತು ತಂತ್ರಜ್ಞಾನ ಮಹಿಳೆಯ ಬದುಕಿಗೆ ನಿರಾಳತೆಯನ್ನು ತಂದಿದ್ದರೂ ಶೋಷಣೆಯ ಹೊಸ ತಂತ್ರಗಳೂ ಹುಟ್ಟಿಕೊಳ್ಳುವ ಸಾಧ್ಯತೆಗಳೂ ಇವೆ.

೩.೧೮ ಮಹಿಳೆ ಮತ್ತು ರಾಜಕೀಯ :

ಜಗತ್ತಿನ ಯಾವುದೇ ದೇಶದ ಇತಿಹಾಸವೆನ್ನವುದು ರಾಜಮಹಾರಾಜರ ಇತಿಹಾಸವೇ ಆಗಿದೆ. ಅಲ್ಲಿ ಪ್ರಜೆಗಳ ಇತಿಹಾಸವಿಲ್ಲ. ಭೂಮಿ ಮೇಲಿನ ಒಡೆತನಕ್ಕಾಗಿ ರಾಜಮನೆತನಗಳು ತಮ್ಮ ತಮ್ಮಲ್ಲಿ ಹೊಡೆದಾಡಿದ್ದನ್ನು ಇತಿಹಾಸವೆಂದು ಬರೆದಿಡಲಾಗಿದೆ. ಇಲ್ಲಿ ಸಾಮಾನ್ಯ ಜನರ ಬದುಕಿನ ವಿವರಗಳು ಇಲ್ಲವೇ ಇಲ್ಲ. ಈ ಸಾಮಾನ್ಯರಲ್ಲಿ ಮಹಿಳೆಯರೂ ಸೇರಿದ್ದಾರೆ ಎನ್ನುವುದನ್ನು ವಿಶೇಷವಾಗಿ ಉಲ್ಲೇಖಿಸಬೇಕು.

ಹೈದ್ರಾಬಾದ ಕರ್ನಾಟಕದ ಸಣ್ಣ ಪುಟ್ಟ ಸಂಸ್ಥಾನಗಳ ಕೆಲವು ಮಹಿಳೆಯರು ಅಗತ್ಯ ಬಿದ್ದಾಗ ರಣರಂಗದಲ್ಲೂ ಹೋರಾಡಿದ ಪ್ರಸ್ತಾಪ ಬಿಟ್ಟರೆ ಹೈದ್ರಾಬಾದ ಕರ್ನಾಟಕದ ಇತಿಹಾಸವೂ ಪುರುಷ ಇತಿಹಾಸವೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯರನ್ನು, ರಾಜಕೀಯದಿಂದ ದೂರ ಇರಿಸಲಾಗಿದೆ. ಇತಿಹಾಸದ ಈ ಪರಂಪರೆ ಆಧುನಿಕ ಕಾಲದಲ್ಲೂ ಮುಂದುವರಿದಿದೆ. ಆದರೆ ಮಹಿಳೆಯರು ರಾಜಕೀಯದ ಎಲ್ಲಾ ಹಂತಗಳಲ್ಲೂ ಸಮಾನ ಅಧಿಕಾರ ಪಡೆಯುವವರೆಗೂ ಯಾವ ಸಮಾಜವು ಮಹಿಳೆಯರಿಗೆ, ಸಮಾನ ಸ್ಥಾನಮಾನ ಇರುವುದೆಂದು ಸಾಧಿಸಲಾರದು.

ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ತೀರಾ ಕಡಿಮೆ ಇರುವುದಕ್ಕೆ ಕಾರಣಗಳು ಹಲವಾರು. ನಮ್ಮ ಸಮಾಜ ವ್ಯವಸ್ಥೆಯ ಪುರುಷ ಕೇಂದ್ರಿತ ಸ್ವರೂಪ ಅದರ ಒಂದು ಅಂಗವಾದ ರಾಜಕಾರಣದಲ್ಲೂ ಉಳಿದಿರುವುದು ಸಹಜ. ಗಂಡು ಹುಟ್ಟಿರುವುದೇ ಆಳುವುದಕ್ಕೆ ಮತ್ತು ಹೆಣ್ಣು ಆಳಿಸಿಕೊಳ್ಳುವುದಕ್ಕೆ ಎಂಬ ಪರಂಪರಾಗತ ನಂಬಿಕೆ, ಗಂಡಸು ಎಲ್ಲದಕ್ಕೂ ಯಜಮಾನ ಎಂಬ ರೂಢಿ, ರಾಜಕಾರಣದ ಸೂಕ್ಷ್ಮತೆ

ಹಾಗೂ ರೂಕ್ಷತೆ ಕೋಮಲ ಮನಸ್ಸಿನ ಹೆಣ್ಣಿಗೆ ಹೇಳಿಸಿದ್ದಲ್ಲ ಎಂಬ ಸಂಪ್ರಾದಾಯ ಮೊದಲಾದವು ಮಹಿಳೆ ರಾಜಕಾರಣದಲ್ಲಿ ಭಾಗವಹಿಸದಂತೆ ತಡೆದಿವೆ. ಸಾಮಾಜಿಕ ಹಾಗೂ ಕೌಟುಂಬಿಕ ಜವಾಬ್ದಾರಿಗಳು ಅವಳನ್ನು ರಾಜಕಾರಣದ ಬಗ್ಗೆ ಯೋಚಿಸದಂತೆ ಮಾಡಿವೆ. ಮಹಿಳೆಯ ರಾಜಕೀಯ ಪ್ರವೇಶಕ್ಕೆ ಶಿಕ್ಷಣದ ಕೊರತೆಯೂ ಅಡ್ಡಿಯಾಗಿದೆ.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಸ್ವಾತಂತ್ರ್ಯದ ಇಷ್ಟು ವರ್ಷಗಳ ಅವಧಿಯಲ್ಲಿ ಒಬ್ಬ ಮಹಿಳಾ ಶಾಸಕಿಯಾಗಲಿ, ಸಂಸದೆಯಾಗಲಿ ಇಲ್ಲದಿರುವುದು ಇಲ್ಲಿಯ ಪುರುಷ ರಾಜಕಾರಣದ ಹುನ್ನಾರವನ್ನು ಸ್ಪಷ್ಟಪಡಿಸುತ್ತದೆ. ಗ್ರಾಮಪಂಚಾಯಿತಿ ಹಾಗೂ ಜಿಲ್ಲಾಪಂಚಾಯ್ತಿಗಳಲ್ಲಿ ಮೂವತ್ತು ಮೂರು ಪ್ರತಿಶತ ಮೀಸಲಾತಿ ಕಡ್ಡಾಯದ ಕಾರಣ ಮಹಿಳೆಯರು ಕಾಣಿಸಿಕೊಳ್ಳುತ್ತಿದ್ದಾರೆ. ಆರಂಭದಲ್ಲಿ ಪುರುಷರು–ಸ್ತ್ರೀ ಮುಖವಾಡವಾಗಿ ಕಾರ್ಯ ನಿರ್ವಹಿಸಿದರು. ಇಂದು ಸ್ವಂತ ನಿರ್ಣಯ ಕೈಗೊಳ್ಳುವ ಮಟ್ಟಿಗೆ ಬೆಳೆವಣಿಗೆಯಾಗುತ್ತಿದೆ. ಆದರೂ ಮಹಿಳೆಯರಿಗೆ ಆನೇಕ ಅನಾನುಕೂಲತೆಗಳು ಹಾಗೂ ಪ್ರತಿಬಂಧಕಗಳು ಕಾಡುತ್ತವೆ. ಅಜ್ಞಾನ ಅನಕ್ಷರತೆ ವೇತನದ ದುಡಿಮೆಯೊಂದಿಗೆ ಗೃಹಕಾರ್ಯ ಹಾಗೂ ಮಕ್ಕಳ ಪಾಲನೆಯ ಜವಾಬ್ದಾರಿ, ಸಾರ್ವಜನಿಕ ಜೀವನ ಪ್ರವೇಶಕ್ಕೆ ಸಾಮಾಜಿಕ ಹಾಗೂ ಕೌಟುಂಬಿಕ ವಿರೋಧ, ಆತ್ಮವಿಶ್ವಾಸದ ಕೊರತೆ, ರಾಜಕೀಯದ ಅನನುಭವಗಳು ಗೊಂದಲವನ್ನುಂಟು ಮಾಡುತ್ತವೆ. ಆಯ್ಕೆಯಾದ ನಂತರದ ಅಡಳಿತದ ತೊಡಕುಗಳನ್ನು ನಿವಾರಿಸಬಹುದು. ಆದರೆ ಇಲ್ಲಿಯೂ ಪುರುಷರು ತಮ್ಮ ಮೂಗು ತೂರಿಸಿ, ತಮ್ಮ ಮನೆಯ ಮಹಿಳೆಯರ ಬದಲು ತಾವೇ ಅಧಿಕಾರ ಚಲಾಯಿಸಲು ನೋಡುತ್ತಾರೆ. ಇವುಗಳ ಮಧ್ಯದಲ್ಲೂ ಕೆಲ ಗ್ರಾಮ ಪಂಚಾಯ್ತಿಗಳು ಸಂಪೂರ್ಣ ಮಹಿಳಾ ಸದಸ್ಯರನ್ನು ಹೊಂದಿ ಉತ್ತಮ ಆಡಳಿತ ನಡೆಸಿದ ದೃಷ್ಟಾಂತಗಳಿವೆ. ಬೀದರ ಜಿಲ್ಲೆಯ ವಾಂಜರಖೇಡ ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ.

೩.೧೯ ಸಮಕಾಲೀನ ಮಹಿಳೆ :

ಸಮಕಾಲೀನ ಸಂದರ್ಭದಲ್ಲಿಯೂ ಹೈದರಾಬಾದ ಕರ್ನಾಟಕ ಪ್ರದೇಶವು ಪುರುಷ ಪ್ರಧಾನ ವ್ಯವಸ್ಥೆಯನ್ನು ಕುಟುಂಬ ಹಾಗೂ ಸಮಾಜದಲ್ಲಿ ಪ್ರಬಲವಾಗಿ ಹೊಂದಿದ್ದು ಮಹಿಳೆಯರ ಸ್ಥಿತಿ ಕೆಳಮಟ್ಟದ್ದೇ ಆಗಿದೆ. ನಿಜಾಂ ಅಡಳಿತದಲ್ಲಿ ವ್ಯಾಪಕವಾಗಿ ಪಸರಿಸಿದ ಮುಸ್ಲಿಂ ಸಂಸ್ಕೃತಿಯ ಪ್ರಭಾವದಿಂದ ರೂಪಗೊಂಡ ಸಾಮಾಜಿಕ ಮೌಲ್ಯಗಳು ಇಂದಿಗೂ ಮಹಿಳಾ ಬದುಕಿನ ಮೇಲೆ ನಿಯಂತ್ರಣವನ್ನು ಸಾಧಿಸಿದೆ.

ಸ್ವಾತಂತ್ರ್ಯಾ ನಂತರ ಬ್ರಿಟಿಷರು ಜಾರಿಗೊಳಿಸಿದ ರಾಜಕೀಯ ವ್ಯವಸ್ಥೆಯ ಪರಿಣಾಮ ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೂ ವ್ಯಾಪಿಸಿದ್ದರ ಪರಿಣಾಮವಾಗಿ ಮಹಿಳೆಯರ ಸ್ಥಿತಿಗತಿಗಳಲ್ಲಿ ಒಂದು ಚಲನೆ ಹಾಗೂ ಬದಲಾವಣೆ ಕಾಣತೊಡಗಿತು. ವೃತ್ತಿ ಕಸುಬುಗಳನ್ನಾಧರಿಸಿದ್ದ ಜಾತಿ ವ್ಯವಸ್ಥೆಯಲ್ಲಿ ವಿವಿಧ ಬಗೆಯ ಬದಲಾವಣೆಗಳು ಬೆರೆಯತೊಡಗಿದವು. ಮೊದಲು ಮೇಲುಜಾತಿಯವರು ಫಲಾನುಭವಿಗಳೆನಿಸಿ ಸಾಮ್ಾಜಿಕವಾಗಿ ಮೇಲು ಮೇಲಕ್ಕೆ ಚಲಿಸಿದರೆಂಬುದು ನಿಜವಾದರೂ ಕ್ರಮೇಣ ಹತ್ತು ಹಲವು ಸಣ್ಣ ಸಮುದಾಯಗಳೂ ಹೀಗೆ ಚಲಿಸತೊಡಗಿದವು. ರಾಜಕೀಯ ಅಧಿಕಾರ ಶಿಕ್ಷಣಗಳ ಅವಕಾಶಗಳನ್ನು ಪಡೆದು ಅಧಿಕಾರದ ವಿವಿಧ ಹಂತಗಳನ್ನು ಪ್ರವೇಶಿಸಿದರು. ಹಿಂದುಳಿದ ಜಾತಿ ಪಂಗಡಗಳಿಗೂ ಈ ಅವಕಾಶ

ವಿಸ್ತರಿಸಿತು ಹಸಿರು ಕ್ರಾಂತಿಯಂತಹ ಸರಕಾರಿ ಕಾರ್ಯಕ್ರಮಗಳಿಂದಾಗಿ ಗ್ರಾಮೀಣ ಕೃಷಿ ಚಟುವಟಿಕೆಯಲ್ಲಿ ಹೊಸ ಬದಲಾವಣೆಗಳು ಬಂದವು. ಆರ್ಥಿಕವಾಗಿ ಮುನ್ನಡೆಯ ತೊಡಗಿದ ಗ್ರಾಮೀಣ ಸಮಾಜ, ನಗರದ ಮಧ್ಯಮ ವರ್ಗದ ಮತ್ತು ಮೇಲುಜಾತಿಯ ಜೀವನ ವಿಧಾನಗಳನ್ನು ಅನುಸರಿಸತೊಡಗಿದವು. ಕೆಳಜಾತಿ ವರ್ಗಗಳು ಸರಕಾರದ ಜಾತ್ಯಾತೀತ ಕಾರ್ಯಕ್ರಮಗಳಿಂದ ಅರ್ಥಿಕವಾಗಿ ಮುನ್ನಡೆದರೂ ಸಾಮಾಜಿಕ ಮನ್ನಣೆ ಪಡೆಯಲು ಮೇಲು ಜಾತಿಯ ಅನುಕರಣೆಗೆ ತೊಡಗಿ ತಮ್ಮ ವೃತ್ತಿ ಕಸುಬುಗಳಲ್ಲಷ್ಟೇ ಅಲ್ಲದೆ ಆಹಾರ ದೇವರುಗಳಲ್ಲೂ ಬದಲಾವಣೆ ತಂದುಕೊಂಡರು. ಬದಲಾವಣೆಯ ತೀವ್ರ ಸ್ವರೂಪಗಳು ಮಹಿಳೆಯರಲ್ಲೇ ಹೆಚ್ಚು ವ್ಯಕ್ತವಾದವು.

ವಿವಾಹ ವ್ಯವಸ್ಥೆಯಲ್ಲಿ ಗಂಡ-ಹೆಂಡಿರ ಸಂಬಂಧವೆಂಬುದು ಅಸಮಾನತೆಯನ್ನು ಹೊಂದಿರುವಂಥದು. ಹೆಣ್ಣು ಮದುವೆಗೆ ಮುಂಚೆ ಶುದ್ಧ ಕನ್ಯೆಯಾಗಿರಬೇಕು ಮದುವೆಯ ನಂತರ ಯಾವುದೇ ಕಾರಣಕ್ಕೆ ಗಂಡನನ್ನು ಬಿಡುವಂತಿಲ್ಲ ವಿಧವೆಯಾದರೆ ತನ್ನೆಲ್ಲ ಸುಖವನ್ನು ತ್ಯಜಿಸಬೇಕು ಆದರೆ ಪುರುಷರಿಗೆ ಈ ಯಾವ ನಿರ್ಬಂಧಗಳಿಲ್ಲ ಮರು ಮದುವೆಯ ಮೂಲಕ ಮತ್ತೆ ಒದಗಿದ ತೊಂದರೆಯನ್ನು ನಿವಾರಿಸಿಕೊಳ್ಳುತ್ತಾಳೆ. ಕೆಳಸ್ತರಗಳಲ್ಲಿ ಈ ಪಕ್ಷಪಾತವಿಲ್ಲ ಅಲ್ಲಿ ಹೆಣ್ಣಿನ ಶೀಲ ಅವಳ ಮರು ಮದುವೆ ಪ್ರಸಂಗ ಗಂಡನನ್ನು ಬಿಡುವ ಹಕ್ಕು ಇವೆಲ್ಲವನ್ನು ಗಂಡಿಗೆ ಸಮಾನವಾಗಿಯೇ ನಿರ್ಣಯಿಸಲಾಗುತ್ತದೆ.

ರಾಜಕೀಯ ಹಾಗೂ ಆರ್ಥಿಕ ವಲಯಗಳಲ್ಲಾದ ಬದಲಾವಣೆಗಳಿಂದಾದ ನಗರೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯ ಸ್ಥಿತಿಗತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಕಾಣಲಾರಂಭಿಸಿವೆ. ಮಹಿಳೆಗೆ ದೊರಕಿದ ಶಿಕ್ಷಣ ಹಾಗೂ ಉದ್ಯೋಗದ ಅವಕಾಶಗಳಿಂದಾಗಿ ಅವಳೀಗ ಪುರುಷನಿಗೆ ಸಮಾನವಾದ ಸ್ಥಾನಮಾನಗಳಲ್ಲಿ ಪ್ರವೇಶ ಪಡೆಯುತ್ತಿದ್ದಾಳೆ. ನಗರದ ಮಹಿಳೆಯು ದಕ್ಕಿಸಿಕೊಳ್ಳುತ್ತಿರುವ ಅವಕಾಶಗಳನ್ನು ಪುರುಷರು ಅನಿವಾರ್ಯವಾಗಿ ಒಪ್ಪಬೇಕಾಗಿದೆ.

ಕರ್ನಾಟಕದ ಉಳಿದ ಪ್ರದೇಶಗಳಿಗೆ ಹೋಲಿಸಿದರೆ ಇಂದಿಗೂ ಈ ಪ್ರದೇಶದ ಮಹಿಳೆಯರ ಶಿಕ್ಷಣ ಹಾಗೂ ಉದ್ಯೋಗಗಳಲ್ಲಿಯ ಪ್ರವೇಶ ಸಾಧನೆಗಳು ಅಷ್ಟೇನೂ ತೀವ್ರವಾಗಿಲ್ಲ. ಅದರೂ ಮಹಿಳೆಯ ಸ್ಥಿತಿಗತಿಗಳಲ್ಲಿ ಮೇಲು ಚಲನೆ ನಿರ್ಲಕ್ಷಿಸುವಂಥದ್ದಲ್ಲ ಅನಾದಿಕಾಲದಿಂದಲೂ ಜಡವಾಗಿದ್ದ ಸ್ಥಿತಿ ನಗರೀಕರಣದಿಂದ ಬದಲಾವಣೆ ಕಾಣುವಂತಾಗಿದೆ. ಮನೆಯ ನಾಲ್ಕು ಗೋಡೆಗಳಿಂದ ಮಹಿಳೆ ಹೊರಬರಲು ದಾರಿ ದೊರೆತಿದೆ.

ಆದರೂ ಹೆಣ್ಣು ಮತ್ತು ಗಂಡು ಮಕ್ಕಳ ಬಗೆಗಿನ ನಮ್ಮ ಸಾಮಾಜಿಕ ಅಭಿಪ್ರಾಯಗಳಿಂದಾಗಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಮುಂದುವರಿಸುವುದು ಸುಲಭವೇನಲ್ಲ. ವಾಸ್ತವದಲ್ಲಿ ಶಿಕ್ಷಣದ ಉನ್ನತ ಹಂತಗಳನ್ನು ತಲುಪಿದ ಹೆಣ್ಣು ಮಕ್ಕಳ ಸಾಧನೆ ಸಾಮರ್ಥ್ಯಗಳು ಗಂಡು ಹುಡುಗರನ್ನು ಮೀರಿಸುತ್ತಿವೆ. ಇಷ್ಟಾದರೂ ಅವಳ ಶಿಕ್ಷಣಕ್ಕೆ ಕುಟುಂಬದಲ್ಲೇ ಹಲವು ಕಂಟಕಗಳಿವೆ. ಅಷ್ಟೇನೂ ಬುದ್ಧಿವಂತನಲ್ಲದ ಮಗ, ರ್‍ಯಾಂಕ್ ಪಡೆದ ಮಗಳು ಇವರಿಬ್ಬರಲ್ಲಿ ಉನ್ನತ ಶಿಕ್ಷಣದ ಅವಕಾಶ ದೊರೆಯುವುದು ಮೊದಲು ಮಗನಿಗೆ. ಉಳಿದರೆ ಮಗಳಿಗೆ. ಕೆಲವೊಮ್ಮೆ ಆರ್ಥಿಕ ಅನುಕೂಲವಿದ್ದರು ಜಾಸ್ತಿ ಓದಿದರೆ ಗಂಡು ಸಿಗಲಾರನೆಂಬ

ಕಾರಣ ಅವಳ ಅವಕಾಶವನ್ನು ಮೊಟಕು ಮಾಡಲಾಗುತ್ತದೆ. ಗಂಡ-ಹೆಂಡತಿಯರಲ್ಲಿ ಯಾವ ಬಗೆಯಲ್ಲೂ ಹೆಂಡತಿ ಗಂಡನನ್ನು ಮೀರಿಸುವಂತಿರಬಾರದು. ಅವಳ ಜಾತಿಯಲ್ಲಿ ಹೆಚ್ಚು ಓದಿದ ಗಂಡು ಇಲ್ಲವೆಂದರೆ ಇವಳ ಓದು ಮುಂದುವರೆಯುವುದಿಲ್ಲ. ಇನ್ನೊಂದು ವಿಪರ್ಯಾಸದ ಕಾರಣಗಳಲ್ಲಿ ಅವಳು ಒಂದು ಹಂತಕ್ಕಾದರೂ ಓದುವುದು ಅಪೇಕ್ಷಣೀಯವೆನಿಸಿದೆ. ಮಧ್ಯಮ ವರ್ಗದ ಎಲ್ಲ ವರಗಳೂ ತಮ್ಮ ಆದಾಯಕ್ಕೆ ಪೂರಕವಾಗಿ ಹೆಂಡಂದಿರ ವರಮಾನವಿರಲಿ ಎಂದು ಅಪೇಕ್ಷಿಸುತ್ತಾರೆ. ಇಲ್ಲಿ ಹೆಣ್ಣು ಓದಿರಲೂ ಬೇಕು. ಹಾಗೆಂದು ವರನ ಓದನ್ನು ಮೀರಿ ಅವನ ನೌಕರಿಯ ಸ್ತರವನ್ನು ಮೀರಿ ಮುಂದೆ ಹೋಗಿ ಬಿಡಬಾರದು. ಮಧ್ಯಮ ವರ್ಗದ ಈ ಮನೋಭಾವ ಉಳಿದ ಜಾತಿ ವರ್ಗಗಳಿಗೂ ಹಬ್ಬುತ್ತಿದೆ.[೪೪]

ಹೈದರಾಬಾದ ಕರ್ನಾಟಕದ ರಜಾಕಾರ ಗಲಾಟೆಯ ಸಂದರ್ಭದಲ್ಲಿ ಅನಿವಾರ್ಯವಾಗಿ ಹೋರಾಟದಲ್ಲಿ ಭಾಗವಹಿಸಿದ ಮೇಲೆ ದೇಶದ ಇತರ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರು ಪ್ರಜಾಪ್ರಭುತ್ವದ ಕಲ್ಪನೆಯನ್ನು ಅಂತರ್ಗತವಾಗಿಸಿಕೊಂಡದ್ದರ ಪರಿಣಾಮವನ್ನು ಗ್ರಹಿಸಲು ಸಾಧ್ಯವಾಯಿತು. ರಾಜಕೀಯ ಪ್ರಕ್ರಿಯೆಯಲ್ಲಿ ಮಹಿಳೆಯರು ಪ್ರಜಾಪ್ರತಿನಿಧಿಗಳಾಗಿ ಅಧಿಕಾರವನ್ನು ವಹಿಸಿಕೊಂಡರು. ಆದರೂ ಗ್ರಾಮ ಪಂಚಾಯಿತಿ ತಾಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ ಉಪಾಧ್ಯಕ್ಷ, ಅಧ್ಯಕ್ಷ, ಮತ್ತು ಪುರಸಭೆ, ನಗರ ಸಭೆಗಳ ಸದಸ್ಯೆ, ಅಧ್ಯಕ್ಷೆಯಾದುದನ್ನು ಬಿಟ್ಟರೆ ವಿಧಾನ ಪರಿಷತ್ತಿಗೆ ನೇಮಕಗೊಂಡ ಒಂದಿಬ್ಬರು ಮಹಿಳೆಯರನ್ನು ಬಿಟ್ಟರೆ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಶಾಸಕರಾಗಿ, ಸಂಸದರಾಗಿ ಆಯ್ಕೆಯಾದ ಮಹಿಳೆಯರಿಲ್ಲ. ಈ ಭಾಗದ ಪ್ರಗತಿಯ ನಿಧಾನಗತಿಯನ್ನು ಇದು ಸೂಚಿಸುತ್ತದೆ.

ನಿಧಾನಗತಿಯಲ್ಲೇ ಆಗಲಿ ರಾಜಕೀಯ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಮಹಿಳೆಯರು ಪ್ರವೇಶ ಪಡೆಯುತ್ತಿರುವುದು ಸಮಾಧಾನದ ಸಂಗತಿ. ಇಂಥ ಮಹಿಳೆಯರು ಬಹುಮಟ್ಟಿಗೆ ನಗರದ ಮಧ್ಯಮ ವರ್ಗದ ಮೇಲು ಜಾತಿಗೆ ಸೇರಿದವರಾಗಿದ್ದಾರೆ. ಮಹಿಳೆಯ ಪ್ರವೇಶವನ್ನು ತಡೆಯುವ ಪ್ರಯತ್ನಗಳು ಪರೋಕ್ಷವಾಗಿ ನಡೆಯುತ್ತಲೇ ಇವೆ. ಪುರುಷ ಪ್ರಧಾನ ವ್ಯವಸ್ಥೆಗೆ ಇದನ್ನು ಅಷ್ಟು ಸಹಜವಾಗಿ ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೆ ಮಹಿಳೆಯ ಮುನ್ನಡೆಯು ವಿವಿಧ ಜಾತಿ, ವರ್ಗ, ಗ್ರಾಮಗಳ ಹಂತಕ್ಕೂ ವಿಸ್ತರಿಸುತ್ತಾ ಸಾಗಿರುವುದನ್ನು ಈ ಸಮಾಜವು ಅನಿವಾರ್ಯವಾಗಿಯಾದರೂ ಒಪ್ಪಿಕೊಳ್ಳಲೇ ಬೇಕಾಗಿದೆ.

ಹೈದರಾಬಾದ ಕರ್ನಾಟಕದ ಮಹಿಳೆ ಗೃಹಕೃತ್ಯದ ಹೊಣೆಗಾರಿಕೆಯೊಂದಿಗೆ ಹೊಸ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಲು ಯತ್ನಿಸುತ್ತಿದ್ದಾಳೆ. ಪರಂಪರೆಯನ್ನು ಕಾಯ್ದು ಸಂರಕ್ಷಿಸುವ ಕರ್ತವ್ಯದೊಂದಿಗೆ ಆಧುನಿಕತೆಯನ್ನು ಸಮನ್ವಯಗೊಳಿಸುತ್ತಲೇ ಸಾಗುವುದು ತೀರಾ ಕಷ್ಟದಾಯಕ. ಆದರೆ ಮುಂದಿನ ಪೀಳಿಗೆಗೆ ಒಟ್ಟಾರೆ ಸಮಾಜಕ್ಕೆ ಭರವಸೆಯನ್ನೊದಗಿಸಬೇಕಾದ ಅನಿವಾರ್ಯತೆ ಇದಾಗಿದೆ. ಈ ಆದರ್ಶದ ಹೋರಾಟ ಅವಳ ವಿಕಸನಕ್ಕೆ ಸಮಾಜದ ಒಳಿತಿಗೂ ಒಟ್ಟಿಗೇ ಮಾರ್ಗವನ್ನು ನಿರ್ಮಿಸುತ್ತಿದೆ. ಆಚಾರ ವಿಚಾರಗಳಲ್ಲಿ ಸಂಪ್ರದಾಯಗಳ ಸ್ಥೂಲ ವಿವರಗಳಲ್ಲಿ ಮೊದಲಿನಷ್ಟು ಕಟ್ಟುನಿಟ್ಟು ಸಾಧ್ಯವಿಲ್ಲದೆ ಹೋಗುತ್ತಿರುವುದನ್ನಷ್ಟೇ ಗಮನಿಸಿ ಒಟ್ಟು ಸಂಸ್ಕೃತಿಗೆ ಏನೋ ದೊಡ್ಡ ಪ್ರಮಾದ ಸಂಭವಿಸುತ್ತಿದೆ ಎಂಬಂತೆ ಇದಕ್ಕೆಲ್ಲ ಮಹಿಳೆಯೇ ಕಾರಣ ಎಂಬಂತೆ ಕೆಲವರು ಗಲಾಟೆ ಮಾಡುತ್ತಿದ್ದಾರೆ.

ಆದರೆ ವಾಸ್ತವವಾಗಿ ಹೈದರಾಬಾದ ಕರ್ನಾಟಕದ ಮಹಿಳೆ ಅಂದಿನಿಂದ ಇಂದಿನವರೆಗೆ ಕುಟುಂಬದ ಸಂರಕ್ಷಣೆಯ ಭಾರವನ್ನು ಬರಲಿರುವ ಪೀಳಿಗೆಯನ್ನು ಸಮರ್ಥವಾಗಿ ಸಂಗೋಪನೆ ಮಾಡುವ ಹೊಣೆಯನ್ನು ಪ್ರಧಾನವಾಗಿಯೇ ಪರಿಗಣಿಸಿ ನಡೆಯುತ್ತಿದ್ದಾಳೆ. ತನ್ನ ವ್ಯಕ್ತಿತ್ವ ವಿಕಸನಕ್ಕೆ ಹೊರಗಿನ ಉದ್ಯೋಗ, ನೌಕರಿಗಳು ಸಹಾಯವಾಗುತ್ತಿದ್ದರೂ ಬಹಳಷ್ಟು ಸಂದರ್ಭಗಳಲ್ಲಿ ಅವನ್ನು ಬಿಟ್ಟುಕೊಡಲು ಕೂಡ ಅವಳು ಸಿದ್ಧಳಿರುತ್ತಾಳೆ. ಮನೆಯ ಒಳಗಿನ ಪಾತ್ರಕ್ಕೆ ಧಕ್ಕೆ ಬಾರದಂತೆ ಏನನ್ನಾದರೂ ಸಾಧಿಸುವ ಸಾಧ್ಯತೆಗಳ ಬಗ್ಗೆ ಯೋಚಿಸುತ್ತಾಳೆ.

ಆಧುನಿಕತೆಯ ಪರಿಣಾಮ ಅತ್ಯಾಧುನಿಕ ಗೃಹೋಪಕರಣಗಳು, ಕಂಪ್ಯೂಟರ್‌ಗಳು ಹೊಸ ತಂತ್ರಜ್ಞಾನಗಳು ಆಧುನಿಕ ಮಹಿಳೆಯ ದೈನಂದಿನ ಗೋಳಾಟದಲ್ಲಿ ನೆರವು ನೀಡುತ್ತಿವೆ ಎಂಬುದೇನೋ ನಿಜ. ಆದರೂ ಅವಳು ನಿರ್ವಹಿಸಬೇಕಾಗಿರುವ ದ್ವಿಪಾತ್ರಗಳ ಮೂಲ ಸಾಮಾಜಿಕ ಆಶಯವೇ ಅವಳ ಮುಂದೆ ನಿಂತಿರುವ ದೊಡ್ಡ ಸವಾಲಾಗಿರುವುದು. ಸಮಾಜವು ಆರೋಗ್ಯಕರವಾಗಿ ಸಂತೃಪ್ತವಾಗಿ ಮುನ್ನಡೆಯುವಲ್ಲಿ ಕುಟುಂಬ ಸಂಸ್ಥೆಯ ಪಾತ್ರವೇ ಅತ್ಯಂತ ಮಹತ್ತರವಾದುದು. ಈ ಸಂಸ್ಥೆಯು ಸದೃಢವಾಗಿ ನಿಲ್ಲಬೇಕೆಂದರೆ ಮಹಿಳೆಯೇ ಮುಖ್ಯ ಕಾರಣ. ಹಿಂದಿನಿಂದಲೂ ಹೆಣ್ಣೇ ಮನೆಯ ಕೇಂದ್ರಶಕ್ತಿಯಾಗಿ ದುಡಿಯುತ್ತಾ ಬಂದಿದ್ದಾಳೆ. ಅವಳು ಆತ್ಮ ವಿಕಸನದ ಹಾದಿಯನ್ನು ಶೋಧಿಸುತ್ತಿರುವಾಗಲೂ ಮೂಲ ಕೇಂದ್ರವನ್ನು ಮರೆಯದೆ ಸಾಗಬೇಕೆಂಬ ಬಗ್ಗೆ ಪ್ರೀತಿಯನ್ನು ಹೊಂದಿದ್ದಾಳೆ. ಇಂದಿನ ಸಮಾಜವು ಅವಳನ್ನು ಕೃತಜ್ಞತೆಯಿಂದ ಕಾಣಬೇಕು ಎಂಬುದಕ್ಕೆ ಇದಕ್ಕಿಂತ ದೊಡ್ಡ ಕಾರಣ ಬೇಕಾಗಿಲ್ಲ. ಅಂಥಾದ್ದರಲ್ಲಿ ಅವಳನ್ನು ಛಿದ್ರಗೊಳಿಸಲು ಹೊಸ ಹೊಸ ಉಪಾಯಗಳನ್ನು ಹುಡುಕುತ್ತಾ ಸಾಗಿರುವ ಈ ಸಮಾಜದ ಎದುರು ಮಹಿಳೆ ಸವಾಲೆಸೆದು ನಿಲ್ಲುವ ಪ್ರತಿಭಟನೆಯ ಮಾದರಿಯಾಗಿ ಬೆಳೆಯುವುದು ಅನಿವಾರ್ಯವಾಗಿ ಬಿಡಬಹುದು. ಇದನ್ನು ಇನ್ನಾದರೂ ಈ ಸಮಾಜವು ಅರಿತು ಮಹಿಳೆಯನ್ನು ಮನ್ನಿಸಿ ಗೌರವಿಸಬೇಕು. ಪ್ರೀತಿ ಸಹಾನುಭೂತಿಗಳಿಂದ ಅವಳನ್ನು ಕಾಣುವುದು ಅವಳ ವಿಕಸನದ ಹಾದಿಗಳಿಗೆ ತೊಡಕಾಗದೆ ನೆರವಾಗುವುದು ಸಮಾಜದ ಏಳಿಗೆಯ ಅಗತ್ಯಗಳಾಗಿವೆ. ಎಂದು ಹೇಳುವ ಡಾ. ಎಚ್.ಎಸ್.ಶ್ರೀಮತಿಯವರ ಮಾತಿನಲ್ಲಿ ಸತ್ಯಾಂಶವಿದೆ. ಮಹಿಳೆಯನ್ನು ಗೌರವಿಸುವುದೆಂದರೆ ಸಮಾಜ ತನ್ನನ್ನು ತಾನು ಗೌರವಿಸಿಕೊಂಡಂತೆ.[೬೫]

ಹೈದರಾಬಾದ ಕರ್ನಾಟಕದ ಮಹಿಳೆಯ ಸ್ಥಿತಿಗತಿಗಳಲ್ಲಿ ಆಗುತ್ತಿರುವ ಬದಲಾವಣೆಗಳ ಸ್ವರೂಪವನ್ನು ಗ್ರಾಮಗಳಿಂದ ನಗರಗಳಿಗೆ ವಲಸೆ, ರಾಜಕೀಯದಲ್ಲಿ ಮಹಿಳೆಯರ ಪ್ರವೇಶ, ಶಿಕ್ಷಣಾವಕಾಶ ಮುಂತಾದ ಸಂಗತಿಗಳ ಹಿನ್ನೆಲೆಯಲ್ಲಿ ಗ್ರಹಿಸಲು ಯತ್ನಿಸಲಾಗಿದೆ. ಎಲ್ಲ ಜಾತಿ ವರ್ಗಗಳ ಮಹಿಳೆಯರೂ ಈ ಬದಲಾವಣೆಗಳಿಗೆ ಕ್ರಮೇಣವಾಗಿಯಾದರೂ ವ್ಯಾಪಿಸಿಕೊಳ್ಳುತ್ತಾ ಒಗ್ಗಿಕೊಳ್ಳುತ್ತಾ ಸಾಗಿದ್ದಾರೆ ಎಂಬುದು ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯಾಗಿದೆ. ಇಷ್ಟೆಲ್ಲ ಆದರೂ ಈ ಅಭಿವೃದ್ಧಿ ಅಥವಾ ಮಹಿಳೆಯ ಸ್ಥಿತಿಗತಿಯ ಬದಲಾವಣೆ ಕರ್ನಾಟಕದ ಉಳಿದ ಪ್ರದೇಶಗಳಿಗಿಂತ ತೀರ ಕೆಳಮಟ್ಟದ್ದಾಗಿದೆ. ಎಂಬುದನ್ನು ರಾಜ್ಯದಲ್ಲಿ ೧೯೯೯ರಲ್ಲಿ ಯೋಜನಾ ವಿಭಾಗವು ತಯಾರಿಸಿದ ಲಿಂಗ ಅಭಿವೃದ್ಧಿ ಸೂಚಿ. (Gender development Index) (ರಾಯಚೂರು, ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳು) ಸೂಚಿಸುತ್ತದೆ.

ಜಿಲ್ಲೆಗಳು	ಮಾನವ ಅಭಿವೃದ್ಧಿ ಚೂಚಿ.	ಶ್ರೇಣಿ	ಲಿಂಗ ಅಭಿವೃದ್ಧಿ ಸೂಚಿ	ಶ್ರೇಣಿ
ಬೀದರ	೦.೪೧೯	೧೮	೦.೪೦೩	೧೮
ಕಲಬುರಗಿ	೦.೪೧೨	೧೯	೦.೩೮೮	೧೯
ರಾಯಚೂರು	೦.೩೯೯	೨೦	೦.೩೭೬	೨೦
ರಾಜ್ಯ	೦.೪೭೦	೦.೪೫೧		

ಮೂಲ : ಮಾನವ ಅಭಿವೃದ್ಧಿ ವರದಿ ೧೯೯೯ ಒಟ್ಟು : ೨೦

ಈ ಕೆಳಮಟ್ಟದ ಲಿಂಗ ಅಭಿವೃದ್ಧಿ ಸೂಚಿಯು ಮಹಿಳೆಯರ ಆರೋಗ್ಯ ಹಾಗೂ ಶಿಕ್ಷಣದ ಕೆಳಮಟ್ಟವನ್ನು ಸೂಚಿಸುತ್ತದೆ. ಲಿಂಗ ತಾರತಮ್ಯವು ಎಲ್ಲಾ ಕ್ಷೇತ್ರಗಳಲ್ಲಿ ಕಂಡು ಬರುತ್ತದೆ. ಮನೆಯಲ್ಲಿ ಆಚಾರೋಪಚಾರದಿಂದ ಮನೆಯ ಹೊರಗೆ ಎಲ್ಲಾ ಕೆಲಸದಲ್ಲಿ ಇದು ಆಚರಣೆಯಲ್ಲಿದೆ.

ಮಹಿಳಾ ಬದುಕಿನ ಹೀನ ಸ್ಥಿತಿಗೆ ಅವರಿಗೆ ದೊರಕುವ ಕಡಿಮೆ ಕೂಲಿಯೂ ಕಾರಣವಾಗಿದೆ. ಕರ್ನಾಟಕದ ಇನ್ನುಳಿದ ಭಾಗಗಳಿಗೆ ಹೋಲಿಸಿದರೆ ಈ ಭಾಗದ ಮಹಿಳೆಯರು ಅಧಿಕ ಶೋಷಣೆ ಹಾಗೂ ತಾರತಮ್ಯಕ್ಕೆ ಒಳಗಾಗಿರುವುದು ಸ್ಪಷ್ಟವಾಗುತ್ತದೆ. ಇದು ಸಾಮಾಜಿಕ ಹಿಂದುಳಿಯುವಿಕೆಯ ಸಂಕೇತವಾಗಿದೆ. ಶಿಕ್ಷಣದ ಅಭಾವದಿಂದ ಜನರಲ್ಲಿ ಪ್ರಗತಿಪರ ಮೌಲ್ಯಗಳು ಬೆಳೆದು ಬರಲು ಸಾಧ್ಯವಾಗುತ್ತಿಲ್ಲ. ಸಂಪ್ರದಾಯಿಕ ವಿಚಾರಗಳು ಜಾತೀಯ ಸಂಕುಚಿತತೆ ಇಂದಿಗೂ ಕಂಡು ಬರುತ್ತಿವೆ. ಅಭಿವೃದ್ಧಿ ಕಾರ್ಯಕ್ರಮಗಳೂ ಸೂಕ್ತವಾಗಿ ಅನುಷ್ಠಾನಗೊಳ್ಳುತ್ತಿಲ್ಲ.

ಟಿಪ್ಪಣಿಗಳು :

೧. ಪ್ರಭಾಮಣಿ : ಮಹಿಳೆ ಮತ್ತು ಧರ್ಮ : ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

೨. ಅದೇ ಪು.೨

೩. ಮಹಿಳಾ ವಿಮೋಚನೆ (೨೦೦೧) ಮಹಿಳಾ ಜಾಗೃತಿ ಪ್ರಕಾಶನ. ಬೆಂಗಳೂರು. ಪು. ೧೭

೪. ಎಂ.ಉಷಾ (೨೦೦೪) ಮಹಿಳಾ ಚಳುವಳಿಗಳು ಮತ್ತು ಮಹಿಳಾ ವಿಷಯಗಳು ಕ.ವಿ.ವಿ. ಹಂಪಿ. ಪು. ೧೪೮

೫. ಡಾ. ಸಿದ್ಧಲಿಂಗಯ್ಯ (೧೯೯೭) ಗ್ರಾಮದೇವತೆಗಳು : ಮೂಲಭಾರತಿ ಪ್ರಕಾಶನ. ಬೆಂಗಳೂರು. ಪು. ೭೧

೬. ಅದೇ ಪು. ೩೪

೭. ವಾಲಿಕಾರ ಚನ್ನಣ್ಣ (೧೯೯೮) ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳು ಜಾನಪದೀಯ ಅಧ್ಯಯನ, ದಲಿತ-ಬಂಡಾಯ ಪ್ರಕಾಶನ ಗುಲಬರ್ಗಾ. ಪು. ೯೮

೮. ರಾಜಶ್ರೀ ಕಠೋರ (೨೦೦೧) ದೇವಸೂಗೂರಿನ ನಾಗರ ಎಲ್ಲಮ್ಮ : ಶ್ರೀ ಸೂಗೂರೇಶ್ವರ ಸೇವಾ ಸಮಿತಿ ಟ್ರಸ್ಟ್. ದೇವಸೂಗೂರು. ಪು.೪೦

೯ ಡಾ. ಸಿದ್ಧಲಿಂಗಯ್ಯ (೧೯೯೭) ಗ್ರಾಮದೇವತೆಗಳು : ಮೂಲ ಭಾರತಿ ಪ್ರಕಾಶನ, ಬೆಂಗಳೂರು. ಪು. ೧೯

೧೦. ವಾಲಿಕಾರ ಚನ್ನಣ್ಣ (೧೯೯೯) ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳು ಜಾನಪದೀಯ ಅಧ್ಯಯನ : ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ ಗುಲಬರ್ಗಾ. ಪು. ೨೪೫

೧೧. ಡಾ. ಶಾಂತಾ ಇಮ್ರಾಪುರ (೨೦೦೧) ಮಹಿಳೆ ಸಾಹಿತ್ಯ ಸಂಸ್ಕೃತಿ : ಚೇತನಾ ಪ್ರಕಾಶನ. ಧಾರವಾಡ ಪು. ೩೬

೧೨. ಎನ್.ವಿ. ಭಾಗ್ಯಲಕ್ಷ್ಮಿ (೨೦೦೨) ಮಹಿಳಾ ಸ್ವಾತಂತ್ರ್ಯ : ಕನ್ನಡ ಸಾಹಿತ್ಯ ಪರಿಷತ್ತು ಪಂಪ ಮಹಾಕವಿ ರಸ್ತೆ, ಬೆಂಗಳೂರು. ಪು. ೪೨

೩೯.. ಎಸ್. ಶರಣೇಗೌಡ ಸಿಂಧನೂರ (ಸಂ) (೨೦೦೦) ಪೆನ್ನೊರೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು. ಪು.೧೧೫.

೪೦. ನಲವಡಿ ಶ್ರೀಕಂಠಶಾಸ್ತ್ರೀ (೧೯೯೮) ಹೈದರಾಬಾದ ರಜಾಕಾರ ಲಾವಣಿ : ಪ್ರಸಾರಾಂಗ ಕ.ವಿ. ಹಂಪಿ. ಪು. ೬-೯

೪೧. ನೇಮಿಚಂದ್ರ (೨೦೦೧) ಪು. ೪೪

೪೨. ಮಹಿಳಾ ಅಧ್ಯಯನ ಸಂಚಿಕೆ (೧೯೯೯) ಕ.ವಿ. ಹಂಪಿ. ಪು.೭೭

೪೩. ಅದೆ. ಪು. ೩೯

೪೪. ಪರಂಪರೆ (೨೦೦೬) ೭೫ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಸ್ಮರಣ ಸಂಚಿಕೆ.

* * *

ಅಧ್ಯಾಯ : ನಾಲ್ಕು

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ

೪.೧ ಮಹಿಳಾ ಬದುಕಿನ ಪ್ರತಿನಿಧೀಕರಣದ ಗ್ರಹಿಕೆಯ ನೆಲೆಗಳು

೪.೨ ಆನ್ವಯಿಕ ವಿಶ್ಲೇಷಣೆಯ ಸ್ವರೂಪ

೪.೩ ಕುಟುಂಬ ವಲಯದ ಪ್ರತಿನಿಧೀಕರಣ

- ೪.೩.೧ ಕುಟುಂಬ ಮತ್ತು ವಿವಾಹ ಕೇಂದ್ರಿತ ಸಮಸ್ಯೆಗಳು
- ೪.೩.೨ ಅಂತರ್‌ಜಾತಿ ಹಾಗೂ ಪ್ರೇಮ ವಿವಾಹ
- ೪.೩.೩ ವಿಧವಾ ವಿವಾಹ
- ೪.೩.೪ ಜಾತಿ ಶೋಷಣೆ
- ೪.೩.೫ ವಿವಾಹ ಬಾಹಿರ ಸಂಬಂಧ
- ೪.೩.೬ ಪರಿತ್ಯಕ್ತ ವಿಚ್ಛೇದಿತ ಬದುಕು
- ೪.೩.೭ ಹೆಣ್ಣು ಮಾರಾಟ
- ೪.೩.೮ ಆರೋಗ್ಯ
- ೪.೩.೯ ಬಂಜೆಯ ಬದುಕು
- ೪.೩.೧೦ ಲೈಂಗಿಕ ಬದುಕು
- ೪.೩.೧೧ ಅತ್ಯಾಚಾರ ದುರಾಕ್ರಮಣಕ್ಕೀಡಾದ ಬದುಕು
- ೪.೩.೧೨ ಕೌಟುಂಬಿಕ ಹಿಂಸೆಯ ಪ್ರತಿನಿಧೀಕರಣ
- ೪.೩.೧೩ ಆಸ್ತಿ ಹಂಚಿಕೆ
- ೪.೩.೧೪ ಕಟ್ಟಿಕೊಂಡ ಬದುಕು

೪.೪ ಸಾರ್ವಜನಿಕ ವಲಯದ ಪ್ರತಿನಿಧೀಕರಣ

- ೪.೪.೧ ಶೈಕ್ಷಣಿಕ ಬದುಕು
- ೪.೪.೨ ರಾಜಕೀಯ ಬದುಕು
- ೪.೪.೩ ಶ್ರಮ ದುಡಿಮೆಯ ಬದುಕು
- ೪.೪.೪ ಸಂಘರ್ಷಕ್ಕೆ ಬಲಿಯಾದ ಬದುಕು
- ೪.೪.೫ ಕಲಾವಿದೆಯ ಬದುಕು
- ೪.೪.೬ ಜೋಗತಿ ಹಾಗೂ ವೇಶ್ಯಾ ಬದುಕು

ಅಧ್ಯಾಯ : ನಾಲ್ಕು

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ

೪.೧ ಮಹಿಳಾ ಬದುಕಿನ ಪ್ರತಿನಿಧೀಕರಣದ ಗ್ರಹಿಕೆಯ ನೆಲೆಗಳು :

ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಸೃಜನಶೀಲ ಅಭಿವ್ಯಕ್ತಿ ಎನ್ನುವುದು ಶ್ರೇಷ್ಠವಾದುದು. ಶ್ರೇಷ್ಠತೆಗೆ ಮಾತ್ರ ಲಭಿಸುವಂಥದು. ಅಂಥ ಶ್ರೇಷ್ಠರು ಪುರುಷರಾದುದರಿಂದ ಅವರಿಗೆ ಅದು ಸಾಧ್ಯ ಎಂದು ನಂಬಿದರು. ಹಾಗಾಗಿ ಮಹಿಳೆಗೆ ಆ ಅರ್ಹತೆ ಇಲ್ಲವೆಂದೇ ಭಾವಿಸಲಾಯಿತು. ಆದರೆ ಸ್ವಲ್ಪ ಆಲೋಚಿಸಿದರೆ ತಮ್ಮ ಈ ದಿವ್ಯ ಭವ್ಯ ಅನುಭವ ಅವರ ಸ್ವಯಾರ್ಜಿತವೇ ಎಂಬುದೂ ಸಂಶಯಾಸ್ಪದವೆ. ಕಾಳಿದಾಸನ ನಾಲಿಗೆ ಮೇಲೆ ಸರಸ್ವತಿ ಬರೆದುದರಿಂದ ಅವನು ಮಹಾಕವಿಯಾದವನೆಂದು, ಹೇಳಲಾಗುವ ಕೇವಲ ಲಿಪಿಕಾರ ತಾನು ಎನ್ನುವ ಕುಮಾರವ್ಯಾಸರ ಉದಾಹರಣೆಗಳು ಏನನ್ನು ಸೂಚಿಸುತ್ತವೆ.

ಹೆಣ್ಣು ಬರೆಯಲು ಆರಂಭಿಸಿದಾಗ ಅದನ್ನು ನೋಡುವ ಕ್ರಮವೇ ಬೇರೆಯಾಗಿ ಅದು ಅಡಿಗೆಮನೆ ಸಾಹಿತ್ಯವೆಂದು ಪಕ್ಕಕ್ಕಿಡಲಾಯಿತು. ಇಲ್ಲಿ ಪುರುಷ ರಾಜಕಾರಣದ ಹುನ್ನಾರ ಸ್ಪಷ್ಟವಾಗಿದೆ. ಲಿಂಗ ತಾರತಮ್ಯ ಎಂಬುದು ಯಾವ ಕ್ಷೇತ್ರವನ್ನೂ ಬಿಟ್ಟಿಲ್ಲ. ಹಾಗಾಗಿ ಮಹಿಳಾ ಸಾಹಿತ್ಯವನ್ನು ಒಂದು ಬಗೆಯಲ್ಲೆ ನೋಡುವ ಪರಿಪಾಠ ಬೆಳೆದು ಬಂದಿದೆ.

ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ವಿದ್ವಾಂಸರು ಕೆಲವು ಸಿದ್ಧ ಮಾನದಂಡಗಳನ್ನಿಟ್ಟುಕೊಂಡಿದ್ದಾರೆ. ವಸ್ತುವಿನ ಆಯ್ಕೆ, ನಿರ್ವಹಣೆ ಅನುಭವ ಪ್ರಾಮಾಣೀಕರಣ, ವಾಸ್ತವತೆ ಮತ್ತು ಪ್ರಾಮಾಣಿಕತೆ ಅರ್ಥ ಭಾಷಾ ಪ್ರಯೋಗ, ಶೈಲಿ, ತಂತ್ರ, ವಿನ್ಯಾಸ ಮುಂತಾದ ಇನ್ನು ಎಷ್ಟೋ ವಿಮರ್ಶೆಯ ಪರಿಕಲ್ಪನೆಗಳು ಮೂಲಭೂತವಾಗಿ ಪುರುಷ ಚಿಂತನೆಯ ಪ್ರತೀಕಗಳಾಗಿವೆ. ಪರ್ಯಾಯ ಸಾಧ್ಯತೆಗಳ ಕಲ್ಪನೆಗೆ ಅಲ್ಲಿ ಅವಕಾಶಗಳನ್ನು ಮುಚ್ಚಿಹಾಕಲಾಗಿದೆ. ಮಾತ್ರವಲ್ಲ ಕೃತಿರಚನೆಗೆ ಋಷಿ ಸದೃಶ ಸಾಧನೆ, ವಿದ್ವಾಂಸರೊಡನೆ ಒಡನಾಟ, ಧ್ಯಾನಸ್ಥ ಸ್ಥಿತಿಗಳ ಅವಶ್ಯಕತೆಯನ್ನು ಹೇಳಲಾಗಿದೆ. ಈ ಎಲ್ಲಾ ಅಂಶಗಳು ಪುರುಷ ಕೃತಿಗಳಿಗೆ ಮಾತ್ರ ಅನ್ವಯಿಸುವಂಥವು. ಮಹಿಳೆಯ ನಿತ್ಯಾವರ್ತನದ ಬದುಕಿನಲ್ಲಿ ಅವಳಿಗೆ ತನ್ನದೇ ಆದ ಖಾಸಗಿ ಕೋಣೆ, ಬಿಡುವಿನ ವೇಳೆ, ಇತರರೊಂದಿಗಿನ ಒಡನಾಟಗಳು ಇಲ್ಲವೇ ಇಲ್ಲವಾಗಿ ಈ ಯಾವ ಮಾನದಂಡಗಳೂ ಮಹಿಳಾ ಕೃತಿಗಳ ಸಂದರ್ಭದಲ್ಲಿ ಅನ್ವಯವಾಗುವುದು ಕಷ್ಟ. ಹಾಗಾಗಿಯೆ ಅವಳ ಸಾಹಿತ್ಯವನ್ನು ಅಡಿಗೆ ಮನೆಯ ಸಾಹಿತ್ಯ, ಜನಪ್ರಿಯ ಸಾಹಿತ್ಯವೆಂದು ಪುರುಷ ವಿಮರ್ಶಕರು ಗಂಭೀರವಾಗಿ ಪರಗಣಿಸದಿರುವುದು ಕಂಡು ಬರುತ್ತದೆ. ಅವಳದು ಸೀಮಿತ ಗ್ರಹಿಕೆ. ಹೇಳಿದ್ದನ್ನೇ ಹೇಳವುವಂಥ ಬರವಣಿಗೆಯಾದುದರ ಹಿಂದೆ

ಅವಳ ಮೇಲೆ ಹೇರಲಾದ ಸಾಮಾಜಿಕತೆ ಹಾಗೂ ಪುನರಾವರ್ತಿತ ಬದುಕೆ ಕಾರಣವೆಂಬುದರ ಕಡೆ ಪುರುಷ ಚಿಂತನೆ ಗಮನ ಹರಿಸುವುದಿಲ್ಲ.

ಮಹಿಳೆಯ ಬದುಕು ಎರಡನೆ ದರ್ಜೆಯದಲ್ಲ. ಅದೊಂದು ಭಿನ್ನವಲಯ. ಅದಕ್ಕೆ ಅದರದೇ ಆದ ಅನುಭವ ಗ್ರಹಿಕೆಗಳಿಗೆ. ಅವು ಪುರುಷ ಅನುಭವ, ಗ್ರಹಿಕೆಗಳಿಗಿಂತ ಭಿನ್ನವಾಗಿವೆ. ಎರಡು ಭಿನ್ನವಲಯಗಳ ಇಂಥ ಅನುಭವ ಗ್ರಹಿಕೆಗಳನ್ನು ಸ್ಪರ್ಧಾತ್ಮಕವಾಗಿ ನೋಡುವುದು ಸೂಕ್ತವಲ್ಲ. ಹಾಗೆಂದು ರಿಯಾಯ್ತಿಯ ನಿರೀಕ್ಷೆಯದೂ ಅಲ್ಲ.

ಪ್ರಸ್ತುತ ಅಧ್ಯಯನದಲ್ಲಿ ಪುರುಷ ಮಹಿಳೆಯರೀರ್ವರ ಕೃತಿಗಳನ್ನು ಮಹಿಳಾ ಬದುಕಿನ ಅಧ್ಯಯನಕ್ಕೆ ಅಯ್ದುಕೊಳ್ಳಲಾಗಿದ್ದು ಮೇಲೆ ಹೇಳಿದ ಸಿದ್ಧ ಮಾನದಂಡಗಳನ್ನು ಅನುಸರಿಸದೆ ಸ್ತ್ರೀವಾದಿ ನೆಲೆಯಲ್ಲಿ ನೋಡುವುದಾಗಿದೆ.

೪.೨ ಆನ್ವಯಿಕ ವಿಶ್ಲೇಷಣೆಯ ಸ್ವರೂಪ :

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿಯ ಮಹಿಳಾ ಬದುಕನ್ನು ಅಧ್ಯಯನ ಮಾಡುವುದು ಇಲ್ಲಿಯ ಮುಖ್ಯ ಗುರಿಯಾಗಿರುವುದರಿಂದ ಲೇಖಕ ಲೇಖಕಿ ಹಾಗೂ ಅವರ ಕೃತಿಗಳ ಒಟ್ಟು ವಿಮರ್ಶೆ ಅಧ್ಯಯನದ ವ್ಯಾಪ್ತಿಯಲ್ಲಿ ಸೇರಿಲ್ಲ. ಮಹಿಳಾ ಬದುಕೆ ಮುಖ್ಯವಾಗಿ ಅದರ ವೈವಿಧ್ಯ ವಿಸ್ತಾರಗಳಿಗೆ ಮಾತ್ರ ಇಲ್ಲಿ ಒತ್ತು ನೀಡಲಾಗಿದೆ. ಕಥನ ಸಾಹಿತ್ಯದಲ್ಲಿ ಪ್ರತಿನಿಧೀಕರಣಗೊಂಡ ಮಹಿಳಾ ಬದುಕನ್ನು ಮಾತ್ರ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೪.೩ ಕುಟುಂಬ ವಲಯದ ಪ್ರತಿನಿಧೀಕರಣ :

ಕುಟುಂಬವು ಪುರುಷನಿಗಿಂತ ಮಹಿಳೆಗೆ ಹೆಚ್ಚು ಮಹತ್ವದ್ದೆಂದು ಪರಿಭಾವಿತವಾಗಿದೆ. ಮಹಿಳೆಗೆ ಸಂಭಂದಿಸಿದ ಯಾವುದೇ ಚರ್ಚೆ ಕುಟುಂಬವನ್ನು ಹೊರತುಪಡಿಸಿ ನಡೆಯುವುದು ಅಸಾಧ್ಯ ಕಾರಣ ಅವಳ ಎಲ್ಲಾ ಚಟುವಟಿಕೆಗಳು ಕುಟುಂಬದ ಪರಿಧಿಯಲ್ಲೇ ಹೆಚ್ಚಾಗಿ ನಡೆಯುತ್ತವೆ. ಅವಳ ಬದುಕು ಕುಟುಂಬದ ಆಗು ಹೋಗುಗಳೊಂದಿಗೆ ಬೆರೆತು ಹೋಗಿರುತ್ತದೆ. ಅದಿಲ್ಲದೆ ಅವಳ ಬದುಕಿಲ್ಲ ಅಂದ ಮೇಲೆ ಮಹಿಳೆಯನ್ನು ಕುರಿತು ಯಾವುದೆ ಅಧ್ಯಯನ ಕುಟುಂಬದಿಂದಲೇ ಆರಂಭವಾಗಬೇಕಾದುದು ಅನಿವಾರ್ಯವಾಗ ಬೇಕಾಗುತ್ತದೆ. ಈ ಕುಟುಂಬ ಸಂಸ್ಥೆಯ ಪ್ರವೇಶ ಮಹಿಳೆಗೆ ವಿವಾಹವೆಂಬ ಇನ್ನೊಂದು ಸಂಸ್ಥೆಯ ಮೂಲಕ ಆಗುತ್ತದೆ. ವಿವಾಹ ಮಹಿಳೆಯ ಬದುಕಿನ ಅನಿವಾರ್ಯವೆಂದು ಪಿತೃ ಸಂಸ್ಕೃತಿಯು ಕಡ್ಡಾಯಗೊಳಿಸಿದೆ. ಹೀಗೆ ಕಡ್ಡಾಯಗೊಂಡ ವಿವಾಹ ಮಹಿಳೆಯ ಬದುಕಿನ ಹತ್ತು ಹಲವು ಸಮಸ್ಯೆಗಳಿಗೆ ಕಾರಣವಾಗಿದೆ.

ಮಹಿಳೆಯ ಕಥನವೆಂದಾಕ್ಷಣ 'ವಿವಾಹ' ಸಂಬಂಧ ತನ್ನಿಂದ ತಾನೆ ಬರುತ್ತದೆ. 'ಮಹಿಳೆಗೂ' ವಿವಾಹಕ್ಕೂ ಸಂಸ್ಕೃತಿಯಲ್ಲಿ ಅಭಿನ್ನವಾದ ಸಂಬಂಧದಲ್ಲಿ ಹೆಣೆಯುವುದು ಪಿತೃಪ್ರಧಾನ ಮೌಲ್ಯ ವ್ಯವಸ್ಥೆಯ ಮುಖ್ಯಗುಣ. ಈ ಲಕ್ಷಣವು ಹೈದರಾಬಾದ ಕರ್ನಾಟಕ ಪ್ರದೇಶದ ಕಥನ ಸಾಹಿತ್ಯಕ್ಕೂ ನೇರವಾಗಿ ಅನ್ವಯಿಸುತ್ತದೆ. ಹಾಗೆ ನೋಡಿದರೆ ಸಂಸ್ಕೃತಿಯಲ್ಲಿ ಇದೊಂದು ಸಾಮಾಜಿಕ ವಾಸ್ತವ. ಎಲ್ಲ ಸಮಸ್ಯೆಗಳು ಹುಟ್ಟಿನಿಂದ ಸಾವಿನವರೆಗೆ 'ವಿವಾಹ' ಕೇಂದ್ರದ ಸುತ್ತವೇ ಸುತ್ತುತ್ತಿರುತ್ತವೆ. ಪುರುಷ ಚಿಂತನೆಯ ಸಮಾಜದಲ್ಲಿ ಮಹಿಳೆಗೆ

ಇದೊಂದು ಅನಿವಾರ್ಯ. ಈ ಅನಿವಾರ್ಯವನ್ನು ನಿರ್ವಹಿಸುವದೇ ಮಹಿಳೆಯ ಬದುಕಿನ ಕಥೆ. ಇಷ್ಟವೊ ಅನಿಷ್ಟವೊ ಏನಿದ್ದರೂ ಮಹಿಳೆ ಈ ಕೇಂದ್ರವನ್ನು ಲಕ್ಷಿಸಿಯೇ ಬದುಕಬೇಕು. ಹೀಗೆ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯ ಕೇಂದ್ರ ಬಿಂದುವಾಗಿ ಪ್ರಧಾನ ಸಮಸ್ಯೆಯೇ ಆಗಿ ವಿವಾಹ ಸಂಸ್ಥೆ ಇದೆ. ಈ ಸಂಸ್ಥೆಯ ಪರಿಣಾಮಗಳೆ ಆಗಿ ಮಹಿಳೆಗೆ ಸಂಬಂಧಿಸಿದಂತೆ ಹಲವಾರು ಸಾಮಾಜಿಕ ಸಮಸ್ಯೆಗಳು ಸೃಷ್ಟಿಯಾಗಿವೆ. ಹೀಗೆ ಸೃಷ್ಟಿಯಾದ ಸಮಸ್ಯೆಗಳನ್ನು ಒಂದೊಂದಾಗಿಯೋ ಪರಸ್ಪರ ಸಂಬಂಧಿತವೆನಿಸುವಂತಹ ಹಲವು ಸಮಸ್ಯೆಗಳನ್ನೊ ಇಲ್ಲಿಯ ಕಥೆ ಕಾದಂಬರಿಗಳು ಚರ್ಚಿಸುತ್ತವೆ.

'ವಿವಾಹವೆಂಬುದು ಮಹಿಳೆಯ ಬದುಕಿನ ಬಹುಮುಖ್ಯ ಸಮಸ್ಯೆಯಾಗಿದೆ. ಆದರೆ ಸಾಹಿತ್ಯದಲ್ಲಿ ಈ ಮೂಲವನ್ನು ಕುರಿತು ಚಿಂತನೆ ನಡೆದಿಲ್ಲ. ಅದರ ಸುತ್ತಲೂ ಉಪ ಸಮಸ್ಯೆಗಳಾಗಿ ಹಬ್ಬಿರುವ ಬಾಲ್ಯವಿವಾಹ, ಪ್ರೇಮವಿವಾಹ, ಅಂತರ್‌ಜಾತಿವಿವಾಹ, ವಿಧವಾವಿವಾಹ, ವೈಧವ್ಯ ಅವಿವಾಹಿತನಗಳನ್ನು ಪ್ರಧಾನ ಕೇಂದ್ರಕ್ಕೆ ಎಳೆದ ತರಲಾಗುತ್ತಿದೆ. ಶಿಕ್ಷಣ ದುಡಿಮೆ ಸಂಪಾದನೆ ಎಂಬ ಭೌತಿಕ ಸಂಗತಿಗಳನ್ನು ಚರ್ಚಿಲಾಗುತ್ತದೆ. ಈ ಲೆಕ್ಕಾಚಾರದ ತರ್ಕ ನಿಜವೇ ಆದರೆ ಆಯಾ ಸಮಸ್ಯಗೆ ನಿಶ್ಚಿತ ಪರಿಹಾರಗಳನ್ನು ಸೂಚಿಸುವುದು ಅಸಾಧ್ಯದ ಮಾತಲ್ಲ. ಆದರೆ ಇವು ಸಮಸ್ಯಗಳೇ ಎಂದರೆ ಇವುಗಳಿಗೆ ಮೂಲಕಾರಣವಾಗಿ ಪ್ರವೃತ್ತವಾಗಿರುವ ಸಾಮಾಜಿಕ ಧೋರಣೆಗಳ ಸಮಸ್ಯೆ ಬಿಡಿಸಲಾಗದ ಕಗ್ಗಂಟಾಗಿದೆ ಎಂಬುದು ಇವೆಲ್ಲಕಿಂತ ಮೂಲದಲ್ಲಿದೆ. ವಿವಾಹದ ನಿಯಮಗಳಲ್ಲೇ ಅದರ ರಚನೆಯ ಮೂಲದಲ್ಲೇ ಪುರುಷ ಪರವಾಗಿ ಏಕ ಪಕ್ಷೀಯವಾದ ನಿರ್ಣಯಗಳಿವೆ. ದೌರ್ಜನ್ಯ ಅತ್ಯಾಚಾರಗಳಂತಹ ದಾಳಿಗಳು ನಡೆಯುತ್ತಲೆ ಇವೆ. ಇವೆಲ್ಲಕ್ಕೂ ಮೂಲ ಬೀಜ ವಿವಾಹವೆಂಬ ಸಂಸ್ಥೆ ಹಾಗೂ ಅನಗತ್ಯವಾಗಿ ಅದು ಮಹಿಳೆಯ ಲೈಂಗಿಕತೆಯ ಮೇಲೆ ಹಾಕುವ ದಿಗ್‌ಬಂಧನ. ಶೀಲ ಎಂಬುದನ್ನು ಹೆಣ್ಣಿನ ಮೇಲೆ ನಿರ್ಣಾಯಕ ಮೌಲ್ಯವನ್ನಾಗಿ ಹೇರುವುದು ಆದರೆ ನಮ್ಮ ಸಾಮಾಜಿಕ ಚಿಂತನೆಗಳಿಗೆ ಇದು ಕೇಂದ್ರ ವಿಷಯವಾಗುವುದಿಲ್ಲ. ಹಾಗೆಯೆ ನಮ್ಮ ಸೃಜನಶೀಲ ಸಂವೇದನೆಗಳಿಗೂ ಇವು ತಟ್ಟುವದಿಲ್ಲ'[1] ಎಂಬ ಎಚ್.ಎಸ್. ಶ್ರೀಮತಿಯವರ 'ವಿವಾಹ' ಕುರಿತು ವ್ಯಾಖ್ಯಾನ ಸಾಮಾಜಿಕ ಚಿಂತನೆ ಹಾಗೂ ಸಾಹಿತ್ಯ ಸೃಜನಶೀಲತೆಗಳು ವಿವಾಹ ಸಂಸ್ಥೆಯನ್ನು ಅರ್ಥೈಸುವಲ್ಲಿಯ ಅಸಮರ್ಪಕ ಅಥವಾ ಅಂಶಿಕ ನಿಲುವನ್ನು ಸ್ಪಷ್ಟಪಡಿಸುತ್ತದೆ. ಹೈದರಾಬಾದ ಕರ್ನಾಟ ಸಾಹಿತ್ಯವೂ ಇಂಥ ಸಾಮಾಜಿಕ ಚಿಂತನೆಯಿಂದ ಹೊರತಾದುದಲ್ಲ.

ಸಾಮಾಜಿಕ ಚಿಂತನೆಯಂತೆ ವ್ಯಕ್ತಿಯ ಬದುಕಿನಲ್ಲಿ ವಿವಾಹ ಅತ್ಯಂತ ಪ್ರಮುಖ ಘಟನೆ. ವಿವಾಹ ಸಂಸಾರದ ಅಡಿಪಾಯ. ಅದು ಗಂಡು ಹೆಣ್ಣಿನ ಜೀವನದ ಮುಂದಿನ ಸಮಸ್ತ ಚಟುವಟಿಕೆಗಳಿಗೂ ಪ್ರಾರಂಭವನ್ನು ನೀಡುತ್ತದೆ. ಕುಟುಂಬ ಸಂಸ್ಥೆಗೆ ವಿವಾಹ ಸಂಸ್ಥೆಯೇ ಮೂಲ.

'ಸ್ತ್ರೀ-ಪುರುಷ ಎಂಬ ಇಬ್ಬರು ವ್ಯಕ್ತಿಗಳ (ಲೈಂಗಿಕ ಜೀವನಕ್ಕೆ) ಸಂಬಂಧಕ್ಕೆ ಸಾಮಾಜಿಕ ಮಾನ್ಯತೆ ದೊರೆಯುವುದರಿಂದ ಆ ಸಂಬಂಧವು ಏರ್ಪಡುವಾಗ ಹಲವಾರು ನಿಯಮ ಹಾಗೂ ಧಾರ್ಮಿಕ ಕ್ರಿಯಾ ವಿಧಿಗಳನ್ನು ಅನುಸರಿಸಲಾಗುತ್ತದೆ. ಆದ್ದರಿಂದ ಅದನ್ನು ಸಾಮಾಜಿಕ ಸಂಸ್ಥೆ ಎಂದು ಪರಿಗಣಿಸಲಾಗಿದೆ. ವಿವಾಹ ಗಂಡು ಹೆಣ್ಣಿನ ನಡುವಿನ ಲೈಂಗಿಕ ಸಂಬಂಧದ ಮೂಲಕ ಹುಟ್ಟುವ ಮಕ್ಕಳಿಗೆ ಸಮಾಜದ

ಅನುಮೋದನೆ ನೀಡುವ ಸಂಸ್ಥೆಯಾಗಿದೆ.

ಪುರುಷ ಪ್ರಧಾನ ವ್ಯವಸ್ಥೆಯ ಕಾರಣ ವಿವಾಹವಾದ ನಂತರ ಮಹಿಳೆ ಗಂಡನ ಮನೆಯಲ್ಲಿ ವಾಸಿಸಬೇಕಾಗುತ್ತದೆ. ಮಹಿಳೆಗೆ ವಿವಾಹವೇ ಪರಮಗುರಿಯೆಂಬ ಅಭಿಪ್ರಾಯ ಬೇರುಬಿಟ್ಟದೆ. ಹೀಗಾಗಿ ಪತಿಯ ಮನೆಗೆ ಹೋದ ಮಹಿಳೆ ಅಲ್ಲಿಯ ವಾತಾವರಣ, ಸ್ಥಿತಿಗತಿಗೆ ಹೊಂದಿಕೊಳ್ಳಬೇಕು. ಪತಿ, ಅತ್ತೆ ಮಾವ ಇವರ ಜೊತೆಗೆ ಮನೆಯಲ್ಲಿರುವ ಇತರರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು. ಇದು ಸೊಸೆಯಾದವಳ ಕರ್ತವ್ಯ, ಮನೆ ಮಂದಿಗೆ ತಗ್ಗಿ ಬಗ್ಗಿ ನಡೆಯಬೇಕು. ಹಾಗೂ ಗಂಡು ಮಕ್ಕಳನ್ನು ಹೊತ್ತು ಹೆತ್ತು ಪೋಷಿಸಬೇಕೆಂದು ನಿರೀಕ್ಷಿಸಲಾಗುತ್ತದೆ.

ವಿವಾಹ ಸಂಸ್ಥೆ ಹೆಣ್ಣಿನ ಪಾವಿತ್ರ್ಯತೆ ಹಾಗೂ ವಿಧೇಯತೆಯನ್ನು ನಿರೀಕ್ಷಿಸುತ್ತದೆ. ಗಂಡ ಹೆಂಡತಿಯರಲ್ಲಿ ಹೆಣ್ಣು ಗಂಡು ಎಂಬ ನೈಸರ್ಗಿಕ ಭಿನ್ನತೆಯ ಜೊತೆಗೆ ಸಾಮಾಜಿಕ ಭಿನ್ನತೆಯೂ ನೆಲೆಗೊಂಡಿದೆ. ಹೆಣ್ಣಿನ ಬದುಕು ಪುರುಷಾಧೀನಕ್ಕೆ ಒಳಪಟ್ಟದೆ. ಕೇವಲ ಭೌತಿಕ ನೆಲೆಯಿಂದಲ್ಲ. ಅದಕ್ಕಿಂತ ಪ್ರಧಾನವಾಗಿ ಅವಳ ವ್ಯಕ್ತಿತ್ವದ ಅಂತರಂಗಿಕ ಸಂಗತಿಗಳು ಆಕ್ರಮಣಕ್ಕೆ ಒಳಗಾಗಿವೆ.

ವಿವಾಹ ಕೇಂದ್ರಿತ ಸಮಸ್ಯೆಗಳಲ್ಲಿ ಬಾಲ್ಯವಿವಾಹ, ಪ್ರೌಢವಿವಾಹ, ದಾಂಪತ್ಯ, ಅನ್ಯ ಸಂಬಂಧ. ಕುಡಿತ, ಹಿಂಸೆ ಮರ್ಯಾದೆ ಮೀರಿದ ವರ್ತನೆ. ಅಸಮವಯಸ್ಸು, ಗಂಡು ಸಂತಾನದ ಅಪೇಕ್ಷೆ, ಮರುವಿವಾಹ, ಅರಕ್ಷಿತ ಸ್ಥಿತಿ, ಹೆಂಡತಿಯನ್ನು ನಿಯಂತ್ರಿಸಬೇಕೆಂಬ ಹಟ, ಪಾಲಕರ ಸ್ವಾರ್ಥಗಳು ಮಹಿಳೆಯ ಬದುಕನ್ನು ಸಂಕಷ್ಟಕ್ಕೆ ದೂಡುತ್ತವೆ. ವಿವಾಹ ಕುಟುಂಬಗಳೆ ಮಹಿಳೆಯ ಅಧೀನ ಸ್ಥಿತಿಗೆ ಕಾರಣವೆಂದು ಪರಿಭಾವಿಸುವ ಸ್ತ್ರೀವಾದಿಗಳ ನಿಲುವು ಸರಿಯಾದುದೆ ಎಂಬುದನ್ನು ಕಥನ ಸಾಹಿತ್ಯದ ಮಹಿಳಾ ಬದುಕು ಸಮರ್ಥಿಸುವಂತೆನಿಸುತ್ತದೆ. ಮುಂದೆ ಇವನ್ನು ವಿವರವಾಗಿ ಪರಿಶೀಲಿಸಲಾಗಿದೆ.

ಕುಟುಂಬ ಮತ್ತು ವಿವಾಹ ಕೇಂದ್ರಿತ ಸಮಸ್ಯೆಗಳು :

ಬಾಲ್ಯ ವಿವಾಹ :

'ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅಪ್ರಾಪ್ತ ವಯಸ್ಕ ವಿವಾಹಗಳು ಅಪರೂಪವೇನಲ್ಲ. ಹೆಣ್ಣು ಮಗು ಜನಿಸಿದರೆ ಅದೊಂದು ಕುಟುಂಬಕ್ಕೆ ಹೊರೆ ಎನ್ನುವ ನೆಪದಲ್ಲಿ ಪೋಷಕರು ಆ ಮಗುವನ್ನು ಕೊಲ್ಲುವ ಮಾರಾಟಮಾಡುವ ಪದ್ಧತಿ ಅಸ್ತಿತ್ವದಲ್ಲಿದೆ. ಹೀಗಿರುವಾಗ ಚಿಕ್ಕ ವಯಸ್ಸಿನ ಮಕ್ಕಳ ವಿವಾಹ ಒಂದು ಮಹತ್ವದ ಸಂಗತಿಯೇ ಅಲ್ಲ. ಹೆಣ್ಣು ಮಕ್ಕಳು ಪ್ರಾಪ್ತವಯಸ್ಸಿಗೆ ಬರುವ ಮುನ್ನವೇ ಅವರಿಗೆ ವಿವಾಹ ಮಾಡಬೇಕು, ಇಲ್ಲದಿದ್ದರೆ ಆಕೆ ಪ್ರತಿಬಾರಿ ಋತುಮತಿಯಾದಾಗ, ಒಂದು ಭ್ರೂಣವನ್ನು ಕೊಂದ ಪಾಪ ಆಕೆಯ ಪೋಷಕರಿಗೆ ತಟ್ಟುತ್ತದೆ ಎಂಬ ಯಾಜ್ಞವಲ್ಕ್ಯ ಮುನಿಯ ಮಾತುಗಳು ಸ್ಮೃತಿಗಳ ಕಾಲದಲ್ಲಿ ವಿವಾಹದ ವಯಸ್ಸನ್ನು ಕುರಿತಂತೆ ಅಸ್ತಿತ್ವದಲ್ಲಿದ್ದ ಧೋರಣೆಗೆ ಸಾಕ್ಷಿಯಾಗಿವೆ'.[1] ವಿವಾಹವೆಂಬುದು ಒಂದು ಆಟವೇ ಎಂದು ಭಾವಿಸಿ ವಿವಾಹವಾಗುವ ಹೆಣ್ಣು ಗಂಡುಗಳು ಪ್ರಾಪ್ತ ವಯಸ್ಕರಾದಾಗ ವಾಸ್ತವದ ಅರಿವಾಗಿ ಪಶ್ಚಾತಾಪ ಪಡಬಹುದು. ಅವರ ಬದುಕು ಕಷ್ಟಕೋಟಲೆಗೆ ಈಡಾಗಬಹುದು. ಇಂತಹ ಕಷ್ಟವನ್ನು ವಿಶೇಷವಾಗಿ ಎದುರಿಸುವವಳು ಮಹಿಳೆ. ಪುರುಷ ತನಗೆ ಬೇಡದ ಹೆಣ್ಣನ್ನು ತಿರಸ್ಕರಿಸಿ ಬೇರೆ

ವಿವಾಹವಾಗಬಹುದು. ಅಂತಹ ಸಂದರ್ಭಗಳಲ್ಲಿ ಮಹಿಳೆ ಜೀವನಪಿಡೀ ತಾಳಿ ಕಟ್ಟದ ಪುರುಷನ ಹೆಸರಿನಲ್ಲಿ ಕಳೆಯಬೇಕು. ಅವಳು ಕುಳಿತರು ತಪ್ಪು ನಿಂತರೂ ತಪ್ಪು ಎನ್ನುವಂತೆ ಬದುಕು ಕತ್ತಿಯ ಮೇಲಿನ ನಡಿಗೆಯಾಗುತ್ತದೆ. ತನ್ನೆಲ್ಲ ಆಸೆ ಆಂಕಾಕ್ಷೆಗಳನ್ನು ಬಲಿಕೊಟ್ಟು ಸಾಮಾಜಿಕ ನಿರೀಕ್ಷೆಯಂತೆ ಬದುಕುವುದು ಅವಳಿಗೆ ಅನಿವಾರ್ಯವಾಗುತ್ತದೆ. ಅಮರಾನಂದರು ಮುಂದಾಗಬಹುದಾದ ಸಂಗತಿಯನ್ನು ನಿವಾರಿಸಿ ಮಾನವೀಯವಾಗಿಸುತ್ತಾರೆ. ಸ್ತ್ರೀ ಸಂವೇದನೆಯಲ್ಲಿ ಕಥೆಗೆ ಜೀವ ತುಂಬಿದ್ದಾರೆ. ಅವಕಾಶ ದೊರೆತರ ಹೆಣ್ಣು ತನ್ನ ಅನನ್ಯತೆಯನ್ನು ಸಾಬೀತುಗೊಳಿಸುತ್ತಾಳೆ ಎಂಬುದನ್ನು ನಿರೂಪಿಸುತ್ತಾರೆ.

ಅಮರಾನಂದ ಬೆಟ್ಟದೂರ್‌ರೆಂದೇ ಖ್ಯಾತರಾದ ಚನ್ನಬಸಪ್ಪನವರ 'ಹೆಣ್ಣು ಮಕ್ಕಳೇ ಬಲ್ಲರು' ಕಥೆ ಬಾಲ್ಯ ವಿವಾಹದ ಸಮಸ್ಯೆಯನ್ನು ಹೇಳುವಂತದ್ದು. ವಿವಾಹ ಮಹಿಳೆಯ ಬದುಕಿನ ಅತ್ಯಂತಿಕವು ಸರ್ವಸ್ವವು ಎಂದು ಭಾವಿಸಿದ ಸಾಮಾಜಿಕ ವ್ಯವಸ್ಥೆಯಲ್ಲಿ ಚನ್ನಮ್ಮನ ವಿವಾಹ ಬಾಲ್ಯದಲ್ಲಿಯೇ ನೆರವೇರುತ್ತದೆ. ಮಹಿಳೆಗೆ ವಿದ್ಯೆ ಅನಿವಾರ್ಯವೆಂದು ಭಾವಿಸದ ಪರಿಸರದಲ್ಲಿ ಅನಕ್ಷರಸ್ಥಳಾಗಿರುವ ಹೆಂಡತಿಯಿಂದಾಗಿ ವಿದ್ಯಾವಂತ ಗಂಡು ಮಲ್ಲಿಕಾರ್ಜುನ ತನ್ನ ಬಾಳೇ ಬವಣೆಯಾಗುತ್ತದೆ ಎಂದು ಬೇಸರ ಪಟ್ಟಾಗ ಸಹಪಾಠಿ ಮಹಾದೇವಿ 'ಕೈ ಹಿಡಿದ ಹೆಂಡತಿಗೆ ಸುಲಭವಾಗಿ ವಿದ್ಯೆ ಕಲಿಸಿ ಒಬ್ಬ ಹೆಣ್ಣು ಮಗಳನ್ನು ಉದ್ಧಾರ ಮಾಡಿದ ಪುಣ್ಯ ನಿಮ್ಮ ಪಾಲಿಗೆ ಬರುವುದು'[6] ಎಂದು ಹೇಳುತ್ತಾಳೆ.

ಚನ್ನಮ್ಮ ಮಲ್ಲಿಕಾರ್ಜುನ ನಿರೀಕ್ಷೆಯಂತೆ ವಿದ್ಯಾವಂತಳಾಗುತ್ತಾಳೆ. ಅವನ ವೈದ್ಯವೃತ್ತಿಯಲ್ಲಿ ಸಹಾಯಕಳೂ ಆಗುತ್ತಾಳೆ. ಅಷ್ಟೇ ಅಲ್ಲ ಮಕ್ಕಳಿಲ್ಲದ ಮಹಿಳೆಯ ಸಮಸ್ಯೆಗೆ ಸಮರ್ಥವಾಗಿ ಉತ್ತರಿಸುವ ಮೂಲಕ ಅವಳ ಗಂಡನ ಮರುಮದುವೆ ತಪ್ಪಿಸಿ ಅನಾಥ ಮಗುವಂದನ್ನು ದತ್ತಕ ಸ್ವೀಕರಿಸುವಂತೆ ಪ್ರೇರಣೆ ನೀಡುತ್ತಾಳೆ. ಸುಧಾರಣಾವಾದಿ ದೃಷ್ಟಿಕೋನದಲ್ಲಿ ಮೂಡಿಬಂದ ಕಥೆ ಇದಾಗಿದ್ದು, ಸ್ತ್ರೀಪರ ಸಂವೇದನೆಯೊಂದಿಗೆ ಪುರುಷನ ಬಹುಪತ್ನಿತ್ವವನ್ನು ನಿರಾಕರಿಸುವುದಾಗಿದೆ. ಬಹುಪತ್ನಿತ್ವ ಮಹಿಳೆಯರ ಬದುಕನ್ನು ಗೋಳಾಗಿಸುವಂತದ್ದು. ಮಕ್ಕಳಿಲ್ಲವೆಂಬ ಕಾರಣಕ್ಕೆ ಮರುಮದುವೆಯಾಗುವ ಬದಲು ಅನಾಥ ಮಗುವನ್ನು ದತ್ತು ಪಡೆಯುವುದರಿಂದ ಮಕ್ಕಳಿಲ್ಲದ ಕೊರತೆ ನೀಗುವುದಲ್ಲದೆ ಅನಾಥ ಮಗುವೊಂದಕ್ಕೆ ಪಾಲಕರು ಲಭಿಸುವ ಮಾನವೀಯ ಸ್ಪಂದನ ಸ್ವೀಕಾರಾರ್ಹವಾದುದು.

ಪುರುಷ ತನಗೆ ಸಾಮಾಜಿಕವಾಗಿ ದತ್ತ ಸ್ವಾತಂತ್ರ್ಯವನ್ನು ವಿವೇಚನೆಯಿಂದ ಬಳಸಿಕೊಂಡರೆ, ಮಹಿಳೆಯ ಬದುಕು ಸಮಸ್ಯಾತ್ಮಕವಾಗದೆಂಬ ಆಶಯ ಇಲ್ಲಿಯದು. ವಿವಾಹವೇ ಅಂತಿಮವಲ್ಲ. ಅನಂತರವೂ ಮಹಿಳೆ ವಿದ್ಯಾರ್ಜನೆ ಮಾಡುವ ಮೂಲಕ ತನ್ನ ಬದುಕನ್ನು ಉನ್ನತೀಕರಿಸಿಕೊಳ್ಳಬಹುದು. ತನ್ನದೇ ಸ್ಥಾನಮಾನ ಕಲ್ಪಿಸಿಕೊಳ್ಳಬಹುದೆಂಬ ಆಶಯವೂ ಕಥೆಗಾರರದಾಗಿದೆ. ಆದರೆ ಮಹಾದೇವಿಯ ಮೂಲಕ ಹೇಳಿಸುವ ಉದ್ಧರಿಸುವ ಮಾತು ಪುರುಷ ಪ್ರಧಾನ ನಿಲುವಾಗಿ ವ್ಯಕ್ತವಾಗಿದೆ.

ಶಾಸ್ತ್ರಗಳು ಆಯಾಕಾಲದ ಜೀವನ ನಿರ್ವಹಣೆಗೆ ಮನುಷ್ಯ ನಿರ್ಮಿಸಿಕೊಂಡ ಸಾಮಾಜಿಕ ನಿಯಮಗಳು. ಈ ನಿಯಮಗಳು ಸಾರ್ವಕಾಲಿಕವಾಗಬಾರದು. ಬದಲಾಗುತ್ತಿರುವ ಜೀವನಕ್ರಮಕ್ಕನುಗುಣವಾಗಿ ಶಾಸ್ತ್ರಗಳೂ ಬದಲಾಗಬೇಕು. ಹಾಗೇ ಬದಲಾಗದಿದ್ದರೆ ಅವು ಬದುಕನ್ನು ಬಾಧಿಸುತ್ತವೆ. ಅದರಲ್ಲೂ ಮಹಿಳಾ ಬದುಕನ್ನು ಹೆಚ್ಚು ಬಾಧಿಸುತ್ತವೆ. ವಿವಾಹದ ನಿಯಮಗಳು ವಿಶೇಷವಾಗಿ ಮಹಿಳಾ ಬದುಕಿಗೆ ಅನ್ವಯಿಸಿ ಸೃಷ್ಟಿಯಾಗಿದ್ದು, ಅವಳ ಬದುಕನ್ನು ಬವಣೆಯಾಗಿಸಿವೆ ಎಂಬುದನ್ನು ಜಯತೀರ್ಥ ರಾಜಪುರೋಹಿತರ 'ರೋಹಿಣಿ' ಕಥೆ

ಪ್ರತಿನಿಧಿಸುತ್ತದೆ. ಮೂಲತಃ ಈ ಕಥೆ ಒಂದು ಜನಪದ ಕಥೆಯನ್ನು ಆಧರಿಸಿದ್ದು ಬ್ರಾಹ್ಮಣಿಯೊಬ್ಬಳು ಬುಡಕಟ್ಟು ಯುವಕ ಡಾಕ್ಯಾನನ್ನು ವರಿಸಬೇಕಾದ ಅನಿವಾರ್ಯತೆಯನ್ನು, ಆ ಕಾರಣಕ್ಕಾಗಿಯೆ ಲಂಬಾಣಿಗಳು ಆರ್ಯವರ್ಗಕ್ಕೆ ಸೇರಿದ ಹಿನ್ನೆಲೆಯನ್ನು ವಿವರಿಸುತ್ತದೆ.

ವೇದ ಶಾಸ್ತ್ರಗಳಲ್ಲಿ ಹೇಳಿದ 'ಅಷ್ಟವರ್ಷ ಭವೇತ್ ಕನ್ಯಾ' ಎಂಬುದು ಎಂಟು ವರ್ಷಕ್ಕೆ ಹೆಣ್ಣು ಮಗುವಿನ ವಿವಾಹವಾಗಬೇಕು ಹಾಗಾಗದಿದ್ದಲ್ಲಿ ಅವಳನ್ನು ಅಡವಿಯಲ್ಲಿ ಬಿಟ್ಟು ಬರುತ್ತಿದ್ದ ಕ್ರೂರ ಅಮಾನವೀಯ ಸಂಪ್ರದಾಯವನ್ನು ಕುರಿತು ಹೇಳುತ್ತದೆ.

ಒಂದು ಗಲ್ಲದಲ್ಲಿ ಹಾಲು, ಇನ್ನೊಂದು ಗಲ್ಲದಲ್ಲಿ ನೀರು, ಎನ್ನುವ ಬಾಲ್ಯದಲ್ಲೇ ಹೆಣ್ಣಿಗೆ ವಿವಾಹ ಕಡ್ಡಾಯವಾಗಿದ್ದ ಸಂದರ್ಭದಲ್ಲಿ, ವಿವಾಹ ಸಾಧ್ಯವಾಗದೆ ಮಗಳು ಅವಿವಾಹಿತೆಯಾಗಿ ಮನೆಯಲ್ಲಿರಲಿ ಎಂದು ಬಯಸಿದ ತಂದೆ ಶ್ರೀಧರ ಪಂಡಿತನ ಆಶಯವನ್ನು ಅವನ ಗರ್ವಭಂಗದ ಅಸ್ತ್ರವಾಗಿ ಬಳಸಿಕೊಳ್ಳುವ ಸಂಪ್ರದಾಯವಾದಿಗಳು, ಇವರನ್ನು ವಿರೋಧಿಸಿ ಮಗಳ ಬದುಕನ್ನು ರೂಪಿಸಲಾಗದ ಶ್ರೀಧರ ಪಂಡಿತನಿಗೆ, ಮಗಳ ಬದುಕಿಗಿಂತ ತನ್ನ ಗೌರವ ಪ್ರತಿಷ್ಠೆಗಳೆ ಮುಖ್ಯವಾಗುತ್ತವೆ. ನಿಯಮದಂತೆ ಮಗಳನ್ನು ಕಾಡಲ್ಲಿ ಬಿಡಲು ಹೊರಡುತ್ತಾನೆ. ಮಗಳನ್ನು ಕಳೆದುಕೊಳ್ಳುವ ತಾಯಿಯ ಆಕ್ರಂದನವಾಗಲಿ, ತನಗೆಂಥ ಪೀಡೆ ಸುತ್ತಿಕೊಂಡಿದೆ, ಅದಕ್ಕೆ ಕಾರಣವೇನೆಂದು ತಿಳಿಯದ ಮಗಳ ಮುಗ್ಧತೆಯಾಗಲಿ ಪರಿಗಣನೆಗೊಳ್ಳುವುದಿಲ್ಲ.

'ಜ್ಞಾನಪೂರ್ವಕ ಕರ್ಮ ಮಾಡಬೇಕು ಶ್ರೀಧರ'[11] ಎಂದು ದಿಗಂಬರ ದೀಕ್ಷಿತರು ಹೇಳಿದಾಗ ಒಪ್ಪದ ಶ್ರೀಧರನ ಉದ್ಧಟತನ, ಅಹಂಕಾರಗಳಿಗೆ ಮಗಳು ರೋಹಿಣಿ ಬಲಿಯಾಗಬೇಕಾಗುತ್ತದೆ.

'ಜ್ಞಾನವಿಲ್ಲದ ಕರ್ಮ ಯಾಂತ್ರಿಕವಾದುದು ನಮ್ಮ ಕರ್ಮಕಾಂಡವೂ ಅಷ್ಟೆ ಎಷ್ಟೋ ಸಾವಿರ ವರ್ಷಗಳ ಹಿಂದೆ ನಿರ್ಧರಿಸಿದ ಕರ್ಮಗಳನ್ನು ನಾವಿಂದು ಪೂರ್ವಾಪರ ವಿವೇಚನೆಯಿಲ್ಲದೆ ಮಾಡುವುದೆ ಸಂಪ್ರದಾಯ ಶಾಸ್ತ್ರ ಎನ್ನುತ್ತೇವೆ. ಕಾಲ ಮರ್ಯಾದೆ, ದೇಶ ಮರ್ಯಾದೆ ಬೇಡವೆ? ಅಯ್ಯೋ ಕುರುಡು ಸಂಪ್ರದಾಯವೆ ಎಂಥ ಬಲಿದಾನವಿದು'[12] ಎಂದು ಶ್ರೀಧರ ಪಂಡಿತ ಪಶ್ಚಾತಾಪ ಪಡುವಂತೆ ಮಾಡುವಲ್ಲಿ ಕಥೆಗಾರರ ಪುನರ್‌ಸೃಷ್ಟಿಯ ಉದ್ದೇಶ ಅಡಗಿದೆ.

ಮೇಲ್‌ವರ್ಗದಲ್ಲಿಯ ಸಂಪ್ರದಾಯ ಆಚರಣೆಗಳ ಬಿಗಿ ಕೆಳವರ್ಗದಲ್ಲಿ ಅಷ್ಟಾಗಿರುವುದಿಲ್ಲ, ವಿಲೋಮ ವಿವಾಹ ಶಾಸ್ತ್ರಬಾಹಿರ, ಆದರೆ ಕಾಡು ಸೇರಿದ ಹೆಣ್ಣಿನ ಬದುಕಿನ ಹೊಣೆ ಹೆತ್ತವರದಾಗಲಿ, ಸಮಾಜದ್ದಾಗಲಿ ಆಗುವುದಿಲ್ಲ. ನಾಗರಿಕವೆನಿಸಿಕೊಂಡ ಸಮಾಜದಲ್ಲಿ ಸಿಗದ ಪರಿಹಾರ ಅನೇಕ ವೇಳೆ ಕಾಡಿನಲ್ಲಿ ಸಿಗುತ್ತದೆಂಬುದನ್ನು ಕಥೆ ಧ್ವನಿಸುತ್ತದೆ. ಇಂಥ ಬದಲಾಣೆಗೆ ಮಹಿಳೆ ಸ್ವತಃ ಮುಂದಾಗಬೇಕಾಗುತ್ತದೆ.

ವಿವಾಹ ಸಮಸ್ಯೆ :

ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಉಚ್ಚ–ನೀಚ ಭಾವ ಬಲವಾಗಿ ಬೇರೂರಿದ್ದು, ಇವೆರಡು ಎಂದೂ ಒಂದಾಗದಂತೆ ಎಚ್ಚರವಹಿಸಲಾಗುತ್ತದೆ. ಈ ಉಚ್ಚ–ನೀಚ ಭಾವಗಳು ಜಾತಿ, ಆರ್ಥಿಕತೆಯನ್ನು ಆಧರಿಸಿ ನಿರ್ಮಾಣಗೊಂಡಿವೆ. ಅನ್ಯ ಜಾತಿ ಧರ್ಮಗಳ ಬೆರೆಯುವಿಕೆಯನ್ನು ವರ್ಣ ಸಂಕರವೆಂದು ಕರೆಯಲಾಗಿದೆ. ಜಾತಿಯ ಒಳಬಳಕೆಗಳ ವಿವಾಹವನ್ನು ಇತ್ತೀಚಿನವರೆಗೆ ನಿಷಿದ್ಧವೆಂದೇ ಭಾವಿಸಲಾಗಿತ್ತು. ಈಗ ಅದು ಸಡಿಲಗೊಂಡಿದೆ.

ವೀರಶೈವ ಧಾರ್ಮಿಕ ವ್ಯವಸ್ಥೆಯಲ್ಲಿ ಮಠಗಳಿಗೆ ಜಂಗಮ ಜಾತಿ ಪಂಗಡದಿಂದ ಸ್ವಾಮಿಯನ್ನು ನಿಯಮಿಸಲಾಗುತ್ತದೆ. ಒಮ್ಮೆ ಸ್ವಾಮಿಯಾಗಿ ನಿಯಮಿಸಲ್ಪಟ್ಟ ಅಥವಾ ಅಧಿಕಾರ ವಹಿಸಿಕೊಂಡ ವ್ಯಕ್ತಿ ಯಾವುದೇ ಕಾರಣಕ್ಕೂ ಗೃಹಸ್ಥನಾಗುವಂತಿಲ್ಲ. ಹೀಗೆ ಸ್ವಾಮಿಯಾಗಿ ನಿಯಮಿಸಲ್ಪಡುವ ವ್ಯಕ್ತಿ ತೀರ ಕಿರಿ ವಯಸ್ಸಿನಲ್ಲಿಯೇ ಸಮಾಜದಿಂದ ಆಯ್ಕೆಯಾಗುತ್ತಾನೆ. ಅರಿಯದ ವಯಸ್ಸಿನಲ್ಲಿ ಸ್ವಾಮಿತ್ವಕ್ಕೆ ಸಮ್ಮತಿಸಿ, ಪ್ರೌಢಾವಸ್ಥೆಯಲ್ಲಿ ಗೃಹಸ್ಥರಾಗಲು ಬಯಸಿದರೆ ಅದಕ್ಕೆ ಸಾಮಾಜಿಕ ಸಮ್ಮತಿ ದೊರೆಯಲಾರದು. ಅಂಥವರನ್ನು ಬಲವಂತವಾಗಿ ಸ್ವಾಮಿತ್ವದಲ್ಲಿ ಮುಂದುವರಿಯಲು ಒತ್ತಾಯಿಸಲಾಗುತ್ತದೆ. ಒತ್ತಡಕ್ಕೆ ಮಣಿದವರು ತಮ್ಮ ಭಾವನೆಗಳನ್ನು ಬಲಿಗೊಟ್ಟು ಅನಿವಾರ್ಯ ಬದುಕಿಗೆ ಹೊಂದಿಕೊಳ್ಳುತ್ತಾರೆ. ಆತ್ಮವಂಚನೆ ಮಾಡಿಕೊಳ್ಳಲಿಚ್ಛಿಸದವರು ತಮ್ಮ ಭಾವನೆಗಳನ್ನು ಮನ್ನಿಸಿ ಸಮಾಜವನ್ನು ಎದುರಿಸುತ್ತಾರೆ. ಹೀಗೆ ಸ್ವಾಮಿಯೊಬ್ಬನ ಪ್ರೇಮ ಪ್ರಸಂಗ ಆವನ ಪ್ರೀತಿಸಿದ ಮಹಿಳೆಯ ಬದುಕನ್ನು ಘಾಸಿಗೊಳಿಸಿದ್ದನ್ನು ಶಾಂತರಸರ 'ಸಂಬಂಧಗಳು' ಕಥೆ ಚಿತ್ರಿಸುತ್ತದೆ.

ಈ ಕಥೆ ವಿವಾಹ ಕೇಂದ್ರಿತ ಸಮಸ್ಯೆಯುಳ್ಳದ್ದಾಗಿದೆ. ಜೀರ ರಾಮಪ್ಪನ ಮಗಳು ಮಹಾದೇವಿಯ ವಿವಾಹ ಒಂದು ಕುಟುಂಬದ ಸಮಸ್ಯೆಯಾಗದೆ ಸಾಮಾಜಿಕ ಸಮಸ್ಯೆ ಎಂಬಂತಾಗುತ್ತದೆ. ಅದಕ್ಕೆ ಕಾರಣ ಮಠದ ಸ್ವಾಮಿ ಸ್ವಾಮಿತ್ವವನ್ನು ತ್ಯಜಿಸಿ ಮಾದೇವಿಯನ್ನು ಮದುವೆಯಾಗಲು ಬಯಸಿದ್ದು. ಹಿರೇಮಠದ ಸ್ವಾಮಿ ಜೀರ ಮಾದೇವಿಯನ್ನು ಮದುವೆಯಾದರೆ ಜಾತಿ ಭ್ರಷ್ಟವಾಗುತ್ತದೆಂಬುದು ಒಂದು ಸಮಸ್ಯೆಯಾದರೆ, ಹೊಸ ಸ್ವಾಮಿ ಬಂದರೆ ಮಠದ ಲೆಕ್ಕಪತ್ರ ಒಪ್ಪಿಸಬೇಕಾಗುತ್ತದೆಂಬುದು ರುದ್ರಪ್ಪನ ಸಮಸ್ಯೆ, ಮುಂದೆ ಬರುವ ಸ್ವಾಮಿ ತನ್ನನ್ನು ಹಚ್ಚಿಕೊಳ್ಳದಿದ್ದರೆ ತಾನು ಸ್ವಾಮಿಯ ಪಾದದ ಬಳಿ ಕುಳಿತು ಹೆಂಗಸರ ಸೌಂದರ್ಯ ಆಸ್ವಾದಿಸಲಾಗದಲ್ಲ ಎಂಬುದು ದೇಸಾಯಿಯ ಸಮಸ್ಯೆ. ಹೀಗೆ ಸ್ವಾಮಿಯ ವಿವಾಹ ಊರ ಸಮಸ್ಯೆಯಾಗಿ ವಿವಾಹವಾಗದಂತೆ ತಡೆಯುವ ಹಲವು ಹುನ್ನಾರಗಳು ರೂಪಗೊಳ್ಳುತ್ತವೆ. ರಾಮಪ್ಪನನ್ನು ಕರೆದು ಹೇಳಿದ್ದಾಯ್ತು. ಮಾದೇವಿಯ ಸೋದರ ಮಾವ ಶರಣಬಸಣ್ಣಂಗೆ ತಾನೇ ವಿವಾಹವಾಗುವಂತೆ ಪ್ರಚೋದಿಸಿದ್ದಾಯ್ತು. ಸ್ವಾಮಿಗೂ ನಾನಾ ರೀತಿ ತಿಳುವಳಿಕೆ ಹೇಳಿದ್ದಾಯ್ತು. ಆದರೂ ನಿರ್ಧಾರ ಬದಲಾಗದೇ ಇದ್ದಾಗ ಅಣ್ಣಪ್ಪ ಶರಣಬಸಣ್ಣನಿಗೆ ಮಾದೇವಿಯ ಮೇಲೆ ಅತ್ಯಾಚಾರವೆಸಗಲು ಹೇಳುತ್ತಾನೆ. ಬಸವಜಯಂತಿಯ ಮೆರವಣಿಗೆಯ ಗಲಾಟೆಯಲ್ಲಿ ಶರಣಬಸಣ್ಣ ಅತ್ಯಾಚಾರವೆಸಗುತ್ತಾನೆ. ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾದದ್ದಕ್ಕೆ ಸ್ವಾಮಿಯ ವಿರೋಧಿ ಬಣ ಸಂತಸಪಡುತ್ತಿರುವಾಗಲೇ ಸ್ವಾಮಿ ಮಾದೇವಿಯ ಬಳಿ ಬಂದು ನೀರು ಚುಮುಕಿಸಿದಾಗ ಎಚ್ಚತ್ತ ಮಾದೇವಿ ಸ್ವಾಮಿಯ ಕೈಯನ್ನು ಹಿಡಿದುಕೊಳ್ಳುವಲ್ಲಿ, ಸ್ವಾಮಿ ಮತ್ತು ಮಾದೇವಿಯರ ಗಟ್ಟಿ ನಿರ್ಧಾರ ಪ್ರಕಟವಾಗುತ್ತದೆ. ತನಗೆ ಬೇಡವಾದ ಸಂಗತಿಯನ್ನು ನಿಯಂತ್ರಿಸಲು ಪುರುಷಶಾಹಿ ಸ್ವಾಮಿಗೆ ಲಂಪಟ ಜೀವನ ನಡೆಸಿದರೂ ಅಡ್ಡಿಯಿಲ್ಲ, ಒಬ್ಬಳನ್ನು ಇಟ್ಟುಕೊಂಡರೂ ತಪ್ಪಿಲ್ಲ, ಮದುವೆ ಮಾತ್ರ ಆಗ ಬೇಡವೆಂದು ಹೇಳುವ, ಮಾದೇವಿಯ ಮೇಲೆ ಅತ್ಯಾಚಾರವೆಸಗಿ ಅವಳ ಬಾಳನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುವ ಮಟ್ಟಕ್ಕೆ ಹೋಗುವುದನ್ನು ಶಾಂತರಸರು ಯಾವ ಉದ್ವೇಗ ವಿಲ್ಲದೆ ಸಂಯಮಪೂರ್ಣವಾಗಿ ಚಿತ್ರಿಸಿದ್ದಾರೆ. ಅತ್ಯಾಚಾರವೆಸಗಿ ಅಟ್ಟಹಾಸಗಯ್ಯಬೇಕೆಂದ ಪುರುಷ ವ್ಯವಸ್ಥೆ ಒಂದೆಡೆಯಾದರೆ, ಶರಣತತ್ತ್ವಕ್ಕೆ ಬದ್ಧನಾಗಿ ಸ್ವಾಮಿತ್ವವನ್ನು ತ್ಯಜಿಸಿ ಮಾದೇವಿಗೆ ಬಾಳುಕೊಡುವ ಮಾನವೀಯ ವ್ಯಕ್ತಿಯಾಗಿ ವಿರುಪಾಕ್ಷಸ್ವಾಮಿ ಮತ್ತೊಂದೆಡೆ ಗಮನ ಸೆಳೆಯುತ್ತಾರೆ.

ಅತ್ಯಾಚಾರದ ನೆಪವನ್ನೆ ಮುಂದಿಟ್ಟುಕೊಂಡು ಜಾರಿಕೊಳ್ಳಬಹುದಾದ ಅವಕಾಶವನ್ನು ಬಳಸಿಕೊಳ್ಳದೆ ವಚನ ಬದ್ಧನಾಗಿ ನಡೆದುಕೊಳ್ಳುವ ಸ್ವಾಮಿ, ತನ್ನಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಿದ ಸ್ವಾಮಿಯೊಂದಿಗೆ ವಿವಾಹವಾಗಲು ನಿರ್ಧರಿಸುವ ಮಾದೇವಿ ಪ್ರಸ್ತುತ ಸಮಾಜಕ್ಕೆ ಅವಶ್ಯ ಮಾದರಿಗಳಾಗಿ ಕಂಡುಬರುತ್ತಾರೆ. ಇಲ್ಲಿಯ ಮಹಿಳಾ ಬದುಕು ಪುರುಷ ಶಾಹಿ ಕುತಂತ್ರಕ್ಕೆ ಸವಾಲಾಗಿ ನಿಲ್ಲುತ್ತದೆ.

ಮಹಿಳೆಗೆ ವಿವಾಹವನ್ನು ಕಡ್ಡಾಯವಾಗಿಸಿದ ವ್ಯವಸ್ಥೆಯಲ್ಲಿ, ವಿವಾಹವೇ ಒಂದು ಸಮಸ್ಯೆಯಾಗುತ್ತಿರುವುದು ಅದರ ದ್ವಂದ್ವ ನೀತಿಯನ್ನು ದರ್ಶಿಸುವಂತಾಗಿದೆ. ಜಾತಿ, ವರದಕ್ಷಿಣೆ, ಹಿರಿಯರ ಸಮ್ಮತಿ, ಅಂತಸ್ತುಗಳೆಂದು ಹಲವು ಅಡೆತಡೆಗಳು ಏರ್ಪಟ್ಟು ವಿವಾಹ ಸಮಸ್ಯೆ ಉಂಟಾಗುತ್ತದೆ. ವಿವಾಹವಾಗಿ ಸಹಜೀವನ ನಡೆಸಬೇಕಾದ ಸ್ತ್ರೀ-ಪುರುಷರು ಸ್ವತಃ ಅಂಥ ಸಮಸ್ಯೆಗಳನ್ನು ಎದುರಿಸಿ ಪರಿಹಾರ ಕಂಡು ಕೊಂಡಾಗಲೆ ಇಂದು ಕಾಡುತ್ತಿರುವ ಸಾಮಾಜಿಕ ಸಮಸ್ಯೆಗಳು ನಿಯಂತ್ರಣಗೊಳ್ಳಬಹುದಾಗಿದೆ.

ಅಸಮ ವಯಸ್ಕ ಸಮಸ್ಯೆ :

ವಿವಾಹ ಸಂಬಂಧಗಳಲ್ಲಿ ಜಾತಿಯಷ್ಟೇ ಪ್ರಮುಖವಾಗಿ ಅಂತಸ್ತನ್ನು ಪರಿಗಣಿಸಲಾಗುತ್ತದೆ. 'ಶ್ರೀಮಂತರ ಮನೆಗೆ ಹೆಣ್ಣು ಕೊಡಬೇಕು. ಬಡವರ ಮನೆಯ ಹೆಣ್ಣು ತರಬೇಕೆಂಬ' ಗಾದೆ ಇರುವಾಗಲೂ ತಮ್ಮ ಆರ್ಥಿಕ ಸಾಮಾಜಿಕ ಅಂತಸ್ಥಿಗೆ ಸರಿಸಮರಲ್ಲದವರೊಂದಿಗೆ ಸಂಬಂಧ ಬೆಳೆಸುವುದನ್ನು ಅಗೌರವವೆಂದೇ ಭಾವಿಸಲಾಗುತ್ತದೆ. ಇಂತಹ ಭಾವನೆಗಳಿಂದಾಗಿ ಪ್ರೇಮಿಗಳು ವಿವಾಹ ಬಂಧನಕ್ಕೊಳಗಾಗದೇ ದೂರಾಗಿ ನರಳಬೇಕಾಗುತ್ತದೆ. ಒಲ್ಲದ ವಿವಾಹ ಬಂಧನದಲ್ಲಿ ಸಿಲುಕಿ ಜೀವನ ಪೂರ್ತಿ ತಮ್ಮದಲ್ಲದ ಹೇರಿಕೆಯ ಬದುಕಿನ ಭಾರವನ್ನು ಹೊತ್ತು ಬದುಕಬೇಕಾಗುತ್ತದೆ. ಹಿರಿಯರಿಂದ ಏರ್ಪಟ್ಟ ಮದುವೆಗೆ ಮಹಿಳೆ ಮರುಮಾತಿಲ್ಲದೇ ಒಪ್ಪಿ ಅನುಸರಿಸಬೇಕೆಂದು ವಿಧಿಸುವಲ್ಲಿ ಅವಳ ಪ್ರೇಮ ನೆಲಕಚ್ಚಬೇಕಾಗುತ್ತದೆ. ಅವಳ ವಿರೋಧಕ್ಕೆ ಯಾವ ಮಾನ್ಯತೆ ಇರುವುದಿಲ್ಲ. ಒತ್ತಾಯದ ವಿವಾಹವಾದರೂ ಹೇಗೋ ಹೊಂದಿಕೊಂಡು ಹುಟ್ಟಿದ ಮನೆಗೂ ಕೊಟ್ಟ ಮನೆಗೂ ಹೆಸರು ತರಲು ಶ್ರಮಿಸಿದಾಗಲೂ ಅವಳ ವಿವಾಹಪೂರ್ವ ಪ್ರೇಮವನ್ನೇ ನೆಪವಾಗಿಟ್ಟುಕೊಂಡು ಶಾರೀರಿಕ, ಮಾನಸಿಕ ಹಿಂಸೆ ನೀಡಲಾಗುತ್ತದೆ. ಇಂಥ ಸಂದರ್ಭಗಳಲ್ಲೂ ಮಹಿಳೆ ತನ್ನ ಹಣೆಬರಹವನ್ನು ಹಳಿದು ಬದುಕುತ್ತಾಳೆ. ತೀರ ಮೀರಿದಾಗ ವಿವಾಹ ಸಂಸ್ಥೆಯನ್ನು ಧಿಕ್ಕರಿಸಿ ತನ್ನಾಯ್ಕೆಯ ಬದುಕಿಗೆ ಮುಖವಾಗುತ್ತಾಳೆ.

ಶಾಂತರಸರ 'ಮಾಯೆ ಅಂದ್ರ ಮಾಯೆ' ಕಥೆ ವಿವಾಹ ಕೇಂದ್ರಿತ ಸಮಸ್ಯೆ ಮಹಿಳೆಯ ಬದುಕನ್ನು ಪ್ರಭಾವಿಸುವುದಾಗಿದೆ. ರಾಚಮ್ಮ ತಾನು ಮನಸಾರೆ ಪ್ರೀತಿಸಿದ ಗಂಗ್ಯನೊಂದಿಗೆ ವಿವಾಹವಾಗಲು ಅನುಮತಿಸದೆ ಅವಳ ತಂದೆ ಅಣ್ಣ ಮುದುಕ ಎಂಕನಗೌಡನೊಂದಿಗೆ ಮದುವೆ ಮಾಡುತ್ತಾರೆ. ಓರಗೆಯ ಗಂಗ್ಯನನ್ನು ಮರೆಯಲಾಗದೆ, ಮುದುಕ ಎಂಕನಗೌಡನೊಂದಿಗೆ ಬೆರೆಯಲಾಗದೆ ರಾಚಮ್ಮ ಘಾಸಿಗೊಳ್ಳುತ್ತಾಳೆ. ದುಷ್ಟ ಎಂಕನ್ಯಗೌಡ ಅವಳ ಮೇಲೆ ಅತ್ಯಾಚಾರವೆಸಗುತ್ತಾನೆ. ಮೈ ಹುಣ್ಣಾಗುವಂತೆ ಹೊಡೆಯುತ್ತಾನೆ. ರಾಚಮ್ಮ ಬದುಕಲಾಗದೆ, ಸಾಯಲಾಗದೇ ನರಳುತ್ತಾಳೆ. ಗೌಡ ಹತ್ತಿರ ಬಂದರೆ ಹೊಯ್ಕೊಳ್ಳುವ ಮೂಲಕ ದೂರವಿರಿಸುತ್ತಾಳೆ.

ಒಮ್ಮೆ ಇವಳನ್ನು ಕಾಣಲು ಬಂದ ಗಂಗ್ಯ ತನ್ನೊಂದಿಗೆ ಮುಂಬೈಗೆ ಬರಲು ಕೇಳುತ್ತಾನೆ. ಮದುವೆಗಂಡನನ್ನು ಬಿಟ್ಟು ಬರುವುದು ಸರಿಯಲ್ಲ. ನೀನೂ ಮದುವೆಯಾಗಿ ಸುಖವಾಗಿರೆಂದು ಹೇಳುತ್ತಾಳೆ. ಗಂಗ್ಯ ಬಂದ ವಿಷಯ ತಿಳಿದ ಗೌಡ ನಾಲ್ಕಾರು ದಿನ ಅವಳನ್ನು ವಿಚಿತ್ರವಾಗಿ ಪೀಡಿಸುತ್ತಾನೆ. ಒಂಸೆ ತಾಳದೆ ಸಾಯಬೇಕೆಂದು ಯೋಚಿಸುತ್ತಾಳಾದರೂ, ಸಾಯುವದಕ್ಕಿಂತ ಬಂದದ್ದನ್ನು ಎದುರಿಸಿ ಬದುಕುವ ನಿರ್ಧಾರ ಕೈಗೊಂಡು ಒಂದು ದಿನ ಬೆಳಗಿನ ಜಾವದಲ್ಲಿ ಒಡೆದ ಮಡಿಕೆಯಲ್ಲಿ ಗೌಡ ಹರಿದ ತನ್ನ ಕುಪ್ಪಸದ ತುಂಡು ಮತ್ತು ತಾಳಿಯನ್ನಿರಿಸಿ ಮೇಲೆ ತನ್ನ ಒಂದು ಚಪ್ಪಲಿಯನ್ನಿಟ್ಟು ಗಂಗ್ಯನೊಂದಿಗೆ ಹೋಗುತ್ತಾಳೆ.

'ಪಿತೃ ಸಂಸ್ಕೃತಿ ರಾಚಮ್ಮನ ಪ್ರೇಮವನ್ನು ಜಾತಿ ಅಂತಸ್ತಿನ ಕಾರಣಕ್ಕೆ ನಿರಾಕರಿಸುತ್ತದೆ. ಸಾಲ ಕೊಡುವುದು ತಪ್ಪುತ್ತದೆಂಬ ಕಾರಣಕ್ಕೆ ರಾಚಮ್ಮನ ತಂದೆ ಮಗಳನ್ನು ಮುದುಕನಿಗೆ ಕೊಡುತ್ತಾನೆ. ಇಬ್ಬರು ಹೆಂಡಿರು ಸತ್ತು ಸೊಸೆ ಮೊಮ್ಮಕ್ಕಳಿರುವ ಎಂಕನಗೌಡ ಮಗಳ ವಯಸ್ಸಿನ ರಾಚಮ್ಮನನ್ನು ಮದುವೆಯಾಗುತ್ತಾನೆ. ಇಲ್ಲಿಯ ಎಲ್ಲ ಗಂಡಸರು ತಮ್ಮ ಸ್ವಾರ್ಥವನ್ನು ಆಶಿಸಿ ರಾಚಮ್ಮನ ಜೀವನವನ್ನು ಬಲಿಕೊಡುತ್ತಾರೆ. ಗಂಡಸರ ಕುರಿತು ಅವಳಲ್ಲಿ ಒಂದು ಬಗೆಯ ರೋಷ ಉಕ್ಕುತ್ತದೆ 'ಆ ಮಾಸ್ತರ ಥೂ ಹೊಲಸು ಆಸೆ, ಆ ಗಂಗ್ಯಾನು ಅಷ್ಟೇ, ಗಂಡನೂ ಅಷ್ಟೆ ಆ ಮಾಸ್ತರನೂ ಅಷ್ಟೇ ಯಾರೂ ಬ್ಯಾಡ ಎಲ್ಲ ಗಂಡ್ಸರೂ ಅಷ್ಟೆ'[3] 'ಈ ಎದಿಮ್ಯಾಲಿನ ಗಾಯದ ಗುರುತು ನೋಡಿದಂಗೆಲ್ಲ ಅವ್ನಿಗೆ ಚಟಿಗೆ ಮುರೆಂಗಾಗ್ತದ. ಇವುನ್ ಸಂತಾರ ಎಲ್ಲಿಂದ ಗಂಟ ಬಿತ್ತೋ ನನಗೆ ಸತ್ತಾದ್ರೂ ಹೋಗ್ವಲ್ಲ, ನಾ ರಂಡ್ಯಾದ್ರೂ ಅಡ್ಡಿಲ್ಲ ಅವನ ಕಾಟಾದ್ರೂ ತಪ್ತದ'[4] ಒಂದ್ ಮಗಾ ಅದ್ರೂ ಆಗಿದ್ರೆ ಥೂ ಈ ಮುದಿಲೊಟ್ಟಿಗೆ ಬಸುರಾಗದಿಕ್ಕಿಂತ ಬಂಜೆ ಆಗಿರದೇ ಬೇಸು! ಮುಂತಾಗಿ ಪಿತೃ ಸಂಸ್ಕೃತಿಯ ವಿರುದ್ಧವಾಗಿ ಆಲೋಚಿಸುವ ರಾಚಮ್ಮ ಅವನ್ನು ನಿರಾಕರಿಸುವುದು ಮಾತ್ರವಲ್ಲ ಉಲ್ಲಂಘಿಸುತ್ತಾಳೆ ಎಂಬುದನ್ನು ಶಾಂತರಸರು ಸಂಯಮಪೂರ್ಣ ಸಹಾನುಭೂತಿಯಿಂದ ಮಂಡಿಸುತ್ತಾರೆ.

ವಿವಾಹ ತನ್ನ ಮನಸ್ಸಿನ ವಿರುದ್ಧ ನಡೆದಾಗಲೂ ಎರಡು ಕುಟುಂಬಗಳ ಮರ್ಯಾದೆಗಾಗಿ ಅಲ್ಲಿಯೆ ಹೊಂದಿಕೊಂಡು ಬದುಕಲು ಸಿದ್ಧಳಾದರೂ, ಅದನ್ನು ಕಡೆಗಣಿಸುವ ತುಚ್ಚೀಕರಿಸುವ ವರ್ತನೆಗೆ ಹೇಸಿ ರಾಚಮ್ಮ ಮೌನವಾಗಿಯೆ ನೀಡುವ ಎದುರೇಟು ಮರ್ಮಾಂತಿಕವಾದುದು. ಒಡೆದ ಮಡಕೆ, ಹರಿದ ಕುಪ್ಪಸ, ತೆಗೆದ ತಾಳಿ, ಮೇಲಿರಿಸಿದ ಚಪ್ಪಲಿ ಒಂದೊಂದು ಪುರುಷಶಾಹಿಗೆ ಕೊಡುವ ಶಾಕ್‌ಗಳಾಗಿ ಕಾಣುತ್ತವೆ. ಕಥೆ ಪ್ರತಿರೋಧದೊಂದಿಗೆ ಪರ್ಯಾಯವನ್ನೂ ಸೂಚಿಸುತ್ತದೆ.

ವಿಷಮ ದಾಂಪತ್ಯ :

ವಿವಾಹ ಸಂಸ್ಥೆಗೆ ಮಹಿಳೆಯ ವಿದ್ಯೆ, ಬುದ್ಧಿ ಚಾತುರ್ಯಗಳು ಮುಖ್ಯವಾಗದೆ ರೂಪ, ವಿನಯ ಸಾಂಪ್ರದಾಯಿಕತೆಯನ್ನು ಮೀರದ ನಡವಳಿಕೆ ಮುಖ್ಯವಾಗುತ್ತದೆ. ಸಾಧಾರಣ ರೂಪಿನವಳಿಗೆ ವಿವಾಹ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲವಾಗುತ್ತದೆ. ಆಯ್ಕೆಯ ಅವಕಾಶವೂ ಇರುವುದಿಲ್ಲ. ವಿವಾಹ ಕುರಿತ ಅವಳ ನಿರೀಕ್ಷೆಗಳು ಹುಸಿಯಾಗುತ್ತವೆ. ವಿವಾಹವಾಗಲೇ ಬೇಕೆಂಬ ಅನಿವಾರ್ಯತೆಯಲ್ಲಿ ಭಾವನೆಗಳನ್ನು ಬಲಿಕೊಟ್ಟು ವಲ್ಲದ ವರನೊಂದಿಗೆ ವಿವಾಹವಾಗಬೇಕಾಗುತ್ತದೆ. ಅಂತಲ್ಲಿ ಮಹಿಳೆಯ ವಿದ್ಯೆ, ಪ್ರತಿಭೆಗೆ ಮನ್ನಣೆ ದೊರೆಯದೆ ಆತ್ಮಹತ್ಯೆಗೆ ಮೊರೆಹೊಕ್ಕ ಸಂಗತಿಗಳು ಎಷ್ಟೋ ಇವೆ.

ಎಂ.ಜಿ. ದೇಶಪಾಂಡೆಯವರ ಪರಿಣಾಮ ಕಥೆ ವಿಷಮ ದಾಂಪತ್ಯದ ದುರಂತ ವಸ್ತುವಿನದು. ಶಾಂತಾದೇವಿ ವಿದ್ಯಾವಂತಳಾದರೂ ಹೇಳಿಕೊಳ್ಳುವ ಚಲುವೆಯಲ್ಲವಾಗಿ ತನಗಿಂತ ಕಡಿಮೆ ವಿದ್ಯ ಪಡೆದ, ಶ್ರೀಮಂತನಲ್ಲದ ಒಟ್ಟಾರೆ ತನ್ನ ಸಮನಲ್ಲದ ಗಂಗಾಧರನ ಕೈ ಹಿಡಿಯಬೇಕಾಗುತ್ತದೆ. ಒಲ್ಲದ ಒಗತನದಿಂಗಾಗಿ ದಿನವೂ ಮನೆಯಲ್ಲಿ ಅತ್ತೆ ನಾದಿನಿಯರೊಂದಿಗೆ ಜಗಳ ಇದಾವುದನ್ನು ಗಂಭೀರವಾಗಿ ಸ್ವೀಕರಿಸದ ಗಂಗಾಧರ, ಹೊಂದಾಣಿಕೆಯೇ ಇಲ್ಲದ ಸಂಸಾರದಿಂದ ಬೇಸತ್ತ ಶಾಂತಾ ಎರಡು ಮಕ್ಕಳೊಂದಿಗೆ ಬಾವಿಗೆ ಬಿದ್ದು ಜೀವ ಕಳೆದುಕೊಳ್ಳುತ್ತಾಳೆ. ಗಾಬರಿಯಲ್ಲಿ ವಯಸ್ಸಾದ ಅತ್ತೆಯೂ ಸಾಯುತ್ತಾಳೆ.

ಹೀಗೆ ಚಲುವೆಯಲ್ಲವೆಂದೋ, ಬಡವಳೆಂದೊ ವರ ಸಿಗಲಿಲ್ಲವೆಂದೊ ಇಷ್ಟವಿಲ್ಲದ ಗಂಡಿನೊಂದಿಗೆ ವಿವಾಹವಾಗಿ ಹೊಂದಾಣಿಕೆ ಇಲ್ಲದೆ ಅಸುನೀಗುವ ಮಹಿಳೆಯರ ಪ್ರತಿನಿಧಿಯಾಗಿ ಶಾಂತಾ ಚಿತ್ರಣಗೊಂಡಿದ್ದಾಳೆ. ಮಹಿಳೆಯ ಬದುಕಿನಲ್ಲಿ ಆಯ್ಕೆಯ ಅವಕಾಶವಿಲ್ಲದಾಗ ನಡೆಯುವ ದುರಂತವನ್ನು ಕಥೆ ಕಟ್ಟಿಕೊಡುತ್ತದೆ.

ಪುರುಷ ಲೋಲುಪತೆ :

ವಿವಾಹ ಸಂಸ್ಥೆಯನ್ನು ಕಡ್ಡಾಯವಾಗಿ ಪ್ರವೇಶಿಸುವ ಮಹಿಳೆ ಪತ್ನಿ, ಗೃಹಿಣಿ, ತಾಯಿಯಾಗಿ ತಾನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಕಿಂಚಿತ್ತೂ ಲೋಪವಿಲ್ಲದಂತೆ ನಿರ್ವಹಿಸಬೇಕು. ಗಂಡನಾದವನು ಹೆಂಡಿತಿ ಮನೆ ಮಕ್ಕಳಿಗಾಗಿ ತನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಲಿ ಬಿಡಲಿ ಅದನ್ನು ಕೇಳುವ ಅಧಿಕಾರ ಹೆಂಡತಿಯದಲ್ಲವೆಂದೇ ಭಾವಿಸಲಾಗಿದೆ. ಹಾಗೇ ಕರ್ತವ್ಯ ನಿರ್ವಹಿಸಲೇಬೇಕಾದ ಯಾವ ಒತ್ತಡವೂ ಅವನ ಮೇಲೆ ಇರುವುದಿಲ್ಲ. ಮೀರಿ ನಡೆದಾಗ ಅವನನ್ನು ಶಿಕ್ಷಿಸುವ ಬದಲು ಹೆಂಡತಿಗೆ ಅನುಸರಿಸಿಕೊಂಡು ಹೋಗಬೇಕೆಂದು ಉಪದೇಶಿಸಲಾಗುತ್ತದೆ. ಗಂಡ ಎಂಥವನಾದರೂ ಹೆಂಡತಿ ಅವನನ್ನು ಅನುಸರಿಸಿಕೊಂಡು ಮನೆತನದ ಮಾನ ಕಾಪಾಡಬೇಕು. ಜಾರತನ ಮಾಡುವುದಿರಲಿ ಆ ಕುರಿತು ಆಡಿದ ಮಾತು ಅವಳ ಬದುಕನ್ನು ಬಾಧಿಸುತ್ತದೆ. ಅವಳು ಗಯ್ಯಾಳಿ ಎನಿಸಿಕೊಳ್ಳಬೇಕಾಗುತ್ತದೆ. ಗಂಡನ ಪ್ರೀತಿ ವಿಶ್ವಾಸಗಳಿಲ್ಲದ ಮಹಿಳೆಯನ್ನು ಎಲ್ಲರೂ ಹುರಿದು ಮುಕ್ಕುವವರೇ ಎಂಬುದನ್ನು ಶಿವಕುಮಾರ ನಾಗವಾರರ 'ಹುಳುಚು' ಕಥೆ ಪ್ರತಿನಿಧಿಸುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಎಷ್ಟು ಗಟ್ಟಿತನ ಅತ್ಮವಿಶ್ವಾಸಗಳನ್ನು ಮೈಗೂಡಿಸಿಕೊಂಡು ಬೆಳೆದರೂ ಮಹಿಳೆ ವ್ಯವಸ್ಥೆಯ ಕಪಿ ಮುಷ್ಠಿಯಲ್ಲಿ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಅಸಹಾಯಕಳಾಗ ಬೇಕಾದ ಸ್ಥಿತಿಯನ್ನು ಪ್ರತಿನಿಧಿಸುತ್ತದೆ.

ಪಾರ್ವತಿ ಬಾಲ್ಯದ ತನ್ನ ನಡೆನುಡಿಯಲ್ಲಿ ದಿಟ್ಟಳಾಗಿದ್ದು ತಂದೆಯ ಮೆಚ್ಚುಗೆಗೆ ಪಾತ್ರಳಾಗಿದ್ದಳು. ಅಣ್ಣ ಅಲ್ಲಮನ ಪುಕ್ಕಲು ಸ್ವಭಾವಕ್ಕಿಂತ ಪಾರ್ವತಿಯ ದಿಟ್ಟ ಸ್ವಭಾವ ತಂದೆಗೆ ಹಿಡಿಸಿತ್ತು. ಎಷ್ಟೋಸಲ 'ಪಾರಬತಿ, ನೀನ್ಯಾಕೆ ಗಣ್ಣಾಗಿಲ್ಲ ಮಗ । ಖರ ಹೆಂಗ್ಸಾದೂರ ಏನಾಯ್ತು ನೀನೇ ನನ್ನ ಗಣ್ಣ ಮಗ'[6] ಎಂದು ಹೆಮ್ಮೆ ಪಟ್ಟಿದ್ದನು. ಇಲ್ಲಿ ದಿಟ್ಟತನ ಪುರುಷ ಸ್ವಭಾವವೆಂದೆ ಪರಿ ಭಾವಿಸಲಾಗಿದೆ. ಹೆಣ್ಣಿನಲ್ಲಿ ಆ ಗುಣವನ್ನು ನಿರೀಕ್ಷಿಸುವದೇ ಇಲ್ಲ. ಆಕಸ್ಮಾತ್ ಇದ್ದರೆ ಅದನ್ನು ನಿಯಂತ್ರಿಸಲಾಗುತ್ತದೆ. ಪಾರ್ವತಿಯ ದಿಟ್ಟತನ ಗಂಡುಬೀರಿ ಬಿರುದಿಗೆ ಪಾತ್ರವಾಗುತ್ತದೆ.

ತಂದೆಯ ಸಲಿಗೆಯಲ್ಲಿ ಯಾವ ಅಂಕೆಯೂ ಇಲ್ಲದೆ ಬೆಳೆದ ಪಾರ್ವತಿಗೆ ಗಂಡನ ಮನೆಗೆ ಹೋದಾಗ ನಿರ್ಬಂಧದ ಬದುಕು ಉಸಿರುಗಟ್ಟಸುತ್ತದೆ. ಮದುವೆ ಮಾಡಿದ ಅಪ್ಪನ ಮೇಲೆ ಸಿಟ್ಟು ಬರುತ್ತದೆ. ಇಂಥ ಸ್ಥಿತಿ ಒದಗುವುದು ಮೊದಲೇ ತಿಳಿದಿದ್ದರೆ ಮದುವೆಯೆ ಆಗುತ್ತಿರಲಿಲ್ಲವೆಂದು ಯೋಚಿಸುತ್ತಾಳೆ.

ಗಂಡನ ಆಯ್ಯಾಷಿ ಬದುಕು, ಅದಕ್ಕೆ ಅಣ್ಣನ ಕುಮ್ಮಕ್ಕು ತಿಳಿದು ವಿರೋಧಿಸುತ್ತಾಳಾದರೂ 'ನಿಜಾಮಶಾಹಿ ಗಂಡಸರ ಸಾಮ್ರಾಜ್ಯದಲ್ಲಿ ಹೆಂಗಸರ ದನಿಗೆ ಬೆಲೆಯಲ್ಲಿ ಸಿಗಬೇಕು' ಎಂಬಲ್ಲಿ ಗಂಡನನ್ನು ತಿದ್ದಲಾಗದ ಹತಾಶೆ ಕಾಣಿಸಿಕೊಳ್ಳುತ್ತದೆ.

ಗಂಡ ನಾಗಯ್ಯ ಉಪ್ಪಾರ ರೇವಮ್ಮನೊಂದಿಗೆ ವಿವಾಹಬಾಹಿರ ಸಂಬಂಧವಿಟ್ಟುಕೊಂಡಾಗ ವಿರೋಧಿಸಿದ ಪಾರ್ವತಿಯನ್ನು ಮೈಮುರಿಯೆ ಹೊಡೆದದ್ದಲ್ಲದೆ ಅವಳ ಆಭರಣಗಳನ್ನು ರೇವಮ್ಮಳಿಗೊಯ್ದು ಕೊಡುತ್ತಾನೆ. ಮಾವ ಭಾವರ ಬೆಂಬಲದಿಂದ ನಾಗಯ್ಯ ಪಾರ್ವತಿಯ ಬದುಕನ್ನು ದಾಸಿಗಿಂತ ಕೀಳಾಗಿಸುತ್ತಾನೆ. ಅಳಿದುಳಿದ ಒಡವೆಗಳನ್ನು ಕಿತ್ತುಕೊಳ್ಳಲು ನೋಡಿದಾಗ ಇಲ್ಲೆನ್ನುತ್ತಾಳೆ. ಯಾರಿಗೆ ಕೊಟ್ಟಿರುವೆ ಹೇಳು ಎಂದು ಪೀಡಿಸಿದಾಗ 'ನೀನು ಇಟ್ಟು ಕೊಂಡವಳಿಗೆ ಕೊಟ್ಟ ಹಾಗೆ ನಾನು ನನ್ನ ಮಿಂಡಗಾರನಿಗೆ ಕೊಟ್ಟಿರುವೆ' ನೆನ್ನಲು ನಾಗಯ್ಯ ಅಲ್ಲಮನಿಗೆ ತಿಳಿಸುತ್ತಾನೆ. ಅಲ್ಲಮ ತಾನು ಸಂಭಾವಿತನೆಂಬಂತೆ 'ನನ್ನ ಮುಂಡಾಸು ಕೆಳಗೆ ಹಾಕಿದಿ ಪಾರ್ವತಿ' ಎಂದು ಹೋದವನು ಪಾರ್ವತಿಯ ಜೀವಿತದ ಕೊನೆಯವರೆಗೆ ಹೊರಳಿ ನೋಡುವುದಿಲ್ಲ. ಸ್ವತಃ ತಾನು ತಪ್ಪು ಮಾಡಿದಾಗ ಕೆಳಗೆ ಬೀಳದ ಮುಂಡಾಸು ಮನೆಯ ಹೆಂಗಸು ತಪ್ಪಿದಾಗ ಮಾತ್ರ ಬೀಳುತ್ತದೆಂದು ವಿಧಿಸುವುದು ವ್ಯವಸ್ಥೆಯ ಪಕ್ಷಪಾತ ನೀತಿಯನ್ನು ಸಾರುತ್ತದೆ.

ತನ್ನ ಗಂಡನ ಹೊರ ಚಟಗಳಿಗೆ ತನ್ನೆಲ್ಲ ಬಂಗಾರ ಕರಗತೊಡಗಿದಾಗ, ಅನುವು ಆಪತ್ತಿಗಿರಲೆಂದು ಇರಿಸಿಕೊಂಡ ಹತ್ತು ತೊಲೆ ಬಂಗಾರವನ್ನು ಪಾರ್ವತಿ ಜಗುಲಿಯ ಕೆಳಗೆ ಹೂತ್ತಿಟ್ಟಿರುತ್ತಾಳೆ. ತನ್ನ ಕೊನೆಗಾಲದಲ್ಲಿ ಸೇವೆ ಮಾಡಿದವರಿಗೆ ಕೊಡಬೇಕೆಂದುಕೊಳ್ಳುವಾಗಲೆ ನೆಲ ಹಿಡಿದವಳಿಂದ ಮಾತು ಸ್ಪಷ್ಟವಾಗದೆ, ಅಥವಾ ಕೇಳಿಸಿಕೊಂಡವರು ತಿಳಿದರೂ ತಿಳಿಯದಂತೆ ನಟಿಸುತ್ತಾರೆ. ತನಗೆ ಸಹಾಯ ಮಾಡಿದ ಹೂವಣ್ಣ ತನ್ನನ್ನು ಆದರಿಸಿದ ಅತ್ತಿಗೆ ಗೌರಮ್ಮರಿಗೆ ತನ್ನ ಬಂಗಾರ ಕೊಡಲಾಗದೆ ಕೊರಗುತ್ತಾಳೆ.

ಹೆಣ್ಣಿನ ಕೌಟುಂಬಿಕ ಜೀವನ ಅದರಲ್ಲೂ ಸ್ವೇಚ್ಛಾವೃತ್ತಿಯ ಗಂಡಿನ ಹೆಂಡತಿ ಎಲ್ಲರ ಆಸಡ್ಡೆಗೆ ಪಾತ್ರಳಾಗಬೇಕಾದ ಸ್ಥಿತಿ ಏರ್ಪಡುತ್ತದೆ. ಸಂತಾನವಿಲ್ಲದ ಅವಳ ಆಸ್ತಿಗೆ ನಿರಂಜನ ಶಾಂಭವಿ, ಶಾರದ ಎಲ್ಲ ಹೊಂಚುವವರೇ ಆಗುತ್ತಾರೆ. ಎಲ್ಲೋ ಹೂವಣ್ಣ ಹಾಗೂ ಗೌರಮ್ಮನಂಥವರು ನಿರಾಸೆಯ ಕೂಪವಾದ ಬದುಕಿನಲ್ಲೂ ಶುದ್ಧ ಅಂತಕರಣದವರಾಗಿ ಪಾರ್ವತಿಯ ಬದುಕಿನ ಆಸರೆಯಾಗಿ ಕಾಣಿಸಿಕೊಳ್ಳುತ್ತಾರೆ. ಸುಖ ನೆಮ್ಮದಿಗಾಗಿ ಹಪಹಪಿಸುವುದೇ ಹೆಣ್ಣಿನ ಬದುಕಿನ ಹೋರಾಟವಾಗುತ್ತದೆ.

ಅರಕ್ಷಿತ ಕುಟುಂಬ :

ಹೆಣ್ಣನ್ನು ಲೈಂಗಿಕ ಜೀವಿಯಾಗಿ ಪರಿಗಣಿಸಲಾಗಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಮುಕ ದೃಷ್ಟಿ ಸಾಮಾನ್ಯವಾಗಿದೆ. ವಿವಾಹ ಸಂಸ್ಥೆಯಲ್ಲಿ ಹೆಣ್ಣಿನ ಲೈಂಗಿಕತೆಯನ್ನು ಅವಳ ಗಂಡನಿಗೆ ಮಾತ್ರ ಮೀಸಲೆಂದು ನಿಯಮಿಸಲಾಗಿದೆ. ಹಾಗೆಂದು ಇತರ ಗಂಡಸರಾರು ಅವಳನ್ನು ಬಳಸಿಕೊಳ್ಳುವುದಿಲ್ಲವೆಂದೇನು ಇಲ್ಲ.

ಹೆಣ್ಣಿನ ಸಮ್ಮತಿಯನ್ನು ನಿರೀಕ್ಷಿಸದೇ ಅವಳನ್ನು ಬಳಸಿಕೊಳ್ಳುವ ಪ್ರಯತ್ನಗಳು ಸಾಕಷ್ಟು ನಡೆಯುತ್ತವೆ. ಹೆಣ್ಣು ವಿವಾಹಿತೆ ಅವಿವಾಹಿತೆ ಎಂಬುದು ಇಲ್ಲಿ ಮುಖ್ಯವಾಗುವುದಿಲ್ಲ.

ಕುಟುಂಬ ವಲಯದಲ್ಲಿ ಮಾವ, ಭಾವ, ಮೈದುನ ಯಾರು ಬೇಕಾದರೂ ಈ ಹೀನ ಕೃತ್ಯಕ್ಕೆಳಸಬಹುದು ಎಂಬುದನ್ನು ಎಂ.ಜಿ. ದೇಶಪಾಂಡೆಯವರ 'ಬಾಳಿನೊಳಗಿನ ರಹಸ್ಯ' ಕಥೆ ಬಯಲಿಸುತ್ತದೆ. ಇಲ್ಲಿ ನೆಲೆ ಕಾಣದ ಸಂಗೀತಾಳ ಬದುಕಿನ ಅಸ್ಥಿರತೆಗೆ ವಿವಾಹ ಸಂಸ್ಥೆಯೆ ಕಾರಣವಾಗುವುದನ್ನು ಕುಟುಂಬ ಸಂಸ್ಥೆಯೂ ಮಹಿಳೆಯ ಪಾಲಿಗೆ ಅರಕ್ಷಿತವೇ ಆಗುವುದನ್ನು ಕಥೆ ಪ್ರತಿನಿಧಿಸುತ್ತದೆ. ಸಂಗೀತಾಳ ಸೋದರ ಮಾವ ವಿವಾಹ ಪೂರ್ವದಲ್ಲೆ ಅವಳ ಮೇಲೆ ಅತ್ಯಾಚಾರವೆಸಗಲು ಯತ್ನಿಸಿ ಅಕ್ಕನಿಂದ ಛೀಮಾರಿ ಹಾಕಿಸಿಕೊಂಡ ಮೇಲೆ ಸಂಗೀತಾ ಗಂಡಸರ ಬಗ್ಗೆಯೆ ಒಂದು ಬಗೆಯ ತಿರಸ್ಕಾರ ಭಾವ ತಾಳುತ್ತಾಳೆ. ತಾಯಿಯ ಅಪೇಕ್ಷೆಯಂತೆ ಉಮೇಶನನ್ನು ವಿವಾಹವಾದರೆ ಅವನು ಪುರುಷತ್ವವಿಲ್ಲದವನಾಗಿರುತ್ತಾನೆ. ಉಮೇಶನ ತಂದೆ ಅವಳ ಮೇಲೆ ಬಲತ್ಕಾರವೆಸಗಲು ಪ್ರಯತ್ನಿಸುತ್ತಾನೆ. ಸಂಗೀತಾ ಇದರಿಂದ ಪಾರಾಗಲು ಗುರಿಯಿಲ್ಲದೆ ಓಡಿಯೆ ಓಡುತ್ತಾಳೆ.

ವಿವಾಹ ಕುಟುಂಬ ವ್ಯವಸ್ಥೆಗಳು ಮಹಿಳೆಯ ಸುರಕ್ಷಿತ ತಾಣವೆಂದು ಘೋಷಿಸುತ್ತಲೆ, ಅವುಗಳೆ ಸ್ತ್ರೀ ರಕ್ಷಣಾ ವಿರೋಧಿ ಚಟುವಟಿಕೆಯ ತಾಣವಾಗುವ ಮೂಲಕ ಮಹಿಳೆಯ ಬದುಕನ್ನು ಅಸ್ಥಿರಗೊಳಿಸುವ ಅರಕ್ಷಿತವಾಗಿಸಿ ಬೀದಿಪಾಲು ಮಾಡುವ ವಿಪರ್ಯಾಸವನ್ನು ಕಥೆ ಶೋಧಿಸುತ್ತದೆ.

ಕುಟುಂಬ ಹಂಚಿಕೆ :

ಪುರುಷನದು ಸ್ವತಂತ್ರ ಬದುಕಾದರೆ ಮಹಿಳೆಯದು ಪರಾಧೀನಾವಾದುದು. ಪರಾದೀನತೆಯೇ ಹೆಣ್ಣಿಗೆ ಜೀವನ ಸಿದ್ಧಾಂತವೆಂದು ಅರೆದು ಕುಡಿಸಿದ ಸಾಮಾಜೀಕರಣದಿಂದಾಗಿ ಮಹಿಳೆ ಅದಕ್ಕೆ ಒಗ್ಗಿ ಹೋಗಿದ್ದಾಳೆ. ಸ್ವತಂತ್ರ ಬದುಕಿನ ನಿರೀಕ್ಷೆಯೂ ಇಲ್ಲದವಳಾಗಿದ್ದಾಳೆ. ಒಬ್ಬರಿಂದ ಇನ್ನೊಬ್ಬರಿಗೆ ಹಸ್ತಾಂತರಗೊಳ್ಳುವುದು ಅನಿವಾರ್ಯವೆಂದು ನಂಬಿದವಳಿಗೆ ಇದೊಂದು ಚಿಂತಿಸಬೇಕಾದ ವಿಷವೇ ಅಲ್ಲ. ಆದರೆ ಪುರುಷ ಯಾವುದೇ ಕಾರಣಕ್ಕೂ ಅಧೀನ ಬದುಕನ್ನು ಸ್ವೀಕರಿಸಲಾರ. ಸ್ವೀಕರಿಸಲೇಬೇಕಾದ ಅನಿವಾರ್ಯತೆ ಒದಗಿದಾಗ ಅದೊಂದು ಭಯಂಕರ ಶಿಕ್ಷೆ ಎಂಬಂತೆ ಚಡಪಡಿಸುತ್ತಾನೆ, ಗಾಬರಿಗೊಳ್ಳುತ್ತಾನೆ. ಹೆಂಡತಿಯೂ ತನ್ನನ್ನು ತೊರೆದು ಮಕ್ಕಳ ಬಳಿ ಹೋದರೆ ಹೇಗೆ ಎಂದು ಹೆದರುತ್ತಾನೆ. ಆದರೆ ಹೆಂಡತಿಯ ಅಧೀನಬದುಕನ್ನು ಕುರಿತು ಎಂದೂ ಆಲೋಚಿಸುವುದಿಲ್ಲವೆಂಬುದನ್ನು ಶಿವಕುಮಾರ ನಾಗವಾರರ 'ನೆಲ ಹಿಡಿಯುವ ಮುನ್ನ' ಕಥೆಯು ನಿರೂಪಿಸುತ್ತದೆ. ಕಥೆಯು ಮುಪ್ಪಿನ ಅಸಹಾಯ ಸ್ಥಿತಿಯನ್ನು ಪ್ರತಿನಿಧಿಸುವುದಾಗಿದೆ. ಸದಾ ಅಧೀನಳಾಗಿಯೆ ಬದುಕಿದ ಮಹಿಳೆಗೆ ಮುಪ್ಪು ಆತಂಕಕಾರಿಯಾಗುವುದಿಲ್ಲ. ಆದರೆ ಅಹಂಕಾರ ದರ್ಪಗಳಿಂದ ಮೆರೆದ ಪುರುಷನಿಗೆ ಅದು ಆಘಾತಕಾರಿಯಾಗಿ ಪರಿಣಮಿಸುತ್ತದೆಂಬುದನ್ನು ಕಥೆ ವಿವರಿಸುತ್ತದೆ.

ಬಯಸಿ ಹೆತ್ತ ಗಂಡು ಮಕ್ಕಳು ಮುಪ್ಪಿಗೆ ಆಸರೆಯಾಗುವ ಬದಲು ತಂದೆಯ ಆಸ್ತಿಯನ್ನು ಹಂಚಿಕೊಂಡು, ಅಧಿಕಾರವನ್ನು ಕಿತ್ತುಕೊಂಡು ಪ್ರತಿಯೊಂದಕ್ಕೂ ನಿರ್ಬಂಧ ಹೇರಿದಾಗ ಪುರುಷ ಕಂಗಾಲಾಗುತ್ತಾನೆ. ತನ್ನ ಹೆಂಡತಿ ತನ್ನಂತೆ ಚಡಪಡಿಸದೆ ನಿಶ್ಚಿಂತಳಾಗಿರುವುದನ್ನು ಕಂಡು ಹೊಟ್ಟೆಕಿಚ್ಚು ಪಡುತ್ತಾನೆ. ಆದರೂ ಅವಳು

ಯಾವ ಮಗನೊಂದಿಗೂ ಹೋಗದೆ ತನ್ನೊಂದಿಗೇ ಇರುವುದಾಗಿ ಹೇಳಿದಾಗ ಸಮಾಧಾನಗೊಳ್ಳುತ್ತಾನೆ. ತಾನು ಇಡೀ ಬದುಕು ಅವಳನ್ನು ಪೀಡಿಸಿದ್ದಕ್ಕೆ ಬೇಸರಗೊಳ್ಳುತ್ತಾನೆ. ಪುರುಷಾಧಿಕಾರದ ಮತ್ತಿನಲ್ಲಿ ತನ್ನನ್ನು ಪೀಡಿಸಿದ, ಮಕ್ಕಳಾಗಲಿಲ್ಲವೆಂದು ಸವತಿಯನ್ನು ಕರೆತಂದು ಹೊಟ್ಟೆ ಉರಿಸಿದ, ತವರ ಆಸರೆ ಇಲ್ಲದವಳೆಂದು ಚಿಕ್ಕಪುಟ್ಟ ಸಂಗತಿಗಳಿಗೂ ಮೈ ಪುಡಿಪುಡಿಯಾಗುವಂತೆ ಹೊಡೆಯುತ್ತಿದ್ದ ಮುದುಕ ಈಗ ತಾನೂ ಅಸಹಾಯ ಸ್ಥಿತಿಯಲ್ಲಿ ನಿಂತಾಗ, ಗಂಡು ಮಕ್ಕಳಿಂದ ಭ್ರಮನಿರಸನಗೊಂಡಾಗ ಮುದುಕಿಗೆ ಒಳಗೊಳಗೆ ನಗಬೇಕೆನಿಸುತ್ತದೆ.

ಇಬ್ಬರು ಮಕ್ಕಳು ಬೇರೆಯಾದರೆ ಗಂಡ-ಹೆಂಡತಿ ಒಬ್ಬೊಬ್ಬರಲ್ಲಿ ಇರಬೇಕೆಂಬ ಮುದುಕಿಯ ಬಯಕೆಗೆ ಮುದುಕ ತಣ್ಣೀರೆರಚುತ್ತಾನೆ. ಮುಪ್ಪಿನಲ್ಲಾದರೂ ನಿರಾಳವಾಗಿರಬೇಕೆಂಬ ಆಸೆ ಅಲ್ಲಿಯೆ ಕಮರುತ್ತದೆ. ಸದಾ ಗಂಡನ ಅಂಕೆಯಲ್ಲಿ ಬದುಕಿದವಳಿಗೆ ಇರುವ ಒಂದು ಅವಕಾಶವೂ ತಪ್ಪಿಹೋಗುತ್ತದೆ. ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣು ಕೊನೆವರೆಗೂ ಪುರುಷ ನಿಯಂತ್ರಣದಲ್ಲೇ ಇರಬೇಕಾಗುತ್ತದೆಂಬುದನ್ನು ನಾಗವಾರರು ಸೂಕ್ಷ್ಮವಾಗಿ ಹಿಡಿದಿಡುತ್ತಾರೆ.

ಮುಪ್ಪಿನಲ್ಲಿ ಆಸರೆಯಾಗಬೇಕಾದ ಮಕ್ಕಳು ತಮ್ಮನ್ನು ದೂರೀಕರಿಸಿದರೂ ತಾನು ಕ್ಷಮಿಸದೆ ಮತ್ತಾರು ಕ್ಷಮಿಸಬೇಕು ಎಂದು ಆಲೋಚಿಸುವ ಮುದುಕಿ ಸಮಾಜ ನಿರೀಕ್ಷೆಯ ಸಾಮಾಜೀಕರಣದ ಪ್ರತೀಕವೇ ಆಗಿದ್ದಾಳೆ.

ಹೆಣ್ಣಾದ ಕಾರಣ ತನ್ನ ಆಲೋಚನೆ, ಅಭಿಲಾಷೆಗೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಯಾವ ಬೆಲೆ ಇಲ್ಲವೆಂದು ಮನಗಂಡವಳು ಬಂದೊದಗಿದ ಸ್ಥಿತಿಗೆ ಗಾಬರಿಗೊಳ್ಳದೆ ಬಂದಂತೆ ಸ್ವೀಕರಿಸುತ್ತಾಳೆ. ಆದರೆ ಅಧಿಕಾರ ಅಹಂಕಾರಗಳಲ್ಲಿ ದರ್ಪದಿಂದ ಮೆರೆದ ಮುದುಕ ಮುಂದೊದಗಬಹುದಾದ ಸ್ಥಿತಿಯನ್ನು ನೆನೆದು ತಲ್ಲಣಗೊಳ್ಳುತ್ತಾನೆ.

ಬಹುಪತ್ನಿತ್ವ :

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಗಂಡು ನಾನಾ ಕಾರಣಗಳಿಂದ ಇಂದಿಗೂ ಬಹುಪತ್ನಿತ್ವವನ್ನು ರೂಢಿಯಲ್ಲಿರಿಸಿಕೊಂಡಿದ್ದಾನೆ. ಮಕ್ಕಳಿಲ್ಲವೆಂದೋ, ರಸಿಕನೆಂದೋ, ಲೋಲುಪತೆಗೆಂದೋ ಬಹುಪತ್ನಿತ್ವ ಜಾರಿಯಲ್ಲಿದೆ. 'ಇಬ್ಬರು ಹೆಂಡಿರಿರುವವನ ಸಂಸಾರ ಕೆಡದು' ಎಂಬ ಹೇಳಿಕೆ ಗಂಡಿನ ಸಂಸಾರದ ನಿರಂತರತೆಗೆ ಬೆಂಬಲ ನೀಡುತ್ತದೆ. ಮಹಿಳೆಯ ಬದುಕು ಏನಾದರೂ ಅದು ಮುಖ್ಯವಲ್ಲ. ಗಂಡಿನ ಬದುಕು ಸರಿಯಾಗಿರಬೇಕು, ಅವನ ವಂಶ ಬೆಳೆಯಬೇಕು ಎಂಬುದು ಮುಖ್ಯವಾಗುತ್ತದೆ. ವಂಶವು ಗಂಡುಮಕ್ಕಳಿಂದ ಬೆಳೆಯಬೇಕಾದುದರಿಂದ ಅದಕ್ಕಾಗಿ ಬಹುವಿವಾಹವಾಗುವ ಪರಿಪಾಠ ಬೆಳೆದುಬಂದಿದೆ.

ಶಿವಕುಮಾರ ನಾಗವಾರರ 'ಬಾಬಡಿ' ಕಥೆ ಬಹುಪತ್ನಿತ್ವವು ಮಹಿಳಾ ಬದುಕಿನ ಮೇಲೆ ಉಂಟುಮಾಡುವ ಪರಿಣಾಮವನ್ನು ಕಟ್ಟಿಕೊಡುತ್ತದೆ. ಗಂಡು ಸಂತಾನವಿಲ್ಲವೆಂದು ಸನಮುಕಯ್ಯ ಬಾಬಮ್ಮನೊಂದಿಗೆ ಎರಡನೆ ವಿವಾಹವಾಗುತ್ತಾನೆ. ವಿವಾಹ ಸಂದರ್ಭದಲ್ಲಿಯೆ ಬಾಬಮ್ಮನ ತಂದೆಯೊಂದಿಗಾದ ಮನಸ್ತಾಪದಿಂದ ಸನಮುಕಯ್ಯ ಬಾಬಮ್ಮನೊಂದಿಗೆ ದಾಂಪತ್ಯ ಸಂಬಂಧವನ್ನೇ ಬೆಳೆಸುವುದಿಲ್ಲ. ಬಾಬಮ್ಮ ಗಂಡನನ್ನೊಲಿಸಿಕೊಳ್ಳಲು ಏನೆಲ್ಲ ಪ್ರಯತ್ನಮಾಡಿ ವಿಫಲಳಾಗುತ್ತಾಳೆ. ಸನ್ಮುಕಯ್ಯ ತಾನಿಟ್ಟುಕೊಂಡ ಬಸಲಿಂಗಮ್ಮನಿಗಾಗಿ ಬಾಬಮ್ಮನನ್ನು ತವರಿಗಟ್ಟುತ್ತಾನೆ.

ಸನ್ಮುಕಯ್ಯನನ್ನೊಲಿಸಿಕೊಳ್ಳಲು ಸವತಿಯರಿಬ್ಬರೂ ಶತ್ರುಗಳಂತೆ ಕಾದುತ್ತಾರೆ. ಮಂತ್ರ ತಂತ್ರದ ಮೊರೆ ಹೋಗುತ್ತಾರೆ. ಒಬ್ಬರ ನಾಶವನ್ನೊಬ್ಬರು ಬಯಸುತ್ತ ಜೀವನವನ್ನೇ ರಣರಂಗವಾಗಿಸುತ್ತಾರೆ. ನಿಂಬೆವ್ವನ ತಾಯಿ ನೀಲವ್ವ ಇವರೀರ್ವರಲ್ಲಿ ತರಬಯಸಿದ ಹೊಂದಾಣಿಕೆ ಸಾಧ್ಯವಾಗದೆ ಹೋಗುತ್ತದೆ. ಮಾವ ಅಳಿಯನ ಮೇಲಾಟದಲ್ಲಿ ಬಾಬಮ್ಮನ ಬದುಕು ವ್ಯರ್ಥಹೋಗುತ್ತದೆ.

ಪುರುಷಾಭಿಮಾನಕ್ಕೆ ಧಕ್ಕೆಯಾದದ್ದಕ್ಕೆ ಮಹಿಳೆಯ ಇಡೀ ಬದುಕನ್ನು ಬಲಿಯಾಗಿಸುವ ಪರಿಯನ್ನು ಕಥೆ ಪ್ರತಿನಿಧಿಸುತ್ತದೆ. ಸಾಯುವ ಕೊನೆಗಳಿಗೆಯಲ್ಲಿ ಮಾತನಾಡಿಸಲು ಬಂದ ಸನ್ಮುಕಯ್ಯ ಬಾಬಮ್ಮನ ಯೋಗಕ್ಷೇಮ ವಿಚಾರಿಸಿದಾಗ, ಅವನ ಕಣ್ಣಲ್ಲಿ ಪ್ರೀತಿಯನ್ನರಸುವ ಬಾಬಮ್ಮ ಒಂದೂ ಮಾತನಾಡದೆ, ಸಂತೃಪ್ತಳಂತೆ ಕಣ್ಣುಮುಚ್ಚಿ ಅವನು ತನ್ನನ್ನು ಮಾತಾಡಿಸಿದ್ದೆ ಮಹಾಭಾಗ್ಯ ಎಂಬಂತೆ ತೋರಿಸಿಕೊಳ್ಳುವುದು ಅವಳ ಪ್ರೀತಿಯ ಹಸಿವನ್ನು ಕಾಣಿಸುತ್ತದೆ. ಸನ್ಮುಕಯ್ಯನ ಲೋಲುಪತೆಗೆ ಬಾಬಮ್ಮನ ಬದುಕು ಬಲಿಯಾಗುತ್ತದೆ. ಹೊಳೆಯ ಪಕ್ಕದಲ್ಲಿದ್ದು ನೀರಡಿಸಿ ಬಳಲಿದ ಸ್ಥಿತಿ ಬಾಬಮ್ಮದಾಗುತ್ತದೆ. ವಿವಾಹವಾಗಿಯೂ ವೈವಾಹಿಕ ಜೀವನದ ಅನುಭವದಿಂದ ವಂಚಿತಳಾಗುತ್ತಾಳೆ. ಮಕ್ಕಳಿಲ್ಲದ ಬಾಬಮ್ಮ ಮರುಗಬಾರದು. ಅವಳ ನೋವು ತನ್ನ ಮಗಳ ಬದುಕನ್ನು ತಟ್ಟಬಾರದು ಎಂದು ಯೋಚಿಸಿದ ನಿಂಬವ್ವ ಹೆತ್ತ ಗಂಡು ಮಗುವನ್ನು ಬಾಬಮ್ಮಳಿಗೆ ಕೊಟ್ಟು ಅವರಿಬ್ಬರಲ್ಲಿ ಪ್ರೀತಿ ಮೂಡಿಸಲು ಯತ್ನಿಸುತ್ತಾಳೆ. ಆದರೆ ಗಂಡು ಮಗುವಿಗಾಗಿಯೆ ತನ್ನನ್ನು ಮದುವೆಯಾಗಿರುವುದರಿಂದ ತಾನೆ ಹೆತ್ತು ಕೊಡಬೇಕೆಂಬ ಹಟದಲ್ಲಿ ಇದನ್ನು ನೀಲವ್ವ ತಿರಸ್ಕರಿಸುತ್ತಾಳೆ.

ಇಂದಿಗೂ ಹಳ್ಳಿಗಳಲ್ಲಿ ಸವತಿಯರಲ್ಲಿ ಒಬ್ಬಳಿಗೆ ಮಕ್ಕಳಿಲ್ಲದಿದ್ದರೆ ಇನ್ನೊಬ್ಬಳು ತನ್ನೊಂದು ಮಗುವನ್ನು ಕೊಡುವುದರ ಮೂಲಕ ಅವಳ ಕೊರತೆಯನ್ನು ನೀಗಿಸಲು, ಅಥವಾ ಸವತಿ ಪಾಲು ಅವಳೊಂದಿಗೇ ಹೋಗದೆ ಆ ಮಗುವಿನ ನೆವದಲ್ಲಿ ಅಲ್ಲಿಯೆ ಉಳಿಯುವಂತೆ ಮಾಡುವ ಆಲೋಚನೆಯೂ ಆಗುತ್ತದೆ.

ಪುತ್ರ ಪ್ರಾಪ್ತಿಗಾಗಿ ಮರುವಿವಾಹ :

ಬಿ.ಟಿ. ಲಲಿತಾ ನಾಯಕರ 'ಮರುಮದುವೆ' ಕಥೆ ಗಂಡು ಸಂತಾನಕ್ಕಾಗಿ ರಾಮಣ್ಣ ಮದುವೆ ಯಾಗಲು ನಿರ್ಧರಿಸಿದಾಗಿನ ಗೌರಿಯ ಅನಾಥ ಪ್ರಜ್ಞೆಯನ್ನು ಸ್ಥಾಯಿಯಾಗುಳ್ಳದ್ದು.

ಮದುವೆಯಾದ ಮೂರು ವರ್ಷಕ್ಕೆ ಹೆಣ್ಣುಮಗುವೊಂದನ್ನು ಹೆತ್ತ ಗೌರಿ ಪುನಃ ಗರ್ಭಿಣಿಯಾಗದೆ ಗಂಡು ಸಂತಾನದ ಆಸೆ ಈಡೇರದ ಗೌರಿಯ ಅತ್ತೆ–ಮಾವ ಮಗನಿಗೆ ಮರುಮದುವೆಯಾಗಲು ಸೂಚಿಸುತ್ತಾರೆ. ಇದಕ್ಕಾಗಿಯೆ ಕಾಯುತ್ತಿದಂತೆ ರಾಮಣ್ಣ ಬೆಳವಳ್ಳಿಯ ಚನ್ನವ್ವನೊಂದಿಗೆ ವಿವಾಹ ನಿಶ್ಚಯಿಸಿಕೊಂಡು ಬರುತ್ತಾನೆ. ಗೌರಿ ಮುಂದೆ ತಾನು ಎದುರಿಸಬೇಕಾದ ಸ್ಥಿತಿಗೆ ಚಿಂತಿತಳಾಗಿ ದುಃಖಿಸುವುದನ್ನು ಕಂಡು ಅತ್ತೆ–ಮಾವಂದಿರು ಅವಳಿಗೆ 'ಗಂಡ ಶುಭಕಾರ್ಯಕ್ಕೆ ಕೈ ಹಚ್ಚಿದಾಗ ಹೆಂಡ್ತಿಯಾದವಳು ಹಿಂಗ್ ಕಣ್ಣೀರು ಹಾಕೋದಾ? ಶಿವ ನಿನಗೊಬ್ಬ ಮಗನ್ನ ಕೊಟ್ಟಿದ್ರೆ ಅವನ್ಯಾಕೆ ಮತ್ತೊಂದು ಹೆಣ್ಣಿಗೆ ತಾಳಿ ಕಟ್ಟಿದ್ದ? ದೊಡ್ಡ ಮನಸ್ಸು ಮಾಡು ನೀನ್ ಬ್ಯಾರೆ ಅಲ್ಲ, ನಿನಗೆ ತಂಗಿಯಾಗಿ ಬರೋಳು ಬ್ಯಾರೆ ಅಲ್ಲ. ಯಾರ ಹೊಟ್ಟೆಯಾಗ್ ಮಗ ಹುಟ್ಟಿದ್ರು ಅವನೇನು ಅವ್ವನ ಹೆಸರು ಹೇಳ್ಕೊಂಡ್ ತಿರುಗಾಡೋದಿಲ್ಲ. ಹೌದಿಲ್ಲೋ? ಏಟೋತ್ತಾಗ್ಲಿ ಅಪ್ಪ ಅಜ್ಜನ

ಹೆಸರ ಮ್ಯಾಲೆ ದೀಪ ಹಚ್ಚಬೇಕು. ಇದೆಲ್ಲಾ ನಿನಗ್ ತಿಳಿದ ವಿಚಾರವೆ ಐತಿ. ನಾವು ಹೆಚ್ಚು ಹೇಳಕಲ್ಲ. ನೀನೆ ಮುಂದ್ ನಿಂತು ನಿನ್ನ ಗಂಡನಿಗ ಲಗ್ನಮಾಡ್ಸಿ ಮಂತಾನ ಮುಂದುವರೀಲಿ ಅಂತ ದೇವರಿಗೆ ಬೇಡ್ಕೋಬೇಕು – ಎಂದು ಬುದ್ಧಿ ಹೇಳುತ್ತಾರೆ.

ಹೆಣ್ಣು ತನ್ನ ಸಮಾಧಿಯನ್ನು ತಾನು ತೋಡಿಕೊಳ್ಳಬೇಕೆಂಬಂತೆ ಪಿತೃಸಂಸ್ಕೃತಿಯ ನಿಯಮಗಳಿವೆ. ಒಂಭತ್ತು ತಿಂಗಳು ಹೊತ್ತು ಹೆರುವ ಹೆಣ್ಣಿನ ಹೆಸರು ಯಾವುದೇ ಸಂದರ್ಭದಲ್ಲಿ ಮಗುವಿನೊಂದಿಗೆ ಸೇರುವುದಿಲ್ಲ. ಅವಳೊಂದು ಹೆರುವ ಯಂತ್ರ, ಹೆತ್ತ ನಂತರ ಅವಳ ಕೆಲಸ ಮುಗಿಯಿತು. ತನಗೆ ಮಕ್ಕಳಾಗದಿದ್ದರೆ ತಾನೇ ನಿಂತು ಗಂಡನಿಗೆ ಎರಡನೆ ಮದುವೆ. ಮಾಡುವ ಔದಾರ್ಯ ದೊಡ್ಡಗುಣ ಹೆಣ್ಣಿನಲ್ಲಿರಬೇಕು. ತನ್ನ ಸ್ಥಾನಮಾನ ಏನಾದರಾಗಲಿ, ಸದಾ ಗಂಡನ ಶ್ರೇಯಸ್ಸನ್ನು ಬಯಸಬೇಕು ಎಂಬಂತೆಯೆ ಹೆಣ್ಣಿನ ಸಾಮಾಜೀಕರಣವಾಗಿರುತ್ತದೆ. ಪಿತೃ ಸಂಸ್ಕೃತಿಯಲ್ಲಿ ಮನೆತನ ವಂಶ ಮುಂದುವರಿಕೆ ಹೆಣ್ಣಿನಿಂದಾಗದು. ಅದಕ್ಕೆ ಗಂಡು ಸಂತಾನ ಬೇಕೇ ಬೇಕು. ಗಂಡು ಹೆರದವಳು ವ್ಯವಸ್ಥೆಯ ದೃಷ್ಟಿಯಲ್ಲಿ ಬಂಜೆಯೆ.

ಹೆಣ್ಣು ಅನುಭವಿಸಬೇಕಾದ ದಯನೀಯ ಸ್ಥಿತಿಯನ್ನು ನೆನೆದು ಗೌರಿ ತಾನು ಹೆಣ್ಣಾಗುವುದಕ್ಕಿಂತ ಹಸುವೋ ಕರುವೋ ಆಗಬಾರದಿತ್ತೆ ಎಂದುಕೊಳ್ಳುತ್ತಾಳೆ. ಮರುಕ್ಷಣ ಆಗಲೂ ತನ್ನನ್ನು ಗೊಡ್ಡುದನ ಎಂದು ಗೋಳಾಡಿಸುತ್ತಿದ್ದರೇನೊ. ಯಾವ ಜನ್ಮದಾಗ್ ಹುಟ್ಟಿದ್ರೂ ಹೆಣ್ಣು ಜಾತಿಗೆ ಸುಖವಿಲ್ಲ[೨೩] ವೆಂದು ಭಾವಿಸುತ್ತಾಳೆ.

ರಾಮಣ್ಣ ಮರುಮದುವೆಯ ಸಂಭ್ರಮದಲ್ಲಿ ಬೀಗುತ್ತಿರುವಾಗಲೆ, ಅದು ಸೋರಿ ಹೋಗುವಂತೆ ಲಲಿತಾ ನಾಯಕರು, ಚನ್ನವ್ವ ಓಡಿ ಹೋಗುವಂತೆ ಮಾಡಿ ಮದುವೆ ನಿಲ್ಲಿಸುವಲ್ಲಿ ಕಥೆಯ ಅಂತ್ಯಕ್ಕೆ ಹೊಸ ತಿರುವು ಕೊಡುತ್ತಾರೆ. ಗೌರಿಗೆ ಬೀಳಬೇಕಾದ ಪೆಟ್ಟು ರಾಮಣ್ಣನಿಗೆ ಬೀಳುತ್ತದೆ. ಲಲಿತಾ ನಾಯಕರ ಸ್ತ್ರೀ ಸಂವೇದನೆ ಇಲ್ಲಿ ಕೆಲಸಮಾಡಿದೆ.

ಗಂಡಿನ ಸ್ವಾರ್ಥಕ್ಕೆ ಬಲಿ :

ಗಂಡು ದುಡಿದು ಗಳಿಸಲಿ ಅಥವಾ ಗಳಿಸದಿರಲಿ ಪಿತ್ರಾರ್ಜಿತ ಸಂಪತ್ತು ಅನಾಯಾಸ ಅವನ ಕೈಸೇರುವುದರಿಂದ ನಾನಾ ರೀತಿಯ ಚಟಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ. ಚಟಗಳಿಲ್ಲದ ಪುರುಷರು ವಿರಳ ಚಟಗಳು ಪುರುಷ ಲಕ್ಷಣಗಳಾಗಿ ವ್ಯಾಖ್ಯಾನಿಸಲ್ಪಡುತ್ತವೆ. ಆರ್ಥಿಕ ಸ್ಥಿತಿ ಅಷ್ಟಕಷ್ಟೇ ಇರುವಾಗ ಚಟಗಳನ್ನು ಬೆಳೆಸಿಕೊಳ್ಳಲು ಹಿಂಜರಿಯುವ ಗಂಡಸರು ಆರ್ಥಿಕ ಸ್ಥಿತಿ ಸುಧಾರಿಸುತ್ತಿದ್ದಂತೆ ಚಟಗಳ ದಾಸರಾಗುವುದು ಸಾಮಾನ್ಯ. ಮೇಲ್ವರ್ಗ ಹಾಗೂ ಕೆಳವರ್ಗಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ. ಮಧ್ಯಮ ವರ್ಗದಲ್ಲಿ ಮರ್ಯಾದೆಗೆ ಹೆಚ್ಚು ಮಹತ್ವವಿದ್ದು ಚಟಗಳನ್ನು ಮರ್ಯಾದೆ ಮೀರಿದ ವರ್ತನೆಗಳಾಗಿ ಭಾವಿಸಲಾಗುತ್ತದೆ. ಇಂಥಹ ಮಧ್ಯಮ ವರ್ಗದ ಪುರುಷ ದುಶ್ಚಟಗಳಿಗೆ ಬಲಿಯಾಗಿ ಹೆಂಡತಿ ಮಕ್ಕಳನ್ನು ನಿರ್ಲಕ್ಷಿಸಿ ಅಸಭ್ಯವಾಗಿ ವರ್ತಿಸತೊಡಗಿದಾಗ ಅವನ ಹೆಂಡತಿ ಮಕ್ಕಳ ಬದುಕು ದುರಂತವೆ.

ಬಿ.ಟಿ. ಲಲಿತಾನಾಯಕರ 'ಉಣ್ಣಲುಂಟು ಉಡುಲುಂಟು' ಕಥೆ ಪುರುಷ ಲೋಲುಪತೆಗೆ ಸುಗುಣಾ ಹಾಗೂ ಅವಳ ಮೂರು ಮಕ್ಕಳು ಬಲಿಯಾಗುವ ವಿಷಯ ವಸ್ತುವನ್ನೊಳಗೊಂಡದ್ದು.

ಅಕೌಂಟೆಂಟ್ ಆಗಿದ್ದಾಗ ಯಾವ ಹುಚ್ಚು ಹವ್ಯಾಸಗಳಿಲ್ಲದೆ ಚನ್ನಾಗಿ ಸಂಸಾರ ಮಾಡಿಕೊಂಡಿದ್ದ ಚಂದ್ರಯ್ಯ, ಪ್ರಮೋಷನ್ನಾಗಿ ಗಿಂಬಳಗಿಟ್ಟ ತೊಡಗಿದಾಗ ಸೇದುವ, ಕುಡಿಯುವ ಮತ್ತು ವೇಶ್ಯಾಸಂಗದಂಥ ಚಟಗಳನ್ನು ಕಲಿತು ಹೆಂಡತಿಗೆ ಸುಳ್ಳು ಹೇಳುತ್ತ ವಂಚಿಸುತ್ತಾನೆ. ದುಶ್ಚಟಗಳಿಗೆ ದಾಸನಾಗುವುದೆ ಗಂಡಸುತನದ ಲಕ್ಷಣವೆಂದು ಭಾವಿಸುತ್ತಾನೆ. ಹೆಂಡತಿ ಏನನ್ನಾದರೂ ಕೇಳಿದರೆ ನಿನಗೇನು ಕಡಿಮೆ ಇದೆ. ಹೊಟ್ಟೆಗೆ ಬಟ್ಟೆಗೆ ಎಂದು ಪ್ರಶ್ನಿಸುತ್ತಾನೆ. ಹೆಂಡತಿ ಮಕ್ಕಳ ತುಂಬ ಸಂಸಾರವಿದ್ದೂ ದುಶ್ಚಟಗಳನ್ನು ಆಶ್ರಯಿಸುವ ಪುರುಷ ಹೆಂಡತಿಗೆ ಹೊಟ್ಟೆ ಬಟ್ಟೆಗಿದ್ದರಾಯ್ತು. ಬೇರೆನೂ ಬೇಕಿಲ್ಲವೆಂದು ಭಾವಿಸುತ್ತಾನೆ. ಅವನು ತನ್ನಿಂದ ಅವಳಿಗೆ ಮತ್ತೇನು ಬೇಕು ಎಂದು ಪ್ರಶ್ನಿಸಿದಾಗ ಸುಗುಣಾ 'ನಿಮ್ಮಿಂದ ನಮಗೆಲ್ಲಾ ಬೇಕಾಗಿರೋದು ಸಭ್ಯ ನಡವಳಿಕೆ' ಎಂದು ಹೇಳಿದಾಗಲೂ ಸುಧಾರಿಸಿಕೊಳ್ಳದ ಚಂದ್ರಯ್ಯ ತನ್ನ ದಾರಿಯಲ್ಲೇ ಮುಂದುವರಿದಾಗ ಸುಗುಣಾ ತನ್ನ ಮೂರು ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಗಂಡನನ್ನು ತಿದ್ದಲಾಗದ ಸಂದರ್ಭದಲ್ಲಿ ಆತ್ಮಹತ್ಯೆ ಪರಿಹಾರವಲ್ಲವಾದರೂ ತವರ ಆಸರೆ ಇಲ್ಲದ, ಹೆಚ್ಚಿನ ಓದು ಗೊತ್ತಿಲ್ಲದ, ಮರ್ಯಾದೆಗಾಗಿ ಬದುಕುವ ಮಧ್ಯಮ ವರ್ಗದ ಮಹಿಳೆ ಹೀನ ಬದುಕಿಗಿಂತ ಸಾವು ಶ್ರೇಷ್ಠವೆಂದೇ ಭಾವಿಸುತ್ತಾಳೆ.

ಪಾಲಕರ ಸ್ವಾರ್ಥ :

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿಗೆ ಗಂಡನ ಮನೆ ಮಾತ್ರ ಶೋಷಣೆಯ ನೆಲೆಯಂದೇನು ಅಲ್ಲ. ಮಗಳ ದುಡಿಮೆಯನ್ನು ನೆಚ್ಚಿದ ತವರುಮನೆಯು ಶೋಷಣೆಯ ತಾಣವಾಗುತ್ತದೆ. ದುಡಿಯದ ದುಶ್ಚಟದ ತಂದೆ, ಮಗಳು ದುಡಿದು ಸಂಪಾದಿಸಿ ಮನೆ ಖರ್ಚು ನಡೆಸುವಂತಾದರೆ ಅವಳ ಸಂಬಳ ಕೈತಪ್ಪುತ್ತದೆಂದು ಮದುವೆಯ ಯೋಚನೆಯನ್ನೇ ಮಾಡುವುದಿಲ್ಲ. ಮಗಳು ತಾನಾಗಿಯೇ ಮದುವೆಯ ವಿಷಯ ಪ್ರಸ್ತಾಪವೆತ್ತಿದಾಗಲೂ ಅದನ್ನು ತನ್ನ ಅನುಕೂಲದಂತೆ ನೆರವೇರಿಸಲು ಬಯಸುತ್ತಾನೆ. ಇಂತಹ ಸಂದರ್ಭಗಳಲ್ಲಿ ಮಗಳ ಭಾವನೆಗೆ ಬೆಲೆಯಿಲ್ಲವಾಗಿ ಅವಳ ಬದುಕು ದುರಂತವಾಗುತ್ತದೆ.

ರಾಜಶೇಖರ ಹತಗುಂದಿಯವರ 'ರತ್ನಾ ಎಂಬ ಹುಡುಗಿಯ ಸಾವು' ಕಥೆ ಕುಟುಂಬವೆ, ಶೋಷಣಾ ನೆಲೆಯಾಗುವ ವಸ್ತುವನ್ನು ಒಳಗೊಂಡದ್ದು. ರತ್ನಾ ಪದವೀಧರೆ. ತನ್ನ ಸುಸಂಸ್ಕೃತ ನಡೆ ನುಡಿಯಿಂದ ಮುತ್ತುರಾಜನ ಪ್ರೇಮಕ್ಕೆ ಕಾರಣಳಾದವಳು. ಹಿರಿಯರನ್ನು ಒಪ್ಪಿಸಿ ಸಮ್ಮತಿಸುವ ಭರವಸೆ ನೀಡುತ್ತಾಳೆ. ಆದರೆ ಅವಳು ಮನೆಬಿಟ್ಟು ಹೋದರೆ ತಮ್ಮ ಸಂಸಾರಕ್ಕೆ ದುಡಿಯುವವರಿಲ್ಲದಂತಾಗುತ್ತದೆ. ಎಂದು ಯೋಚಿಸುವ ಕೋಟಿಲಿಂಗನ ಗೌಡ ಯಾವತ್ತೂ ದುಡಿದವನಲ್ಲ. 'ಗುರಮ್ಮ ಗೌಡ್ತಿ ದುಡಿದು ತಂದರೆ ಅರ್ಧಾ ಹಿಸ್ಸಾಕ್ಕಾಗಿ ಕಚ್ಚಾಡಿದಾಂವ ಹೆಂಡ್ತಿ ಮ್ಯಾಲ. ಸಂಶ್ಯಾಮಾಡದಾಂವ. ಮುಂದ ಮಗಳ ಗಳಕ್ಯಾಗ ತಿಂದು ಮಜಾ ಮಾಡಬೇಕೆಂದು ಸಾವಿರ ಸಾವಿರ ಕನಸು ಕಟ್ಟಿದಾಂವ. ಅವ್ನ ಕನಸಿಗೆಲ್ಲಾ ಬೆಂಕಿ ಹಚ್ಚಿ ರತ್ನಾ ಒಂದಿನಾ ಗಟ್ಯಾಗಿ' ಯಪ್ಪಾ ಬೆಳಕೂರಿನ ಮುತ್ತುರಾಜ, ಬಾಳ ಒಳ್ಳೆಯವರು ಅದಾರ. ಮದವಿ ಆದ ಮ್ಯಾಲೂ ನನ್ನ ಪಗಾರ ಮುಟ್ಟಾದಿಲ್ಲಂತ ಪ್ರಮಾಣ ಮಾಡ್ಯಾರ. ಬಸೂಗ ಓದ್ಸಿ, ಶಿವೂಗ ಒಳ್ಳೆ ಕಡೆ ಗಂಡು ಹುಡುಕಿ ಮದುವಿನೂ ಮಾಡಿಸ್ತೀನಿ. ಪ್ರತಿ ತಿಂಗಳ ನಿಮಗ ಇಂತಿಷ್ಟು ಅಂತ ಕೊಡ್ತೀನಿ' ಎಂದು ನೂರಾಸೆ ಹೊತ್ತು ಹೇಳಿದ್ದೇ ಅಪರಾಧ. ಎಂಬಂತೆ ಕೋಟಲಿಂಗನಗೌಡ ಈ ಮದುವೆಯನ್ನು ವಿರೋಧಿಸುತ್ತಾನೆ. ಮಗಳಿಗೆ ಓದಲು ಅವಕಾಶ ನೀಡಿದ್ದೇ ಅವಳಿಗೆ ಮಾಡಿದ ಮಹದುಪಕಾರವೆಂಬಂತೆ ಅವಳ ಮೇಲೆ ನಿಯಂತ್ರಣ

ಹೇರುತ್ತಾನೆ. ಅವಳು ಮದುವೆಯಾಗಲೇ ಬೇಕೆಂದರೆ ಖತಾಲಪ್ಪಗೌಡರ ಹೆಣ್ತಿಗಿ ಟಿ.ಬಿ. ಅದ ಅಂತ. ಅವರು ಇನ್ನೊಂದು ಮದವಿ ಆಗಬೇಕಂತ ಅದ್ಕೊಂಡಾರ. ನೀನೇ ಯಾಕ ಒಪ್ಕೋಬಾರದು. ಸಾಕಷ್ಟು ಆಸ್ತಿಪಾಸ್ತಿ ಅದ. ಅವರಿಗೇನು ಬಾಳ ವಯಸ್ಸಾಗೇದ? ಭಾಳಂದ್ರ ನಲವತ್ತೈದು ಇದ್ದಿರಬೇಕು. ನೀ ಹೂ ಅಂದ್ರ ಬಸ್ಯಾನ ಓದಾದನೂ ಆಗ್ತಾದ. ಶಿವಿ ಮದಿನೂ ಆಗ್ತದ. ಒಟ್ಟಿನ ಮ್ಯಾಲ ನಮ್ಮ ಬಾಳ್ವೆಚಲೋ ಆಗ್ತದ ಎಂದಿದ್ದ.[25]

ಹೀಗೆ ಮದುವೆ ಹೆಣ್ಣಿನ ಬದುಕಿನಲ್ಲಿ ಅನಿವಾರ್ಯವಾದರೂ ಅದು ಅವಳ ಮನಸ್ಸಿನಂತೆ ನೆರವೇರುವುದಿಲ್ಲ. ಅದಕ್ಕೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನೂರಾರು ನಿರ್ಬಂಧಗಳು. ಹೆಣ್ಣಿಗೆ ಸೌಂದರ್ಯ ವಯಸ್ಸು ಸದ್ಗುಣಗಳೆಲ್ಲ ಇರಲೇ ಬೇಕೆಂದು ಬಯಸುವ ವ್ಯವಸ್ಥೆ ಪುರುಷನಿಗೆ ಅದಾವುದೂ ಬೇಕಿಲ್ಲವೆಂದು ಭಾವಿಸುವುದೆ ವ್ಯವಸ್ಥೆಯ ವ್ಯಂಗ್ಯವಾಗಿದೆ. ಮಗಳ ಬದುಕು ಹಾಳಾದರೂ ಚಿಂತೆಯಿಲ್ಲ. ತನ್ನ ಬದುಕು ಸುಧಾರಿಸಿದರೆ ಸಾಕೆಂದು ನಿರೀಕ್ಷಿಸುವ ತಂದೆ ತಾಯಿಗಳೂ ಇರುವಾಗ ಗಂಡನ ಮನೆಯೆ ಮಹಿಳೆಯ ನೋವಿನ ತಾಣವಾಗಬೇಕಿಲ್ಲವೆಂಬುದನ್ನು ಕಥೆ ಮನೋಜ್ಞವಾಗಿ ನಿರೂಪಿಸುತ್ತದೆ.

ತಂದೆಯ ಈ ಬಗೆಯ ವರ್ತನೆಗೆ ಖತಾಲಪ್ಪ ಗೌಡನ ನೌಕರಿಯಿಂದ ಕಿತ್ತು ಹಾಕುವ ಬೆದರಿಕೆಯೂ ಸೇರಿ ದಾರಿಕಾಣದೆ ರತ್ನಾ ಸಾವನ್ನು ಆಶ್ರಯಿಸುತ್ತಾಳೆ. ಅವಳ ಸಾವಿನ ನಿರ್ಧಾರ ದುಡುಕಾಗಿ ಕಂಡರೂ ತನ್ನ ಬದುಕೇ ಒಂದು ಬಳಕೆಯ ಸಾಧನವಾಗುವುದನ್ನು ಸಹಿಸದ ರತ್ನಾಳ ಸಂಪ್ರದಾಯಶೀಲ ಮನಸ್ಸು ಸಾವಿಗೆ ಶರಣಾಗುತ್ತದೆಂದಬುದನ್ನು ಕಥೆ ಚಿತ್ರಿಸುತ್ತದೆ. ರತ್ನಾ ಇಂಥ ಅನೇಕ ಹೆಂಗಸರ ಪ್ರತಿನಿಧಿಯಾಗಿ ಇಲ್ಲಿ ಮೂಡಿ ಬಂದಿದ್ದಾಳೆ.

ದ್ರೌಪದಿಯ ವೈವಾಹಿಕ ಬದುಕು :

ಮಹಾರಾಣಿಯಾದರೂ ಮಹಿಳೆಯ ಕುರಿತು ಪುರುಷ ದೃಷ್ಟಿಕೋನದಲ್ಲಿ ಯಾವುದೇ ಬದಲಾವಣೆ ಇಲ್ಲ. ರಾಣಿ ಹಾಗೂ ದಾಸಿಯರ ಸಾಮಾಜಿಕ, ಆರ್ಥಿಕ ಸೌಲಭ್ಯ ಸೌಕರ್ಯಗಳು ಭಿನ್ನವಾಗಿರಬಹುದೇ ಹೊರತು ಶೋಷಣೆ ತಪ್ಪಿದ್ದಲ್ಲ. ಹೆಂಡತಿ ತಾಯಿಯಾಗಿ ಅವಳ ಪಾತ್ರ ಸಾಮಾಜಿಕ ನಿರೀಕ್ಷೆಯದೆ. ಅಧೀನತೆ ಕಟ್ಟುಪಾಡುಗಳು ಸಾಮಾನ್ಯ ಅಂಶಗಳಾಗಿ ಮಹಿಳಾ ಬದುಕನ್ನು ಆವರಿಸುತ್ತವೆ. ಪತಿವ್ರತೆಯರೆಸಿಕೊಂಡ ಮಹಿಳೆಯರು ಪಿತೃ ಸಂಸ್ಕೃತಿಯ ನಿಯಮಗಳಲ್ಲಿ ಕುದ್ದವರೆ.

ಜಯದೇವಿ ಗಾಯಕವಾಡರ 'ಯಾಜ್ಞಸೇನಿಯ ಆತ್ಮಕಥನ' ಕಾದಂಬರಿಯಲ್ಲಿ ದ್ರೌಪದಿ ಎದುರಿಸಿದ ವಿವಾಹ ಕೇಂದ್ರಿತ ಸಮಸ್ಯೆ ಆತ್ಮಕಥನವಾಗಿ ನಿರೂಪಿತವಾಗಿದೆ.

ಬಾಲ್ಯದಿಂದಲೂ ಅರ್ಜುನನನ್ನೇ ಗಂಡನೆಂದು ನಂಬಿ ಬೆಳೆದ ದ್ರೌಪದಿ ಕುಂತಿಯ ಮಾತಿನಂತೆ ಐವರನ್ನು ವಿವಾಹವಾಗುತ್ತಾಳೆ. 'ನಾನು ನಿನ್ನನ್ನಲ್ಲದೆ ಬೇರೆಯವರನ್ನು ಮದುವೆಯಾಗಲಾರೆ ಅರ್ಜುನ' ಎಂದಾಗಲೂ ಐವರ ಹೆಂಡತಿಯಾಗುವ ದ್ರೌಪದಿ ತನ್ನ ಏಕಾಂತದ ಅವಧಿಯನ್ನು ಶರತ್ತಿನಲ್ಲಿ ಕೇಳಿ ಪಡೆದಿರುತ್ತಾಳೆ. ಅಂಥ ಒಂದು ಸಂದರ್ಭದಲ್ಲಿ ಅರ್ಜುನ ತನ್ನದಲ್ಲದ ಅವಧಿಯಲ್ಲಿ ಅವಳೊಂದಿಗಿರಲು ಬಯಸಿದ್ದೂ ಅಲ್ಲದೆ ಬಲಾತ್ಕರಿಸಲು ಪ್ರಯತ್ನಿಸುತ್ತಾನೆ. ದ್ರೌಪದಿಯನ್ನು ಭೋಗಿಸುವ ಸಂಪೂರ್ಣ ಅಧಿಕಾರ ಹಕ್ಕು ತನ್ನದೆಂದು ವಾದಿಸುತ್ತಾನೆ.

ಹೀಗೆ ಪುರುಷ ಹೆಣ್ಣಿನ ಮನಸ್ಥಿತಿಯನ್ನು ಗೌರವಿಸದೆ ತನ್ನಿಚ್ಛೆಗೆ ಮಾತ್ರ ಮಹತ್ವಪೀಯುವ ಪೃಥ ಸಾಮಾಜಿಕ ವ್ಯವಸ್ಥೆಯಲ್ಲಿ ಬೆಳೆದು ಬಂದಿದೆ. ಅದು ಮಹಿಳೆ ಪುರುಷನ ಭೋಗಕ್ಕಾಗಿ ಮಾತ್ರವೆಂದು ಪರಿಭಾವಿಸುತ್ತದೆ. ನಿಯಮಗಳ ಉಲ್ಲಂಘನೆಯೂ ಪುರುಷನಿಗೆ ಸಮರ್ಥನೀಯವಾಗುತ್ತದೆ. ಯುದ್ಧ ಮತ್ತು ಪ್ರೇಮದಲ್ಲಿ ಎಲ್ಲ ಸಲ್ಲುತ್ತದೆಂಬ ಮುಕ್ತತೆಯನ್ನು ಆಶ್ರಯಿಸಿ ಪುರುಷ ತನ್ನ ಲಂಪಟತನವನ್ನು ಮರೆಸುತ್ತಾನೆ.

'ಹೆಣ್ಣು ಭೋಗದ ವಸ್ತು, ಅದಕ್ಕೆ ಎಂದೂ ತೃಪ್ತಿ ಎಂಬುದೇ ಇಲ್ಲ. ತೃಪ್ತಿಯ ಅಭಾವದ ಪಿಂಡವೇ ಹೆಣ್ಣು'[೧೭] ಎಂದು ಹೇಳುತ್ತ ತನ್ನ ದೌರ್ಬಲ್ಯವನ್ನು ಅವಳದೆಂದು ವ್ಯಾಖ್ಯಾನಿಸುತ್ತಾನೆ. ಹೆಣ್ಣಿನ ಕುರಿತು ಇಂಥ ಹತ್ತು ಹಲವು ಮಿಥ್‌ಗಳನ್ನು ಸೃಷ್ಟಿಸಿ ಸಾಮಾನ್ಯೀಕರಿಸಲಾಗಿದೆ. ದೌರ್ಬಲ್ಯವೆಂಬುದು ಹೆಣ್ಣು-ಗಂಡು ಇಬ್ಬರಲ್ಲೂ ಇರಬಹುದಾದ ಗುಣವೇ. ಆದರೆ ಎಂದೋ ಯಾರೋ ಹೇಳಿದ ಹಳಸಲು ವಿಚಾರಗಳನ್ನೇ ಇಂದೂ ಸಮಾಜದಲ್ಲಿ ಸ್ಥಿರೀಕರಿಸುತ್ತ ಅವು ಸಾರ್ವಕಾಲಿಕ ಸತ್ಯಗಳೆಂಬಂತೆ ಬಿಂಬಿಸಲಾಗುತ್ತದೆ. ಕಾಲ ಬದಲಾದಂತೆ ಎಲ್ಲ ರಂಗಗಳಲ್ಲಿ ಏನೆಲ್ಲ ಬದಲಾವಣೆಗಳು ಬಂದಿವೆ. ಆದರೆ ಮಹಿಳೆಯ ಕುರಿತ ವಿಚಾರಗಳಲ್ಲಿ ಹೆಚ್ಚಿನ ಬದಲಾವಣೆ ಏನೂ ಬಂದಿಲ್ಲ. ಸನ್ಯಾಸಿಯಾಗುತ್ತೇನೆ ಎಂದು ಹೋದ ಅರ್ಜುನ ಉಲುಪಿ ಚಿದ್ರಾಂಗದೆ, ಸುಭದ್ರೆಯರನ್ನು ವರಿಸಿ ಬಂದಾಗ ಅವನೊಬ್ಬ ನಯವಂಚಕನೆಂದೂ ಉಳಿದ ನಾಲ್ವರಿಗಿಂತ ಕುಬ್ಜ ವ್ಯಕ್ತಿತ್ವದವನೆಂದು ದ್ರೌಪದಿ ಭಾವಿಸುವಲ್ಲಿ ಅವಳ ಪ್ರೇಮಕ್ಕೆ ಬಿದ್ದ ಆಘಾತ ಕಾರಣವಾಗುತ್ತದೆ.

ಜೂಜಿನಲ್ಲಿ ದ್ರೌಪದಿಯನ್ನು ಪಣಕ್ಕಿಟ್ಟು ಸೋತು, ಪುಷ್ಪವತಿಯಾಗಿದ್ದವಳನ್ನು ಒಂಟಿ ಬಟ್ಟೆಯಲ್ಲಿ ಎಳೆತಂದು ರಾಜ ಸಭೆಯಲ್ಲಿ ನಿಲ್ಲಿಸಿದಾಗ ಯುಧಿಷ್ಠರನಿಗೆ ನಿನ್ನನ್ನೇ ನೀನು ಸೋತ ಮೇಲೆ ನನ್ನನ್ನು ಪಣಕ್ಕೊಡ್ಡುವ ಹಕ್ಕು ನಿನಗೆಲ್ಲಿಯದು ಎಂದೂ, ದುರ್ಯೋಧನ ಅತ್ತಿಗೆ ಎಂಬ ಗೌರವ ತೋರಿಸದೆ ಎಳೆದು ಸಭೆಗೆ ತಂದು ನೀನು ನಮ್ಮ ದಾಸಿ ನಮ್ಮ ಜೊತೆ ಮಲಗು ಬಾ ಎಂದನ್ನಲ್ಲ ಹಾಗೆನ್ನುವ ಧರ್ಮದ ಹಕ್ಕು ಅವನಿಗೆ ಇದೆಯೆ?[೧೮] ಎಂದು ದ್ರೌಪದಿ ಪುರುಷ ಪ್ರಧಾನ ವ್ಯವಸ್ಥೆ ಹಾಗೂ ಧರ್ಮಗಳೆರಡಕ್ಕೂ ಒಟ್ಟಿಗೇ ಸವಾಲು ಹಾಕುತ್ತಾಳೆ. ಮಾತ್ರವಲ್ಲ ಇಲ್ಲಿಯ ದ್ರೌಪದಿ ತುಂಬಿದ ಸಭೆಯಲ್ಲಿ ಝಾಡಿಸಿ ದುಶ್ಯಾಸನನ ಮರ್ಮಾಂಗಕ್ಕೆ ಒದೆಯುವ ಮೂಲಕ ಒಂದು ಕ್ಷಣ ನಿಸ್ಸತ್ವನನ್ನಾಗಿಸುತ್ತಾಳೆ. 'ಹೆಣ್ಣು ಅಬಲೆ ಎಂದು ತಿಳಿಯಬೇಡಿ.'[೧೯] ಎಂದು ಎಚ್ಚರಿಸುತ್ತಾಳೆ. ಜಯದೇವಿಯವರ ಪುನರ್‌ಸೃಷ್ಟಿಯಲ್ಲಿ ದ್ರೌಪದಿ ಸ್ವಂತಿಕೆ-ಸ್ವಾಭಿಮಾನಗಳ ಸಶಕ್ತ ಪಾತ್ರವಾಗಿ ರೂಪಗೊಂಡಿದ್ದಾಳೆ. ತನ್ನ ಮೇಲೆರಗಿದ ಸಂಕಷ್ಟಗಳನ್ನು ನಿವಾರಿಸಿಕೊಳ್ಳಲು ತಾನೇ ಯತ್ನಿಸಬೇಕು ಎಂಬುದು ಇಲ್ಲಿಯ ಸಂದೇಶ. ಹೆಣ್ಣಿನ ಬಾಲ್ಯ ಯವ್ವನ ಮುಪ್ಪುಗಳಲ್ಲಿ ಒಬ್ಬೊಬ್ಬ ಪುರುಷನ ಕಾವಲನ್ನೇ ವಿಧಿಸಿಯೂ ಅವಳ ಮೇಲೆ ಅತ್ಯಾಚಾರಗಳು ನಡೆಯುತ್ತಲೇ ಬಂದಿವೆ. ಎಂದಾಗ ಪುರುಷ ರಕ್ಷಣೆಯ ಭರವಸೆ ಎಲ್ಲಿಯದು. ಸ್ವಯಂ ರಕ್ಷಣೆಗೆ ಹೆಣ್ಣು ಸಿದ್ಧಳಾಗಬೇಕಾದ ಅನಿವಾರ್ಯತೆಯನ್ನು ಕಾದಂಬರಿ ಮನಗಾಣಿಸುತ್ತದೆ.

ತನ್ನ ಐದು ಮಕ್ಕಳನ್ನು ಅಶ್ವತ್ಥಾಮ ಕೊಂದಾಗ ಸಂತಾಪಗೊಳ್ಳದ ಗಂಡಂದಿರ ವರ್ತನೆ ದ್ರೌಪದಿಯಲ್ಲಿ ತಿರಸ್ಕಾರ ಮೂಡಿಸುತ್ತದೆ. ಕುಂತಿಯನ್ನು ಕುರಿತು 'ಅತ್ತೆ, ನಾನು ಈ ನಿನ್ನ ಮಕ್ಕಳನ್ನ ಕಟ್ಟಿಕೊಂಡು ಹಾಳಾದೆ. ಐವರನ್ನು ಬದುಕಿಸಲು ಹೋಗಿ ನಾನು ಎಲ್ಲವನ್ನು ಕಳೆದುಕೊಂಡೆ. ತಮ್ಮ ಬೀಜಗಳಿಂದ ಹುಟ್ಟಿದ ಮಕ್ಕಳ ಸಾವನ್ನು ಕಂಡೂ ಕೂಡ ಒಂದು ಹನಿ ಕಣ್ಣೀರು ಸುರಿಸದ ಈ ನಿನ್ನ ಮಕ್ಕಳು ಎಂಥ ಕಟುಕರು'[೨೦]

ಎನ್ನುವಲ್ಲಿ ಐವರ ಹೆಂಡತಿಯಾಗಿಯೂ ತಾನು ಯಾರವಳೂ ಅಲ್ಲದ, ತನ್ನ ಮಕ್ಕಳ ಸಾವಿಗೆ ಸ್ಪಂದಿಸದ ಗಂಡಂದಿರ ವರ್ತನೆಯಿಂದಾಗಿ ತಾನಿಲ್ಲಿ ಕೇವಲ ಬಳಕೆಗೊಂಡುದು ಆಕೆಗೆ ಸ್ಪಷ್ಟವಾಗುತ್ತದೆ. ಯುಧಿಷ್ಠಿರ ಮಕ್ಕಳ ಚಿತೆಗೆ ಅಗ್ನಿ ಸ್ಪರ್ಶ ಮಾಡಲು ಸಿದ್ಧನಾದಾಗ ಆ ಅಧಿಕಾರ ಅವನಿಗಿಲ್ಲವೆಂದು ಹೇಳಿ ತಾನೇ ಅಗ್ನಿ ಸ್ಪರ್ಶ ಮಾಡುವ ದ್ರೌಪದಿ ಪಿತೃ ಸಂಸ್ಕೃತಿಗೆ ಪ್ರತಿರೋಧವನ್ನೊಡ್ಡುತ್ತಾಳೆ.

ವಿವಾಹ ಕೇಂದ್ರಿತ ಸಮಸ್ಯೆಯಲ್ಲಿ ನೇರವಾಗಿ ವಿವಾಹವೇ ಒಂದು ಸಮಸ್ಯೆಯಾಗಿ ಕಾಡಿದರೆ, ವಿವಾಹ ಸಂಸ್ಥೆ ಪ್ರವೇಶಿಸಿದ ನಂತರ ದಾಂಪತ್ಯವೇ ಸಮಸ್ಯೆಯಾದದ್ದೂ ಇದೆ. ವಿವಾಹಾ ನಂತರ ಗಂಡಸರು ಹೆಂಡತಿಯನ್ನು ಅಲಕ್ಷಿಸಿ ಅನ್ಯ ಸಂಬಂಧಗಳಲ್ಲಿ ತೊಡಗಿದಾಗ ದುಡಿಯದೆ ಕುಡಿದು ಹಿಂಸಿಸಿದಾಗ, ಮರ್ಯಾದೆ ಮೀರಿ ನಡೆಯ ತೊಡಗಿದಾಗ, ಅಸಮ ವಯಸ್ಸಿನ ವಿವಾಹ, ಗಂಡು ಸಂತಾನಕ್ಕಾಗಿ ಗಂಡಸು ಮರು ಮದುವೆಗೆ ಸಿದ್ಧನಾದಾಗ, ವಿಷಮದಾಂಪತ್ಯ, ಅರಕ್ಷಿತ ಸ್ಥಿತಿ, ಹೆಂಡತಿಯನ್ನು ನಿಯಂತ್ರಣದಲ್ಲಿರಿಸಿಕೊಳ್ಳಲೇ ಬೇಕೆಂಬ ಗಂಡಸರ ಹಟ, ಬಹುಪತ್ನಿತ್ವ ಪಾಲಕರ ಸ್ವಾರ್ಥಗಳು ಮಹಿಳೆಯ ಬದುಕನ್ನು ಸಮಸ್ಯೆಯಾಗಿಸಿ ಸಂಕಷ್ಟಕ್ಕೆ ದೂಡುತ್ತವೆ. ಕೆಲವೊಮ್ಮೆ ಇದರಿಂದ ಹೊರಬರಲಾಗದೆ ಮಹಿಳೆ ಸಾವನ್ನು ಆಶ್ರಯಿಸಿದ ಸಂದರ್ಭಗಳೇರ್ಪಡುತ್ತವೆ. ವಿವಾಹ ಕುಟುಂಬಗಳೇ ಮಹಿಳೆಯ ಅಧೀನ ಸ್ಥಿತಿಗೆ ಕಾರಣವೆಂದು ಪರಿಭಾವಿಸುವ ಸ್ತ್ರೀವಾದಿಗಳ ನಿಲುವು ಸರಿಯಾದುದೆ ಎಂಬುದನ್ನು ಕಥನ ಸಾಹಿತ್ಯದ ಮಹಿಳಾ ಬದುಕು ಸಮರ್ಥಿಸುವಂತೆನಿಸುತ್ತದೆ.

೪.೩.೨ ಅಂತರ್ ಜಾತೀಯ ವಿವಾಹ- ಪ್ರೇಮ ವಿವಾಹ :

ಸಂಸ್ಕೃತಿಯು ಏಕ ಮುಖವಾಗಿ ವ್ಯಾಪಕವಾದ ಕಾರಣ ದೇಶದಲ್ಲೆಲ್ಲ ಹೆಚ್ಚು ಕಡಿಮೆ ಒಂದೇ ಬಗೆಯ ಮುಖ್ಯ ಸಂಪ್ರದಾಯಗಳು ಮೂಡಿಬಂದಿದ್ದರೂ, ಪದ್ಧತಿಗಳಲ್ಲಿ ಗೌಣವಾದರೂ, ವಿಪುಲವಾದ ಸ್ವಾರಸ್ಯಕರವಾದ ವೈವಿಧ್ಯಗಳಿವೆ. ದೇಶಾಚಾರ, ಕುಲಾಚಾರ, ವಂಶವ್ಯವಸ್ಥೆ, ವೃತ್ತಿವೈವಿಧ್ಯ ಇವೆಲ್ಲವೂ ಮದುವೆಯ ಪದ್ಧತಿಗಳಲ್ಲಿ ಸೇರಿಬಿಟ್ಟಿವೆ. ಸರ್ವ ಸಾಧಾರಣವಾದ ಒಂದೇ ಲಕ್ಷಣವೆಂದರೆ ವಿವಾಹದ ಧಾರ್ಮಿಕ ಸ್ವರೂಪ. ಇದರಿಂದಾಗಿ ಮದುವೆಯ ಪದ್ಧತಿಗಳೆಲ್ಲ ಸಂಕೇತ ಪ್ರಮುಖವಾಗಿರುತ್ತದೆ. ಒಂದು ವಿಧವಾಗಿ ವಿವೇಚಿಸಿ ನೋಡಿದಾಗ ಮದುವೆಯ ಅಗತ್ಯವಿರುವುದು ಗಂಡು ಹೆಣ್ಣುಗಳ ಕೂಡುವಿಕೆಗೆ ಎಂದಾದರೂ ಇದರಲ್ಲಿ ಪ್ರೇಮ, ಕೌಟುಂಬಿಕ ಧರ್ಮ, ಕರ್ತವ್ಯ ನಿರ್ವಹಣೆ, ಶಿಶುರಕ್ಷಣೆ ಮುಂತಾಗಿ ಹಲವಾರು ವಿಭಾಗಗಳು ಸೇರಿಕೊಳ್ಳುತ್ತವೆ. ಈ ಎಲ್ಲಾ ಐಹಿಕ ಅಗತ್ಯ ವಿವರಗಳೂ ಪರಸ್ಪರವಾಗಿ ಕುಟುಂಬ ಎಂಬುದು ವ್ಯಕ್ತಿಯ ಅಸ್ತಿತ್ವವನ್ನು ಮೀರಿ ನಿಲ್ಲುತ್ತದೆ.[೨೧]

ಒಂದಾನೊಂದು ಕಾಲದಲ್ಲಿ ಕೇವಲ ಮನುಷ್ಯರ ಅನುಕೂಲಕ್ಕಾಗಿ ಹುಟ್ಟಿದ ಈ ವರ್ಣಗಳ ವ್ಯವಸ್ಥೆ, ವೃತ್ತಿಗಳನ್ನನುಸರಿಸಿ ಬಂದ ಕುಲಗಳು, ಇಂದು ತಮ್ಮ ಸುತ್ತಲೂ ಬಲವಾದ ಗೋಡೆಗಳನ್ನು ನಿರ್ಮಿಸಿಕೊಂಡಿವೆ. ಮನುಷ್ಯ ಎಷ್ಟೇ ವಿಜ್ಞಾನವಂತನಾದರೂ ಎಷ್ಟೇ, ವಿಶಾಲ ಹೃದಯಿಯಾದರೂ ನಾಗರಿಕತೆ ಎಷ್ಟೋ ಮುಂದುವರಿದಿದ್ದರೂ, ಕುಲದ ಪ್ರಸಕ್ತಿ ಬರುವುದು ಮದುವೆಯ ಸಂದರ್ಭದಲ್ಲಿಯೆ. ಅನ್ಯಕುಲಸ್ಥರೊಡನೆ ವಿವಾಹ ಮಾಡಿಕೊಳ್ಳುವುದು ಅಪರಾಧವೆಂದೆಣಿಸುತ್ತದೆ ಸಮಾಜ. ಇಂದಿನ ಯುವ ಜನಾಂಗದಲ್ಲಿ ಇಂತಹ ಮದುವೆಗಳು ಹಿಂದಿನ ಕಾಲಕ್ಕಿಂತ ಹೆಚ್ಚಾಗುತ್ತಿವೆ. ಇದಕ್ಕೆ ಕಾರಣ ತರುಣ ತರುಣಿಯರಲ್ಲಿ ಪರಸ್ಪರ

ಆಕರ್ಷಣೆ ಪ್ರೀತಿಗಳ ಜೊತೆಗೆ, ತಮ್ಮಲ್ಲಿರುವ ಪ್ರಗತಿಯ ಭಾವನೆಗಳೊಂದಿಗೆ ಮನೋಬಲವೂ ಸೇರಿ ಇಂಥ ಮದುವೆಗಳಿಗೆ ಪ್ರೋತ್ಸಾಹ ನೀಡುತ್ತದೆ. ಕೆಲವು ಸಲ ಪುರುಷರಲ್ಲಿರುವ ಪ್ರಗತಿಯುತ ಮನೋಭಾವದ ಜೊತೆಗೆ ಕೀರ್ತಿ ಪ್ರತಿಷ್ಠೆಗಳು ಕಾಮನೆಯೂ ಸೇರಿ, ವರ್ಣಾಂತರ ವಿವಾಹದತ್ತ ಒಲವು ಮೂಡುವುದುಂಟು. ಸರಕಾರವು ಸಹ ಇಂತಹ ಮದುವೆಗಳಿಗೆ ಬಹಿರಂಗವಾಗಿ ಪ್ರೋತ್ಸಾಹ ನೀಡುವುದರ ಜೊತೆಗೆ ನಗದು ಬಹುಮಾನಗಳನ್ನು ಪ್ರಕಟಿಸಿದೆ. ಕೆಲವು ಸಂದರ್ಭಗಳಲ್ಲಿ ಬಡತನ ಇಂಥ ಕೆಲಸವನ್ನು ಮಾಡಿಸಬಹುದೇನೋ.

ಶಾಕಾಹಾರಿಗಳೂ ಮಾಂಸಹಾರಿಗಳೂ ವಿವಾಹವಾದಾಗ ಈ ಸಮಸ್ಯೆ ಜಟಿಲವಾಗುತ್ತದೆ. ಸಾಧಾರಣವಾಗಿ ಸಂಸಾರದಲ್ಲಿ ಯಾವಾಗಲೂ ಗಂಡಸಿನದೇ ಮೇಲುಗೈ, ಅವನು ಮಾಂಸಹಾರಿಯಾದ ಪಕ್ಷದಲ್ಲಿ ಹೆಂಡತಿಗೆ ಅದನ್ನು ಅಭ್ಯಾಸ ಮಾಡಿಸುವ ಹಟಕ್ಕೋ ಅಥವಾ ಅವಳ ಕೈಯಿಂದ ಅದನ್ನು ಮಾಡಿಸುವ ಪ್ರಯತ್ನಕ್ಕೋ ತೊಡಗಬಹುದು. ಇದರಿಂದ ಸಮಸ್ಯೆ ಹುಟ್ಟಿಕೊಳ್ಳುತ್ತದೆ.

ಪುರುಷ ಎಂಥ ಕೆಲಸಮಾಡಿದರೂ ಅವನಿಗೆ ಸಮಾಜದಲ್ಲಿ ಮನ್ನಣೆ ಇದೆ. ಅವನು ಮೊದಲು ವರ್ಣಾಂತರ ವಿವಾಹಮಾಡಿಕೊಂಡು ಅವಳನ್ನು ಬಿಟ್ಟು ಬೇರೆಯವಳನ್ನು ಮದುವೆಯಾಗಲು ಬಯಸಿದರೆ ಅವನ ಜಾತಿಯವರೆ ಅವನಿಗೆ ಮನ್ನಣೆ ಇತ್ತು. ತಮ್ಮ ಹುಡುಗಿಯನ್ನು ಕೊಡಲು ಮುಂದೆ ಬರುತ್ತಾರೆ. ಆದರೆ ಹೆಂಗಸಿನ ಪಾಡು ಮಾತ್ರ ವರ್ಣಿಸಲಸದಳ.

ಇಂತಹ ಪರಿಸ್ಥಿತಿ ಸಜಾತೀಯ ಮದುವೆಗಳಲ್ಲಾದರೆ ಅವಳಿಗೆ ಒಂದು ವರ್ಗದ ಸಹಾನುಭೂತಿ ಸಿಗುತ್ತದೆ. ಸಮಾಜ ಕನಿಕರಿಸುತ್ತದೆ. ಸ್ವಲ್ಪ ಮಟ್ಟಿಗೆ ಆರ್ಥಿಕ ಸಾಮಾಜಿಕ ನೆರವು ಅವಳಿಗೆ ಸಿಗುತ್ತದೆ. ಅವಳ ಮಕ್ಕಳನ್ನು ಸಹ ಎಲ್ಲರೂ ಸಹಾನುಭೂತಿಯಿಂದ ನೋಡಿ ಒಂದು ಮಾರ್ಗ ಕಲ್ಪಿಸುತ್ತಾರೆ. ಆದರೆ ಅದೇ ವರ್ಣಾಂತರ ವಿವಾಹವಾದರೆ, ಅವಳನ್ನು ಎಲ್ಲರೂ ದ್ವೇಷಿಸುತ್ತಾರೆ. ಅವಳಿಗೆ ಕಷ್ಟ ಬಂದಾಗ ಅಥವಾ ಅವಳು ಗಂಡನಿಂದ ದೂರವಾದಲ್ಲಿ ಅವಳನ್ನು ಹೀನವಾಗಿ ಕಾಣುತ್ತಾರೆ.

"Marriage is a constructive task of two persons of the opposit sex, who are detarmind to live together in order to relieve difficulties and enrich each others lives" ಅಂದರೆ ವಿವಾಹವೆಂದರೆ ಒಬ್ಬ ಪುರುಷ ಒಬ್ಬ ಸ್ತ್ರೀಯೊಂದಿಗೆ ಕಲೆತು ಇರಲು ನಿಶ್ಚಯಿಸಿಕೊಂಡು ಪರಸ್ಪರ ಕಷ್ಟಗಳನ್ನು ಕಡಿಮೆ ಮಾಡಿಕೊಂಡು ಸುಖಗಳನ್ನು ಹೆಚ್ಚಿಸಿಕೊಳ್ಳಲು ಒಪ್ಪಂದ ಮಾಡಿಕೊಂಡ ನಿರ್ಮಾಣಕಾರ್ಯ ಎಂದು ಗಾಂಧೀಜಿ ಹೇಳಿದ್ದಾರೆ.

ಹಿಂದಿನಿಂದಲೂ ಅಂತರ್ಜಾತಿಯ ವಿವಾಹಗಳು ನಡೆಯುತ್ತ ಬಂದಿವೆ. ಮೇಲು ಜಾತಿಯ ಗಂಡು ಕೆಳ ಜಾತಿಯ ಹೆಣ್ಣನ್ನು ಮದುವೆಯಾಗಬಹುದಿತ್ತು. ಇದು ಅನುಲೋಮ ಪದ್ಧತಿ. ಆದರೆ ಕೆಳ ಜಾತಿಯ ಗಂಡನ್ನು ಮೇಲು ಜಾತಿಯ ಹೆಣ್ಣು ಮದುವೆಯಾಗುವುದಕ್ಕೆ (ವಿಲೋಮ ಪದ್ಧತಿ) ಮಾನ್ಯತೆಯಿರಲಿಲ್ಲ. ಅಂತಹ ವಿವಾಹದಿಂದ ಜನಿಸುವ ಮಕ್ಕಳೂ ಧರ್ಮಬಾಹಿರರಾಗುತ್ತಿದ್ದರು. ಆದರೆ ಧಾರ್ಮಿಕ ನಂಬಿಕೆಗಳು ಹೆಚ್ಚು ಜಡವಾಗುತ್ತಾ ಬಂದಂತೆ ಭಾರತೀಯ ಸಮಾಜದಲ್ಲಿ ಚಲನ ಶೀಲತೆ ಸಂಪೂರ್ಣವಾಗಿ ನಿಂತು ಹೋಗಿ ಜಾತಿಗಳು ಮನುಷ್ಯ ಮನುಷ್ಯರ ನಡುವೆ ಸಮಾಜ ಅಂಗೀಕರಿಸಲು ಸಿದ್ಧವಿರಲಿಲ್ಲ. ಹಿಂದೂ

ಧರ್ಮದ ನೂರಾರು ಜಾತಿ ಪಂಗಡಗಳು ಜೊತೆಗೆ ಮುಸ್ಲೀಂ ಕ್ರೈಸ್ತ ಧರ್ಮಗಳು ಸೇರಿಕೊಂಡು ವಿವಾಹದ ಸಮಸ್ಯೆಯನ್ನು ಮತ್ತಷ್ಟು ಬಿಗಿಗೊಳಿಸಿದವು. ಅಷ್ಟೇ ಅಲ್ಲ ವಿವಾಹದ ಕಾರಣಕ್ಕಾಗಿ ಮನುಷ್ಯ ಸಂಬಂಧಗಳು ಹೃದಯ ಹೀನವೂ ಅಮಾನವೀಯವೂ ಆಗುತ್ತವೆ.

ಅಂತರ್‌ಜಾತಿಯ ಪುರುಷರನ್ನು ಪ್ರೀತಿಸಿ ವಿವಾಹವಾಗಲಾಗದೆ, ಅಥವಾ ಪ್ರೀತಿಸಿದ ಕಾರಣಕ್ಕೆ ನಾನಾ ರೀತಿಯ ಹಿಂಸೆಗೆ ಒಳಗಾದವರು, ಪ್ರೀತಿಸಿ ಯಶಸ್ವಿಯಾದ ಮಹಿಳೆಯರೂ ಕಥನ ಸಾಹಿತ್ಯದಲ್ಲಿ ಚಿತ್ರಣಗೊಂಡಿದ್ದಾರೆ. ಚಂದ್ರಕಾಂತ ಕುಸನೂರರ 'ಗೋಹರಜಾನ್ ಮಾಲತಿ ಮತ್ತು ನಾನು' ಕಾದಂಬರಿಯ ಗೋಹರ್‌ಜಾನ್, ಲಲಿತಾ ದೇಮಶೆಟ್ಟಿಯವರ 'ಸೋಲು' ಕಥೆಯ ಮಾದೇವಿ ಮೊದಲಾದ ಮಹಿಳೆಯರು ಸೋಲು, ಗೆಲುವು ಹಿಂಸೆಯೆ ಮೊದಲಾದ ಹಲವು ಅನುಭವಗಳಿಗೆ ಪಕ್ಕಾಗುತ್ತಾರೆ.

ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಯ ಬೇರುಗಳು ತುಂಬಾ ಆಳದಲಿ ಗಟ್ಟಿಗೊಂಡಿವೆ. ಜಾತಿಯ ಕಟ್ಟುಪಾಡನ್ನು ಮೀರಿ ಪ್ರೀತಿ, ಸಾಮಾಜಿಕ ಸಮ್ಮತಿಯನ್ನು ಪಡೆಯಲಾಗದೆ ಪ್ರೇಮಿಗಳ ಬದುಕನ್ನು ಕಾಡುತ್ತದೆ. ಹಿರಿಯರ ಹಟದ ಮುಂದೆ ಕಿರಿಯರು ಮಣಿಯಬೇಕಾದ ಬಿಕ್ಕಟ್ಟಿಗೆ ಸಿಲುಕುತ್ತಾರೆ. ಹಾಗೇ ಪ್ರೇಮಿಗಳನ್ನು ಭಾವನಾತ್ಮಕವಾಗಿ ಬಂಧಿಸುವ ಹಿರಿಯರು ಅನಾರೋಗ್ಯದ ನಟನೆಮಾಡುವ, ಸಾವಿನ ಭಯವೊಡ್ಡುವ ಸಂದರ್ಭಗಳನ್ನು ಸೃಷ್ಟಿಸುತ್ತಾರೆ. ಪಾಲಕರನ್ನು ತೊರೆಯಲಾರದೇ, ಪ್ರೇಮವನ್ನು ಬಿಡಲಾಗದ ದ್ವಂದ್ವಕ್ಕೆ ಪ್ರೇಮಿಗಳು ಸಿಲುಕುತ್ತಾರೆ. ಪಾಲಕರ ತಂತ್ರ ಮೇಲುಗೈಯಾದಾಗ ಪ್ರೇಮ ಸೋಲುತ್ತದೆ.

ಹಿಂದೂ ಜಾತಿ ಸಮಸ್ಯೆ :

ಗೀತಾ ನಾಗಭೂಷಣರ 'ಸವತಿ ಶ್ರೀಗಂಧ' ಕಾದಂಬರಿಯು ಜಾತಿಯ ಕಾರಣವಾಗಿ ವಿವಾಹ ಸಮಸ್ಯೆಯಾಗುವ ವಸ್ತುವುಳ್ಳದ್ದು. ದೀಪ್ತಿ-ಧೀರೇಂದ್ರ ಸಹಾಧ್ಯಾಯಿಗಳಾಗಿದ್ದು, ಸಮಾನ ಅಭಿರುಚಿಯ ಕಾರಣ ಪರಸ್ಪರ ಪ್ರೇಮಿಗಳಾದವರು. ಮದುವೆಗೆ ಪರಸ್ಪರ ಸಮ್ಮತಿಸಿ ವಿವಾಹಪೂರ್ವ ಲೈಂಗಿಕ ಸಂಬಂಧ ಬೆಳೆಸಿದವರು, ಜಾತಿ ಬೇರೆಯಾದರೂ ವಿವಾಹವಾಗುವ ಗಟ್ಟಿ ನಿರ್ಧಾರ ಕೈಗೊಂಡವರು. ಆದರೆ ಇದರ ಸುಳಿವರಿತ ಧೀರೇಂದ್ರನ ತಾಯಿ ಪಟ್ಟು ಹಿಡಿದು ಪೂರ್ಣಿಮಾಳೊಂದಿಗೆ ಧೀರೇಂದ್ರನ ಮದುವೆ ಮಾಡುತ್ತಾಳೆ. ದೀಪ್ತಿ ಧೀರೇಂದ್ರನಿಗಾಗಿ ಕಾಯುತ್ತಿರುವಾಗಲೆ ಅಸ್ತಮಾ ರೋಗಿಯಾಗಿದ್ದ ಅವಳ ತಂದೆ ತೀರಿ ಹೋಗುತ್ತಾನೆ, ದೀಪ್ತಿ ಗರ್ಭಿಣಿಯಾಗಿರುತ್ತಾಳೆ. ಧೀರೇಂದ್ರ ಅಪರಾಧಿ ಭಾವದಲ್ಲಿಯೆ ತನ್ನ ವಿವಾಹವಾದ ಕುರಿತು ಪತ್ರ ಬರೆಯುತ್ತಾನೆ. ದೀಪ್ತಿ ದಾರಿಕಾಣದೆ, ಇರುವ ಬ್ಯಾಂಕ್ ಕೆಲಸಕ್ಕೆ ರಾಜಿನಾಮೆಕೊಟ್ಟು ಅವಿವಾಹಿತ ತಾಯಿಯಾಗಲು ನಿರ್ಧರಿಸಿ, ಮಗುವಿನ ಭವಿಷ್ಯಕ್ಕಾಗಿ ಹೊಸ ಬದುಕನ್ನು ಅರಸಿ ಬೊಂಬಾಯಿಗೆ ಬರುತ್ತಾಳೆ. ಅಲ್ಲಿ ಅವಳು ಸೇರಿದ ಕಛೇರಿಯಲ್ಲಿಯೆ ಧೀರೇಂದ್ರನೂ ಕೆಲಸದಲ್ಲಿದ್ದು ಇವಳು ಅವನಿಗೆ ಪಿ.ಎ ಆಗಬೇಕಾಗುತ್ತದೆ. ದೀಪ್ತಿ ವಿವಾಹಿತೆ ಎಂದು ಹೇಳಿಕೊಂಡಾಗಲೂ ನಂಬದ ಧೀರೇಂದ್ರ ಗೆಳೆಯನಿಂದ ಸತ್ಯಸಂಗತಿ ಅರಿತು ದೀಪ್ತಿಯನ್ನು ಮದುವೆಯಾಗುವ ಇಚ್ಛೆ ವ್ಯಕ್ತಪಡಿಸುತ್ತಾನೆ. ಅದಕ್ಕೆ ದೀಪ್ತಿ 'ಧೀರೇನ್-ನಾನು ಸತ್ತ ಹಾಗಿದ್ದೀನಿ, ಇನ್ನೂ ಪೂರ್ಣಿಮಾಳನ್ನೂ ಕೊಲ್ಲಬೇಕಂತಿಯಾ'? ಎಂದು ಕೇಳುವಲ್ಲಿ ಅವಳು ಅನುಭವಿಸಿದ ನೋವು ವ್ಯಕ್ತವಾಗಿದೆ. ಕೊನೆಗೂ ಧೀರೇಂದ್ರ ಪೂರ್ಣಿಮಾಳನ್ನು ಒಪ್ಪಿಸಿ ದೀಪ್ತಿಯನ್ನು ಮದುವೆಯಾಗುತ್ತಾನೆ.

ಇಲ್ಲಿ ಕತೆಗಾರ್ತಿ ಗೀತಾ ಅವರು ತದ್ವಿರುದ್ಧವಾದ ಲಕ್ಷಣಗಳಿರುವ ಎರಡು ಹೆಣ್ಣುಗಳನ್ನು ಒಬ್ಬನೊಂದಿಗೆ ಬೆಸೆದು ಕ್ಷಣ ಕ್ಷಣಕ್ಕೂ ಅವರನ್ನು ಹೋಲಿಸಿ ನೋಡುವ ತಂತ್ರದಲ್ಲಿ ಕತೆಯನ್ನು ಬೆಳೆಸುತ್ತಾರೆ. ದೀಪ್ತಿ ವಿದ್ಯಾವಂತೆ, ಚಲುವೆ, ಪ್ರೇಮಿ, ಸ್ವಾವಲಂಬಿಯಾದರೆ, ಪೂರ್ಣಿಮಾ ಅವಿದ್ಯಾವಂತೆ, ಕುರೂಪಿ, ಗೃಹಿಣಿ, ಪರಾವಲಂಬಿ, ಈ ಇಬ್ಬರೂ ತ್ಯಾಗದ ಪ್ರತಿರೂಪವೇ ಆಗಿ ಚಿತ್ರಿಸಲ್ಪಟ್ಟಿದ್ದಾರೆ. ಪೂರ್ಣಿಮಳಿಗಾಗಿ ದೀಪ್ತಿ, ದೀಪ್ತಿಗಾಗಿ ಪೂರ್ಣಿಮಾ ತ್ಯಾಗಗೈಯ್ಯುವ ಮೂಲಕ ಧೀರೇಂದ್ರನ ಬದುಕು ಸುಗಮವಾಗುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿ ಈ ಮೂವರಲ್ಲಿ ಯಾರೂ ತಿಳಿದು ತಪ್ಪು ಮಾಡಿಲ್ಲ. ಕುಟುಂಬ ಸಂಸ್ಥೆ ಜಾತಿ ವ್ಯವಸ್ಥೆಯ ಒತ್ತಡದಲ್ಲಿ ಹದಗೆಟ್ಟ ಮೂರು ಜೀವಗಳ ಬದುಕನ್ನು ಸುಧಾರಿಸುವುದೊಂದೆ ಲೇಖಕಿಯ ಗುರಿಯಾಗಿ ಕಾಣುತ್ತದೆ. ಸ್ವಾವಲಂಬಿಯಾದ ದೀಪ್ತಿ ವಿವಾಹವಿಲ್ಲದೆ ಬದುಕಬಹುದಾಗಿತ್ತು. ಆದರೆ ಹೆಣ್ಣಿಗೆ ವಿವಾಹ ಅನಿವಾರ್ಯವೆಂಬ ಯಥಾಸ್ಥಿತಿಯನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

'ಎಲ್ಲಕ್ಕಿಂತ ಜಾಸ್ತಿ ನೀನು ನನ್ನನ್ನು ಪ್ರೀತಿಸುವಷ್ಟು ಯೋಗ್ಯತೆ, ವಿದ್ಯೆ ಚಲುವು ಪ್ರತಿಭೆ ಯಾವುದೂ ನನ್ನಲಿಲ್ಲವೆ.' ಎಂದು ಕೇಳುವ ದೀಪ್ತಿ ಹೆಣ್ಣಿನ ಈ ಎಲ್ಲ ಗುಣಗಳು ಅವಳ ವ್ಯಕ್ತಿತ್ವವನ್ನು ನಿರ್ಣಯಿಸುವ ಅಂಶಗಳಾಗಬೇಕು ಎಂದು ಬಯಸುತ್ತಾಳೆ. ಆದರೆ ಪುರುಷ ಸಮಾಜ ಪ್ರಮುಖವಾಗಿ ಪರಿಗಣಿಸುವುದು ಸ್ತ್ರೀಯನ್ನು ಲೈಂಗಿಕ ದೃಷ್ಟಿಯಿಂದ.

ಮಹಿಳೆಯ ಚಾತುರ್ಯ, ಜಾಣ್ಮೆ, ಬುದ್ಧಿವಂತಿಕೆ, ದುಡಿಯುವ ಸಾಮರ್ಥ್ಯಗಳಾವುದೂ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಗೆ ಮುಖ್ಯವಾಗುವುದಿಲ್ಲ. ಹೆಣ್ಣೊಬ್ಬಳನ್ನು ಬೆಳೆಸುವುದು ಒಬ್ಬನನ್ನು ವಿವಾಹವಾಗಿ ಗೃಹಿಣಿಯಾಗಲು, ಅವಳ ಬೌದ್ಧಿಕ ಚಟುವಟಿಕೆ, ಸಾಧನೆಗಳಿಗೆ ಅಂಥ ಮಹತ್ವವೇನೂ ಇಲ್ಲ. ಇಂದಿಗೂ ಪ್ರಥಮ ಪ್ರಾಶಸ್ತ್ಯವಿರುವುದು ಗೃಹಿಣಿಗೆ ತಾಯಿಗೆ, ಉಳಿದದ್ದು ಪತಿಯ ಅಥವಾ ಮನೆಯವರ ಅನುಮತಿಯನ್ನು ಆಧರಿಸಿದ್ದು. ಮಹಿಳೆ ಸ್ವತಂತ್ರವಾಗಿ ಯಾವುದನ್ನು ನಿರ್ಣಯಿಸುವಂತಿಲ್ಲ. ಅವಳ ಚಲುವು ಪುರುಷ ನಿಷ್ಠೆಯನ್ನು ಅವಳಿಗೆ ಒದಗಿಸುತ್ತದೆಂದೇನೂ ಇಲ್ಲ. ಅಂತೆಯೇ ಮಹಿಳೆಯ ಬದುಕು ಅನಿಶ್ಚಿತತೆಯಲ್ಲೇ ಸಾಗುತ್ತದೆ. ಯಾವಾಗ ಏನೋ ಎಂಬ ಅನುಮಾನಗಳು ಅವಳನ್ನು ಕಾಡುತ್ತಲೇ ಇರುತ್ತವೆ ಎಂಬುದನ್ನು ದೀಪ್ತಿಯ ಮಾತುಗಳು ಪ್ರತಿನಿಧಿಸುತ್ತವೆ.

ಹಿಂದು-ಮುಸ್ಲಿಂ ಸಮಸ್ಯೆ :

ಅಂತರ್‌ಜಾತಿಯ ವಿವಾಹಗಳಲ್ಲಿ ಒಳಪಂಗಡಗಳಲ್ಲಿ ವಿವಾಹವಾಗುವುದೇ ಸಮಸ್ಯೆಯಾಗಿರುವಾಗ ಹಿಂದೂ-ಮುಸ್ಲಿಂ ವಿವಾಹ ಕಷ್ಟದ್ದು. ಇಂದಿಗೂ ಇಂಥ ವಿವಾಹಗಳು ಬೆರಳೆಣಿಕೆಯಷ್ಟು ಮಾತ್ರ ಎನಿಸುತ್ತವೆ. ಹಿಂದೂ-ಮುಸ್ಲೀಂ, ಹಿಂದೂ-ಕ್ರಿಶ್ಚಿಯನ್ ವಿವಾಹಗಳಿಗೆ ಮತಾಂತರ ಕಡ್ಡಾಯವೆಂದು ವಿಧಿಸಲಾಗುತ್ತದೆ. ಇಲ್ಲಿಯೂ ಹಿಂದೂ ಯುವತಿ ಮುಸ್ಲೀಂ ಯುವಕನ ವಿವಾಹವಾಗುವುದು ಹೆಚ್ಚು. ಅದೇ ಮುಸ್ಲೀಂ ಯುವತಿ ವಿವಾಹವಾಗುವುದು ಅಪರೂಪ. ಹಿಂದೂ ಯುವತಿಯನ್ನು ಮುಸ್ಲೀಂ ಆಗಿ ಮತಾಂತರಿಸಿದರೆ ಅಂತಹ ವಿವಾಹವನ್ನು ಇಸ್ಲಾಂ ಧಾರ್ಮಿಕ ವ್ಯವಸ್ಥೆ ಒಪ್ಪುತ್ತದೆ. ಆದರೆ ಇದೇ ಅಭಿಪ್ರಾಯವನ್ನು ಮುಸ್ಲೀಂ ಯುವತಿಯ ಸಂದರ್ಭದಲ್ಲಿ ಹೇಳಲಾಗುವುದಿಲ್ಲ. ಕೆಳವರ್ಗಗಳಲ್ಲಿ ಈ ಕಟ್ಟುಪಾಡು ಅಷ್ಟಾಗಿ ಕಂಡುಬರುವುದಿಲ್ಲ. ಜಯತೀರ್ಥ ರಾಜ ಪುರೋಹಿತರ 'ಸಯಿದಾ ಸುಮತಿಯಾದಳು' ಕಥೆ ಅಂತರ್‌ಜಾತಿಯ ಕಾರಣ ಸುಮತಿ ಸಯಿದಾ

ಆಗಿ ಮತಾಂತರಗೊಂಡುದನ್ನು ಕಥಿಸಿದರೆ, ಚಂದ್ರಕಾಂತ ಕುಸನೂರರ 'ಗೋಹರ್‌ಜಾನ್ ಮಾಲತಿ ಮತ್ತು ನಾನು' ಕಥೆಯ ಗೊಹರ್‌ಜಾನ್‌ಳನ್ನು ಪ್ರೀತಿಸಿದ ಗುರುಚರಣ್ ಹಿಂದೂ ಎಂಬ ಕಾರಣಕ್ಕೆ ಕೊಲೆಗೀಡಾಗುತ್ತಾನೆ. ಪಿತೃವ್ಯವಸ್ಥೆಯಲ್ಲಿ ಹೆಣ್ಣು ವಿವಾಹದ ನಂತರ ಗಂಡಿನ ಜಾತಿಗೆ ಸೇರುತ್ತಾಳಾದರೂ ಮುಸ್ಲೀಂ ಧಾರ್ಮಿಕ ವ್ಯವಸ್ಥೆ ಹೆಣ್ಣು ಗಂಡುಗಳಿಬ್ಬರೂ ಮುಸ್ಲೀಂರಾಗಬೇಕೆಂದು ವಿಧಿಸುವಂತಿದೆ.

ಜಯತೀರ್ಥ ರಾಜಪುರೋಹಿತರ ಕಥೆ 'ಸಯಿದಾ ಸುಮತಿಯಾದಳು' ವಿಧವಾ ವಿವಾಹ ತಂದೊಡ್ಡಿದ ಸಮಸ್ಯೆಯನ್ನು ನಿವಾರಿಸಲು ತನ್ನ ಜೀವವನ್ನೆ ಸಮರ್ಪಿಸುವ, ಸುಮತಿಯ ಬದುಕನ್ನು ವಸ್ತುವಾಗುಳ್ಳದ್ದು. ಸುಮತಿ ಎಳೆವಯಸ್ಸಿನಲ್ಲಿಯೇ ಮದುವೆಯಾಗಿ ಐದು ಮಕ್ಕಳನ್ನು ಪಡೆದು ಸರಾಗವಾಗಿ ಪ್ರವಹಿಸುತ್ತಿದ್ದ ಜೀವನದಿಯಲ್ಲಿ ಒಮ್ಮೆಲೆ ಪತಿ ಸಾವಿನ ಪ್ರವಾಹವೇರಿ ಬದುಕು ಲಯ ತಪ್ಪುತ್ತದೆ. ಹದಿನಾಲ್ಕರ ಹರೆಯದ ಮಗಳನ್ನು ಮದುವೆಯಾದ ಅಳಿಯ ಮನೆಯ ಯಜಮಾನನಾಗುತ್ತಾನೆ. ಅಳಿಯನ ಗೆಳೆಯ ಮಸ್ತಾನ ಆಲಿಯ ಆಕಸ್ಮಿಕ ಹಿಡಿತದಲ್ಲಿ ಜಾರಿದ ಸಂಯಮ ಬಹಿರಂಗ ಗೊಂಡಾಗ ಅಲಿಯಿಂದ ಅಳಿಯನ ಕೊಲೆ, ಮಗಳ ಆತ್ಮಹತ್ಯೆ ಒಟ್ಟಿಗೆ ನಡೆಯುತ್ತವೆ. ಅಲಿ ಸುಮತಿಯನ್ನು ಸಯಿದಳಾಗಿಸಿ ನಿಖಾ ಮಾಡಿಕೊಳ್ಳುತ್ತಾನೆ. ದೇಶ ವಿಭಜನೆಯ ಸಂದರ್ಭವನ್ನಾಧರಿಸಿದ ಈ ಕಥೆ ಸುಮತಿಯ ವಿವಾಹ ಅಲಿಯ ಕೋಮುದ್ವೇಷಕ್ಕೆ ಬಳಕೆಯಾಗುವುದನ್ನು ಚಿತ್ರಿಸುತ್ತದೆ. ತನ್ನ ಕೈವಶಮೀರಿದ ಅಲಿಯ ಸಂಬಂಧದ ಸೆಳೆತದಲ್ಲಿ ತನ್ನ ಸಂಸಾರದ ವಿನಾಶಕ್ಕೆ ವ್ಯಕ್ತಿತ್ವ ನಾಶಕ್ಕೆ ಒಳಗಾದರೂ, ಅಲಿಯ ವಿಛಿದ್ರಕಾರಿ ಸಂಚನ್ನು ತಡೆಯುವಲ್ಲಿ ಎಚ್ಚತ್ತುಕೊಂಡ ಸಯಿದಾ, ಆತ್ಮಾರ್ಪಣೆಯೊಂದಿಗೆ ಅಲಿಯ ಸಂಚನ್ನು ಬಯಲುಗೊಳಿಸಿ, ಪೋಲಿಸರಿಗೆ ಹಿಡಿದುಕೊಡುವಲ್ಲಿ ಮರಳಿ ಸುಮತಿಯಾಗುತ್ತಾಳೆ ಎಂಬುದು ಅರ್ಥಪೂರ್ಣ ಸಮರ್ಥನೆಯೆ.

ಬಾಲ್ಯವಿವಾಹ, ವೈಧವ್ಯಗಳು ಮಹಿಳೆ ಸಾಮಾಜಿಕ ಕಟ್ಟಳೆಯನ್ನು ಮೀರುವಂತೆ ಮಾಡುವ, ಹಾಗೆ ಮೀರಿದಾಗ ಅವಳ ಇಡೀ ಸಂಸಾರ ಅನುಭವಿಸಬೇಕಾಗಿ ಬಂದ ತಲ್ಲಣ, ಜೀವಹಾನಿ, ತನ್ನತನ ಕಳೆದುಕೊಳ್ಳುವಂತೆ ಮಾಡುವ ಮತಾಂತರ ಪ್ರಕ್ರಿಯೆ, ಒಂದು ತಪ್ಪಿದರೆ ಹನ್ನೊಂದು ತಪ್ಪುವ ಬದುಕಿನ ಸಂಕೀರ್ಣತೆ ಸುಮತಿಯ ಬದುಕನ್ನು ಎಲ್ಲಿಂದಲೋ ಎಲ್ಲಿಗೋ ಕೊಂಡೊಯ್ಯುತ್ತದೆ. ಆದಾಗ್ಯೂ ಅಲಿಯ ಸಂಚನ್ನು ಗುರುತಿಸುವಲ್ಲಿ ಕಥೆಯ ಯಶಸ್ಸು ಅಡಗಿದೆ.

ವಿಧವಾ ವಿವಾಹ ಸುಮತಿಯ ಬದುಕಿಗೆ ಯಾವುದೇ ನೆಮ್ಮದಿಯನ್ನು ತರದೆ, ಇದ್ದ ಬದುಕಿನ ನೆಮ್ಮದಿಯನ್ನು ಹಾಳುಗೆಡವುತ್ತದೆ. ಸಯಿದಾಳನ್ನು ಪುನಃ ಸುಮತಿಯಾಗಿ ಸ್ವೀಕರಿಸಲು ಆರ್ಯ ಸಮಾಜವೇನೋ ಮುಂದೆ ಬರುತ್ತದೆ. ಆದರೆ ಹಿಂದೂ ಸಾಮಾಜಿಕ ವ್ಯವಸ್ಥೆಯ ಅರಿವಿದ್ದ ಸುಮತಿ ಅದನ್ನು ನಿರಾಕರಿಸುತ್ತಾಳೆ. ಅಲಿಯ ವಿವಾಹಿತ ಸ್ತ್ರೀಯಾಗಿ ಮುಸ್ಲೀಂ ಸಮಾಜದಲ್ಲಿ ಅವಳಿಗೆ ಸ್ಥಾನವೇನೋ ಸಿಗುತ್ತದೆ. ಆದರೆ ದೇಶದ್ರೋಹದಂಥ ರಾಜಕೀಯ ಅಪರಾಧಕ್ಕೆ ತನ್ನನ್ನು ಬಳಸಿಕೊಳ್ಳುವುದಕ್ಕೆ ಆಸ್ಪದವೀಯದ ಸುಮತಿ, ತುಂಬ ಚಾತುರ್ಯದಿಂದ ಇಮಾಮರ ಮಗನ ಮೂಲಕ ಪೋಲಿಸರಿಗೆ ಸುಳಿವು ನೀಡಿ ಆಗಬಹುದಾಗಿದ್ದ ದೊಡ್ಡ ಅನಾಹುತವನ್ನು ತಪ್ಪಿಸುತ್ತಾಳೆ. ಕಥೆಯ ಆರಂಭದಲ್ಲಿ ದುರ್ಬಲ, ವಿನಾಶಕಾರಕವಾಗಿ ರೂಪಗೊಳ್ಳುವ ಸುಮತಿಯ ಪಾತ್ರ ಅಂತ್ಯದಲ್ಲಿ ತ್ಯಾಗ ಬಲಿದಾನದ ಪ್ರತೀಕವಾಗಿ ಬೆಳೆಯುತ್ತದೆ. ವೈಯಕ್ತಿಕ ನೆಲೆಯಿಂದ ಸಾಮಾಜಿಕ, ಧಾರ್ಮಿಕ, ರಾಜಕೀಯ ವಲಯಗಳಿಗೆ ಚಾಚಿಕೊಳ್ಳುತ್ತದೆ.

ಹಿಂದು-ಮುಸ್ಲಿಂ ಸಮಸ್ಯೆ :

ಚಂದ್ರಕಾಂತ ಕುಸನೂರರ 'ಗೋಹರಜಾನ್ ಮಾಲತಿ ಮತ್ತು ನಾನು' ಕಾದಂಬರಿಯ ಗೋಹರ್‌ಜಾನ್ ತನಗೆ ಸಂಗೀತ ಪಾಠ ಹೇಳಿಕೊಡುತ್ತಿದ್ದ ಕೃಷ್ಣಕಾಂತ ಉಪಾಧ್ಯಾಯರ ಮಗ ಗುರುಚರಣನನ್ನು ಪ್ರೀತಿಸುತ್ತಾಳೆ. ಹಿಂದು ಮುಸ್ಲಿಂ ಮೂಲಭೂತವಾದಿಗಳ ದೃಷ್ಟಿಯಲ್ಲಿ ಇದೊಂದು ಮಹಾಪರಾಧವಾಗುತ್ತದೆ. ಗುರುಚರಣ ಮುಸ್ಲಿಮನಾಗಿ ಮತಾಂತರ ಹೊಂದಿದರೆ ಮಾತ್ರ ಮದುವೆ ಎಂದು ಹೇಳಲಾಗುತ್ತದೆ. ಗೋಹರಜಾನ್‌ಳನ್ನು ಗೃಹ ಬಂಧನದಲ್ಲಿರಿಸಲಾಗುತ್ತದೆ. ಗೋಹರಳನ್ನು ಕಾಣಲು ಬಂದ ಗುರುಚರಣನನ್ನು ಅವಳ ಮನೆಯಲ್ಲಿ ಇರಿದು ಕೊಲ್ಲಲಾಗುತ್ತದೆ. ಜೀವ ಉಳಿಸಿಕೊಳ್ಳಲು ತಾಯಿ ಮಗಳು ದೂರದ ಸಂಬಂಧಿಗಳಲ್ಲಿ ಆಶ್ರಯ ಪಡೆದಾಗ ಅವರ ಮನೆಯನ್ನು ಸುಟ್ಟು 'ಸೂಳೆಯ ಮನೆಯಲ್ಲಿ ಹೆಣ' ಎಂದು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಇವರ ಪ್ರೇಮವನ್ನೇ ನೆಪವಾಗಿಟ್ಟುಕೊಂಡು ಹಿಂದೂ ಮುಸ್ಲೀಂ ದಂಗೆಗಳಾಗಿ ಅನೇಕ ಜೀವಗಳು ಹಾನಿಯಾಗುತ್ತವೆ. ಗೋಹರ್‌ಜಾನ್‌ಳ ಬದುಕು ಅವಳಿಗರಿವಿಲ್ಲದೆಯೆ ವೇಶ್ಯೆಯಾಗಿ ಮಾರ್ಪಡುತ್ತದೆ.

ವ್ಯಕ್ತಿಗಿಂತ ಜಾತಿ ದೊಡ್ಡದಾಗಿ ವ್ಯಕ್ತಿಗತ ಆಕಾಂಕ್ಷೆಗಳಿಗೆ ಬೆಲೆಯಿಲ್ಲದಾಗುತ್ತದೆ. ಜಾತಿಯ ಕಟ್ಟುಪಾಡುಗಳು ಮಾನವೀಯ ನೆಲೆಯನ್ನು ಮೀರಿ ವರ್ತಿಸುತ್ತವೆ. ಇಲ್ಲಿ ವಿವಾಹ ಹೆಣ್ಣು-ಗಂಡಿನ ಒಲವಿನ ಬಂಧನವಾಗದೆ ಜಾತಿ ದ್ವೇಷದ ಕಿಡಿಯಾಗಿ ಗುರುಚರಣ-ಗೋಹರರ ಬದುಕನ್ನು ಸುಡುತ್ತದೆ. ಗುರುಚರಣ ಧರ್ಮದ ದಳ್ಳುರಿಯಲ್ಲಿ ದಹಿಸಲ್ಪಟ್ಟರೆ, ಗೋಹರ್‌ಜಾನ್ ಬದುಕಿಯೂ ಸತ್ತಂತೆ ಹೀನ ಬದುಕನ್ನು ಬದುಕಬೇಕಾಗುತ್ತದೆ. ಒಬ್ಬ ಸುಶಿಕ್ಷಿತ ಸುಂದರ, ಸುಸಂಸ್ಕೃತ ಕಲಾವಿದೆ ಸಮಾಜಕ್ಕೊಂದು ಕೊಡುಗೆಯಾಗುವ ಬದಲು, ಧಾರ್ಮಿಕ ಕರಾಳತೆಯಲ್ಲಿ ಸಿಕ್ಕು ನರಳುತ್ತಾಳೆ. ಅಷ್ಟಾದರೂ ಜಯದೇವನ ಗೀತಗೋವಿಂದವನ್ನು ಅಭ್ಯಾಸ ಮಾಡುತ್ತ ಜೀವನದ ನೆಮ್ಮದಿಗೆ ಹಂಬಲಿಸುವವಳನ್ನು, ಅವಳ ಪಾಡಿಗೆ ಬಿಡದೆ ಸುಸಂಸ್ಕೃತರ ಪರಿಸರದಲ್ಲಿ ವೇಶ್ಯ ಇರಬಾರದೆಂದು ಒತ್ತಡ ತರುವ ತಿಮ್ಮಪ್ಪನಂಥ ಸ್ವಾರ್ಥಿಗಳು ಮನೆಬಿಡಿಸಿ ಓಡಿಸಿದ್ದೂ ಅಲ್ಲದೇ ಮನೆಯನ್ನು ಸುಟ್ಟುಹಾಕುವಲ್ಲಿ ಮಹಿಳೆಯ ಕುರಿತ ಸಮಾಜದ ಕಠೋರ ವರ್ತನೆಯನ್ನು ಸ್ಪಷ್ಟಪಡಿಸುತ್ತದೆ.

೪.೨.೨.೪ ಹಿಂದೂ ಜಾತಿ ಸಮಸ್ಯೆ :

ಜಾತ್ಯಾತೀತತೆಯ ಕುರಿತು ಎಷ್ಟೇ ಮಾತನಾಡಿದಾಗಲೂ ವಿವಾಹ ಸಂಸ್ಥೆಗೆ ಬಂದಾಗ ಇಂದಿಗೂ ಹಿಂದೇಟು ಹಾಕುವುದು ಕಂಡುಬರುತ್ತದೆ. ಅಮರೇಶ ನುಗದೋಣಿಯವರ ಕಥೆ 'ಮನ್ನಿಸಿ ಮೂಕಾದ ಮೇಲೆ' ಯಲ್ಲಿ ಬೇಡರ ನಾಗರಾಜ ವೀರಶೈವರ ಮಾದೇವಿ ಪರಸ್ಪರ ಪ್ರೀತಿಸಿದಾಗ ಜಾತಿಯ ಕಾರಣಕ್ಕಾಗಿಯೆ ಮಹಾದೇವಿಯ ಬಸಿರನ್ನು ತೆಗೆಸಿ ಮೂಲೆಗುಂಪು ಮಾಡಲಾಗುತ್ತದೆ. ಮಲ್ಲಿಕಾರ್ಜುನ ಅದನ್ನು ನೆವವಾಗಿಟ್ಟುಕೊಂಡು ತನ್ನನ್ನು ಸಾಕಿ ಬೆಳಸಿದ ದೊಡ್ಡಮ್ಮ ತಂದೆಯರಿಂದಲೂ ದೂರಾಗುತ್ತಾನೆ.

ಮುಂದೊಮ್ಮೆ ದೊಡ್ಡಮ್ಮ ಆರೋಗ್ಯ ತಪ್ಪಿ ನೆಲ ಹಿಡಿದು ತನ್ನನ್ನೆ ನೆನಸುತ್ತಿರುವಳೆಂದು ತಿಳಿದು ವಿಚಾರಿಸಲು ಬಂದಾಗ ಮಾದೇವಿ 'ನಾನು ಎಡವೀನಿ ಖರೇ ನೀನು ಓದಿದಾತ. ಕಾಲ ಬದಲಾಗ್ಯಾದ ಅಂಬೋದು ನಿನ್ಗ ತಿಳಿಬೇಕು. ನೀನು ಮನಸ್ಸು ಮುರುಕಂಡು ಹೋಗ ಬದಲು ನಿಂತು ವಿಚಾರ ಮಾಡಬೇಕಾಗಿತ್ತು. ನಾನು ನಾಗರಾಜನ ಜೊತೆ ಮದಿವಿಗೆ ತಯಾರಿದ್ದೆ'[1] ಎಂದು ಹೇಳಿದಾಗ ಮಲ್ಲಿಕಾರ್ಜುನ ಆದೆಣ್ಣನೊಂದಿಗೆ ಚರ್ಚಿಸಿ ಅವರ ಮದುವೆ ಮಾಡಿಸುತ್ತಾನೆ.

ತಪ್ಪುಗಳು ಸಂಭವಿಸುತ್ತವೆ. ಅದಕ್ಕೆ ಹೆಣ್ಣು-ಗಂಡುಗಳಿಬ್ಬರೂ ಕಾರಣ ಇಂಥ ಸಂದರ್ಭಗಳಲ್ಲಿ ಹೆಚ್ಚಾಗಿ ಶಿಕ್ಷೆಯಾಗುವುದು ಹೆಣ್ಣಿಗೆ ಬದುಕು ಕೆಡುವುದು ಅವಳದೆ. ಸ್ವತಃ ಶಿಕ್ಷೆಯನ್ನು ಅನುಭವಿಸಿದ ಮಾದೇವಿಯಿಂದಲೆ ವಿವೇಚನೆಯ ಮಾತುಗಳನ್ನು ಹೇಳಿಸಿ, ವಿದ್ಯಾವಂತರಾದ ಮಲ್ಲಿಕಾರ್ಜುನ ಆದಪ್ಪ ಅವರು ಸ್ಪಂದಿಸುವಂತೆ ಮಾಡುತ್ತಾರೆ ಅಮರೇಶ. ತಮ್ಮ ಬಂಧನವನ್ನು ನೀಗಿಸಿಕೊಳ್ಳಲು ತಾವೇ ಪ್ರಯತ್ನಸಬೇಕೆಂಬ ಸೂಚನೆ ಸೂಚ್ಯವಾಗಿರುವಂತಿದೆ. ಆದ ತಪ್ಪುಗಳನ್ನು ಹಾಗೆ ಉಳಿಸದೆ ಇನ್ನೂ ಹೆಚ್ಚು ಸಂಕೀರ್ಣವಾಗಲು ಬಿಡದೆ ಮನ್ನಿಸಿ ಪರಿಹಾರ ಕಂಡುಕೊಳ್ಳುವಲ್ಲಿ ಕಥೆಯ ಸಫಲತೆ ಅಡಗಿದೆ. ಹೆತ್ತ ತಾಯಿಯನ್ನು ಕಳೆದುಕೊಂಡ ಮಲ್ಲಿಕಾರ್ಜನ, ದೊಡ್ಡಮ್ಮ ನೀಲಮ್ಮನ ಮಗನೆಂದೇ ಬೆಳೆಯುವಲ್ಲಿ, ನೀಲಮ್ಮನ ವಾತ್ಸಲ್ಯ ಶ್ರಮಗಳನ್ನು ಗೌರವಿಸಿದ ಕತೆಗಾರರ ಸ್ತ್ರೀಪರ ಕಾಳಜಿ ಅನನ್ಯವಾಗಿ ಮೂಡಿ ಬಂದಿದೆ.

ಮೇಲ್‌ಜಾತಿ-ಕೆಳಜಾತಿ ಸಮಸ್ಯೆ

ಲಲಿತಾ ದೇಮಶೆಟ್ಟಿಯವರ 'ಸೋಲು' ಕಥೆ ಹಾವಪ್ಪನ ಕುತಂತ್ರಕ್ಕೆ ಗಂಗಿಯ ಬದುಕು ಬಲಿಯಾಗುವದನ್ನು ಚಿತ್ರಿಸುತ್ತದೆ. ಹೊಲೆಯರ ಗಂಗಿ ಬಸ್ವಿ ಎಲ್ಲವ್ವನ ಮಗಳಾದರೂ ಎಲ್ಲರಂತೆ ಮದುವೆಯಾಗಬೇಕೆಂದು ಆಸೆ ಇಟ್ಟುಕೊಂಡವಳು. ಹಾಗಾಗಿ ಹೊಟ್ಟೆ ಪಾಡಿಗೆ ಕಸಗುಡಿಸುವ ಕೆಲಸವನ್ನಾಶ್ರಯಿಸುತ್ತಾಳೆ. ಊರ ಜಮೀನ್ದಾರ, ಸಾವುಕಾರರ ಆಮಿಷಗಳಿಗೆ ಬಲಿಯಾಗದೆ, ಯಾರಾದರೂ ತನ್ನ ಮದುವೆಯಾಗಬಹುದೆಂದು ಕಾಯುತ್ತಾಳೆ. 'ಬಸ್ವಿ ಮಗ್ಳು ಬಸ್ವಿ ಅಲ್ವಾ? ಬಸ್ವಿ ಮಗಳು ನಿಮ್ಮ ಜನ್ದಾಗ್ ಯಾವೋನ್ಲೆ ಮದುವೆಯಾಗ್ತಾನೆ? ನೀನೇನ್ಮಹಾ ಗಂಡುಳ್ಳ ಗರತಿ ಕಂತ್ಲೆ ಮಾತಾಡ್ತಿಯೇ, ನನ್ಮಾತ್ಕೇಳಿ ಸುಮ್ಕೆ ಬಂದ್ಬುಡು, ನನ್ನಾಸೀಗ್ಗೆ ನಿಂಗೆ ಚಿನ್ನದ ಸರಾ ಕೊಡ್ತೀವ್ನಿ. ಎಂದು ಜಮೀನ್ದಾರ ಕರೆದಾಗ ಅವನ ಮುಖಕ್ಕೆ ಉಗುಳುತ್ತಾಳೆ ಗಂಗಿ.[೨೫] ನಮ್ಗುನೋವೆ ಲೆಗ್ಣಾ ಮಾಡ್ಕೆಂಡ್ ಬಾಳೇವು ಮಾಡಾಕೆ ಭೋ ಆಶೇವು ಎನ್ನುವ ಗಂಗಿ ಯಾರಾದರೂ ತನ್ನ ಮದುವೆಯಾಗಬಹುದೆಂದು ಕಾಯುತ್ತಾಳೆ. ಅಷ್ಟರಲ್ಲಿ ಮೇಲೇರಿ ಬಂದ ಸಾವುಕಾರ ಹಾವಪ್ಪನನ್ನು ತನ್ನ ಸಾಮರ್ಥ್ಯವೆಲ್ಲ ಬಳಸಿ ಒದ್ದು ಓಡಿಸುತ್ತಾಳೆ.

ಹಾವಪ್ಪ ಗಂಗಿಯ ಬಯಕೆಯನ್ನರಿತು ವಿವಾಹವಾಗಲು ಮುಂದೆ ಬಂದಾಗ ಅದನ್ನು ಸತ್ಯವೆಂದೇ ನಂಬಿ ಗಂಗಿ ಸಮ್ಮತಿಸುತ್ತಾಳೆ. ಆರಂಭದಲ್ಲಿ ಅವಳನ್ನು ಚನ್ನಾಗಿಯೆ ನೋಡಿಕೊಂಡ ಹಾವಪ್ಪ ಉಡಿಸಿ-ತೊಡಿಸಿ ಸುಖವಾಗಿರಿಸುತ್ತಾನೆ. ಅವಳ ಕೇರಿಯ ಜನರಿಂದ ಸಂಪರ್ಕ ತಪ್ಪಿಸುತ್ತಾರೆ. ಅವ್ವನೊಂದಿಗೂ ಮಾತ್ನಾಡಲು ಅವಕಾಶವೀಯುವುದಿಲ್ಲ. ಗಂಗಿ ಎಲ್ಲವನ್ನು ಸಹಿಸಿಕೊಳ್ಳುತ್ತಾಳೆ. ಹಾವಪ್ಪ ಇಷ್ಟಕ್ಕೆ ಸುಮ್ಮನಿರದೆ ತಮ್ಮದು ಅಂತರ್ ಜಾತಿ ವಿವಾಹವೆಂದು ಸರಕಾರದಿಂದ ಪ್ರೋತ್ಸಾಹ ಧನ ಹಾಗೂ ಮನೆಯನ್ನು ಪಡೆಯುತ್ತಾನೆ. ಗಂಗಿ ತನ್ನನ್ನು ಸಂಪೂರ್ಣ ನಂಬಿದ್ದಾಳೆಂದು ಭರವಸೆ ಬಂದಾಗ ಒಂದು ದಿನ ಬೊಂಬಾಯಿ ತೋರುಸುವುದಾಗಿ ಕರೆದೊಯ್ದು ಅಲ್ಲಿ ಅವಳನ್ನು ಸೂಳೆಗೇರಿಯಲ್ಲಿ ಮಾರಿ ಬರುತ್ತಾನೆ. ಮದುವೆಯ ಉತ್ಕಟೇಚ್ಛೆಯಲ್ಲಿ ಏನಾಗಬಾರದೆಂದಿದ್ದಳೋ ಗಂಗಿ ಅದೇ ಆಗಬೇಕಾಗಿ ಬಂದುದು ಗಂಗಿಯ ಸೋಲಾಗುತ್ತದೆ. ಗರತಿಯಾಗಿ ಮರ್ಯಾದೆಯಾಗಿ ಬದುಕಲಿಚ್ಛಿಸಿದರೂ ಹಾವಪ್ಪನ ಕುತಂತ್ರ ಗಂಗಿಯನ್ನು ವೇಶ್ಯಯಾಗಿಸುವಲ್ಲಿ ಸಫಲವಾಗುತ್ತದೆ.

ಪುರುಷ ಸ್ವಾರ್ಥಕ್ಕೆ ಲೋಲುಪತೆಗೆ ಗಂಗಿಯ ಬದುಕು ಘೋರ ದುರಂತ್ಕೀಡಾಗುತ್ತದೆ. ನೇರವಾಗಿ ಸಾಧಿಸಲಾಗದುದನ್ನು ಮೋಸದಿಂದ ಸಾಧಿಸುವ ಹಾವಪ್ಪನಂಥವರಿಗೆ ಹೆಣ್ಣು ಕೇವಲ ಭೋಗದ ವಸ್ತು. ಜಾಗತೀಕರಣದ ಸಂದರ್ಭದಲ್ಲಿ ಮಾರಾಟ ಹೊಸ ಪಿಡುಗಾಗಿ ಹೆಣ್ಣುಗಳ ಬದುಕನ್ನು ಆಕ್ರಮಿಸುತ್ತಿದೆ.

ಬಸವಿಯ ಮಗಳು ಬಸವಿಯೆ ಆಗಬೇಕೆಂದು ವಿಧಿಸುವ ಸಾಮಾಜಿಕ ನಿಯಮ ದಲಿತ ಮಹಿಳೆಯ ಬದುಕಿನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದಲ್ಲದೆ ಅವಳಿಗಿಷ್ಟವಿಲ್ಲದ ಹೀನ ಬದುಕನ್ನು ಅವಳ ಮೇಲೆ ಹೇರುತ್ತದೆ. ವೈಯಕ್ತಿಕ ಆಕಾಂಕ್ಷೆಗಿಂತ ಸಾಮಾಜಿಕ ಒತ್ತಡಗಳು ಮಹಿಳೆಯ ಬದುಕನ್ನು ನಿಯಂತ್ರಿಸುವುದನ್ನು ಕಥೆ ಪ್ರತಿನಿಧಿಸುತ್ತದೆ. ಇತ್ತೀಚೆಗೆ ಕೇಳಿಬರುತ್ತಿರುವ ಹೆಣ್ಣುಗಳ ಸಾಗಣೆ ಸಮಾಜದಲ್ಲಿ ಎಂದಿನಿಂದಲೋ ಇರುವುದನ್ನು ಕಥೆ ದಾಖಲಿಸುತ್ತದೆ.

ಹಿಂದು-ಕ್ರಿಶ್ಚಿಯನ್ ಸಮಸ್ಯೆ

ಎಂ.ಜಿ. ದೇಶಪಾಂಡೆಯವರ 'ಜಾತಿ ಅರಿಯದ ಪ್ರೀತಿ' ಕಥೆ ಅಂತರ್ ಜಾತಿಯ ವಿವಾಹವನ್ನು ವಸ್ತುವಾಗಿಸಿಕೊಂಡಿದೆ.

ರಮಾ ಜಾನ್‌ಸನ್‌ನನ್ನು ಪ್ರೀತಿಸಿ ತಂದೆಗೆ ಹೇಳಲಾಗದೆ ತನ್ನ ಡೈರಿಯಲ್ಲಿ ಬರೆದಿರುತ್ತಾಳೆ. ಏನನ್ನೋ ಹುಡುಕಲು ಹೋಗಿ ಅದನ್ನು ಗಮನಿಸಿದ ಗುರುರಾಯರು ಈ ಸಂಬಂಧವನ್ನು ನಿರಾಕರಿಸುತ್ತಾರೆ. ರಮಾ ಬೇರೆ ವಿವಾಹವಾಗಲೊಪ್ಪದೆ ನೀರಸವಾಗಿ ದಿನಕಳೆಯ ತೊಡಗಿದಾಗ ಮಗಳ ಸ್ಥಿತಿಯನ್ನು ನೋಡಲಾಗದೆ ರಾಯರು ಸ್ವತಃ ಜಾನಸನ್‌ನನ್ನು ಹುಡಕಿ ಕರೆತರುತ್ತಾರೆ.

ಮನೆತನದ ಮರ್ಯಾದೆಯೆ ಅತಿಮುಖ್ಯವೆಂದು ಭಾವಿಸಿ ರಮಾಳ ಅಂತರ್‌ಜಾತಿಯ ವಿವಾಹವನ್ನು ನಿರಾಕರಿಸಿದ್ದ ರಾಯರು ಅವಳ ಪ್ರಬಲ ಇಚ್ಛಾಶಕ್ತಿ ಹಾಗೂ ಪ್ರೀತಿಗೆ ಮಣಿಯುತ್ತಾರೆ. ಅಂತರ್‌ಜಾತಿಯ ಪ್ರೇಮಿಗಳಲ್ಲಿ ತಾಳ್ಮೆ ಹಾಗೂ ಮನೆಯವರನ್ನು ಒಲಿಸುವ ಜಾಣ್ಮೆಗಳಿದ್ದಾಗ ಅವರ ಪ್ರೇಮ ಯಶಸ್ವಿಯಾಗುತ್ತದೆ. ಮನೆಯವರೊಂದಿಗಿನ ಸಂಬಂಧ ಆತ್ಮೀಯವಾಗಿದ್ದಾಗ ಅವರನ್ನು ಒಪ್ಪಿಸುವುದು ಸುಲಭ ಎಂಬುದನ್ನು ಕಥೆ ಪ್ರತಿಪಾದಿಸುತ್ತದೆ. ರಮಾಳ ಬದುಕು ಅವಳ ತಾಳ್ಮೆ ಬುದ್ಧಿವಂತಿಕೆಯಿಂದ ಅವಳಿಷ್ಟದಂತೆ ರೂಪಗೊಳ್ಳುತ್ತದೆ.

ಹೀಗೆ ಜಾತಿ ಕಟ್ಟುಪಾಡಿನ ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಅಂತರ್‌ಜಾತಿಯ ವಿವಾಹಗಳು ಸುಲಭಸಾಧ್ಯವಲ್ಲ ಎಂಬುದನ್ನು ಕಥನ ಸಾಹಿತ್ಯ ಚಿತ್ರಿಸಿದೆ. ಮುಸ್ಲೀಂ ಯುವತಿ ಗೋಹರ್‌ಜಾನ್ ಹಿಂದೂ ಯುವಕನನ್ನು ಪ್ರೀತಿಸಿದಾಗ ಮೂಲಭೂತವಾದಿಗಳು 'ಕೊಲೆ'ಯಂಥ ಜೀವವಿರೋಧಿ ಕಾರ್ಯಕ್ಕೈಗೊಂಡು ಗೋಹರಳ ಬದುಕನ್ನು ನರಕವಾಗಿಸುತ್ತಾರೆ. ದಲಿತ ಮಹಿಳೆ ಗಂಗಿ ಬಸವಿಯಾಗಲೊಲ್ಲದೇ ಮದುವೆಯಾಗಿಯೂ ಮೋಸಕ್ಕೊಳಗಾಗುತ್ತಾಳೆ. ರಮಾ ಹಾಗೂ ಮಹಾದೇವಿಯರು ತಮ್ಮ ಗಟ್ಟಿನಿರ್ಧಾರದಿಂದ ಮನೆಯವರನ್ನು ಒಪ್ಪಿಸುವಲ್ಲಿ ಸಮರ್ಥರಾಗುತ್ತಾರೆ.

ಪ್ರೇಮ ವಿವಾಹ

ಪ್ರೇಮವಿವಾಹಗಳು ಮಹಿಳಾ ಶೋಷಣೆಯನ್ನು ಕಡಿಮೆಯಾಗಿಸಬಹುದೆಂದು ವಿದ್ವಾಂಸರು ಭಾವಿಸಿದ್ದಾರೆ. ಆದರೆ ಶೋಷಣೆಯ ಹೊಸ ಹೊಸ ಸಾಧ್ಯತೆಗಳೂ ಉದಿಸುತ್ತಲೇ ಇರುತ್ತವೆ. ಶೋಷಣೆಗೊಂದು ನೆಪವನ್ನು ಹುಡುಕಲಾಗುತ್ತದೆ. ಆಷ್ಟೇ ಶೋಷಣೆಯೆಂಬುದು ಅಧಿಕಾರ ಸ್ಥಾನದಲ್ಲಿರುವ ವ್ಯಕ್ತಿಯ ಮನಸ್ಸಿನಲ್ಲಿ ನೆಲೆಗೊಂಡಿರುತ್ತದೆ. ತಾನು ಇರುವುದೇ ತನ್ನ ಆಧೀನದಲ್ಲಿರುವವರನ್ನು ಶೋಷಿಸಲು ಎಂಬಂಥ ರೀತಿಯಲ್ಲೇ ಅವರ ಮನಃಸ್ಥಿತಿ ರೂಪಗೊಂಡಿರುತ್ತದೆ. ತನ್ನ ಆಸೆಗಳಗನ್ನು ಯಾವುದೇ ರೀತಿಯಲ್ಲಿ ಪೂರ್ಣಗೊಳಿಸಿಕೊಳ್ಳಲು ಅಧಿಕಾರದಲ್ಲಿರುವ ಮನಸ್ಸು ಅದರಲ್ಲೂ ಪುರುಷಶಾಹಿಯ ಸಂಪೂರ್ಣ ಬೆಂಬಲವಿರುವವರು ಮಹಿಳೆಯನ್ನು ಹಲವು ವಿಧಗಳಲ್ಲಿ ಶೋಷಿಸುತ್ತಾರೆ. ಪ್ರೇಮವಿವಾಹವು ಅದಕ್ಕೆ ಹೊರತಲ್ಲ. ಹಣದ ದಾಹದ ಮುಂದೆ ಪ್ರೇಮ, ಸಂಬಂಧ ಗೌಣವಾಗುತ್ತದೆ. ಯಾವ ಶೀಲಕ್ಕಾಗಿ ಹೆಣ್ಣು ಶತ ಶತಮಾನಗಳಿಂದ ತಲೆದಂಡ ಕೊಡುತ್ತಾ ಬರಬೇಕಾಯಿತೋ ಅದೇ ಶೀಲವನ್ನು ತನ್ನ ಸ್ವಾರ್ಥ ಸಾಧನೆಗೆ ಬಳಸಿಕೊಂಡು ಕಂಪನಿಯ ಮಾಲೀಕರಾಗುವ ಉದ್ಯೋಗಕ್ಕೆ ಭರ್ತಿಹೊಂದುವ ತಮ್ಮ ಹವ್ಯಾಸಗಳನ್ನು ಪೂರ್ಣಗೊಳಿಸಿಕೊಳ್ಳುವ ಗಂಡಂದಿರೂ ಇದೇ ಸಮಾಜದಲ್ಲಿದ್ದಾರೆ.

ಗೀತಾ ನಾಗಭೂಷಣರ 'ಪರಿಳಿತಗಳು' ಕಾದಂಬರಿ ಬಾಲ್ಯದಿಂದಲೂ ಜೊತೆಯಲ್ಲಿ ಓದಿ ನಂತರ ಬೇರ್ಪಟ್ಟು ಪುನಃ ಉದ್ಯೋಗ ಕ್ಷೇತ್ರದಲ್ಲಿ ಒಂದೆಡೆ ಸೇರುವ ಸಾಗರ ಮತ್ತು ಸ್ಮಿತಾ ಪರಸ್ಪರ ಗಾಢವಾಗಿ ಪ್ರೀತಿಸಿದವರು. ವಿವಾಹವಾಗಿ ದಾಂಪತ್ಯ ಜೀವನದಲ್ಲೂ ಅಷ್ಟೇ ಅನ್ಯೋನ್ಯವಾಗಿದ್ದವರು. ಆದರೆ ದಿಢೀರ್ ಶ್ರೀಮಂತಿಕೆಯ ಆಮಿಷಕ್ಕೆ ಸಿಕ್ಕ ಸಾಗರ ತನ್ನ ಕಂಪನಿ ಮಾಲಿಕನ ಬೇಡಿಕೆಯಂತೆ ಸ್ಮಿತಾಳನ್ನು ಅವಳ ಅನುಮತಿಯನ್ನು ಕೇಳದೇ ಒಂದು ರಾತ್ರಿ ಕೊಡಲು ಸಿದ್ಧನಾಗುತ್ತಾನೆ. ಸ್ಮಿತಾಳ ಸ್ಮೃತಿತಪ್ಪಿಸಿ ಅವಳನ್ನು ಅರವಿಂದ ಅನುಭವಿಸುತ್ತಾನೆ. ಶರೀರ ಹೆಣ್ಣಿನದಾದರೂ ಅದನ್ನು ಬಳಸಿಕೊಳ್ಳುವ ಮೊದಲು ಅವಳ ಒಪ್ಪಿಗೆ ಪಡೆಯಬೇಕೆಂಬ ಯಾವುದೇ ನಿಯಮ ಪುರುಷ ಪ್ರಧಾನ ವ್ಯವಸ್ಥೆಯಲ್ಲಿಲ್ಲ. ಅವಳ ಶರೀರವಿರುವುದೇ ಪುರುಷ ಬಳಕೆಗೆ, ಅದು ಗಂಡನೆಂಬ ಪುರುಷ ಅಥವಾ ಗಂಡ ಸೂಚಿಸುವ ಪುರುಷ ಯಾರೂ ಆಗಬಹುದು ಅದಕ್ಕೆ ಹೊರತಾಗಿ ಅವಳೇನಾದರೂ ಸ್ವಇಚ್ಛೆಯಿಂದ ಪರಪುರುಷರನ್ನು ಕೂಡಿದರೆ ಅದು ವ್ಯಭಿಚಾರವಾಗುತ್ತದೆ. ಅದಕ್ಕೆ ಅವಳು ವ್ಯವಸ್ಥೆ ವಿಧಿಸುವ ಶಿಕ್ಷೆಗೆ ಸಿದ್ಧಳಾಗಬೇಕಾಗುತ್ತದೆ. ತನ್ನ ಪಾವಿತ್ರ್ಯ ಪರೀಕ್ಷೆಯಲ್ಲಿ ಯಶಸ್ವಿಯಾದರೆ ಮಾತ್ರ ಅವಳಿಗೆ ಬದುಕುವ ಅವಕಾಶ ಇಲ್ಲವಾದರೆ. ಜೀವಂತ ಚಿತೆಏರಬೇಕಾಗುತ್ತದೆ.

ಇಲ್ಲಿ ಸಾಗರ ತನ್ನ ಲಾಭಕ್ಕಾಗಿ ಹೆಂಡತಿಯನ್ನು ಗೆಳೆಯನಿಗೆ ಒಪ್ಪಿಸುತ್ತಾನೆ. ಅವನ ದೃಷ್ಟಿಯಲ್ಲಿ ಅದೊಂದು ಅಪರಾಧವೇ ಅಲ್ಲ. ಸಾಲದ್ದಕ್ಕೆ ಸ್ಮಿತಾ ಒಂದು ದಿನ ಗೆಳೆಯನೊಂದಿಗೆ ಕೂಡುವುದರಿಂದ ಕಳೆದುಕೊಂಡದ್ದೇನು ಎಂಬ ಭಂಡತನ. ಸಮಾಜದಲ್ಲಿಯ ಯಾವುದೇ ನಿಯಮ ಪುರುಷನ ಅನುಕೂಲಕ್ಕೆ ತಕ್ಕಂತೆ ರೂಪಿಸಲ್ಪಟ್ಟಿರುತ್ತದೆ. ಅವನ ಹಿತಾಸಕ್ತಿಯನ್ನು ಮಾತ್ರ ಒಳಗೊಂಡಿರುತ್ತದೆ. ನಿಯಮ ರೂಪಿಸುವ ಉಲ್ಲಂಘಿಸುವ ಸ್ವಾತಂತ್ರ ವೆರಡನ್ನು ವ್ಯವಸ್ಥೆ ಅವನಿಗೆ ನೀಡಿದೆ. ಮಹಿಳೆಗೆ ಇದಾವುದೂ ಅನ್ವಯವಾಗುವುದಿಲ್ಲ. ಅವಳು ತಾನೇ ಮಾಡಿದರೂ ಅವಳ ಮೇಲೆ ಇತರರು ಎಸಗಿದರೂ ಆ ಅಪರಾಧಕ್ಕೆ ಅವಳನ್ನೇ ಹೊಣೆಯಾಗಿಸಲಾಗುತ್ತದೆ.

ಪ್ರೇಮ ವಿವಾಹವೆಂದಾಗಲೂ ಅದು ಯಾರ ಪ್ರೇಮವೆಂಬುದು ಇಲ್ಲಿ ಮುಖ್ಯವಾಗುತ್ತದೆ. ಪರಸ್ಪರ ಪ್ರೇಮವಿದ್ದಾಗಲೂ ಗಂಡಿನ ಪ್ರೇಮಕ್ಕೆ ದೊರೆಯುವ ಪ್ರಾಶಸ್ತ್ಯ ಹೆಣ್ಣಿನದಕ್ಕೆ ದೊರೆತದ್ದು ವಿರಳ. ಬಹುಶಃ ಇಲ್ಲವೆಂದೇ ಕಾಣುತ್ತದೆ. ಹಾಗಾಗಿಯೇ ಪ್ರೇಮಿಸಿದಾಗಲೂ ಗಂಡು ಅವಳನ್ನು ಬಳಸಿಕೊಂಡದ್ದೇ ಹೆಚ್ಚು. ತನ್ನ ಕೀರ್ತಿ, ಪ್ರತಿಷ್ಠೆ ಸ್ವಾರ್ಥಗಳಲ್ಲದೇ ಹೆಣ್ಣಿಗೂ ತನ್ನಂತೆ ಬಯಕೆಗಳಿವೆ ಎಂಬುದರತ್ತ ಗಮನವಿರುವುದಿಲ್ಲ. ಮಹಿಳೆ ಪುರುಷ ಸ್ವಾರ್ಥಕ್ಕೆ ಬಲಿಯಾದದ್ದನ್ನು ಗೀತಾ ಸಶಕ್ತ ಕಥೆಯಾಗಿಸಿದ್ದಾರೆ. ಅರವಿಂದನ ಕಂಪನಿಯ ಪಾಲುದಾರನಾಗಲು ತನ್ನನ್ನು ಒಪ್ಪಿಸಿದ್ದನ್ನು ಸ್ಮಿತಾ ತೀವ್ರಾವಾಗಿ ವಿರೋಧಿಸುತ್ತಾಳೆ. ಸಾಗರನಿಂದ ದೂರವಾಗುತ್ತಾಳೆ ಇಡೀ ಆಯುಶ್ಯ ಒಂಟಿಯಾಗಿ ಕಳೆಯುತ್ತಾಳೆ. ಸಾಗರ ಅವಳನ್ನು ಒಲಿಸಿಕೊಳ್ಳುವ ಪ್ರಯತ್ನವನ್ನಾಗಲೀ ಪಶ್ಚತಾಪವನ್ನಾಗಲಿ ತೋರಿಸಿಕೊಳ್ಳುವುದಿಲ್ಲ. ಪುರುಷನಿಗಿರುವ ಹಲವು ಸವಲತ್ತುಗಳು ಅವನು ಒಂದೇ ಹೆಣ್ಣನ್ನು ಅವಲಂಬಿಸುವಂತೆ ಮಾಡುವುದಿಲ್ಲ. ಹೆಣ್ಣು ತಾನೇ ಸೋಲಬೇಕು. ಗಂಡು ಸೋಲುವುದು ಅವಮಾನಕಾರಿ ಎಂಬ ನಂಬುಗೆಯೂ ದೂರಾದ ಪತ್ನಿಯಿಂದ ದೂರವೇ ಆಗುವಂತೆ ಮಾಡುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಪತಿ–ಪತ್ನಿ ಸಾಮರಸ್ಯಕ್ಕಿಂತ ಪ್ರಧಾನ ಅಧೀನ ಸಂಬಂಧಗಳು ಬದುಕಿನ ವಿಘಟನೆಗೆ ಕಾರಣವಾಗುತ್ತದೆ.

ತನ್ನತನದ ಅರಿವಿಲ್ಲದಾಗ ಇವನ್ನೆಲ್ಲ ಮೂಕವಾಗಿ ಸಹಿಸಿದ ಹೆಣ್ಣು ಈಗ ಅರಿವನ್ನು ಪಡೆದಿದ್ದಾಳೆ. ಅದರಿಂದಾಗಿ ಪುರುಷ ನಿರೀಕ್ಷೆಯ ವಿಧೇಯತೆ ಅವಳಿಂದ ಸಿಗುವುದು ಸಾಧ್ಯವಾಗದೇ ಹೋಗುತ್ತದೆ. ಮುಗ್ಧತೆಯಲ್ಲಿ ಅನುಭವಿಸಿದರೂ ಅರಿವಿನಲ್ಲಿ ಎದುರುಗೊಂಡರೂ ಹಾನಿ ಅವಳಿಗೆ. ಸಾಗರ ಜೀವನದ ಕೊನೆಯಲ್ಲಿ ಪಶ್ಚಾತ್ತಾಪ ಪಟ್ಟರೂ ಅದರಿಂದ ಸ್ಮಿತಾಗೆ ಯಾವುದೇ ಲಾಭವಾಗದು. ಮಕ್ಕಳನ್ನು ಬೆಳಸಿ ನೆಲೆಕಾಣಿಸುವಲ್ಲಿ ಸ್ಮಿತಾ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುತ್ತಾಳೆ. ಹೆಣ್ಣಿಗೆ ಪುರುಷನ ಆಸರೆ ಅನಿವಾರ್ಯವಲ್ಲ. ಅದಿಲ್ಲದೆಯೂ ಅವಳು ಸಮರ್ಥವಾಗಿ ಬದುಕಬಲ್ಲಳೆಂಬ ಸ್ತ್ರೀವಾದಿ ದೃಷ್ಟಿಕೋನದಲ್ಲಿ ಕಥೆ ಹದವಾಗಿ ರೂಪಗೊಂಡಿದೆ.

ಮೋಸದ ಅನಾವರಣ :

ಮಲ್ಲಿಕಾರ್ಜುನ ಹಿರೇಮಠರ 'ಗುಡ್‌ಬೈ' ಕಥೆ ಹೆಣ್ಣು ಹೊಗಳಿಕೆಗೆ ಮರುಳಾಗಿ ಗಂಡಿನ ವಶವಾಗುತ್ತಾಳೆ ಎಂಬುದೊಂದು ಹುಸಿ ಕಲ್ಪನೆ ಎಂಬುದನ್ನು ನಿರೂಪಿಸುತ್ತದೆ. ಹೆಣ್ಣಿಗೆ ವ್ಯವಹಾರ ಜ್ಞಾನವಿರುವುದಿಲ್ಲ ಸದಾ ತನ್ನ ಸೌಂದರ್ಯದ ಕುರಿತು ಆಲೋಚಿಸುವ ಅವಳು ಹೊಗಳಿಕೆಗೆ ಸೋತು ಹೋಗುತ್ತಾಳೆ. ಗಂಡಿನ ಮುಖವಾಡದ ಹಿಂದಿನ ವಾಸ್ತವವನ್ನು ಅರಿಯದ ಮುಗ್ದೆ ಎಂಬಂಥ ನಂಬಿಕೆಗಳನ್ನು ಬುಡಮೇಲು ಮಾಡುವ ಹೆಣ್ಣನ್ನು ಈ ಕಥೆಯಲ್ಲಿ ಪ್ರತಿನಿಧಿಸಲಾಗಿದೆ.

ತಾನು ಅವಳನ್ನು ಪ್ರೇಮಿಸುತ್ತಿದ್ದೇನೆಂದು ಹೇಳುತ್ತಲೇ ದಿನಕ್ಕೊಂದು ಬಣ್ಣ ಬದಲಾಯಿಸುವ ಅವನಿಗೆ ಅವಳು 'ನಿನ್ನ ಪ್ರೇಮ ಭದ್ರವಾಗಿದ್ದೇ ಆಗಿದ್ರ ನೀನು ಎಂಥ ಪ್ರಸಂಗದಲ್ಲೂ ನನ್ನ ಮದುವೆಯಾಗಬೇಕು ಆದರೆ ನಿನ್ನ ರಮ್ಯೋತ್ಸಾಹದ ಮಾತುಗಳು ಒಂದು ಕಡೆ ಇನ್ನೊಂದೆಡೆ ಅತ್ಯಂತ ವ್ಯಾಪಾರಿ ತಂದೆ ತಾಯಿಗಳ ಮಾತುಗಳತ್ತ ಸೆಳೆತ ನಿನ್ನ ಅಳುಬುರುಕುತನ ನನಗೆ ಹಿಡಿಸುವುದಿಲ್ಲ. ಖರೇ ಹೇಳು ತಯಾರಿದ್ದಿ ನೀನು ಮದುವೆಯಾಗೊದಕ್ಕ ಬಂದದ್ದನ್ನು ಎದುರಿಸೊದಕ್ಕ'[೨೬] ಎಂದು ಕೇಳುವಲ್ಲಿ ಅವನಲ್ಲಿಯ ದಂದ್ವವನ್ನು ಎತ್ತಿಹೇಳಿ ಸ್ವಂತಿಕೆ ಇಲ್ಲದ ಅವನಿಗೆ ವಿದಾಯ ಹೇಳಿ ಹೋಗುತ್ತಾಳೆ.

ವಿವಾಹ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯವಹಾರವೆಂಬಂತಾಗಿ ಮಹಿಳೆಯ ಬದುಕಿನ ಹತ್ತು ಹಲವು ಸಮಸ್ಯೆಗಳಿಗೆ ಕಾರಣವಾಗಿದೆ. ಪ್ರೇಮವಿವಾಹಗಳೂ ಈ ಸಮಸ್ಯೆಗಳಿಗೆ ಸ್ವಲ್ಪ ಮಟ್ಟಿನ ಪರಿಹಾರವಾಗಬಹುದು ಎಂದು ಚಿಂತನೆ ನಡೆದಿರುವ ಸಂದರ್ಭದಲ್ಲಿ ಪ್ರೇಮವೂ ವ್ಯವಹಾರವಾಗಲು ಹೊರಟಾಗ ಎಚ್ಚೆತ್ತ ಸ್ತ್ರೀಪ್ರಜ್ಞೆ ಅದರಿಂದ ಪಾರಾಗುವುದನ್ನು ಕಥೆ ಸ್ತ್ರೀಪರ ನಿಲುವಿನಲ್ಲಿ ನಿರೂಪಿಸುತ್ತದೆ.

೪.೩.೩ ವಿಧವಾ ವಿವಾಹ

ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳಜಾತಿಗಳಲ್ಲಿ ವಿಧವೆಯಾದ ಮಹಿಳೆಗೆ 'ಕೂಡಿಕೆ ಅಥವಾ ಉಡುಕಿ' ಎಂಬ ಹೆಸರಲ್ಲಿ ಪುನರ್‌ವಿವಾಹದ ಅವಕಾಶವಿತ್ತು ಇಂದಿಗೂ ಇದೆ. ಆದರೆ ಮೇಲ್ಜಾತಿಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಸತಿಪದ್ಧತಿ ಜಾರಿಯಲ್ಲಿದ್ದು ಗಂಡನೊಂದಿಗೆ ಮಹಿಳೆ ಜೀವಂತ ಚಿತೆ ಏರಬೇಕಾಗಿತ್ತು. ಸಾಯಲೊಪ್ಪದವರನ್ನು ತಲೆಬೋಳಿಸಿ ವಿಕೃತಗೊಳಿಸಿ ನಿಷ್ಟುರದ ಬದುಕಿಗೆ ಕಟ್ಟಿಹಾಕಲಾಗುತ್ತಿತ್ತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟೀಷ್ ಆಡಳಿತಗಾರರಿಂದ ಪ್ರಶ್ನಿಸಲ್ಪಟ್ಟ ಸಂಗತಿ ಸುಧಾರಣಾ ಪ್ರಕ್ರಿಯೆಯಾಗಿ ವಿಧವಾ ವಿವಾಹದ ಕುರಿತು ಆಲೋಚಿಸುವಂತಾಯಿತು. ಪುರುಷ ಬೆಂಬಲವಿತ್ತಾಗಲೂ ಆರಂಭದಲ್ಲಿ ಸ್ವತಃ ಮಹಿಳೆಯರು ಈ ಅವಕಾಶ ಬಳಸಿಕೊಳ್ಳಲು ಹಿಂಜರಿದರು.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ವಿಧವಾ ವಿವಾಹವೇ ಸಮಸ್ಯೆಯಾದ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಜಯತೀರ್ಥ ರಾಜುಪುರೋಹಿತರ 'ಸಯಿದಾ ಸುಮತಿಯಾದಳು' ಕಥೆಯ ಸುಮತಿ, 'ಮುಂದೇನು' ಕಥೆಯ ಆನಂದಿದೇವಿ, ಬಾಲಚಂದ್ರ ಜಯಶೆಟ್ಟಿಯವರ 'ತುಂಗಾ' ಕಥೆಯ ತುಂಗಾ, 'ಉಡುಕಿ' ಕಥೆಯ ಶಿವಮ್ಮ, ಸಂಧ್ಯಾ ಹೊನಗುಂಟಿಕರ ಅವರ 'ತನಗೇಟುಕದಿದ್ದರೇನು' ಕಥೆಯ ಸುಧಾ, ಗೀತಾ, ಲಲಿತ ದೇಮಶೆಟ್ಟಿಯವರ 'ಮಮತೆಯ ಕೊಲೆ' ಕಥೆಯ ಚಂದ್ರಿ, ಯಶೋದಮ್ಮ ಸಿದ್ಧಬಟ್ಟೆಯವರ 'ಮಂಗಳಾ' ಕಥೆಯ ಮಂಗಳಾ ಮೊದಲಾದ ಮಹಿಳೆಯರು ವಿಧವಾ ವಿವಾಹಕ್ಕಾಗಿ ಹಂಬಲಿಸಿದ, ವಿಧವಾ ವಿವಾಹವೂ ಸಮಸ್ಯೆಯಾದ ಹಾಗೂ ವಿವಾಹವಾಗಲು ಪ್ರಯತ್ನಿಸುವ ಸಂಗತಿಗಳು ಕಥನ ಸಾಹಿತ್ಯದಲ್ಲಿ ಅನಾವರಣಗೊಂಡಿವೆ.

ಸಂಸ್ಕಾರಕ್ಕಾಗಿ ವಿವಾಹ

ಜಯತೀರ್ಥ ರಾಜಪುರೋಹಿತರ 'ಮುಂದೇನು' ಕಥೆಯ ವಸ್ತು ವಿಧವಾ ವಿವಾಹದ್ದು. ದೇಶ ವಿಭಜನೆಯ ಸಂದರ್ಭದಲ್ಲಿ ಕೋಮು ಗಲಭೆಯಲ್ಲಿ ಸಿಕ್ಕು ಆನಂದಿ ದೇವಿಯ ಗಂಡ ಅಸುನೀಗುತ್ತಾನೆ. ತಂದೆ ಕಾಲೀಚರಣ ಈಗಾಗಲೆ ಇಂಥ ಗಲಭೆಯಲ್ಲಿ ಹೆಂಡತಿ ಮಗನನ್ನು ಕಳೆದುಕೊಂಡು ನೊಂದವನು. ಮಗಳಿಗಾಗಿ ಬದುಕಿರುತ್ತಾನೆ. ಐದು ವರ್ಷದ ಮಗಳನ್ನು ತಂದೆ ತಾಯಿ ಎರಡೂ ತಾನೇ ಆಗಿ ಬೆಳೆಸಿ ನಿರಂಜನನೊಂದಿಗೆ ಮದುವೆಮಾಡಿ ನಿರಾಳವಾಗಿರುತ್ತಾನೆ. ಮಗಳಿಗಾಗಿ ತನ್ನೆಲ್ಲ ಆಸ್ತಿಯನ್ನು ಬಿಟ್ಟು ಭಾರತಕ್ಕೆ ಬಂದಿರುತ್ತಾನೆ. ಈಗ ಮಗಳ ಬದುಕೂ ಗೋಳಿನದಾದಾಗ ಎದೆಯೊಡೆದು ಸಾಯುತ್ತಾನೆ. ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತ ಗಲಭೆಯಲ್ಲಿ ತನ್ನ ಪ್ರೇಯಸಿಯನ್ನು ಕಳೆದುಕೊಂಡ ಭಾನು ಪ್ರಕಾಶ ಆನಂದಿದೇವಿಯನ್ನು ಮದುವೆಯಾಗುವ ಇಚ್ಛೆವ್ಯಕ್ತಪಡಿಸಿದಾಗ ತಿರಸ್ಕರಿಸಿದ್ದವಳು ತಂದೆಯ ಶವ

ಸಂಸ್ಕಾರಕ್ಕಾಗಿಯೇ ಅವನನ್ನು ವಿವಾಹವಾಗಲು ನಿರ್ಧರಿಸುತ್ತಾಳೆ. ವಿಶೇಷಾಧಿಕಾರ ಶವ ಸಂಸ್ಕಾರವನ್ನು ಆನಂದಿದೇವಿಯೆ ಮಾಡಬಹುದು. ಅದಕ್ಕೆ ತಮ್ಮದೇನೂ ಅಭ್ಯಂತರವಿಲ್ಲವೆಂದಾಗಲೂ ಸಂಪ್ರದಾಯ ಶೀಲೆಯಾದ ಅವಳು ಆ ಅವಕಾಶವನ್ನು ಭಾನುಪ್ರಕಾಶನಿಗೆ ನೀಡುತ್ತಾಳೆ. ಅಂಥ ಒಂದು ಅವಕಾಶವನ್ನು ಮಹಿಳೆಯೂ ಬಳಸಿಕೊಳ್ಳಬಹುದು ಎಂಬುದನ್ನು ರಾಜಪುರೋಹಿತರು ಐದು ದಶಕಗಳ ಹಿಂದೆಯೇ ಆಲೋಚಿಸಿರುವುದು ಅವರ ಪ್ರಗತಿಪರ ಮತ್ತು ಸ್ತ್ರೀ-ಸಮಾನತೆಯ ಚಿಂತನೆಗೆ ಸಾಕ್ಷಿಯಾಗಿ ಕಾಣುತ್ತದೆ.

ಸಾಂಪ್ರದಾಯಿಕ ಮನಃಸ್ಥಿತಿಯವಳಾಗಿ ರಾಜ ಪುರೋಹಿತರ ಆನಂದಿದೇವಿ ಚಿತ್ರಣಗೊಂಡಿದ್ದಾಳೆ. ತನ್ನ ಬದುಕನ್ನು ರೂಪಿಸಿಕೊಳ್ಳಲು ವಿವಾಹಕ್ಕೆ ಒಪ್ಪದವಳು ತಂದೆ ಶವಸಂಸ್ಕಾರಕ್ಕೆಂದು ಒಪ್ಪುವುದು ಕೂಡಾ ಸಾಂಪ್ರದಾಯಿಕ ನಂಬಿಕೆಯಿಂದಲೇ.

ರಾಷ್ಟ್ರೀಯವಾದಿ ಸಮಾಜ ಸುಧಾರಕರ ವಿಧವಾ ವಿವಾಹದ ಪರಿಕಲ್ಪನೆ ಸಾಕಾರಗೊಳ್ಳಬೇಕೆಂಬ ಆಶಯವನ್ನು ಕಥೆ ಒಳಗೊಂಡಿದೆ. ಮಹಿಳಾ ಬದುಕನ್ನು ಹಸನಾಗಿಸುವ ಒಂದು ಕ್ರಮವಾಗಿ ಇದನ್ನು ಭಾವಿಸಲಾಗಿದೆ.

ಅನುಕಂಪ ನಿರಾಕರಣೆ :

ವಿವಾಹಿತ ಮಹಿಳೆ ಸರ್ವಾಲಂಕಾರಭೂಷಿತೆಯಾಗಿರಬೇಕು. ಒಂದು ಕ್ಷಣವೂ ಮುತ್ತೈದೆಯ ಅಲಂಕಾರದಲ್ಲಿ ಕೊರತೆಯುಂಟಾಗಬಾರದು ಅದೇ ವಿಧವೆಯಾದವಳು ಗಂಡ ಸತ್ತೊಡನೆ ಅಲಂಕಾರವನ್ನು ವರ್ಜಿಸಬೇಕು. ಅವಳಿಗಿಷ್ಟವಿಲ್ಲದಿದ್ದರೂ ಒತ್ತಾಯ ಹೇರಲಾಗುತ್ತದೆ. ಗಂಡು ಒಮ್ಮೆ ಸತ್ತರೆ ಹೆಣ್ಣು ಜೀವನದ ಪ್ರತಿಕ್ಷಣ ಸಾಯುವಂತೆ ಮಾಡಲಾಗುತ್ತದೆ. ಅಲಂಕರಿಸಿಕೊಂಡ ಹೆಣ್ಣು ಆಕರ್ಷಣೆಯ ಕೇಂದ್ರವಾಗುತ್ತಾಳೆ. ಪರಪುರುಷರ ಕೆಟ್ಟ ದೃಷ್ಟಿಗೆ ಕಾರಣವಾಗುತ್ತಾಳೆ ಎಂದು ಅವಳ ಹಿತಚಿಂತಕರಂತೆ ಹೇಳಿದರೂ ವಿಧವೆಯನ್ನು ಅವಮಾನಿಸುವ ಹಾಗೂ ಸುಲಭವಾಗಿ ಗುರುತಿಸಿ ಬಳಸಿಕೊಳ್ಳುವ ಹುನ್ನಾರ ಕಂಡು ಬರುತ್ತದೆ. ಇಂಥ ತಂತ್ರಕ್ಕೊಳಪಡಲಿಚ್ಛಿಸದೇ ಮಹಿಳೆ ಸಾವಿಗೆ ಶರಣಾದರೂ ಸಾಯದೇ ಬದುಕಿ ವಿಧವಾ ವಿವಾಹವಾದುದನ್ನು ಬಾಲಚಂದ್ರ ಜಯಶಟ್ಟಿ ಕಥೆಯಾಗಿಸಿದ್ದಾರೆ.

ಬಾಲಚಂದ್ರ ಜಯಶೆಟ್ಟಿಯವರ 'ತುಂಗಾ' ಕಥೆ ಬ್ರಾಹ್ಮಣ ಸಮಾಜದ ವೈಧವ್ಯದ ಆಚರಣೆಯ ಕ್ರೌರ್ಯಕ್ಕೆ ಕೊರಳೊಡ್ಡದೆ. ಸಾವನ್ನು ಆಶ್ರಯಿಸಲು ಹೊರಟ ತುಂಗಾ ವಿಧವಾ ವಿವಾಹವಾಗಿ ಹೊಸ ಬದುಕಿಗೆ ಪ್ರವೇಶ ಪಡೆಯುವ ವಸ್ತುವುಳ್ಳದ್ದು.

ಭಾಲಚಂದ್ರ ಜಯಶೆಟ್ಟಿಯವರು ವಿಧವಾ ಜೀವನದ ಅಸಹನೀಯತೆಯನ್ನು ಹೊರಗಿನಿಂದಲೇ ಗುರುತಿಸಿ ಸಮಾನ ಮನಸ್ಕ ಸಂಗಾತಿ ದೊರೆತರೆ ವಿವಾಹ ವೈಧವ್ಯಕ್ಕೊಂದು ಪರಿಹಾರವೆಂಬುದನ್ನು ಪರಿಭಾವಿಸುತ್ತಾರೆ.

ಬ್ರಾಹ್ಮಣ ಸಾಮಾಜಿಕ ವ್ಯವಸ್ಥೆಯಲ್ಲಿ ಹುಟ್ಟಿ ತಿಳುವಳಿಕೆ ಮೂಡುವ ಮೊದಲೆ ವಿವಾಹ, ವೈಧವ್ಯಗಳೆರಡನ್ನು ಎದುರುಗೊಳ್ಳುವ ತುಂಗಾ ವಿಕಾರ ಸ್ವರೂಪದಲ್ಲಿ ಬದುಕಲಿಚ್ಛಿಸದೆ, ಸಾವಿಗೆ ಸಿದ್ಧಳಾದಾಗ ಅವಳನ್ನುಳಿಸಿ ವೀರಶೈವ ಮಠವೊಂದರಲ್ಲಿ ಆಶ್ರಯ ಒದಗಿಸುತ್ತಾನೆ ಡಾ. ಬಸಂತ. ಮಠಕ್ಕೆ ಬರುತ್ತಿದ್ದ ಶ್ರೀಕಾಂತ ತುಂಗಾಳ ಪೂರ್ವಾಪರಗಳನ್ನರಿಯದೆ ಅವಳ ನಡತೆಯನ್ನು ಮೆಚ್ಚಿ ಮದುವೆಯಾಗಲಿಚ್ಛಿಸುತ್ತಾನೆ. ಸ್ವಾಮಿಗಳೂ ತುಂಗಾಳಿಗೆ

ವಿವಾಹವಾಗಲು ಹೇಳುತ್ತಾರೆ. ತನ್ನ ಬಗೆಗಿನ ಕನಿಕರ ಇದಕ್ಕೆ ಕಾರಣವಾಗಿರಬಹುದೆಂದು ತುಂಗಾ 'ನನಗೆ ಒಬ್ಬರ ಕನಿಕರದ ಪ್ರೀತಿ ಬ್ಯಾಡ ಮುತ್ಯಾವ್ರ. ನಾ ಉಪಕಾರ ಮಾಡೇನಿ ಅನ್ನೋ ಭಾವನೆ ಅವರಲ್ಲಿ ಎಂದಾದ್ರೂ ಮೂಡಿದ್ರ ನನಗೆ ದೊಡ್ಡ ಅಘಾತ ಆಗ್ತದ'[13] ಎನ್ನುತ್ತಾಳೆ. ಅದಕ್ಕೆ ಶ್ರೀಕಾಂತ 'ನಾನು ಬದುಕಬೇಕು ಬದುಕಿಗೆ ಮಿಡಿಯಬೇಕು ಅನ್ನೋದೆ ನನ್ನ ಹಂಬಲ ಇದಕ್ಕೆ ತುಂಗಾ ಹೆಗಲುಕೊಟ್ಟು ನನ್ನ ಜೋಡಿ ಸಹಕರಿಸಬೇಕು'. ಎಂದು ಕೇಳುತ್ತಾನೆ. ಹೆಣ್ಣು-ಗಂಡು ಪರಸ್ಪರ ಸಹಕಾರಿಗಳಾದಾಗ ಜೀವನ ಸಮರಸವಾಗುತ್ತದೆ. ಹಾಗಲ್ಲದೆ ಪ್ರಧಾನತೆ ಅಧೀನತೆಗಳ ಅಂತರದಲ್ಲಿ ಸಾಗಿದರೆ ಅಧೀನರು ಕಷ್ಟಕ್ಕೀಡಾಗುತ್ತಾರೆ. ಮಾತ್ರವಲ್ಲ ಅದರ ಪ್ರಭಾವ ಪ್ರಧಾನರನ್ನು ತಟ್ಟಿಯೆ ತಟ್ಟುತ್ತದೆ.

'ಯವ್ವಾ ಮನಷ್ಯಾಗ ಸಹಜವಾದಂಥ ಪ್ರವೃತ್ತಿಯನ್ನು ಬಲವಂತವಾಗಿ ಹತ್ತಿಕ್ಕಲಾಕ ಪ್ರಯತ್ನ ಮಾಡಬ್ಯಾಡ. ಅದು ಸುಸಂಸ್ಕೃತವಾದ ಮರ್ಯಾದೆಯೊಳಗ ವ್ಯಕ್ತ ಆಗ್ತಿತ್ತು. ಅಂದ್ರ ಅದನ್ನು ಚಿವುಟ ಬ್ಯಾಡ ಯಾಕಂದ್ರ ಒಳಗ ಅದರ ಬೇರುಗಳು ಆಳಕ್ಕೆ ಇಳೀತಾ ಹೋಗ್ತಾವ. ಆದರ ಒಂದು ಮಾತು ಅದು ಸ್ವೈರಕ್ಕ ತಿರುಗದಾಂಗ ಕಾಳಜಿ ವಹಿಸಬೇಕಾಗಿದ್ದು ನಿನ್ನಂಥವ್ರ ಕರ್ತವ್ಯ ಅದ'[14] ಎಂದು ಹೇಳುವ ಚಿಟ್ಟಯ್ಯನ ಮಾತಿನಲ್ಲಿ ಪಿತೃ ಸಂಸ್ಕೃತಿಯ ನಿರೀಕ್ಷೆಯ ಅಂಶವೇ ಇದ್ದರೂ ಅಂತರ್‌ಜಾತಿಯ ಹಾಗೂ ವಿಧವಾ ವಿವಾಹ (ಸ್ತ್ರೀವಾದಿಗಳು ಇದನ್ನೊಂದು ಪರಿಹಾರವಾಗಿ ಭಾವಿಸಿಲ್ಲ.) ಮಾಡಿಸುವಲ್ಲಿ ಪ್ರಗತಿಪರ ನಿಲುವನ್ನು ಗುರುತಿಸಬಹುದಾಗಿದೆ. ವಿಧವೆಗೆ ವಿವಾಹವೇ ಪರಿಹಾರವಲ್ಲವಾದರೂ ಹೆಣ್ಣು-ಗಂಡಿನ ಪರಸ್ಪರ ಸಂಬಂಧದ ಬೆಳವಣಿಗೆಗೆ ಸಧ್ಯ ಸಮಾಜ ಭಾವಿಸಿದ ಪರಿಹಾರ ಅದಾಗಿದೆ. ವಿಧವಾ ವಿವಾಹ ಅಂತರ್‌ಜಾತಿ ವಿವಾಹಗಳು ಇಂದಿಗೂ ಸಾಮಾಜಿಕ ಮನ್ನಣೆಯನ್ನು ಪಡೆಯುವಲ್ಲಿ ಶ್ರಮಿಸಬೇಕಿರುವ ಸಂದರ್ಭದಲ್ಲಿ ಇದನ್ನು ಸಾಧಿಸುವುದು ಒಂದು ದೊಡ್ಡ ಸಾಧನೆ ಎಂದು ಭಾವಿಸಿ ಕಥೆಯಾಗಿಸಲಾಗಿದೆ. ವಿವಾಹವೇ ಒಂದು ಸಮಸ್ಯೆಯಾಗಿ ಆಲೋಚಿಸುವ ಮನಸ್ಥಿತಿ ಸಾಮಾಜಿಕ ನೆಲೆಯಲ್ಲಿ ಕಾಣಸಿಗದು.

ಆಧುನಿಕ ಚಿಂತನೆಯ ಪರಿಣಾಮ ಸುಶಿಕ್ಷಿತಳಾದ ಮೇಲ್ವರ್ಗದ ಮಹಿಳೆ ವಿಧವೆತನದಿಂದ ಹೊರಬರಲು ವಿವಾಹವಾಗುವ ಅಪೇಕ್ಷೆಯನ್ನು ವ್ಯಕ್ತಪಡಿಸಿದಾಗಲೂ ಸಾಂಪ್ರದಾಯಿಕ ಮನಸ್ಸುಗಳು ಸರಳವಾಗಿ ಒಪ್ಪಲಾರವು. ಕಾಲ ಪ್ರತಿಯೊಂದಕ್ಕೂ ಉತ್ತರವಾಗುತ್ತದೆ ಎಂಬಂತೆ ಈ ಹೊತ್ತು ವಿಧವಾವಿವಾಹ ಮೊದಲಿನಷ್ಟು ಕಷ್ಟದ್ದಾಗಿ ಉಳಿದಿಲ್ಲ.

ಸಹಜ ಸಂಗಾತಕ್ಕಾಗಿ

ಸಂಧ್ಯಾ ಹೊನಗುಂಟಿಕರರ 'ತನಗೇಟುಕದಿದ್ದರೇನು' ಕಥೆ ವೈಧವ್ಯದಿಂದ ನೀರಸವಾಗಿದ್ದ ಬದುಕನ್ನು ವಿಧವಾ ವಿವಾಹದ ಮೂಲಕ ಪುನಃ ಕಟ್ಟಿಕೊಳ್ಳುವುದಾಗಿದೆ. ಸುಧಾ ಮದುವೆಯಾದ ಒಂದೆರಡು ತಿಂಗಳಿಗೇ ಆ್ಯಕ್ಸಿಡೆಂಟ್‌ನಲ್ಲಿ ಗಂಡನನ್ನು ಕಳೆದುಕೊಂಡು ಅಣ್ಣನ ಮನೆಗೆ ಬರುತ್ತಾಳೆ. ತಂದೆ ತಾಯಿಗಳಿಲ್ಲದ ಅಣ್ಣ ತಂಗಿ, ಸೋದರ ಮಾವನ ಆಶ್ರಯದಲ್ಲಿ ಬೆಳೆದವರು. ಅಣ್ಣನ ಮದುವೆಯ ನಂತರ ಬೇರೆ ಮನೆ ಮಾಡಿದಾಗ ಅತ್ತಿಗೆ ನಾದಿನಿಯರು ಕೆಲ ದಿನ ಚನ್ನಾಗಿಯೆ ಇರುತ್ತಾರೆ. ಒಂದೆರಡು ಮಕ್ಕಳಾಗಿ ಸ್ಥಿತಿವಂತರಾದಾಗ ಸುಧಾಳ ಅತ್ತಿಗೆ ಮಡಿವಂತಳಾಗಿ, ಸುಧಾಳ ವೈಧವ್ಯವನ್ನು ಹೀನಾಯವಾಗಿ ಕಾಣತೊಡಗುತ್ತಾಳೆ. 'ಎಲ್ಲಾ ಬಿಟ್ಟು ನೀ ಯಾಕ ಹೂವಾ ತಂದಿಟ್ಟಿ? 'ನೀ ತಂದದ್ದು ದೇವರ ತಲಿಗಿಟ್ಟು ಪೂಜೆ ಮಾಡ್ಸಿ ಯಾವ ಪಾಪ ನಮಗ ಕಟ್ಟಬೇಕಂತ ಮಾಡಿದ್ಯವ್ವ'

'ಆಕೀಗಿ ಬುದ್ಧಿ ಇಲ್ಲಂದ್ರ ನಿಮ್ಗೂ ಇಲ್ಲೇನ್ರಿ? ಅಕಿ ಮುಟ್ಟದ್ದು ಪೂಜಾಕ ಹೆಂಗ ಬರ್ತಾವ. ನನ್ನ ಕರ್ಮ ಇಂತಾಕಿ ಸರಿ ಎಷ್ಟು ದಿನ ಅದನೋ' ಎನ್ನುವ, ನೌಕರಿ ಮದುವೆಗಾಗಿ ಮೋಹನ ಕೇಳಿದಾಗ ಸುಧಾಳನ್ನು ಎಳೆ ತಂದು

'ಅಕಿ ದರಿದ್ರದ ಹೆಣ್ಣು ಒಳಗಿಂದೊಳಗೇ ಇಂತ ಹಿಕಮತ್ ಮಾಡ್ಯಾಳ. ನಾಚಿಗಿ, ಶರ್ಮಾ, ಎಲ್ಲಾ ಬಿಟ್ಟಾಳ. ಕಾಲ ಬಿಟ್ಟು ಕತ್ತಿ ಹಂಗ ಕುಣಿಲಕತ್ತಾಳ. ನೌಕ್ರಿ ಮಾಡ್ತಾಳಂತ, ಲಗ್ನ ಆಗ್ತಾಳಂತ ಏನೇನು ಮಾಡಿ ಬೆಂಡಾಗತ್ತಾಳೆ'. ಎಂದು ಒದರಾಡಿ ಅವಳನ್ನು ಹೀಯಾಳಿಸುತ್ತಾಳೆ. ಪ್ರತಿಯೊಂದರಲ್ಲೂ ತಪ್ಪು ಹುಡುಕುವುದು ಸಿಡುಕುವುದು ಆರಂಭವಾಗುತ್ತದೆ. ಈ ಮಧ್ಯ ಅತ್ತಿಗೆಯ ತಮ್ಮ ದತ್ತುವಿಗೆ ವರ್ಗವಾಗಿ ಇವರ ಮನೆಗೆ ಬಂದಾಗ ಅವನ ಸಣ್ಣ ಪುಟ್ಟ ಕೆಲಸಗಳು ಸುಧಾಳ ಪಾಲಿಗೆ ಬಂದು, ಅವನ ನೋಟದಲ್ಲಿ ತನ್ನ ಬಾಳಿಗೊಂದು ನೆಲೆ ಕಾಣಲು ಯತ್ನಿಸುತ್ತಾಳೆ. ಆದರೆ ದತ್ತು ಬೇರೆ ಹುಡುಗಿಯೊಂದಿಗೆ ವಿವಾಹವಾದಾಗ ತನ್ನ ಭಾವನೆ ತಪ್ಪೆಂದು ಗ್ರಹಿಸುತ್ತಾಳೆ. ಎದುರು ಮನೆಯ ಮೋಹನ ಇವಳತ್ತ ಆಸಕ್ತನಾಗಿ, ಅವಳ ಶಿಕ್ಷಣ ಮುಂದುವರಿಸುವ ಗಂಡನ ನೌಕರಿಯನ್ನು ಅವಳಿಗೆ ಕೊಡಿಸುವ ಪ್ರಸ್ತಾಪ ಮಾಡುತ್ತಾನೆ. ಅವನು ಒಪ್ಪದಿದ್ದಾಗ ತಾನು ಸುಧಾಳನ್ನು ಮದುವೆಯಾಗುವುದಾಗಿ ಕೇಳುತ್ತಾನೆ. ಸುಧಾಳಿಗೂ ಮೋಹನನನ್ನು ಮದುವೆಯಾಗುವ ಮನಸ್ಸಿರುತ್ತದೆ. ಅಣ್ಣ ಅತ್ತಿಗೆಯ ನಿರಾಕರಣೆಯಿಂದ ವಿಧಿಯಿಲ್ಲದೆ ಸುಮ್ಮನಾಗುತ್ತಾಳೆ. ಆದರೆ ಗುಣ ಭಾವಜಿಯ ಸಹಕಾರದಿಂದ ಗಂಡನ ನೌಕರಿ ಪಡೆದು ಅತ್ತಿಗೆಯ ಕಾಟದಿಂದ ಮುಕ್ತಳಾಗುತ್ತಾಳೆ.

ವಿಧವೆಯರಾಗಿ ತವರು ಸೇರುವ ಅನೇಕ ಮಹಿಳೆಯರ ಸ್ಥಿತಿ ಬಿಟ್ಟಿ ಆಳಿನಂತಾಗುತ್ತದೆ. ದಿನವಡೀ ಕೆಲಸ ಮಾಡಿದರೂ ಪರಿಗಣನೆಗೊಳ್ಳದೆ, ಅವಳೊಂದು ಹೊರೆ ಎಂಬಂತೆ ಕಾಣಲಾಗುವುದರಿಂದ ಅವಳ ಬದುಕು ನಿತ್ಯ ಗೋಳಿನದಾಗುತ್ತದೆಂಬುದನ್ನು ಸುಧಾಳ ಪಾತ್ರ ಪ್ರತಿನಿಧಿಸುತ್ತದೆ.

ತನ್ನದೇ ಸ್ಥಿತಿ ಅಣ್ಣನ ಮಗಳು ಗೀತಾಳಿಗೆ ಒದಗಿದಾಗ ಸುಧಾ ಅವಳನ್ನು ಅತ್ಯಂತ ಸಹಾನುಭೂತಿಯಿಂದ ಕಾಣುತ್ತಾಳೆ. ಬಿಂದಿ ಬಳೆ ಕ್ಲಿಪ್ಪುಗೆಜ್ಜೆ ತಂದು ಕೊಟ್ಟಾಗ, ತನ್ನ ಸಂದರ್ಭದಲ್ಲಿ ವಿರೋಧಿಸಿದ್ದ ಅತ್ತಿಗೆ ಈಗ ಕಂಡೂ ಕಾಣದಂತಿರುತ್ತಾಳೆ. ಸುಧಾಳ ಒತ್ತಾಸೆಯಲ್ಲಿ ಗೀತಾಳ ಓದು ಮುಂದುವರಿಯುತ್ತದೆ. ಅವಳು ವಿಮಾ ಉದ್ಯೋಗಿಯನ್ನು ಪ್ರೀತಿಸುತ್ತಾಳೆಂದು ತಿಳಿದಾಗ ಸುಧಾಳನ್ನು ಕರೆಸಿದ ಅವಳಣ್ಣ ನಿರ್ಣಯವನ್ನು ಅವಳಿಗೇ ಬಿಡುತ್ತಾನೆ. ಸುಧಾ ಗೀತಾಳನ್ನು ತನ್ನೊಂದಿಗೆ ಕರೆದುಕೊಂಡು ಹೋಗಿ ರಿಜಿಸ್ಟರ್ ಮದುವೆ ಮಾಡಿಸುತ್ತಾಳೆ.

ಆರ್ಥಿಕ ಸಬಲತೆ ಇಲ್ಲದಾಗ ತನ್ನ ಬದುಕಿನ ಅವಕಾಶಗಳಿಂದ ವಂಚಿತಳಾದ ಸುಧಾ ಕೆಲಸಕ್ಕೆ ಸೇರುವ ಮೂಲಕ ತನ್ನ ಬದುಕಿನ ನೆಲೆಯನ್ನು ಕಂಡು ಕೊಂಡುದಲ್ಲದೆ, ಅಣ್ಣನ ಮಗಳ ಬದುಕಿನ ನಿರ್ಣಾಯಕ ಹಂತದಲ್ಲಿ ನಿರ್ಧಾರಕ ಸ್ಥಾನದಲ್ಲಿ ನಿಲ್ಲುವ ಸಾಮರ್ಥ್ಯ ಪಡೆಯುತ್ತಾಳೆ.

ತನ್ನ ಬದುಕಿನ ನಿರ್ಧಾರ ತಾನೇ ಕೈಗೊಳ್ಳುವಂತಾದಾಗ ಹೆಣ್ಣಿನ ಬದುಕು ಸುಗಮವಾಗುತ್ತದೆ. ಎಂಬುದನ್ನು ಕಥೆ ಮನಗಾಣಿಸುತ್ತದೆ. ಹಾಗಲ್ಲದೆ ಹೆಣ್ಣಿನ ವಿವೇಚನಾ ಸಾಮರ್ಥ್ಯ ಬೆಳೆಯುವ ಪೂರ್ವದಲ್ಲೆ ಅವಳ ಕುರಿತ ನಿರ್ಧಾರಗಳನ್ನು ಇತರರು ತೆಗೆದುಕೊಳ್ಳುವುದರಿಂದ ದುರಂತವೇ ಹೆಚ್ಚಾಗುವ ಸಂಭವನೀಯತೆಯನ್ನು ಕಥೆ ಧ್ವನಿಸುತ್ತದೆ.

ಲೈಂಗಿಕ ಜೀವನ ಭದ್ರತೆಗೆ :

ಕೆಳವರ್ಗಗಳಲ್ಲಿ ಕೂಡಾವಳಿ (ವಿಧವಾ ವಿವಾಹ) ಏನೋ ನಡೆಯುತ್ತದೆ. ಆದರೆ ಮಕ್ಕಳಿರುವ ವಿಧವೆಯ ಕೂಡಾವಳಿ ಆಗುವುದು ಅಪರೂಪವೆ ಯಾರದೋ ಮಗುವನ್ನು ತನ್ನದೆಂದು ಒಪ್ಪುವ ಉದಾರತೆ ಪುರುಷ ಮನಸ್ಸಿಗೆ ಅಸಾಧ್ಯ. ಅದೆ ಹೆಣ್ಣು ಮಾತ್ರ ಬಹುಪತ್ನಿತ್ವದಲ್ಲಿ ಪುರುಷನ ಮಕ್ಕಳನ್ನು ತನ್ನ ಮಕ್ಕಳೆಂದು ಪಾಲಿಸಬೇಕೆಂದು ವಿಧಿಸುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಹೆಂಡತಿ ಸತ್ತ ಪುರುಷನಿಗೆ ಮಕ್ಕಳಿದ್ದರೆ, ಮಕ್ಕಳನ್ನು ನೋಡಿಕೊಳ್ಳಲಾದರೂ ಮದುವೆಯಾಗು ಎಂದು ಒತ್ತಾಯಿಸಲಾಗುತ್ತದೆ. ಅದೆ ಗಂಡ ಸತ್ತ ಹೆಣ್ಣಿಗೆ ಮಕ್ಕಳಿದ್ದರೆ, ಮಕ್ಕಳ ಮಾರಿ ನೋಡಿ ಬದುಕು ಎಂದು ಉಪದೇಶಿಸಲಾಗುತ್ತದೆ. ವಿವಾಹ ಸಂಸ್ಥೆ ಎಲ್ಲಾ ಬಗೆಯಲ್ಲೂ ಪುರುಷ ಹಿತಾಸಕ್ತಿಯನ್ನು ರಕ್ಷಿಸುವುದಾಗಿದೆ. ಸಾಮಾಜಿಕ ನಿಯಮಗಳು ನಂಬಿಕೆಗಳು ಮುಗ್ಧ ಚಂದ್ರಿ ಅಪರಾಧಿಯಾಗಲು ಕಾರಣವಾಗುತ್ತವೆ.

'ಮಮತೆಯ ಕೊಲೆ' ತಾಯಿಯೆ ಕೊಲೆಪಾತಕಿಯಾಗುವ ವಸ್ತುವಿನ ಲಲಿತಾ ದೇಮಶೆಟ್ಟಿಯವರ ಕಥೆ, ಮನೆಗಳಲ್ಲಿ ಮುಸುರೆ ಕೆಲಸ ಮಾಡುವ ಚಂದ್ರಿಯ ಗಂಡ ಚಂದು ಕುಡಿದು ಸತ್ತಾಗ ಚಂದ್ರಿಗೆ. ಇಪ್ಪತ್ತೆರಡರ ಹರೆಯ ಒಂಟಿ ಬದುಕು ಅಸಾಧ್ಯವೆನಿಸಿ ಕೂಡಾವಳಿಗೆ ಸಿದ್ಧಳಾದಾಗ, ಅವಳ ಹನ್ನೊಂದು ತಿಂಗಳ ಚಂದದ ಮಗು ಬೆಳ್ಳಿಯನ್ನು ಹಮಾಲ ಹನುಮ ಬಿಟ್ಟು ಬಂದರೆ ಮಾತ್ರ ಕೂಡಾವಳಿಯಾಗುವುದಾಗಿ ಹೇಳುತ್ತಾನೆ. ಎಲ್ಲಿ ಬಿಡುವುದೆಂದು ತಿಳಿಯದ ಚಂದ್ರಿಗೆ ಯಾರಿಗಾದರೂ ಸಾಕಲು ಅಥವಾ ಮಾರಲು ಕೊಡುವಂತೆ ಹೇಳುತ್ತಾನೆ. ಮಗುವನ್ನು ಕೊಂಡವರು ಹಣಕ್ಕಾಗಿ ಭಿಕ್ಷೆ ಬೇಡಿಸಲು ಮಗುವಿನ ಕೈಕಾಲು ಮುರಿದು ಅಂಗವಿಕಲಳಾಗಿ ಮಾಡುತ್ತಾರೆ. ಇಲ್ಲವೇ ವೇಶ್ಯೆಯಾಗಿ ಮಾಡುತ್ತಾರೆಂದು ಹೆದರಿದ ಚಂದ್ರಿ ಮಗುವನ್ನು ಸಾಕಿಕೊಳ್ಳುವಂತೆ ಮಕ್ಕಳಿಲ್ಲದ ತನ್ನ ಮನೆಯೊಡತಿಗೆ ಕೇಳುತ್ತಾಳೆ. ಅವಳೂ ಸಿದ್ಧವಾಗದೆ ಇದ್ದಾಗ, ಒಂಟಿ ಬಾಳು ಬಾಳಲಾಗದೆ, ವೇಶ್ಯಯಾಗಲು ಮನಸ್ಸೊಪ್ಪದೆ ತಾನೆ ಬೆಳ್ಳಿಯನ್ನು ಕೊಲ್ಲುತ್ತಾಳೆ.

'ಅವ್ವಾರ.. ನಮ್ಮಂಥಾ ಕೆಲ್ಸದೋರಿಗೆ ಬಡೂರಿಗೆ ಈ ಮೈಸುಖಾ ಒಂದ್ಬಟ್ರೆ, ಬ್ಯಾರೆ ಯಾಂವ ಸುಖಾ ಐತೆ? ಮನಿಐತ್ಯಾ ಮಠಾಐತ್ಯಾ ಊರಾಗ ಮನಿಯಿಲ್ಲಾ ಅಡವ್ಯಾಗ್ ಒಲಾಯಿಲ್ಲಾ. ಉಡ್ಬೇಕಂದ್ರೆ ಮೈಮುಚ್ಚಾಕ ದಟ್ಟಿಲ್ಲಾ ಚಂಜೀಗ್ತಿಂದ್ರ ಮುಂಜಾನೆಗಿಲ್ಲ. ಮುಂಜಾನ್ತಿಂದ್ರ, ಚಂಜೀಗಿಲ್ಲ' ಆದ್ರs ಬದಕಾ ಅಂಬ್ಲಾಐತೆ ಈಗ ನೀವಾ ಏಳ್ರೀ ನಾವ್ ಯ್ಯಾಂಗ್ ಬದುಕ್ಬೇಕು? ಖರೇವಂದ್ರೂವೆ ನಾವ್ ಬದ್ಕಿದ್ದೂ ಮೈ ಸುಖಕ್ಕಂತನ. ನಮ್ಗೆ ಸಿಕ್ಕಾದು ಆಸ್ಗೆ ಸುಖಾ ಒಂದs. ಈssಗ ಬೆಳ್ಳಿ ಅವ್ನಂತ ಅದ್ಕೂ ಕಲ್ಲು. ಈಗ್ ನೀssವ ಏಳ್ರಿ ನಮ್ ಬಾಳೇವು ಒಂದು ಬಾಳೇವಾ?' ಎನ್ನುವ ಚಂದ್ರಿಯ ಮಾತಿನಲ್ಲಿ ಮಗುವಿನ ಕೊಲೆಯ ಹಿಂದಿನ ಒತ್ತಡ ಎಂಥದಾಗಿತ್ತು ಎಂಬುದು ತಿಳಿಯುತ್ತದೆ. ಹನುಮ ಮಗುವನ್ನು ಒಪ್ಪಿಕೊಂಡಿದ್ದರೆ ಚಂದ್ರಿ ಕೊಲೆಗಾರ್ತಿಯಾಗಬೇಕಾಗಿರಲಿಲ್ಲ. ಕಿರಿ ವಯಸ್ಸು ಯವ್ವನದ ಕಾಮನೆಯ ಸೆಳೆತ, ಬೇರೆ ಕನಸುಗಳಿಲ್ಲದ ನಿತ್ಯಾವರ್ತನದ ದುಡಿಮೆ, ಜೀವನಕ್ಕೆ ಸಿಗುವ ಅಲ್ಪ ಸುಖಕ್ಕೂ ಅಡ್ಡವೆಂದು ಭಾವಿಸಿ ಮಗುವನ್ನು ನಿಷ್ಕರುಣೆಯಿಂದ ಕೊಲ್ಲುವಂತೆ ಮಾಡುತ್ತದೆ. ತಾಯ್ತನ ತ್ಯಾಗಗಳು ಹೆಣ್ಣಿನ ಸಹಜ ಗುಣಗಳೆಂದು ಪಿತೃ ಸಂಸ್ಕೃತಿ ಹುಟ್ಟು ಹಾಕಿದ ಮೌಲ್ಯಗಳು ಬದುಕಿನ ವಾಸ್ತವದೆದುರು ನೆಲೆತಪ್ಪುತ್ತವೆ. ಮೂಲಭೂತ ಬದುಕೇ ಭದ್ರತೆ ಕಾಣದ ಸಂದರ್ಭದಲ್ಲಿ ಮೌಲ್ಯ ಚಿಂತನೆ ಹಸಿದವರಿಗೆ ತತ್ವಜ್ಞಾನ ಹೇಳಿದಂತೆ ವ್ಯರ್ಥ ಎಂಬುದನ್ನು ಕಥೆ ವಿವರಿಸುತ್ತದೆ.

ವಿಧವಾ ವಿವಾಹ, ಪುನರ್ ವಿವಾಹ ಅಥವಾ ವಿವಾಹ ಮಹಿಳೆಗೆ ಅನಿವಾರ್ಯವೆ ಎಂಬ ಚಿಂತನಾ ಕ್ರಮಗಳು ಆರಂಭವಾಗಿದ್ದರೂ, ಶಿಕ್ಷಣ ವಂಚಿತ ಪ್ರಗತಿಯಿಂದ ದೂರ, ಸಂಪ್ರದಾಯಶೀಲ ಪ್ರವೃತ್ತಿಯ ಹೈದರಾಬಾದ್ ಕರ್ನಾಟಕ ಸಾಮಾಜಿಕ ವ್ಯವಸ್ಥೆಯಲ್ಲಿ ವಿಧವಾ ವಿವಾಹ ಅಥವಾ ಪುನರ್‌ವಿವಾಹಕ್ಕಾಗಿ ಪ್ರಯತ್ನಿಸುವುದೇ ಸುಧಾರಣಾವಾದಿ ಧೋರಣೆಯಾಗಿ ಕಥನ ಸಾಹಿತ್ಯದಲ್ಲಿ ಮೂಡಿ ಬಂದಿದೆ. ಸಾಹಿತ್ಯ ಆಗಬೇಕು ಎಂದು ನಿರೀಕ್ಷಿಸುವ ಸಂಗತಿಗಳು ಇನ್ನೂ ಸಮಾಜದಲ್ಲಿ ಆಗುತ್ತಿಲ್ಲ ಎಂಬುದನ್ನೆ ಸ್ಪಷ್ಟಪಡಿಸುತ್ತದೆ. ವಿಧವಾ ವಿವಾಹ ಇಂದಿಗೂ ಸಹಜವಾಗಿ ನಡೆಯುತ್ತಿಲ್ಲ. ನಡೆಯುವಂತಾಗಬೇಕೆಂಬ ಆಶಯ ಕಥನ ಸಾಹಿತ್ಯದಲ್ಲಿ ವ್ಯಕ್ತವಾಗಿದೆ.

ಕೂಡಿಕೆಗೆ ಅಡ್ಡಿಯಾದ ಮಗು :

ಮೇಲ್ವರ್ಗದ ಮಹಿಳೆ ಒಮ್ಮೆ ವಿವಾಹ ಸಂಸ್ಥೆಯನ್ನು ಪ್ರವೇಶಿಸಿದರೆ ಯಾವುದೇ ಕಾರಣಕ್ಕೂ ಹೊರಬರುವಂತಿಲ್ಲ. ಇತ್ತೀಚಿನವರೆಗೆ ವಿಚ್ಛೇದನ ಪಡೆಯುವ ಅವಕಾಶವೂ ಅವಳಿಗಿರಲಿಲ್ಲ. ವಿಧವೆಯಾದವಳು ವೈಯಕ್ತಿಕ ಸುಖ ನೆಮ್ಮದಿಯನ್ನು ತ್ಯಜಿಸಿ, ಒಪ್ಪತ್ತು ಉಂಡು ವಿರಾಗಿಯಂತೆ ಬದುಕಬೇಕೆಂಬದು ಸಾಂಸ್ಕೃತಿಕ ನಿಯಮ. ಹಬ್ಬ ಹರಿದಿನಗಳಲ್ಲಿ ಭಾಗವಹಿಸಲಾಗದೆ, ಮಂಗಳ ಕಾರ್ಯಗಳಿಂದ ದೂರವಿರಿಸಲ್ಪಟ್ಟು ಅವಮಾನಿತಳಾಗುತ್ತಾಳೆ. ಜೀವ ಹಿಡಿಯಾಗಿ ಮಾಡಿಕೊಂಡು ಬದುಕಬೇಕು. ಬಹು ಸಂಖ್ಯಾತ ವಿಧವೆಯರು ತಪ್ಪಿ ಪುನರ್‌ವಿವಾಹ ಅಥವಾ ಅನ್ಯ ಸಂಬಂಧಗಳಿಗೆ ಮಹಿಳೆ ಮುಂದಾದರೆ ಅವಳನ್ನು ತಡೆಯುವ ಹರ ಸಾಹಸ ಎಲ್ಲ ಮೂಲಗಳಿಂದ ನಡೆಯುತ್ತದೆ. ಇಂಥದನೆಲ್ಲ ಎದುರಿಸಿ ಮುಂದುವರಿಯುವುದೇ ಬೇಡವೆಂದು ಭಾವಿಸಿ ತಮ್ಮ ಸ್ಥಿತಿಗೆ ಹೊಂದಿಕೊಳ್ಳುವವರೆ ಹೆಚ್ಚು. ಆದರೂ ಕೆಲವರು ಇಂಥ ಸಾಹಸಕ್ಕೆ ಮುಂದಾಗಿ ಸಾಮಾಜಿಕ ವಿರೋಧವನ್ನು ಎದುರಿಸುವುದು ಇದೆ. ಬಾಲಚಂದ್ರ ಜಯಶಟ್ಟಿಯವರ 'ಉಡುಕಿ' ಕಥೆ ಒಬ್ಬ ಮಗನಿದ್ದೂ ಉಡುಕಿ ವಿವಾಹ ಮಾಡಿಕೊಂಡ ಶಿವಮ್ಮನ ಇಕ್ಕಟ್ಟಿನ ಸ್ಥಿತಿಯನ್ನು ಮನಗಾಣಿಸುತ್ತದೆ.

ಖಂಡಪ್ಪ ಶಿವಮ್ಮ ಪರಸ್ಪರ ಆಕರ್ಷಿತರಾದಾಗ ಶಿವಮ್ಮನ ತಾಯಿ 'ಉಡುಕಿ' ವಿವಾಹವನ್ನು ತನ್ನ ಗಂಡು ಮಕ್ಕಳನ್ನು ವಿಚಾರಿಸದೆ ಮಾಡುತ್ತಾಳೆ. ಉಡಿಕಿಯ ನಂತರ ಖಂಡಪ್ಪನ ಮನೆಗೆ ಶಿವಮ್ಮ ತನ್ನ ಮೊದಲ ಮಗುವನ್ನು ತರಬಾರದೆಂದು ಖಂಡಪ್ಪ ಪಂಚರ ಎದುರು ಹೇಳುತ್ತಾನೆ. 'ನಾ ಹೆಣ್ಣಿನ ಜೊತೆಗೆ ಉಡಕಿ ಮಾಡಿಕೊಂಡೇನಿ. ಪೈಲಾ ಗಂಡಗ ಹಡದ ಅಕೀ ಪ್ವಾರನ ಜೊತೆಗಲ್ಲ'[೩೨] ಎಂದು ವಾದಿಸುತ್ತಾನೆ. ಶಿವಮ್ಮನ ತಾಯಿ ಕೂಸವ್ವ 'ಈ ಹಸುಗೂಸಿನ ಕಡೀಂದ ನಿನಗೇನೂ ಕೊಂಕ ಆಗದಂಗ ನಾ ನೋಡ್ಕೋತೀನಿ ಈ ಕೂಸಿಗೆ ತಾಯಿಯಿಂದ ಅಗಲಿಸಿ ಪರದೇಶಿ ಮಾಡಬ್ಯಾಡ'[೩೩] ಎಂದು ಹೇಳಿದರೂ ಕೇಳದ ಖಂಡಪ್ಪನಿಗೆ ಪಂಚರು ಜರಾ ಮನುಷ್ಯತ್ವದ ನಿಗಾದಿಂದ ಮಾತಾಡು ಎಂದು ತಿಳುವಳಿಕೆ ಹೇಳುತ್ತಾರೆ. ಆದರೂ ಖಂಡಪ್ಪ ತನ್ನ ಹಟದಿಂದ ವಿಚಲಿತನಾಗುವುದಿಲ್ಲ. ಪಂಚರು ಶಿವಮ್ಮನ ಸಂಪತ್ತಿನ ಆಮಿಷ ಒಡುತ್ತಾರೆ. ಆಗಲೂ ಖಂಡಪ್ಪ 'ನನಗ ಯಾರ ಐಶ್ವರ್ಯನೂ ಬೇಕಾಗಿಲ್ಲ. ನುಚ್ಚು ಮಜ್ಜಿಗಿ ಕುಡ್ದು ಬದುಕತೇನಿ ಪ್ವಾರಗ ಸಾಕೋ ದಲಾಲಿ ನನಗೆ ಬ್ಯಾಡ'[೩೪] ಎಂದು ತಿರಸ್ಕರಿಸುತ್ತಾನೆ. ಕೊನೆಗೆ ಶಿವಮ್ಮ 'ಯವ್ವ ನನ್ನ ಗಂಡ ಹೇಳೋದೇ ಸರಿ ಒಮ್ಮೆ ಕಟ್ಕೊಂಡ ಮ್ಯಾಲ ಮುಗದ್ಹೋಯ್ತು. ಈಗ ಗಂಡನೇ ಸರುವಸ್ವ ಈ ಕೂಸಿಗೆ ನಿನ್ನ ಹೊಟ್ಯಾಗ ಹಾಕ್ಕೋ'[೩೫] ಎಂದು ಒಬ್ಬಳೇ ಖಂಡಪ್ಪನ ಮನೆಗೆ ಹೋಗುತ್ತಾಳೆ.

ಇಲ್ಲಿ ವಿಧವಾ ವಿವಾಹವೇನೋ ನಡೆಯುತ್ತದೆ. ಅನಂತರವೇ ಸಮಸ್ಯೆ ಉದ್ಭವಿಸುವುದು ಮಗುವಿನ ಕಾರಣಕ್ಕೆ. ತಾನು ಕೂಡಿಕೆ ಮಾಡಿಕೊಂಡಿರುವುದು ಕೇವಲ ಶಿವಮ್ಮನೊಂದಿಗೆ ಎಂದು ವಾದಿಸುವ ಖಂಡಪ್ಪ ಯಾವುದೇ ಕಾರಣಕ್ಕು ಅವಳ ಮೊದಲ ಮಗುವನ್ನು ಸ್ವೀಕರಿಸಲು ಸಿದ್ಧನಾಗುವುದಿಲ್ಲ. ಶಿವಮ್ಮ ಕೂಡಿಗೆ ಮಾಡಿಕೊಂಡದ್ದೆ ತಪ್ಪು ಎಂಬಂತೆ 'ಉಡುಕಿ ಮಾಡಿಕೊಂಡು ಶಿವಮ್ಮ ಹಸುಗೂಸಾದ ರಾಜೋಟಿಯ ಜೀವನವನ್ನು ಅಂತತ್ರಗೊಳಿಸದೇ ಹೋಗಿದ್ದರೆ ಇಂಥ ಸಮಸ್ಯೆ ಉದ್ಭವಿಸುತ್ತಲೇ ಇರಲಿಲ್ಲ ಎನ್ನುವ ನಿರೂಪಕರ ಮಾತು, ಮಗುವಿನ ಪರವಾಗಿ ಚಿಂತಿಸುವುದಾಗಿದೆಯೇ ಹೊರತು ಕಿರಿವಯದಲ್ಲಿ ವಿಧವೆಯಾದ ಶಿವಮ್ಮನನ್ನು ಕುರಿತು ಆಲೋಚಿಸುವುದಾಗಿಲ್ಲ. ಅಲ್ಲದೆ ಕೂಸವ್ವ ಮನೆಯಲ್ಲಿ ಮಕ್ಕಳಿಗೆ ಹೇಳಿ ಕೇಳಿ ಒಂದು ತೀರ್ಮಾನಕ್ಕೆ ಬಂದು ಕೆಲಸ ಮಾಡಿದ್ದರೆ ಈ ದಿನ ಈ ರೀತಿಯಾಗಿ ಪಂಚಾಯಿತಿ ನೆರೆಸುವ ಸಂದರ್ಭ ಒದಗುತ್ತಿರಲಿಲ್ಲ' ಎಂಬ ಮಾತು ಗಂಡಸರನ್ನು ಕೇಳದೆ ಹೆಂಗಸರು ನಿರ್ಣಯ ಕೈಗೊಂಡರೆ ಆಗುವುದೆ ಹೀಗೆ ಎಂಬಂತೆ ಆಕ್ಷೇಪಣೆಯ ಇಂಗಿತದಿಂದ ಕೂಡಿದೆ. ಕಡ್ಲಿಮಟ್ಟಿ ಕಾಶಿಬಾಯಿಯ ಕಥೆಯಂತೆ ಶಿವಮ್ಮ ಕೂಡ ಗಂಡನಿದ್ದರೆ ಮತ್ತೆ ಮಕ್ಕಳನ್ನು ಪಡೆಯಬಹುದು. ಮಗನಿಗಾಗಿ ಗಂಡನಿಲ್ಲದಿರುವುದು ಸರಿಯಲ್ಲವೆಂಬ ನಿರ್ಣಯಕ್ಕೆ ಬರಲು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಕ್ಕಳಿರುವ ವಿಧವೆ ಮದುವೆಯಾಗಬಾರದು. ಒಂದು ವೇಳೆ ಆದರೆ ಮೊದಲ ಮಗುವನ್ನು ದೂರೀಕರಿಸಬೇಕೆಂದು ವಿಧಿ ಕಾರಣ. ಒಂದನ್ನು ಪಡೆಯಲು ಇನ್ನೊಂದನ್ನು ಕಳೆದುಕೊಳ್ಳಬೇಕು. ಸಮಾಜದಲ್ಲಿ ಇಂದಿಗೂ ವಿಧವಾ ವಿವಾಹಕ್ಕೆ ಮನ್ನಣೆ ಅಷ್ಟಾಗಿ ಇಲ್ಲದಿರುವುದೇ ಕಾಣುತ್ತದೆ. ಶಿವಮ್ಮ ವಿಧವಾ ವಿವಾಹವಾಗಿ ನರಳಿದ ಮಹಿಳೆಯರ ಪ್ರತಿನಿಧಿಯಾಗಿ ಇಲ್ಲಿ ಚಿತ್ರಣಗೊಂಡಿದ್ದಾಳೆ. ವಿಧವೆಯೇ ವಿವಾಹಕ್ಕೆ ಯೋಗ್ಯಳಲ್ಲವೆಂದು ಯೋಚಿಸುವಾಗ ಮಕ್ಕಳಿರುವ ವಿಧವೆಯ ವಿವಾಹ ಅಪರೂಪವೆಂಬುದನ್ನು ಕಥೆ ಚಿತ್ರಿಸುತ್ತದೆ.

ಸಮಾನ ಚಿಂತನೆ

ಯಶೋಧಮ್ಮ ಸಿದ್ಧಬಟ್ಟೆಯವರ 'ಮಂಗಳಾ' ಕಾದಂಬರಿಯ ವಸ್ತು ವಿಧವಾ ವಿವಾಹದ್ದು. ಮಂಗಳಾ ಶ್ರೀನಾಥರದ್ದು ಪ್ರೇಮವಿವಾಹ, ತಂದೆ ಸೀತಾರಾಮರ ವಿರೋಧವನ್ನು ಮೀರಿ ಶ್ರೀನಾಥ ಬಡ ಮೇಷ್ಟ್ರ ಭೀಮರಾಯರ ಮಗಳು ಮಂಗಳೆಯನ್ನು ವಿವಾಹವಾಗುತ್ತಾನೆ. ಮಂಗಳಾ ತುಂಬು ಗರ್ಭಿಣಿಯಾಗಿದ್ದಾಗ ಗೆಳೆಯನನ್ನು ಗೆಳೆಯನ ಮದುವೆಗೆಂದು ಹೋದ ಶ್ರೀನಾಥ ಬೈಕ್ ಆ್ಯಕ್ಸಿಡೆಂಟ್‌ನಲ್ಲಿ ಅಸುನೀಗುತ್ತಾನೆ. ಅದೆ ದಿನ ಮಂಗಳಾ ಗಂಡುಮಗುವಿಗೆ ಜನ್ಮ ನೀಡುತ್ತಾಳೆ. ಕೇವಲ ಹದಿನೇಳು ವರ್ಷದ ಮಂಗಳಾ ವಿಧವೆಯಾಗುತ್ತಾಳೆ. ಶ್ರೀನಾಥ ಸಾಯುವ ಮೊದಲು ಮಂಗಳೆಗಾಗಿ ಹಾಕಿದ್ದ ಶಿಕ್ಷಕಿ ಹುದ್ದೆಯ ಅರ್ಜಿಯಿಂದಾಗಿ ಕೆಲಸ ದೊರೆಯುತ್ತದೆ.

ಮಂಗಳಾ ಶಿಕ್ಷಕಿಯಾಗಿ ಕೆಲಸ ಮಾಡುತ್ತಲೇ ಶಿಕ್ಷಣ ಮುಂದುವರೆಸಿ ಸ್ನಾತಕೋತ್ತರ ಪದವಿ ಪಡೆದು ಉಪನ್ಯಾಸಕಿಯಾಗುತ್ತಾಳೆ. ಮಗ ಇಂಜನಿಯರಾಗಬೇಕೆಂದು ಬಿ.ಇ. ಶಿಕ್ಷಣಕೊಡಿಸುತ್ತಾಳೆ. ತಾನು ಮಹಿಳೆಯರಿಗಾಗಿ ದುಡಿಯುತ್ತಾಳೆ. ಈ ಮಧ್ಯೆ ಶಿಕ್ಷಕಿಯಾಗಿದ್ದಾಗ ತನ್ನನ್ನು ಮದುವೆಯಾಗ ಬಯಸಿದ ಶೇಖರನನ್ನು ಸಮಾಜಕ್ಕೆ ಹೆದರಿ ನಿರಾಕರಿಸುತ್ತಾಳೆ. ಮಗ ಶ್ರೀಧರನ ಒತ್ತಾಯಕ್ಕೆ ಬಣ್ಣದ ಸೀರೆ, ಬಳೆ ಕುಂಕುಮಗಳನ್ನು ಧರಿಸುತ್ತಾಳೆ. ಜಿಲ್ಲಾಧಿಕಾರಿ ಸಕ್ಸೇನಾ ವಿಧುರನಾಗಿದ್ದು, ಮಂಗಳಾಳ ಪೂರ್ವಾಪರಗಳನ್ನೆಲ್ಲ ತಿಳಿದೂ ಮರುಮದುವೆಗೆ ಕೇಳಿದಾಗ, ಈಗಾಗಲೇ ಲೀಲಾವತಿ ಉಪನ್ಯಾಸಕಿಯ ವಿಧವಾ ವಿವಾಹದ ಕುರಿತು ಕೇಳಿದ್ದ ಮತ್ತು ಉನ್ನತ ಶಿಕ್ಷಣದಿಂದ ಪಡೆದ ವೈಚಾರಿಕತೆಯ ಪರಿಣಾಮವಾಗಿ ಮಂಗಳಾ ಒಪ್ಪುತ್ತಾಳೆ.

ಯಶೋದಮ್ಮ ಸಿದ್ದಬಟ್ಟೆಯವರ ಈ ಕಾದಂಬರಿಗೆ ವಾಸ್ತವ ಘಟನೆಯೊಂದು ಪ್ರೇರಣೆಯಾಗಿದ್ದು, ಸ್ತ್ರೀ ಸಂವೇದನೆಯಲ್ಲಿ ಮೈದಳೆದಿದೆ. ಲೇಖಕಿ ಗಮನಿಸುವಂತೆ ಎಷ್ಟೋ ಸಲ ಮಹಿಳೆ ಸ್ವಂತ ನಿರ್ಣಯ ಕೈಗೊಳ್ಳಲಾಗದೆ, ಇಲ್ಲದ ಸಾಮಾಜಿಕ ನಿಂದನೆಯ ಭಯವನ್ನು ತನ್ನ ಮೇಲೆ ಹೇರಿಕೊಂಡು ಒದಗಿ ಬಂದ ಅವಕಾಶಗಳಿಂದ ಸ್ವತಃ ವಂಚಿತಳಾಗುತ್ತಾಳೆ. ಕೆಲವೊಮ್ಮೆ ವಿಧವೆಯನ್ನು ಕುರೂಪಿಯಾಗಿಸಿ ಕಾಡಿಸುವಲ್ಲಿ ಪುರುಷರಿಗಿಂತ ವಿಧವಾ ಸ್ತ್ರೀಯರೇ ಮುಂದಾಗುತ್ತಾರೆ. ತಾವು ಅನುಭವಿಸಿದ ನೋವನ್ನು ಇತರರು ಅನುಭವಿಸಲಿ ಎಂಬ ವಿಚಾರ ಅವರದಾಗಿರುತ್ತದೆ. ಹಾಗಾಗಿಯೆ ವೈಧವ್ಯದ ಕೆಲವರ್ಷಗಳಲ್ಲೇ ಎದುರಾದ ಅವಕಾಶವನ್ನು ಮಂಗಳಾ ಕಳೆದುಕೊಳ್ಳುತ್ತಾಳೆ. ಅವಳ ನಿರ್ಧಾರ ಗಟ್ಟಿಗೊಳ್ಳಲು ಇಪ್ಪತ್ತು ವರ್ಷಗಳೆ ಬೇಕಾಗುತ್ತವೆ. ಮಂಗಳಾಳ ಅಣ್ಣ ರವಿ. ಮಗ ಶ್ರೀಧರ ಇಬ್ಬರೂ ಅವಳ ಸ್ಥಿತಿಗೆ ಕ್ಷಣ ಕ್ಷಣಕ್ಕೂ ಮರುಗುತ್ತಾರೆ. ಮನಸ್ಸಿನಲ್ಲಿ ಅಪೇಕ್ಷೆ ಇದ್ದೂ ನಿರ್ಧರಿಸಲಾಗದ ದ್ವಂದ್ವದಲ್ಲಿ ತೊಳಲಿದರೂ ಅಣ್ಣ ಹಾಗೂ ಮಗನ ಒತ್ತಾಸೆಯಲ್ಲಿ ನಿರ್ಣಯ ಕೈಗೊಳ್ಳುವಂತಾಗುತ್ತದೆ. ಶಿಕ್ಷಣವೂ ಅದಕ್ಕೆ ಪೂರಕವಾಗುತ್ತದೆ.

ಒಟ್ಟಾರೆ ಮಹಿಳೆಯ ಬದುಕಿನ ಇತ್ಯಾತ್ಮಕ ಬೆಳವಣಿಗೆಗೆ ಬದಲಾವಣೆಗೆ ಸ್ವತಃ ಮಹಿಳೆ ಮುಂದಾಗಬೇಕು ಎಂಬುದನ್ನು ಮಂಗಳಾಳ ಪಾತ್ರ ಪ್ರತಿನಿಧಿಸುತ್ತದೆ. 'ನೀನು ಮೊದಲಿನಿಂದಲೂ ಹೂ, ಬಳೆ, ಕುಂಕುಮ, ಇಟ್ಟುಕೊಳ್ಳುತ್ತಿದ್ದಿ, ಗಂಡ ಸತ್ತ ಮೇಲೆ ಅವನ್ನೆಲ್ಲ ಬಿಡಬೇಕೆಂಬ ನಿಯಮ ಈಗಿಲ್ಲ. ಅವನು ಆಯುಸ್ಸು ತೀರಿ ಸತ್ತರೆ, ಅವನು ವಿವಾಹದಲ್ಲಿ ಕಟ್ಟಿದ ಮಂಗಳ ಸೂತ್ರ ಹಾಗೂ ಕಾಲುಂಗರವನ್ನು ತೆಗೆದು ಹಾಕಿದರಾಯ್ತು.'[೩೬] ಎನ್ನುವ ರವಿ 'ಹೆಂಗಸರು ಸುಮ್ಮನೆ ಪ್ರತಿಭಟಿಸದೆ ಕುಳಿತು ಹೀಗೆ ಶೋಷಿತರಾಗಿದ್ದಾರೆ. ನೀನಾದರೂ ಅವರಿಗೆ ಅವರ ತಪ್ಪುಗಳನ್ನು ತೋರಿಸಿಕೊಡು ಎನ್ನುವ ಮಂಗಳೆಯ ಮನಸ್ಸು'[೩೭] 'ಅಮ್ಮಾ ಗಂಡಸರಾದರೇನು? ಹೆಂಗಸರಾದರೇನು? ಧೈರ್ಯದಿಂದ ಅರ್ಥ ಪೂರ್ಣವಾಗಿ ಬದುಕುವುದು ಮುಖ್ಯ ದೇಹದ ಬಯಕೆಯನ್ನು ತುಳಿದು ದುಃಖಿಸುತ್ತಾ ಕುಳಿತುಕೊಳ್ಳುವುದಕ್ಕಿಂತ ಇನ್ನೊಬ್ಬರನ್ನು ಮದುವೆಯಾಗಿ ಸಂತೋಷದಿಂದಿರುವುದು ಒಳ್ಳೆಯದಲ್ಲವೇನಮ್ಮ'[೩೮] ಎನ್ನುವ ಶ್ರೀಧರ ಮಹಿಳಾ ಬದುಕಿನ ಬದಲಾವಣೆಗೆ ತುಡಿವ ಸ್ತ್ರೀ-ಪುರುಷ ಆಲೋಚನೆಗಳಾಗಿ ಒಡಮೂಡಿವೆ. ಬದಲಾವಣೆ ಎರಡೂ ಕಡೆಯಿಂದ ಆಗಬೇಕಾದುದು ಎಂಬುದನ್ನು ಕಾದಂಬರಿ ಚಿತ್ರಿಸುತ್ತದೆ.

ಮಹಿಳೆಯ ಪ್ರಥಮ ವಿವಾಹವೇ ಸಮಸ್ಯೆಯಾಗುವ ಸಂದರ್ಭದಲ್ಲಿ ವಿಧವಾ ವಿವಾಹ ಹಾಗೂ ಅಂತರ್ ಜಾತಿಯ ವಿವಾಹಗಳು ಇಂದಿಗೂ ಸಹಜವಾಗಿ ನಡೆಯುತ್ತಿಲ್ಲ. ತಿರುಮಲಾಂಬರಂಥ ಹಿರಿಯ ಸಾಹಿತಿಗಳು ಮಹಿಳೆಗೆ ವಿವಾಹವೇ ಪರ್ಯಾಯವಾಗಬೇಕಿಲ್ಲ. ವಿವಾಹವಿಲ್ಲದೆಯೆ ಬದುಕನ್ನು ರೂಪಿಸಿಕೊಳ್ಳಬಹುದೆಂಬ ಆಶಯವನ್ನು ವ್ಯಕ್ತಪಡಿಸಿದರು. ಆದರೆ ಸಾಮಾಜಿಕ ನಿರೀಕ್ಷೆಯಲ್ಲಿ ವಿಧವಾ ವಿವಾಹ ಒಂದು ಪ್ರಗತಿ ಚಿಂತನೆ ಅಥವಾ ಸುಧಾರಣಾವಾದಿ ಚಿಂತನೆ ಎಂದು ಭಾವಿಸಲಾಗಿದೆ. ಇದಕ್ಕೆ ಸ್ವಾತಂತ್ರ್ಯ ಹೋರಾಟದ ಸಂದರ್ಭದ ಸುಧಾರಣಾವಾದಿಗಳ ಪ್ರಭಾವವೂ ಕಾರಣವಾಗಿರಬಹುದಾಗಿದೆ. ಕೆಳ ವರ್ಗಗಳಲ್ಲಿ ವಿಧವಾ ವಿವಾಹ ಅಂಥ ದೊಡ್ಡ ಸಮಸ್ಯೆ ಏನಲ್ಲ. ಆದರೆ ಮಕ್ಕಳಿರುವ ಮಹಿಳೆಯ ವಿವಾಹ ಸಮಸ್ಯೇ ಆಗುತ್ತದೆ. ವಿವಾಹಕ್ಕಾಗಿ ಶಿವಮ್ಮ ತನ್ನ ಮಗುವನ್ನು ತೊರೆಯಬೇಕಾಗಿ ಬಂದರೆ, ಚಂದ್ರಿ ಮಗುವನ್ನೇ ಕೊಲ್ಲಬೇಕಾಗುತ್ತದೆ. ಅಪರೂಪಕ್ಕೆ ಮಂಗಳಾಳ ಮಗುವನ್ನು ಆಕೆಯ ಗಂಡನಾಗಬೇಕಾದ ಸಕ್ಸೇನಾ ಸ್ವೀಕರಿಸುತ್ತಾನೆ. ಮಕ್ಕಳಿಲ್ಲದ ತುಂಗಾ, ಗೀತಾ, ಆನಂದಿದೇವಿಯರ ವಿವಾಹ ಪ್ರಯತ್ನ ಪೂರ್ವಕ ನಡೆಯುತ್ತದೆ.

ಜಾತಿ ಕಟ್ಟುಪಾಡಿನ ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಅಂತರ್‌ಜಾತಿಯ ವಿವಾಹಗಳು ಸುಲಭ ಸಾಧ್ಯವಲ್ಲ. ಮುಸ್ಲೀಂ ಹುಡುಗಿ ಗೋಹರ್‌ಜಾನ್ ಹಿಂದು ಹುಡುಗನನ್ನು ಪ್ರೀತಿಸಿದ್ದನ್ನು ತಿಳಿದು ಮೂಲಭೂತವಾದಿಗಳು 'ಕೊಲೆ'ಯಂಥ ಜೀವವಿರೋಧಿ ಕಾರ್ಯ ಕೈಗೊಂಡು ಗೋಹರಳ ಬಾಳನ್ನೇ ನರಕವಾಗಿಸುತ್ತಾರೆ. ದಲಿತ ಮಹಿಳೆ ಗಂಗಿ ಬಸವಿಯಾಗಲೊಲ್ಲದೆ ಮದುವೆಯಾಗ ಬೇಕೆಂದು ಬಯಸಿ ಉನ್ನತ ಜಾತಿಯ ಗಂಗಪ್ಪನನ್ನು ಮದುವೆಯಾಗಿಯೂ ಮೋಸಕ್ಕೊಳಗಾಗುತ್ತಾಳೆ. ರಮಾ ಜಾತಿ ಕಾರಣವಾಗಿ ತಾನು ಪ್ರೀತಿಸಿದ ಹುಡುಗನೊಂದಿಗೆ ವಿವಾಹ ಅಸಾಧ್ಯವೆಂದು ತಿಳಿದಾಗ ವಿವಾಹವನ್ನೇ ನಿರಾಕರಿಸುತ್ತಾಳೆ. ಅವಳ ತಂದೆ ಮಗಳ ನಿರ್ಧಾರದೆದುರು ಮಣಿದುದರಿಂದ ಅವಳ ಅಂತರ್ ಜಾತಿ ವಿವಾಹ ಸಾಧ್ಯವಾಗುತ್ತದೆ. ಮಾದೇವಿಯ ಗಟ್ಟಿ ನಿರ್ಧಾರ ಅವಳ ಅಂತರ್‌ಜಾತಿ ವಿವಾಹಕ್ಕೆ ಕಾರಣವಾಗುತ್ತದೆ.

ಹೀಗೆ ವಿಧವಾ ಹಾಗು ಅಂತರ್ ಜಾತಿ ವಿವಾಹಗಳು ಮಹಿಳೆಯ ಬದುಕಿಗೆ ನೆಮ್ಮದಿ ತಂದಿದ್ದಕ್ಕಿಂತ ಹೊಸ ಸಮಸ್ಯೆಗಳನ್ನು ಸೃಷ್ಟಿಸಿದ್ದೆ ಹೆಚ್ಚು. ಸಾಮಾಜಿಕವಾಗಿಯೂ ಈ ವಿವಾಹಗಳಿಗೆ ಅಷ್ಟಾಗಿ ಮನ್ನಣೆ ಕಂಡು ಬರುವುದಿಲ್ಲ. ಇಂಥ ವಿವಾಹಗಳ ಸಂಖ್ಯೆ ಹೆಚ್ಚಿದಂತೆ ಅವುಗಳ ಕುರಿತ ಧೋರಣೆಯೂ ಬದಲಾಗಬಹುದಾಗಿದೆ.

೪.೩.೪ ಜಾತಿ ಶೋಷಣೆ

'ಸಮಾಜ ರಚನೆಯ ಒಂದು ಹಂತದಲ್ಲಿ ಅಂದಿನ ಅಗತ್ಯಕ್ಕನುಗುಣವಾಗಿ ರೂಪುಗೊಂಡ ವರ್ಣವ್ಯವಸ್ಥೆಯು ಮನುಷ್ಯನ ಅಗತ್ಯತೆ ಹೆಚ್ಚಿದಂತೆ ಬದುಕು ಸಂಕೀರ್ಣಗೊಳ್ಳುತ್ತ ಬಂದಂತೆ ನೂರಾರು ಜಾತಿಗಳಾಗಿ ಒಡೆಯುತ್ತ ಬಂದಿರಬೇಕು. ಕೆಲಸದ ಭಾಗವಾಗಿದ್ದ ವರ್ಣವ್ಯವಸ್ಥೆಯು ಕಾಲಾಂತರದಲ್ಲಿ ಹುಟ್ಟಿನಿಂದ ಗುರುತಿಸುವಂತಾಗಿ ತನ್ನ ಉದ್ದೇಶವನ್ನು ಕಳೆದುಕೊಂಡು ಮನುಷ್ಯ ಮನುಷ್ಯನ ನಡುವಿನ ಗೋಡೆಯಾಗಿ ಈಗಿನ ರೂಪ ತಳೆದಿರುವಂತೆ ಕಾಣುತ್ತದೆ. ನಮ್ಮ ದೇಶದಲ್ಲಿ ಬಹಳ ಹಿಂದಿನಿಂದಲೂ ವರ್ಣಸಂಕರವನ್ನು ವಿರೋಧಿಸುತ್ತಲೇ ಬರಲಾಗಿದೆ. ವರ್ಣ ಸಂಕರವನ್ನು ವಿರೋಧಿಸಿರುವ ದಾಖಲೆ ನಮಗೆ ಸಿಗುವುದು ಅರ್ಜುನನ 'ಜಾಯತೆ ವರ್ಣ ಸಂಕರಃ' ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನಿಗೆ ಯುದ್ಧದಿಂದ ಇಂತಹ ಅನಾಹುತವಾಗುತ್ತದೆಂದು ತಿಳಿಸುವಲ್ಲಿ ಮಹಾಭಾರತದಲ್ಲಿ ಬರುವ ಶಂತನು ಸತ್ಯವತಿಯರ ಮದುವೆಯೇ ವರ್ಣಸಂಕರಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಅವರ ಮಕ್ಕಳಿಗೆ ಕ್ಷತ್ರಿಯರೆಂಬ ಮಾನ್ಯತೆಯೂ ದೊರಕುತ್ತದೆ. ಅರ್ಜುನನ ವಂಶವೇ ವರ್ಣ ಸಂಕರದ ಮುಂದುವರಿಕೆಯಾಗಿದೆ. ಮಹಾಭಾರತದ ಕತೆ ನಡೆದ ಕಾಲಕ್ಕಿದ್ದ ಉದಾರತೆ ಭಗವದ್ಗೀತೆ ರಚನೆಯಾಗುವ ಕಾಲಕ್ಕೆ ಕಾಣೆಯಾಗಿ ವರ್ಣಸಂಕರವು ಸಾಮಾಜಿಕ ನಿಷೇಧಕ್ಕೆ ಒಳಗಾಗಿರಬೇಕು. ಸಾಮುದಾಯಿಕ ಜೀವನ ಪದ್ಧತಿ ಶಿಥಿಲವಾಗಿ ವೈಯಕ್ತಿಕ ಬದುಕಿಗೆ ಒತ್ತು ಬಿದ್ದಂತೆಲ್ಲ ಸ್ವಾರ್ಥ ಮೇಲುಗೈ ಪಡೆದು ತಾನು ಮಾಡುವ ಕೆಲಸವೇ ಶ್ರೇಷ್ಠವೆಂಬ ಭಾವನೆ ಮೊಳೆತು ಮೇಲು ಕೀಳೆಂಬ ತಾರತಮ್ಯ ಸಾಮಾಜಿಕ ಬದುಕನ್ನು ಆವರಿಸಿದಂತೆ ತೋರುತ್ತದೆ'.[೬೪]

ಹೆಣ್ಣು ಗಂಡಿನ ನಡುವಿನ ಆಕರ್ಷಣೆಗೆ, ಪ್ರೀತಿಗೆ ಜಾತಿ ಧರ್ಮಗಳ ಅಡೆತಡೆಗಳಲ್ಲ. ಪುರಾಣಗಳಲ್ಲಿ ಚರಿತ್ರೆಯಲ್ಲಿ ಇದಕ್ಕೆ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ. ಈ ಪ್ರೀತಿ ಸಾರ್ವಕಾಲಿಕವಾದ್ದರಿಂದ ಎಲ್ಲ ಕಾಲಕ್ಕೂ ಒಲಿದ ಜೀವಗಳು ಒಂದಾಗಲು ಪ್ರಯತ್ನಿಸುವುದೂ ಅಷ್ಟೇ ಸಹಜವಾದುದಾಗಿದೆ. ಧರ್ಮ

ಜಾತಿಗಳ ಗೋಡೆಗಳು ಹೀಗೆ ಒಂದಾಗುವುದನ್ನು ತಡೆಯಲು ಏನೇನೋ ಹುನ್ನಾರ ಮಾಡುವುದು ಎಂದಿನಿಂದಲೂ ನಡೆದೇ ಇದೆ. ಆತ್ಮೀಯರು ಬಂಧುಗಳು, ಸ್ನೇಹಿತರು,ಊರಿನ ಮುಂದಾಳುಗಳು ಯಾರೇ ಇರಬಹುದು, ತಮ್ಮ ಜಾತಿ ಧರ್ಮಗಳ ಪಾಪಿತ್ರ್ಯವನ್ನು ಉಳಿಸಿಕೊಳ್ಳಲು ಪ್ರೀತಿಸಿದವರು ಮದುವೆಯಾಗಿ ಒಟ್ಟಾರೆ ಬದುಕದಂತೆ ಮಾಡುವುದು ಅವರ ಘನೋದ್ದೇಶವಾಗಿರುತ್ತದೆ. ತನ್ನ ಸಂಗಾತಿಯನ್ನು ತಾನೇ ಆರಿಸಿಕೊಳ್ಳುವ ಪರಿಕಲ್ಪನೆಯನ್ನು ಸತ್ಯವಾನ್ ಸಾವಿತ್ರಿಯ ಕತೆಯಲ್ಲಿ ಕಾಣುತ್ತೇವಾದರೂ ಅದೊಂದು ಅಪವಾದವೆಂದೇ ಗ್ರಹಿಸಬೇಕಾಗುತ್ತದೆ. ಹಿರಿಯರು ನಿಶ್ಚಯಿಸಿದ ವರ-ವಧುವನ್ನು ಕೈಹಿಡಿಯುವುದು ಒಂದು ವ್ಯವಸ್ಥೆಯಾಗಿ ನಡೆದು ಬಂದಿದೆ. ಹೀಗಿರುವಾಗ ತಾನು ಬಯಸಿದ ವ್ಯಕ್ತಿಯೊಡನೆ ಮದುವೆಯಾಗುವುದನ್ನು ಸಮಾಜ ಸುಲಭವಾಗಿ ಒಪ್ಪಿಕೊಳ್ಳದು. ಘನವಾದ ನಂಬಿಕೆ ವ್ಯಾಪಕವಾಗಿರುವಾಗ ಅದಕ್ಕೆ ಹೊರತಾದ ವೈವಾಹಿಕ ಸಂಬಂಧ ಬೆಳೆಸಲು ಸಮಾಜ ಮನ್ನಣೆ ನೀಡಲು ಸಾಂಪ್ರದಾಯಿಕ ಮನೋಭಾವ ಅಡ್ಡಿಯಾಗಿದೆ.

ಅಂತರ್‌ಜಾತೀಯ, ಅಂತರ್‌ಧರ್ಮೀಯ ಮದುವೆಗಳನ್ನು ತಿರಸ್ಕರಿಸುವವರು ತಮ್ಮ ವೈವಾಹಿಕ ಸಂಬಂಧವನ್ನು ಪರಿಶೀಲಿಸಿದ್ದಲ್ಲಿ ಅವರ ಒಣ ಪ್ರತಿಷ್ಠೆ ಎಷ್ಟು ಜೊಳ್ಳು ಎನ್ನುವುದು ತಿಳಿಯುತ್ತದೆ, ಆದರೆ ಈ ಬಗೆಗೆ ಅರಿವಿರದೆ ಇಷ್ಟ ಪಟ್ಟವರೊಡನೆ ಮದುವೆಯಾಗುವವರನ್ನು ವಿರೋಧಿಸುವವರೇ ಹೆಚ್ಚು.

ಸಮಾಜದ ಮೇಲುಸ್ತರದಲ್ಲಿರುವ ಜನ ಕೆಳ ಸ್ತರದವರನ್ನು ತಮ್ಮ ಸುಖಕ್ಕಾಗಿ ಅನುಕೂಲಕ್ಕಾಗಿ ಇರುವವರೆಂದು ಭಾವಿಸುತ್ತ ಬಂದಿದಾರೆ, ಉಳ್ಳವರ ಅಟ್ಟಹಾಸಕ್ಕೆ ಸ್ವಾರ್ಥಕ್ಕೆ ಬಲಿಯಾಗುವ ಕೆಳಗಿನ ಸ್ತರದ ಜನ ಅದನ್ನು ಪ್ರತಿಭಟಿಸಬೇಕೆನ್ನುವ ದನಿಯನ್ನು ಕಳೆದುಕೊಂಡು ಶತಶತಮಾನಗಳೇ ಕಳೆದಿವೆ, ಇತ್ತೀಚಿಗೆ ಪ್ರತಿಭಟನೆಯ ಧನಿ ಕೇಳಿಬರುತ್ತಿದೆ. ಆಗೊಮ್ಮೆ ಈಗೊಮ್ಮೆ ದನಿಯೆದ್ದರೂ ಅದನ್ನು ಅಡಗಿಸುವ ಉಪಾಯ ಉಳ್ಳವರಿಗೆ ಕರತಲಾಮಲಕ. ಜಮೀನ್ದಾರಿ ಪದ್ಧತಿಯಲ್ಲಂತೂ ಆತನ ಒಕ್ಕಲುತನ ಮಾಡುವ ಮನೆಯ ಹೆಂಗಸರು ಜಮೀನ್ದಾರನ ತೆವಲಿಗೆ ಬಲಿಯಾಗುವುದು ಸಹಜ ಎಂದು ಭಾವಿಸಲಾಗಿತ್ತು. ಜಮೀನ್ದಾರಿ ಪದ್ಧತಿ ಅಳಿದರೂ ಅದರ ಪಳೆಯುಳಿಕೆಗಳು ಅಲ್ಲಲ್ಲಿ ಕಾಣಸಿಗುತ್ತವೆ, ಇಂತಹ ವ್ಯವಸ್ಥೆಯ ಕ್ರೌರ್ಯಕ್ಕೆ ಸಿಕ್ಕು ನಲುಗಿದ ಹೆಂಗಸಿನ ಸ್ಥಿತಿಯನ್ನು ಗೀತಾ ನಾಗಭೂಷಣರ ಹಲವು ಕೃತಿಗಳು ವಿವಿಧ ಕೋನಗಳಿಂದ ಅನಾವರಣಗೊಳಿಸುತ್ತವೆ.

ಗೀತಾ ನಾಗಭೂಷಣರ 'ನೀಲಗಂಗಾ' ಕಾದಂಬರಿಯ ಮಹಿಳೆಯರಿಗೆ ತಮಗಾಗುತ್ತಿರುವ ಅನ್ಯಾಯದ ಅರಿವಿದೆ. ನೀಲಗಂಗಾ ಪಂಚಾಯಿತಿ ಕಟ್ಟೆಯಲ್ಲಿ ಮಾತಾಡುವ ಅಜ್ಜಿ ಇವರಿಗೆಲ್ಲ ಊರಿನ ಸಾಹುಕಾರರು ಕೆಳಜಾತಿಯ ಹೆಂಗಸರನ್ನು ಬೇಕಾದಂತೆ ಬಳಸಿ ಬಿಸಾಡುತ್ತಾರೆಂದು ಸಿಟ್ಟಿರುತ್ತದೆ, ಒಟ್ಟಾಗಿ ಪ್ರತಿಭಟಿಸಲಾರದ ತಮ್ಮ ಗಂಡಸರ ಮೇಲೂ ಆಕ್ರೋಶವಿರುತ್ತದೆ. ತನ್ನ ಆಳುಮಗ ಮಲ್ಲೇಶಿಯ ಹೆಂಡತಿಗೆ ಗಂಡನ ಜೀವಭಯವೊಡ್ಡಿ ತನ್ನ ತೆವಲಿಗೆ ಬಳಸಿಕೊಂಡ ಸಾವ್ಕಾರ ಕಾಳಿಂಗಪ್ಪನು ಪಂಚಾಯಿತಿ ಕಟ್ಟೆಯಲ್ಲಿ ಕೊಡುವ ನಿರ್ಣಯವು ಬೆಚ್ಚುವಂತೆ ಮಾಡುತ್ತದೆ, ರಾಮಪ್ಪ ಲಚ್ಚಿಯನ್ನು ಕೆಡಿಸಿದ್ದ ಎನ್ನುವುದೇ ಸುಳ್ಳೆಂದೂ ಆತ ಹಳ್ಳಿಯಲ್ಲಿ ದೊಡ್ಡ ಮನುಷ್ಯನೆಂದೂ, ಗಂಡನಿಗೆ ಹಾಗೂ ರಾಮಪ್ಪನಿಗೆ ಲಚ್ಚಿ ಬದಲಾಮಿ ಮಾಡಿದ್ದಾಳೆಂದು ಹೇಳಿ, ಆಕೆ ಹಳ್ಳಿ ಬಿಟ್ಟು ಹೋಗಬೇಕೆಂಬುದಾಗಿ ನ್ಯಾಯ ನೀಡುತ್ತಾನೆ. ಕಾಳಿಂಗಪ್ಪ 'ಶೂದ್ರ ಹೆಂಗಸಿಗೆ ಬ್ರಾಂಬ್ರು ಮುಟ್ಟಿದರೆ ಅವ್ರು ಪವಿತ್ರ ಆಗ್ತಾರಂತ ನಮ್ ಪುರಾಣದೊಳಗೇ ಹೇಳ್ಯಾದ ಎಂದು ಮಹಾಭಾರತದ

ಉದಾಹರಣೆ ಕೊಡುವ ಕಾಳಿಂಗಪ್ಪ ತಮಗೆ ಬೇಕಾದಂತೆ ಪುರಾಣಗಳನ್ನು ಅರ್ಥೈಸುವ ಜನರ ಪ್ರತಿನಿಧಿಯಾಗಿ ಕಾಣುತ್ತಾನೆ. ಈ ನಿರ್ಣಯದಿಂದ ಅಘಾತಕ್ಕೊಳಗಾಗಿ ಲಚ್ಚಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ., ನೀಲಗಂಗಾ ಸಾವ್ಕಾರನ ಸಂಬಂಧ ತಿಳಿದ ಮಲ್ಲೇಶಿಯೂ ಅದೇ ದಾರಿ ಹಿಡಿಯುತ್ತಾನೆ, ಈ ಆಘಾತಕ್ಕೆ ಸಿಕ್ಕಿದ ನೀಲಗಂಗಾ ಹುಚ್ಚಿಯಾಗುತ್ತಾಳೆ. ಇದನ್ನೆಲ್ಲ ಕಂಡ ಅವಳ ತಮ್ಮ ವೀರಭದ್ರ ಕಾಳಿಂಗಪ್ಪನ ಮಗಳ ಸ್ನೇಹಗಳಿಸಿ ಆತನನ್ನು ಸಾಯಿಸುವುದರ ಮೂಲಕ ಅಕ್ಕನಿಗಾದ ಅನ್ಯಾಯ ಸೇಡು ತೀರಿಸಿಕೊಳ್ಳುತ್ತಾನೆ., ಗಂಡಿನ ಕಾಮುಕತೆ ನ್ಯಾಯ ಪಕ್ಷಪಾತ, ಸೇಡು ಎಲ್ಲಕ್ಕೂ ಬಲಿಯಾಗಿ ಘಾಸಿಗೊಳ್ಳುವುದು ಮಹಿಳಾ ಬದುಕೆ.

ಕೆಳವರ್ಗದ ಗಂಡಸರು ತಮ್ಮ ಹೆಂಗಸರು ಊರ ಸಾವ್ಕಾರರ ಕಾಮಕ್ಕೆ ಬಲಿಯಾಗುತ್ತಿರುವುದನ್ನು ತಿಳಿದೂ ಏನೂ ಮಾಡಲಾರದೆ ಸುಮ್ಮನಿರುತ್ತಾರೆ. ಇಂಥವರ ನಿರ್ವೀರ್ಯತೆಯನ್ನು ಲಚ್ಚಿ ಮತ್ತು ನೀಲಗಂಗಾರ ನಡುವಿನ ಸಂಭಾಷಣೆ ಅನಾವರಣಗೊಳಸುತ್ತದೆ. 'ನಮ್ಮ ಗಂಡಸರ ಮೀಸೆ ಅಂದ್ರ ಆಡಿನ ಕುತಿಗ್ಯಾನ ಮೊಲಿ ಇದ್ದಾಂಗ, ಹೊಲಗೇರ್ಯಾಗ ಕಬ್ಬಲಿಗೇರ್ಯಗ ಗಂಡಸಾಗಿ ಹುಟ್ಟದಕ್ಕಿನ್ನ ಅಡವ್ಯಾಗ ಉಡು ಆಗಿ ಹುಟ್ಟಾದು ಬೇಸಿ ಹಲ್ಲಾಗ ನಾಲ್ಗಿ ಇದ್ದೂ ನಮ್ ಗಂಡಗೋಳು ಗೋರ್ಯಾನ ಹೆಣಗೋಳ್ಹಂಗ ಬದುಕತಾವ, ದೊಡ್ಡ ಕುಲದವರ ಕಾಲಾನ ಕೆರು ಆಗಿ ಸಂವ್ಯಾದೇ ಇವುದರ ಬಾಳ್ಯಾ'[೪೦] ಎನ್ನುವ ಲಚ್ಚಿಯ ಆಕ್ರೋಶದ ನುಡಿ ಆ ಪರಿಸರದ ಬದುಕನ್ನು ಬಯಲಿಸುತ್ತದೆ. ಆರ್ಥಿಕ ಅಸಹಾಯಕತೆ, ಜಾತಿಯ ಕೀಳರಿಮೆ ಅನಕ್ಷರತೆ ಕುಡಿತ ಅವರ ಸ್ಥಿತಿಯನ್ನು ದುರ್ಬಳಕೆ ಮಾಡಿಕೊಳ್ಳುವ ಸಾಮಾಜಿಕ ವ್ಯವಸ್ಥೆ ಕೆಳವರ್ಗದ ಮಹಿಳೆಯ ಬದುಕಿಗೆ ಕಂಟಕಪ್ರಾಯವಾಗಿವೆ.

ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿ ಬಾಲ್ಯದಲ್ಲೆ ತಂದೆ ತಾಯಿಯರನ್ನು ಕಳೆದುಕೊಂಡ ಲಚ್ಚಿಯ ಬದುಕನ್ನು ಕಂಡರಿಸುತ್ತದೆ. ಗಂಡು ಜಾತಿ ಹದ್ದಾಗಿ ಹೆಣ್ಣನ್ನು ಮಾಂಸದ ಮುದ್ದೆಯಾಗಿ ಕುಕ್ಕಿ ತಿನ್ನುವುದಕ್ಕೆ ಹೋಲಿಸಲಾಗಿದೆ. ಹದ್ದು ಮಾಂಸ ತಿನ್ನುವುದು ಅದರ ಸಹಜ ಪ್ರವೃತ್ತಿ ಹದ್ದು ಹದ್ದನ್ನು ತಿನ್ನುವುದಿಲ್ಲ. ಆದರೆ ಗಂಡು ಹೆಣ್ಣನ್ನು ಮನುಷ್ಯಳಾಗಿ ಭಾವಿಸಿಲ್ಲ ಎಂಬುದನ್ನು ಶೀರ್ಷಿಕೆ ಧ್ವನಿಸುತ್ತದೆ. ಅವನಿಗೆ ಅವಳು ಕೇವಲ ಭೋಗವಸ್ತು ವ್ಯಕ್ತಿತ್ವವಿರು ಜೀವ ಅಲ್ಲ ಹಾಗಾಗಿಯೆ ಲಚ್ಚಿಯನ್ನು ಎದುರುಗೊಳ್ಳುವ ಕಾಶಿನಾಥ ಕುಲಕರ್ಣಿ ಪೋಲಿಸರು ಬಸಣ್ಣಿ ಎಲ್ಲರೂ ಅವಳನ್ನು ನಡೆಸಿಕೊಂಡದ್ದರು ಹಾಗೆಯೆ. ಅವಳನ್ನು ಪ್ರೀತಿಸುತ್ತಿದ್ದ ಕಾಶಿನಾಥ ಅವಳ ಮೇಲೆ ಪೋಲಿಸರಿಂದ ಅತ್ಯಾಚಾರ ನಡೆಯಿತೆಂಬ ವಿಷಯ ತಿಳಿಯುತ್ತಲೇ ಸಂಪೂರ್ಣ ವಿಮುಖನಾಗುತ್ತಾನೆ, ತನ್ನ ಮಾತಿಗೆ ಬೆಲೆಕೊಟ್ಟು ಮಗ್ಗಲಿಗೆ ಬರಲಿಲ್ಲವೆಂದು ಕುಲಕರ್ಣಿ ಸುಳ್ಳು ಆಪಾದನೆ ಹೊರಿಸಿ ಅವಳನ್ನು ಜೈಲಿಗೆ ಕಳುಹಿಸುವಲ್ಲಿ ಸಫಲನಾಗುತ್ತಾನೆ. ಅನಾಯಾಸವಾಗಿ ಸಿಕ್ಕ ಹರೆಯದ ಹೆಣ್ಣನ್ನು ಹಾಗೆಯೇ ಬಿಡಲು ಖಾಕಿಧಾರಿಗಳಿಗೆ ಮನಸ್ಸಾಗುವುದಿಲ್ಲ. ಜೈಲಿನಿಂದ ಸ್ತ್ರೀನಿಕೇತನಕ್ಕೆ ವಾಸ್ತವ್ಯ ಬದಲಾದರೂ ದೇಹದಿಂದಷ್ಟೇ ಹೆಂಗಸಾಗಿದ್ದ ಅಲ್ಲಿನ ಅಧಿಕಾರಿ ಅಲ್ಲಿರುವ ಹೆಣ್ಣು ಮಕ್ಕಳನ್ನು ಬಯಸಿದ ಗಂಡಸರಿಗೆ ಒದಗಿಸಿ ದುಡ್ಡು ಮಾಡುವ ಧಂದೆಯಲ್ಲಿ ಸಾಕಷ್ಟು ಪರಿಣಿತಳಿರುತ್ತಾಳೆ. ಸ್ತ್ರೀನಿಕೇತನದಲ್ಲಿ ಲಚ್ಚಿಯನ್ನು ಕಂಡು ಒಪ್ಪಿ ಮದುವೆಯಾಗುವ ಬಸಣ್ಣಿ ಅವಳ ಪೂರ್ವೇತಿಹಾಸ ತಿಳಿಯುತ್ತಲೇ ತನ್ನದೆ ಕುಡಿಯನ್ನು ಬಸಿರಲ್ಲಿ ಹೊತ್ತಿದ್ದಾಳೆನ್ನುವುದು ತಿಳಿದಿದ್ದರು, ನಿರ್ಭಿಡೆಯಿಂದ ಅವಳನ್ನು ಮನೆಯಿಂದ ಹೊರಹಾಕುತ್ತಾನೆ ಮಗುವಾದ ಮೇಲೆ ಅದನ್ನು ನಿರಾಕರಿಸುತ್ತಾನೆ. ಈ ಕಾರಣಗಳಿಂದ ಲಚ್ಚಿಯಲ್ಲಿ ಪುರುಷ ದ್ವೇಶ ಹೆಮ್ಮರವಾಗಿ ಬೆಳೆಯುತ್ತದೆ.

ಬದುಕಿನ ಪ್ರತಿಕ್ಷಣ ಅನ್ಯಾಯ ಅತ್ಯಾಚಾರ ಶೋಷಣೆಯನ್ನು ಅನುಭವಿಸಿದ ಲಚ್ಚಿ ಬದುಕಿನ ಹೋರಾಟದಲ್ಲಿ ಸತ್ತು ಸತ್ತು ಹುಟ್ಟುತ್ತಾಳೆ. ಎಲ್ಲ ದಾರಿಗಳೂ ಒಂದೇ ಬಗೆಯಾದಾಗ ಬದುಕು ಬೀದಿ ಪಾಲಾದಾಗ ಸಾವನ್ನೆ ಹಾರೈಸುತ್ತಾಳೆ. ಸಾಯಲು ಹೊರಟವಳು ತಂದೆಗೂ ಬೇಡವಾದ ಮಗುವನ್ನು ಯಾವ ನಂಬಿಕೆಯ ಮೇಲೆ ಬದುಕಲು ಬಿಟ್ಟಾಳು. ತನ್ನ ಪಾಲಿಗೆ ಅತ್ಯಂತ ಕ್ರೂರವಾದ ಸಮಾಜ ತನ್ನ ಮಗುವನ್ನು ಸ್ವೀಕರಿಸಿ ಉತ್ತಮ ನಾಗರಿಕನನ್ನಾಗಿಸುವ ಭರವಸೆ ಇಲ್ಲದ ಸ್ಥಿತಿಯಲ್ಲಿ ಇನ್ನೊಬ್ಬ ಸ್ತ್ರೀಕಂಟಕನನ್ನು ಕಲ್ಪಿಸಲು ಒಲ್ಲದ ಲಚ್ಚಿ ತನ್ನೊಂದಿಗೆ ಆ ಮಗುವನ್ನು ಇಲ್ಲವಾಗಿಸಲು ಹೊರಡುತ್ತಾಳೆ.

ಡಾ. ಮಣಿಮಾಲಿನಿ ವಿ.ಕೆ. ಅವರು 'ಇಂಥ ಸಂದೇಶಗಳು ಜೀವ ವಿರೋಧಿಗಳಾಗಿವೆ. ಆವೇಶ ಪೂರ್ಣವಾಗಿವೆ. ಅನೈಸರ್ಗಿಕ ನೆಲೆಯವುಗಳಾಗಿವೆ. ಎಷ್ಟೇ ಸಾಂಕೇತಿಕವೆಂದು ಕಂಡರೂ ಇಂಥ ನಿಲುವನ್ನು ಸಮರ್ಥಿಸುವುದು ಕಷ್ಟವಾಗುತ್ತದೆ. ಗಂಡು ಹೆಣ್ಣುಗಳ ಮಧ್ಯೆ ಕಂದಕವನ್ನು ನಿರ್ಮಿಸುವ ಪರಸ್ಪರರ ಮೇಲೆ ಕತ್ತಿ ಮಸಿಯುವುದೇ ಸಂಘರ್ಷವೆನ್ನುವ ದೃಷ್ಟಿಕೋನವು ಸ್ವಲ್ಪಮಟ್ಟಿಗೆ ಹಾಸ್ಯಾಸ್ಪದವಾಗುತ್ತದೆ. ಒಟ್ಟು ಸಮಾಜದ ಸ್ವಾಸ್ಥ್ಯರಕ್ಷಣೆಯೂ ಸಾಹಿತ್ಯ ಸೃಷ್ಟಿಯ ಉದ್ದೇಶಗಳಲ್ಲಿ ಒಂದಾಗಿದೆಯೆನ್ನವುದನ್ನು ನಾವು ಸದಾ ನೆನಪಿನಲ್ಲಿಡಬೇಕಾಗುತ್ತದೆ'[೬೧] ಎಂದು ಹೇಳಿರುವುದು ಸರಿಯಾಗಿದೆ.

ಸಾಮಾಜಿಕ ಮೌಲ್ಯ ವ್ಯವಸ್ಥೆಯ ಸುಳಿಯಲ್ಲಿ ಸಿಕ್ಕು ಉಳ್ಳವರ ಅಟ್ಟಹಾಸಕ್ಕೆ ಬಲಿಯಾಗಿ ಸಾಕಷ್ಟು ನೋಯುವ ಲಚ್ಚಿಗೆ ಕಾನೂನಿನ ಸಹಾಯವೂ ಸಿಗುವುದಿಲ್ಲ. ನ್ಯಾಯಾಲಯವು ಅವಳದೇ ತಪ್ಪೆಂದು ತೀರ್ಮಾನಿಸಿ ಶಿಕ್ಷೆ ವಿಧಿಸುತ್ತದೆ. ಅವಳನ್ನು ಈ ಸ್ಥಿತಿಗೆ ತಳ್ಳಿದ ಧೂರ್ತರಿಗೆ ಸಮಾಜದಲ್ಲಿ ಸಂಭಾವಿತರೆಂದು ತಲೆಯೆತ್ತಿ ಮೆರೆಯಲು ಸಾಧ್ಯವಾಗುತ್ತದೆ. ಜಾತಿ, ವರ್ಗ, ಅಧಿಕಾರ ಮುಂತಾದ ಶಕ್ತಿಗಳಿಗೆಲ್ಲ ಯಾವತ್ತೂ ಮೊದಲು ಬಲಿಯಾಗುವುದು ಹೆಂಗಸೇ ಎನ್ನುವುದನ್ನು ಕೃತಿ ಮನಗಾಣಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯು ನಿರ್ಮಿಸಿದ ಇಕ್ಕಟ್ಟು ಹೆಂಗಸನ್ನು ಹೇಗೆ ಉಸಿರು ಗಟ್ಟಿಸಿ ಸಾಯುವಂತೆ ಮಾಡುತ್ತದೆ ಎನ್ನುವುದನ್ನು ಹಸಿಮಾಂಸ ಮತ್ತು ಹದ್ದುಗಳು ಪ್ರತಿನಿಧಿಸುತ್ತದೆ. 'ಹೆಣ್ಣಿಗೆ ಅನ್ಯಾಯ ಮಾಡುವ ಗಂಡಸರನ್ನು ಇಲ್ಲವಾಗಿಸಿ ಬಿಟ್ಟರೆ ಸಮಸ್ಯೆಗೆ ಪರಿಹಾರ ದೊರಕುತ್ತದೆ ಎನ್ನುವುದು ಒಂದು ಅಮಾನವೀಯ ನಿಲುವು ನಿಜ. ಆದರೆ ಲಚ್ಚಿಯ ಬದುಕಿನ ಸಂದರ್ಭ ಅವಳನ್ನು ಪ್ರೇರೇಪಿಸಿದ್ದು ಈ ರೀತಿಯಲ್ಲಿ ಎನ್ನುವುದೂ ಅಷ್ಟೆ ಸತ್ಯವೆನ್ನುತ್ತಾರೆ'[೬೨] ಚಂದ್ರಮತಿ ಸೋಂದಾ.

ಸಾಮಾಜಿಕ ವ್ಯವಸ್ಥೆ ಪುರುಷನಿಗೆ ನೀಡಿದ ಮುಕ್ತ ಲೈಂಗಿಕ ಸ್ವಾತಂತ್ರ್ಯ ಮತ್ತು ಶ್ರೀಮಂತಿಕೆಯ ಸೌಲತ್ತನ್ನು ಬಳಸಿಕೊಂಡು ಊರಿನ ಗೌಡ ಸಾಹುಕಾರರು ತಮಗೆ ಬೇಕೆನಿಸಿದ ಹೆಣ್ಣನ್ನು ಅವಳಿಚ್ಛೆಗೆ ವಿರುದ್ಧವಾಗಿ ಮೋಸದಿಂದಲೋ ಹೆದರಿಸಿಯೋ ಅತ್ಯಾಚಾರ ಮಾಡಿಯೋ ಖಾಯಂ ಆಗಿ ಇಟ್ಟುಕೊಳ್ಳುವ ಪರಿಪಾಠ ಹಳ್ಳಿಗಳಲ್ಲಿ ಬಹಳ ಹಿಂದಿನಿಂದಲೂ ನಡೆದು ಬಂದಿದೆ. ಹೀಗೆ ಮಾಡುವಾಗ ಅವಳ ಜಾತಿ ಯಾವುದೆನ್ನುವ ಪ್ರಶ್ನೆ ಎದುರಾಗುವುದಿಲ್ಲ. ಅಥವಾ ಎದುರಾದರೂ ಅದನ್ನು ಪರಗಣಿಸುವುದಿಲ್ಲ. ಆದರೆ ಕೆಲವು ಕಡೆ ಇಂತಹ ಪದ್ಧತಿಯು ಮುಂದುವರಿದಿದೆ. ಇಟ್ಟುಕೊಂಡವಳು ಎಷ್ಟೇ ನಿಯತ್ತಿನಿಂದಿದ್ದರೂ ಅವಳಿಗೆ ಹೆಂಡತಿಯ ಸ್ಥಾನ ಸಿಗುವುದಿಲ್ಲ. ಅವಳಿಗೆ ಹುಟ್ಟುವ ಹೆಣ್ಣು ಮಕ್ಕಳು ಇಟ್ಟುಕೊಂಡವರಾಗಿಯೇ ಬದುಕಬೇಕಾಗುತ್ತದೆ. ಇಂತಹ ಸ್ಥಿತಿಗೆ ಒಳಗಾದ ಹೆಂಗಸಿನ ನೋವು, ನಿರಾಶೆ ಹತಾಶೆಗಳನ್ನು ಗೀತಾ

ನಾಗಭೂಷಣರ ಬೆಳಕಿನಡೆಗೆ (ಜ್ವಲಂತ) ಕಥೆ ಹಾಗೂ ದಂಗೆ ಕಾದಂಬರಿ ಕಂಡರಿಸುತ್ತವೆ. ತಾವು ಅನುಭವಿಸಿದ ನೋವು ಅಪಮಾನಗಳಿಂದ ನೊಂದ ತಾಯಂದಿರು ತಮ್ಮ ಮಗಳಿಗೆ ಇಂತಹ ಸ್ಥಿತಿ ಬರಬಾರದೆಂದು ಪ್ರತಿಭಟನೆ ತೋರುತ್ತಾರೆ. ಆ ಪ್ರತಿಭಟನೆಯ ಸ್ವರೂಪದಲ್ಲಿ ಭಿನ್ನತೆಯಿದೆ.

ಗೀತಾ ಅವರ ಜ್ವಲಂತ ಕಥಾ ಸಂಕಲನದಲ್ಲಿಯ 'ಬೆಳಕಿನೆಡೆಗೆ' ಕಥೆಯಲ್ಲಿ ಸಾಹುಕಾರನ ಮಗ ಈರಣ್ಣ ಮನೆಗೆಲಸದ ಭವಾನಿಯ ಮೇಲೆ ಅತ್ಯಾಚಾರ ಮಾಡುತ್ತಾನೆ. ಮದುವೆಯಾಗಿ ಒಬ್ಬನ ಮಡದಿಯಾಗಿ ಬದುಕಬೇಕಾಗಿದ್ದ ಭವಾನಿ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಈರಣ್ಣನ 'ಇಟ್ಟುಕೊಂಡವಳಾಗಿ' ಬದುಕು ಸವೆಸಬೇಕಾಗುತ್ತದೆ. ಅವಳ ಮಗಳು ಗೌರಿ ದೊಡ್ಡವಳಾದ ಮೇಲೆ ಅವಳಿಗೆ ಗಂಡು ಹುಡುಕುವಂತೆ ಸಾಹುಕಾರನಿಗೆ ಹೇಳುತ್ತಾಳೆ. ಆತನ ಕುಲದವರಾಗಲಿ, ಆಕೆಯ ಕುಲದವರಾಗಲಿ ಗೌರಿಯನ್ನು ಮದುವೆಯಾಗಲು ತಯಾರಿಲ್ಲವೆಂದು ಆತ ಹೇಳಿದಾಗ ಭವಾನಿಗೆ ಸಿಟ್ಟು ಉಕ್ಕುತ್ತದೆ. 'ಆಕಿ ನಿಮ್ ಮಗಳಂಬಾದು ಸುಳ್ಳೇನು? ನೀವು ನನ್ನ ಕೊಳ್ಳಾಗ ತಾಳಿ ಕಟ್ಟಿಲ್ಲಂದ್ರೇನಾಯ್ತು? ನಾ ನಿಮ್ಮ ಹೆಣ್ತಿಕಿಂತಾ ಹೆಚ್ಚಿಗಿ ನಿಮ್‌ಜೋಡಿ ನಡ್ಕೊಂಡಿಲ್ಲೇನು? ಮಕ್ಕಳಿಗಿ ತಂದಿ ಜಾತಿನೇ ಬರ್ತದಂತ ಹೇಳ್ತಾರ. ಅಂದ ಮೇಲೆ ನಿಮ್ಮ ಜಾತಿಯವ ಯಾವನಾದ್ರೂ ನನ್ ಮಗಳಿಗೆ ಲಗ್ನ ಆಗ್ಬೇಕು'.... ಎನ್ನುವ ಭವಾನಿಯ ಮಾತುಗಳು ತರ್ಕಸಮ್ಮತವಾದವು ನ್ಯಾಯಬದ್ಧವಾದವು. ಆದರೆ ಮೇಲು ಜಾತಿಯ ಗಂಡಸರಿಗೆ ಮದುವೆಯಾಗಿ ವಂಶ ಮುಂದುವರಿಸಲು ತಮ್ಮ ಜಾತಿಯ ಹೆಣ್ಣೇ ಆಗಬೇಕು ಇಟ್ಟುಕೊಳ್ಳಲಿಕ್ಕೆ ಯಾವ ಜಾತಿಯ ಹೆಣ್ಣಾದರೂ ಆಗುತ್ತದೆ. ಹಾಗಾಗಿ ಸಾಹುಕಾರನ ತಂಗಿಯ ಮಗ ಗೌರಿಯನ್ನು ಇಟ್ಟುಕೊಳ್ಳಲು ಮುಂದೆ ಬಂದಿದ್ದಾನೆ ಎಂದು ಸಾಹುಕಾರ ತಿಳಿಸುತ್ತಾನೆ. ತನ್ನ ಬದುಕಿನಿಂದ ಪಾಠ ಕಲಿತಿದ್ದ ಭವಾನಿ ಆತನ ಈ ಪ್ರಸ್ತಾಪದಿಂದ ಸಿಡಿದು ನಿಂತು ಅವನಿಗೆ ಸವಾಲೆಸೆಯುತ್ತಾಳೆ. 'ಹೆಂತಾ ಅಪ್ಪನೋ ನೀನು? ಈ ರಂಡಿಯಾಗಿ ನಾ ಉಂಡ ದುಕ್ಕ ಸಂಕಟ ಚಿಂತಿ ಅಪಮಾನಗೊಳೇ ಸಾಕು. ನನ್ನ ಮಗಳಿಗಿನೂ ನಾ ನನ್ಹಂಗ ಮಾಡಂಗಿಲ್ಲಂತ ತಿಳಿ ನಿನ್ನೆದಿ ಮ್ಯಾಲ ಬರ್ದ್ ಇಟಗೊ. ನನ್ ಮಗಳು ಆದರ ಒಂದು ಗಂಡಿನ ತಾಳಿಕಟ್ಟಿದ ಹೆಣ್ತಿ ಆಗ್ತಾಳ ಖರೆ. ಇಲ್ಲಂದ್ರ ತನ್ನ ಹೊಟ್ಟಿ ತಾ ತುಂಬಿಸಿಕೊಂಡು ಯಾವ ಗಂಡಸಿನ ಅನ್ನಕ್ಕೆ ಆಸಿ ಬೀಳಲಾರ್ದೆ ಸೋತಂತ್ರ ಆಗಿ ಬಾಳ್ತಾಳ ತಿಳಿತೇನು'? ಎನ್ನುವ ಅವಳ ಮಾತುಗಳು ಅವಳ ಬದುಕನ್ನು ಪ್ರತಿನಿಧಿಸುತ್ತವೆ.

ತನಗಾದ ಅನ್ಯಾಯವನ್ನು ಬಾಯ್ಮುಚ್ಚಿ ಸಹಿಸಿದ್ದ ಭವಾನಿಗೆ ತನ್ನ ಮಗಳಿಗೂ ಮುಂದುವರಿಯುತ್ತದೆಂದು ತಿಳಿದಾಗ ಆಸ್ಫೋಟಿಸುವುದು ಅನಿವಾರ್ಯವಾಗುತ್ತದೆ. ಮದುವೆಯಾದ ಹೆಂಡತಿಯಲ್ಲಿ ಜನಿಸಿದ್ದ ಮಗಳನ್ನು ಮದುವೆ ಮಾಡಿಕೊಡುವ ಈರಣ್ಣ ಸಾಹುಕಾರ ಭವಾನಿಯ ಮಗಳನ್ನು ಯಾವುದೇ ಕಾಳಜಿ ಇಲ್ಲದೆ ಸೋದರಳಿಯನಿಗೆ ಇಟ್ಟುಕೊಂಡವಳಾಗಿ ಮಾಡಲು ಹೊರಡುವುದು ಗಂಡಸಿನ ಸ್ವಾರ್ಥದ ಪರಮಾವಧಿಯಾಗಿ ಕಾಣುತ್ತದೆ. ಸ್ವಂತ ಮಗಳೇ ಆಗಿದ್ದರೂ ತಾಯಿಯ ಕಾರಣದಿಂದ 'ಜಾತಿಪ್ರಜ್ಞೆ' ಭೂತವಾಗಿ ಕಾಡುತ್ತದೆ. ತನ್ನ ಲಾಲಸೆಗಾಗಿ ಒಬ್ಬ ಹೆಂಗಸಿನ ಬದುಕು ನಲುಗಿ ಹೋದುದರ ಯಾವ ಭಾವವೂ ಅವನ್ನಲ್ಲಿ ಕಾಣುವುದಿಲ್ಲ. ಹೆಣ್ಣುಗಳಿರುವುದೇ ತನ್ನಂತಹವರನ್ನು ತೃಪ್ತಿಪಡಿಸಲು ಎಂಬ ಧೋರಣೆ ಅವನದು ತನ್ನ ಜಾತಿಯ ಬಡವನ ಮಡದಿಯಾಗಿ ಬದುಕುವುದಕ್ಕಿಂತ, ಮೇಲು ಜಾತಿಯ ಶ್ರೀಮಂತನ ಇಟ್ಟುಕೊಂಡವಳಾಗಿ ಬಾಳುವುದು ಗೌರವವೆಂದೇ ಅವರನ್ನು ನಂಬಿಸುತ್ತ ಬರಲಾಗಿದೆ.

ಗೀತಾ ಅವರದೇ ಆದ ಕಾದಂಬರಿ 'ದಂಗೆಯ' ನಾಯಕಿಯಾಗಿ ದುರಗಿಯ ಬದುಕು ಹೆಂಗಸೊಬ್ಬಳು ಯಾವ್ಯಾವ ರೀತಿಯಲ್ಲಿ ಶೋಷಿತಳಾಗಬಹುದೆನ್ನುವುದನ್ನು ಪ್ರತಿನಿಧಿಕರಿಸುತ್ತದೆ. ಅನಾಥಳಾದ ದುರಗಿಗೆ ಆಶ್ರಯಕೊಟ್ಟ ಭಾವನೆ ಅವಳ ಮೇಲೆ ಅತ್ಯಾಚಾರವೆಸಗುತ್ತಾನೆ. ಅವಳಿಗಿಂತ ಬಹಳ ದೊಡ್ಡವನಾದ ಮಾಳಪ್ಪನೊಂದಿಗೆ ಮದುವೆ ಮಾಡುತ್ತಾನೆ. ಗಂಡನ ಸೋಮಾರಿತನ ಹಾಗೂ ಕಚ್ಚೆಹರುಕತನದಿಂ.ದಾಗಿ ನೋವನ್ನೆ ಅನುಭವಿಸಬೇಕಾಗುತ್ತದೆ. ಮಗಳು ಹುಟ್ಟಿದ ಮೇಲೆ ಗಂಡ ದೇಶಾಂತರ ಹೋಗುತ್ತಾನೆ. ಅದಕ್ಕೆ ಅಂಜದೆ ತನ್ನ ರಟ್ಟೆಯ ಬಲವನ್ನು ನಂಬಿ ಬದುಕುತ್ತಾಳೆ. ಒಬ್ಬಳೇ ಇರುವುದರಿಂದ ಕಾಮಣ್ಣರ ಕಾಟ ಅತಿಯಾಗಿ ಮಗಳೊಂದಿಗೆ ಆ ಊರು ಬಿಟ್ಟು ನಡೆದ ದುರಗಿ ಇನ್ನೊಂದು ಹಳ್ಳಿಯಲ್ಲಿ ಊರ ಹಿರಿಯರ ಆಸರೆ ಪಡೆದು ಗುಡಿಸಲು ಕಟ್ಟಿ ಬಾಳ್ವೆ ಆರಂಭಿಸುತ್ತಾಳೆ. ಆ ಊರ ಕುಲಕರ್ಣಿ ಗೋವಿಂದಪ್ಪನ ಬೇಡಿಕೆಯನ್ನು ಮೊದಲು ನಿರಾಕರಿಸಿದರೂ ಪರಿಸ್ಥಿತಿಯ ಒತ್ತಡದಲ್ಲಿ ಅವನೊಂದಿಗೆ ಹೊಂದಿಕೊಂಡು ಬದುಕುತ್ತಾಳೆ. ತನ್ನ ಮಗಳು ಮತ್ತು ಗೋವಿಂದಪ್ಪನ ಮಗ ಒಟ್ಟಾಗಿ ಓದುತ್ತ ಅವರ ನಡುವೆ ಪ್ರೀತಿಯುಂಟಾದಾಗ ಬಿರುಗಾಳಿ ಬೀಸುತ್ತದೆ. ಗೋವಿಂದಪ್ಪ ಸಾವಿತ್ರಿಯನ್ನು ಮುಗಿಸಿಬಿಡುವ ಸಂಚು ಹೂಡುತ್ತಾನೆ. ಈ ಸೂಕ್ಷ್ಮವರಿತ ದುರಗಿಯ ಮನಸ್ಸು ಅವನ ವಿರುದ್ಧ ದಂಗೆಯೇಳುತ್ತದೆ. ಉಪಾಯವಾಗಿ ಅವಳು ಕುಕ್ಕಣಿಯನ್ನು ಸಾಯಿಸುತ್ತಾಳೆ.

'ಪಕ್ಕಾ ಪಿತೃಮೌಲ್ಯಗಳ ಕೋಟೆಯಂಥ ಜಗತ್ತಿನಲ್ಲಿ ಎಲ್ಲ ಅರ್ಥಗಳಲ್ಲೂ ಒಂಟಿಯಾದ ಹೆಣ್ಣು ಗೌರವಯುತ ಬಾಳುವೆ ನಡೆಸುವುದು ಎಷ್ಟು ಕಷ್ಟ ಎಂಬುದನ್ನು ಈ ಕಾದಂಬರಿಯು ವರ್ಣಿಸುವ ತೀವ್ರತೆಯನ್ನು ನೋಡಿದಾಗ ಹಸಿಹಸಿ ವಾಸ್ತವವನ್ನೇ ನೋಡಿದಂತಾಗಿ ಗಾಬರಿಯಾಗುತ್ತದೆ. ಮನೆಯೊಳಗೆ ನಡೆಯುವ ಅತ್ಯಾಚಾರ, ಗಂಡಸರಿಗಿರುವ ಹೆಚ್ಚಿನ ಲೈಂಗಿಕ ಸೌಲಭ್ಯಗಳು, ಇದೂ ಸಾಲದೆಂಬಂತೆ ಗಂಡಿನ ಭೋಗಜೀವನಕ್ಕೆ ಪ್ರಚೋದನೆ ಕೊಡುವ ಕುಂಟಲಗಿತ್ತಿಯರು ಇಂಥ ವ್ಯವಸ್ಥೆಯನ್ನು ಪುರುಷ ಪ್ರಧಾನ ಸಮಾಜವು ತನ್ನ ಅನುಕೂಲಕ್ಕಾಗಿ ಸೃಷ್ಟಿಸಿಕೊಂಡಿರುತ್ತದೆ. ಗಂಡಿನ ಬೆಂಬಲ ಇಲ್ಲದ ಹೆಣ್ಣುಗಳು ಅನುಭವಿಸುವ ನಿತ್ಯ ಅಸಹಾಯಕ ಸ್ಥಿತಿ ಇವೆಲ್ಲವೂ ಪಿತೃವ್ಯವಸ್ಥೆಯ ಗಾಳಿಯಲ್ಲಿರುವ ಸ್ತ್ರೀವಿರೋಧಿ ಮೌಲ್ಯಗಳನ್ನು ಅನಾವರಣಗೊಳಿಸುತ್ತವೆ. ಈ ಸ್ಥಿತಿ ಎಷ್ಟು ಗಾಢವಾಗಿ ವರ್ಣಿತವಾಗಿದೆಯೆಂದರೆ ಕೊನೆಗೆ ತನ್ನ ಮಗಳ ಕೊಲೆಯನ್ನು ತಡೆಯುವುದಕ್ಕಾಗಿ ಕುಕ್ಕಣ್ಣಿ ಗೋವಿಂದಪ್ಪನನ್ನು ಮರೆಯಿಂದ ಕೊಲೆ ಮಾಡುವ ದುರಗಿ ವೀರರಮಣಿಯಂತೆ ಕಾಣುವುದಿಲ್ಲ. ಬದಲಾಗಿ ತನ್ನ ಆತ್ಮ ರಕ್ಷಣೆ, ವಂಶ ರಕ್ಷಣೆ ಮಾಡಬಯಸುವ ಅಸಹಾಯಕ ಪ್ರಾಣಿಯಂತೆ ಕಾಣಿಸಿಬಿಡುತ್ತಾಳೆ'. ಎನ್ನುವ ಎಲ್.ಜಿ. ಮೀರಾ ಅವರು ವಿವರಣೆ ಸಹಜವಾಗಿದೆ.

ಎಲ್ಲವನ್ನು ಬಾಯ್ಮುಚ್ಚಿಕೊಂಡು ಸಹಿಸುತ್ತಲೇ ಇದ್ದರೆ ಯಾವ ಬದಲಾವಣೆಯೂ ಸಾಧ್ಯವಾಗದು ಎನ್ನುವುದು ಲೇಖಕಿಯ ನಿಲುವು ಸಾವಿತ್ರಿಯ ಬದುಕಿನ ಸಂದರ್ಭ ಹಾಗೂ ದುರಗಿಗೆದುರಾದ ಸನ್ನಿವೇಶದ ಇಕ್ಕಟ್ಟು ಅವರನ್ನು ಪ್ರತಿಭಟಿಸಲು ಪ್ರೇರೇಪಿಸುತ್ತದೆ. ಇಲ್ಲಿಯಂತೆ ಪ್ರತಿಭಟನೆ ಒಳಗಿನಿಂದ ಬಂದಾಗ ಮಾತ್ರ ವ್ಯವಸ್ಥೆಯಲ್ಲಿ ಚಲನಶೀಲತೆ ಉಂಟಾಗಲು ಸಾಧ್ಯವಾಗುತ್ತದೆ. ಆ ಮೂಲಕ ಅನ್ಯಾಯಕ್ಕೊಳಗಾಗುವ ವ್ಯಕ್ತಿಗಳಿಗೆ ನ್ಯಾಯ ದೊರಕಿಸಿಕೊಳ್ಳಲು ಶಕ್ಯವಾಗುತ್ತದೆ ಎನ್ನುವುದನ್ನು ಇತಿಹಾಸ ತೋರಿಸಿಕೊಟ್ಟಿದೆ ಎನ್ನುತ್ತಾರೆ ಚಂದ್ರಮತಿ ಸೋಂದಾ.

೪.೩.೫ ವಿವಾಹ ಬಾಹಿರ ಸಂಬಂಧ :

ವಿವಾಹ ಕೇಂದ್ರಿತ ಸಮಸ್ಯೆಗಳಲ್ಲಿ ವಿವಾಹ ಬಾಹಿರ ಸಂಬಂಧವೂ ಸಾಕಷ್ಟು ಚರ್ಚೆಗೊಳಗಾಗಿದೆ. ಇದಕ್ಕೆ ಕಾರಣಗಳು ಹಲವು. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಂತೂ ಪುರುಷನಿಗೆ 'ಆಳುವವನಿಗೆ ಅರವತ್ತು ಮಂದಿ' ಎಂದು ಹೇಳಿ ಲೈಂಗಿಕ ಮುಕ್ತತೆಯನ್ನು ಘೋಷಿಸಿದೆ. ಮೇಲ್ ಜಾತಿಯ ಮಹಿಳೆಗೆ ಯಾವುದೇ ಕಾರಣಕ್ಕೂ ವಿವಾಹಬಾಹಿರ ಸಂಬಂಧದ ಸಮ್ಮತಿ ಇಲ್ಲ. ಕೆಳಜಾತಿಗಳಲ್ಲಿ ಗಂಡನಿದ್ದ, ಗಂಡನಿಲ್ಲದ ಸಂದರ್ಭಗಳಲ್ಲಿಯೂ ಇಂಥ ಸಂಬಂಧಗಳು ಸಹಜವೆಂಬಂತೆ ಕಂಡುಬರುತ್ತದೆ. ಗಂಡನಿದ್ದರೂ ತನ್ನ ಆರ್ಥಿಕ ಸ್ಥಿತಿಯಿಂದಾಗಿಯೊ, ಅಧಿಕಾರ ವರ್ಗದಲ್ಲಿ ತಾನು ಜೀತದಿಂದಿರುವ ಕಾರಣವಾಗಿಯೊ ಇಂಥ ಸಂಬಂಧಗಳನ್ನು ವಿರೋಧಿಸದಿರುವುದು ಕಾಣುತ್ತದೆ. ಗಂಡು ಹೆಣ್ಣಿನ ನಡುವಿನ ವಯಸ್ಸಿನ ಅಂತರ, ಜಮೀನ್ದಾರ ಗೌಡರೊಂದಿಗಿನ ಸಂಬಂಧದ ಪ್ರತಿಷ್ಠೆ, ದುಡಿಯದ ಕೆಳವರ್ಗದ ಗಂಡಸರು ಇವು ಕೂಡ ವಿವಾಹ ಬಾಹಿರ ಸಂಬಂಧಕ್ಕೆ ಕಾರಣವಾಗುವುದನ್ನು ಹೈದರಾಬಾದ್ ಕರ್ನಾಟಕ ಕಥನ ಸಾಹಿತ್ಯ ಪ್ರತಿಪಾದಿಸಿದೆ. ಆ ಕುರಿತು ಮುಂದೆ ಚರ್ಚಿಸಲಾಗುವುದು.

ಹೈದರಾಬಾದ್ ಕರ್ನಾಟಕ ಕಥನಗಳಲ್ಲಿ ಗೀತಾ ನಾಗಭೂಷಣರ 'ಧುಮ್ಮಸ್ಸು' ಕಾದಂಬರಿಯಲ್ಲಿ ಗೌರಿ, ಜಂಬಣ್ಣ ಅಮರ ಚಿಂತರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿಯ ಬುಡ್ಡಮ್ಮ, ಸಂಧ್ಯಾಹೊನಗುಂಟಕರ ಅವರ 'ಕಡಲ ಒಡಲು ಬಗೆದಷ್ಟು' ಕಥೆಯ ಅವ್ವ, ಬಿ.ಟಿ. ಲಲಿತಾನಾಯಕರ 'ತಾಯಿ ಸಾಕಿಬಾಯಿ' ಕಥೆಯ ಸಾಕಿಬಾಯಿ, ಶಾಂತರಸರ 'ಕಿಡಿ' ಕಥೆಯ ದೇವಕಿ, ಶ್ರೀಕಾಂತ ಪಾಟೀಲರ 'ಧರ್ಮ–ಬೇಲಿ–ಬದುಕು' ಕಥೆಯ ಮಲ್ಲಮ್ಮ, ಮೊದಲಾದ ಮಹಿಳೆಯರು ವಿವಾಹ ಸಂಸ್ಥೆಯ ಪರಿಪ್ರೇಕ್ಷವನ್ನು ದಾಟಿ ವಿವಾಹ ಸಂಸ್ಥೆಯಲ್ಲಿದ್ದುಕೊಂಡೇ, ವಿವಾಹ ಬಾಹಿರ ಸಂಬಂಧಗಳಿಂದ ತಮಗಾದ ಅನ್ಯಾಯವನ್ನು ಪ್ರತಿರೋಧಿಸುತ್ತಾರೆ. ತಮ್ಮ ಬದುಕಿಗೆ ತಮ್ಮದೇ ಆದ ಪರಿಹಾರ ಕಂಡುಕೊಳ್ಳುತ್ತಾರೆ. ಸಂಧ್ಯಾ ಅವರ ಅವ್ವ ಮಾತ್ರ ಗಂಡನ ವಿವಾಹಬಾಹಿರ ಸಂಬಂಧವನ್ನು ವಿಶ್ಲೇಷಿಸುವ ರೀತಿ ವೈಚಾರಿಕವಾದುದು.

ಮನೆಯಿಂದ ದೂಡಲ್ಪಟ್ಟವಳು :

ತಾಯ್ತನವನ್ನು ವೈಭವೀಕರಿಸಿ ಮಕ್ಕಳಿಲ್ಲದ ಮಹಿಳೆಯನ್ನು ಪಿತೃ ಸಂಸ್ಕೃತಿಯಲ್ಲಿ ತೀರ ನಿಕೃಷ್ಟವಾಗಿ ಕಾಣಲಾಗುತ್ತದೆ. ದೋಷಾರೋಪಣೆಯೊಂದಿಗೆ ದೈಹಿಕ ಹಿಂಸೆಗೆ ಗುರಿಪಡಿಸಿ, ಮನೆಯಿಂದ ಹೊರದೂಡಿ ಮನೆಯಿಲ್ಲದವಳನ್ನಾಗಿ ಮಾಡಲಾಗುತ್ತದೆ. ಬೀದಿಗೆ ಬಿದ್ದವಳನ್ನು ಸಮಾಜ ಬೇರೆ ರೀತಿಯಿಂದಲೇ ಶೋಷಿಸಲು ಸಿದ್ಧವಾಗಿರುತ್ತದೆ. ಇಂಥ ಶೋಷಣೆಯಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಮಹಿಳೆ ಬೇರೊಬ್ಬ ಪುರುಷನ ಆಶ್ರಯಕ್ಕೆ ಹೋಗುವುದು ಅನಿವಾರ್ಯವಾಗುತ್ತದೆ. ಬಾಳು ಕೆಟ್ಟವಳಿಗೆ ಪುನಃ ವಿವಾಹವಾಗಿ ಹೊಸ ಬದುಕು ಕಟ್ಟಿಕೊಳ್ಳುವುದು ಅಸಾಧ್ಯದ ಸಂಗತಿಯಾಗಿದೆ. ಹೀಗಾಗಿ ವಿವಾಹ ಸಂಸ್ಥೆಯಿಂದ ಹೊರದೂಡಲ್ಪಟ್ಟವಳು, ಹಲವರ ಹಸಿದ ಕಣ್ಣಿಗೆ ಆಹಾರವಾಗುವ ಬದಲು ಒಬ್ಬನನ್ನು ಒಪ್ಪಿ ವಿವಾಹ ಬಾಹಿರ ಸಂಬಂಧದಲ್ಲಿ ಬದುಕಬೇಕಾಗುತ್ತದೆ.

ಗೀತಾ ನಾಗಭೂಷಣರ 'ಧುಮಸ್ಸು' ಕಾದಂಬರಿಯಲ್ಲಿ ಗೌರಿ ಅನಿವಾರ್ಯ ಸಂದರ್ಭದಲ್ಲಿ ವಿವಾಹಬಾಹಿರ ಸಂಬಂಧವನ್ನು ಒಪ್ಪುವ ಸಂಗತಿ ಇದೆ. ಗೌರಿ ವಿವಾಹವಾಗಿ ಐದು ವರ್ಷ ಕಳೆದರೂ ಮಕ್ಕಳಾಗಲಿಲ್ಲ. ಅತ್ತೆ, ನಾದಿನಿ, ಗಂಡ ಎಲ್ಲರಿಂದ ದಿನವೂ ಶಾರೀರಿಕ ಮಾನಸಿಕ ಹಿಂಸೆ ಅನುಭವಿಸುತ್ತಾಳೆ. ಅಷ್ಟರಲ್ಲಿ ಗಂಡನಿಗೆ ಬೇರೆ ಹೆಣ್ಣಿನೊಂದಿಗೆ ಮದುವೆ ಮಾಡಿದಾಗ ಸಾಯಬೇಕೆಂದು ಓಡಿ ಬಂದು ಲಾರಿ ಕೆಳಗೆ ಬೀಳುತ್ತಾಳೆ. ಡ್ರೈವರ್‌ನ ಮುಂಜಾಗೃತೆಯಿಂದ ಬದುಕುಳಿದು, ಪಾಶುಮಿಯಾನ ಸಹಾಯದಿಂದ ಅವನ ಮನೆಗೆ ಬಂದಾಗ, ಪಾಶುಮಿಯಾ ಹರೆಯದ ಹೆಣ್ಣನ್ನು ಮನೆಯಲ್ಲಿರಿಸಿಕೊಂಡರೆ ಅಪವಾದ ತಪ್ಪದೆಂದು ಭಾವಿಸಿ ಗೌರಿಗೆ 'ನೀಹೀಂಗ್ ಅಳಕೋತ ಕುಂತರ ಏನೂ ಆಗಂಗಿಲ್ಲ. ನಾನೂ ಸಂಸಾರಸ್ಥ ಹೆಣ್ತಿಮಕ್ಳೂ ಅದಾರ ಮತ್ತು ನನಗ ಬ್ಯಾರೆ ಹೆಂಗಸರ ಖಯ್ಯಾಲಿನೂ ಇಲ್ಲ. ಆದರ ಯಾಕೋ ನಿನಗ ನೋಡ್ದಾಗಲಿಂದ ನನ್ ಮನಸ್ಸು ಭಾಳ ಬೇಚೈನ್ ಆಗ್ಯಾದ, ನೀ ಹೂಂ ಅಂದ್ರ ನಾ ನಿನಗೆ ನಿಕಾ ಮಾಡ್ಕೋತೀನಿ. ಅಂದ್ರ ನೀ ನಮ್ಮ ಜಾತಿ ಧರ್ಮದಾಗ ಬರ್ಬೇಕು. ಅದು ಬ್ಯಾಡ ಅಂದ್ರ ನಾವಿಬ್ರೂ ಹಿಂಗೇ ಇರಾಮಿ, ನೀ ನನ್ನ 'ರಖೇಲ್' ಆಗಿರು. ನಿನಗ ಹೆಣ್ತಿಕ್ಕಿಂತಾ ಹೆಚ್ಚು ನೋಡ್ಕೋತೀನಂತ ನಿನ್ನ ಜಾತಿ ನಿನಗ ನನ್ ಜಾತಿ ನನಗ'[೬೬] ಎಂದಾಗ ಪಾಶುಮಿಯಾನ ಹೃದಯವಂತಿಕೆ ಮತ್ತು ಸಹಾನುಭೂತಿಗೆ ಅಲ್ಲದೆ ಯಾವುದೇ ಬಗೆಯ ಒತ್ತಾಯವಿಲ್ಲದ ನಡವಳಿಕೆಯನ್ನು ಪರಾಮರ್ಶಿಸಿದ ಗೌರಿ ಕಾಮುಕರ ಕಣ್ಣಿಗೆ ಆಹಾರವಾಗದಿರಬೇಕಾದರೆ ಪಾಶುಮಿಯಾನ ಸಂಗಾತವನ್ನು ಒಪ್ಪುವುದೆ ಸರಿ ಎಂದು ನಿರ್ಧರಿಸುತ್ತಾಳೆ. ಜಾತಿ ಬಿಡಲಾಗದೆ 'ರಖೇಲ' ಆಗುತ್ತಾಳೆ. ಬದುಕಿನ ಅನಿವಾರ್ಯ ವಿವಾಹ ಬಾಹಿರ ಸಂಬಂಧದಲ್ಲಿ ನೆಲೆ ಕಾಣುತ್ತದೆ.

ರೋಗಿಷ್ಠ ಗಂಡ :

ಲೈಂಗಿಕ ಬಯಕೆಗೆ ಸ್ತ್ರೀ-ಪುರುಷರೆಂಬ ಭೇದವಿಲ್ಲ ಗಂಡಿನಂತೆ ಹೆಣ್ಣಿಗೂ ಅದು ಸಹಜವಾದುದು. ಆದರೆ ಪಿತೃ ಸಂಸ್ಕೃತಿಯಲ್ಲಿ ಹೆಣ್ಣು ಲೈಂಗಿಕವಾಗಿ ಸಂಪೂರ್ಣ ನಿರ್ಬಂಧಿಸಲ್ಪಟ್ಟಿದ್ದಾಳೆ. ಅವಳು ವಿವಾಹ ಪರಿಪ್ರೇಕ್ಷದಲ್ಲಿ ಮಾತ್ರ ಲೈಂಗಿಕ ಕ್ರಿಯೆಗೆ ಒಳಪಡಬೇಕು. ಗಂಡ ರೋಗಿಷ್ಟನಾದರೆ, ಲೈಂಗಿಕ ದುರ್ಬಲನಾದರೆ, ಸತ್ತರೆ ಆಗ ಮಹಿಳೆ ಲೈಂಗಿಕ ಅಪೇಕ್ಷೆಯನ್ನು ಪ್ರಯತ್ನಪೂರ್ವಕ ನಾಶಗೈಯಬೇಕು. ಅದನ್ನು ಮೀರಿ ವಿವಾಹ ಬಾಹಿರ ಸಂಬಂಧಕ್ಕೆಳಸಿದರೆ ಸಮಾಜ ಅವಳಿಗೆ ಅತ್ಯಂತ ಕ್ರೂರವಾಗಿ ಶಿಕ್ಷಿಸುತ್ತದೆ.

ಜಂಬಣ್ಣ ಅಮರ ಚಿಂತರ 'ಕುರುಮಯ್ಯ ಅಂಕುಶ ದೊಡ್ಡಿ' ಕಾದಂಬರಿಯಲ್ಲಿ ಬುಡ್ಡಮ್ಮ ಗಂಡನ ಕ್ಷಯ ರೋಗದಿಂದಾಗಿ ತನ್ನ ಲೈಂಗಿಕ ಬಯಕೆಯನ್ನು ಹತ್ತಿಕ್ಕಲಾಗದೆ, ಜಂಬಯ್ಯನೊಂದಿಗೆ ವಿವಾಹ ಬಾಹಿರ ಸಂಬಂಧ ಬೆಳೆಸಿದಾಗ, ಪಂಚಾಯ್ತಿ ಅವಳನ್ನು ಮಾರೆಪ್ಪನ ಇಚ್ಛೆಯಂತೆ ಜಂಬಯ್ಯನಿಗೆ ಒಪ್ಪಿಸುತ್ತದೆ. ಆದರೆ ಅವಳ ಮಗು ಮಾತ್ರ ಮಾರೆಪ್ಪನ ಹತ್ತಿರವೇ ಇರಬೇಕೆಂದು ವಿಧಿಸುತ್ತದೆ. ಬುಡ್ಡಮ್ಮ ತನ್ನ ಪ್ರಿಯಕರನನ್ನು ಪಡೆದಾಗಲೂ ಮಗುವನ್ನು ಬಿಟ್ಟಿರಲಾಗದೆ ಸಂಕಟಪಡುತ್ತಾಳೆ. ಜಂಬಯ್ಯನ ಗಮನವೆಲ್ಲ ಅವಳನ್ನು ಭೋಗಿಸುವ ಕಡೆಗಿದ್ದರೆ ಬುಡ್ಡಮ್ಮ ಮಗುವಿಗಾಗಿ ಪರಿತಪಿಸುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ವಂಶವು ಗಂಡಿನಿಂದ ಗುರುತಿಸಲ್ಪಡುವುದರಿಂದ ಹೆಣ್ಣು ನಗಣ್ಯವಾಗುತ್ತಾಳೆ. ಮಕ್ಕಳ ಹಕ್ಕು ಪುರುಷನದಾಗಿ ತಾಯಿ ಮರುಗುವಂತಾಗುತ್ತದೆ. ಮಾರೆಪ್ಪ ಮಗುವನ್ನು ಸಾಕಲು ಶಕ್ತನಲ್ಲವಾದರೂ ಮಗುವನ್ನು ತನ್ನ ವಶಕ್ಕೆ

ತೆಗೆದುಕೊಳ್ಳುವುದು. ಜಂಬಯ್ಯ ಮೊದಲ ಗಂಡನ ಮಗುವನ್ನು ಒಪ್ಪದಿರುವುದು ಬುಡ್ಡಮ್ಮನನ್ನು ಘಾಸಿಗೊಳಿಸುತ್ತದೆ. ವಿವಾಹ ಬಾಹಿರ ಸಂಬಂಧ ಅವಳ ಬದುಕನ್ನು ಬವಣೆಯಾಗಿಸಿದ್ದಲ್ಲದೆ ಅವಳ ಸಾವಿಗೂ ಕಾರಣವಾಗುತ್ತದೆ.

ಅಮರಚಿಂತರು ಕಾದಂಬರಿಯ ರಚನೆಗೆ ಪೂರ್ವಸಿದ್ಧತೆಯಾಗಿ ಕೊರವರ ರೀತಿ ನೀತಿ ಭಾಷೆಗಳನ್ನು ತೀರ ಹತ್ತಿರದಿಂದ ಗಮನಿಸಿ ಆಳವಾದ ಚಿಂತನೆಗೆ ಈಡುಮಾಡಿ ನಂತರ ಬರೆದುದಾಗಿ ಹೇಳಿಕೊಂಡಿದ್ದಾರೆ. ರಾಯಚೂರು ಭಾಷೆಯೊಂದಿಗೆ ಕೊರವ ಭಾಷೆಯ ಬಳಸಿ ಇದರ ಸೊಗಡನ್ನು ಹೆಚ್ಚಿಸಿದ್ದಾರೆ.

ಪುರುಷ ಲೋಲುಪತೆ :

ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷರಿಗೂ ವಿವಾಹ ಅನಿವಾರ್ಯವೆ. ವಂಶ ಮುಂದುವರೆಯಲು ಸ್ವಜಾತಿಯ ಹೆಣ್ಣಿನೊಂದಿಗೆ ವಿವಾಹವೇರ್ಪಟ್ಟು ಹೆಣ್ಣೊಬ್ಬಳು ಗೃಹಬಂಧಿಯಾಗುತ್ತಾಳೆ. ಲೈಂಗಿಕ ಲೋಲುಪತೆಗೆ ಜಾತಿ ನಿರ್ಬಂಧವಿಲ್ಲ. ಗಂಡು ಎಷ್ಟು ಹೆಣ್ಣುಗಳೊಂದಿಗೆ ಬೇಕಾಗದರೂ ವಿವಾಹಬಾಹಿರ ಸಂಬಂಧವಿರಿಸಿಕೊಳ್ಳಬಹುದು, ಹೆಂಡಿತಿಯಾದ ಮಹಿಳೆ ಅದನ್ನು ಪ್ರಶ್ನಿಸುವಂತಿಲ್ಲ. 'ನಾ ಮೆಚ್ಚಿ ಮುಡಿದ ಮಲ್ಲಿಗೆ ಅವಳೊಂದು ಗಳಿಗೆ ಮುಡಿಯಲಿ' ಎಂಬ ಉದಾರತೆ ತೋರಬೇಕು, ಇಲ್ಲವೇ 'ರಂಭಿಮ್ಯಾಲ ರಂಭಿ ಛಂದೇನೋರಾಯ' ಎಂದು ಮೆಲುದಲ್ಲಿಯಲ್ಲೇ ಕೇಳಿದ್ದಿದೆ. ವಿರೋಧ ಪ್ರಯೋಜನಕಾರಿಯಲ್ಲ ಎಂದೇ ಭಾವಿಸಲಾಗಿದೆ. ಅದು ಪ್ರತಿಕೂಲ ಪರಿಣಾಮವನ್ನು ಬೀರಬಹುದಾಗಿದೆ.

ಸಂಧ್ಯಾ ಹೊನಗುಂಟಕರ ಅವರ 'ಕಡಲು ಒಡಲು ಬಗೆದಷ್ಟು' ಕಥೆಯಲ್ಲಿ ಗಂಡನ ವಿವಾಹ ಬಾಹಿರ ಸಂಬಂಧವನ್ನು ಮೌನವಾಗಿ ಸಹಿಸಬೇಕಾದ ಮಹಿಳೆಯ ಮಾನಸಿಕ ತುಡಿತದ ಚಿತ್ರಣವಿದೆ. ತನ್ನ ಗತ್ತು ಬಿಮ್ಮು ದರ್ಪಗಳಿಂದ ಎಲ್ಲರನ್ನು ಹೆದರಿಸುವುದೇ ಗಂಡು ಸ್ವಾಭಾವವೆಂದೂ, ವಿಲಾಸ ಜೀವನಕ್ಕೆ ವಿವಾಹಬಾಹಿರ ಸಂಬಂಧವನ್ನು ಆಶ್ರಯಿಸುವ ಗಂಡು ತನ್ನ ವರ್ತನೆಯಿಂದ ಇತರರ ಮೇಲಾಗುವ ಪರಿಣಾಮದ ಕುರಿತು ಎಂದೂ ಆಲೋಚಿಸುವುದಿಲ್ಲ ಎಂಬುದನ್ನು ಕಥೆ ಚಿತ್ರಿಸುತ್ತದೆ.

ಇಂಥವನ ಹೆಂಡತಿಯಾಗಿ ಜೀವನ ಸವೆಸಿದರೂ ಇತರರ ಮುಂದೆ ಎಂದೂ ಅವನ ನಡತೆಯ ಬಗ್ಗೆ ಚರ್ಚಿಸಿ ಅವನನ್ನು ಹಗುರವಾಗಿ ಕಾಣುವಂತೆ ಮಾಡುವುದಿಲ್ಲ. ತನ್ನ ಹಾಸಿಗೆಯಲ್ಲೇ ಪರಸ್ತ್ರೀಯೊಂದಿಗೆ ರಮಿಸಿದಾಗಲೂ, ನಿಟ್ಟುಸಿರು ಬಿಟ್ಟು ಸಹಿಸುವ ಯಾವ ಮಾತಿಗೂ ಬಾಳ ಮಹತ್ವ ಕೊಡಬಾರದು ಎಂದು ಹೇಳುತ್ತಲೇ ಜೀವನವನ್ನು ಬಂದಂತೆ ಎದುರಿಸಿದ. ತನಗೆ ಏನಿಲ್ಲದಿದ್ದರೂ ಎಲ್ಲಾ ಇದೆ ಎಂದು ಬಾಳಿದ ತನ್ನ ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬಿದ 'ಹೆಣ್ಣು ತನ್ನ ಎಲ್ಲಾ ಶಕ್ತಿಯನ್ನು ಬಳಸಿಕೊಳ್ಳಬೇಕು. ಆಕಿಯಿಂದನೇ ಈ ಜಗತ್ತು ಸಂಸಾರ ನಡೆಯೋದು.' ಎಂದು ಎಲ್ಲ ಜವಾಬ್ದಾರಿಯನ್ನು ಹೊರುವ ಅವ್ವ ಒಂದು ಅದ್ಭುತ ಶಕ್ತಿಯಾಗಿದ್ದಾಳೆ.

ನಿಂಗಿಯೊಂದಿಗಿನ ತನ್ನ ಗಂಡನ ಸಂಬಂಧವನ್ನು ಬಿಡಿಸಲು ನಾದಿನಿ ವಿಜೂ ಹೇಳಿದಾಗ ಅದನ್ನು ಬಿಡಿಸುವುದು ದೊಡ್ಡದಲ್ಲ. ಆದರೆ ಮತ್ತೊಬ್ಬಳನ್ನು ಅರಸಿ ಹೋಗುವುದಿಲ್ಲವೆಂಬ ಭರವಸೆ ಎಲ್ಲಿದೆ. ತನ್ನನ್ನು ಮೀರಿದರೂ ಚಿಂತೆಯಿಲ್ಲ ಇವನನ್ನೇ ನಂಬಿ ಬಂದಿರುವ ನಿಂಗಿಯನ್ನು ದಾಟಬಾರದೆಂದು ಯೋಚಿಸುವಲ್ಲಿ

ಒಂದು ಹೆಣ್ಣಿನ ನೋವನ್ನು ಇನ್ನೊಂದು ಹೆಣ್ಣು ಅರಿಯುವ ಪರಿ ಇದೆ. ನಿಂಗಿಯ ಮಗ ಬಸಪ್ಪನಿಗೆ ಗಂಡ ಹೊಲ ಕೊಟ್ಟಾಗಲೂ ಅದನ್ನು ಸಮರ್ಥಿಸುವ. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆಯಾಗುವುದನ್ನು ತಪ್ಪಿಸುವ ಅವ್ವ ನ್ಯಾಯನಿಷ್ಠುರಿಯಾಗಿದ್ದಾಳೆ. 'ಸತ್ತ ಮ್ಯಾಲಿನ ವಿಷಯ ಮುಖ್ಯವಲ್ಲ ಇದ್ದಾಗಿನ ಬದುಕು ಮುಖ್ಯ'[16] ಎಂದು ಜೀವನ್ಮುಖಿಯಾಗುತ್ತಾಳೆ. ಬದುಕು ಕಟ್ಟುತ್ತಾಳೆ. ಆದರೆ ಹಾಗೆಂದು ಅವಳು ಅಸಹಾಯಕಳಲ್ಲ, ಅಳುಬುರುಕಿಯಲ್ಲ, ಗಂಡನ ನಡತೆಯನ್ನು ಸಮರ್ಥಿಸುವವಳೂ ಅಲ್ಲ, ತಿದ್ದಲಾಗದ ಸಂಗತಿಗೆ ತನ್ನ ಶ್ರಮವನ್ನು ವ್ಯರ್ಥವಾಗಿಸಲು ಅವಳು ಬಯಸುವುದಿಲ್ಲ. ಮಕ್ಕಳೆದುರು ಗಂಡನೊಂದಿಗೆ ಜಗಳಾಡಿ ರಂಪಮಾಡುವುದಿಲ್ಲವಾದರೂ ತನ್ನ ವಿರೋಧವನ್ನು ಅವನು ಸತ್ತಾಗ ಮೊಸಳೆ ಕಣ್ಣೀರು ಸುರಿಸದೆ ತೋರುತ್ತಾಳೆ. ಅವನ ಸಾವಿನಲ್ಲಿ ಬಂಧ ಮುಕ್ತತೆಯನ್ನು ಅನುಭವಿಸುತ್ತಾಳೆ. ಹೀಗೆ ವಿವಾಹ ಸಂಸ್ಥೆ ಮಹಿಳೆಯ ಬದುಕಿಗೆ ನೆಮ್ಮದಿ ನೀಡಿದ್ದಕ್ಕಿಂತ ಉಸಿರುಗಟ್ಟಿಸಿದ್ದೆ ಹೆಚ್ಚು ಎಂಬುದನ್ನು ಅವ್ವನ ಬದುಕು ಪ್ರತಿನಿಧಿಸುತ್ತದೆ. ವಿವಾಹ ಬಾಹಿರ ಸಂಬಂಧ ಪುರುಷನದಾದರೂ ಮಹಿಳೆಯದಾದರೂ ಸಮಸ್ಯೆ ಸಂಕಟಗಳು ಕಾಡುವುದು ಮಹಿಳೆಯನ್ನು ಎಂಬುದನ್ನು ಕಥೆ ಶಕ್ತವಾಗಿ ಪ್ರತಿನಿಧಿಸಿದೆ.

ಸಂಧ್ಯಾ ಅವರ ಕಥೆಯಲ್ಲಿಯ ಅವ್ವನಂತೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಬಹುತೇಕ ಮಹಿಳೆಯರು ಗಂಡನ ಪರಸ್ತ್ರೀ ಸಂಗವನ್ನು ಪ್ರತಿಹೇಳದೆ ಸಹಿಸಿ ಬದುಕಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆ ತಮ್ಮ ಮೇಲೆ ಹೊರಿಸಿದ ಗಂಡನ ಮರ್ಯಾದೆ ಕಾಪಾಡುವ ಹೊಣೆಯನ್ನು ಎಚ್ಚರದಿಂದ ನಿರ್ವಹಿಸಿಕೊಂಡು ಬಂದಿದ್ದಾರೆ. ತಮ್ಮ ನೋವನ್ನು ನುಂಗಿಕೊಂಡು ಜಗತ್ತಿಗೆ ತೋರಗೊಡದೆ ಇಲ್ಲದ ಸುಖ ನೆಮ್ಮದಿಗಳನ್ನು ಇರುವಂತೆ ಅಭಿನಯಿಸಿದ್ದಾರೆ. ಪುರುಷ ಸಮೂಹ ಮಹಿಳೆಯ ಈ ತ್ಯಾಗದ ಲಾಭ ಪಡೆದು ಅವಳನ್ನು ವಂಚಿಸುತ್ತಾ ಇನ್ನೊಬ್ಬಳ ಬದುಕಿನೊಂದಿಗೆ ಚಲ್ಲಾಟವಾಡುತ್ತಾ, ಇದನ್ನೆ ಪೌರುಷ ಘನತೆ ಗಾಂಭೀರ್ಯವೆಂದು ಸಾರುತ್ತ ಬಂದಿದೆ. ಮಹಿಳೆ ಸಹಜವಾಗಿ ತನಗೆ ದೊರೆಯಬೇಕಾದುದರಿಂದಲೂ ವಂಚಿತಳಾಗುತ್ತ, ಪುರುಷ ಸಹಜವಾದುದರೊಂದಿಗೆ ಹೆಚ್ಚಿನದನ್ನು ಪಡೆಯುತ್ತ ಹೆಣ್ಣು-ಗಂಡಿನ ನಡುವೆ ಒಂದು ಅಸಮಾನತೆ ಪ್ರತಿಯೊಂದರಲ್ಲೂ ನಿರ್ಮಾಣವಾಗುವಂತಾಗಿದೆ.

ಆಸರೆ ತಂದ ಕುತ್ತು :

ಮಹಿಳೆ ಗಂಡನ ಚಿತೆಯಲ್ಲಿ ತನ್ನೆಲ್ಲಾ ಆಸೆ-ಆಂಕಾಕ್ಷೆಗಳನ್ನು ಸುಡಬೇಕು ಇಲ್ಲದ ವೈರಾಗ್ಯವನ್ನು ಆರೋಪಿಸಿಕೊಳ್ಳಬೇಕು. ಊಟ ಉಡುಗೆ-ತೊಡುಗೆಗಳನ್ನೆಲ್ಲ ಸಾಮಾಜಿಕ ನಿರೀಕ್ಷೆಯಂತೆ ಬದಲಾಯಿಸಿಕೊಳ್ಳಬೇಕು. ಪರಪುರುಷನನ್ನು ಕಣ್ಣೆತ್ತಿ ನೋಡಬಾರದು. ಉಕ್ಕುವ ಯವ್ವನವನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಬೇಕು. ಹಾಗಲ್ಲದೆ ಪರಪುರುಷ ಸಂಬಂಧಕೆಡಿಸಿದರೆ ಕೊಲೆಗೈಯಲೂ ಹೇಸದ ಪಿತೃ ಸಂಸ್ಕೃತಿಯ ಕಟುತ್ವವನ್ನು ಬಿ.ಟಿ. ಲಲಿತಾ ನಾಯಕರ 'ತಾಯಿ ಸಾಕಿಬಾಯಿ' ಕಥೆ ವಿಷದಪಡಿಸುತ್ತದೆ. ವಿವಾಹ ಬಾಹಿರ ಸಂಬಂಧದಿಂದಾಗಿ ಜೀವವನ್ನೇ ಕಳೆದುಕೊಳ್ಳಬೇಕಾದ ಸಂದರ್ಭವನ್ನು ಮನಗಾಣಿಸುತ್ತದೆ.

ತೀರ ಚಿಕ್ಕವಯಸ್ಸಿನಲ್ಲಿ ಸೇವ್ಯಾನನ್ನು ಮದುವೆಯಾಗಿ ನಾಲ್ಕೈದು ವರ್ಷದ ದಾಂಪತ್ಯದಲ್ಲಿ ಒಂದು ಮಗುವನ್ನು ಪಡೆದ ಸಾಕಿ ಬಾಯಿಗೆ ಜೀವನ ಸುಖಮಯವಾಗೇನೂ ಇರಲಿಲ್ಲ. ಪ್ರೀತಿ, ಪ್ರೇಮ ಅನುರಾಗ ಅನ್ನುವಂತಹ ಯಾವುದೊಂದೂ ಅನುಭವವಿಲ್ಲದ ತಣ್ಣಗಿನ ದಾಂಪತ್ಯ ಗಂಡನ ದೈಹಿಕ ದಾಳಿಯ ಅಸಹನೀಯತೆಯನ್ನು ಬಿಟ್ಟರೆ ಬೇರೇನನ್ನು ಕೊಡಲಿಲ್ಲ.

'ಮನೆಗೆಲಸ ಮಾಡಲು, ಅತ್ತೆ ಮಾವಂದಿರ ಸೇವೆ ಮಾಡಲು, ತೀರಿಕೊಂಡವಳ ಮಗನನ್ನು ಜೋಪಾನ ಮಾಡಲೆಂದೇ ಅವರು ತನ್ನನ್ನು ಸೊಸೆಯಾಗಿ ತಂದು ಕೊಂಡಿದ್ದು ಸ್ಪಷ್ಟವಾಗಿತ್ತು. ಒಂಭತ್ತು ವರುಷದ ಸವತಿಯ ಮಗನೊಡನೆ ತನ್ನದೊಂದು ಮಗುವನ್ನು ಜೋಪಾನ ಮಾಡುವ ಬದಲಾವಣೆಯೊಂದನ್ನು ಹೊರತು ಬದುಕಿನಲ್ಲಿ ಬೇರಾವ ಹೊಸತನವನ್ನು ಕಾಣದ ನೀರಸ ಯಾಂತ್ರಿಕ ದಿನಚರಿ' ಸಾಕಿಬಾಯಿಯದು.

ಮುನಿಯನ ಆತ್ಮೀಯತೆ ನೊಂದ ಮನಸ್ಸಿಗೆ ಸಾಂತ್ವನ ನೀಡಿದಾಗ ಬೆಳೆದ ಸ್ನೇಹವನ್ನು ಸಹಿಸದ ಸ್ವಂತ ಮಗ ದೇವಲ್ಯಾ ಮತ್ತು ಮಲ ಮಗ ಶಂಕರ ಇಬ್ಬರೂ ಸೇರಿ ಅವರಿಬ್ಬರನ್ನು ಕೊಂದು ನೇಣು ಹಾಕುವುದು ಪುರುಷ ಕ್ರೌರ್ಯದ ಪರಮಾವಧಿಯನ್ನು ದರ್ಶಿಸುತ್ತದೆ. ತಾಯಿಯ ಸ್ಥಾನದಲ್ಲಿ ನಿಂತು ತನ್ನ ಬದುಕಿಗೊಂದು ರೂಪ ಕೊಟ್ಟವಳ ಬಗ್ಗೆ ಶಂಕ್ರ ಎಂದೂ ಪ್ರೀತಿ ಬೆಳೆಸಿಕೊಳ್ಳಲಿಲ್ಲ. ಅವಳ ಸ್ವಂತ ಮಗ ದೇವಲ್ಯಾನ ಮನಸ್ಸಲ್ಲೂ ವಿಷ ತುಂಬಿ ಕುತಂತ್ರಕ್ಕೆ ಕಾರಣನಾಗುತ್ತಾನೆ. ಹೀಗೆ ಸಾಮಾಜಿಕ ವ್ಯವಸ್ಥೆ ನಿಯಮ ಮೀರುವ ಮಹಿಳೆಯ ಬದುಕನ್ನೆ ಹೊಸಕಿ ಹಾಕುವ ಜೀವವಿರೋಧಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಲಲಿತಾನಾಯಕರು ಸಾಮಾಜಿಕ ವ್ಯವಸ್ಥೆಯಲ್ಲಿ ಇಂಥ ಅಸಮಾನತೆಯನ್ನೇ ತಾಯಿ ಸಾಕಿಬಾಯಿ ಕಥೆಯಲ್ಲಿ ಪ್ರಶ್ನಿಸುತ್ತಾರೆ. ಒಂದು ಮಗುವಿರುವ ಅಥವಾ ಹಲವು ಮಕ್ಕಳಿದ್ದರೂ ಹೆಂಡತಿ ಸತ್ತರೆ ಪುನಃ ಮದುವೆಯಾಗುವ ಅವಕಾಶವನ್ನು ಪಡೆದಿರುವ ಪುರುಷ ಸಮುದಾಯ, ತುಂಬು ಯವ್ವನದಲ್ಲಿ ಗಂಡನನ್ನು ಕಳೆದುಕೊಂಡರೂ ಮಹಿಳೆ ಮಾತ್ರ ತನ್ನೆಲ್ಲ ಆಸೆ, ಅಕಾಂಕ್ಷೆ, ಸುಖ ನೆಮ್ಮದಿಗಳನ್ನು ತ್ಯಾಗ ಮಾಡಬೇಕೆಂದು ಬಯಸುವುದು ನ್ಯಾಯ ಸಮ್ಮತವಲ್ಲವೆಂಬುದುದನ್ನು ಪರ್ಯಾಯವಾಗಿ ಕಥೆಯಲ್ಲಿ ಹೇಳಲಾಗುತ್ತದೆ. ನಿಯಮವನ್ನು ಮೀರಿದ ಸಾಕಿಬಾಯಿಯಂಥ ಮಹಿಳೆಯರನ್ನು ಅಮಾನುಷವಾಗಿ ಕೊಲ್ಲುವ ಮೂಲಕ ಅಂಥ ಪ್ರಯತ್ನಗಳಾಗದಂತೆ ತಡೆಯಲಾಗುತ್ತದೆ ಎಂಬುದನ್ನು ಕಥೆ ಸಾಧಿಸುತ್ತದೆ. ಮಹಿಳೆಯ ಬದುಕನ್ನು ನಿಯಂತ್ರಿಸಲು ಇಡೀ ವ್ಯವಸ್ಥೆಯಲ್ಲಿ ಪಿತೃ ಸಂಸ್ಕೃತಿ ರೂಪಿಸಿ ಜಾರಿಗೊಳಿಸಿರುವ ಅಂಶಗಳು ಅದರಿಂದ ಹೊರತಾಗಿ ಆಲೋಚಿಸಲು ಅವಕಾಶವಿಲ್ಲದಂತೆ ಮಾಡಿವೆ.

ಭೋಗವಸ್ತು :

ವಿವಾಹ ಸಂಸ್ಥೆಯಲ್ಲಿ ಇತ್ತೀಚಿನವರೆಗೆ ವಿವಾಹವಾಗಬೇಕಾದ ಹೆಣ್ಣು ಗಂಡಿನ ಒಪ್ಪಿಗೆ ಕೇಳುವ ಪರಿಪಾಠವಿರಲಿಲ್ಲ, ಇದರಿಂದ ಗಂಡಿಗೆ ನಷ್ಟವೇನು ಆಗುವುದಿಲ್ಲ. ಅವನು ಇಷ್ಟ ಪಟ್ಟರೆ ಬೇರೆ ಮದುವೆ ಮಾಡಿಕೊಳ್ಳುವ ಅವಕಾಶ ಅವನಿಗಿದೆ, ಇಲ್ಲವಾದರೆ ತನಗಿಷ್ಟವಾದ ಹೆಣ್ಣಿನೊಂದಿಗೆ ಸಂಬಂಧವಿಟ್ಟುಕೊಳ್ಳಬಹುದು. ಆದರೆ ಮಹಿಳೆಯ ಬದುಕಿನಲ್ಲಿ (ಮೇಲ್ವರ್ಗಜಾತಿ) ಒಂದು ಸಲ ವಿವಾಹವಾದರೆ ಒಳಿತೋ, ಕೆಡುಕೋ ಇಷ್ಟವೋ, ಅನಿಷ್ಟೋ ಅಲ್ಲಿಯೇ ಜೀವನ ಕಳೆಯಬೇಕು. ವಿವಾಹ ಬಾಹಿರ ಸಂಬಂಧ ಇಟ್ಟುಕೊಂಡರೆ ನಾನಾ ರೀತಿಯ ನಿಂದನೆ, ಅವಮಾನಗಳನ್ನು ಸಹಿಸಬೇಕಾಗುತ್ತದೆ. ಎರಡನೆಯ ವಿವಾಹ ಸುಲಭ ಸಾಧ್ಯವಲ್ಲ ವಿವಾಹ ಬಾಹಿರ ಸಂಬಂಧ ಬಹಿರಂಗಗೊಂಡರೆ ಅವರನ್ನು ಬಳಸಿಕೊಳ್ಳಲು ಪುರುಷರ ದಂಡೇ ಸಿದ್ಧವಾಗುತ್ತದೆ ಎಂಬುದನ್ನು ಶಾಂತರಸರ 'ಕಿಡಿ' ಕಥೆ ಚಿತ್ರಿಸುತ್ತದೆ.

ಯವ್ವನ ಶ್ರೀಮಂತಿಕೆ ಹಾಗೂ ಅಧಿಕಾರಗಳಿರುವ ಪುರಷ ತನ್ನ ಭೋಗಕ್ಕೆ ಯಾವ ಹೆಣ್ಣಾದರೂ ಸರಿ ತಾನು ಬಯಸಿದರೆ ಒದಗಬೇಕೆಂದು ಭಾವಿಸುತ್ತಾನೆ. ತನ್ನ ಆಸ್ತಿಯ ಉತ್ತರಾಧಿಕಾರಿಯನ್ನು ಹೆತ್ತು ಕೊಡಲು ಹೆಂಡತಿಯಾಗಿ ಹೆಣ್ಣನ್ನು ವಿವಾಹ ಸಂಸ್ಥೆಯ ಮುಖಾಂತರ ಪಡೆಯುವ ಗಂಡು, ತನ್ನ ಪುರುಷತ್ವವನ್ನು ಮೆರೆಯಲು ತನಗೆ ಚಲುವೆಯರಾಗಿ ಕಂಡ ದಲಿತ ಹೆಣ್ಣು ಮಕ್ಕಳನ್ನು ಇಟ್ಟು ಕೊಂಡವಳಾಗಿ ಇರಿಸಿಕೊಳ್ಳುತ್ತಾನೆ. ಕೆಲವೊಮ್ಮೆ ವಿವಾಹಿತ ಮಹಿಳೆಯ ಕುಟುಂಬದ ಅಸಹಾಯಕತೆಯನ್ನು ಗುರುತಿಸಿ, ಹಣದ ಕಾರಣಕ್ಕೆ ಸುಂದರಿ ಎಂಬುದಕ್ಕೆ ಅಥವಾ ಮುದುಕ ಗಂಡ, ಸಂಭಾವಿತ ಗಂಡ ಮುಂತಾದ ಕಾರಣಕ್ಕೆ ಹೆಣ್ಣುಗಳೊಂದಿಗೆ ಸಂಬಂಧ ಇರಿಸಿಕೊಳ್ಳುವುದಿದೆ. ಅಂಥ ಸಂಬಂಧಗಳು ಸ್ಥಿರವಾಗಿರದೆ ಯಾವಾಗ ಬೇಕಾದರೂ ಕಡಿದು ಹೋಗುವಂಥವಾಗಿರುತ್ತವೆ. ಬೇಕಾದಾಗ ಹಾಡಿ ಹೊಗಳಿ ಬಲೆಗೆ ಹಾಕಿಕೊಳ್ಳುವಂತೆ ಬೇಡದಾಗ ಇಲ್ಲಸಲ್ಲದ ಆರೋಪ ಹೊರಿಸಿ ದೂರಾಗುವುದು ಕಂಡುಬರುತ್ತದೆ.

ಬುದ್ಧಿವಂತಪ್ಪ ಸಾಹುಕಾರ ಸಕ್ರೆಪ್ಪನ ಜಾರಜ ಪುತ್ರನೆ ಆದರೂ ಸಕ್ರೆಪ್ಪನ ಬಲದಿಂದ ಊರವರೆಲ್ಲ ಅವನಿಗೆ ಹೆದರುವ ಗೌರವಿಸುವ ಪದ್ಧತಿ ಬೆಳೆಯುತ್ತದೆ. ಹರೆಯಕ್ಕೆ ಬರುತ್ತಿದ್ದಂತೆ ವಿದ್ಯೆಯೊಲಿಯದ ಗೆಳೆಯರು ಹೆಣ್ಣಿನೊಂದಿಗಿನ ತಮ್ಮ ತಮ್ಮ ಸಂಬಂಧಗಳನ್ನು ಅನುಭವವನ್ನು ಪರಸ್ಪರ ಬಾಯಿ ಚಪ್ಪರಿಸುತ್ತ ಹೇಳಿಕೊಳ್ಳುತ್ತಾರೆ. ಈ ಸಂಬಂಧ ವಿವಾಹ ಬಾಹಿರವಾದರೂ ಹೆಮ್ಮೆಯ ಸಂಗತಿ ಎಂಬಂತೆ ಹೇಳಿಕೊಳ್ಳುವುದನ್ನು ನೋಡಿದರೆ ವ್ಯವಸ್ಥೆ ಗಂಡಿಗೆ ನೀಡಿದ ಲೈಂಗಿಕ ಮುಕ್ತತೆಯ ಅರಿವಾಗುತ್ತದೆ.

ಬುದ್ಧಿವಂತಪ್ಪ ವಿವಾಹಿತ ಸೂಗಮ್ಮನೊಂದಿಗೆ ಅನೈತಿಕ ಸಂಬಂಧವಿರಿಸಿಕೊಂಡು, ಅವಳು ಗೋಗರೆದೂ ಕೇಳದೆ ಬೇರೆ ಹೆಣ್ಣನ್ನು ವಿವಾಹವಾಗುತ್ತಾನೆ. ಆನಂತರವೂ ಸೂಗಮ್ಮನೊಂದಿಗಿನ ಸಂಬಂಧವನ್ನು ಮುಂದುವರಿಸುತ್ತಾನೆ. ಕೆಲ ವರ್ಷಗಳ ನಂತರ ಸೂಗಮ್ಮನಿಂದ ಬೇಸರಗೊಂಡು ಕುರುಬರ ಬಾಲಿಯ ಸಂಗ ಮಾಡುತ್ತಾನೆ. ಆದರೆ ಬುದ್ಧಿವಂತಪ್ಪನನ್ನು ಬಿಟ್ಟಿರಲಾಗದ ಸೂಗಮ್ಮ, ಪರಮಯ್ಯ ಮತ್ತು ಬುಡಪ್ಪರನ್ನು ಕಟ್ಟಿಕೊಂಡು ಬುದ್ಧಿವಂತಪ್ಪನನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾಳೆ. ಇವರ ದಾಳವಾಗಿ ಬಳಕೆಗೊಳ್ಳುವ ಬುಡ್ಡಪ್ಪ ಹೆಂಡತಿಯನ್ನು ಕಳೆದುಕೊಳ್ಳುತ್ತಾನೆ. ಮಾತ್ರವಲ್ಲ ಆಮಿನಸಾಬನ ಕಡೆಯಿಂದ ಒದೆ ತಿನ್ನುತ್ತಾನೆ. ಬುದ್ಧಿವಂತಪ್ಪ ತಾನು ಬಚಾವಾಗಲು ಬಾಲಿಯನ್ನು ಅಮೀನಸಾಬನ ಹಾಸಿಗೆಗೆ ಕಳಿಸುತ್ತಾನೆ. ಸೂಗಮ್ಮ ಬುದ್ಧಿವಂತಪ್ಪರ ಸ್ವಾರ್ಥ ಸಾಧನೆಯಲ್ಲಿ ಬಾಲಮ್ಮ ಬುಡ್ಡಪ್ಪ ಬಲಿಯಾಗುತ್ತಾರೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಲೈಂಗಿಕತೆಯ ಕುರಿತು ಮಾತನಾಡುವದೂ ಅಪರಾಧವೆಂದು ಭಾವಿಸುವ ಸಮಾಜ ಗಂಡು ಅದನ್ನು ರಸವತ್ತಾಗಿ ಬಣ್ಣಿಸಿದರೂ ರಸಿಕನೆಂದು ಬೆನ್ನು ಚಪ್ಪರಿಸುತ್ತದೆ. ಆಳುವವನಿಗೆ ಅರವತ್ತು ಜನವೆಂದು ಅವನ ಲೈಂಗಿಕ ಲಾಲಸೆಗೆ ಕುಮ್ಮಕ್ಕು ನೀಡುತ್ತದೆ.

ಹೆಣ್ಣಿನ ಜೀವನದಲ್ಲಿ ವಿವಾಹ ಅನಿವಾರ್ಯವೆಂದು ಭಾವಿಸುವ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಅಂತಸ್ತುಗಳು ಮುಖ್ಯವಾಗಿ ವರಸಾಮ್ಯವೆಂಬುದು ನಗಣ್ಯವಾಗುತ್ತದೆ. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂಬ ಗಾದೆ ಯಾವ ಬಗೆಯಲ್ಲಾದರೂ ಸರಿ ವಿವಾಹವಾಗಬೇಕಾದುದು ಮುಖ್ಯವೆಂದು ಸಾರುತ್ತದೆ. ಹೀಗೆ ನಂಬಿದ ವ್ಯವಸ್ಥೆಯಲ್ಲಿ ವರ ಎಂಥವನಾದರೂ ಸರಿ ಮದುವೆಮಾಡಿ ಮುಗಿಸುವುದೇ ಅಂತಿಮ ಗುರಿಯಾಗುತ್ತದೆ. ಜೀವನದ ಕೊನೆಯವರೆಗೆ ಬಾಳ ಬೇಕಾದ ಹೆಣ್ಣು ಗಂಡುಗಳ ಆಯ್ಕೆಗೆ ಅವಕಾಶವೆ

ಇರುವುದಿಲ್ಲ. ಇಂಥ ವ್ಯವಸ್ಥೆಯಲ್ಲಿ ಮನಸ್ಸೊಪ್ಪದ ಮುದುಕ ಗಂಡ ಸಂಗಾತಿಯಾಗಿ ದೊರೆತರೆ ಅವನೊಂದಿಗೆ ಬಾಳಲಾಗದ ಅನೇಕ ಮಹಿಳೆಯರು, ಆತ್ಮಹತ್ಯೆ ಮಾಡಿಕೊಳ್ಳುವ, ಹೇಳಲಾಗದ ಅಸಹನೀಯ ನೋವನ್ನನುಭವಿಸಿ ಹುಚ್ಚರಾಗುವ, ಇಲ್ಲವೆ ಧೈರ್ಯವಿದ್ದರೆ ಸಮಾಜವನ್ನು ಎದುರು ಹಾಕಿಕೊಂಡು ಅನ್ಯ ಸಂಗಾತಿಯನ್ನು ಆಯ್ದುಕೊಳ್ಳುವ ಸ್ಥಿತಿ ಏರ್ಪಡುತ್ತದೆ. ಕಿಡಿ ಕಥೆಯಲ್ಲಿಯ ಸೂಗಮ್ಮ ಬಾಲಮ್ಮರ ವಿವಾಹ ಬಾಹಿರ ಸಂಬಂಧಕ್ಕೆ ಅವರಿಗೆ ದೊರೆತ ಮುದುಕ ಗಂಡಂದಿರ ಸಂಗಾತವೇ ಕಾರಣ ಎಂಬುದನ್ನು ಕಥೆ ಪ್ರತಿನಿಧಿಸುತ್ತದೆ.

ವಿಷಮ ದಾಂಪತ್ಯ :

ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣಿಗೆ ತಿಳುವಳಿಕೆ ಮೂಡುವ ಮೊದಲೇ ವಿವಾಹವಾಗುತ್ತದೆ. ಕೆಳವರ್ಗಗಳಲ್ಲಿ ಇಂದಿಗೂ ಹಾಗೇ ಆಗುತ್ತದೆ. ವಿವಾಹವೆಂದರೇನೆಂದು ತಿಳಿಯುವ ಮೊದಲೇ ಗಂಡ ಬಿಟ್ಟರೆ ಅಥವಾ ಗಂಡ ಸತ್ತರೆ ಮಹಿಳೆ ದಾಂಪತ್ಯ ವಂಚಿತಳಾಗುತ್ತಾಳೆ. ಕೆಳವರ್ಗಗಳಲ್ಲಿ ಮಹಿಳೆಗೆ ಪುನರ್‌ವಿವಾಹದ ಅವಕಾಶವಿದೆ. ಆದರೆ ಎಲ್ಲಾ ಮಹಿಳೆರಿಗೂ ಆಗುತ್ತದೆಂದೇನೂ ಇಲ್ಲ. ಇಂತಹ ಸಂದರ್ಭಗಳಲ್ಲಿ ತನಗಿಷ್ಟವಾದ ಪುರುಷನೊಂದಿಗೆ ಸಂಬಂಧವಿರಿಸಿಕೊಳ್ಳಲಾಗುತ್ತದೆ ಎಂಬುದನ್ನು ಅಮರೇಶ ನುಗದೋಣಿಯವರ 'ಒತ್ತೆ' ಕಥೆ ನಿರೂಪಿಸುತ್ತದೆ.

ವಿಷಮ ದಾಂಪತ್ಯದ ದಾರುಣ ಚಿತ್ರವನ್ನು ಅದು ನೀಡುತ್ತದೆ. ಗಂಡನ ಗೂರಲು ಕಾಯಿಲೆಗೆ ಬೇಸತ್ತೊ ಅಥವಾ ಸ್ವಭಾವತಃ ಹೊಂದಿಕೊಳ್ಳಲಾಗದ ಗುಣದಿಂದಲೊ ರಾಚಪ್ಪನ ಸಂಸಾರ ಗೋಳಿನದಾಗುತ್ತದೆ. ಅಂಥ ಸಂದರ್ಭದಲ್ಲಿ ಅವನು ಆಶ್ರಯಿಸಿದ್ದು ದೇವಕಿಯನ್ನು. ದೇವಕಿ ವಿವಾಹಿತೆ. ಆದರೆ ವಿವಾಹವಾದ ಕೆಲವೇ ದಿನಗಳಲ್ಲಿ ಗಂಡ ಹುಚ್ಚನಾಗಿ ಹೋದುದರಿಂದ ಅವಳು ಗಂಡನೊಂದಿಗೆ ಬಾಳುವ ಪ್ರಮೇಯವೆ ಇಲ್ಲವಾಯ್ತು. ರಾಚಪ್ಪನನ್ನೆ ಗಂಡನೆಂಬಷ್ಟು ಪ್ರೀತಿಯಿಂದ ದೇವಕಿ ನಡೆದುಕೊಳ್ಳುತ್ತಾಳೆ. ತಾನೂ ನೆಮ್ಮದಿ ಕಂಡು ಅವನ ಬದುಕಿಗೂ ನೆಮ್ಮದಿ ತರುತ್ತಾಳೆ. ಯಾವತ್ತೂ ಅವನ ಸಂಸಾರ ಕೆಡಿಸಲು ಯತ್ನಿಸುವುದಿಲ್ಲ. ಆರ್ಥಿಕವಾಗಿ ಅವಲಂಬಿಸುವುದಿಲ್ಲ. ಸ್ವತಃ ರಾಚಪ್ಪ ಹೇಳಿದಾಗಲೂ 'ಮೈಯಲ್ಲಿ ಸತುವು ಇರುವವರೆಗೆ ದುಡಿದು ತಿನ್ನುತ್ತೇನೆ.'[೫೦] ಎನ್ನುತ್ತಾಳೆ. ರಾಚಪ್ಪನ ಹಿರಿಯ ಮಗ ಹನುಮ್ಯಾ ಏನಾದರೂ ಕಾಳುಕಡಿ ತಂದರೆ 'ಮಗ, ಬ್ಯಾಡಪ್ಪ, ಆಗಾಗ ನೀವು ಬಂದು ಹೋದ್ರೆ ಸಾಕು. ನಾಕು ಮಂದಿ ಮಕ್ಕಳು ಬಾಳವಿ ದೊಡ್ಡದು ನಿಮಗ ಇರಲಿ, ನಾನೇನು ಒಂಟಿ ಮೂಳ ಮೆತ್ತಗಾದ ಕಾಲಕ್ಕ ನೋಡವಂತಗಿ'[೫೧] ಎನ್ನುತ್ತಿದ್ದಳು.

ಇಲ್ಲಿಯ ವಿವಾಹ ಬಾಹಿರ ಸಂಬಂಧ ಒಂದು ಅನಿವಾರ್ಯ ಅವಲಂಬನೆಯಾಗುತ್ತದೆಯೆ ವಿನಃ ಆರ್ಥಿಕ ಸಾಮಾಜಿಕ ಕಾರಣಗಳಿಗಾಗಿಯಲ್ಲ. 'ದೇವಕಿಗೆ ಯಾರೋ ಒಂದು ದಿನ ಸುದ್ದಿತಂದರು, ಗಂಡ ಎಲ್ಲೋ ಬಿದ್ದು ಸತ್ತು ಹೋದನೆಂದು ಆಕೆ ಮಿಡಕಲಿಲ್ಲ. ತಾಳಿ, ಬಳೆ ತೆಗೆಯಲಿಲ್ಲ. ರಾಚಪ್ಪನನ್ನು ತನ್ನ ಗಂಡನೆಂದೇ ಮನಸ್ಸು ಒಪ್ಪಿಕೊಂಡದ್ದರಿಂದಿರಬೇಕು 'ದೇವಕಿ ತನ್ನಿಂದ ತಾಳಿ ಕಟ್ಟಿಸಿಕೊಳ್ಳುವಂಥ ಹೆಂಡತಿಯಾಗಿ ಯಾಕೆ ಹುಟ್ಟಲಿಲ್ಲ. ಅಥವಾ ತಾನಾದರೂ ಮಾದರವನಾಗಿ ಹುಟ್ಟಿದ್ದರೂ ಆಕೆ ರಂಡೇ ಮುಂಡೆಯಾಗಿದ್ದರೂ, ದೈವದೆದುರಿಗೆ ತಾಳಿಕಟ್ಟಿ ಮನೆಗೆ ಕರೆತರುತ್ತಿದ್ದೆ'. ಎನ್ನುವ ರಾಚಪ್ಪನ ಆಲೋಚನೆ ಪ್ರೀತಿಸಿದ ಹೃದಯಗಳು ಕೂಡಿ ಬಾಳದಂತೆ ಮಾಡುವ ಸಾಮಾಜಿಕ ನಿಯಮಗಳ ಕುರಿತದ್ದು. ಅವರಿಬ್ಬರೂ ಮದುವೆಯಾಗಿ ಬಾಳಲು ಜಾತಿ ಅಡ್ಡವಾಗಿದೆ. ಆದರೆ ಈಗಾಗಲೆ ಮದುವೆಯಾಗಿರುವ ನಾಲ್ಕು ಮಕ್ಕಳ ತಂದೆಯಾಗಿರುವ ರಾಚಪ್ಪ ಮತ್ತೆ ಮದುವೆಗೆ ಆಲೋಚಿಸುವುದು ಪುರುಷಾತ್ಮಕ ಚಿಂತನೆಯೆ ಆಗಿದೆ.

ಇಲ್ಲಿಯ ದೇವಕಿ ಯಾವ ಸಾಮಾಜಿಕ ನಿಯಮಗಳ ಗೋಡವೆಗೆ ಹೋಗದೆ ತಾನು ನಂಬಿದ ರೀತಿಯಲ್ಲಿ ಬದುಕುತ್ತಾಳೆ. ತಾಳಿ ಕಟ್ಟಿದ ಮಾತ್ರಕ್ಕೆ ಗಂಡನನ್ನು ಒಪ್ಪದ, ತಾನು ಒಪ್ಪಿದ ರಾಜಪ್ಪನಿಗಾಗಿ ತಾಳಿಯನ್ನು ಒತ್ತೆ ಇಡುವ ಮಟ್ಟಕ್ಕೆ ಅವಳ ಪ್ರೀತಿ ಅಂತಃಕರಣ ನಿರ್ವ್ಯಾಜ್ಯವಾದುದು. ಈ ಸಂಬಂಧ ವಿವಾಹ ಬಾಹಿರವಾದರೂ ಇದಕ್ಕೂ ತನ್ನದೇ ಆದ ಮನ್ನಣೆ ಇದೆ ಎಂಬುದನ್ನು ಕಥೆ ಧ್ವನಿಸುತ್ತದೆ.

ಪಿತೃ ಸಂಸ್ಕೃತಿಯು ನಿಯಮಗಳನ್ನು ಚಾಚೂ ತಪ್ಪದಂತೆ ಪಾಲಿಸಿ ಗರತಿಯರೆಂದು ವೈಭವೀಕರಣಕ್ಕೊಳಗಾದ ಮಹಿಳೆಯರಿರುವಂತೆ, ಅಲ್ಲಿಯೆ ತಮ್ಮ ಇಚ್ಛೆಗೆ ಅನುಗುಣವಾಗಿ ತಮ್ಮ ಬದುಕನ್ನು ರೂಪಿಸಿಕೊಂಡು ಯಾರ ಯಾವ ಮುಲಾಜಿಲ್ಲದೆ ಬದುಕಿ ಸೈ ಎನಿಸಿಕೊಂಡ ಮಹಿಳೆಯರೂ ಇದ್ದಾರೆ. ಹಾಗೆ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ಎದುರಾದ ಸಮಸ್ಯೆಗಳನ್ನು ಅವಹೇಳನಗಳನ್ನು ಲೆಕ್ಕಿಸದೆ, ತಮ್ಮ ಬದುಕಿಗೆ ತಮ್ಮದೆ ನಿಯಮಗಳನ್ನು ಸೃಷ್ಟಿಸಿಕೊಂಡ ಮಹಿಳೆಯರು ಸಾಂಪ್ರದಾಯಿಕ ಮನಸ್ಸುಗಳನ್ನು ಒಪ್ಪಿಸಲಾಗದಿದ್ದರೂ ವೈಚಾರಿಕ ಮನಸ್ಸುಗಳನ್ನು ತಟ್ಟಿದ್ದು ನಿಜ.

ನಿಯಮಗಳೊಳಗಿನ ನಿಯಮ :

ವಿವಾಹ ಸಂಸ್ಥೆಯ ಮುಖ್ಯ ಉದ್ದೇಶಗಳಲ್ಲಿ ಹೆಣ್ಣು-ಗಂಡಿನ ಲೈಂಗಿಕತೆ ಒಂದಾದರೆ ಎರಡನೆಯದು ಸಂತಾನ. ಲೈಂಗಿಕ ಬದುಕೇ ಸಮಸ್ಯಾತ್ಮಕವಾದರೆ ಸಂತಾನವೂ ಸಮಸ್ಯೆಯೆ ಆಗುತ್ತದೆ. ಮಹಿಳೆಯಲ್ಲಿ ದೋಷವಿದ್ದರೆ ಪುರುಷನಿಗೆ ಎರಡನೆಯ ವಿವಾಹ ಸಿದ್ಧವಾಗುತ್ತದೆ. ಬಹುಶಃ ಪುರುಷನಲ್ಲಿದ್ದರೂ ಮರೆಮಾಚಿ ಮತ್ತೊಂದು ವಿವಾಹ ಮಾಡುವುದು ಇದೆ. ಆದರೆ ಗಂಡಿನ ದೋಷವರಿತು, ಅವನ ಅನುಮತಿಯ ಮೇರೆಗೆ ಅನ್ಯ ಸಂಬಂಧದಿಂದ ಸಂತಾನ ಪಡೆಯುವ, ಪರಸ್ಪರ ಬದುಕಿ ಬದುಕಿಸುವ ಮತ್ತು ತನ್ನ ಚಾಜದ ಹಕ್ಕನ್ನು ಉಳಿಸಿಕೊಳ್ಳುವ ಚಿತ್ರಣ ಶ್ರೀಕಾಂತ ಪಾಟೀಲರ 'ಧರ್ಮ-ಬೇಲಿ-ಬದುಕು' ಕಥೆಯಲ್ಲಿ ಪ್ರತಿನಿಧೀಕರಣಗೊಂಡಿದೆ.

ಮಲ್ಲಮ್ಮಳು ಸಾಂಪ್ರದಾಯಿಕ ನಂಬಿಕೆ ಚಾಜಕ್ಕಾಗಿ ವಿವಾಹಬಾಹಿರ ಸಂಬಂಧ ಬೆಳಸಬೇಕಾದ ಸಂಗತಿಯನ್ನು ವಸ್ತುವಾಗಿ ಸ್ವೀಕರಿಸಿದೆ. ಸಾವಕಾರ ಶರಣಪ್ಪನನ್ನು ಮದುವೆಯಾದ ಮಲ್ಲಮ್ಮನಿಗೆ ಸೋಬನದ ದಿನವೇ ಅವನ ದೌರ್ಬಲ್ಯದ ಪರಿಚಯವಾಗುತ್ತದೆ. ತನ್ನ ಮುತ್ತೈದೆತನದ ಸಾಮಾಜಿಕ ಸ್ಥಾನಕ್ಕಾಗಿ ತನ್ನ ಸೋದರ ಮಾವನ ಜೊತೆಗೆ ಸಂಬಂಧವಿರಿಸಿಕೊಂಡು ಮಗನನ್ನು ಪಡೆಯುತ್ತಾಳೆ. ಸಾಂಪ್ರದಾಯಕ ವ್ಯವಸ್ಥೆಯಲ್ಲಿ ಮಗುವಿಲ್ಲದೆ ಗಂಡನ ಮನೆಯಲ್ಲಿ ಅಸ್ತಿತ್ವವಿಲ್ಲ. ಷಂಡನಾದರೂ ಗಂಡನನ್ನು ಬಿಟ್ಟುಹೋದರೆ ಅಣ್ಣಂದಿರ ಮದುವೆಯಲ್ಲಿ ಕಳಸ ಹಿಡಿಯುವ ಚಾಜ ಸಿಗುವುದಿಲ್ಲವೆಂದು ಯೋಚಿಸುವ ಮಲ್ಲಮ್ಮನ ತಾಯಿ ಚಿಕ್ಕಮ್ಮ ಇಬ್ಬರೂ ಶರಣಪ್ಪನ ಸಮ್ಮತಿ ಪಡೆದು, ಸೋದರ ಮಾವನ ಸಂಬಂಧಕ್ಕೆ ಪ್ರೋತ್ಸಾಹಿಸುತ್ತಾರೆ. ಸಹಿಸದ ಜನ 'ಗಂಡುಳ್ಳ ಗರತೇರು ಮಾಡುವ ಕೆಲಸಾನಾ ಇದು. ಎಂದಾಗ ಬಾಳ್ಯಾಗ ಬೆಂಕಿ ಆಯ್ತು'[34] ಆದರೂ ಸಣ್ಣವ್ವ ಹೇಳಿದ 'ಪಾಂಡವರು ಪರತಾಪದಾಗ ಬದಕಲಾಕ ಹಾದಿ ತೋರಶ್ಯಾರ ಮಗಳ ನೀ ಬಾಳು ಬದುಕು ಎಂಬ ಮಾತು ಕೇಳಿ ಬದುಕುತ್ತಾಳೆ. ಅವಳ ಗಟ್ಟಿತನಕ್ಕೆ ಮೊದಲು ಆಡಿಕೊಂಡವರೆ ಪುನರ್ ಚಿಂತನೆ ಮಾಡುತ್ತಾರೆ. ಬಾಳಿಗಿ ಆಸರಿ ಹುಡುಕಿ ಗಂಡನಿಗೂ ನೆಳ್ಳಾಗಿ ಮುತ್ತೈತನಾ ಉಳಸಿಕೊಂಡು ಮಲ್ಲಮ್ಮ ಮಾಡಿದ್ದು ತಪ್ಪಲ್ಲ ಎಂಬ ನಿರ್ಣಯಕ್ಕೆ ಬರುತ್ತಾರೆ.

ಹೀಗೆ ಮಲ್ಲಮ್ಮ ಸಮಸ್ಯೆಯಾಗ ಬಹುದಾದ ಬದುಕನ್ನು ಪಾಂಡವ ತಂತ್ರದ ಮೂಲಕ ಸುಗಮವಾಗಿಸಿಕೊಳ್ಳುತ್ತಾಳೆ. ಇಂಥದೇ ಪ್ರಸಂಗ ಹನುಮಕ್ಕನ ಮಗಳು ಶಾಂತಾಳಿಗೆ ಒದಗಿದಾಗ ಪರಿಹಾರ ಕೇಳಲು ಬಂದವರಿಗೆ ಮಲ್ಲಮ್ಮ 'ಹಿಂಗೇ ದಿವಸ ಧಾಟ್ಸಿ ಆಸಿ ಹುಡುಕಿದ್ರಾಯ್ತು.' ಎಂದು ಹೇಳುತ್ತಾಳೆ. ಸುಶಿಕ್ಷಿತೆ ಶಾಂತಾ ಅದನ್ನೊಪ್ಪದೆ ಗಂಡನಿಗೆ ವಿಚ್ಛೇದನ ಕೊಟ್ಟು ಸ್ವಾವಲಂಬಿಯಾಗಿ ಬದುಕುವುದಾಗಿ ಹೇಳುತ್ತಾಳೆ. ಧರ್ಮದ ಬೇಲಿ ಹಾಕ್ಕೊಂಡು ಸುಳ್ಳು ಸುಳ್ಳ ಸಂಸಾರ ಮಾಡಲಾರೆನೆಂದು ತಿರಸ್ಕರಿಸುತ್ತಾಳೆ.

ಸಾಂಸ್ಕೃತಿಕ ನಂಬಿಕೆಗಳನ್ನು ಆಧುನಿಕ ಚಿಂತನೆ ಬದಲಿಸುವುದನ್ನು ಕಥೆ ಚಿತ್ರಿಸುತ್ತದೆ. ಸಾಂಸ್ಕೃತಿಕ ಬದುಕು ಮುಖವಾಡವನ್ನು ಆಶ್ರಯಿಸಿದರೆ, ವೈಚಾರಿಕತೆ ವಾಸ್ತವವನ್ನು ಒಪ್ಪಿಕೊಂಡು ಎದುರಿಸುವ ಮನೋಬಲವನ್ನು ನೀಡುತ್ತದೆ ಎಂಬುದನ್ನು ಕಥೆ ಮಲ್ಲಮ್ಮ ಶಾಂತಾರ ಪಾತ್ರದ ಮೂಲಕ ನಿರೂಪಿಸುತ್ತದೆ.

ಬಹುಪಾಲು ಜಾತಿಧರ್ಮಗಳಲ್ಲಿ ವಿಧವೆಯನ್ನು ಗೌರವದಿಂದ ಕಾಣುವದಿಲ್ಲ ಕೆಲವು ಜಾತಿಗಳಲ್ಲಿ ಕೂಡಿಕೆ ವಿವಾಹದ ಅವಕಾಶವಿದ್ದರೂ ಅದು ಸಾರ್ವತ್ರಿಕವಲ್ಲ. ಮಕ್ಕಳಿದ್ದ ವಿಧವೆಯ ವಿವಾಹ ಸಾಧ್ಯವೇ ಇಲ್ಲ. ಇಂಥ ಸಂದರ್ಭಗಳಲ್ಲಿ ಕೆಳಜಾತಿಯ ಹೆಣ್ಣುಮಕ್ಕಳು ವಿವಾಹಿತ ಪುರುಷರೊಂದಿಗೆ ವಿವಾಹಬಾಹಿರ ಸಂಬಂಧದಿಂದ ಇಟ್ಟುಕೊಂಡವಳೆಂದು ಗುರುತಿಸಲ್ಪಡುತ್ತಾರೆ. ಕೆಲವೊಮ್ಮೆ ಈ ಸಂಬಂಧಗಳು ವಿವಾಹಿತ ಪುರುಷನ ಕುಟುಂಬದೊಂದಿಗೆ ಸೌಹಾರ್ದಯುತವಾಗಿರುವುದುಂಟು. ಆದರೂ ಅಂಥವರನ್ನು ಸಮಾಜ ಹೀನವಾಗಿ ಕಾಣುತ್ತದೆ. ಇಂಥ ಬದುಕನ್ನು ಬದುಕಲು ವಿಧವೆ ಪ್ರತಿಕ್ಷಣ ಹೋರಾಟವನ್ನು ಮಾಡಬೇಕಾಗುತ್ತದೆ. ಗೀತಾ ನಾಗಭೂಷಣರ 'ಬದುಕು' ಕಾದಂಬರಿಯ ಬ್ಯಾಡರ ನಾಗವ್ವ ಕೊರವರ ಈರವ್ವ ತಮ್ಮ ಹರಯದಲ್ಲೇ ವಿಧವೆಯರಾದವರು. ಇಬ್ಬರೂ ಮಕ್ಕಳೊಂದಿಗರು. ಸಂದರ್ಭಕ್ಕೆ ಒದಗಿದ ಪುರುಷ ಸಂಗಾತವನ್ನು ರಾಜಾರೋಷವಾಗಿ ಮತ್ತು ಅಷ್ಟೇ ಮುತುವರ್ಜಿಯಿಂದ ಕಾಯುಕೊಂಡು ಬಂದವರು. ಕೊರವರ ಈರವ್ವಂತೂ ಮಲ್ಲಪ್ಪ ಜಮಾದಾರನೊಂದಿಗಿನ ಸಂಬಂಧದಿಂದ ಅವರ ಕುಟುಂಬದ ಒಬ್ಬ ಸದಸ್ಯರೆಂಬಂತಾಗಿ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾಳೆ.

ಬ್ಯಾಡರ ನಾಗವ್ವ ಈಳಿಗರ ಸಾಬಯ್ಯನೊಂದಿಗಿನ ತನ್ನ ಸಂಬಂಧವನ್ನು ಮುಕ್ತವಾಗಿ ಚರ್ಚಿಸುತ್ತಾ ಸಂಭ್ರಮಿಸುವುದನ್ನು ನೋಡಿದರೆ ಸಾಮಾಜಿಕ ಕಟ್ಟಳೆಗಳನ್ನು ಮೀರಿ ಅವಕಾಶ ದೊರೆತಾಗ ತಮ್ಮಿಚ್ಛೆಯಂತೆ ಬಾಳಿದ ಮಹಿಳೆಯರು ಅಪರೂಪಕ್ಕಾದರೂ ಕಾಣ ಸಿಗುತ್ತಾರೆ ಎಂಬುದನ್ನು ಕಾದಂಬರಿ ವಿವರಿಸುತ್ತದೆ.

ಹೀಗೆ ಪಿತೃ ಸಂಸ್ಕೃತಿಗೆ ಪ್ರತಿರೋಧ ಒಡ್ಡಿದ ಮಹಿಳೆಯರು ಅತ್ಯಂತ ಆತ್ಮವಿಶ್ವಾಸವುಳ್ಳ ಸ್ವಾಭಿಮಾನಿ, ಸ್ವಾವಲಂಬಿ ದಿಟ್ಟೆಯರಾಗಿದ್ದಾರೆ. ತಮ್ಮ ಮಿತಿಯೊಳಗೆ ತಮ್ಮ ಬದುಕಿನ ರೀತಿಯಲ್ಲಿ ಪುರುಷ ಸೃಷ್ಟಿಯ ಮೌಲ್ಯಗಳನ್ನು ಮೀರುತ್ತಾರೆ.

ಕಥನಗಳಲ್ಲಿ ಗಮನಿಸಿದಂತೆ ವಿವಾಹ ಬಾಹಿರ ಸಂಬಂಧ ಗಂಡಿಗೆ ಪ್ರತಿಷ್ಠೆಯದಾದರೆ, ಹೆಣ್ಣಿಗೆ ಕಳಂಕದ್ದಾಗುತ್ತದೆ. ಇಲ್ಲಿ ಸಾಲ್ಕಾರು ಕಥೆ ಕಾದಂಬರಿಗಳಲ್ಲಿ ವ್ಯಕ್ತವಾದಂತೆ ವಿವಾಹಬಾಹಿರ ಸಂಬಂಧ ಗಂಡಿನ ಲೋಲುಪತೆಗೆ ಏರ್ಪಟ್ಟರೆ, ಹೆಣ್ಣಿನ ಸಂದರ್ಭದಲ್ಲಿ ಅಸಮ ದಾಂಪತ್ಯದಿಂದ, ರೋಗಿಷ್ಠ ಗಂಡನಿಂದ ಇಲ್ಲವೆ ಮಕ್ಕಳಾಗದ ಕಾರಣಕ್ಕಾಗಿ ಏರ್ಪಟ್ಟಿದ್ದು ತಿಳಿದುಬರುತ್ತದೆ. ಮಹಿಳೆ ಗಂಡನ ವಿವಾಹ ಬಾಹಿರ

ಸಂಬಂಧವನ್ನು ತಿಳಿದೂ ಅವನೊಂದಿಗೆ ಬದುಕಬೇಕಾದ ಅನಿವಾರ್ಯತೆಯನ್ನು ಸಮಾಜ ಅವಳಿಂದ ನಿರೀಕ್ಷಿಸಿದರೆ, ಹೆಣ್ಣಿನ ವಿವಾಹಬಾಹಿರ ಸಂಬಂಧ ಅವಳನ್ನು ಮನೆಯಿಂದ ಹೊರದೂಡುವಂಥದಾಗುತ್ತದೆ. ಎರಡೂ ಸಂದರ್ಭಗಳಲ್ಲಿ ನಿರ್ಣಯ ಪುರುಷರದಾಗುವುದರಿಂದ ಸಹಜವಾಗಿ ಅದು ಪಕ್ಷ ಪಾತ ನೀತಿಯನ್ನು ಅನುಸರಿಸುತ್ತದೆ.

೪.೩.೬ ಪರಿತ್ಯಕ್ತ ವಿಚ್ಛೇದಿತ ಬದುಕು :

ಕಾಲ ಪರಿಸ್ಥಿತಿ ಬದಲಾದಾಗ ದಾಂಪತ್ಯ ಸಂಬಂಧಗಳಲ್ಲಿ ಬದಲಾಗುವುದು ಅನಿವಾರ್ಯವಾಗುತ್ತದೆ. ಅನೇಕ ಸಾಮಾಜಿಕ ವ್ಯವಸ್ಥೆಗಳು ಬದಲಾಗುತ್ತವೆ. ಅಥವಾ ಸಡಿಲವಾಗುತ್ತವೆ. ಇದರಲ್ಲಿ ತಪ್ಪು ಒಪ್ಪಿನ ಪ್ರಶ್ನೆ ಏಳುವುದಿಲ್ಲ. ಒಬ್ಬ ಮಹಿಳೆಯ ಜೀವನದಲ್ಲಿ ಒತ್ತಡ ವಿಪರೀತವಾದಾಗ, ಅನಿವಾರ್ಯವಾಗಿ ಪರಿಸ್ಥಿತಿಗೆ ತಲೆಬಾಗಿ, ಆ ನಿಮಿಷದಲ್ಲಿ ತನಗೆ ಸರಿ ಎನಿಸಿದ ಪರಿಹಾರವನ್ನು ಧೈರ್ಯವಾಗಿ ಸ್ವೀಕರಿಸಬೇಕಾಗುತ್ತದೆ. ಸಮಾಜ, ಧರ್ಮ ಎಲ್ಲವೂ ವ್ಯಕ್ತಿಯ ಆ ಅನಿವಾರ್ಯ ಸಂದರ್ಭದಲ್ಲಿ ಗೌಣವಾಗುತ್ತವೆ. ಈ ರೀತಿ ಹಲವಾರು ಮಹಿಳೆಯರು ಧೈರ್ಯಮಾಡಿ ಸಮಾಜ, ಧರ್ಮ ತಮ್ಮನ್ನು ಕಡೆಗಣ್ಣಿನಿಂದ ಕಂಡರೂ ಅಂಜದೇ, ತಮ್ಮ ಜೀವನದಲ್ಲಿ ನಿರ್ಧಾರ ಕೈಗೊಂಡಾಗ ಅವು ತಮಗೆ ತಾವೇ ಬದಲಾವಣೆ ಹೊಂದುತ್ತವೆ. ಕಾಲಕ್ರಮೇಣ ಅನಿವಾರ್ಯತೆಯ ಕಾರಣದಿಂದಾಗಿ ಕೆಲವು 'ಅನಿಷ್ಟ'ಗಳು ಸಹ್ಯವಾಗುತ್ತವೆ. ವಿವಾಹ ವಿಚ್ಛೇದನ ಅಂತಹ ಅನಿವಾರ್ಯ ಅನಿಷ್ಟಗಳಲ್ಲಿ ಒಂದಾಗಿದ್ದು ಹಲವಾರು ಮಹಿಳೆಯರಿಗೆ ಜೀವನದಲ್ಲಿ ನೆಮ್ಮದಿ ದೊರಕಿಸಲು ಸಹಾಯಕವಾಗುತ್ತದೆ. ಧರ್ಮಭೀರುಗಳಾದ ಅಸಹಾಯ ಮಹಿಳೆಯರು ಗಂಡ ಬಿಟ್ಟವರೆಂದು ಕರೆಸಿಕೊಳ್ಳುವುದೇ ಮಹಾಪಾಪವೆಂಬಂತಾಗುತ್ತಾರೆ. ಮಹಿಳೆಯನ್ನು ತ್ಯಜಿಸಲು ಕ್ಷುಲ್ಲಕ ಕಾರಣವೇ ಸಾಕು. ಮಹಾಪರಾಧದ ಅವಶ್ಯಕತೆಯಿಲ್ಲ ಕೆಲವೊಮ್ಮೆ ಪುರುಷನ ಸನ್ಯಾಸದ ಹಂಬಲವೂ, ಹೇಡಿತನವೂ, ಮಹಿಳೆಯ ಪರಿತ್ಯಕ್ತ ಬದುಕಿಗೆ ಕಾರಣವಾಗುತ್ತದೆ.

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಗಂಡನ ವಿಪರೀತ ಹಿಂಸೆಯಿಂದ ಬೇಸತ್ತು ಪರಿತ್ಯಜಿಸುವ ಅಥವಾ ವಿಚ್ಛೇದನ ಪಡೆಯುವ ಮಹಿಳೆಯರು ಅಪರೂಪವಾದರೂ ವಿರಳವಾಗಿ ಕಂಡು ಬರುತ್ತಾರೆ. ಗೀತಾ ನಾಗಭೂಷಣರ 'ಏರಿಳಿತಗಳು' ಕಾದಂಬರಿಯ ಸ್ಮಿತಾ 'ಬದುಕು' ಕಾದಂಬರಿಯ ಕುರುಬರ ಸಾಬವ್ವ ಸಿದ್ಧರಾಮ ಹೊನ್ಕಲ್‌ರ 'ಸ್ಯಾಡಿಸ್ಟ್' ಕಥೆಯ ಸುಮಿತ್ರರಂಥ ಕೆಲವೇ ಮಹಿಳೆಯರು ಪುರುಷ ದೌರ್ಜನ್ಯದಿಂದ ಪಾರಾಗಲು ದಿಟ್ಟ ನಿಲುವನ್ನು ತಾಳಿ ವಿವಾಹ ವಿಚ್ಛೇದನವನ್ನು ಪಡೆಯುತ್ತಾರೆ. ಸ್ವತಂತ್ರ ಬದುಕನ್ನ ರೂಪಿಸಿಕೊಳ್ಳುತ್ತಾರೆ. ಆದರೆ ಮಿಕ್ಕಂತೆ ಬಹುತೇಕ ಮಹಿಳೆಯರು ವಿಚ್ಛೇದನದ ಯಾವ ಕಲ್ಪನೆಯೂ ಇಲ್ಲದೆ ಗಂಡಂದಿರ ಸ್ವೇಚ್ಛಾ ಮನೋವೃತ್ತಿಯ ಪರಣಾಮವಾಗಿ ಪರಿತೆಕ್ತೆಯರಾಗುತ್ತಾರೆ. ಶಾಂತರಸರ 'ಹಾವಮ್ಮ' ಕಥೆಯ ಹಾವಮ್ಮ ತನ್ನನ್ನು ತ್ಯಜಿಸಿದ ಗಂಡನಿಗಾಗಿ ಹಂಬಲಿಸದೆ ಜೀವನಕ್ಕೊಬ್ಬ ಸಂಗಾತಿಯನ್ನು ಹುಡುಕಿಕೊಳ್ಳುತ್ತಾಳೆ. 'ಮಲ್ಕಮ್ಮ' ಕಥೆಯ ಮಲ್ಕಮ್ಮ ಗಂಡನಿಂದ ಪರಿತ್ಯಕ್ತಳಾದರೂ ಗರತಿಯಾಗಿ ಬಾಳ ಬಯಸುತ್ತಾಳೆ. ಆದರೆ ಕಾಮುಕರ ಮಸಲತ್ತಿಗೆ, ಕಟ್ಟು ಕಥೆಗೆ ಬೇಸತ್ತು ಬೂದೆಣ್ಣನ ಸೂಳೆಯಾಗಲು ನಿರ್ಧರಿಸುತ್ತಾಳೆ. ಗೀತಾ ನಾಗಭೂಷಣರ 'ದಂಗೆ' ಕಾದಂಬರಿಯ ದುರ್ಗಿ ಗಂಡ ತನ್ನನ್ನು ಬಿಟ್ಟು ಹೋದಾಗ

ಗೋವಿಂದಪ್ಪನ ಇಟ್ಟುಕೊಂಡವಳಾಗಬೇಕಾಗುತ್ತದೆ. ಚಂದ್ರಕಾಂತ ಕುಸನೂರರ 'ಕೆರೂರು ನಾಮಾ' ಕಾದಂಬರಿಯ ನಿಂಗಿ ಗಂಡ ಬಿಟ್ಟ ಬಳಿಕ ಶಾಂತರಾಮನ ಪ್ರೇಯಸಿಯಾಗುತ್ತಾಳೆ. ಶಿವಕುಮಾರ ನಾಗವಾರರ 'ಟುಮ್ಯ' ಕಥೆಯ ಟುಮ್ಯನ ತಾಯಿ ಸಿಟ್ಟಿನವಳೆಂಬ ಕಾರಣಕ್ಕೆ ಪರಿತ್ಯಜಿಸಲ್ಪಡುತ್ತಾಳೆ.

ಶಾಂತರಸರ 'ಹಾವಮ್ಮ' ಕಥೆಯು ಪರಿತ್ಯಕ್ತ ಹಾವಮ್ಮ ತನ್ನ ಬದುಕನ್ನು ರೂಪಿಸಿಕೊಂಡ ವಿಧಾನವನ್ನು ಕಂಡರಿಸುತ್ತದೆ. ಹಾವಮ್ಮ ಕಡುಬಡತನದ ಕಸಮುಸುರೆ ಕೆಲಸದ ಮಹಿಳೆ ಗಂಡನಿಂದ ಪರಿತ್ಯಜಿಸ್ಪಲ್ಪಟ್ಟ ಬಳಿಕ ತಾನು ಕೆಲಸ ಮಾಡುವ ಮನೆಯ ಯಜಮಾನನ ಪೂರ್ವಾಪರಗಳನ್ನು ತಿಳಿದುಕೊಂಡು ಅವನ ಸ್ನೇಹ ಬೆಳೆಸಿದವಳು. ಹಾಗೆಂದು ತನ್ನ ಮೇಲೆ ಯಾವುದೇ ಅಧಿಕಾರ ಚಲಾಯಿಸಲು ಅವಕಾಶ ಕೊಡುವುದಿಲ್ಲ. ಯಾವ ನಿರ್ಬಂಧಗಳಿಗೆ ಒಳಗಾಗುವುದಿಲ್ಲ, ಅವನ ಜೊತೆಗಿರುವಾಗ ಅವನ ಬೇಕು ಬೇಡಗಳನ್ನು ಪೂರೈಸಿ ಅವನ ಪ್ರೀತಿಯನ್ನು ಸಂಪಾದಿಸುತ್ತಾಳಾದರೂ ಅವನಿಂದ ಯಾವುದೇ ಆರ್ಥಿಕ ಬೆಂಬಲವನ್ನು ನಿರೀಕ್ಷಿಸದೆ, ತನ್ನ ಬದುಕಿಗೆ ತಾನೇ ದುಡಿದುಕೊಳ್ಳುತ್ತಾಳೆ. ತನಗೆ ಬೇಕಾದಾಗ ಅವನೊಂದಿಗಿರುತ್ತ ಬೇಡವಾದಾಗ ತನ್ನದೇ ಮನೆಯಲ್ಲಿರುತ್ತ, ಕಪಟ ಕಲ್ಮಶಗಳಿಲ್ಲದೆ ಅವನ ತಪ್ಪು ಕಲ್ಪನೆಗಳನ್ನು ನಿವಾರಿಸಿ ಅವಲಂಬನೆ ಹೇರಿಕೆಗಳಿಲ್ಲದ ಮುಕ್ತ ಸ್ನೇಹದ ಪರಿಚಯ ಮಾಡುತ್ತಾಳೆ. ಶೀಲ ಪಾವಿತ್ರ್ಯದ ಗೋಜಿಗೆ ಹೋಗದೆ, ಕಂಡ ಕಂಡವರೊಂದಿಗೆ ರಮಿಸದೆ, ಆತ್ಮವಂಚನೆ ಮಾಡಿಕೊಳ್ಳದೆ ತಾನು ಸ್ನೇಹ ಬೆಳೆಸಿದವನೊಂದಿಗೆ ಸಲಿಗೆ ಹಟ ಪ್ರೀತಿಗಳನ್ನು ಹಂಚಿಕೊಳ್ಳುತ್ತ ನಿಯಮಗಳ ಬಂಧನವಿಲ್ಲದೆಯೂ ನಿಯಮಗಳನ್ನು ರೂಪಿಸಿಕೊಂಡು ಅತ್ಯಂತ ಸಹಜವಾದ ಬದುಕನ್ನು ಕಟ್ಟಿಕೊಳ್ಳುತ್ತಾಳೆ. ವಿವಾಹ ಸಂಸ್ಥೆಯಲ್ಲಿ ಕಾಣದ ನಿಷ್ಠೆಯನ್ನು ವಿವಾಹೇತರ ಸಂಬಂಧದಲ್ಲಿ ಕಂಡುಕೊಳ್ಳುತ್ತಾಳೆ. ಶಾಂತರಸರು ಹಾವಮ್ಮನ ಪಾತ್ರದ ಮೂಲಕ ಹೆಣ್ಣು-ಗಂಡಿನ ಸಂಬಂಧ ರೂಪಗೊಳ್ಳಬೇಕಾದ ಬಗೆಯನ್ನು ಚಿತ್ರಿಸುತ್ತಾರೆ. ಹೀಗೆ ಪರಸ್ಪರ ಅವಲಂಬನೆಯೊಂದಿಗೆ ಪರಸ್ಪರ ಸ್ವಾತಂತ್ರ್ಯದ ಪರಿಕಲ್ಪನೆಯ ಅವಶ್ಯಕತೆಯನ್ನು ಎತ್ತಿ ಹೇಳುತ್ತಾರೆ. ಸಾಮಾನ್ಯವಾಗಿ ಪುರುಷ ದೃಷ್ಟಿಕೋನದ ಸ್ಟೀರಿಯೋಟೈಪ್ ಕಥನಗಳಲ್ಲಿ ಗಂಡನ್ನು ಕ್ರಿಯಾಶಾಲಿ, ಹೆಣ್ಣನ್ನು ಕ್ರಿಯಾರಹಿತ ಎಂದು ತೋರಿಸಲಾಗುತ್ತದೆ. ಆದರೆ ಶಾಂತರಸರ ಕಥನದಲ್ಲಿ ಹೀಗಾಗುವುದಿಲ್ಲ. ಗಂಡು ಹೆಣ್ಣಿನ ಸಂಬಂಧದಲ್ಲಿ ಹೆಣ್ಣೂ ಕೂಡ ನಿರ್ಧಾರಕ ಪಾತ್ರವನ್ನು ವಹಿಸುತ್ತಾಳೆ.

'ಉದ್ಯೋಗಂ ಪುರುಷ ಲಕ್ಷಣಂ' ಎಂದು ದೊಡ್ಡದಾಗಿ ಘೋಷಿಸಿಕೊಂಡ ಪುರುಷ ಪ್ರಧಾನ ವ್ಯವಸ್ಥೆ ದುಡಿದು ಗಳಿಸದ ದುಶ್ಚಟಗಳಿಗೆ ದಾಸರಾದ ಗಂಡಸರು ತಮ್ಮ ಪಾಲಿನ ಯಾವುದೇ ಕರ್ತವ್ಯವನ್ನು ನಿರ್ವಹಿಸಿದೆ ಹೆಂಡತಿಯ ದುಡಿಮೆಯಲ್ಲಿಯೇ ಬದುಕುವುದಿದೆ. ಅದು ಸಾಲದೇ ಸಾಲ ಮಾಡಿ ಹೆಂಡತಿಯನ್ನೇ ಸಾಲಗಾರನಿಗೆ ಒಪ್ಪಿಸುವವರಿಗೂ ಕೊರತೆ ಇಲ್ಲ. ಇಂಥ ವಿಪರೀತ ಪರಿಸ್ಥಿತಿಯಲ್ಲೂ ಗರತಿಯರಾಗಿ ಮಾನವಾಗಿ ಬದುಕಲು ಹೋರಾಡಿ ವ್ಯವಸ್ಥೆಯ ಕ್ರೂರ ತಂತ್ರಕ್ಕೆ ಬಲಿಯಾಗುವ ಮಹಿಳೆಯ ಬದುಕನ್ನು ಶಾಂತರಸರ 'ಮಲ್ಲಮ್ಮ' ಕಥೆ ಮಂಡಿಸುತ್ತದೆ.

ಶಾಂತರಸರು ಗಂಡ ಬಿಟ್ಟ ಮಹಿಳೆಯನ್ನು ಸಮಾಜ ನೋಡುವ ಬಗೆ, ಪರಿಭಾವಿಸುವ ರೀತಿ ಎಂಥದು, ಅದರಿಂದ ಮಹಿಳೆಯ ಬದುಕು ಏನಾಗುತ್ತದೆಂಬುದನ್ನು ಅತ್ಯಂತ ಸೂಕ್ಷ್ಮವಾಗಿ ಮಲ್ಲಮ್ಮನ ಪಾತ್ರದಲ್ಲಿ ಹಿಡಿದಿರಿಸುತ್ತಾರೆ.

ದುಡಿಯದ ದಣಿಯದ ಕುಟುಂಬದ ಯಾವ ಹೊಣೆಯನ್ನು ಹೊರದ ತಿಮ್ಮಣ್ಣ ತನ್ನ ಕುಡಿತದ ಚಟಕ್ಕೆ ಸಾಲ ಮಾಡಿ ತೀರಸಲಾಗದೆ ಸಾಲಕ್ಕೆ ಹೆಂಡತಿಯನ್ನೆ ಒಪ್ಪಿಸಲು ಹೊರಟು ಅವಳಿಂದ ಛೀಮಾರಿ ಹಾಕಿಸಿಕೊಂಡು ಹೇಳದೆ ಊರು ಬಿಟ್ಟು ಹೋಗುತ್ತಾನೆ.

ಮಲ್ಕಮನ ಮೇಲೆ ಕಣ್ಣಿಟ್ಟ ಗುರಪ್ಪ, ಕಂಬಾರ ಈರವ್ವನ ಮೂಲಕ ಪ್ರಯತ್ನಿಸುತ್ತಾನೆ. ಮಲ್ಕಮ್ಮ ಬೂದೆಣ್ಣನಿಂದ ಸಹಾಯ ಪಡೆದದ್ದಕ್ಕೆ ಅವನೊಂದಿಗೆ ಸಂಬಂಧ ಕಟ್ಟಿ ಹಬ್ಬಿಸುತ್ತಾನೆ.. ಗರತಿಯಾಗಿ ಬಾಳಲು ಶತಾಯಗತಾಯ ಪ್ರಯತ್ನಿಸಿದಾಗಲೂ ಸಾಧ್ಯವಾಗುವುದಿಲ್ಲ, ಗುರಪ್ಪ ಸಾಲದಲ್ಲಿ ಮನೆಯನ್ನು ವಶಪಡಿಸಿಕೊಂಡು ಮಲ್ಕಮ್ಮನನ್ನು ಬೀದಿಗೆ ದೂಡುತ್ತಾನೆ ಊರಲ್ಲಿ ಕೂಲಿಯೂ ಸಿಗುವುದಿಲ್ಲ, ಮೈದುನನ ಮನೆಯಲ್ಲೂ ಆಸರೆ ಸಿಗುವುದಿಲ್ಲ. ವಿಷಯದ ಸತ್ಯಾಸತ್ಯತೆಗೆ ಯಾರೂ ತಲೆಕೆಡಿಸಿಕೊಳ್ಳದೆ ಏಕ ಪಕ್ಷೀಯವಾಗಿ ಮಲ್ಕಮ್ಮ ಬೂದೆಣ್ಣನ ಸಂಬಂಧವನ್ನು ನಿರ್ಣಯಿಸುತ್ತಾರೆ. ಬೇಸತ್ತ ಮಲ್ಕಮ್ಮ ಸಾಯಬೇಕೆಂದು ಬಾವಿಗೆ ಹೋದವಳು ಹೇಗೂ ಸೂಳೆ ಎಂದು ಅಪವಾದ ಹೊತ್ತಿದ್ದೇನೆ. ಯಾಕೆ ಉಳಿದ ಜೀವನ ಬೂದೆಣ್ಣನ ಸೂಳೆಯಾಗಿ ಕಳೆಯಬಾರದೆಂದು ಮರಳಿ ಬರುತ್ತಾಳೆ. ಬೂದೆಣ್ಣನ ಸಮ್ಮತಿಯೊಂದಿಗ ಅವನ ಮನೆಯನ್ನು ಪ್ರವೇಶಿಸುತ್ತಾಳೆ.

ಹೆಣ್ಣು ಒಂಟಿಯಾಗಿ ಬದುಕಲು ಪುರುಷ ಪ್ರಧಾನ ವ್ಯವಸ್ಥೆ ಅವಕಾಶವೀಯುವುದಿಲ್ಲ.. ಒಂದೊ ಅವಳು ಒಬ್ಬನ ಹೆಂಡತಿಯಾಗಿ ಅವನ ಅಧೀನದಲ್ಲಿರಬೇಕು. ಇಲ್ಲದೆ ಬಯಸಿದವರ ಬಯಕೆ ತೀರಿಸುವ ಸೂಳೆಯಾಗಬೇಕು. ವಿಚಿತ್ರವೆಂದರೆ ಮಲ್ಕಮ್ಮನ ಕೈಹಿಡಿದ ಗಂಡನೂ ಹೆಂಡತಿಯನ್ನು ಸೂಳೆಯಾಗಿಸಲು ಪ್ರಯತ್ನಿಸುತ್ತಾನೆ. ಮಾನವಾಗಿ ಬದುಕುವ ಎಲ್ಲ ದಾರಿಗಳೂ ಇಲ್ಲವಾದಾಗ ಮಲ್ಕಮ್ಮ 'ಜನ್ರು ನನ್ನನ್ನು ಸೂಳೆನ್ನ ಮಾಡಕ ಹೊರಟ್ರು. ಕೈಹಿಡಿದ್ ಗಂಡ್ನೇ ಸೂಳೆ ಆಗಂದ, ಹೊಳೆಗೆ ಎದುರು ಈಸಿ ಸಾಕಾಯ್ತು. ನಮ್ಮಂತೋರು ಗರತೇರು ಆಗಿರೋದು ಈ ಜಗತ್ತಿನ್ಯಾಗ ಸಾದ್ದಿಲ್ಲ ಹೆಂಗಿದ್ರೂ ಹೆಸ್ರು ಬರೋದು ಹಾದ್ರಗಿತ್ತೀ ಅಂತ ಸುಮ್ಮ್‌ಸುಮ್ಮನೇ ಹಾದ್ರಗಿತ್ತಿ ಅನಿಸಿಕೊಂಡ್ ಸಾಯದ್‌ಕಿಂತ ಹಾದ್ರಗಿತ್ತಿ ಆಗಿ ಬದುಕದೇ ಬೇಸನಿಸ್ಯಾದ ನನಗೀಗ'[illegible] ಎನ್ನುವಲ್ಲಿ ಮಲ್ಕಮ್ಮ ಗರತಿಯಾಗಿ ಬಾಳಲು ನಡೆಸಿದ ಯತ್ನದ ಅರಿವಾಗುತ್ತದೆ. ಗಂಡ ದುಡಿದು ಹಾಕದಿದ್ದರೂ ತಾನೇ ಅವನನ್ನು ದುಡಿದು ಬದುಕಿಸುತ್ತಿದ್ದೆ ಈ ರೀತಿ ಒಂಟಿಯಾಗಿ ಬಿಟ್ಟು ಹೋಗಬಾರದಿತ್ತು ಎಂದು ಯೋಚಿಸುತ್ತಾಳೆ. ಗಂಡ ಹೋದರೂ ಕೊರಳಲ್ಲಿದ್ದ ತಾಳಿಯಿಂದಾಗಿ ಕೂಡಿಕೆಯೂ ಸಾಧ್ಯವಾಗದೆ ಸೂಳೆಯಾಗಬೇಕಾಗುತ್ತದೆ. ತಿಮ್ಮಣ್ಣ ಹೋಗುವಾಗ ತಾಳಿ ಹರಿದುಕೊಂಡು ಹೋಗಿದ್ದರೆ ಕೂಡಿಕೆ ಮದುವೆಯ ಅವಕಾಶವಾದರೂ ಪಡೆದು ಮಾನವಾಗಿ ಬದುಕಬಹುದಿತ್ತೆಂದು ಹಲುಬುತ್ತಾಳೆ. ಮಲ್ಕಮ್ಮ ಬೂದೆಣ್ಣ ನಂಥ ಮಾನವೀಯ ಅಂಥಕರಣದವನೊಂದಿಗೆ ಸೂಳೆಯಾಗಿ ಬದುಕುವುದರಲ್ಲಿ ತಪ್ಪಿಲ್ಲವೆಂದು ಭಾವಿಸುತ್ತಾಳೆ. ಒಟ್ಟಿನಲ್ಲಿ ಮಹಿಳೆಗೆ ತನ್ನದೇ ಆದ ಬದುಕನ್ನು ಒದಗಿಸಿಕೊಡುವುದಿಲ್ಲ ಪುರುಷ ಸಮಾಜ.

ಗೀತನಾಗಭೂಷಣರ 'ದಂಗೆ' ಕಾದಂಬರಿಯು ಮೂಲತಃ ಒಬ್ಬ ಬಡ, ತಬ್ಬಲಿ ದಲಿತ ಹೆಣ್ಣು ಮಗಳು 'ದುರುಗಿ'ಯ ಕಥೆ. ಅಕ್ಕ ಭಾವನ ಹಂಗಿನಲ್ಲಿ ಬೆಳೆದ ದುರ್ಗಿ ಮೈಮುರಿದು ದುಡಿದರೂ ಸುಖದ ಬದುಕನ್ನೇನು ಕಾಣುವುದಿಲ್ಲ. ಅವಳ ಭಾವನೇ ಅವಳ ಮೇಲೆ ಅತ್ಯಾಚಾರವ್ಯಸಗುತ್ತಾನೆ. ತನ್ನ ಅಕ್ಕ ಎಂಬ ಅರಿವಿನಿಂದ ದುರ್ಗಿ ಭಾವ ಹಣಮಂತ ಎರೆದ ವಿಷವನ್ನು ದಕ್ಕಿಸಿಕೊಂಡು ಹೇಗೋ ಬದುಕುತ್ತಾಳೆ. ನಂತರ

ಅವಳ ಕೈಹಿಡಿದ ಮಾಳಪ್ಪನು ಅವಳಿಗೆ ಸುಖ ಸಂತೋಷ ನೀಡುವಂತನಾಗುವುದಿಲ್ಲ. ತನ್ನ ಮೈಗಳ್ಳತನ ಬೇಜಬ್ದಾರಿಗಳಿಂದ ಅವಳೇ ದುಡಿದು ಸಂಸಾರ ಸಾಕುವಂತೆ ಮಾಡುತ್ತಾನೆ. ಇಲ್ಲೆಲ್ಲ ಸಮಾಜ ಗಂಡಿನ ಪರವಾಗೇ ಇರುತ್ತದೆ. ಅವನು ಹೀಗಿರುವುದು ಜನರಲ್ಲಿ ಅಂತಹ ಕೋಪವನ್ನೇನು ಕೆರಳಿಸುವುದಿಲ್ಲ. ತಾನೇ ದುಡಿದು ಗಂಡನನ್ನು ಸಾಕುತ್ತಿದ್ದರೂ, ಗಂಡ ಜೋಗಿಗಳ ಹಿಂದೆ ತಾನೂ ಒಬ್ಬ ಜೋಗಿಯಾಗಿ ಹೊರಟು ಬಿಟ್ಟಾಗ ದುರುಗಿಗೆ ದಿಕ್ಕು ತೋಚದಂತಾಗುತ್ತದೆ. ಮಗಳು ಸಾತಿಯನ್ನು, ಕಟ್ಟಿಕೊಂಡು ಬೇರೆ ಊರಿಗೆ ಗುಳೆ ಹೊರಡುತ್ತಾಳೆ. ಅಲ್ಲಿಯೂ ಯಥಾ ಪ್ರಕಾರ ಬೆನ್ನು ಮುರಿವ ದುಡಿತ, ನಂತರ ಅಲ್ಲಿಯೂ ಬ್ರಾಹ್ಮಣ ಸಾಹುಕಾರ ಕುಕ್ಕಣ್ಣಿ ಗೋವಿಂದಪ್ಪನ ಭೋಗದೃಷ್ಟಿಗೆ ಸಿಕ್ಕು ಅವನ ಉಪಪತ್ನಿಯಾಗಿ ಬಾಳುತ್ತಾಳೆ. ತನ್ನ ಮಗಳು ಸಾತಿ ಕುಕ್ಕಣ್ಣಿಯ ಮಗನನ್ನು ಪ್ರೀತಿಸಿದಾಗ ಜಾತಿಯ ಕಾರಣಕ್ಕೆ ಇದನ್ನು ಸಹಿಸದ ಸಮಾಜ ದುರುಗಿಯ ಮೇಲೆ ಕೆಂಗಣ್ಣು ಬೀರುತ್ತದೆ. ಕುಕ್ಕಣ್ಣಿ ಸಾತಿಯ ಕೊಲೆ ಮಾಡಲು ಗೂಂಡಾಗಳ ಜೊತೆ ಹೊರಡುತ್ತಾನೆ. ಈ ಸಂಚಿನ ಬಗೆಗೆ ತಿಳಿದ ದುರುಗಿ ಗೋವಿಂದಪ್ಪನನ್ನು ಓಡುತ್ತಿದ್ದ ರೈಲಿನಿಂದ ತಳ್ಳಿ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾಳೆ.

'ದಂಗೆ' ಕಾದಂಬರಿಯಲ್ಲಿಯ ಹೆಣ್ಣುಗಳು (ಸಾತಿಯನ್ನು ಹೊರತುಪಡಿಸಿ) ಬಡ, ದಲಿತ, ಅವಿದ್ಯಾವಂತರು ಮಾತ್ರವಲ್ಲ ಹೊರ ಪ್ರಪಂಚದ ಅರಿವು ಇಲ್ಲದವರು ತಮ್ಮ ಮೇಲಾಗುತ್ತಿರುವ ಅನ್ಯಾಯ ಅನಾಚಾರಗಳನ್ನು ಸಹಜವೆಂದೇ ತಿಳಿದವರು. ತೀರಾ ಮೀರಿದಾಗ ಅನ್ಯಾಯವನ್ನು ಪ್ರತಿಭಟಿಸುವ ಪ್ರಯತ್ನ ಮಾಡುತ್ತಾರಾದರೂ ವ್ಯವಸ್ಥೆಯನ್ನು ಬುಡಮೇಲು ಮಾಡುವ ಶಕ್ತಿ ಅವರ ಪ್ರತಿಭಟನೆಗಿರುವುದಿಲ್ಲ. ಇದಕ್ಕೆ ಕಾರಣವನ್ನು ಕಾದಂಬರಿ ಸೂಚಿಸುತ್ತದೆ. ಕಾಶವ್ವನನ್ನು ಸ್ವತಃ ಮಾವನೇ ಬಲಾತ್ಕರಿಸಿ ಅವಳ ಸಾವಿಗೆ ಕಾರಣನಾದಾಗ ಆ ಹಳ್ಳಿ ಹೆಂಗಸರಲ್ಲಿನ ಮಾತುಕತೆಯಲ್ಲಿ ಈ ಕೆಳಗಿನ ವಿಚಾರ ಬರುತ್ತದೆ.

'ನಮ್ಮಾಯಿ ಮುತ್ಯಾ, ಅವರ ಆಯಿ ಮುತ್ಯಾ ಅವರ ಆಯಿ ಮುತ್ಯಾ ಅಂತ ಹಿಂದಿನ ಏಳೇಳು ತಲೆಗೋಳಿಂದನೂ ಇದು ಹಿಂಗೇ ನಡ್ಕೊಂಡು ಬಂದಾಗ ಹೆಣ್ಣು ಹೆಂಗಸಿನ ಮ್ಯಾಲ ಆಗ ಅನ್ಯಾಯ ಅತ್ಯಾಚಾರಗಳಿಗೆ ಹಿಂಗೆ ಈ ಗಂಡಸ್ ಮುಚ್ಚಿ ಹಾಕ್ತಾರ ಬಿಡು. ಒಂದು ಗಂಡಸ್ ಮಾಡಿದ ತಪ್ಪಿಗೆ ಮತ್ತೊಂದು ಗಂಡಸ್ ಮುಚ್ಚಿಡತಾದ್. ಹೇಳಿ ಕೇಳಿ ಇದು ಗಂಡಸರ ರಾಜಕೀ ನೋಡು, ಅವರದೇ ರಾಜ್ಯ, ಅವರದೇ ನ್ಯಾಯ. ನಾವೆಲ್ಲ ಹಿಂಗೆ ಹಿಂದ ಕುಂತೇ ಈಟೆಲ್ಲಾ ಮಾತಾಡತೀ ಅವರಿಗಿ ಎದರ ನಿಂತ ಕೇಳಾ ಧೈರ್ಯ ನಮ್ಮ ಹೆಂಗಸರೊಳಗ ಯಾರ ಬಲ್ಲಿ ಅದಾ ಹೇಳರಿ ಇದೆಲ್ಲಾ ಹಗ್ಗಾ ಹರೆಂಗಿಲ್ಲ ಕೋಲ ಮುರೆಂಗಿಲ್ಲಾ ಅಂಬಾ ಮಾತು'[೫೫]

ಹೀಗೆ ಮಹಿಳೆಯರಲ್ಲಿ ಸಂಘಟನೆಯ ಕೊರತೆ, ತನ್ಮೂಲಕ ಒಂದು ಬಲಿಷ್ಠ ಸ್ತ್ರೀ ಸಂಸ್ಕೃತಿಯ ಗೈರುಹಾಜರಿ, ಪರಿಣಾಮವಾಗಿ ಪಿತೃವ್ಯವಸ್ಥೆಯ ನಿರಂತರ ದರ್ಬಾರು– ಇವುಗಳನ್ನು ಮೇಲಿನ ಮಾತುಗಳು ಸ್ಪಷ್ಟವಾಗಿ ತೋರಿಸುತ್ತವೆ. ಇದರಿಂದಾಗಿಯೆ ಆ ಬಲಿಷ್ಠ ಪಿತೃ ಕೋಟೆಗೆ ಅಲ್ಲೊಂದು ಇಲ್ಲೊಂದು ತಗಲುವ ಪ್ರತಿಭಟನಾಸ್ತ್ರಗಳು ಹೆಚ್ಚು ಪರಿಣಾಮವನ್ನುಂಟುಮಾಡದೇ ಹೋಗುತ್ತವೆ. ಬಾಳೆಲ್ಲ ಸುಮ್ಮನಿದ್ದು ಲಕ್ಕವ್ವ (ಕಾಶಪ್ಪನ ಅತ್ತೆ) ಕೊನೆಗೆ ಸೊಸೆಯು ತನ್ನ ಗಂಡನ ದುರಾಚಾರದಿಂದಾಗಿ ಸತ್ತಾಗ ಪೋಲಿಸರಿಗೆ ದೂರು ನೀಡಿ ಅವನನ್ನು ಜೇಲಿಗೆ ಕಳುಹಿಸುವುದು, ಕುಕ್ಕಣಿ ಗೋವಿಂದಪ್ಪನನ್ನು (ತನ್ನ ಮಗಳನ್ನು ರಕ್ಷಿಸಲು)

ದುರಿಗಿ ರೈಲಿನಿಂದ ತಳ್ಳುವುದು. ದಲಿತ ಹೆಣ್ಣು ಸಾತಿ ಬ್ರಾಹ್ಮಣ ಶಿವಪ್ಪನನ್ನು ಮದುವೆಯಾಗಲು ನಿರ್ಧರಿಸುವುದು ಇಲ್ಲಿನ ಪ್ರತಿಭಟನೆಯ ಇತ್ಯಾತ್ಮಕ ಪ್ರಯತ್ನಗಳಾಗಿವೆ.

ಚಂದ್ರಕಾಂತ ಕುಸನೂರರ 'ಕೆರೂರ ನಾಮಾ' ಕಾದಂಬರಿಯಲ್ಲಿ ಬರುವ ನಿಂಗಿ ಒಬ್ಬ ದಲಿತ ಮಹಿಳೆ. ಜೀವನದ ಕುರಿತು ಅತ್ಯಂತ ವಾಸ್ತವ ದೃಷ್ಟಿಕೋನವುಳ್ಳ ಪ್ರಬುದ್ಧೆ. ಗಂಡ ಬಿಟ್ಟವಳು.

ಗಂಡ ಗಾಂಜಿಬುಕ್ಕನಾಗಿ ಸಾಧುಗಳೊಂದಿಗೆ ದೇವರ ಬೆನ್ನು ಹತ್ತಿಹೋದಾಗ ಕಿಟಾಬಾಯಿ, ಗಂಡನ ನೆನಪೇ ತೆಗೆಯುವುದಿಲ್ಲವಲ್ಲ ಎಂದು ಕೇಳಿದಾಗ 'ಕಿಟ್ಟಕ್ಕಾ ನಿಂಗೇನ್‌ಗೊತ್ತು ಅಂವಾ ದೇವರ ಬೆನ್ನು ಹತ್ಯಾನ. ಛಂದನ ಸಂಸಾರ ಮಾಡಿಕೊಂಡಿದ್ದರ ಅಂಥಲ್ಲಿ ದೇವರಿರತಾನಂತ ಆ ಕಸಮೂಳಗ ಗೊತ್ತೇ ಇಲ್ಲ. ಸಿಕ್ಕಿದ ದೇಹಕ್ಕ ಸಾಯೋದಕ್ಕಿಂತ ಮುಂಚೆನೇ ಸುಡಗಾಡ ಕಾಣಿಸೋ ಸ್ವಭಾವ ನಂದಲ್ಲ, ಅಂವಾ ಕೊಟ್ಟ ವಸ್ತು ಇದು. ಈ ಜೀಂವಾ ಇದ್ಕ ಮರ ಮರಾಂತ ಮರಗಿಸೋದಂದ್ರ ಪಾಪ ಮಾಡದಂಗೇ ತುಳಸಕ್ಕ ನಿಮ್ಮ ಶಾಸ್ತ್ರ ಏನ್ ಹೇಳತೈತಿ ನನಗ ಗೊತ್ತಿಲ್ಲ. ಅದು ಮನುಷ್ಯನ ಸುಖಕ್ಕ ಅಡ್ಡಿ ಮಾಡುತ್ತಿತ್ತು ಅಂದರ ಅಂಥ ಶಾಸ್ತ್ರ ನನಗೆ ಬೇಕಾಗಿಲ್ಲ. ಬೀಸುವ ಗಾಳಿಗಿ ಹರಿಯುವ ನದಿಗಿ ನಿಂದ್ರದರ ಹ್ಯಾಂಗ ನಿಂತಾವು. ಅಕ್ಕಿಗೆ ಹಾರಬ್ಯಾಡಂತಿರಾ? ಇದು ಇದುರೀ ಈ ಬದುಕು : ನಾವು ನಾವಾಗಿ ಉಳಿದಾಗ ನಿಮ್ಮ ಸಮಾಜ ಅಲ್ಯಾಕ ಬರಲೈತಿ' ಎನ್ನುವ ನಿಂಗಿಯ ನಿಮ್ಮ ಸಮಾಜ ಎಂಬುದು ಧ್ವನಿಪೂರ್ಣವಾಗಿದೆ. ಇದು ಗಂಡಿನ ಸಮಾಜ ಹೆಣ್ಣು ಹೆಣ್ಣಾಗಿ ಉಳಿದಾಗ ಅಲ್ಲಿ ಗಂಡಿನ ಪರ ವಹಿಸುವ ಸಮಾಜ ವ್ಯವಸ್ಥೆಗೆ ಏನು ಕೆಲಸವೆಂಬ ಪ್ರಶ್ನೆ ಮಾರ್ಮಿಕವಾಗಿದೆ.

ನಿಂಗಿ ಹೆಣ್ಣಿನ ಸ್ವಾತಂತ್ರ್ಯದ ಸಂಕೇತವೆಂಬಂತೆ ಕಾದಂಬರಿಯಲ್ಲಿ ಮೂಡಿಬಂದಿದ್ದಾಳೆ. ಶಾಂತಾರಾಮವನ್ನು ಸಂಗಾತಿಯಾಗಿ ಸ್ವೀಕರಿಸುವ ನೇರ ನುಡಿಯ, ಪರಿಶ್ರಮದ ಬದುಕು ಬಾಳುತ್ತಾಳೆ. ಯಾರ ಹಂಗು ಇಲ್ಲದೇ, ಯಾರ ಉಸಾಬರಿಗೂ ಹೋಗದೆ, ಯಾರ ಬದುಕನ್ನು ಕೆಡಿಸದೆ ಅನ್ಯೋನ್ಯವಾಗಿ ಬೆರೆತು ಬಾಳುತ್ತಾಳೆ. ಶಾಂತಾರಾಮನಿಗೆ ಹಾವು ಕಚ್ಚಿದಾಗ ತಾನೇ ವಿಷತೆಗೆದು ಬದುಕಿಸುತ್ತಾಳೆ. ಜೀವನವನ್ನು ಗಾಢವಾಗಿ ಪ್ರೀತಿಸುವ ನಿಂಗಿ ಬದುಕನ್ನು ಬಂದಂತೆ ಸ್ವೀಕರಿಸುವ ಮನಸ್ಥಿತಿಯವಳು.

ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಪಾಳೆಗಾರಿ ಗುಣಸ್ವಭಾವಗಳು ಪುರುಷರಲ್ಲಿ ನೆಲೆಸಿದ್ದು, ತಮ್ಮನ್ನು ತಾವು ಹೆಣ್ಣನ್ನು ಆಳುವವರಾಗಿ ಭಾವಿಸಿಕೊಳ್ಳಲಾಗಿದೆ. ಯಾವುದೇ ವಿಷಯವನ್ನು ಹೆಣ್ಣಿನೊಂದಿಗೆ ಚರ್ಚಿಸುವುದು ಸಲಹೆ ಪಡೆಯುವುದು ಅನವಶ್ಯ. ಗಂಡ ಹೇಳುವವನಾಗಿ ಹೆಂಡತಿ ಕೇಳುವವಳಾಗಿರಬೇಕು. ಇದಕ್ಕೆ ಹೊರತಾಗಿ ಹೆಂಡತಿ ಹೇಳಿದ್ದನ್ನು ಕೇಳುವುದು ಗಂಡಿನ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುತ್ತದೆ. ಅಂಥ ಗಂಡು ಹೆಂಡತಿಯ ಗುಲಾಮನೆನಿಸಿಕೊಳ್ಳಬೇಕಾಗುತ್ತದೆ. ಹೆಂಡತಿ ತಗ್ಗಿ ಬಗ್ಗಿ ನಡೆಯದೇ ಹೋದರೆ ಗಂಡನ ಮನೆಯಲ್ಲಿ ಅವಳಿಗೆ ಸ್ಥಾನವಿಲ್ಲವಾಗಿ ಗಂಡ ಬಿಟ್ಟವಳಾಗಬೇಕಾಗುತ್ತದೆ.

ಶಿವಕುಮಾರ ನಾಗವಾರರ 'ಟುಮ್ಯಾ' ಕಥೆಯ ಟುಮ್ಯಾನ ತಾಯಿ ಸಿಟ್ಟಿನವಳು ಎಂಬ ಕಾರಣಕ್ಕೆ ಪತಿಯಿಂದ ಪರಿತ್ಯಕ್ತಳಾಗಿ ಬದುಕಬೇಕಾಗುತ್ತದೆ. ಸಿಟ್ಟು ಅವಳೊಂದಿಗೆ ಬೆಳೆದು ಬಂದ ಒಂದು ಸಹಜ ಸ್ವಭಾವ. ಗಂಡನೊಂದಿಗೆ ತಗ್ಗಿ ಬಗ್ಗಿ ವಿನಮ್ರಳಾಗಿ ಬದುಕಬೇಕಾದ ಹೆಣ್ಣಿಗೆ ಸಿಟ್ಟು ಸಲ್ಲದು. ಕುಟುಂಬ

ಸಂಸ್ಥೆಯಲ್ಲಿ ಪತ್ನಿಯಾಗಿ ಸ್ಥಾನ ಪಡೆಯಬೇಕಾದರೆ ಸಿಟ್ಟನ್ನು ಬಿಡಬೇಕು. ಇಲ್ಲ ಗಂಡ ಬಿಟ್ಟವಳಾಗಬೇಕು ಹೀಗೇ ತನ್ನ ಸಿಟ್ಟಿನ ಕಾರಣಕ್ಕೆ ಗಂಡನಿಂದ ತ್ಯಜಿಸಲ್ಪಟ್ಟ ಟೂಮ್ಯಾನ ತಾಯಿ ಮಗನೊಂದಿಗೆ ಬದುಕಿರುತ್ತಾಳೆ. ಆದರೆ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಅದಕ್ಕೂ ಅವಕಾಶ ಕೊಡದೆ, ಅವಳಿಂದ ಮಗುವನ್ನು ಅಪಹರಿಸುತ್ತದೆ. ಮಗು ತಾಯಿಯನ್ನು ಮರೆತು ತಮಗೆ ಹೊಂದಿಕೊಳ್ಳಬೇಕೆಂದು ಬಯಸುವ ಕುಟುಂಬದ ಸದಸ್ಯರು ತಾಯಿ ಕೆಟ್ಟವಳೆಂದು ಮಗುವಿಗೆ ಮನವರಿಕೆ ಮಾಡಿಸಲು ಪ್ರಯತ್ನಿಸುತ್ತಾರೆ. ಮಗುವಿಗೆ ತನ್ನ ತಾಯಿ ತನ್ನ ಅನಾರೋಗ್ಯದಲ್ಲಿ ತನಗಾಗಿ ಹಗಲಿರುಳು ಮಿಡಿದದ್ದರ ನೆನಪು, ಅವಳು ಕೆಟ್ಟವಳ್ಳಲ್ಲವೆಂದು ಹೇಳುವಂತೆ ಪ್ರೇರೇಪಿಸುತ್ತದೆ. ಆದರೆ ತಾಯಿಯ ಬಳಿ ಸಿಗದ ಹಲವಾರು ಸೌಲತ್ತುಗಳು ಇಲ್ಲಿ ಸಿಗತೊಡಗಿದ್ದರಿಂದ 'ಟೂಮ್ಯಾ' ತನ್ನ ಭಾವನೆಗಳನ್ನು ಅದುಮಿಟ್ಟುಕೊಳ್ಳುತ್ತಾನೆ..

ವಂಶೋಧ್ಧಾರಕನನ್ನು ಹೆತ್ತುಕೊಟ್ಟರೂ ಹೆಣ್ಣು ತನ್ನಿಷ್ಟದಂತೆ ವಿವಾಹ ಸಂಬಂಧದಲ್ಲಿ ಮುಂದುವರೆಯಲಾಗುವುದಿಲ್ಲ. ಟೂಮ್ಯಾನ ತಂದೆ ಜಗಳದ ಸಂದರ್ಭದಲ್ಲಿ ಅವನ ತಾಯಿಗೆ 'ಮರಿನೀ ತಿಳಿದಿರಬೇಕು, ನೀ ಹೇಳಿದ್ದು ನಾ ಕೇಳಬೇಕು ಅಂತ. ಹೆಣ್ತಿದೇರ್ ಗುಲಾಮರು ನಮ್ಮ ಖಾಂದಾನ ದಾಗೆ ಇಲ್ಲ ತಿಳಿತಾ? ನಾ ಏನು ಹೇಳ್ತಿನೋ ಹಾಗ ಕೇಳಿಕೊಂಡು ಇರಬೇಕು'[೫೭] ಎಂಬ ಮಾತು ಗಂಡ ಹೇಳಿದಂತೆ ಕೇಳಿದರೆ ಮಾತ್ರ ಹೆಂಡತಿಗೆ ಗಂಡನ ಮನೆಯಲ್ಲಿ ಸ್ಥಾನ, ಇಲ್ಲವಾದರೆ ಇಲ್ಲ ಎಂಬುವುದನ್ನು ತಿಳಿಸುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಗೆ ತನ್ನದೇ ಆದ ಮನೆಯೇ ಇಲ್ಲ. ಮದುವೆಯಾಗುವವರೆಗೆ ತವರು ಮನೆ, ನಂತರ ಗಂಡನ ಮನೆ. ತವರು ಮನೆಯಂತೂ ತಾತ್ಕಾಲಿಕವೆಂದು ನಂಬಿಸಲಾಗಿದೆ. ಇನ್ನು ಗಂಡನ ಮನೆಯೂ ಅಷ್ಟೆ. ಅಲ್ಲಿಯೂ ಸದಸ್ಯರ ನಿರೀಕ್ಷೆಯಂತೆ ನಡೆದುಕೊಂಡರೆ, ಅವರೆಲ್ಲ ಇಚ್ಛಿಸಿದರೆ ಅವಳು ಅಲ್ಲಿಯ ಸದಸ್ಯಳಾಗಿ ಮುಂದುವರೆಯಬಹುದು. ಇಲ್ಲವಾದರೆ ಯಾವಾಗ ಬೇಕಾದರೂ ಗೇಟ್‌ಪಾಸ್ ಸಿದ್ಧವಾಗಿರುತ್ತದೆ. ಹೀಗೆ ಬಂದವಳಿಗೆ ತವರಿನಲ್ಲಿಯೂ ಜಾಗ ಸಿಗುವುದು ಕಷ್ಟ. ಹೀಗಾಗಿಯೇ ಎಷ್ಟೇ ಕಷ್ಟವಾಗಲಿ ತನ್ನ ಮನಸ್ಸಿಗೆ ವಿರುದ್ಧವಾಗಲಿ ಮಹಿಳೆ ಗಂಡನ ಮನೆಯಿಂದ ಹೊರಬರಲು ಇಚ್ಛಿಸುವುದಿಲ್ಲ. ಅದಕ್ಕೂ ಮೀರಿ ಬಂದಾಗ ಮಕ್ಕಳು ತಂದೆ ತಾಯಿಗಳಲ್ಲಿ ಒಬ್ಬರ ಪ್ರೀತಿಯಿಂದ ವಂಚಿತರಾಗುತ್ತಾರೆ. ನಾಗವಾರರು ಮಗುವಿನ ನಿಟ್ಟಿನಿಂದ ಕಥೆಯನ್ನು ಕಟ್ಟಿಕೊಟ್ಟಾಗಲೂ ಮಹಿಳಾಪರ ಸಂವೇದನೆಯಲ್ಲಿ ನಿರೂಪಿಸಿದ್ದಾರೆ.

ಹೈದರಾಬಾದ ಕರ್ನಾಟಕ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡಬಿಟ್ಟಳೆನಿಸಿಕೊಂಡು ಬದುಕಬೇಕಾದ ಹೆಣ್ಣನ್ನು ಅತ್ಯಂತ ಹೀನಾಯವಾಗಿ ನೋಡುವ ಮತ್ತು ನಡೆಸಿಕೊಳ್ಳುವ ಪರಿಪಾಠ ಬೆಳೆದುಬಂದಿದೆ. ಗಂಡ ಬಿಟ್ಟವಳು ಅನಿವಾರ್ಯವಾಗಿ ತವರುಮನೆ ಸೇರಬೇಕು. ತನ್ನದೇ ಆದ ಆರ್ಥಿಕ ಭದ್ರ ಇಲ್ಲದ ಕಾರಣ ಅವಲಂಬನೆ ಅನಿವಾರ್ಯವಾಗುತ್ತದೆ. ಹೀಗೆ ತವರು ಸೇರಿದವರು ಬಿಟ್ಟಿ ಆಳಿನಂತಾಗಬೇಕಾಗುತ್ತದೆ. ಗಂಡನ ಮನೆಯ ಹಿಂಸೆ ಮತ್ತು ತವರಿನ ದಾಕ್ಷಿಣ್ಯದಿಂದ ತಪ್ಪಿಸಿಕೊಳ್ಳಲು ಸ್ವಾವಲಂಬನೆಯ ದಾರಿ ಕಂಡುಕೊಳ್ಳಲು ನಿರ್ಧರಿಸುವ ಸುಮಿತ್ರಾಳ ಕಥೆ 'ಸ್ಯಾಡಿಷ್ಟ್'ನಲ್ಲಿ ಚಿತ್ರಣಗೊಂಡಿದೆ.

ಸಿದ್ಧರಾಮ ಹೊನ್ಕಲ್‌ರ ಈ ಕಥೆ ಸುಮಿತ್ರಾಳ ಬದುಕಿನ ಗೋಳನ್ನು ಕೊನೆಗೆ ಸುಧಾರಿಸಿಕೊಳ್ಳಲಾಗದ ಗಂಡ ಅಮರೇಶನ ದೌರ್ಜನ್ಯಕ್ಕೆ ಬೇಸತ್ತು ಗಂಡನನ್ನು ತ್ಯಜಿಸುವುದನ್ನು ವಸ್ತುವಾಗಿ ಹೊಂದಿದೆ. ಸುಮಿತ್ರಾ

ಶಂಕರಗೌಡ–ನೀಲಮ್ಮರ ಮೂರು ಗಂಡುಮಕ್ಕಳ ನಂತರ ಬಯಸಿ ಪಡೆದ ಮಗಳು. ತುಂಬು ಕುಟುಂಬದಲ್ಲಿ ಪ್ರೀತಿಯಲ್ಲಿ ಬೆಳೆದು ಪದವೀಧರೆಯಾದವಳು. ಸೋದರಮಾವನ ಮಗ ಇಂಜನಿಯರ್ ಅಮರೇಶನೊಂದಿಗೆ ಹಿರಿಯರಿಚ್ಛೆಯಂತೆ ಸಂತಸದಿಂದ ಮದುವೆಯಾದಳು. ಸುಶಿಕ್ಷಿತ ದಂಪತಿಗಳ ದಾಂಪತ್ಯ ಸುಮಧುರವಾದೀತು ಎಂಬ ಹಿರಿಯರ ಅಪೇಕ್ಷೆ ಕೆಲ ದಿನಗಳಲ್ಲಿಯೆ ನೆಲಕಚ್ಚುತ್ತದೆ. ಉದ್ಯೋಗವಿಲ್ಲದ, ಯಾವುದೇ ಪ್ರಯತ್ನಗಳಿಲ್ಲದ, ಅಮರೇಶನಿಗೆ ಹೆಂಡತಿಯನ್ನು ವಿನಾಕಾರಣ ಗೋಳುಹೊಯ್ದುಕೊಳ್ಳುವುದೇ ಉದ್ಯೋಗವಾಗುತ್ತದೆ. ತಂದೆ ತಾಯಿಗಳ ಬುದ್ಧಿ ಮಾತು, ಹಿರಿಯರು ಮಾಡಿದ ಪಂಚಾಯ್ತಿ ಎಲ್ಲ ವ್ಯರ್ಥವಾದಾಗ ಸುಮಿತ್ರೆ ಸ್ವತಃ ಅವನನ್ನು ತಿದ್ದಲು ಯತ್ನಿಸಿ ವಿಫಲಳಾಗುತ್ತಾಳೆ. 'ಎಷ್ಟು ಹೊಡಿತೀರಿ ಹೊಡಿರಿ ಆದರೆ ಒಂದು ಕಾರಣ ಬೇಕಲ್ಲ. ನಿಮಗೆ ಕೆಲಸ ಸಿಗಲಿಲ್ಲ ಅನ್ನೋ ಹತಾಶೆಯಿಂದ ನನ್ನೊಂದಿಗೆ ಕಿರಿ ಕಿರಿ ಮಾಡಿ ಹಿಂಸೆ ಕೊಡೋದರಿಂದ ನಿಮಗೆ ತೃಪ್ತಿ ಆಗೋಹಾಗಿದ್ದರ ಇನ್ನೂ ಹೊಡಿರಿ'[illegible] ಎನ್ನುತ್ತಿದ್ದಾಗ ಹುಚ್ಚನಂತಾಗುವ ಅಮರೇಶ ಅವಳು ತನಗೆ ಕೆಲಸ ಇಲ್ಲವೆಂದು ಹಂಗಿಸುತ್ತಿದ್ದಾಳೆಂದು ಭಾವಿಸಿ ಮತ್ತೂ ಹಿಂಸಿಸುತ್ತಾನೆ.

ಇಷ್ಟೆಲ್ಲ ಆದರೂ ಸುಮಿತ್ರಾ ಅಮರೇಶ ಬದಲಾಗ ಬಹುದೆಂದು ಬಹಳಷ್ಟು ಹಿಂಸೆಯನ್ನು ಸಹಿಸುತ್ತಾಳೆ. ಕೊನೆಗೆ ಅಮರೇಶ ನಾಯಿಬಾಲಡೊಂಕು ಎಂಬಂತೆ ದಿನನಿತ್ಯದ ಗೋಳನ್ನೇ ಮುಂದುವರಿಸಿದಾಗ ಸುಮಿತ್ರಾ ಸಾಮಾಜಿಕ ಅವಹೇಳನ, ಗಂಡಬಿಟ್ಟವಳೆಂದು ಬಿರುನುಡಿಗಳನ್ನು ಎದುರಿಸಿದರೂ ಸರಿಯೆ ಆತ್ಮಹತ್ಯೆಗೆಳಸದೆ, ಆತ್ಮಗೌರವದಿಂದ ಯಾವುದಾದರೂ ಉದ್ಯೋಗ ಮಾಡಿ ಬದುಕಿದರಾಯ್ತೆಂದು ನಿರ್ಧರಿಸಿ ಅಮರೇಶನಿಗೂ ಹೇಳದೆ ಅವನನ್ನು ಬಿಟ್ಟು ತಂದೆಯೊಡನೆ ಹೋಗುತ್ತಾಳೆ.

ಮಹಿಳೆಯನ್ನು ಗೋಳು ಹೊಯ್ದುಕೊಳ್ಳಲು ಸುಶಿಕ್ಷತ, ಅಶಿಕ್ಷಿತ ಎಂಬ ಭೇದವಿಲ್ಲದಂತಾದಾಗ, ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಗಂಡನ ಮನೆಯಿಂದ ಹೆಂಡತಿಯ ಹೆಣವೇ ಬರಬೇಕು. ಎಂಬ ಸಾಂಸ್ಕೃತಿಕ ನಂಬಿಕೆಗಳನ್ನು ಮೀರಿ ಸುಮಿತ್ರಾ ಹೊಸ ಬದುಕಿನ ನಿರ್ಧಾರ ಕೈಗೊಳ್ಳುವದಕ್ಕೆ ಅವಳು ಪಡೆದ ಶಿಕ್ಷಣ ಕಾರಣವಾಗುತ್ತದೆ. ಶಿಕ್ಷಣ ಮಹಿಳೆಯ ಬದುಕನ್ನು ಯಥಾ ಸ್ಥಿತಿಯಿಂದ ಬದಲಾವಣೆಗೆ ಕೊಂಡೊಯ್ಯುವ ಸಾಧನವಾಗುತ್ತದೆಂಬುದನ್ನು ಕಥೆ ಪ್ರತಿನಿಧಿಸುತ್ತದೆ. ಗಂಡನೇ ಹೆಣ್ಣನ್ನು ಬಿಡುವುದಕ್ಕೆ ಬದಲಾಗಿ ತಾನೇ ಗಂಡನನ್ನು ತ್ಯಜಿಸುವ ಧೈರ್ಯ ತೋರುವ ಸುಮಿತ್ರ, ಹೆಣ್ಣನ್ನು ತನಗೊಪ್ಪಿಸಿದ್ದಾರೆ. ತಾನೇನು ಮಾಡಿದರೂ ನಡೆಯುತ್ತದೆ ಎಂಬ ಅಮರೇಶನ ನಂಬಿಕೆಯನ್ನು ಹುಸಿಗೊಳಿಸುತ್ತಾಳೆ. ಅಂಥ ದಿಟ್ಟತನವನ್ನು ಶೋಷಣೆಗೊಳಗಾಗುವ ಮಹಿಳೆ ತೋರಬೇಕೆಂಬುದಕ್ಕೆ ತೋರುಬೆರಳಾಗುತ್ತದೆ. ಕಥೆ.

ಗಂಡು ಸಂತಾನವನ್ನು ಪಡೆಯಲು ಎರಡನೆಯ ಮದುವೆಯಾಗಿ ಸವತಿಯನ್ನು ಕರೆತಂದ ಗಂಡನಿಂದ ವಿಚ್ಛೇದನ ಪಡೆಯುವ ಕುರುಬರ ಸಾಬವ್ವ ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಲ್ಲಿ ಪ್ರತಿನಿಧೀಕರಣಗೊಂಡಿದ್ದಾಳೆ.

ಕುರುಬರ ಸಾಬವ್ವ ಹನುಮಪ್ಪನ ಮೊದಲ ಹೆಂಡತಿ. ಇವಳಿಗೆ ಮಕ್ಕಳಾಗಲಿಲ್ಲವೆಂದು ಹನುಮಪ್ಪ ಮಲಕವ್ವಳನ್ನು ಉಡುಕಿಮಾಡಿಕೊಂಡು ಬರುತ್ತಾನೆ. ಸವತಿಯರ ಮಧ್ಯೆ ದಿನವೂ ಜಗಳ ಕೊನೆಗೊಮ್ಮೆ ಮಲಕವ್ವ ಹನುಮಪ್ಪ ಕೂಡಿಕೊಂಡು ಸಾಬವ್ವಳನ್ನು ಮನೆಯಿಂದ ಹೊರಹಾಕುತ್ತಾರೆ. ಸಾಬವ್ವ ಪಂಚರ ಮೊರೆಹೊಕ್ಕು ವಿಚ್ಛೇದನ ಪಡೆದು ಸ್ವತಂತ್ರಳಾಗಿ ಬದುಕುತ್ತಾಳೆ.

'ಸಾಬವ್ವ ಹಳ್ಳಿ ಬಿಟ್ಟಿಲ್ಲ. ಯಾವ ಗಂಡಸಿಗೂ ತನ್ನ ಕಚ್ಚೆ ಸಡಿಲಿಸಿಲ್ಲ. ಕಟ್ಟು ನಿಟ್ಟಿನ ಬದುಕಿನಲ್ಲಿ ತನ್ನ ಮೈಯ ಹರೆಯಕ್ಕೆ ಹತ್ತಿಕ್ಕಿ ದಿನಗಳೆದು. ಈಗ ಮುಪ್ಪಿನ ಹೊಸ್ತಿಲಿಗೆ ಬಂದು ನಿಂತ ದಿಟ್ಟ ಹೆಂಗಸು. ಹೆಣ್ಣು ಆಕಾರದ ಗಂಡಿನಂತೆ ದುಡಿಯುತ್ತಾ ಎಲ್ಲೋರಿಗೆ ಬೇಕಾದವಳಾಗಿ ಬದುಕುತ್ತಿದ್ದಾಳೆ.'

ಗಂಡನಿಂದ ವಿಚ್ಛೇದನ ಪಡೆದು ಯಾವುದಕ್ಕೂ ಹೆದರದೇ ಸ್ವೇಚ್ಛಾವೃತ್ತಿಗೆಳಸದೆ ಸ್ವಾಭಿಮಾನದಿಂದ ತಲೆಎತ್ತಿ ಬಾಳುತ್ತಾಳೆ. ಶ್ರಮವಹಿಸಿ ದುಡಿದು ತಾನು ಬದುಕುವುದಲ್ಲದೇ ಇತರರ ಕಷ್ಟಕ್ಕೂ ಒದಗುತ್ತಾಳೆ. ಆದರೆ ಅವಳ ದುಡಿಮೆಯನ್ನು ಗಂಡಸಿನ ದುಡಿಮೆಗೆ ಹೋಲಿಸಲಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಗೂ ದುಡಿಮೆಗೂ ಬಹುದೂರ. ಅವಳ ದಿನವಿಡಿಯ ದುಡಿಮೆ ದುಡಿಮೆಯೇ ಅಲ್ಲ. ಮಹಿಳೆಯ ಮನೆಗೆಲಸ ದುಡಿಮೆಯಾಗದೇ ಸೇವಾವಲಯಕ್ಕೆ ಸೇರುತ್ತದೆ. ಅವಳ ಮನೆಹೊರಗಿನ ದುಡಿಮೆಯನ್ನು 'ಗಂಡಸಿನಂತೆ' ಎಂದು ಗುರುತಿಸಿ ಅದೃಶ್ಯಗೊಳಿಸಲಾಗುತ್ತದೆ. ಹೆಣ್ಣು ದುಡಿದು ಗಳಿಸಿದರೂ ಅದನ್ನು ಹೆಣ್ಣುತನದ ಲಕ್ಷಣವಾಗಿ ಗುರುತಿಸುವುದಿಲ್ಲ.

ಮಹಿಳೆ ವಿಚ್ಛೇದನ ಪಡೆದು ಬದುಕುವುದ ಅಥವಾ ಪರಿತ್ಯಜಿಸಲ್ಪಟ್ಟು ಬದುಕುವುದು ಇಂದಿಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಗೌರವದ ಸಂಗತಿಯಾಗಿ ಭಾವಿಸಲಾಗುವುದಿಲ್ಲ, ಆದರೂ ಅನಿವಾರ್ಯ ಸಂದರ್ಭದಲ್ಲಿ ಅಂಥದೊಂದು ಬದುಕು ಎದುರಾದಾಗ ಇಲ್ಲಿಯ ಮಹಿಳೆಯರು ಹಿಂಜರಿಯದೆ ಅದನ್ನು ಸ್ವೀಕರಿಸಿದ್ದಾರೆ. ಮಾತ್ರವಲ್ಲ ಸ್ವಂತದ ಬದುಕನ್ನು ರೂಪಿಸಿಕೊಂಡಿದ್ದಾರೆ. ಸಮಾಜಿಕ ನಿರೀಕ್ಷೆಯನ್ನು ಮೀರಿ ವಿಚ್ಛೇದನ ಪಡೆದಿದ್ದಾರೆ. ಕಥನ ಸಾಹಿತ್ಯದಲ್ಲಿ ಪರಿತ್ಯಕ್ತೆಯರಾದ ಬಹುತೇಕ ಮಹಿಳೆಯರು ದಲಿತ ವರ್ಗಕ್ಕೆ ಸೇರಿದವರು. ಇವರು ಯಾವುದೇ ಹಿಂಜರಿಕೆ ಇಲ್ಲದೆ ತಮ್ಮಿಷ್ಟದ ಸಂಗಾತಿಗಳೊಂದಿಗೆ ಬದುಕನ್ನು ಬೆಸೆಯುತ್ತಾರೆ. ಮೇಲ್‌ಜಾತಿ, ಮಧ್ಯಮ ವರ್ಗದ ಮಹಿಳೆಯರಲ್ಲಿ ಇಂತಹ ದಾಷ್ಟ್ಯ ಕಾಣದು. ಮರ್ಯಾದೆಯೇ ಮುಖ್ಯವಾಗಿ ಅವರು ಬದುಕಿಡೀ ಗಂಡನ ಹೆಸರಲ್ಲೇ ಕಳೆಯಬೇಕಾಗುತ್ತದೆ. ಶಿವಕುಮಾರ ನಾಗವಾರರ ಟುಮ್ಯಾನ ತಾಯಿ ಇದಕ್ಕೊಂದು ಉತ್ತಮ ಉದಾಹರಣೆ.

೪.೩.೭ ಹೆಣ್ಣು ಮಾರಾಟ :

ವಿವಾಹ ಮಹಿಳೆಯ ಬದುಕಿನ ಅನಿವಾರ್ಯ, ಪಾವಿತ್ರ್ಯ ವಿವಾಹ ಸಂಸ್ಥೆ ಮಹಿಳೆಯಿಂದ ಅಪೇಕ್ಷಿಸುವ ಅತಿ ಶ್ರೇಷ್ಠ ಗುಣ. ಹಾಗೆಂದು ಅದು ಎಲ್ಲ ಕಾಲಕ್ಕೂ ಒಂದೆ ಬಗೆಯಾಗಿರುತ್ತದೆಂದೇನು ಇಲ್ಲ ಚರಿತ್ರೆಯನ್ನು ಗಮನಿಸುವಾಗ ಅತಿಥಿ ಸತ್ಕಾರಕ್ಕೆಂದು ಚಾಜಕ್ಕೆಂದು ಆಧುನಿಕ ಸಂದರ್ಭದಲ್ಲಿ ನೌಕರಿಯ ಬಡ್ತಿಗೆಂದು ಹೆಣ್ಣನ್ನು ಬಳಸಿಕೊಳ್ಳುವ ಸಂದರ್ಭದಲ್ಲಿ ಪಾವಿತ್ರ್ಯ ಮುಖ್ಯವಾಗುವುದಿಲ್ಲ. ಹೆಂಡತಿ ಗಂಡನ ಸ್ವತ್ತು. ಅವಳ ಶೀಲ ಅವಳ ಗಂಡನಿಗಾಗಿ ಮಾತ್ರ ಎಂದು ವಿಧಿಸಿರುವಾಗಲೂ, ಗಂಡಿಗೆ ಮಹಾನತೆಯನ್ನು ತಂದು ಕೊಡಲು, ಮಹತ್ವಾಕಾಂಕ್ಷೆಯನ್ನು ಈಡೇರಿಸಲು ಪಾವಿತ್ರ್ಯವೂ ಬಳಕೆಯ ಸಾಧನವಾಗುತ್ತದೆ. ಹೆಣ್ಣು ತಾನಾಗಿ ಪಾವಿತ್ರ್ಯವನ್ನು ಮೀರಿದರೆ ವ್ಯಭಿಚಾರವೆಂದು ಶಿಕ್ಷೆಗೆ ಗುರಿಯಾಗುವ ಸಂಗತಿ ಗಂಡಿನಿಚ್ಛೆಯಂತೆ ನಡೆದಾಗ ತ್ಯಾಗ ಪವಾಡವೆಂದು ಪರಿಗಣನೆಯಾಗುತ್ತದೆ. ಹೈದರಾಬಾದ್-ಕರ್ನಾಟಕದಲ್ಲಿ ಕೆಳಜಾತಿಯ ಪುರುಷರು ಕುಡಿತ ಜೂಜುಗಳ ದಾಸರಾಗಿ ಇಲ್ಲವೆ ತಮ್ಮ ಅಹಂಕಾರದಿಂದಾಗಿ ಹಣವಂತರಿಗೆ ತಮ್ಮ ಹೆಂಡಿರನ್ನೇ ಮಾರುವ ಪದ್ಧತಿ ಕೆಲ ಜಾತಿಗಳಲ್ಲಿದೆ. ಆಧುನಿಕ ಸಂದರ್ಭದಲ್ಲಿ ವರದಕ್ಷಿಣೆಯ ನೆವದಲ್ಲಿ ಹೆಣ್ಣಿನ ಕಡೆಯವರನ್ನು ಸುಲಿಯುವ, ಹಾಗಾಗದಿದ್ದಲ್ಲಿ ಹೆಣ್ಣನ್ನೇ ಮಾರಿದ ಉದಾಹರಣೆಗಳು ಕಥನ ಸಾಹಿತ್ಯದಲ್ಲಿವೆ.

ಹೆಂಡತಿಯನ್ನು ಮಾರುವ ಉಲ್ಲೇಖ ಮನು ಸ್ಮೃತಿಯಲ್ಲೆ ದೊರೆಯುತ್ತದೆ. ಹರಿಶ್ಚಂದ್ರ ಸಾಲಕ್ಕಾಗಿ ಹೆಂಡತಿಯನ್ನು ಮಾರಿದ ಕಥೆ ಜನಜನಿತವಾಗಿದೆ. ಮನು ತನ್ನ ಕೃತಿಯಲ್ಲಿ 'ಗಂಡ ಅವಳನ್ನು ಮಾರಾಟ ಮಾಡಿದರೂ ತ್ಯಜಿಸಿದರೂ ಹೆಂಡತಿಗೆ ಗಂಡನಿಂದ ಬಿಡುಗಡೆ ಎಂಬುದಿಲ್ಲ ಎನ್ನುತಾನೆ. ಈ ಮಾತಿನ ಅರ್ಥ ಗಂಡ ಹೆಂಡತಿಯನ್ನು ಮಾರಾಟಮಾಡಿದರೆ ಅಥವಾ ತ್ಯಜಿಸಿದರೆ ಅವಳನ್ನು ಕೊಂಡುಕೊಂಡವನ ಅಥವಾ ಅವಳನ್ನು ಸ್ವೀಕರಿಸಿದವನ ನ್ಯಾಯ ಸಮ್ಮತ ಹೆಂಡತಿಯಾಗಲಾರಳು. ಬಹುಶಃ ಇದಕ್ಕಿಂತಲೂ ಘೋರಾವಾದ ಕಾನೂನು ಇನ್ನೊಂದಿರಲಾರದು. ಆದರೆ ಮನುವಿಗೆ ತನ್ನ ಕಾನೂನಿನ ನ್ಯಾಯಾನ್ಯಾಯದ ಬಗ್ಗೆ ಚಿಂತೆ ಇಲ್ಲ. ಬೌದ್ಧಯುಗದ ಆಳ್ವಿಕೆಯಲ್ಲಿ ಸ್ತ್ರೀ ಪಡೆದಿದ್ದ ಸ್ವಾತಂತ್ರವನ್ನು ಸಂಪೂರ್ಣವಾಗಿ ಅಪಹರಿಸುವುದೇ ಅವನ ದೇಯವಾಗಿತ್ತು'. ಎನ್ನುತ್ತಾರೆ ಮ.ನ. ಜವರಯ್ಯ.

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಜಂಬಣ್ಣ ಅಮರಚಿಂತರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿಯ ದೊಡ್ಡಮ್ಮ, ಡಾ. ರಾಜಶೇಖರ ನೀರಮಾನ್ವಿಯವರ 'ನೆಲೆ' ಕಥೆಯ ರಂಗಮ್ಮ, ಚಂದ್ರಕಾಂತ ಕುಸನೂರರ ಚರ್ಚಗೇಟ ಕಾದಂಬರಿಯ ಸುಮಿತ್ರಾ, ಗೀತಾ ನಾಗಭೂಷಣರ 'ಮಾಪುರ ತಾಯಿ ಮಕ್ಕಳು' ಕಾದಂಬರಿಯ ಸಿಂಗಾರಿ, ಲಲಿತಾ ದೇಮಶೆಟ್ಟಯವರ ಬೆಲೆವೆಣ್ಣು ಕಥೆಯ ಶಾಂತಿ ಮಾರಾಟಗೊಂಡ ಹೆಣ್ಣುಗಳಾಗಿದ್ದಾರೆ.

ಗೀತಾ ನಾಗಭೂಷಣರ 'ಮಾಪುರ ತಾಯಿ ಮಕ್ಕಳು' ಕಾದಂಬರಿಯ ಸಿಂಗಾರಿ ಮುಂಬೈಯ ಕೋಠಿಯೊಂದಕ್ಕೆ ಮಾರಾಟವಾಗುತ್ತಾಳೆ. ಕೆಳಜಾತಿಯಲ್ಲಿ ಹುಟ್ಟಿದ ತಪ್ಪಿಗೆ ಸಿಂಗಾರಿ ತನ್ನ ಸೋದರ ಮಾವ ಶಿವರುದ್ರನನ್ನು ಮನಸಾರೆ ಪ್ರೀತಿಸಿದರೂ ವಿವಾಹ ಸಂಸ್ಥೆ ಪ್ರವೇಶಿಸಲಾಗದೆ ಜೋಗತಿಯಾಗಬೇಕಾಗುತ್ತದೆ. ಅವಳನ್ನು ಜೋಗತಿಯಾಗಿಸುವಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಪೂರ್ವಯೋಜಿತ ಸಂಚು ನಡೆಸುತ್ತದೆ. ಕೆಳಜಾತಿಯ ಚಲುವೆ ವಿವಾಹವಾಗ ಬೇಕೆಂದರೂ ಆಗಗೊಡದೆ ಅವಳನ್ನು ತಮ್ಮ ಸೂಳೆಯಾಗಿಸಿಕೊಳ್ಳ ಬಯಸಿದ ಮೇಲ್ ಜಾತಿಯ ಗಂಡಸರು ಜೋಗತಿಯಾಗಿಸುವಲ್ಲಿ ಸಫಲರಾಗುತ್ತಾರೆ. ಒಮ್ಮೆ ಜೋಗತಿಯಾಗಿಸಿ ಅನುಭವಿಸಿದವರು ಸುಮ್ಮನಿರದೆ ಅವಳನ್ನು ಮಾರಾಟ ಮಾಡಿ ಕೈ ತೊಳೆದುಕೊಳ್ಳುತ್ತಾರೆ. ಸಿಂಗಾರಿ ತನಗೆ ಆಸರೆಯಾಗಿ ಬಂದ ಮಾರ್ವಾಡಿಯಿಂದ ತನಗೆ ಲಭ್ಯವಾದ ಸಂಪತ್ತನ್ನೆಲ್ಲ ಮಾರಾಟಕ್ಕೆ ಬಂದ ಹೆಣ್ಣುಗಳನ್ನು ಕೊಂಡು ಅವರ ಬದುಕನ್ನು ಗೌರವಯುತವಾಗಿ ರೂಪಿಸಲು ವಿನಿಯೋಗಿಸುತ್ತಾಳೆ. ಅವಳ ಸ್ತ್ರೀಪರ ಕಾಳಜಿಯನ್ನು ಸಹಿಸದ ಹೆಣ್ಣು ಸಾಗಣೆದಾರರು ತಮ್ಮ ಕೆಲಸಕ್ಕೆ ಅಡ್ಡಿಯಂತಿರುವ ಅವಳನ್ನು ಕೊಂದು ಹಾಕುತ್ತಾರೆ. ಹೀಗೆ ಸ್ತ್ರೀ ಸಂವೇದನೆಯ ಜೀವವೊಂದು ಪುರುಷ ಸ್ವಾರ್ಥಕ್ಕೆ ಬಲಿಯಾಗುತ್ತದೆಂಬುದನ್ನು ಗೀತಾ ಹೃದಯಂಗಮವಾಗಿ ಚಿತ್ರಿಸಿದ್ದಾರೆ.

ಜಂಬಣ್ಣ ಅಮರ ಚಿಂತರ ಕುರುಮಯ್ಯ ಅಂಕುಶದೊಡ್ಡಿ ಕಾದಂಬರಿಯಲ್ಲಿ ಬುಡ್ಡಮ್ಮ, ವಿವಾಹ ಬಾಹಿರ ಸಂಬಂಧದಿಂದ ಮೊದಲ ಗಂಡ ಮರೆಪ್ಪನಿಂದ ಮಾರಾಟವಾಗಿ ಜಂಬಯ್ಯನ ಹೆಂಡತಿಯಾಗುತ್ತಾಳೆ. ತನ್ನ ಮಗುವಿನಿಂದ ದೂರವಿರಲಾಗದೆ ಜಂಬಯ್ಯನ ಸಿಟ್ಟಿಗೆ ಬಲಿಯಾಗಿ ಎರಡನೆ ಬಾರಿ ಮಾರಾಟವಾಗಬೇಕಾದಾಗ ಕೊಳ್ಳಲು ಬಂದ ತಾಯಪ್ಪ ಇವಳ ಜೊತೆ ಕೂಸು ಗೀಸಿನ ಕಳ್ಸಬಾರದು ಒಂಟ್ಯಾಗಿ ಬಂದ್ರೆ ನಾ ತಗೊಳ್ಳೋದು ಎಂದು ಹೇಳುತ್ತಾನೆ.

ಹೆಂಡತಿಯನ್ನು ಮಾರಿದರೂ ಕೊಂಡರೂ ಗಂಡು ಕಳೆದುಕೊಳ್ಳಬೇಕಾದುದೇನೂ ಇಲ್ಲ. ಎಲ್ಲ ಅವನ ಲಾಭದ ದೃಷ್ಟಿಯನ್ನೇ ಹೊಂದಿರುತ್ತದೆ. ಬುಡ್ಡಮ್ಮನನ್ನು ಮಾರುವಾಗ ಮೈಕೈ ತುಂಬಿಕೊಂಡಾಳ ಕೆಲ್ಸ ಚಲೋ ಮಾಡ್ತಾಳ ಕೆಲ್ಸದಾಗ ಗಂಡಾಳಗಿಂತ ಒಂದು ಕೈ ಜಾಸ್ತಿ. ಎನ್ನುವ ಏವರ ಚತುರ ವ್ಯಾಪಾರಿಗಳ ಮಾರಾಟದ ಗತ್ತಿನ ಮಾತುಗಳಂತೆ ತೋರುತ್ತವೆ.

ಊಳಿಗಮಾನ್ಯ ಸಮಾಜ ವ್ಯವಸ್ಥೆಯಲ್ಲಿ ಹೆಂಗಸನ್ನು ಕೊಳ್ಳುವುದು ಮಾರುವುದು ದಾನ ಮಾಡುವುದು (ವಿವಾಹ ಸಂಪ್ರದಾಯದ ಕನ್ಯಾದಾನ ಶ್ರೇಷ್ಠದಾನಗಳಲ್ಲಿ ಒಂದೆನಿಸಿದೆ.) ಸಾಧಾರಣ ಪದ್ಧತಿ, ಇದಕ್ಕಾಗಿ ಅಮಾಯಕ ಹೆಣ್ಣೊಂದು ಬಲಿಯಾಗಿ ಬಾಳನ್ನೇ ಕಾಮಕುಂಡದಲ್ಲಿ ಹೋಮ ಮಾಡಬೇಕಾಗಿ ಬರುತ್ತದೆ.

ಕೆಳಜಾತಿಗಳಲ್ಲಿ ಹೆಣ್ಣನ್ನು ದೇವರ ಹೆಸರಲ್ಲಿ ದೇವದಾಸಿ ಅಥವಾ ಜೋಗತಿ ಬಿಡುವ ಪದ್ಧತಿ ಕಾಲಾಂತರದಿಂದ ಅನುಚಾನವಾಗಿ ನಡೆದು ಕೊಂಡು ಬಂದಿದೆ. ಆ ಜಾತಿಗಳಲ್ಲಿ ಹೆಣ್ಣಿರುವುದೆ ಸೂಳೆಯಾಗಲು ಎಂಬಂಥ ನಂಬಿಕೆ ಬೆಳೆದು ಬಂದಿದೆ. ಒಂದು ವೇಳೆ ಹೆಣ್ಣು ಅದನ್ನು ನಿರಾಕರಿಸಿ ವಿವಾಹ ಸಂಸ್ಥೆ ಪ್ರವೇಶಿಸಿದರೂ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಅವಳನ್ನು ಗರತಿಯಾಗಿ ನೋಡದೆ ಸೂಳೆಯಾಗಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತವೆ. ಡಾ. ರಾಜಶೇಖರ ನೀರಮಾನ್ವಿಯವರ 'ನೆಲೆ' ಕಥೆ ರಂಗವ್ವಳಿಗೊದಗಿದ ಇಂಥ ಸ್ಥಿತಿಯನ್ನು ಸಶಕ್ತವಾಗಿ ಚಿತ್ರಿಸುತ್ತದೆ.

ರಂಗಮ್ಮ ಮಾಬಮ್ಮನ ಮಗಳು. ಮಾಬಮ್ಮ ತಾನು ಸ್ವತಃ ಗೌಡನ ಸೂಳೆಯಾದರೂ ತನ್ನ ಮಗಳು ಗರತಿಯಾಗಬೇಕೆಂದು ಬಯಸುತ್ತಾಳೆ. ರಂಗಮ್ಮ ವಯಸ್ಸಿಗೆ ಬಂದಾಗ ಎಲ್ಲಿಂದಲೋ ದುತ್ತನೆ ಪ್ರತ್ಯಕ್ಷನಾಗುವ ತಂದೆ ಮಾನಿಶಯ್ಯ ಸಾವಿರ ರೂಪಾಯಿ ಪಡೆದು ನೆರೆಯೂರಿನ ಸಾವುಕಾರನ ಸೂಳೆಯನ್ನಾಗಿ ಮಾರಾಟ ಮಾಡಿರುತ್ತಾನೆ. ರಂಗಮ್ಮ ಅದಕ್ಕೊಪ್ಪದೆ ಮಾಬಮ್ಮನ ಬಳಿ ಓಡಿ ಬಂದಾಗ ಲಿಂಗಣ್ಣಗೌಡ ಸಾಯಬಣ್ಣನೊಂದಿಗೆ ಮದುವೆ ಮಾಡುತ್ತಾನೆ.

ರಂಗಮ್ಮಳಿಗೆ ಮಕ್ಕಳಾಗದಿದ್ದಾಗ ಮಾನಿಶಯ್ಯ 'ಗೌಡನ ಬಿಟ್ಟು ಯಾವನೋ ಗತಿಗೆಟ್ಟ ಹಮಾಲನ್ನ ಮದಿವ್ಯಾದಳು. ಹೋಗ್ಲಿ ಬಿಡು ಅಂದ್ರ ಅವನೊಬ್ಬ ಮಕ್ಕಳನ್ನು ಕೊಡಲಾಗದ ಹಿಜಡಾ ಆಗ್ಯಾನ ದಿವ್ಸಾ ಅತಗೊಂತ ಕುಂದ್ರೋದ ನನ್ನ ಹಣೆಬರಹದಾಗ ಬರದೈತೆ'[೬೧] ಎನ್ನುತ್ತಾನೆ. ಮಗಳನ್ನು ಗೌಡನ ಸೂಳೆಯಾಗಿಸಿ ಗೌಡ ಕೊಡುವ ಹಣದಲ್ಲಿ ಬದುಕಬೇಕೆಂದುಕೊಂಡವನು ಮಾನಿಶಪ್ಪ. ಮಾಬಮ್ಮಳ ಮಣ್ಣಿಗೆಂದು ಬಂದಿದ್ದ ರಂಗಮ್ಮ ತಂದೆಯ ಮಾತನ್ನು ಕೇಳಿ ಹೊರಟುಹೋಗುವ ಮೊದಲು ಅವನಿಗೆ 'ಹೋಗಿ ಬರ್ತೀನಯ್ಯಾ ನಿನ್ನ ಮಗಳು ರಂಗಿ ಹುಟ್ಟಣ ಸತ್ಲೂ ಅಂತ ತಿಳಕೊಂಡುಬಿಡು. ನೀನೆಳಿದಂಗ ಕೇಳಲಾರದ ನಿನಗೆ ಸರಿಯಾದ ಮಗಳಂತೂ ಆಗಲಿಲ್ಲ. ನನ್ನನ್ನು ರೊಕ್ಕದಿಂದ ಅಳದೇ ಹೊರ್ತು ಮನಸ್ಸಿದ್ದ ಮನಿಶ್ಯಾಳು ಅಂತ ಯಾವತ್ತೂ ನೋಡಲಿಲ್ಲ. ತಂದೆ ಮಗಳ ಸುಖ ಇಬ್ರ ದೈವದಾಗೂ ಇಲ್ಲ ಏನನ್ನ ಬೇಕಿದ್ರೆ ಹೇಳಿಕಳಿಸು ಕೈಲಾದಟು ಮಾಡತೀನಿ'[೬೨] ಎನ್ನುತ್ತಾಳೆ.

ಸಾಬಣ್ಣನ ದೌರ್ಬಲ್ಯವನ್ನರಿದ ಅಮೀನಸಾಬ ರಂಗಮ್ಮನನ್ನು ಹೊತ್ತುಕೊಂಡು ಹೋಗಿ ಇತರರೊಂದಿಗೆ ಹಂಚಿಕೊಂಡದ್ದಲ್ಲದೆ ಮುಂದೆ ಅವಳೊಂದಿಗೆ ಸಂಬಂಧವನ್ನು ಮುಂದುವರಿಸುತ್ತಾನೆ. ಇದನ್ನು ತಿಳಿದ

ಸಾಬಣ್ಣ ತನ್ನ ದುಡಿಮೆಯ ಹಣ ಕುಡಿತಕ್ಕೆ ಸಾಲದೆ ರಂಗಮ್ಮನಿಗೆ ಹೇಳದೆ ರಂಗಮ್ಮನನ್ನು ಎರಡು ಸಾವಿರ ರೂಪಾಯಿಗೆ ಸೀನಪ್ಪನಿಗೆ ಮಾರುತ್ತಾನೆ. ಇದಕ್ಕೊಪ್ಪದ ರಂಗಮ್ಮ ತನ್ನ ತಾಳಿ ಚೈನನ್ನು ಮಾರಿ ಸೀನಪ್ಪನ ಹಣ ಮರಳಿಸುತ್ತಾಳೆ. 'ಈಗೇನೋ ಮೈಮ್ಯಾಗ ಬಂಗಾರ ಇತ್ತು ಮಾರಿ ರೊಕ್ಕ ಕಟ್ಟಿದಿ. ರೊಕ್ಕದ ರುಚಿ ಕಂಡ ನಿನಗಂಡ ಸುಮ್ನೆ ಬುಡತಾನ'? ಎಂಬ ಸೀನಪ್ಪನ ಪ್ರಶ್ನೆಗೆ 'ಇವತ್ತಿನಿಂದ ನನ್ನೋರು ಅಂಬೋರು ಯಾರು ಇಲ್ಲ ಸೀನಪ್ಪ ಇನ್ನೊಂದ್ಸರ್ತಿ ಯಾವ ಮಿಂಡ್ರಗುಟ್ಟಿದ ಸೂಳೇ ಮಗನ್ನ ನನ ತಂಟೆಗೇನಾದ್ರೂ ಬಂದ್ರೆ ಅವನ ತಲೆ ಐತೆ ನನ ಚಪ್ಲಿ ಅದಾವ. ಪೋಲಿಸ್ ಸ್ಟೇಷನ್ ಐತಿ. ಬೇಕಾಗಿದ್ರೆ ಹೊಸ ಜಾಗ ಬರಕೋ ಇವತ್ಲಿಂದ ನಾನು ಯಂಕಯ್ಯನ ಸೂಳೆ' ಎಂದು ಘೋಷಿಸುತ್ತಾಳೆ.

ಮಾನವಾಗಿ ಬದುಕಬೇಕೆಂಬ ರಂಗಮ್ಮನ ಬಯಕೆ ತಂದೆ ಮತ್ತು ಗಂಡನಿಂದ ಹೊಸಕಿ ಹಾಕಲ್ಪಡುತ್ತದೆ. ದುಡಿಯದ ಕುಡುಕರು ಹೆಣ್ಣಿನ ಶರೀರವನ್ನು ದುಡಿಸಿದ್ದಲ್ಲದೆ ಬದುಕಲು ಅವಳನ್ನೇ ಮಾರಿದಾಗ ಅದನ್ನು ಆಗಗೊಡದ ರಂಗಮ್ಮ ಅಮೀನಸಾಬನ ಸೂಳೆಯಾಗುವಲ್ಲಿ ರಕ್ಷಣಾತ್ಮಕ ನೆಲೆಯನ್ನು ಕಂಡುಕೊಳ್ಳುತ್ತಾಳೆ.

ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡಿಗೆ ಲಭಿಸಿದ ಲೈಂಗಿಕ ಸ್ವಾತಂತ್ರ್ಯದಿಂದಾಗಿ ಹೆಣ್ಣುಗಳನ್ನು ಪ್ರತಿನಿತ್ಯ ಬದಲಿಸುವ ಕೊಂಡುಕೊಂಡು ಅನುಭವಿಸುವ ಹವ್ಯಾಸವನ್ನು ಬೆಳೆಸಿಕೊಳ್ಳುವಂತಾಗಿದೆ. ಪುರುಷ ಪ್ರಧಾನ ವ್ಯವಸ್ಥೆ ಪುರುಷನ ಅನುಕೂಲಕ್ಕೆ ವೇಶ್ಯಾಪದ್ಧತಿಯನ್ನು ಸೃಷ್ಟಿಸಿ ಮುಂದುವರೆಸಿಕೊಂಡು ಬಂದಿದೆ. ಭೋಗವಸ್ತುವಾಗಿ ಪರಿಗಣಿಲಾದ ಹೆಣ್ಣು ಮಾರುವ ಕೊಳ್ಳುವ ವಸ್ತುವಾಗಿದ್ದಾಳೆ ಎಂಬುದನ್ನು ಚಂದ್ರಕಾಂತ ಕುಸನೂರರ 'ಚರ್ಚಗೇಟ್' ಕಾದಂಬರಿ ಸ್ಪಷ್ಟಪಡಿಸುತ್ತದೆ.

ಇಲ್ಲಿ ಸುಮಿತ್ರಾ ಎಂಬ ಹೆಣ್ಣನ್ನು ಕೊಳ್ಳುವ ಸಂಗತಿ ಇದೆ. ರಾಮಪ್ರಸಾದ ಔಷಧ ಅಂಗಡಿಯಲ್ಲಿ ಮ್ಯಾನೇಜರ್. ಸದಾ ವೇಶ್ಯಾಸಂಗ ನಿರತ. ತನ್ನವರೂ ಅಂತ ಯಾರೂ ಇಲ್ಲದೆ ಕಂಡ ಕಂಡ ಹೆಣ್ಣುಗಳನ್ನು ಅನುಭವಿಸುತ್ತ ಜೀವನ ಯಾಪನೆ ಮಾಡುತ್ತಿದ್ದವನು. ಒಮ್ಮೆ ಸುಮಿತ್ರಾ ಎಂಬ ಮಗಳ ವಯಸ್ಸಿನ ಹುಡುಗಿಯನ್ನು ವೇಶ್ಯೆಯೊಬ್ಬಳಿಂದ ಕೊಂಡು ಮನೆಗೆ ಕರೆತರುತ್ತಾನೆ. ಅವನು ವಸುಂಧರೆಗೆ ಈ ವಿಷಯ ತಿಳಿಸಿದಾಗ ಸುಮಿತ್ರೆಗೆ ಬಾಳು ಕೊಟ್ಟ ಮಹಾತ್ಮನೆಂದು ಅವಳು ಭಾವಿಸುತ್ತಾಳೆ. ಆದರೆ ಕೆಲವೇ ದಿನಗಳಲ್ಲಿ ರಾಮಪ್ರಸಾದ ಸುಮಿತ್ರೆಯಲ್ಲಿ ಆಸಕ್ತಿ ಕಳೆದುಕೊಂಡು ಹೊಸ ಹೆಣ್ಣಿನ ಹುಡುಕಾಟಕ್ಕೆ ತೊಡಗಿದಾಗ ಜುಗುಪ್ಸೆಗೊಳ್ಳುತ್ತಾಳೆ.

ಪುರುಷ ಪ್ರಧಾನ ವ್ಯವಸ್ಥೆಯ ಬಿಗಿ ಮುಷ್ಠಿಯಲ್ಲಿ ಹೆಣ್ಣು ವ್ಯಕ್ತಿತ್ವ ಶೂನ್ಯಳಾಗಿ, ಬಾಯಿದ್ದೂ ಮಾತನಾಡಲಾಗದ, ಮನಸ್ಸಿದ್ದು ಭಾವನೆಗಳನ್ನು ಹೇಳಿಕೊಳ್ಳಲಾಗದ ದಯನೀಯ ಸ್ಥಿತಿಯಲ್ಲಿ ಮಾರುವ ಕೊಳ್ಳುವ ವಸ್ತುವಾಗುತ್ತಾಳೆ. ಅವಳ ಆರ್ಥಿಕ ಹೀನ ಸ್ಥಿತಿ ಇದಕ್ಕೆ ಹೆಚ್ಚು ಕಾರಣವಾಗುತ್ತದೆ. ಹೆಣ್ಣಿನ ಸಂದರ್ಭದಲ್ಲಿ ಗುಲಾಮಿ ಪದ್ಧತಿ ಇನ್ನೂ ಉಳಿದುಕೊಂಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಹೆಣ್ಣುಗಳ ಮಾರಾಟ ನಡೆಯುತ್ತಿರುವುದು ವ್ಯವಸ್ಥೆಯ ಸ್ತ್ರೀ ವಿರೋಧಿ ನೀತಿಗೆ ಸಾಕ್ಷಿಯಾಗಿದೆ.

ಹಿಂದಿನ ಅಧ್ಯಾಯದಲ್ಲಿ ಈಗಾಗಲೆ ಹೇಳಿರುವಂತೆ ಬಡತನ ಹಾಗು ಹೆಣ್ಣನ್ನು ಕುರಿತ ಸಾಮಾಜಿಕ ಸಾಂಸ್ಕೃತಿಕ ಮನೋಭಾವದಿಂದಾಗಿ ಸ್ವತಃ ಹೆಣ್ಣು ಹೆತ್ತವರೇ ತಮ್ಮ ಶಿಶುಗಳನ್ನು ಸ್ವಲ್ಪ ಮಾತ್ರ ಹಣಕ್ಕೆ ಮಾರುತ್ತಾರೆಂಬುದು ಅದರ ಕರಾಳತೆಯನ್ನು ದರ್ಶಿಸುತ್ತದೆ.

ಲಲಿತಾ ದೇಮಶೆಟ್ಟಿಯವರ 'ಬೆಲೆವೆಣ್ಣು' ಕಥೆಯ ನಾಯಕಿ ಶಾಂತಿ ಸುಂದರ, ಸುಶೀಲೆ, ವಿದ್ಯಾವಂತೆ. ಪ್ರೇಮ ವಿವಾಹವಾಗಿ ಪತಿ ಮನೆಗೆ ಬಂದವಳು ತನ್ನ ಮೈದುನ ವಿನಯನನ್ನು ಓದಿಸಲು ಮಾಡಿದ ಸಾಲ ಹಾಗು ತನ್ನ ಮದುವೆಯಿಂದಾದ ಸಾಲವನ್ನು ತವರಿನಿಂದ ತಂದು ತೀರಿಸಲಾಗದೆ ಕುಟುಂಬ ಹಿಂಸೆಗೊಳಗಾಗುತ್ತಾಳೆ. ಹಿಂಸೆಯು ವಿಕೃತ ರೂಪ ತಾಳಿ ಗಂಡ ಮಾವ ಇಬ್ಬರೂ ಅವಳನ್ನು ಲೈಂಗಿಕ ದೌರ್ಜನ್ಯಕ್ಕೀಡು ಮಾಡುತ್ತಾರೆ. ಸಾಲದೆಂಬಂತೆ ಕೊನೆಗೊಂದು ದಿನ ಹಣಕ್ಕಾಗಿ ಅವಳನ್ನು ಮುಂಬೈಯ ಮವಾಲಿಗೆ ಮಾರಾಟ ಮಾಡುತ್ತಾರೆ. ಅಲ್ಲಿಂದ ಹೇಗೊ ತಪ್ಪಿಸಿಕೊಂಡು ಜನ ಜಂಗುಳಿಯಲ್ಲಿ ಮರೆಯಾದ ಶಾಂತಿ ಸಿಕ್ಕ ರೈಲು ಹತ್ತಿ ಬೆಂಗಳೂರಿಗೆ ಬಂದು ಇಳಿದಾಗ ಟಿಕೆಟ್ ಇಲ್ಲದ ಪ್ರಯಾಣದ ಆರೋಪದಲ್ಲಿ ಪೋಲಿಸರ ವಶಕ್ಕೆ ಒಪ್ಪಿಸಲ್ಪಡುತ್ತಾಳೆ. ಅಲ್ಲಿ ಆರಕ್ಷಕನಾಗಬೇಕಾದ ಇನ್ಸಪೆಕ್ಟರ್ ಸ್ವತಃ ಅವಳ ಮೇಲೆ ಅತ್ಯಾಚಾರವ್ಯಸಗಿ, ಒಂದು ಹೋಟಲ್ ರೂಮಿಗೆ ಕರೆತಂದು ಬೆಲೆವೆಣ್ಣಾಗಿ ಮಾಡುತ್ತಾನೆ.

ಅದೇ ಹೋಟಲಿಗೆ ಸಿ.ಎ. ಆಗಿ ಬಂದ ಅವಳ ಮೈದುನ ಅವಳನ್ನು ಗುರುತಿಸಿ ಮದುವೆಯಾಗುವುದಾಗಿ ಹೇಳಿದಾಗ ಆಶ್ಚರ್ಯ ಪಡುತ್ತಾಳೆ ಶಾಂತಿ.

'ಸಮಾಜದಲ್ಲಿದ್ದು ಗೌರವದ ಸುಂದರ ಬಾಳನ್ನು ಬಾಳಬೇಕೆಂಬ ಆಶೆ ನಿನಗಿಲ್ಲವೇ? ಎಂದಾಗ ಸಮಾಜ ಯಾವ ಸಮಾಜ ಎಲ್ಲಿದೆ ನಿನ್ನ ಸಮಾಜ? ಎಂಥ ಸಮಾಜ? ಅಸಹಾಯಕ ಸ್ಥಿತಿಯಲ್ಲಿದ್ದವರನ್ನು ಬಲಾತ್ಕಾರದಿಂದ ಪ್ರಪಾತಕ್ಕೆ ತಳ್ಳಿ ಚಪ್ಪಾಳೆ ತಟ್ಟಿ ನಗುವ ಆ ನಿನ್ನ ಸಮಾಜವೆ? ಆನಿನ್ನ ದರಿದ್ರ ಸಮಾಜದ ಒಣಗೌರವ ಪ್ರತಿಷ್ಠೆಗಳು ನನಗೆ ಬೇಕಿಲ್ಲ.' ಶಾಂತಿ ತಿರಸ್ಕಾರದಿಂದ ಹೇಳಿದಾಗ ದುಡುಕಬೇಡ ಶಾಂತಿ ಯೋಚಿಸಿ ನೋಡು ಎಂದುದಕ್ಕೆ ಯೋಚಿಸುವ ಅವಶ್ಯಕತೆಯೇ ಇಲ್ಲ ವಿನಯ್ ಈ ವೃತ್ತಿ ನಿನ್ನ ಸಮಾಜವೇ ನನಗೆ ಕೊಟ್ಟ ಕಾಣಿಕೆಯಲ್ಲವೇ' ಎಂಬ ಶಾಂತಿಯ ಮಾತಿನಲ್ಲಿ ವ್ಯಂಗ್ಯವಿತ್ತು.

ವಿನಯ್ ಯಾವ ಸಮಾಜ ನನಗೆ ಈ ವೃತ್ತಿಯನ್ನು ಇಂಥ ಬದುಕನ್ನು ದಯಪಾಲಿಸಿದೆಯೊ ಅಂಥ ಘನವಾದ ಹೊಲಸು ಸಮಾಜಕ್ಕೆ ಹಿಂತಿರುಗಬೇಕೆಂಬ ಆಶೆ ನನಗಿಲ್ಲ. ಆ ನಿನ್ನ ಪ್ರತಿಷ್ಠಿತ ಸಮಾಜವನ್ನು ಒದ್ದು ಹೊರಗೆ ಬಂದಿರುವ ನನಗೆ ಈಗ ಈ ಜೀವನದಿಂದ ನೆಮ್ಮದಿ ಸಿಕ್ಕಿದೆ. ದಯಮಾಡಿ ನನ್ನಷ್ಟಕ್ಕೆ ನನ್ನನ್ನು ಬದುಕಲು ಬಿಡು' ದೊಡ್ಡಸ್ತಿಕೆಯ ಭೂತ ಹೊರಿಸಿಕೊಂಡ ಜನ ಆಂತರ್ಯದಲ್ಲಿ ಎಷ್ಟೊಂದು ಸಣ್ಣತನವನ್ನು ತುಂಬಿಕೊಂಡಿರುತ್ತಾರೆ, ಎಂತಹ ಅಮಾನುಷ ಕಾರ್ಯಕ್ಕೂ ಹೇಸದವರಾಗಿರುತ್ತಾರೆ ಎಂಬುದನ್ನು ಲಲಿತಾ ಇಲ್ಲಿ ಚಿತ್ರಿಸುತ್ತಾರೆ. ವಿನಯ್ ತನ್ನ ಕುಟುಂಬದಿಂದ ಆದ ಅನ್ಯಾಯವನ್ನು ತಾನು ಸರಿಪಡಿಸಬೇಕು, ಅವಳ ಬದುಕನ್ನು ಬೆಲೆವೆಣ್ಣಿನಿಂದ ಗರತಿಯಾಗಿಸಿ ಸಾಮಾಜಿಕ ಗೌರವದ ಸ್ಥಾನ-ಮಾನ ಕಲ್ಪಿಸಬೇಕೆಂದು ಆಶಿಸಿದ್ದು ಉದಾತ್ತವಾಗಿಯೇ. ಆದರೆ ಗರತಿಯನ್ನು ಬೆಲೆವೆಣ್ಣಾಗಿಸಿ ಕತ್ತಲ ಕೂಪಕ್ಕೆ ದೂಡುವಷ್ಟು ಸುಲಭವಲ್ಲ ಬೆಲೆವೆಣ್ಣನ್ನು ಗರತಿಯಾಗಿಸುವುದು. ಒಮ್ಮೆ ಬೆಲೆವೆಣ್ಣಾಗಿ ಸಮಾಜದ ಕಣ್ಣಲ್ಲಿ ಗುರುತಿಸಲ್ಪಟ್ಟವಳನ್ನು ಗರತಿಯಾಗಿ ನೋಡುವುದು ಸಾಧ್ಯವೇ ಇಲ್ಲ. ಗರತಿಗೆ ಶೀಲ ಪಾವಿತ್ರ್ಯಗಳೆ ಅವಳ ಅನನ್ಯತೆಯ ಸಂಕೇತಗಳಾಗಿರುವಾಗ ಅದನ್ನು ಕಳೆದುಕೊಂಡವಳಿಗೆ ಆ ಸ್ಥಾನದ ಅರ್ಹತೆಗಳೆ ಇಲ್ಲವಾಗುತ್ತವೆ. ವಿನಯನಂಥ ಯುವಕರು ಯೌವ್ವನದ ಅವೇಶದಲ್ಲಿ ಏನೋ ಸಾಧಿಸುತ್ತೇನೆ ಎಂದು ಹೊರಟು ಮದುವೆಯಾಗಬಹುದು. ಪರಿಣಾಮದಲ್ಲಿ ಘಾಸಿಗೊಳ್ಳುವವಳು ಹೆಣ್ಣೇ ಆಗುತ್ತಾಳೆ. ವಿನಯ್ ಭೂತದ ಪರಿಣಾಮವನ್ನು ಭವಿಷ್ಯದಲ್ಲಿ ಕಾಣಲು ಬಯಸುತ್ತಾನೆ. ಶಾಂತಿ ವಾಸ್ತವ ಬದುಕಿನ ಪ್ರತಿನಿಧಿಯಾಗುತ್ತಾಳೆ.

ಈಗಾಗಲೇ ಗಮನಿಸಿದಂತೆ ಕಥನ ಸಾಹಿತ್ಯದಲ್ಲಿ ಮಾರಾಟಗೊಂಡ ಹೆಣ್ಣುಗಳು ಜೋಗತಿಯಾದವರು ಮಾತ್ರವಲ್ಲ. ವಿವಾಹ ಸಂಸ್ಥೆಯನ್ನು ಪ್ರವೇಶಿಸಿ ಹೆಂಡತಿಯರಾಗಿ ಬದುಕಿದವರೂ ಪುರುಷ ಸಮೂಹದ ಧನದಾಹಕ್ಕೆ ಮಾರಾಟಗೊಂಡಿದ್ದಾರೆ. ಕಾಮ ಚಪಲಕ್ಕೆ ಕೊಳ್ಳಲ್ಪಟ್ಟವರಾಗಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷ ಹಿತಾಸಕ್ತಿಗೆ ಏನು ಬೇಕಾದರೂ ನಡೆಯುತ್ತದೆ. ಅದಕ್ಕೆ ಯಾವುದೇ ರೀತಿಯ ನೈತಿಕತೆ, ಮಾನವೀಯತೆಯ ಸೋಂಕೂ ಇಲ್ಲದೆ ಹೋಗುತ್ತದೆ ಎಂಬುದನ್ನು ಕಥನ ಸಾಹಿತ್ಯ ನಿರ್ಭಿಡೆಯಾಗಿ ಹಿಡಿದಿಟ್ಟಿದೆ.

೪.೨.೮ ಆರೋಗ್ಯ

W.H.O ದ ಆರೋಗ್ಯವೆಂದರೆ ಯಾವುದೇ ವ್ಯಕ್ತಿಯ ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಸ್ವಾಸ್ತ್ಯವಾಗಿ ಪರಿಭಾವಿಸುತ್ತದೆ. ಆದರೆ ನಮ್ಮ ಸಮಾಜವು ಹೆಣ್ಣಿನ ಸಂದರ್ಭಗಳಲ್ಲಿ ದೇಹ ಎಂದರೆ ಗರ್ಭಾಶಯವೆಂದು ಮಾತ್ರ ಪರಿಭಾವಿಸುತ್ತಾ ಉಳಿದೆಲ್ಲಾ ಅವಯವಗಳನ್ನು ನಿರ್ಲಕ್ಷಿಸುತ್ತದೆ. ಅನಾರೋಗ್ಯ ಸ್ಥಿತಿಯಲ್ಲಿನ ಶುಶ್ರೂಸೆ ವಿರಾಮಗಳಿರಲಿ ತನ್ನ ಅನಾರೋಗ್ಯವನ್ನು ವ್ಯಕ್ತಪಡಿಸುವುದು ಎಷ್ಟೋ ಸಂದರ್ಭಗಳಲ್ಲಿ ಹೆಣ್ಣಿಗೆ ಸಾಧ್ಯವಾಗುವುದಿಲ್ಲ. ಈ ಹೊತ್ತಿಗಾದರೂ ಹೆಣ್ಣುಮಗಳ ಆರೋಗ್ಯಕ್ಕಾಗಿ ಮಾಡಬೇಕಾಗಿರುವ ವೆಚ್ಚವನ್ನು ಕುಟುಂಬಗಳು ಅನಗತ್ಯ ಖರ್ಚುಎಂದು ಭಾವಿಸುತ್ತವೆ.

ಹೆಣ್ಣನ್ನು ಗರ್ಭಾಶಯ ಕೇಂದ್ರಿತವಾಗಿ ಗ್ರಹಿಸುವುದು ಪಿತೃ ಪ್ರಧಾನತೆಯ ಬಹುಮುಖ್ಯ ಲಕ್ಷಣವಾಗಿದೆ. ಹೆಣ್ಣಿನ ದೇಹವು ಪುರುಷನ ವಂಶವನ್ನು ಬೆಳೆಸುವ ಕ್ಷೇತ್ರವಾಗಿ ಪರಿಗಣಿತವಾಗುವುದರಿಂದ ಕ್ಷೇತ್ರದ ಫಲವಂತಿಕೆಯೇ ಹೆಣ್ಣಿನ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಸಾಂಪ್ರದಾಯಿಕ ಸಮಾಜದಲ್ಲಿ ಹೆರುವ ಯಂತ್ರವಾಗಿ ಹೆಣ್ಣು ಪರಿಗಣಿತವಾದಂತೆ ಆಧುನಿಕ ಸಂಧರ್ಭದಲ್ಲಿ ಕೂಡ ಹೆಣ್ಣಿನ ಗರ್ಭಾಶಯದ ಮೇಲೆ ಹಲವು ಬಗೆಯ ದೌರ್ಜನ್ಯಗಳು ನಡೆಯುತ್ತವೆ.

'ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಅನೀಮಿಯಾ' ಬಿಳಿಸೆರಗು, ಬೆನ್ನುನೋವು ಮಹಿಳೆಯರನ್ನು ಕಾಡುವ ಬಹುಮುಖ್ಯ ರೋಗಗಳು. ಈ ಪ್ರದೇಶದಲ್ಲಿ ಪುರುಷರು ಕುಟುಂಬ ಯೋಜನಾ ಶಸ್ತ್ರಕ್ರಿಯೆಗೆ ಒಳಪಡುವುದಿಲ್ಲ. ಇದಕ್ಕೆ ವೈದ್ಯರು ಕೊಡುವ ಕಾರಣವೆಂದರೆ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಪುರುಷ ಆರು ತಿಂಗಳವರೆಗೆ ತನ್ನ ಪತ್ನಿಯೊಂದಿಗೆ ಜೊತೆಗೂಡಬಾರದು. ಒಂದು ವೇಳೆ ಅವರಿಬ್ಬರೂ ಜೊತೆಗೂಡಿದರೆ ಅವರಿಗೆ ಮಕ್ಕಳಾಗುವ ಸಾಧ್ಯತೆ ಇರುತ್ತದೆ. ಅಲ್ಲದೇ ಅನೇಕ ವೇಳೆ ಪುರುಷರು ಶಸ್ತ್ರಕ್ರಿಯೆಗೆ ಒಳಪಟ್ಟ ನಂತರವೂ ಹೆಂಡತಿ ಗರ್ಭಿಣಿಯಾಗುವ ಸಂಭವಗಳು ಇರುವುದರಿಂದ ಸಾಂಪ್ರದಾಯಿಕ ಸಮಾಜದಲ್ಲಿ ಹಲವಾರು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ. ಆದ್ದರಿಂದ ವೈದ್ಯರು ಪುರುಷ ಕುಟುಂಬ ಯೋಜನಾ ಶಸ್ತ್ರಕ್ರಿಯೆಗೆ ಪ್ರೋತ್ಸಾಹಿಸುವುದಿಲ್ಲ. ಕಾರಣವೇನೇ ಇರಲಿ ಮಹಿಳೆ ಜನಸಂಖ್ಯೆಯನ್ನು ಬೆಳೆಸುವ, ನಿಯಂತ್ರಿಸುವ ಹೊಣೆ ಹೋರಬೇಕಾಗಿದೆ. ಪುರುಷನಿಗೆ ಬೇಕಾದ ಮಕ್ಕಳನ್ನು ಹೆತ್ತು ಬೇಡವಾದ ಮಕ್ಕಳನ್ನು ನಿಷ್ಕರುಣೆಯಿಂದ ಕೊಲ್ಲಬೇಕಾದ ಹೊಣೆಯು ಅವಳದೇ. ಕೆಲವೊಮ್ಮೆ ಅಂತಹ ಸಂದರ್ಭಗಳಲ್ಲಿ ಜೀವ ಬಲಿಕೊಡಬೇಕಾದವಳೂ ಅವಳೇ. ಕಾಲ್ಡ್‌ವೆಲ್‌ರವರ ಕರ್ನಾಟಕದಲ್ಲಿಯ ಅಧ್ಯಯನವು ತಿಳಿಸುವಂತೆ ಹೆಣ್ಣು ಶಿಶು ಮರಣ ಪ್ರಮಾಣವನ್ನು ನಿರ್ಧರಿಸುವ ಅತಿಮುಖ್ಯ ಅಂಶವೆಂದರೆ ತಾಯಂದಿರ ಶಿಕ್ಷಣ ಸುಶಿಕ್ಷಿತ ತಾಯಿ ಕುಟುಂಬದ ಆರೋಗ್ಯವನ್ನು ಹೆಚ್ಚಿಸುತ್ತಾಳೆ'.[೬೬]

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಮಹಿಳೆಯ ಆರೋಗ್ಯ ಅದರಲ್ಲೂ ಹೆರಿಗೆಗೆ ಸಂಬಂಧಿಸಿದ ಸಂಗತಿಗಳು ಕೆಲವು ಕಥನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಗೀತಾ ನಾಗಭೂಷಣರ 'ಧುಮಸ್ಸು' ಕಾದಂಬರಿಯ ಸೀನಿಂಗನ ಹೆಂಡತಿ, ಸಂಧ್ಯಾ ಹೊನಗುಂಟಿಕರ್ ಅವರ 'ಚಿಗುರೊಡೆದ ನೆನಪು' ಕಥೆಯ ಅಕ್ಕಸಾಲಿಗರ ಮುತ್ತಮ್ಮ, ಅಮರೇಶ ನುಗಡೋಣಿಯವರ 'ಮನ್ನಿಸಿ ಮೂಕಾದ ಮೇಲೆ' ಕಥೆಯ ಗಂಗಮ್ಮ ಮೊದಲಾದ ಮಹಿಳೆಯರು ಹೆರಿಗೆಗೆ ಸರಿಯಾದ ವೈದ್ಯಕೀಯ ಸಹಾಯವಿಲ್ಲದೇ ಹೆತ್ತು ಸಾಯುತ್ತಾರೆ.

ಹೆರಿಗೆ ಎಂಬ ಕುತ್ತ :

ಸೀನಿಂಗನ ಹೆಂಡತಿ ಪಾರಿಗೆ ಬಹಳಷ್ಟು ದಿನ ಮಕ್ಕಳಾಗಿರಲಿಲ್ಲ, ಕಡೆಗೊಮ್ಮೆ ಮುಟ್ಟು ನಿಂತು ಬಸುರಾಗಿದ್ದಳು ಏನೋ ಅಪರಾ ತಪರಾಗಿ ಹೆಣ್ಣುಕೂಸು ಹುಟ್ಟಿಸಿದ್ದಳಾದರೂ ಒಂದು ತಾಸು ಕಳೆದರೂ ಮಾಸು ಹೊರಬೀಳದ ಎದೆಗೆ ಏರಿ ಒದ್ದಾಡಿ ಅಳುತ್ತಾ ಗಂಡನ ತೊಡೆಯ ಮೇಲೆ ತಲೆಯಿಟ್ಟೇ ಜೀವಬಿಟ್ಟಳು.

ಇಂಥ ಪರಿಸ್ಥಿತಿಯನ್ನು ಜೀವನದಲ್ಲಿ ಬಹುತೇಕ ಮಹಿಳೆಯರು ಅನುಭವಿಸುತ್ತಾರೆ. ಹೆರಿಗೆ ಒಂದು ಸಹಜ ಕ್ರಿಯೆ. ಗರ್ಭಿಣಿಯಾದವಳು ಹೆತ್ತೇ ಹೆರುತ್ತಾಳೆ ಎಂಬ ನಿರ್ಲಕ್ಷ ಅಥವಾ ಹೆರಿಗೆಗೆ ಬೇಕಾದ ಸೌಲಭ್ಯಗಳು ಇಲ್ಲದೇ ಮಹಿಳೆಯ ಜೀವ ಬಲಿಯಾಗಬೇಕಾಗುತ್ತದೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯ ಕಲ್ಲವ್ವ ವಿವಾಹ ಸಂಸ್ಥೆಯ ಹರಕೆಯ ಕುರಿ ಎಂಬಂತಾಗುತ್ತಾಳೆ. ಕಲ್ಲವ್ವ ಮೂಕನಾಥನ ಹೆಂಡತಿ. ಅವನ ವಿಕೃತ ಕಾಮದ ಪರಿಣಾಮ ಸದಾ ಆರು ತಿಂಗಳ ಮಗು ಮೂರು ತಿಂಗಳ ಬಸುರಿ ಎಂಬಂತೆ ಜೀವಿಸುತ್ತಾಳೆ. ಹಗಲು ರಾತ್ರಿ ಕುಡಿಯುವ ಮೂಕ್ಯಾ ಎಂದೂ ಹೆಂಡತಿ ಮಕ್ಕಳಿಗೆ ದುಡಿದು ಹಾಕಿದವನಲ್ಲ. ಆರು ಮಕ್ಕಳನ್ನು ತುಂಬು ಗರ್ಭವನ್ನು ಜೊತೆಗೆ ಮೂಕ್ಯಾನನ್ನು ಸಲಹುವ ಹೊಣೆ ಕಲ್ಲವ್ವನದೇ.

ಇಂಥ ಸಂಸಾರವನ್ನು ಕಷ್ಟಪಟ್ಟು ನಿಭಾಯಿಸುತ್ತಿದ್ದ ಕಲ್ಲವ್ವ ಕೊನೆಗೊಮ್ಮೆ ಮೂಕ್ಯಾನ ವಿಕೃತ ಕಾಮಕ್ಕೆ ಬಲಿಯಾಗುತ್ತಾಳೆ. ಸರಿಯಾದ ಆಹಾರ, ಆರೈಕೆಗಳಿಲ್ಲದೇ ನಿರಂತರ ಸಂತಾನೋತ್ಪತ್ತಿ ಕ್ರಿಯೆಗೆ ಒಡ್ಡಿಕೊಂಡ ಪರಿಣಾಮ ಅಶಕ್ತಳಾಗಿದ್ದ ಕಲ್ಲವ್ವ ಮೂಕ್ಯಾನ ಲೈಂಗಿಕ ದಾಳಿಯನ್ನು ಎದುರಿಸಲಾಗದೇ ಗರ್ಭಪಾತಕ್ಕೊಳಗಾಗುತ್ತಾಳೆ. ಕುಡಿದ ಅಮಲಿನಲ್ಲಿ ಸತ್ತವಳ ಮೇಲೆ ಅತ್ಯಾಚಾರವೆಸಗುತ್ತಾನೆ ಮೂಕ್ಯಾ. ಬೆಳಿಗ್ಗೆ ನೆರೆಹೊರೆಯವರು ಕಂಡಾಗ ಅತ್ಯಾಚಾರದ ಸ್ಥಿತಿಯಲ್ಲಿ ಅಸುನೀಗಿದ ಕಲ್ಲವ್ವ, ಅದರ ಅರಿವಿಲ್ಲದೇ ಮೊಲೆ ಚೀಪುತ್ತಿದ್ದ ಕಂದಮ್ಮ, ತಾಯಿಯನ್ನು ಎಬ್ಬಿಸಲು ಪ್ರಯತ್ನಿಸುತ್ತಿದ್ದ ಉಳಿದ ಮಕ್ಕಳು ಪುರುಷ ದೌರ್ಜನ್ಯಕ್ಕೆ ಸಾಕ್ಷಿಯಾಗುತ್ತವೆ.

ಕಲ್ಲವ್ವಳ ಆರ್ತ ಬೇಡಿಕೆ ಕಟುಕನ ಮುಂದೆ ಕುರಿಯ ಬೇಡಿಕೆ ಎಂಬಂತಾಗುತ್ತದೆ' ಬೇಕಾದರೆ ನಿನ್ನ ಬಯಕೆ ತೀರಿಸಿಕೊಳ್ಳಲು 'ಜೋಗಣಿ ಹತ್ತಿರ ಹೋಗು ಎಂದಾಗ ಜೋಗಣಿ ಬಲ್ಲಿ ಹೋಗಂತಿಯಲ್ಲಾ ರೂಪಾಯಿ ತಂದು ಕೊಡು.......... ಹೋಗುತೀನಂತ' ಎಂದು ಹೇಳುವ ಮೂಕ್ಯಾನ ಮಾತು ಪುರುಷ ತನ್ನ ಬಯಕೆಯ ಪೂರ್ತಿಗೆ ಯಾವ ಮಟ್ಟಕ್ಕೆ ಇಳಿಯುತ್ತಾನೆಂಬುದನ್ನು ಮನವರಿಕೆ ಮಾಡಿಸುತ್ತದೆ.

ವಿವಾಹ ವ್ಯವಸ್ಥೆ ಮಹಿಳೆಯ ಮೇಲೆ ನಿರ್ಬಂಧಗಳನ್ನು ಹೇರುತ್ತಾ ಉಸಿರಾಡಲು ಕೂಡಾ ಅನುಮತಿ ಕೇಳುವ ಸ್ಥಿತಿಗೆ ತಂದು ನಿಲ್ಲಿಸಿದೆ. ಉಸಿರೆತ್ತದಂತೆ ದನಿಯನ್ನು ಅದುಮಿದೆ. ವಿವಾಹ ಮತ್ತು ಕುಟುಂಬಗಳೇ ಮಹಿಳೆಯ ಅಧೀನ ಬದುಕಿಗೆ ಮತ್ತು ಅವಳ ಎಲ್ಲಾ ಸಮಸ್ಯೆಗಳಿಗೆ ಕಾರಣವೆಂಬುದನ್ನು ಸ್ತ್ರೀವಾದಿ ಚಿಂತನೆ ಸರಿಯಾಗಿಯೇ ಗ್ರಹಿಸಿದೆ. ಆಸ್ತಿ, ಅಧಿಕಾರ, ಅಂತಸ್ತು ಯಾವುದೂ ಇಲ್ಲದ ಕೇವಲ ಪುರುಷನೆಂಬ ಕಾರಣಕ್ಕೆ ಕಲ್ಲವ್ವಳ ಬದುಕಿಗೆ ಯಜಮಾನನಾಗುವ ಮೂಕ್ಯಾ ಪುರುಷ ಪ್ರಧಾನ ವ್ಯವಸ್ಥೆಯ ಪ್ರಾಬಲ್ಯದ ಪ್ರತೀಕವಾಗಿದ್ದಾನೆ. ಹೀಗೆ ಮಹಿಳೆಯರನ್ನು ಅಸಹಾಯ ಮತ್ತು ಅವಲಂಬಿತರನ್ನಾಗಿ ಮಾಡುವುದರ ಮೂಲಕ ಪುರುಷ ಪ್ರಧಾನ ವ್ಯವಸ್ಥೆ ಸ್ಥಿರೀಕರಣಗೊಳ್ಳುತ್ತದೆ.

ಚಿತ್ರಶೇಖರ ಕಂಠಿಯವರ 'ಗೌಡ್ರು ಗೌರಿ ಗುಂಡನ ಚನ್ನಿ' ಕಥೆ ಕೆಳವರ್ಗದ ಚನ್ನಿಯ ಬದುಕು ಪ್ರಾಣಿಗಿಂತಲೂ ಕನಿಷ್ಠವಾಗಿ ಪರಿಗಣಿತವಾಗಿ ಶೋಷಿಲ್ಪಡುವುದನ್ನು ಚಿತ್ರಿಸುತ್ತದೆ.

ಗುಂಡ ಗೌಡರ ಹೊಲೆಯಾಳು. ಗೌಡರ ಗೌರಿ ಹಸುವಿಗೆ ಹೆರಿಗೆ ನೋವು ಆರಂಭವಾಗಿರುತ್ತದೆ. ಮನೆಯಲ್ಲಿ ಗುಂಡನ ಹೆಂಡತಿ ಚನ್ನಿಗೆ ಹೆರಿಗೆನೋವು ಕಾಣಿಸಿಕೊಂಡು ಸೂಲಗಿತ್ತಿಯ ಕೈಮೀರಿ ಡಾಕ್ಟರನ್ನು ಕರೆತರಬೇಕೆಂದು ಕಾಳಪ್ಪ ಬಂದು ಹೇಳುತ್ತಾನೆ. ಗುಂಡ ಗೌಡರ ಅನುಮತಿ ಕೇಳುತ್ತಾನೆ. 'ಬಾಣೆತನ ಅಂದ ಮೇಲೆ ತರಾಸಾಗ್ತದಪ ಗುಂಡ. ಬ್ಯಾನಿ ಸುರುವಾಗಿರಬೇಕು ಬಾಣತನ ಆಗ್ತದ ಬಿಡು ನೀ ಹೋದಿ ಅಂದ್ರ ಗೌರಿ ಗತಿ ಏನು?[೬೯] ಎಂದು ಹೇಳಿ ನಿರಾಕರಿಸುತ್ತಾನೆ.

ಗುಂಡ ಗೌರಿ ಕರು ಹಾಕಿದ ಮೇಲೆ ಕೆಲಸ ಮುಗಿಸಿ ಮನೆಗೆ ಬರುವುದರಲ್ಲಿ ಚನ್ನಿ ಹೆರಿಗೆಯ ತೊಂದರೆಯಿಂದ ಅಸುನೀಗುತ್ತಾಳೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಸಿಗದೇ ಚನ್ನಿ ಹೆತ್ತು ಸಾಯುತ್ತಾಳೆ. ಬಡತನ, ದೂರದ ಆಸ್ಪತ್ರೆ ಗರ್ಭಿಣಿಯ ಆರೋಗ್ಯ ರಕ್ಷಣೆಗೆ ಸಹಕಾರಿಯಾಗಿಲ್ಲದಿರುವುದನ್ನು ಹಾಗೂ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಕೆಳವರ್ಗದ ಮಹಿಳೆಯ ಬದುಕಿಗೆ ಬೆಲೆ ಇಲ್ಲದಿರುವುದನ್ನು ಕಥೆ ಪ್ರತಿನಿಧಿಸುತ್ತದೆ.

ಬಿ.ಟಿ. ಲಲಿತಾನಾಯ್ಕರ 'ನೆಲೆ ಬೆಲೆ' ಕಾದಂಬರಿಯ ಕನಕಳ ಹೆರಿಗೆ ಸಂದರ್ಭದಲ್ಲಿ ಇಡೀ ಕುಟುಂಬ ಆತಂಕಗೊಳ್ಳುವ ಸಂಗತಿ ಇದೆ. ಹೆಣ್ಣಿನ ಹೆರಿಗೆ ತವರಿನಲ್ಲೇ ಆಗಬೇಕೆಂಬ ಗ್ರಾಮೀಣರ ನಡವಳಿಕೆ ಅವಳ ಆರೈಕೆಯ ಕಾಳಜಿಯನ್ನು ಹೊಂದಿದೆ.

'ಆ ಪರದೇಶದಾಗ ಬಿಮ್ಮನಸಿ ಹುಡುಗಿ ಒಬ್ಬಳೇ ಇದಾಳೆ ಯಾವ ಹೊತ್ತಿನಾಗ ಎಂಗೋ ಬಡಾನೇ ಊರಿಗೆ ಹೋಗಪ್ಪಾ'[೭೦] ಎಂದು ಮಗಳ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾಳೆ ಹೆತ್ತ ತಾಯಿ. ಅವಳ ಅನಾರೋಗ್ಯದಿಂದ ಹೆರಿಗೆ ಕೆಲಸ ಮಾಡಲಾಗದ ಸ್ಥಿತಿಯಲ್ಲಿ ಸಂಬಂಧಿ ಜಯ ಆ ಕೆಲಸಕ್ಕೆ ಸಹಕರಿಸುವುದು ಸ್ತ್ರೀಪರ ಕಾಳಜಿಯಾಗಿ ಚಿತ್ರಣಗೊಂಡಿದೆ.

ಸಂತಾನ ನಿಯಂತ್ರಣ :

ಜಯತೀರ್ಥ ರಾಜಪುರೋಹಿತರ 'ಬಹದ್ದೂರ ನನ್ನ ಗಂಡ' ಕಥೆಯು ಅತೀ ಸಂತಾನ ಮಹಿಳೆಯ ಬದುಕಿನ ಮೇಲೆ ಬೀರಬಹುದಾದ ಪರಿಣಾಮವನ್ನು ವಸ್ತುವಾಗುಳ್ಳದ್ದು.

ರಾಜಪುರೋಹಿತರು ಎರಡು ಸಂಸಾರಗಳ ಮೂಲಕ ಕಥೆಯ ಆಶಯವನ್ನು ಸ್ಪಷ್ಟಪಡಿಸುತ್ತಾರೆ. ಶಿವಾರೆಡ್ಡಿ ಗೌರಮ್ಮ ಹೊಲ–ಮನೆ ಇರುವ ಅಸಮವಯಸ್ಸಿ ದಂಪತಿಗಳಾದರೆ ಫಕೀರ್‌ಸಾಬ್ ಕಾಲೇಗಾರ ಕೆಲಸ ಮಾಡುವ ದಿನ ಸಂಪಾದನೆಯ ಸಮ ವಯಸ್ಕ ದಂಪತಿಗಳು. ಫಕೀರ್‌ಸಾಬ್ ಮುಸ್ಲಿಂನಾದರೂ ಸಂಪ್ರದಾಯವಾದಿಯಲ್ಲ. ಪ್ರಗತಿಪರ ಆಲೋಚನೆಯ ಚಿಕ್ಕ ಸಂಸಾರದಲ್ಲಿ ಎರಡು ಮಕ್ಕಳನ್ನು ಹೊಂದಿ ಹಿತಮಿತವಾಗಿ ಬದುಕು ರೂಪಿಸಿಕೊಂಡವ. ಗಂಡ ಹೆಂಡತಿ ಪರಸ್ಪರ ಪ್ರೀತಿ, ಗೌರವ ಹೊಂದಿ ನೆಮ್ಮದಿಯಾಗಿ ಬದುಕುತ್ತಾರೆ.

ಶಿವಾರೆಡ್ಡಿ ಮಕ್ಕಳಿಲ್ಲವೆಂದು ಎರಡನೆಯ ಮದುವೆಯಾಗಿ ಅಸಮ ವಯಸ್ಸಿನ ದಾಂಪತ್ಯದಲ್ಲಿ ಐದು ಮಕ್ಕಳನ್ನು ಹಡೆದು ಬಿದ್ದು ಕಾಲು ಮುರಿದು ಕೊಂಡಾಗ ಸಂಸಾರದ ಭಾರ ಗೌರಮ್ಮನ ಮೇಲೆ ಬೀಳುತ್ತದೆ. ಕೆಲ ದಿನಗಳಲ್ಲಿ ಎರಡೂ ಸಂಸಾರಗಳ ಆರ್ಥಿಕ ಪರಿಸ್ಥಿತಿ ಏರುಪೇರಾಗಿ ಶ್ರೀಮಂತಿಕೆಯ ಗತ್ತಿನಲ್ಲಿ ಚಂದವ್ವನಿಗೆ ಐದು ಮಕ್ಕಳ ತಾಯಿ ಗೌರವ್ವ ನೀರಿಗಾಗಿ ತನಗೂ ಚಂದವ್ವನಿಗೂ ಬಂದ ಜಗಳದಲ್ಲಿ 'ಮನ್ಯಾಗ ತಿನ್ನಾಕ ಕೂಳಿಲ್ಲದಿದ್ರೂ ಸೊಕ್ಕ್ ಏಟೈತಿ' ನೋಡ್ರೇ ಎಂದಾಗ ಚಂದವ್ವ 'ನಮ್ಮ ಸರಿ ಜೋಡಿ ಸಂಸಾರದಾಗ ಏನೈತಿ ನಿಮಗೇನು ಗೊತ್ತು ನನಗ ಇದ್ದದ್ದು ನಿನಗ ಇಲ್ಲ........ ನಿನಗಿದ್ದದ್ದು ನನಗಿಲ್ಲ. ಹೋಗು ಏನು ಹೇಳ್ತೀ' ಎಂದು ಹೇಳುವಲ್ಲಿ ಹೀನೈಸಿ ಮಾತಾಡಿದ್ದ ಗೌರವ್ವನ ಗರ್ವ ಸೋರಿಹೋಗುತ್ತದೆ. ಚಂದವ್ವ ವಂಕಿಹಾಕಿಸಿಕೊಂಡು ಕುಟುಂಬ ಯೋಜನೆಗೊಳಪಟ್ಟು ಸಂಸಾರದ ಖರ್ಚನ್ನು ಮಿತಗೊಳಿಸಿ ಬೆಳ್ಳಿ ವಂಕಿ ಹಾಕಿಕೊಳ್ಳುವ ಮಟ್ಟಕ್ಕೆ ಸುಧಾರಿಸುತ್ತಾಳೆ.

ಈ ಎರಡು ಸಂಸಾರಗಳ ತುಲನೆಯಿಂದ ರಾಜಪುರೋಹಿತರು ಮಿತ ಸಂತಾನದ ಲಾಭ ಹೇಳುತ್ತಲೇ ಅತೀ ಸಂತಾನ ಹಾಗೂ ಹಿರಿವಯಸ್ಸಿನ ಗಂಡನಿಂದಾಗಿ ಗೌರವ್ವನ ಬದುಕು ಬವಣೆಗೊಳಗಾಗುವುದನ್ನು ಚಿತ್ರಿಸುತ್ತಾರೆ. ಕಥಾ ಹಂದರ ಚಿಕ್ಕದಾದರೂ ಹಲವು ಸಂಗತಿಗಳನ್ನು ಅದು ದರ್ಶಿಸುತ್ತದೆ. ವಿವಾಹಕ್ಕೆ ಬೇಕಾದದ್ದು ಸಮ ವಯಸ್ಕ ಸರಿಜೋಡಿ ಸಮವಯಸ್ಕರ ಸಮಾನಾಲೋಚನೆ ಸಂಸಾರದ ಸುಸೂತ್ರತೆಗೆ ಕಾರಣವಾಗುತ್ತದೆನ್ನುತ್ತದೆ ಕಥೆ. ಜೊತೆಗೆ ಮುಸ್ಲಿಂ ಜನಾಂಗದಲ್ಲಿಯ ನಾಲ್ಕು ಮದುವೆ ಅತೀ ಸಂತಾನ ಕುರಿತು ಬಾಲೇಶ ಎಂಬ ಮುಸ್ಲಿಂ ಪಾತ್ರದ ಮೂಲಕವೇ ತಿಳಿಹೇಳಿಸುವ ಮೂಲಕ ಕಾಲಕ್ಕೆ ತಕ್ಕ ಬದಲಾವಣೆ ಅನಿವಾರ್ಯವೆಂಬುದನ್ನು ನಿರೂಪಿಸುತ್ತಾರೆ. ದಾಂಪತ್ಯದ ಯಶಸ್ಸಿಗೆ ಸಮವಯಸ್ಸು, ಅರಿಯುವ ಮನಸ್ಸು ಹಾಗೂ ಪರಸ್ಪರ ಪ್ರೀತಿ ಗೌರವಗಳ ಅವಶ್ಯಕತೆಯನ್ನೇ ಕಥೆ ಸಾರುತ್ತದೆ. ಕುಟುಂಬ ಯೋಜನೆಗೆ ಮಹಿಳೆಯೆ ಮುಂದಾಗಬೇಕೆಂಬ ಪುರುಷ ಶಾಹಿ ಧೋರಣೆಯೂ ಜೊತೆಯಲ್ಲಿಯೇ ಇದೆ. ಕಾಂಡೋಮ್ ಬಳಸುವುದರಿಂದ ಯಾವುದೇ ಹಾನಿ ಇಲ್ಲವಾದರೂ ಪುರುಷ ಅದಕ್ಕೆ ಮುಂದಾಗುವುದಿಲ್ಲ ಎಷ್ಟೋ ಸಲ ಮಹಿಳೆಯರು ವಂಕಿ ಹಾಕಿಸಿಕೊಂಡಾಗ ಸಮಯ ಮೀರಿ ಅತೀ ಸ್ರಾವಕ್ಕೊಳಪಟ್ಟು ಕ್ಯಾನ್ಸರ್‌ನಂಥ ಕಾಯಿಲೆಗೆ ತುತ್ತಾದ ಉದಾಹರಣೆಗಳಿವೆ. ಇಂದು ತಂತ್ರಜ್ಞಾನ ಅತ್ಯಾಧುನಿಕಗೊಳ್ಳುತ್ತಿದ್ದು ಸುಲಭ ಸಾಧ್ಯವಾಗಿದೆಯಾದರೂ ಇಂದಿಗೂ ಪುರುಷರು ಸಂತಾನ ನಿಯಂತ್ರಣಕ್ಕೆ ಒಳಪಡುತ್ತಿರುವುದು ಅಪರೂಪ.

೪.೩.೯ ಬಂಜೆಯ ಬದುಕು

ಮಕ್ಕಳಾಗದ ಮಹಿಳೆಯನ್ನು ಸಮಾಜ ಬಂಜೆ ಎಂದು ಗುರುತಿಸುತ್ತದೆ. ವಿವಾಹದ ಉದ್ದೇಶವೆ ಮಕ್ಕಳನ್ನು ಪಡೆದು ವಂಶವನ್ನು ಮುಂದುವರಿಸುವುದು. ವಿಶೇಷವಾಗಿ ಗಂಡು ಮಕ್ಕಳನ್ನು ಪಡೆಯುವುದು. ಹೆಣ್ಣು ಹೆತ್ತರೂ ಅದು ಪರಿಗಣನೆಯಾಗುವುದಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಗಂಡು ಮಕ್ಕಳಿಂದಲೇ ವಂಶ ಮುಂದುವರಿಯುವುದರಿಂದ ಗಂಡು ಮಗುವನ್ನು ಹೆರದವಳು ಬಂಜೆಗೆ ಸಮಾನಳೆಂದೇ ಭಾವಿಸಲ್ಪಡುತ್ತಾಳೆ. ತಾಯ್ತನ ಮಹಿಳೆಯ ಆಯ್ಕೆಯಾಗಿಲ್ಲ. ಅವಳಿಗೆ ಇಷ್ಟವಿರಲಿ ಇಲ್ಲದಿರಲಿ ಆಕೆ ತಾಯಿಯಾಗಲೇ ಬೇಕು. ಬಂಜೆಯಾದವಳು ಸಮಾಜದ ಕಣ್ಣಲ್ಲಿ ಅಪರಾಧಿಯಾಗುತ್ತಾಳೆ. ದೋಷ ಗಂಡಿನದಾದರೂ ಅದನ್ನು ಹೆಣ್ಣಿನ ಮೇಲೆಯೆ ಹೊರಿಸಲಾಗುತ್ತದೆ. ಮಗುವಿಗಾಗಿ ಗಂಡಸು ಎಷ್ಟು ಬೇಕಾದರೂ ಮದುವೆ ಮಾಡಿಕೊಳ್ಳಬಹುದು. ಆಗಲೂ ಮಕ್ಕಳಾಗದಿದ್ದರೆ ವೃತ ನಿಯಮ ಪೂಜೆ ಪುನಸ್ಕಾರ, ಎಂದೆಲ್ಲ ಪರದಾಡಬೇಕಾದುದು ಹೆಣ್ಣಿನ ಕೆಲಸವೆ ಬಂಜೆತನದಿಂದ ಬಿಡುಗಡೆ ಪಡೆಯಲು, ಗಂಡನ ಪ್ರೀತಿ ಹಂಚಿ ಹೋಗದಂತೆ ತಡೆಯಲು, ಕೆಲವು ಮಹಿಳೆಯರು ಒಳದಾರಿಗಳನ್ನು ಕಂಡುಕೊಳ್ಳುವ ಸಾಹಸಕ್ಕೆ ಮುಂದಾಗುತ್ತಾರೆ. ತಮ್ಮ ಯಾವುದೇ ದೋಷವಿಲ್ಲದೆ ಬಂಜೆತನದ ಅಭಿಶಾಪಕ್ಕೆ ತುತ್ತಾದಾಗ ಮಹಿಳೆಯು ಯಾವ ನಿರ್ಣಯಕ್ಕೆ ಬರಬಲ್ಲಳೆನ್ನುವುದನ್ನು ಕೆಲವು ಕಥಾನಕಗಳು ಬಿಚ್ಚಿಡುತ್ತವೆ.

ಗಂಡನ ದೋಷದಿಂದ ಮಗುವಾಗದಿದ್ದ ಸನ್ನಿವೇಶದಲ್ಲಿಯೂ ಆತ ಅದನ್ನು ಮುಚ್ಚಿಟ್ಟು ಹೆಂಡತಿಯದೇ ದೋಷ ಎನ್ನುವಂತೆ ವರ್ತಿಸುತ್ತಾನೆ. ಸಮಾಜದೆದುರು ತನ್ನ ಪುರುಷತ್ವವನ್ನು ಸಾಬೀತು ಮಾಡಲು ಯಾವುದೇ ಹುನ್ನಾರಕ್ಕೂ ಸಿದ್ಧನಾಗುತ್ತಾನೆ. ಇದರಿಂದ ಹೆಂಡತಿಯ ಮೇಲಾಗುವ ಪರಿಣಾಮದತ್ತ ಅವನ ಗಮನವಿರುವುದು ಅಪರೂಪ. ಮಹಿಳೆಗೆ ತಾಯ್ತನವನ್ನು ಒಂದು ಮೌಲ್ಯವಾಗಿ ಹೇರಿರುವ ಸಮಾಜವು ಪುರುಷನಿಗೆ ತಂದೆತನ ಕುರಿತಂತೆ ಯಾವ ಒತ್ತಡವನ್ನೂ ಹೇರುವುದಿಲ್ಲ, ಆತನ ವಂಶದ ಮುಂದುವರಿಕೆಗೆ ವಾರಸುದಾರ ಬೇಕೆಂದು ಮಾತ್ರ ಬಯಸುತ್ತದೆ. ಮಹಿಳೆಗಿರುವಂತೆ ಕರುಳ ಬಳ್ಳಿಯ ಭಾವನಾತ್ಮಕ ಸಂಬಂಧಕ್ಕಿಂತ ವಾರಸುದಾರತ್ವದ ವ್ಯಾವಹಾರಿಕ ಸಂಬಂಧವೇ ಇಲ್ಲಿ ಮುಖ್ಯವಾಗುತ್ತದೆ. ಅದರ ಪೂರೈಕೆಗಾಗಿ ಮಹಿಳೆಯನ್ನು ಉಪಕರಣವಾಗಿ ಬಳಸುತ್ತ ಬರಲಾಗಿದೆ. ಅಂದರೆ ಮಹಿಳೆಯ ಪ್ರಜನನತ್ವವನ್ನು ಪುರುಷ ಪ್ರತಿಷ್ಠೆಯ ಸಂಕೇತವಾಗಿ ಮಾತ್ರ ಕಾಣಲಾಗುತ್ತದೆ.'[೭] ಎಂಬ ಚಂದ್ರಮತಿ ಸೋಂದಾ ಅವರ ಬಂಜೆತನ ಕುರಿತು ವಿವರ ಸರಿಯಾಗಿಯೆ ಇದೆ.

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಬಂಜೆತನಕ್ಕೆ ಸಂಬಂಧಿಸಿದ ಹಲವು ಕಥನಗಳು ಪ್ರಸ್ತಾಪಿಸಿವೆ. ಶಾಂತರಸರ 'ಸುಳಿ' ಕಥೆಯ ಬಸ್ನಮ್ಮ, ಪಾರ್ವತಿ, ಬಾಲಚಂದ್ರ ಜಯಶಟ್ಟಿಯವರ 'ಸುಂದರಿ ಎಲ್ಲಿ' ಕಥೆಯ ನೀಲಮ್ಮ, ಅಮರೇಶ ನುಗದೋಣಿಯವರ 'ಹೊತ್ತು ಮೂಡಿವ ಸಮಯ' ಕಥೆಯ ಅಕ್ಕಮ್ಮ, ಬಿ.ಟಿ ಲಲಿತಾನಾಯಕರ 'ನೆಲೆ ಬೆಲೆ' ಕಾದಂಬರಿಯ ಜಯಮ್ಮ, ಗೀತಾ ನಾಗಭೂಷಣರ 'ಧುಮಸ್ಸು' ಕಾದಂಬರಿಯ ಈರಿ ಮೊದಲಾದವರು ಬಂಜೆತನದಿಂದಾಗಿ ಬಳಲಿದವರು.

ಅನ್ಯ ಸಂಬಂಧ :

ಚಂದ್ರಕಾಂತ ಕುಸನೂರರ 'ಯಾತನಾ ಶಿಬಿರ' ಕಾದಂಬರಿಯ ಬಸಮ್ಮ ಬಂಜೆತನದ ನಿವಾರಣೆಗೆ ವಿವಾಹ ಬಾಹಿರ ಸಂಬಂಧಕ್ಕೆಳಸುತ್ತಾಳೆ. ಹೀಗೆ ಗರ್ಭಿಣಿಯಾದಾಗ ತನ್ನ ದೌರ್ಬಲ್ಯದ ಅರಿವಿದ್ದ ಸಾಹುಕಾರ ಶ್ಯಾಮಣ್ಣ ಅವಳ ಮೇಲೆ ದೈಹಿಕ ಹಿಂಸೆ ನಡೆಸಿ ಗರ್ಭಪಾತವಾಗುವಂತೆ ಮಾಡುತ್ತಾನೆ. ಹಾದರ ಹೊರಸಿ ತವರು ಮನೆಗೆ ಅಟ್ಟುತ್ತಾನೆ.

ವಿವಾಹ ಸಂಸ್ಥೆಯಲ್ಲಿ ಪುರುಷ ನಿರೀಕ್ಷೆಯಂತೆ ಬದುಕಿದಾಗ ಮಾತ್ರ ಮಹಿಳೆಗೊಂದು ನೆಲೆ ಸಿಗುತ್ತದೆ. ಇಲ್ಲವಾದರೆ ಯಾವ ಗಳಿಗೆಯಲ್ಲಾದರೂ ಅವಳು ಮನೆಯಿಂದ ಹೊರದೂಡುಲ್ಪಡುತ್ತಾಳೆ. ಆಗ ಮನೆ ಇಲ್ಲದ ಅತಂತ್ರ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಕಥೆ ಸಾದರಪಡಿಸುತ್ತದೆ. ತಾಯ್ತನ ಹೆಣ್ಣಿನ ಪೂರ್ಣತೆಯ ಸಂಕೇತವೆಂದು ಹೇಳಿದಾಗಲೂ, ವಿವಾಹ ಬಾಹಿರ ತಾಯ್ತನಕ್ಕೆ ಸಮಾಜದಲ್ಲಿ ಗೌರವವಿಲ್ಲವೆಂಬುದನ್ನು ಕಥೆ ಪ್ರತಿನಿಧಿಸುತ್ತದೆ.

ಶಾಂತರಸರ 'ಸುಳಿ' ಕಥೆಯು ಬಂಜೆತನ ನೀಗಲು ಬನ್ನಮ್ಮ ವಿವಾಹ ಬಾಹಿರ ಸಂಬಂಧಕ್ಕೆಳಸುವ ಹಾಗೂ ವಿವಾಹ ಪರಿಪ್ರೇಕ್ಷದೊಳಗೇ ಬಸಿರಿಯಾದರೂ ಖಂಡೇರಾಯನ ಸಂಶಯಕ್ಕೆ ಜೀವಬಲಿಕೊಡುವ ಪಾರ್ವತಿಯ ಸಂಗತಿಯನ್ನು ವಸ್ತುವಾಗುಳ್ಳ ಕಥೆ. ವಿವಾಹದ ಮುಖ್ಯ ಉದ್ದೇಶವೇ ಸಂತಾನೋತ್ಪತ್ತಿ ವಂಶವನ್ನು ಮುಂದುವರಿಸಬೇಕಾದ ಸಂತಾನವಾಗದೆ ಇದ್ದಾಗ ವಿಪುಲ ಸಂಪತ್ತು ನಾದಿನಿ,. ಮೈದುನರ ಮಕ್ಕಳ ಪಾಲಾಗುವುದು, ಮುಪ್ಪಿಗೆ ತನಗೆ ಆಸರೆ ಇಲ್ಲದಂತಾಗುವುದೆಂದು ಯೋಚಿಸುವ ಬನ್ನಮ್ಮ ಹಳ್ಳದ ದಂಡೆಮ್ಮನ ಮಾತಿನಂತೆ ತೊಡೆಬದಲಾಯಿಸಲು (ಪರಪುರುಷ ಸಂಬಂಧ) ಸಿದ್ಧಳಾಗುತ್ತಾಳೆ. ಅದಕ್ಕಾಗಿ ಅವಳು ಆಯ್ದುಕೊಂಡದ್ದು ತನ್ನ ಪಕ್ಕದ ಮನೆಯ ಪಾಪಭೀರು ಖಂಡೇರಾಯನನ್ನು ಅವನನ್ನು ತನ್ನತ್ತ ಸೆಳೆದು, ಅವನ ತೋಟದ ಮನೆಯಲ್ಲೆ ಅವನೊಂದಿಗೆ ಬೆರೆತು ಗಂಡು ಮಗುವನ್ನು ಹೆರುತ್ತಾಳೆ. ಅನಂತರ ಆ ರಹಸ್ಯವನ್ನು ಅವನಿಗೆ ಹೇಳಿ ಯಾವುದೇ ಕಾರಣಕ್ಕೂ ಮುಂದೆ ತನ್ನೊಂದಿಗೆ ಸಂಪರ್ಕವಿರಿಸಿಕೊಳ್ಳಬಾರದೆಂದು ತಾಕೀತು ಮಾಡುತ್ತಾಳೆ.

ಮದುವೆಯಾಗಿ ಆರು ವರ್ಷವಾದರೂ ತನ್ನ ಎರಡನೇ ಹೆಂಡತಿ ಪಾರ್ವತಿಗೆ ಮಕ್ಕಳಾಗದೆ, ಬನ್ನಮ್ಮನಿಗಾದಾಗ ತನಗೂ ಆಗಬಾರದೇ ಎಂದು ಆಶಿಸುತ್ತಾನೆ ಖಂಡೇರಾಯ. ಬನ್ನಮ್ಮನ ಸಹವಾಸವಿಲ್ಲದೆ ಹೆಂಡತಿಯೊಂದಿಗಿನ ಸಂಬಂಧವನ್ನು ಹದಗೆಡಿಸುತ್ತಾನೆ. ಪಾರ್ವತಿ ಬಸಿರಿಯಾದಾಗ ಸಂಶಯದಿಂದಾಗಿ ಅವಳನ್ನು ದೂರೀಕರಿಸುತ್ತಾನೆ. ಚೊಚ್ಚಲು ಬಸಿರಿಗೆ ಕುಪ್ಪಸ ಕಾರ್ಯದ ಕುರಿತು ಕೇಳಿದಾಗ ತಪ್ತನಾದ ಖಂಡೇರಾಯ 'ಥೂ ರಂಡೆ, ನಿನ್ನ ಹೊಟ್ಯಾಗ ಇದ್ದದ್ದು ನನ್ ಪಿಂಡ ಅಲ್ಲ, ಅದು ಯಾರದೋ? ನೀ ಯಾರಿಗೋ ಬಸಿರಾಗಿದ್ದಿ'[೨೩] ಎಂದು ಅವಳ ಹೊಟ್ಟೆಗೆ ಝಾಡಿಸಿ ಒದೆಯುತ್ತಾನೆ. ಪಾರ್ವತಿ ರಕ್ತಶ್ರಾವವಾಗಿ ಸಾಯುತ್ತಾಳೆ.

ಪಿತೃ ವ್ಯವಸ್ಥೆಯಲ್ಲಿ ಸಂತಾನವಿಲ್ಲದ ಹೆಣ್ಣಿಗೆ ಯಾವುದೇ ಸ್ಥಾನ ಮಾನವಿಲ್ಲ. ಬದುಕಿನ ಆಸರೆಯೆ ತಪ್ಪುತ್ತದೆ ಎಂಬಂಥ ಸ್ಥಿತಿಯಲ್ಲಿ ತನ್ನ ಗಂಡನಿಂದ ಮಕ್ಕಳಾಗದೆಂದು ಖಚಿತಪಡಿಸಿಕೊಂಡ ಬನ್ನಮ್ಮ

ವಿವಾಹ ಬಾಹಿರ ಸಂಬಂಧದಿಂದಲಾದರೂ ಸರಿಯೆ ಮಗುವನ್ನು ಪಡೆಯುವ ನಿರ್ಧಾರ ಕೈಗೊಂಡು ಸಫಲಾಳಾಗುತ್ತಾಳೆ. ಆದರೆ ಅವಳು ಭೇದಿಸಿದ ರಹಸ್ಯ ಹೆಂಡತಿಯು ಶೀಲವತಿಯಾಗಿರಬೇಕು (ತಾನು ಶೀಲಗೆಟ್ಟರೂ) ಎಂದು ನಂಬಿದ ಖಂಡೇರಾಯನಿಗೆ ಅವಳು ಬಸಿರಾದಾಗ, ಅದೂ ಕೂಡ ವಿವಾಹ ಬಾಹಿರ ಸಂಬಂಧದಿಂದಲೆ ಎಂದು ಭಾವಿಸಿ ಅಮಾನವೀಯವಾಗಿ ನಡೆದುಕೊಳ್ಳಲು ಕಾರಣವಾಗುತ್ತದೆ. ಮುಗ್ಧ ಪಾರ್ವತಿ ಖಂಡೇರಾಯನ ಕೋಪಕ್ಕೆ ತುತ್ತಾಗುತ್ತಾಳೆ.

ಒಂದೆಡೆ ಶೀಲಕ್ಕೆ ಪ್ರಾಶಸ್ತ್ಯವೀಯುವ, ಮತ್ತೊಂದು ಕಡೆ ಬಂಜೆತನಕ್ಕೆ ಹೆಣ್ಣನ್ನೆ ಹೊಣೆಯಾಗಿಸುವ ಪಿತೃ ಸಂಸ್ಕೃತಿಯ ಪಕ್ಷಪಾತನೀತಿ ಗಂಡಿಗೆ ಮತ್ತೊಂದು ಮದುವೆ ಮಾಡುವ ಮೂಲಕ ಮೊದಲ ಹೆಂಡತಿಯನ್ನು ಮೂಲೆಗುಂಪು ಮಾಡುತ್ತದೆ. ಇಂಥ ಸ್ಥಿತಿಯನ್ನು ಪ್ರವೇಶಿಸಲಿಚ್ಛಿಸದ ಬನ್ನಮ್ಮನಂಥ ದಿಟ್ಟೆಯರು ವಿವಾಹಬಾಹಿರ ಸಂಬಂಧದ ದಾರ್ಷ್ಟ್ಯ ತೋರಿ ಸುರಕ್ಷಿತರಾದರೆ, ಪಾರ್ವತಿಯಂಥ ಮುಗ್ಧೆಯರು ಪಾವಿತ್ರ್ಯದ ಗಡಿಯನ್ನು ದಾಟದೆಯೂ ಕ್ರೌರ್ಯಕ್ಕೀಡಾಗುತ್ತಾರೆ ಎಂಬುದನ್ನು ಶಾಂತರಸರು ಮನಂಬುಗುವಂತೆ ಚಿತ್ರಿಸಿದ್ದಾರೆ.

ಸಂತಾನಕ್ಕಾಗಿ ಬಲಿ :

ಬಂಜೆತನದ ನಿವಾರಣೆಗೆ ಮಹಿಳೆ ಏನೆಲ್ಲ ಪ್ರಯತ್ನ ಮಾಡುತ್ತಾಳೆ. ಹಾಗೆ ಅವಳು ಮಾಡುವಂತೆ ಹಿನ್ನೆಲೆಯಲ್ಲಿ ಕೆಲಸ ಮಾಡುವ ಪಿತೃ ಸಂಸ್ಕೃತಿಯ ರಾಜಕಾರಣ ಯಾವ ಬಗೆಯದು ಎಂಬುದನ್ನು ಬಾಲಚಂದ್ರ ಜಯಶೆಟ್ಟಿಯವರ 'ಸುಂದರಿ ಎಲ್ಲಿ?' ಕಥೆ ನಿರೂಪಿಸುತ್ತದೆ. ನೀಲವ್ವನ ಬಂಜೆತನದ ನಿವಾರಣೆಗೆ ಬಲಿಯಾಗುವ ಸುಂದರಿಯ ವೃತ್ತಾಂತವನ್ನು ವಿವರಿಸುತ್ತದೆ. ಕಾಮಣ್ಣ ರತ್ನರ ಏಕೈಕ ಸಂತಾನ ಸುಂದರಿ. ಹೆಸರಿಗೆ ತಕ್ಕಂತೆ ಸುಂದರವಾಗಿದ್ದು ಊರವರೆಲ್ಲರ ಆಕರ್ಷಣೆಯ ಕೇಂದ್ರವಾಗಿರುತ್ತಾಳೆ. ಪಕ್ಕದ ಮನೆಯ ನೀಲಮ್ಮಳೂ ಮಗುವನ್ನು ತುಂಬ ಹಚ್ಚಿಕೊಂಡಿರುತ್ತಾಳೆ. ಊರವರ ಕಣ್ಮಣಿಯಾಗಿ ಓಡಾಡಿಕೊಂಡಿದ್ದ ನಾಲ್ಕು ವರ್ಷದ ಸುಂದರಿ ಒಂದು ದಿನ ಕಣೆಯಾಗುತ್ತಾಳೆ. ಮಗು ಶವವಾಗಿ ನೀಲಮ್ಮಳ ಕಕ್ಕಸು ಗುಂಡಿಯಲ್ಲಿ ದೊರೆಯುತ್ತದೆ.

ಗಾಂಜಿಬುಕ್ಕನ ಹೆಂಡತಿ ನೀಲಮ್ಮ ಮಕ್ಕಳಿಗಾಗಿ ಹಂಬಲಿಸಿ ಅಲಕಬಾಬಾನನ್ನು ಕೇಳಿದಾಗ ಅವನು 'ಒಂದು ಚೊಚ್ಚಿಲು ಕೂಸಿಗೆ ಬಲಿ ಕೊಟ್ಟೀ ಅಂದ್ರ ನಿನಗ ಮಕ್ಕಳಾಗ್ತಾವ'[೨೬] ಎಂದು ಹೇಳುತ್ತಾನೆ. ನೀಲವ್ವ ಸುಂದರಿಯನ್ನು ಕೊಂದು ಕಕ್ಕಸುಗುಂಡಿಯಲ್ಲಿ ಬೀಳಿಸುತ್ತಾಳೆ. ಅಂದೆ ಬಾಬಾ ಮತ್ತು ಅವಳು ಊರು ಬಿಟ್ಟು ಕಾಣೆಯಾಗುತ್ತಾರೆ.

ಕಥೆಯಲ್ಲಿ ನೀಲವ್ವಳ ಬಂಜೆತನಕ್ಕಾಗಿ ಮಗುವಿನ ಕೊಲೆಯಾದಂತೆ ಮೊದಲ ನೋಟಕ್ಕೆ ಭಾಸವಾದರೂ ಅಲಕಬಾಬಾ ಒಬ್ಬ ಮಂತ್ರವಾದಿ. ಮಾಟ ಮಂತ್ರ ಮಾಡಿಸುವವರು ಬಲಿಕೊಡುವುದು ಅನಿವಾರ್ಯವೆಂದು ನಂಬಲಾಗಿದೆ. ತಾನು ನೇರವಾಗಿ ಆ ಕಾರ್ಯ ಮಾಡದ ಬಾಬಾ ನೀಲವ್ವಳ ಬಂಜೆತನದ ಲಾಭ ಪಡೆಯುತ್ತಾನೆ. ಇಲ್ಲಿ ಬಾಬಾನ ಕುತಂತ್ರಕ್ಕೆ ನೀಲವ್ವ ಹಾಗೂ ಸುಂದರಿಯರ ಬದುಕು ಬಲಿಯಾಗುತ್ತದೆ. ಮುಳ್ಳನ್ನು ಮುಳ್ಳಿಂದ ತೆಗೆಯುವಂತೆ ಒಬ್ಬ ಮಹಿಳೆಯನ್ನು ಬಳಸಿ ಇನ್ನೊಂದು ಹೆಣ್ಣು ಜೀವವನ್ನು ಬಲಿಯಾಗಿಸಲಾಗಿದೆ.

ಬಂಜೆತನ ಹೆಣ್ಣಿನ ಬದುಕಿಗೆ ಒಂದು ಭಯಂಕರ ಶಾಪವೆಂಬಂತೆ ನಿರೂಪಿಸಿ, ಮಕ್ಕಳನ್ನು ಪಡೆಯಲು ಅವಳು ಏನೇನು ಮಾಡಬೇಕೆಂಬುದನ್ನು ನಿಯಮಿಸಿ, ಏನಕೇನ ಪ್ರಕಾರ ಅವಳು ಮಕ್ಕಳನ್ನು ಪಡೆಯುವಲ್ಲಿ ಪ್ರವೃತ್ತಳಾಗುವಂತೆ (ಬೆತ್ತಲೆ ಹನುಮಂತ ದೇವರಿಗೆ ಪ್ರದಕ್ಷಿಣೆ ಹಾಕುವ ಬಾಬಾಗಳ ಸನ್ನಿಧಿಗೆ ಹೋಗುವ, ತೊಡೆ ಬದಲಿಸುವ, ಅಶ್ವತ್ಥ ವೃಕ್ಷಸುತ್ತುವ, ವ್ರತ ನಿಯಮ ಮಾಡುವ) ಮಾಡುವ ಪುರುಷ ಪ್ರಧಾನ ವ್ಯವಸ್ಥೆ ತನ್ನದೇ ವಂಶ ಮುಂದುವರಿಸಲಿಚ್ಛಿಸುವ ಪುರುಷನಿಗೆ ಯಾವುದೇ ನಿಯಮಗಳನ್ನು ಹೇಳುವುದಿಲ್ಲ, ಇವಳಲ್ಲದಿದ್ದರೆ, ಇನ್ನೊಬ್ಬಳೆಂದು ಅವಕಾಶವಿತ್ತಿರುವಾಗ ಮಕ್ಕಳಿಗಾಗಿ ಹಂಬಲಿಸಬೇಕಾದ ಅವಶ್ಯಕತೆ ಪುರುಷನದಾಗುವುದಿಲ್ಲ. ಮಕ್ಕಳಿಲ್ಲದೆ ತನ್ನ ಜೀವನಕ್ಕೆ ಬೆಲೆಯಿಲ್ಲ, ಸ್ಥಾನಮಾನವಿಲ್ಲವೆಂದು ನಂಬಿದ ಮಹಿಳೆ ಅದಕ್ಕಾಗಿ ಏನು ಮಾಡಲು ಹಿಂಜರಿಯಳೆಂಬುದನ್ನು ನೀಲವ್ವ ಪ್ರತಿನಿಧಿಸುತ್ತಾಳೆ.

ಒಳದಾರಿ :

ಅಮರೇಶ ನುಗಡೋಣಿಯವರ 'ಹೊತ್ತು ಮೂಡುವ ಸಮಯ' ಕಥೆ ಬಂಜೆಯ ಬದುಕಿನ ತಲ್ಲಣವನ್ನು ಅದಕ್ಕೆ ಅಕ್ಕಮ್ಮ ಕಂಡುಕೊಳ್ಳುವ ಪರಿಹಾರವನ್ನು ಕುರಿತದ್ದು. ಅಕ್ಕಮ್ಮ ಚಿಕ್ಕ ವಯಸ್ಸಿನಲ್ಲೆ ದೊಡ್ಡನ ಗೌಡನ ಮೂರನೇ ಹೆಂಡತಿಯಾಗಿ ಮನೆ ತುಂಬುತ್ತಾಳೆ. ಮದುವೆಗೆ ಅವಳು ತೋರಿದ ವಿರೋಧ ಗಣನೆಗೊಳ್ಳದೆ ಹೋಗುತ್ತದೆ. ಅವಳು ಆಳು ಲಿಂಗಣ್ಣನೆಡೆಗೆ ಆಕರ್ಷಿತಳಾದಾಗ ಗೌಡ ಲಿಂಗಣ್ಣನ ಕೊಲೆ ಮಾಡಿಸುತ್ತಾನೆ. ಮುದಿತನದಲ್ಲಿ ಕಿರಿ ಪ್ರಾಯದ ಹುಡುಗಿಯರನ್ನು ಮದುವೆಯಾದಾಗ ಅವರ ಪಾವಿತ್ರ್ಯದ ಕಾವಲುಗಾರರಾಗುವುದು ಗಂಡಸರಿಗೆ ಅನಿವಾರ್ಯವಾಗುತ್ತದೆ. ಗಂಡಿನ ಲೈಂಗಿಕ ದೌರ್ಬಲ್ಯ ಹೆಣ್ಣನ್ನು ಬೇರೆಡೆ ಸೆಳೆಯುತ್ತದೆಂಬುದು ತಿಳಿದ ವಿಷಯವೆ. ಇಲ್ಲಿ ಸಮಸ್ಯೆಯನ್ನು ತಿಳಿದೂ ತಿಳಿದೂ ಸೃಷ್ಟಿಸಿ ಪೋಷಿಸಲಾಗುತ್ತದೆ. ಸಮಸ್ಯೆಗೆ ಸಿಕ್ಕಿಕೊಂಡವರು ಸ್ವತಃ ಪರಿಹಾರ ಕಂಡುಕೊಳ್ಳಲೆಳೆಸಿದಾಗ ಅವರನ್ನು ಶಿಕ್ಷಿಸಲಾಗುತ್ತದೆ. ಬಂಜೆತನಕ್ಕೆ ಮಹಿಳೆಯೆ ಕಾರಣಳಲ್ಲದಿದ್ದರೂ ಅವಳನ್ನು ಹೊಣೆಯಾಗಿಸಿ ಆ ಕುರಿತು ಮತ್ತೆ ಮತ್ತೆ ಅವಳ ಗಮನ ಸೆಳೆಯುವಂಥ ಸಂಗತಿಗಳು ಆ ಭಾವದಿಂದ ಹೊರಗೆ ಬರದಂತೆ ಮಾಡುತ್ತದೆ.

ಅನ್ನಮ್ಮ ಅಕ್ಕಮ್ಮಳಿಗೆ 'ತಂಗೀ, ಮನ್ನೆ ಸಿದ್ಲಿಂಗಮ್ಮನ ಜತೆ ಮಾತಾಡುತ್ತಿದ್ದಾಗ ಏನಂದ್ಲೂ ಗೊತ್ತಾ? ಅಕ್ಕಮ್ಮಗ ಮದಿವ್ಯಾಗಿ ಒಂದು ಪಟ್ಟ ಮೀರಿ ಹೋಯ್ತು ಮಕ್ಕಳಾಗದು ದೂರದ ಮಾತು ದೊಡ್ಡನಗೌಡನ ತಕ ಏನು ಉಳುದಾದ ಒಣ ಬದ್ನೇಕಾಯಿ? ಎಂಗಾದ್ರ ಆಸ್ತಿ ನನ್ನ ಮಕ್ಕಳಿಗೆ ಬರದು ಅಂದ್ಲವ್ವ... ಎಂದು ಮೆತ್ತಗೆ ಕಿವಿಗೆ ಹಾಕಿದಳು'.

ಬೆಟ್ಟದ ಬಸ್ವ ನಿನ್ನ ಮಡಿಲಿಗೆ ಜೀವ ತುಂಬಲವ್ವ! ಅಂದ ಜೀರಲಿಂಗಣ್ಣನ ಮಾತು.

'ರಣ ರಣ ಅನ್ನುವ ಮನ್ಯಾಗ ನೀನೋಬ್ಬಾಕಿನೇ ಎಂಗಿರ್ತಿದ್ದೆವ್ವ, ಅದೇನು ಕರ್ಮಮಾಡಿ ಬಂದಿದಿಯಂತೀನಿ ಈ ಮನಿಗೆ' ಅಂದ ಬಣಜೀರ ಅನ್ನಮ್ಮನ ಮಾತು

ಹೀಗೆ ಮತ್ತೆ ಮತ್ತೆ ತನ್ನದಲ್ಲದ ಕುಂದನ್ನು ಎತ್ತಿ ತೋರಿಸುತ್ತ ತನ್ನನ್ನೇ ಜವಾಬ್ದಾರಳಾಗಿ ಮಾಡುವಾಗ ಹೆಣ್ಣಿಗೆ ವ್ಯವಸ್ಥೆಯ ಕಟ್ಟು ಪಾಡುಗಳನ್ನು ಮೀರುವುದು ಅನಿವಾರ್ಯವಾಗುತ್ತದೆ. ಅವಳ ಮೀರುವಿಕೆಗೆ ಈ ಒತ್ತಡಗಳು ಕಾರಣವಾಗುತ್ತವೆ ಎಂಬುದನ್ನು ಅಮರೇಶ ಚಿತ್ರಿಸುತ್ತಾರೆ.

ಇವುಗಳ ಗುಂಗಿನಲ್ಲೇ ಇದ್ದ ಅಕ್ಕಮ್ಮನಿಗೆ ಲಿಂಗಣ್ಣನ ಮಗ ಪಿಶ್ವ ಬಳಸಿಕೊಳ್ಳುವ ಒಂದು ಅವಕಾಶವಾಗಿ ಒದಗುತ್ತಾನೆ.ಲಿಂಗಣ್ಣ ಮೊದಲ ಪ್ರಯತ್ನದಲ್ಲೇ ಸಿಕ್ಕು ಸತ್ತುಹೋದರೆ ಅವನ ಮಗ ಅಕ್ಕಮ್ಮನ ಇಚ್ಛೆಯನ್ನು ಪೂರ್ಣಗೊಳಿಸಿ ಪಾರಾಗುತ್ತಾನೆ.

ಶೀಲ-ಪಾವಿತ್ರ್ಯಗಳು ನಿರ್ಬಂಧದಿಂದ ರಕ್ಷಣೆಗೊಳ್ಳುತ್ತವೆ ಎಂಬುದು ಅಸಾಧ್ಯ. ಆ ಭಾವ ವ್ಯಕ್ತಿಯ ಸ್ವಂತದ ತುಡಿತವಾಗಿದ್ದಾಗ ಮಾತ್ರ ಸಾಧ್ಯ. ಅಲ್ಲದೆ ವ್ಯಕ್ತಿಯ ವೈಯಕ್ತಿಕ ಚಾರಿತ್ರ್ಯವೆಂಬುದು ಕುಟುಂಬ ಸಮಾಜವನ್ನಾಧರಿಸಿದಾಗ ಅದಕ್ಕೆ ಪೂರಕ ವಾತಾವರಣವೂ ಇರಬೇಕು. ಆದರೆ ಇರುವದೆಲ್ಲ ದ್ವಂದ್ವಮಯವಾಗಿದ್ದು ಅದರ ವಿಪರೀತ ಪರಿಣಾಮವನ್ನು ಮಹಿಳೆ ತನ್ನ ಬದುಕಿನಲ್ಲಿ ಅನುಭವಿಸ ಬೇಕಾಗುತ್ತದೆ ಎಂಬುದನ್ನು ಅಮರೇಶ ನುಗಡೋಣಿಯವರು ಯಾವುದೆ ಪೂರ್ವಾಗ್ರಹಗಳಿಲ್ಲದೆ ಸಹಜವಾಗಿ ನಿರೂಪಿಸಿದ್ದಾರೆ. ಆರ್ಥಿಕ ಹಾಗೂ ಸಾಮಾಜಿಕ ಶೋಷಣೆಯನ್ನು ಲೈಂಗಿಕ ಸಂಬಂಧದ ಮೂಲಕ ಪೊಳ್ಳುಗೊಳಿಸುವ ಒಂದು ಸಿದ್ಧಮಾದರಿಯನ್ನು ಇದು ಅವಲಂಬಿಸಿದೆ. ವಿವರಿಸಬೇಕೆಂದರೆ, ಕ್ರೂರಿ, ಷಂಡ, ಜಮೀನ್ದಾರನ ಹೆಂಡತಿ ಕೆಳ ಜಾತಿಯೊಬ್ಬನೊಡನೆ ಲೈಂಗಿಕ ಸಂಬಂಧವನ್ನು ಇಟ್ಟುಕೊಳ್ಳುವ ಮಾದರಿ ಇದು'[24] ಎಂದು ಎ.ಆರ್. ನಾಗಭೂಷಣ ಅಭಿಪ್ರಾಯ ಪಡುತ್ತಾರೆ.

ತಪ್ಪು ಕಲ್ಪನೆ :

ಹೆಣ್ಣು ತಾಯಿಯಾಗದಿರುವುದಕ್ಕೆ ಎಷ್ಟೋ ವೇಳೆ ಪುರುಷನ ಲೈಂಗಿಕ ದೌರ್ಬಲ್ಯ ಅಥವಾ ದೋಷ ಕಾರಣವಾಗುತ್ತದೆಂಬುದನ್ನು ಗೀತಾ ನಾಗಭೂಷಣರ 'ಧುಮಸ್ಸು' ಕಾದಂಬರಿ ಚಿತ್ರಿಸುತ್ತದೆ. ತನಗೆ ಮಕ್ಕಳಾಗದಿರುವುದಕ್ಕೆ ಗಂಡನೆ ಕಾರಣನಿರಬಹುದೆಂದುಕೊಳ್ಳುತ್ತಾಳೆ ಸೇಸಿ. 'ತನಗಿನ್ನು ಬೇಕು, ಬೇಕು ಎನ್ನುವ ಸುಖದ ತುತ್ತ ತುದಿಗಾಗಿ ಕತ್ತು ಚಾಚುತ್ತಿರುವಾಗಲೆ ಸಾಕು ಸಾಕೆಂದು ಸೋರಿ ಸೋತು ಜೀಳುವ ಗಂಡನೆ'[25] ಎಂದು ಆಲೋಚಿಸುವ ಕ್ರಮ ವೈಜ್ಞಾನಿಕವಲ್ಲವೆನಿಸುತ್ತದೆ. ಏಕೆಂದರೆ ಹೆಣ್ಣು ಹಪಹಪಿಸುವುದಕ್ಕೂ ಬಂಜೆತನಕ್ಕೂ ಸಂಬಂಧವಿಲ್ಲ. ಹೆಣ್ಣು ದೇಹ ಸಿದ್ಧವಿಲ್ಲದೆ ಹೋದಾಗಲೂ ತಾಯ್ತನ ಒದಗಬಹುದಾಗಿದೆ. ಗಂಡು ಹೆಣ್ಣಿನಲ್ಲಿ ಯಾರೊಬ್ಬರ ದೋಷವೂ ತಾಯ್ತನಕ್ಕೆ ಅಡ್ಡಿಯಾಗಬಹುದು. ಹೊರತು ಹೆಣ್ಣಿನ ಲೈಂಗಿಕ ಅತೃಪ್ತಿ ಕಾರಣವಾಗುವುದಿಲ್ಲವೆಂಬುವುದನ್ನು ತಜ್ಞರು ಹೇಳುತ್ತಾರೆ'.[25]

ಬಂಜೆತನ ನೀಗಲು ಮಹಿಳೆ ಏನೇನೆಲ್ಲ ಪ್ರಯತ್ನ ಮಾಡಬೇಕಾಗುತ್ತದೆ. ಕಂಡ ಕಂಡ ದೇವರಿಗೆ ನಡೆದುಕೊಳ್ಳುವುದು. ಹೇಳಿದ ಔಷಧಿಗಳನ್ನು ಸೇವಿಸುವುದು. ಆಲ-ಅಶ್ವತ್ ಮರಗಳನ್ನು ಸುತ್ತುವುದು ಮಾತಿಲ್ಲದಂತೆ ಮೌನವಾಗಿ ಇಲ್ಲವೆ ಬೆತ್ತಲೆಯಾಗಿ ಹನುಮಂದೇವರ ಗುಡಿಗೆ ಸುತ್ತುವುದು. ಗೀತಾ ನಾಗಭೂಷಣರ 'ಧುಮಸ್ಸು ಕಾದಂಬರಿಯಲ್ಲಿ ದ್ಯಾವ್ಯಾನ ಹೆಂಡತಿ ಈರಿ ಮಕ್ಕಳಿಗಾಗಿ ಹನುಮಂದೇವರ ಗುಡಿಗೆ ಬೆತ್ತಲೆ ಸುತ್ತುವ ಪ್ರಸಂಗದ ಪ್ರಸ್ತಾಪವಾಗುತ್ತದೆ.

ಗಂಡನ ಮನೆಯಲ್ಲಿ ಹೆಣ್ಣಿನ ನೆಲೆ ಭದ್ರವಾಗುವುದು ಮಕ್ಕಳನ್ನು ಪಡೆಯುವುದರ ಮೂಲಕವೆ. ಮಕ್ಕಳಾಗದವಳ ಗಂಡ ಎರಡನೆಯ ಮದುವೆಯಾಗಿ ಮಕ್ಕಳನ್ನು ಪಡೆಯಬಹುದು. ಆಗ ಮೊದಲಿನ ಹೆಂಡತಿಗೆ ಆ ಮನೆಯಲ್ಲಿ ಯಾವುದೇ ಗೌರವವಿಲ್ಲದೆ. ಕೆಲವೊಮ್ಮೆ ಆ ಮನೆಯಲ್ಲಿರಲು ಅವಕಾಶವು

ಇಲ್ಲದೆ ಬದುಕು ದುಸ್ತರವಾಗುತ್ತದೆ. ಹಾಗಾಗಿ ಮಕ್ಕಳನ್ನು ಪಡೆಯಲು ಮಹಿಳೆ ನಾನಾ ರೀತಿಯ ಪ್ರಯತ್ನಕ್ಕೆ ತೊಡಗುವಂತೆ ಸಾಮಾಜಿಕ ವ್ಯವಸ್ಥೆ ಅನಿವಾರ್ಯತೆಯನ್ನು ತಂದೊಡ್ಡುತ್ತದೆಂಬುದನ್ನು ಮೇಲಿನ ಸಂಗತಿ ನಿರೂಪಿಸುತ್ತದೆ.

ಪುಣ್ಯವಂತರಿಗೆ ಮಕ್ಕಳಾಗುತ್ತವೆ. ಮಕ್ಕಳಾಗದವರು ಪಾಪಿಗಳು ಎಂಬಂತೆ ಬಿ.ಟಿ. ಲಲಿತಾ ನಾಯಕರ 'ನೆಲೆ-ಬೆಲೆ' ಕಾದಂಬರಿಯ ತಾಯವ್ವ ತನ್ನ ಸೊಸೆ ಜಯಮ್ಮಳಿಗೆ ಬೇಗ ಮಕ್ಕಳಾಗದಿದ್ದಾಗ ಕಾಂತಯ್ಯನ ಮುಂದೆ ಬೇಸರ ತೋಡಿಕೊಳ್ಳುತ್ತಾಳೆ. ಕಾಂತಯ್ಯ ಶಿವೂಗೂ ಆಗುತ್ತೆ ಬಿಡು ದೊಡ್ಡವ್ವ, ಕೆಲವ್ರಿಗೆ ದೂರ ಫಲ ಇರತ್ತೆ ಎಂದು ಸಮಾಧಾನ ಹೇಳಿದಾಗ ತಾಯವ್ವ 'ಏನೋ ಎಂತೋ ಕಣಪ್ಪ ಬರೀ ಹಿಂಗೇ ಕಾಯೋದಾಗೈತೆ ಯಾರ್‍ಯಾರೇನೇನು ಹೇಳ್ತಾರೆ ಅದೆಲ್ಲಾ ಮಾಡಿಸ್ಬಿಟ್ಟೆ ಹ್ವಾದ ವರ್ಷ ತಿರಪ್ತಿಗೂ ಹ್ವಾಗ್ಬಂದ್ವಿ, ಆಕಿಗ್ ಫಲನೇ ಇಲ್ವೋ ಏನೋ?' ಎಂದು ತಾಯಕ್ಕ ನಿರಾಸೆಯ ಉದ್ಗಾರವೆತ್ತುತ್ತಾಳೆ.

ಕಾಂತಯ್ಯನ ಹೆಂಡತಿಯ ಬಾಣಂತನಕ್ಕೆಂದು ಬಂದಿದ್ದ ಜಯಾ ಪಕ್ಕದ ಮನೆಯಿಂದ ಮನೆಗೆ ಮರಳಿ ಬರುವುದರಲ್ಲೇ ಮಗು ಬಿದ್ದು ಗಾಯ ಮಾಡಿಕೊಂಡಿದ್ದನ್ನೆ ನೆಪವಾಗಿಸಿಕೊಂಡು, ಶಾಂತಮ್ಮ ಅವಳಿಗೆ ಮಕ್ಕಳಾಗದಿರುವುದೇ ಈ ಅಲಕ್ಷಕ್ಕೆ ಕಾರಣವೆಂದು ಹಂಗಿಸಿ ಆಡಿದ್ದನ್ನು ಕೇಳಿ, ನೊಂದ ಜಯಾ ಹಿತ್ತಲಿಗೆ ಹೋಗಿ ಅಳುತ್ತಿರುವಾಗ ಒಂದೆಯ ಬಂದ ಕಾಂತಯ್ಯ ತಾನು ಅವಳ ಬಂಜೆತನವನ್ನು ನೀಗಿಸುವುದಾಗಿ ಹೇಳಿ ಗಾಯದ ಮೇಲೆ ಬರೆ ಎಳೆಯುತ್ತಾನೆ. ಗಂಡು ಪರಿಸ್ಥಿತಿಯ ಲಾಭ ಪಡೆಯಲು ಸದಾ ಸಿದ್ಧ ಎಂಬಂತೆ ವರ್ತಿಸುತ್ತಾನೆ ಕಾಂತಯ್ಯ. ಬಂಜೆತನ ಒಂದು ದೊಡ್ಡ ಸಮಸ್ಯೆಯಾಗಿ ಅವಳ ಜೀವನವನ್ನು ಆವರಿಸುತ್ತದೆ. ತಾಯ್ತನ ಅವಳ ಬಯಕೆ ಹೌದೊ ಅಲ್ಲವೋ, ಆದರೆ ಅದನ್ನು ಅವಳ ಮೇಲೆ ಹೇರಲಾಗುತ್ತದೆ. ಹೆಣ್ಣಿನ ಜೀವನ ಪರಿಪೂರ್ಣವಾಗುವುದು ತಾಯ್ತನದಿಂದಲೇ ಎಂದು ಅವಳೂ ನಂಬಿ ಹಲುಬುವಂತೆ ಮಾಡಲಾಗುತ್ತದೆ.

ವಿವಾಹವಾದ ಬಳಿಕ ಮಕ್ಕಳಾಗುವಲ್ಲಿ ವಿಳಂಬವಾದರೆ ಹೆಣ್ಣು ಹತ್ತಾರು ಮಾತು ಕೇಳಬೇಕಾಗುತ್ತದೆ. ಅವಮಾನ ಸಹಿಸಬೇಕಾಗುತ್ತದೆ. ಇಲ್ಲದ ಆರೋಪ ಹೊರಬೇಕಾಗುತ್ತದೆ. ಅವಳು ಗಳಿಗೆ ಮರೆತರೂ ಸಮಾಜ ಮತ್ತೆ ಮತ್ತೆ ಅವಳ ಕೊರತೆಯನ್ನು ಎತ್ತಿ ಹೇಳಿ ಅವಳನ್ನು ಕೊರಗುವಂತೆ ಮಾಡುತ್ತದೆ. ಗಂಡಿನ ದೋಷವಿದ್ದಾಗಲೂ ಹೆಣ್ಣೆ ಹೊಣೆ ಎಂಬಂಥ ವರ್ತನೆ ವ್ಯವಸ್ಥೆಯಲ್ಲಿ ನೆಲೆಗೊಂಡಿದೆ. ಇಂಥ ಸಂದರ್ಭಗಳಲ್ಲಿ ಅನೇಕ ಮಹಿಳೆಯರು ತಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸಲೊಪ್ಪದೆ ಒಳದಾರಿಯ ವಿವಾಹ ಬಾಹಿರ ಸಂಬಂಧದಲ್ಲಿ ಮಕ್ಕಳನ್ನು ಪಡೆದು ತಾವು ಬಂಜೆಯರಲ್ಲ ಎಂದು ಸಾಬೀತು ಮಾಡುತ್ತಾರೆ. ರಹಸ್ಯ ತಿಳಿಯದಿದ್ದರೆ ನಡೆದು ಹೋಗುತ್ತದೆ. ಕೆಲವೊಮ್ಮೆ ರಹಸ್ಯ ಬಯಲಾದಾಗ ಸಮಾಜ ಜಾಣಗುರುಡನ್ನು ತೋರುತ್ತದೆ. ಮತ್ತೆ ಕೆಲವು ಪ್ರಸಂಗಗಳಲ್ಲಿ ಮಹಿಳೆ ಘೋರವಾಗಿ ಶಿಕ್ಷಿಸಲ್ಪಟ್ಟ ಉದಾಹರಣೆಗಳು ಕಥನ ಸಾಹಿತ್ಯದಲ್ಲಿ ಪ್ರಸ್ತಾಪಿಸಲ್ಪಟ್ಟಿವೆ.

೪.೩.೧೦ ಲೈಂಗಿಕ ಬದುಕು :

ಜೀವಿಯೊಂದರ ಜೀವಂತಿಕೆಗೆ ಗಾಳಿ. ನೀರು. ಆಹಾರಗಳು ಅತ್ಯಂತ ಅವಶ್ಯ. ಇವುಗಳಷ್ಟೆ ಅಗತ್ಯವಾದುದು ಮೈಥುನ. ಇದರ ಅಲಭ್ಯತೆ ಜೀವಿಯ ಪ್ರಾಣವನ್ನೇನೂ ತೆಗೆಯದಾದರೂ, ಚಡಪಡಿಸುವಂತೆ ಮಾಡುತ್ತದೆ. ಸಂತಾನ ಮುಂದುವರಿಕೆಗಾಗಿ ಈ ಚಡಪಡಿಕೆಯನ್ನು ನಿಸರ್ಗವೇ ಹುಟ್ಟುಹಾಕಿದೆ. ಮೈಥುನದಲ್ಲಿ ಹೆಣ್ಣು-ಗಂಡುಗಳು ಭಾಗವಹಿಸುತ್ತಾರೆ. ಈ ಪ್ರಕ್ರಿಯೆಗಾಗಿಯೆ ಜೀವಿಗಳಲ್ಲಿ ಹೆಣ್ಣು ಗಂಡು ಎಂಬ ಲಿಂಗ ವೈವಿಧ್ಯವನ್ನು ನಿಸರ್ಗವು ಕಲ್ಪಿಸಿದ್ದು ಪರಸ್ಪರರಲ್ಲಿ ಆಕರ್ಷಣೆಯನ್ನು ಚಿತ್ತಿರುತ್ತದೆ. ಹೆಣ್ಣು-ಗಂಡುಗಳ ದೇಹರಚನೆಯಲ್ಲಿ ಉಳಿದಾವ ವ್ಯತ್ಯಾಸಗಳೂ ಇಲ್ಲವಾದರೂ ಜನನಾಂಗಗಳು ಮಾತ್ರ ಭಿನ್ನ ಸ್ವರೂಪವಾಗಿರುತ್ತವೆ. ಈ ಭಿನ್ನತೆಯೇ ಹೆಣ್ಣುಗಂಡುಗಳ ವಿಶಿಷ್ಟಸಾಮರ್ಥ್ಯವೂ, ಪರಸ್ಪರ ಆಕರ್ಷಣೆಯ ಕೇಂದ್ರವೂ ಆಗಿರುತ್ತದೆ. ಇದನ್ನೇ ಲೈಂಗಿಕತೆ ಎನ್ನಲಾಗುತ್ತದೆ. ಈ ಲೈಂಗಿಕತೆ ಸ್ವ ಸಂಪೂರ್ಣವಾದ ಅನುಭವವಲ್ಲ. ಭಿನ್ನ ಲಿಂಗಿಗಳಲ್ಲಿ ಪರಸ್ಪರವಾಗಿ ವಿನಿಮಯವಾಗುವ ಅನುಭವ. ಹಾಗಾಗಿ ಇಲ್ಲಿ ಪರಸ್ಪರ ಬಯಕೆ ಆಕರ್ಷಣೆಗಳು ಸಹಜ, ಕೆಲ ಜೀವಿಗಳಲ್ಲಿ ಇದು ಕೇವಲ ಸಂತಾನೋತ್ಪತ್ತಿಗೆ ಸೀಮಿತವಾಗಿದ್ದರೆ, ಮಾನವರಲ್ಲಿ ಅದರ ಹೊರತಾಗಿಯೂ ಈ ಬಯಕೆ ನಿರಂತರವಾಗಿರುತ್ತದೆ ಎಂಬ ಡಾ.ಎಚ್.ಎಸ್. ಶ್ರೀಮತಿಯವರ ವ್ಯಾಖ್ಯಾನವನ್ನಾಧರಿಸಿ ಮುಂದಿನ ಚರ್ಚೆ ಬೆಳೆಸಬಹುದಾಗಿದೆ.

ಹೀಗೆ ನಿರಂತರವಾಗಿರುವ ಈ ಬಯಕೆಯನ್ನು ತನ್ನಿಚ್ಚೆಯಂತೆ ಪಡೆಯುವ ಸ್ವಾತಂತ್ರ್ಯ ಮಾತ್ರ ಸಾಮಾಜದಲ್ಲಿ ಪುರುಷನದಾಗಿದೆ. ಈ ಬಯಕೆಯ ಪೂರ್ತಿಗೆ ಹೆಣ್ಣು ವಿವಾಹಿತಳಾಗಿರಬೇಕು. ವಿವಾಹರಹಿತ ಕಾಮ ಅವಳಿಗೆ ನಿಷಿದ್ದ. ಅಷ್ಟೇ ಅಲ್ಲ ವಿಧವೆಗೂ ನಿಷಿದ್ಧವೆ. ಹಾಗೆಂದು ವಿವಾಹ ಚೌಕಟ್ಟಿನಲ್ಲೂ ಅವಳಿಗೆ ಲೈಂಗಿಕ ತೃಪ್ತಿ ಸಿಕ್ಕೇ ಸಿಗುತ್ತದೆ ಎಂದೇನು ಇಲ್ಲ.ಎಷ್ಟೋ ವೇಳೆ ಲೈಂಗಿಕ ಸಾಮರ್ಥ್ಯವಿಲ್ಲದ ಗಂಡು ಅವಳಿಗೆ ಸಂಗಾತಿಯಾಗಿ ಸಿಗಬಹುದು. ಅಂಥ ಸಂಧರ್ಭಗಳಲ್ಲೂ ಹೆಣ್ಣು ಮೌನವಾಗಿ ಅವನೊಂದಿಗೆ ಹೊಂದಿಕೊಳ್ಳಬೇಕೆನ್ನುತ್ತದೆ ವ್ಯವಸ್ಥೆ. ಗಂಡಿಗೇನಾದರೂ ಇಂಥ ಸ್ಥಿತಿ ಉಂಟಾದರೆ ತಕ್ಷಣ ಸಾಮಾಜಿಕ ಸಹಾನುಭೂತಿ ಸಿದ್ಧವಾಗಿರುತ್ತದೆ. ಮತ್ತೊಂದು ವಿವಾಹ ನಡೆದು ಹೋಗುತ್ತದೆ.

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಹೆಣ್ಣಿನ ಲೈಂಗಿಕತೆಯ ಕುರಿತ ವಿವರಣೆ ಕೆಲವು ಕಥನಗಳಲ್ಲಿ ಕಂಡು ಬರುತ್ತದೆ. ಚಂದ್ರಕಾಂತ ಕುಸನೂರರ 'ಚರ್ಚಗೇಟ' ಕಾದಂಬರಿ ಹೆಣ್ಣಿನ ಲೈಂಗಿಕತೆಯನ್ನು ಕೇಂದ್ರವಾಗಿಸಿಕೊಂಡಿದೆ. ಈ ಕಾದಂಬರಿಯ ವಸುಂಧರೆ, ಗೀತಾ ನಾಗಭೂಷಣರ 'ಧುಮ್ಮಸ್ಸು' ಕಾದಂಬರಿಯ ಸೇಸಿ, ಚಿತ್ರ ಶೇಖರ ಕಂಠಿಯವರ 'ಅತೃಪ್ತೆ' ಕಥೆಯ ಸರಳಾ ವಿವಾಹಿತರಾದರೂ ಲೈಂಗಿಕ ಅನುಭವ ವಂಚಿತರಾಗಿ ನರಳುತ್ತಾರೆ.

ಚಿತ್ರಶೇಖರ ಕಂಠಿಯವರ 'ಅತೃಪ್ತೆ' ಕಥೆಯಲ್ಲಿ ಲೈಂಗಿಕ ತೃಪ್ತಿಯಿಂದ ವಂಚಿತಳಾದ ಸರಳಾಳ ಬದುಕು ಗಂಡನ ಹಲವು ದೌರ್ಬಲ್ಯಗಳಿಂದ ಘಾಸಿಗೊಳ್ಳುತ್ತದೆ. ಗಂಡು ಕೆಟ್ಟು ಹೋಗುತ್ತಿದ್ದಾನೆ ಎಂದು ತಿಳಿದಾಗ ಅವನ ಬಾಳನ್ನು ಸುಧಾರಿಸಲು ತಕ್ಷಣ ಅವನಿಗೊಂದು ಮದುವೆ ಮಾಡಲಾಗುತ್ತದೆ. ಅವನ ಬಾಳು ಸುಧಾರಿಸುತ್ತದೋ ಇಲ್ಲವೋ, ಆದರೆ ಅವನನ್ನು ಕಟ್ಟಿಕೊಂಡು ವಿವಾಹ ಸಂಸ್ಥೆ ಪ್ರವೇಶಿಸುವ ಹೆಣ್ಣಿನ ಬದುಕಂತು ನಿಶ್ಚಿತ ನರಕವಾಗುತ್ತದೆ. ತನ್ನ ದೌರ್ಬಲ್ಯಗಳನ್ನು ಒಪ್ಪಿಕೊಳ್ಳದ ಗಂಡು ಹೆಣ್ಣಿನ ಮೇಲೆ ನಾನಾ ರೀತಿಯ ದಬ್ಬಾಳಿಕೆ ದೌರ್ಜನ್ಯಕ್ಕೆ ತೊಡಗುತ್ತಾನೆ.

ಸೋಮಣ್ಣ ದುಡಿಯದ ಸೋಂಬೇರಿ. ದುಶ್ಚಟಗಳ ದಾಸ. ಲೈಂಗಿಕ ದುರ್ಬಲ. ಇಷ್ಟೆಲ್ಲ ದೌರ್ಬಲ್ಯಗಳಿದ್ದಾಗಲೂ ಹೆಂಡತಿಯನ್ನು ಆಳುವ ಗಂಡು ತಾನೆಂಬ ದುರಹಂಕಾರ. ಅವಳ ದುಡಿಮೆಯಲ್ಲೇ ಬದುಕುತ್ತಿದ್ದರೂ ಅವಳನ್ನು ನಿಯಂತ್ರಿಸಬೇಕೆಂಬ ಪುರಷಶಾಯಿಯನ್ನು ತಲೆಗೇರಿಸಿಕೊಂಡವ. ಅವಳು ಕೇಳಿದಷ್ಟು ಹಣ ಕೊಡದಿದ್ದರೆ ಕಳಂಕಿನಿ ಎಂದು ನಿಂದಿಸುವ ಅಧಮತನಕ್ಕೂ ಇಳಿಯುತ್ತಾನೆ. ತನ್ನ ಖರ್ಚಿಗೆ ಸಾಕಷ್ಟು ಹಣವನ್ನು ನೀಡಿ ಎಲ್ಲಿ ಬೇಕಾದರೂ ಹೋಗುವ ಸ್ವಾತಂತ್ರ್ಯ ಘೋಷಿಸುತ್ತಾನೆ.

ಇಂಥ ಸಂದರ್ಭದಲ್ಲಿ ಸರಳಾಳ ಮನಸ್ಸು ತನ್ನ ಸಹೋದ್ಯೋಗಿ ರಾಜನ್ ತನ್ನನ್ನು ಒಲಿಸಲು ಯತ್ನಿಸಿದ್ದನ್ನು ನೆನೆಸಿಕೊಳ್ಳುತ್ತದೆ. ಅವನ ಸ್ನೇಹಕ್ಕಾಗಿ ಒಂದು ಕ್ಷಣ ಹಂಬಲಿಸುತ್ತಾಳೆ. ಆದರೆ ಬಾಲ್ಯದಿಂದಲೂ ಅರೆದು ಕುಡಿಸಲಾದ ಹೆಣ್ಣುತನದ ನಿಯಮಗಳನ್ನು ಮೀರಲಾಗದ ಗೊಂದಲದಲ್ಲಿ ತೀರ್ಮಾನ ರಹಿತಳಾಗಿ ಉಳಿಯುವಂತೆ ಮಾಡುವಲ್ಲಿ ಪುರುಷ ಪ್ರಧಾನ ಆಲೋಚನೆಯಿಂದ ಬಿಡಿಸಿಕೊಳ್ಳದ ಲೇಖಕರ ಮನಸ್ಥಿತಿ ವ್ಯಕ್ತವಾಗುತ್ತದೆ. ಆರ್ಥಿಕ ಅವಲಂಬಿಯಲ್ಲದ, ಆದರೂ ಪುರುಷ ದಬ್ಬಾಳಿಕೆಯಿಂದ ಬಿಡಿಸಿಕೊಳ್ಳಲಾಗದ ಸರಳಾಳ ಪಾತ್ರ ಯಥಾಸ್ಥಿತಿಯನ್ನು ಮಾತ್ರ ಬಿಂಬಿಸುತ್ತದೆ.

ಚಂದ್ರಕಾಂತ ಕುಸನೂರರ 'ಚರ್ಚ್‌ಗೇಟು' ವಸುಂಧರೆಯ ಲೈಂಗಿಕ ಚಡಪಡಿಕೆ ಹಾಗೂ ಅದನ್ನು ಮೀರಲಾಗದ ನೈತಿಕ ಪ್ರಜ್ಞೆಯನ್ನು, ಸಂಘರ್ಷವನ್ನು ಅನನ್ಯವಾಗಿ ಚಿತ್ರಿಸುತ್ತದೆ. ವಸುಂಧರೆ ಓದಿನಲ್ಲಿ ಜಾಣೆಯಾದರೂ, ತಂದೆಯ ಅಕಾಲಿಕ ಮರಣದಿಂದ ಔಷಧ ಅಂಗಡಿಯೊಂದರಲ್ಲಿ ಸೇಲ್ಸ್‌ಗರ್ಲ ಆಗಿ ಕೆಲಸಕ್ಕೆ ಸೇರಬೇಕಾಗಿ ಬರುತ್ತದೆ. ತಾಯಿಯ ಅನಾರೋಗ್ಯದ ಕಾರಣ ಬೇಗ ಮದುವೆ ಮಾಡಿಸುವಲ್ಲಿ ಸಂಗಾತಿಯಾದವನು ಪುರುಷತ್ವಹೀನ ತ್ರಿಲೋಕ. ಇಲ್ಲಿ ಅವನ ಲೈಂಗಿಕ ದೌರ್ಬಲ್ಯವನ್ನು ಸತ್ತ ಇಲಿಗೆ ಹೋಲಿಸಲಾಗಿದೆ. ಅಂಗಡಿಗೆ ಔಷಧಿಗಳನ್ನು ವಿತರಿಸಲು ಬರುವ ಮೆಡಿಕಲ್ ರಿಪ್ರೆಜೆಂಟೇಟಿವ್ ರಮೇಶನತ್ತ ವಸುಂಧರಾ ಆಕರ್ಷಿತಳಾಗುತ್ತಾಳೆ. ತ್ರಿಲೋಕ ಇದನ್ನು ತಿಳಿದೂ ತಿಳಿಯದಂತಿರುತ್ತಾನೆ. ಆದರೆ ಯಾವುದೇ ಸಂದರ್ಭದಲ್ಲಿ ಇಬ್ಬರೂ ಜಾರದಂತೆ ಎಚ್ಚರ ವಹಿಸುತ್ತಾರೆ. ಅವರ 'ನಡುವೆ ಬೆಳಕಿನ ಒಂದು ತುಂಡು ಬಿದ್ದಿತ್ತು'[೨೦] ಎಂದು ಹೇಳುವಲ್ಲಿ ಕಾದಂಬರಿ ವಿವಾಹಿತ ಸ್ತ್ರೀಯ ವಿವಾಹ ಬಾಹಿರ ಸಂಬಂಧವನ್ನು ಪ್ರಜ್ಞಾಪೂರ್ವಕವಾಗಿ ತಡೆಯುತ್ತದೆಂಬುದು ಸ್ಪಷ್ಟವಾಗುತ್ತದೆ. ಕಾದಂಬರಿಯ ತುಂಬ ಹಲವು ಅವಕಾಶಗಳು ಸೃಷ್ಟಿಯಾದಾಗಲೂ ಮೀರದಂತೆ ಶ್ರಮಿಸಿದ್ದರ ಹಿಂದೆ ಸಾಮಾಜಿಕ ನಿರೀಕ್ಷೆಯ ಪಾವಿತ್ರ್ಯವನ್ನೇ ಪಾವಿತ್ರ್ಯವಾಗಿ ಭಾವಿಸಿ, ಮಾನಸಿಕ ಸೆಳೆತವನ್ನು ಪ್ರಚೋದಿಸಲಾಗಿದೆ.

ಒಟ್ಟಾರೆ ಕಾದಂಬರಿಯ ನಿಲುವು ವಿವಾಹಿತ ಸ್ತ್ರೀ ಗಂಡ ಷಂಡನಾದರೂ ಅವನೊಂದಿಗೇ ಬದುಕಬೇಕೆನ್ನುವತ್ತ ವಾಲುತ್ತದೆ. ವಿವಾಹ ವ್ಯವಸ್ಥೆ ಹೆಣ್ಣಿಗೆ ವಿಧಿಸಿದ ಶೀಲ ಪಾವಿತ್ರ್ಯದ ಕಾರಣವಾಗಿ ವಸುಂಧರೆಯಂಥ ಎಷ್ಟೋ ಹೆಣ್ಣುಗಳು ಲೈಂಗಿಕ ಅನುಭವದಿಂದಲೇ ವಂಚಿತರಾಗಿ ಉಳಿಯಬೇಕಾಗುತ್ತದೆ. ವಿವಾಹ ಬಾಹಿರ ಸಂಬಂಧಕ್ಕೆಳಸಿದರೆ ವೇಶ್ಯ ಎನಿಸಿಕೊಳ್ಳಬೇಕು. ಹಾಗೆನಿಸಿಕೊಳ್ಳಲಿಚ್ಛಿಸದ ವಸುಂಧರೆ ಇಡೀ ಬದುಕು ಲೈಂಗಿಕ ಒತ್ತಡದಲ್ಲಿ ನರಳುತ್ತಾಳೆ. ವಿವಾಹ ಸಂಸ್ಥೆ ಮಹಿಳೆಗೆ ಎಸಗುವ ಅನ್ಯಾಯವನ್ನು ಕಾದಂಬರಿ ಸಮರ್ಥವಾಗಿ ನಿರೂಪಿಸಿದೆ.

'ನನಗೆ ತ್ರಿಲೋಕ ಬೇಡ. ಪುರುಷಬೇಕು. ತ್ರಿಲೋಕ ನನ್ನ ಗಂಡ ಹೌದು...... ಆದರೆ ಮಹಾನಗರದ ಶಾಪ ಬಡಿದಿರುವ ಗಂಡ I hate him ಎಂದು ಬಿಕ್ಕಳಿಸುವಲ್ಲಿ ವಸುಂಧರೆಯ ಮಾನಸಿಕ ತುಮುಲ ವ್ಯಕ್ತವಾಗುತ್ತದೆ.

ಸಾಮಾಜಿಕ ವ್ಯವಸ್ಥೆಗೆ ಮಹಿಳೆ ವಿವಾಹವಾಗುವುದು ಮುಖ್ಯವಾಗುತ್ತದೆ. ಅವಳ ವೈವಾಹಿಕ ಬದುಕು ವಾಸ್ತವವಾಗಿ ಅವಳಿಗೆ ನೆಮ್ಮದಿ ನೀಡಿದಿಯೇ ಎಂಬುದು ಮಹತ್ವದಲ್ಲ. ಗಂಡನ ಸುಪರ್ದಿಗೆ ಅವಳನ್ನು ಒಪ್ಪಿಸಿದರೆ ತನ್ನ ಜವಾಬ್ದಾರಿ ಕಳೆಯಿತು ಎಂದು ನಿರಾಳವಾಗುತ್ತದೆ. ಅವಳ ಸಮಸ್ಯೆಗಳಿಗೆ ಸ್ಪಂದಿಸುವುದಿಲ್ಲ, ಅವಳೇ ಪರಿಹಾರ ಕಂಡುಕೊಳ್ಳಲು ಅವಕಾಶವಿಲ್ಲ. ಹೆಣ್ಣುತನದ ಸಾಮಾಜೀಕರಣ ವಿವಾಹ ನಿಯಮಗಳನ್ನು ಮೀರದಂತೆ ನಿಯಂತ್ರಿಸುತ್ತದೆ. ಹೇಳಲಾಗದ ಅನುಭವಿಸಲಾಗದ ಡೋಲಾಯಮಾನ ಸ್ಥಿತಿಯಲ್ಲಿ ಮಹಿಳೆ ನರಳಬೇಕಾಗುತ್ತದೆ.

ಲೈಂಗಿಕ ಬಯಕೆ ಗಂಡು ಹೆಣ್ಣು ಇಬ್ಬರಲ್ಲೂ ಸಮಾನವಾಗಿಯೇ ಇರುತ್ತದೆ ದೇಹ ರಚನೆಯ ಭಿನ್ನತೆಯ ಪರಿಣಾಮ ಗಂಡಿನಲ್ಲಿ ಒಂದೆಡೆ ಕೇಂದ್ರಿಕರಣಗೊಂಡಿದ್ದರೆ ಹೆಣ್ಣಿನಲ್ಲದು ಹರಡಿಕೊಂಡಿರುತ್ತದೆ. 'ಲೈಂಗಿಕ ತೃಪ್ತಿಗೆ ಅವಳ ಇಡೀ ನರ ಮಂಡಲ ವ್ಯವಸ್ಥೆಯೇ ಸನ್ನದ್ಧವಾಗಬೇಕು. ಸ್ವತಃ ಆ ಹೆಣ್ಣು ಇಂಥಾ ಒಂದು ಅನುಭವಕ್ಕಾಗಿ ಮಾನಸಿಕವಾಗಿ ಸಿದ್ಧಳಾಗಿರಬೇಕು' ಆದರೆ ಎಷ್ಟೋ ವೇಳೆ ಹೆಣ್ಣು ಹಾಗೆ ಸಿದ್ಧಳಾಗುವ ಸಂದರ್ಭದಲ್ಲಿ ಪುರುಷ ಲೈಂಗಿಕ ಕ್ರಿಯೆಯನ್ನು ಪೂರ್ಣಗೊಳಿಸಿ ಹೊರಳುತ್ತಾನೆ. ಹೆಣ್ಣು ಅತೃಪ್ತಿಯಲ್ಲಿ ನರಳಬೇಕಾಗುತ್ತದೆ ಎಂಬುದನ್ನು ಗೀತಾ ನಾಗಭೂಷಣರ ಕಾದಂಬರಿ 'ಧುಮಸ್ಸು' ವಿನ ಸೇಸಿಯ ಪಾತ್ರ ಪ್ರತಿನಿಧಿಸುತ್ತದೆ.

ಮೈತುಂಬ ಹದವಾದ ನೋವು ನೀಡಿ ತನ್ನೆದೆಯ ಬೆಂಕಿಯನ್ನು ತಣಿಸಬೇಕು. ಎಂದು ಸೊಕ್ಕಿನಿಂದ ಕಾದು, ದ್ರವಿಸಲು ತಯಾರಾಗಿ ಹಪಹಪಿಸುತ್ತ ಸೆಟೆದು ನಿಂತ ಅವಳ ಮೈಯ ನರನಾಡಿಗಳೆಲ್ಲ ಏಕದಂ ಹಿಮ ನೀರೆರೆಚಿದಂತಾಗಿ ತಟಸ್ಥವಾಗಿ ಪ್ರಪಾತಕ್ಕೆ ಬಿದ್ದು ಬಿಕ್ಕಳಿಸುವಾಗ ಸೇಸಿಯ ಕಣ್ಣು ತುಂಬಿ ಬರುತ್ತದೆ. ಮೈಯಲ್ಲಿ ಬೆಂಕಿ ಹತ್ತಿ ಧಗ ಧಗನೆ ಉರಿಯುತ್ತಿರುವಾಗಲೇ ಮಗ್ಗುಲಲ್ಲಿ ಸೋತು ಒರಗಿ ನಿದ್ದೆಯ ತೆಕ್ಕೆಗಿಳಿಯುತ್ತಿದ್ದ ಗಂಡನನ್ನು ಒಡಿದು ಝಾಡಿಸಿ ಒದ್ದು ಆಚೆಗಟ್ಟಬೇಕು ಎನಿಸುತ್ತದೆ' (೧೪೫) ಎಂಬ ಸೇಸಿಯ ಮಾತು ವಿವಾಹವಾಗಿಯೂ ಲೈಂಗಿಕ ಅತೃಪ್ತಿಗೊಳಗಾಗಿ ನರಳುವ ಮಹಿಳೆಯರ ಹೇಳಲಾಗದ, ಅನುಭವಿಸಲಾಗದ ಸಂಕಟವನ್ನು ತೆರೆದಿಡುತ್ತದೆ. ವಿವಾಹ ಚೌಕಟ್ಟಿನಲ್ಲೇ ಮಹಿಳೆ ಲೈಂಗಿಕ ಕ್ರಿಯೆಗೆ ಒಳಪಡಬೇಕೆಂದು ವಿಧಿಸಲಾಗಿದ್ದು, ಅಲ್ಲಿಯೂ ಅವಳ ಬಯಕೆ ಪೂರ್ಣವಾಗದೆ ಇರುವುದೆ ಹೆಚ್ಚು. ಹಾಗಿದ್ದಾಗಲೂ ವಿವಾಹ ಬಾಹಿರ ಸಂಬಂಧ ಅವಳಿಗೆ ನಿಷಿದ್ಧ.

ವೈವಾಹಿಕ ಬದುಕಿನಲ್ಲಿ ಪ್ರವೇಶಿಸಿದ ಹೆಣ್ಣು ಮಕ್ಕಳು ಹೆರಲೇಬೇಕೆಂದು ನಿರೀಕ್ಷಿಸಲಾಗುತ್ತದೆ. ಗಂಡಿನ ದೋಷದಿಂದ ಮಕ್ಕಳಾಗದಿದ್ದಾಗಲೂ ಹೆಣ್ಣನ್ನೆ ಹೊಣೆಯಾಗಿಸಲಾಗುತ್ತದೆ. ಒಂದೆಡೆ ಹೆಣ್ಣು ನಿಸರ್ಗಸಹಜ ಲೈಂಗಿಕ ಜೀವನದಿಂದ ವಂಚಿತಳಾಗಿ ಬಳಲಬೇಕು. ಮತ್ತೊಂದೆಡೆ ಮಕ್ಕಳಾಗಲಿಲ್ಲವೆಂಬ ಕೊಂಕು ನುಡಿ. ಅಪವಾದಗಳಿಗೆ ಕಿವಿಗೊಡಬೇಕು. ಕೆಲವೊಮ್ಮೆ ಪುರುಷ ದೋಷವನ್ನು ಪರಿಗಣಿಸದೆ ಮತ್ತೊಂದು ಹೆಣ್ಣಿನೊಂದಿಗೆ ವಿವಾಹ ಏರ್ಪಟ್ಟು ಒಬ್ಬಳಲ್ಲದಂತೆ ಮತ್ತೊಬ್ಬಳು ಅಂಥದ್ದೇ ಸ್ಥಿತಿಗೆ ಕೊರಳೊಡ್ಡಬೇಕು. ಹೀಗೆ ಪುರುಷ

ಪ್ರಧಾನ ಸಮಾಜ ತನ್ನದಲ್ಲದ ತಪ್ಪಿಗೆ ಹೆಣ್ಣಿಗೆ ಶಿಕ್ಷೆಕೊಡುತ್ತ ಬಂದಿದೆ. ವಿವಾಹದ ಉದ್ದೇಶ ಹೆಣ್ಣು-ಗಂಡಿನ ಲೈಂಗಿಕತೆಗೆ ನೈತಿಕ ನೆಲೆಯನ್ನು ಒದಗಿಸುವುದೆಂದು ಹೇಳುತ್ತಲೇ ಹೆಣ್ಣಿನ ಲೈಂಗಿಕತೆಯನ್ನು ಗೌಣವಾಗಿಸಿ ಅವಳು ಹೇಗಿದ್ದರೂ ಆ ಗಂಡಿನೊಂದಿಗೇ ಬದುಕಬೇಕೆಂದು ವಿಧಿಸುತ್ತದೆ. ಇಂಥ ಸಾಮಾಜಿಕ ಸಾಂಸ್ಕೃತಿಕ ನಿಯಮಗಳು ಮಹಿಳೆಗೆ ಉರುಳಾಗಿ ಕಾಡುತ್ತವೆ. ಅಂಥ ಮಹಿಳೆಯ ಬದುಕು ಬರಡಾಗಬೇಕಾಗುತ್ತದೆ.

ಲೈಂಗಿಕ ಅನುಭವ ಪುರುಷರಿಗೆ ದೇಹಮೂಲದ್ದಾದರೆ, ಸ್ತ್ರೀಯರಿಗೆ ಮನೋಮೂಲದ್ದು. ಹೊರ ಪ್ರಪಂಚಕ್ಕೆ ಸದಾ ತೆರೆದುಕೊಂಡ ಪುರುಷನಿಗೆ ದೇಹದ ಬಯಕೆಯನ್ನು ತೀರಿಸುವ ಸಾಧನವಾಗಿ ಮಹಿಳೆಯನ್ನು ನೋಡಲಾಗುತ್ತದೆ. ಆದರೆ ಮನೆ, ಸಂಸಾರ, ಮಕ್ಕಳು ಇವನ್ನು ಏಕತ್ರಗೊಳಸಿ ಅಂತಿಮವಾಗಿ ಭಾವಿಸುವ ಮಹಿಳೆಗೆ ಪುರುಷನೊಂದಿಗಿನ ದೈಹಿಕ ಸಮಾಗಮ ಮನಸ್ಸಿಗೆ ಸಂಬಂಧಿಸಿದ್ದಾಗಿರುತ್ತದೆ. ಇದಕ್ಕೆ ಕಾರಣ ಅವಳ 'ಗೃಹಾಭಿಮುಖ ಜೀವನವೇ ಆಗಿದೆ' ದಾಂಪತ್ಯದ ಪರಿಣಾಮಗಳು ಮಹಿಳೆಯನ್ನು ಬಾಧಿಸುವಷ್ಟು ಪುರುಷನನ್ನು ಬಾಧಿಸಲಾರವು.

೪.೩.೧೧ ಅತ್ಯಾಚಾರ ದುರಾಕ್ರಮಣಕ್ಕೀಡಾದ ಬದುಕು :

ಲೈಂಗಿಕ ಅಪಚಾರಗಳಲ್ಲಿ ಅತ್ಯಾಚಾರವು ಅತಿ ಹೀನವಾದುದು. ಮಹಿಳೆಯ ಇಚ್ಛೆಗೆ ವಿರುದ್ಧವಾಗಿ ಅಥವಾ ಅವಳ ಒಪ್ಪಿಗೆಯಿಲ್ಲದೆ ಬಲಾತ್ಕಾರವಾಗಿ ಸಂಭೋಗಿಸುವುದಕ್ಕೆ ಅತ್ಯಾಚಾರವೆನ್ನಲಾಗುತ್ತದೆ. 'ಆಕ್ಸಫರ್ಡ ಇಂಗ್ಲೀಷ್ ನಿಘಂಟಿನ ಪ್ರಕಾರ ಅತ್ಯಾಚಾರ ಎಂದರೆ ಬಲಾತ್ಕಾರವಾಗಿ ಸ್ತ್ರೀಯನ್ನು ವಶಪಡಿಸಿಕೊಂಡು ಅಥವಾ ಅಪಹರಿಸಿಕೊಂಡು ಹೋಗಿ ಶೀಲಗೆಡಿಸುವುದು. ಜಾನ್ ಡ್ರಾಗ ಅವರು 'ಕಾಮುಕತೆಯಿಂದ ಸ್ತ್ರೀಯನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಸಂಭೋಗಿಸುವುದು ಅತ್ಯಾಚಾರವೆಂದರೆ ಬುದ್ಧಿಮಾಂಧ್ಯತೆ, ದಡ್ಡತನ ಅಥವಾ ಹುಚ್ಚುತನದಿಂದ ತನ್ನ ಒಪ್ಪಿಗೆಯನ್ನು ನೀಡಲಾರದ ಪರಿಸ್ಥಿತಿಯಲ್ಲಿರುವ ಸ್ತ್ರೀಯನ್ನು ಸಂಭೋಗಿಸುವುದನ್ನು ಅತ್ಯಾಚಾರ ಎಂದು ಅಮೇರಿಕದ ಸಂವಿಧಾನ ವಿವರಿಸುತ್ತದೆ'.[೭೬]

ದೇಹ ರಚನೆಯ ಮೂಲಕವೇ ಹೆಣ್ಣನ್ನು ಗುರುತಿಸುವುದು ಆ ದೇಹದ ಮೇಲೆ ಹಕ್ಕನ್ನು ಸ್ಥಾಪಿಸುವುದು ಯಾವಾಗ ಪಿತೃಪ್ರಧಾನ ವ್ಯವಸ್ಥೆಯ ಕೇಂದ್ರ ಆಶಯವಾಯಿತೋ ಅಂದೆ ಹೆಣ್ಣಿನ ಪಾವಿತ್ರ್ಯ ಹಾಗೂ ಪವಿತ್ರ ನಾಶದಂತಹ ಮೌಲ್ಯಗಳು ಈ ಸಮಾಜದಲ್ಲಿ ಸೇರಿಕೊಂಡಿವೆ. ಹಾಗಾಗಿಯೇ ಮಹಿಳೆಯ ಮಾನ ರಕ್ಷಣೆಯನ್ನು ಪುರುಷನ ಜೀವನ ಮೌಲ್ಯವಾಗಿ ಪ್ರತಿ ಪಾದಿಸುತ್ತಲೇ ಪುರುಷನ ದಿಗ್ವಿಜಯವೆಂಬುದನ್ನು ಸ್ತ್ರೀಯ ಮೇಲೆ ಹೊಂದುವ ಹಿಡಿತವಾಗಿಯೇ ಗುರುತಿಸಲಾಗಿದೆ. ಪರಸ್ಪರ ವಿರುದ್ಧವಾಗಿ ಕಾಣುವ ಈ ಎರಡು ಮೌಲ್ಯಗಳು ವಾಸ್ತವವಾಗಿ ಒಂದೆ ನಾಣ್ಯದ ಎರಡು ಮುಖಗಳು. ಹೆಣ್ಣಿಗೆ ನೀನು ಪವಿತ್ರಳಾಗಿಯೇ ಉಳಿಯಬೇಕೆಂದು ಒತ್ತಾಯಿಸುವುದು ಮತ್ತು ಅವಳನ್ನು ಅಪವಿತ್ರಗೊಳಿಸುವುದರಲ್ಲೇ ತನ್ನ ಪುರುಷಾರ್ಥ ಅಡಗಿದೆ ಎಂದು ಭಾವಿಸುವುದು ಪುರುಷ ಪ್ರಧಾನತೆಯ ಕಾರ್ಯ ತಂತ್ರವಾಗಿದೆ. ಈ ಉಪಶೀರ್ಷಿಕೆಯಲ್ಲಿ ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಮಹಿಳೆಯ ಬದುಕನ್ನು ಬವಣೆಯಾಗಿಸಿದ ಇಂಥ ಸಂಗತಿಯನ್ನು ಪರಿಶೀಲಿಸಲಾಗುವುದು.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಮಲ್ಲಿಕಾರ್ಜುನ ಹಿರೇಮಠರ 'ಹವನ' ಕಾದಂಬರಿಯ ಡುಗ್ಗಿಬಾಯಿ, ಚನ್ನಣ್ಣ ವಾಲಿಕಾರರ 'ಬೆಳ್ಳಿ' ಕಾದಂಬರಿಯ ಬಸಮ್ಮ, 'ಹುಲಿಗೆಮ್ಮ' ಕಾದಂಬರಿಯ ಹುಲಿಗೆಮ್ಮ, ಸೂಗಯ್ಯ ಹಿರೇಮಠರ 'ಹುತ್ತ' ಕಥೆಯ ಹಣಮಿ, 'ಸೇವೆ' ಕಥೆಯ ಚಾಂದಬಿ, ಲಾಲಬಿ, ಚಿತ್ರಶೇಖರ ಕಂಠಿಯವರ 'ಮಂಜವ್ವ ನಂಜು ಕಾರಿದಾಗ' 'ಕಥೆಯ ಸಾಮವ್ವ' 'ತನ್ನದಲ್ಲದ ಬದುಕು' ಕಥೆಯ ಸುನಂದಾ 'ಕಥೆಯಾದವಳು' ಕಥೆಯ ಪ್ರಿಭಾ, ಬಿ.ಟಿ. ಲಲಿತಾ ನಾಯಕರ 'ಲೂಟಿ' ಕಥೆಯ ರಾಮಿ, 'ಗತಿ' ಕಾದಂಬರಿಯ ಸೋನಿ ಅತ್ಯಾಚಾರಕ್ಕೆ ಗುರಿಯಾಗುತ್ತಾರೆ. ಇವರಲ್ಲಿ ಸೋನಿ ಮಾತ್ರ ಹೇಗೋ ತಪ್ಪಿಸಿಕೊಂಡರೆ ಉಳಿದವರೆಲ್ಲ ಅತ್ಯಾಚಾರಿಗಳ ಕ್ರೌರ್ಯಕ್ಕೆ ಬಲಿಯಾಗುತ್ತಾರೆ.

ಸಮಾಜ ವ್ಯವಸ್ಥೆಯಲ್ಲಿ ಮೇಲ್ವರ್ಗದವರು ತಮ್ಮ ಹಿತಾಸಕ್ತಿಗೆ ಕೆಳವರ್ಗದವರನ್ನು ಶೋಷಿಸುತ್ತ ಬಂದಿದ್ದಾರೆ. ಆರ್ಥಿಕ ಅವಲಂಬಿಗಳಾಗುವಂತೆ ಮಾಡಿದ್ದಾರೆ. ಅವರೂ ತಮ್ಮ ಅಜ್ಞಾನದ ಕಾರಣ ಹಾಗೆ ಬದುಕುತ್ತ ಬಂದಿದ್ದಾರೆ. ಕೆಲವೊಮ್ಮೆ ಅರಿವಿನ ಸಂದರ್ಭಗಳು ಎದುರಾಗಿ ಕೆಳವರ್ಗದವರು ಸುಧಾರಣೆಯ ದಾರಿ ತುಳಿದಾಗ ಮೇಲ್ವರ್ಗದವರ ಕೆಂಗಣ್ಣಿಗೆ ಗುರಿಯಾದುದನ್ನು ಅವರ ಮೇಲೆ ನಡೆದ ದಾಳಿಗಳಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆದುದನ್ನು ಮಲ್ಲಿಕಾರ್ಜುನ ಹಿರೇಮಠರ 'ಹವನ' ಕಾದಂಬರಿ ಚಿತ್ರಿಸುತ್ತದೆ.

ವರ್ಗ ಸಂಘರ್ಷ :

ಇಲ್ಲಿ ಲಂಬಾಣಿಗಳು ಸರಕಾರಿ ಗೋಮಾಳಗಳಲ್ಲಿ ಶ್ರಮವಹಿಸಿ ಬೆಳೆದು ಮೇಲ್ವರ್ಗದವರ ಜೀತಕ್ಕೆ ಸಿಕ್ಕದೆ ಹೋದಾಗ, ಕೆರಳಿದ ಅವರು ಅವರ ಹೆಣ್ಣು ಮಕ್ಕಳ ಮೇಲೆ ಅತ್ಯಚಾರವೆಸಗುವ, ಗುಡಿಸಲುಗಳನ್ನು ಸುಡುವ, ದನ ಕರುಗಳನ್ನು ಬಿಟ್ಟು ಅವರ ಹೊಲದ ಬೆಳೆ ಅವರಿಗೆ ದಕ್ಕದಂತೆ ಮಾಡುವ ಮೂಲಕ ಅವರ ಬದುಕನ್ನು ಅತಂತ್ರಗೊಳಿಸಿ, ಅವರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಹುನ್ನಾರ ನಡೆಸುತ್ತಾರೆ. ಇಂಥ ಸಂಧರ್ಭದಲ್ಲಿ ತಾಂಡಾದ ಡುಗ್ಗಿಬಾಯಿ, ರೂಪ್ಲಿಬಾಯಿ, ಲಾಲಿಬಾಯಿ ಇನ್ನಿತರ ಕೆಲವು ಮಹಿಳೆಯರು ಕೈಗೆ ಸಿಕ್ಕ ಬಡಿಗೆ ಒನಕೆ ಒಡಗಟಿಗಿ ಹಿಡಿದು ದಾಳಿಕೋರರನ್ನು ಎದುರಿಸುತ್ತಾರೆ. ಆದರೆ ದಾಳಿಕೋರರು ಡುಗ್ಗಿಬಾಯಿಯನ್ನು ಹೊತ್ತುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರವೆಸಗುತ್ತಾರೆ. ಮೇಲ್ವರ್ಗದಲ್ಲಾದರೆ ಅತ್ಯಾಚಾರಕ್ಕೊಳಗಾದವಳನ್ನು ಸಹಾನುಭೂತಿಯಿಂದ ನೋಡುವದು ವಿರಳ, ಆದರೆ ಕೆಳವರ್ಗದ ಲಂಬಾಣಿಗಳು ಡುಗ್ಗಿಬಾಯಿಯನ್ನು ಉಪಚರಿಸುವುದು ಅವರ ಮಾನವೀಯತೆಗೆ ಸಾಕ್ಷಿಯಾಗುತ್ತದೆ.

ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆ ಊಳಿಗಮಾನ್ಯಗಿದ್ದು ಕೆಳವರ್ಗದ ದುಡಿಯುವ ಜನರನ್ನು ಆರ್ಥಿಕವಾಗಿ ತನ್ನ ಹಿಡಿತಲ್ಲಿರಿಸಿಕೊಂಡಿದೆ. ಕಿತ್ತು ತಿನ್ನುವ ಬಡತನ, ಮೈದಣಿಯುವ ದುಡಿತ, ದಣಿವು ನೀಗಲು ಕುಡಿತ ಎಂಬಂಥ ಜೀವನದಲ್ಲಿ ಧಣಿಯ ಕಾಮತೃಷಗೆ ಬಲಿಯಾಗುವ ಮನೆಯ ಹೆಂಗಸರು. ಕೆಳವರ್ಗದ ಚಲುವೆಯರ ಮೇಲೆ ಲೈಂಗಿಕ ಆಕ್ರಮಣ ದಬ್ಬಾಳಿಕೆ ನಡೆಸುವ ಊರ ಗಂಡಸರು. ಇದನ್ನು ಕಂಡು ವಿರೋಧಿಸಲಾಗದ ದಲಿತರು. ಆರ್ಥಿಕ ಹೀನ ಸ್ಥಿತಿಗೆ ಕಾರಣವಾಗಿಯೆ ಇಂಥ ಬದುಕನ್ನು ಬದುಕುತ್ತಾರೆ ಎಂಬುದನ್ನು ಚನ್ನಣ್ಣ ವಾಲಿಕಾರರ 'ಬೆಳ್ಳಿ' ಮತ್ತು 'ಹುಲಿಗೆಮ್ಮ' ಕಾದಂಬರಿಗಳು ಪ್ರತಿನಿಧಿಸುತ್ತವೆ.

ವಿವಾಹಿತೆಗೂ ವಿನಾಯಿತಿ ಇಲ್ಲ :

ಚನ್ನಣ್ಣ ವಾಲಿಕಾರರ 'ಬೆಳ್ಳ' ಕಾದಂಬರಿಯಲ್ಲಿ ವಿವಾಹಿತಳಾದ ಬಸಮ್ಮಳನ್ನು ಸಂಗ್ಯಾ ಬಲಾತ್ಕರಿಸುತ್ತಾನೆ. ಬೆಳ್ಳಿಯನ್ನು ಅನುಭವಿಸುವ ಕುತಂತ್ರದಿಂದಲೇ ಊರ ಜಗಳದಲ್ಲಿ ಬೆಳ್ಳನ ಹೆಸರು ಸೇರಿಸಿ ಜೈಲಿಗೆ ಕಳಿಸುತ್ತಾನೆ. ಬೆಳ್ಳನ ಗೈರು ಹಾಜರಿಯಲ್ಲಿ ಹೆದರಿಸಿ ಬಸಮ್ಮನನ್ನು ವಶಪಡಿಸಿಕೊಳ್ಳುತ್ತಾನೆ. ಸಂಗ್ಯನನ್ನು ಎದುರಿಸುವ ಮನೋಬಲವಿಲ್ಲದ ಬಸಮ್ಮ ನಿರಂತರ ಲೈಂಗಿಕ ಶೋಷಣೆಗೆ ಈಡಾಗುತ್ತಾಳೆ. ಶೀಲ ಕಳೆದುಕೊಂಡು ಬದುಕಲಾಗದೆ, ಅತ್ಮಹತ್ಯೆಗೆ ಎಳಸಿದರೂ ತನ್ನ ಸಾವು 'ಕೊಲೆ' ಎಂದಾಗಿ ಬೆಳ್ಳ ಶಾಶ್ವತವಾಗಿ ಜೈಲು ಸೇರುವುದು ಬೇಡವೆಂದು ಬಿಡುತ್ತಾಳೆ. ಯಾರೂ ಇಲ್ಲದ ಬೆಳ್ಳ ಅನಾಥನಾಗಬಾರದೆಂದು ಚಿಂತಿಸುತ್ತಾಳೆ. ಇಲ್ಲಿ ಬಸಮ್ಮ ತನ್ನ ಬದುಕು ಹಾಳಾದರೂ ಗಂಡನ ಬದುಕಿಗಾಗಿ ಮಿಡಿಯುತ್ತಾಳೆ. ಹೆಣ್ಣಿನ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳುವ ಗಂಡು ಅವಳ ಜೀವನವನ್ನು ನರಕವಾಗಿಸುತ್ತಾನೆ. ಸಂಗ್ಯ ಮತ್ತು ಊರಗೌಡ ತನ್ನ ಹೆಂಡತಿಯ ಮೇಲೆ ಅತ್ಯಾಚಾರವೆಸಗಿದ್ದನ್ನು ಅರಿತೂ, ಅವಳ ಅಸಹಾಯ ಸ್ಥಿತಿಯನ್ನು ಮನಗಂಡ ಬೆಳ್ಳ ಅವಳೊಂದಿಗೆ ಬದುಕಲು ನಿರ್ಧರಿಸುತ್ತಾನೆ. ಲೈಂಗಿಕವಾಗಿ ತಾನು ಮೀರುವುದು ತಪ್ಪಲ್ಲವಾದರೆ ಅವಳದೂ ತಪ್ಪಲ್ಲವೆಂದು ಯೋಚಿಸುವುದು ಸಮಾನ ನೆಲೆಯ ಚಿಂತನೆಯಾಗಿ ಕಾಣುತ್ತದೆ.

ಅತ್ಯಾಚಾರದಂಥ ಸಂದರ್ಭಕ್ಕೆ ಗಂಡೇ ಕಾರಣನಾದರೂ ಅಪರಾಧಿ ಭಾವಕ್ಕೊಳಗಾಗಿ ನರಳುವವಳು, ಸಾಮಾಜಿಕ ಅವಹೇಳನಕ್ಕೆ ಗುರಿಯಾಗುವವಳು ಹೆಣ್ಣು.

ಹೆಣ್ಣಿಗೆ ಶೀಲವೇ ಸರ್ವಸ್ವವೆಂದು ನಂಬಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಶೀಲ ಶಂಕಿಸಿ ಅಗಸನೊಬ್ಬನ ಮಾತಿಗೆ ಅಡವಿ ಪಾಲಾದ ಸೀತೆಯ ಆದರ್ಶವನ್ನೇ ಸಾರುತ್ತಾ ಬರಲಾಗಿದೆ. ಇದಕ್ಕೆ ಹೊರತಾದ ಅಂಶಗಳು ಅದೇ ವ್ಯವಸ್ಥೆಯಲ್ಲಿಯೇ ಕಾಣಿಸಿಕೊಳ್ಳುತ್ತವೆ. ಅಂತಹ ಸಂದರ್ಭಗಳಲ್ಲಿ ಪುರುಷ ವಾಸ್ತವದ ನೆಲೆಯಲ್ಲಿ ಚಿಂತಿಸುವುದರ ಮೂಲಕ ನಿರಪರಾಧಿಯಾದ ಮಹಿಳೆಯ ಕುರಿತು ಸಹಾನುಭೂತಿ ಪರನಾಗುತ್ತಾನೆ.

ವಾಲಿಕಾರರ 'ಹುಲಿಗೆಮ್ಮ' ಕಾದಂಬರಿಯೂ ಹೆಣ್ಣು ವಿವಾಹ ಪೂರ್ವ ಹಾಗೂ ವಿವಾಹಾ ನಂತರ ಲೈಂಗಿಕ ದಾಳಿಗೆ ಒಳಪಡುವುದನ್ನೇ ಚಿತ್ರಿಸುತ್ತದೆ. ಹುಲಿಗೆಮ್ಮನನ್ನು ವಿವಾಹವಾಗುವುದಾಗಿ ನಂಬಿಸುವ ಸಿದ್ಧರೆಡ್ಡಿ ಅವಳನ್ನು ಗರ್ಭಿಣಿಯಾಗಿಸಿ ಕೈ ಬಿಡುತ್ತಾನೆ. ಮದುವೆಯಾದ ಭೀಮನ ಹೆಸರಲ್ಲಿ ರಾಮಣ್ಣ ಹಾಸಿಗೆಗೆ ಬರುವುದು, ಇದರಿಂದ ಪಾರಾಗಲು ಊರು ತೊರೆದು ಹೊರಟರೆ ಸಾವುಕಾರ ಶಾಮಣ್ಣ ವಂಚಿಸಿ ತಂದಿಟ್ಟುಕೊಳ್ಳುವುದು, ಸಾವುಕಾರ ಶಾಮರಾಯನನ್ನು ಕೊಲ್ಲಿಸಿ ಶೇಷಪ್ಪ ಕುಲಕರ್ಣಿ ಅವಳನ್ನು ಹೊತ್ತು ತರುವುದು, ಕುಲಕರ್ಣಿಯನ್ನು ಜೈಲಿಗೆ ಕಳಿಸಿ ಧರೆಪ್ಪಗೌಡ ಅವಳನ್ನು ಕರೆತರುವುದು ಹೀಗೆ ನಿರಂತರ ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಬದಲಾಗುತ್ತ ಬಳಕೆಯಾಗುತ್ತದೆ ಹುಲಿಗಿಯ ಬದುಕು. ಸೌಂದರ್ಯವೆ ಕಾರಣವಾಗಿ ಅವಳು ಹಲವು ಗಂಡುಗಳ ಭೋಗವಸ್ತುವಾಗುತ್ತಾಳೆ. ಷಂಡ ಗಂಡ ತನ್ನ ಹೊಟ್ಟೆ ತುಂಬಿದರೆ ಸಾಕೆಂದು ಹುಲಿಗಿಯನ್ನು ಹೊತ್ತೊಯ್ದವರಲ್ಲಿ ಉಂಡುಟ್ಟು ಹಾಯಾಗಿರುತ್ತಾನೆ.

ಹುಲಿಗಿಯನ್ನು ಲೈಂಗಿಕವಾಗಿ ಬಳಸಿಕೊಳ್ಳುವ ಎಲ್ಲ ಗಂಡಸರು ಅವಳ ಹೊಟ್ಟೆ ಬಟ್ಟೆ ನೋಡಿಕೊಂಡು ಒಂದಷ್ಟು ಆಭರಣ ಮಾಡಿಸಿಕೊಟ್ಟರೆ ತೀರಿತು. ಅವಳು ಸುಖವಾಗಿರುತ್ತಾಳೆಂದೇ ಯೋಚಿಸುತ್ತಾರೆ. ಊಳಿಗ

ಮಾನ್ಯತೆಯಲ್ಲಿ ಕೆಳವರ್ಗದ ಮಹಿಳೆ ಮೇಲ್‌ವರ್ಗದ ಯಾರೊಬ್ಬರ ಸ್ವತ್ತು ಎಂಬಂತೆ ಇಲ್ಲಿಯ ಪುರುಷ ನಡವಳಿಕೆ ಚಿತ್ರಣಗೊಂಡಿದೆ. ತನ್ನ ಮನಸ್ಸಿನ ವಿರುದ್ಧ ಲೈಂಗಿಕ ಶೋಷಣೆ ನಡೆಯುತ್ತಿದ್ದರೂ ಇದನ್ನೊಂದು ಆಘಾತವಾಗಿಸಿಕೊಳ್ಳದೆ, ಒದಗಿದ ಒಂದು ಅವಕಾಶದಲ್ಲಿ ಗೌಡನ ಆಳು ಕಾಳ್ಯಾನನ್ನು ಮನಸಾರೆ ಪ್ರೀತಿಸುತ್ತಿದ್ದ ಹುಲಿಗೆಮ್ಮ ಅವನೊಂದಿಗೆ ಓಡಿ ಹೋಗಿ ಹೊಸ ಬದುಕನ್ನು ಆರಂಭಿಸುತ್ತಾಳೆ. ಸಹಿಸದ ಗೌಡ ಕಾಳ್ಯನನ್ನು ಕೊಲ್ಲಿಸುತ್ತಾನೆ. ಹುಲಿಗೆಮ್ಮ ಅನಿವಾರ್ಯವಾಗಿ ವೇಶ್ಯಾವೃತ್ತಿಗಿಳಿಯುತ್ತಾಳೆ.

ಹೀಗೆ ವಿವಾಹ ಪೂರ್ವ ಹಾಗೂ ವಿವಾಹ ನಂತರದ ಬದುಕೆಲ್ಲ ಹುಲಿಗೆಮ್ಮನ ಆಯ್ಕೆಯದಾಗದೆ ಪುರುಷ ದಬ್ಬಾಳಿಕೆಯಲ್ಲಿ ನಲುಗುತ್ತದೆ. ಇವಳ ಬದುಕಿನ ದಾರುಣತೆಯನ್ನು ನಿವಾರಿಸಲು ವಾಲಿಕಾರರು ಅವಳ ಬದುಕಿನ ಅಧ್ಯಯನಕ್ಕೆ ಬಂದ ಯುವಕ ಚಂದ್ರುನೊಂದಿಗೆ ಅವಳ ವಿವಾಹವಾಗುವಂತೆ ಮಾಡುವುದು ಮಾನವೀಯ ಸ್ಪಂದನವಾಗಿ ತೋರಿದರೂ ಸಾಮಾಜಿಕ ಬದುಕಿನಲ್ಲಿ ಅದೊಂದು ಅಸಾಧ್ಯದ ಮಾತೇ ಸರಿ. ಹಾಗಾಗಬೇಕೆಂಬುದು ಕಾದಂಬರಿಯ ಆಶಯವಾಗಿ ಪ್ರತಿನಿಧಿಸುತ್ತದೆ.

ವಾಲಿಕಾರರ ಎರಡೂ ಕಾದಂಬರಿಗಳಲ್ಲಿ ಬರುವ ಬಸಮ್ಮ ಮತ್ತು ಹುಲಿಗೆಮ್ಮರು ಬದುಕನ್ನು ಬಂದಂತೆ ಸ್ವೀಕರಿಸುವ, ಹರಿದತ್ತ ಹರಿಯುವ, ಎಸೆದತ್ತ ಬೀಳುವ ಸ್ವಂತಿಕೆಯಾಗಲಿ, ಇಚ್ಛಾಶಕ್ತಿಯಾಗಲಿ, ಇಲ್ಲದ ತೀರ ದುರ್ಬಲ ಪಾತ್ರಗಳಾಗಿ ಚಿತ್ರಿಸಲ್ಪಟ್ಟಿದ್ದಾರೆ. ಇವರು ತಾವಾಗಿ ಯಾವ ಅಪರಾಧವನ್ನು ಮಾಡದಿದ್ದರೂ ಸೂಕ್ಷ್ಮವಾಗಿ ಅವರೆ ಅಪರಾಧಿಗಳೆಂಬಂತೆ, ಸ್ತ್ರೀ-ಪುರುಷ ಶೀಲದ ನೈತಿಕ ಚರ್ಚೆಯನ್ನು ಬಹು ಎಚ್ಚರದಿಂದ ಸಮಾನ ನೆಲೆಯಲ್ಲಿ ನಿರ್ವಹಿಸಿರುವಂತೆ ಕಂಡರೂ ಬೆಳ್ಯ ಮತ್ತು ಚಂದ್ರುರನ್ನು ಉದಾತ್ತೀಕರಿಸಲಾಗಿದೆ.

ಅರಕ್ಷಿತ ಸ್ಥಾನ :

ಪಿತೃ ಸಂಸ್ಕೃತಿಯಲ್ಲಿ ಪುರುಷ ಲೈಂಗಿಕತೆಗೆ ಹೆಚ್ಚು ಮಹತ್ವವಿತ್ತಿರುವುದರಿಂದ ಅದರ ಪೂರ್ತಿಗಾಗಿ ಹತ್ತು ಹಲವು ಹುನ್ನಾರಗಳನ್ನು ರೂಪಿಸುತ್ತಾ ಬರಲಾಗಿದೆ. ಮಹಿಳೆ ಗೃಹಬಂಧಿಯಾಗಲು ಪುರುಷನ ಇಂಥ ಆಕ್ರಾಮಕ ಪ್ರವೃತ್ತಿ ಕಾರಣವಾಗಿದೆ. ನಿತ್ಯಾವರ್ತನದ ಅವಶ್ಯಕ ಕೆಲಸಗಳಿಗಾಗಿ ಅಂದರೆ ಬಟ್ಟೆ ಒಗೆಯಲು ಹಳ್ಳ ಬಾವಿಗಳಿಗೆ ಹೋಗುವ, ಬಯಲು ಕಡೆ ಹೋಗುವ, ದುಡಿಮೆಗೆಂದು ಹೊಲಕ್ಕೆ ಹೋಗುವ, ಯಾವ ತಾಣಗಳೂ ಮಹಿಳೆಗೆ ಸುರಕ್ಷಿತವಾಗಿಲ್ಲ. ಆಯಾ ಸ್ಥಾನಗಳಲ್ಲಿ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತದೆ. ಇಂಥ ರಹಸ್ಯಗಳು ಬಯಲಾಗದಂತೆ ಕಟ್ಟೆಚ್ಚರ ವಹಿಸಲಾಗುತ್ತದೆ.

ಸೂಗಯ್ಯ ಹಿರೇಮಠರ 'ಹುತ್ತ' ಹಾಗೂ 'ಸೇವೆ' ಕಥೆಗಳು ಪುರುಷ ಲೋಲುಪತೆಗೆ ಬಲಿಯಾಗುವ ಮಹಿಳೆಯ ಬದುಕನ್ನು ಕುರಿತು ವಿವರಿಸುತ್ತದೆ. ಮೇಲುವರ್ಗದ ರಾಮರಾಯ (ಸೇವೆ) ಕೆಳವರ್ಗದ ಬಸಕ್ಕನ ಮಗಳು ಹಣಮಿಯನ್ನು ಅಪಹರಿಸಿಕೊಂಡು ಹೋಗಿ ಅತ್ಯಾಚಾರವೆಸಗಿದಾಗ ಅವಳು ಇರಿದುಕೊಂಡು ಸಾಯುತ್ತಾಳೆ.

ಹುತ್ತ ಕಥೆಯಲ್ಲಿ ಲಚಮಣಗೌಡ ತನ್ನ ಅಪರಾಧಗಳನ್ನು ಮರೆಮಾಚಲು ಹಾವಿನ ಕಥೆಯನ್ನು ಹಬ್ಬಿಸುತ್ತಾನೆ. ತನ್ನಿಂದ ಅತ್ಯಾಚಾರಕ್ಕೊಳಗಾದ ಲಾಲಬಿ, ಚಾಂದನಿಯರು ಹಾವು ಕಡಿತದಿಂದ ಸತ್ತರೆಂದು ನಂಬಿಸಿ ಗೆಳೆಯ ಹುಸೇನಿಗೆ ಮೋಸ ಮಾಡುತ್ತಾನೆ. ಮೋಸದ ಸಂಚನ್ನರಿತ ಹುಸೇನಿ ಗೌಡನನ್ನು ಕೊಂದು ಜೈಲು ಸೇರುತ್ತಾನೆ.

ಈ ಎರಡು ಕಥೆಗಳ ಹಂದರ ಅಷ್ಟೇನೂ ಗಟ್ಟಿ ತಳಹದಿಯನ್ನು ಹೊಂದಿಲ್ಲವಾದರೂ ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯವನ್ನು ಹೇಳುವುದೆ ಕಥೆಗಳ ಉದ್ದೇಶವೆಂಬುದು ಸ್ಪಷ್ಟವಾಗುತ್ತದೆ. ಹಣಮಿಯ ಬದುಕು ನಾಶ ಮಾಡಿದ್ದರಿಂದಲೆ ತನ್ನ ಹಿರಿ ಮಗಳು ಶಕುಂತಲೆ ನೃತ್ಯಗಾತಿಯಾಗಿ ಆಧುನಿಕ ವೇಶ್ಯೆಯಾಗಬೇಕಾಯಿತೆನ್ನುವ ಪಾಪಪ್ರಜ್ಞೆಯಲ್ಲಿ ರಾಮರಾಯ ಕುಸಿಯುತ್ತಾನೆ. ತನ್ನ ಕ್ಷಣದ ಬಯಕೆಗೆ ಮಹಿಳೆಯ ಬದುಕನ್ನೇ ಬಲಿಯಾಗಿಸುವ ವ್ಯವಸ್ಥೆಯ ಕ್ರೌರ್ಯ ಅಮಾನವೀಯವಾದುದೆಂಬುದರ ಕಡೆಗೆ ಕಥೆಯ ಗಮನವಿದೆ. ಅಧಿಕಾರ ಹಾಗೂ ಹಣಬಲದಿಂದ ಮುಗ್ಧ ಮಹಿಳೆಯ ಬದುಕಿಗೆ ಮುಳುವಾಗುವ, ಮೇಲ್‌ಸ್ತರದ ಪುರುಷರು ಇದರ ಅರಿವಿದ್ದೂ ವಿರೋಧಿಸದ ಸುತ್ತಣ ಸಮಾಜ, ಅತ್ಯಾಚಾರಗಳ ನಿರಂತರತೆಗೆ ಕಾರಣರು ಎಂಬಂಶವನ್ನು ಎರಡು ಕಥೆಗಳು ಅನಾವರಣಗೊಳಿಸುತ್ತವೆ.

ಅಸಹಾಯಕತೆಯ ದುರ್ಬಳಕೆ :

ಚಿತ್ರಶೇಖರ ಕಂಠಿಯವರ 'ಮಂಜವ್ವ ನಂಜು ಕಾರಿದಾಗ' ಕಥೆ ಸಾಮವ್ವ ಹಾಗೂ ಮಂಜವ್ವರ ಮೇಲಿನ ಲೈಂಗಿಕ ಶೋಷಣೆಯನ್ನು ದಾಖಲಿಸುತ್ತದೆ. ದಲಿತ ಹೆಣ್ಣು ಸಾಮವ್ವ ಮೈಕೈ ತುಂಬಿಕೊಂಡಿದ್ದು ತನಗಾಗೆ ಎಂಬಂತೆ ಅನುಭವಿಸಿದ ಸೀನಪ್ಪನ ದೂರ್ತತೆಯನ್ನು ಗಂಡನಿಗೆ ಹೇಳುತ್ತಾಳೆ. ಜೀತದಿಂದಾಗಿ ಸೀನಪ್ಪನನ್ನೇ ಅವಲಂಬಿಸಿದ ಅವಳ ಗಂಡ ಸೀನಪ್ಪನ ಕೃತ್ಯಕ್ಕೆ ಕುಮ್ಮಕ್ಕು ಕೊಡದೆ, ಕೂಗಾಡದೆ ತಟಸ್ಥನಾಗುಳಿಯುತ್ತಾನೆ. ಒಂದು ದಿನ ಭಾವಿ ತೋಡುವಾಗ ಮಣ್ಣು ಮೈ ಮೇಲೆ ಬಿದ್ದು ಅಸುನೀಗುತ್ತಾನೆ. ಬೆಳೆದು ನಿಂತ ಮಗಳು ಮಂಜಮ್ಮನ ಮದುವೆ ಕಣ್ತುಂಬ ನೋಡಬೇಕೆಂಬ ಆಸೆ ಹಾಗೆ ಉಳಿಯುತ್ತದೆ. ಸಾಮವ್ವ ಮಂಜವ್ವನಿಗೆ ಸೀನಪ್ಪನ ಕುರಿತು ಎಚ್ಚರದಿಂದಿರಲು ಹೇಳುತ್ತಿರುತ್ತಾಳೆ. ವಿಧವೆ ಸಾಮವ್ವನೂ ಕೊರಗಿ ಕೊರಗಿ ಸತ್ತಾಗ ಅವಳ ಶವ ಸಂಸ್ಕಾರಕ್ಕೆ ಹಣ ಕೊಡುವ ಸೀನಪ್ಪ ಮಂಜಮ್ಮ ಮರುದಿನ ಮೈ ಒಪ್ಪಿಸಬೇಕೆಂಬ ಕರಾರು ಹಾಕಿರುತ್ತಾನೆ. ವಾಸ್ತವವಾಗಿ ಮಂಜಮ್ಮ ಅವನ ಮಗಳೇ ಆಗಿರುತ್ತಾಳೆ. ಮಂಜಮ್ಮ ಹೆಣದ ಮುಂದೆ ಗೋಳಾಡುತ್ತಿದ್ದರೆ 'ಹಸಿದ ಹದ್ದುಗಳು ಕಣ್ ಕಣ್ ಬಿಟ್ಟು ಅವಳ ಅಂಗಾಂಗ ನೋಡುತ್ತಿದ್ದವು'[೨೫] ಎಂಬ ಮಾತು ಬಡವರಿಗೆ ಬದುಕಿನ ಚಿಂತೆಯಾದರೆ, ಉಳ್ಳವರಿಗೆ ಕಾಮದ ಚಿಂತೆ ಎಂಬಂತೆ ಮೂಡಿ ಬಂದಿದೆ. ಬಡವರ ಅಸಹಾಯಕತೆಯನ್ನು ಬಳಸಿಕೊಳ್ಳುತ್ತಿರುವ ಸಾವುಕಾರನ ಸೊಕ್ಕು ಅಡಗಿಸಲು ಮಂಜಮ್ಮನ 'ಆಕ್ರೋಶ ಇಮ್ಮಡಿಗೊಂಡಿತ್ತು. ಅವಳ ಕೈಯಲ್ಲಿನ ಚೂರಿ ಅವನ ಬಡಕಲು ಎದೆಯನ್ನು ಸೀಳಿ ಹಾಕಿತ್ತು'[೨೬] ಹೀಗೆ ಬಾಳಿ ಬದುಕಬೇಕಾದ ಮಂಜಮ್ಮ ಕಾಮುಕ ಸೀನಪ್ಪನಿಂದಾಗಿ ಅಪರಾಧಿಯಾಗುವುದನ್ನು ಕಥೆ ಪ್ರತಿನಿಧಿಸುತ್ತದೆ. ಮಹಿಳಾ ಬದುಕು ಪುರುಷ ಸ್ವಾರ್ಥಕ್ಕೆ ಬಳಕೆಯಾದದ್ದೇ ಹೆಚ್ಚು. ಆ ಪುರುಷ ಅಣ್ಣ, ತಮ್ಮ, ತಂದೆ, ಗಂಡ ಯಾರೂ ಆಗಬಹುದು. ಅವನ ಕುಡಿತ, ಜೂಜು, ಸಾಲ, ಜೀವನದ ಉನ್ನತಿಗೆಲ್ಲ ಮಹಿಳೆಯನ್ನು ಯಾವ ನಿಯಮದ ಹಂಗಿಲ್ಲದಂತೆ ಹೊಸಕಲಾಗುತ್ತದೆ.

ಅಣ್ಣನ ಬದುಕಿಗೆ :

ಚಿತ್ರಶೇಖರ ಕಂಠಿಯವರ 'ತನ್ನದಲ್ಲದ ಬದುಕು' ಕಥೆಯ ಸುನಂದಾ ಬದುಕಿಡೀ ಅಣ್ಣ ತಮ್ಮ ತಂಗಿಯರಿಗಾಗೆ ಚಿಂತಿಸಬೇಕಾದ ಅನಿವಾರ್ಯತೆಯನ್ನು ಚಿತ್ರಿಸುತ್ತದೆ. ಅಣ್ಣನ ಪ್ರಮೋಷನ್‌ಗಾಗಿ ಸತೀಶನ ಅತ್ಯಾಚಾರಕ್ಕೆ ಬಲಿಯಾಗುತ್ತಾಳೆ. ಸುನಂದಾ ತಂದೆ ತಾಯಿಗಳಿಲ್ಲದ ಮನೆಯ ಹಿರಿ ಮಗಳು. ಅಣ್ಣನಿದ್ದರೂ

ಅತ್ತಿಗೆಯ ಕೈಗೊಂಬೆಯಾಗಿ ಉಳಿದವರ ಚಿಂತೆ ಮಾಡುವುದಿಲ್ಲ. ಮನೆಯವರೆಲ್ಲರ ಹೊತ್ತು ಹೊತ್ತಿನ ಬೇಡಿಕೆಗಳನ್ನು ಪೂರ್ಣಗೊಳಿಸುತ್ತ ಸುನಂದಾ ಸವೆಯುತ್ತಾಳೆ. ಹಿತೈಷಿ ಎಂದು ನಂಬಿದ ಚಿಕ್ಕಪ್ಪ ಕೆಲಸಕೊಡಿಸಿ ಇವಳಿಂದ ಐದು ಸಾವಿರ ರೂಪಾಯಿ ಸಾಲವೆಂದು ಪಡೆದು ಮುಳುಗಿಸುತ್ತಾನೆ. ಮನೆ ಕೆಲಸ ಆಫೀಸ್ ಕೆಲಸಗಳಲ್ಲಿ ಬಳಲುತ್ತಾಳೆ. ಆದರೂ ಯಾರೂ ಅರ್ಥಮಾಡಿಕೊಳ್ಳದೆ ನೊಂದುಕೊಳ್ಳುತ್ತಾಳೆ. ಅಣ್ಣ ತಾನು ಹಾಕಬೇಕೆಂದ ಪ್ರೆಸ್ಸಿಗೆ ಧನ ಸಹಾಯ ಮಾಡುವ ಸತೀಶನ ಇಚ್ಛೆ ಪೂರೈಸಲು ತಂಗಿಯನ್ನೇ ಒಪ್ಪಿಸುತ್ತಾನೆ. ಸತೀಶ ಕುಡಿದು ಬಂದು ಸುನಂದಾಳ ಮೇಲೆ ಅತ್ಯಾಚಾರವೆಸಗುತ್ತಾನೆ. ಹೀಗೆ ಕುಟುಂಬ ಸುನಂದಾಳ ಬದುಕನ್ನು ನರಕವಾಗಿಸುತ್ತದೆ. ಆದರೂ ಸುನಂದಾ ತಂಗಿಯ ಬಾಳನ್ನು ನೆಲೆ ಕಾಣಿಸಲು ತನ್ನನ್ನು ಪ್ರೀತಿಸುವ ಅರುಣನಲ್ಲಿ ಬೇಡಿಕೊಳ್ಳುತ್ತಾಳೆ. ಸ್ವಾರ್ಥಕ್ಕೆ ತನ್ನವರು ಪರರು ಎಂಬ ಭೇದವಿಲ್ಲ. ತನ್ನ ಲಾಭಕ್ಕೆ ತಂಗಿಯ ಶೀಲವನ್ನೇ ಬಲಿಕೊಡುವ ಅಣ್ಣನ ಚಿತ್ರಣವನ್ನು ಕಟ್ಟಿಕೊಡುತ್ತದೆ ಕಥೆ.

ಹೊಟ್ಟೆಪಾಡಿಗೆ :

ಲಂಬಾಣಿಯಂಥ ಬುಡಕಟ್ಟು ಮಹಿಳೆಯರು ಜೀವನದ ನಿರ್ವಹಣೆಗೆ ಕಾಡಿನ ಸಂಪನ್ಮೂಲಗಳನ್ನೇ ಅವಲಂಬಿಸಿದವರು. ಅವುಗಳ ಸಂಗ್ರಹಣೆಗೆಂದು ಕಾಡಿಗೆ ಹೋಗಬೇಕಾದ್ದದ್ದು ಅನಿವಾರ್ಯ. ಮಹಿಳೆಯರು ಹೆಚ್ಚಾಗಿ ಗುಂಪುಗೂಡಿಕೊಂಡೇ ಕೆಲಸಕ್ಕೆ ಹೊಗುತ್ತಾರೆ. ಆದರೆ ಕೆಲವೊಮ್ಮೆ ಕಾರಣಾಂತರಗಳಿಂದ ಒಂಟಿಯಾಗಿ ಹೋಗಬೇಕಾಗುತ್ತದೆ. ಹೀಗೆ ಒಂಟಿಯಾಗಿ ಹೋದವಳು ಸುರಕ್ಷಿತವಾಗಿ ಮರಳುತ್ತಾಳೆ ಎಂಬ ಭರವಸೆ ಇಲ್ಲ. ಕಾಮುಕರು ಇಂಥ ಸಮಯವನ್ನೇ ಸಾಧಿಸುತ್ತಿರುತ್ತಾರೆ. ಒಂಟಿ ಹೆಣ್ಣು ಅತ್ಯಾಚಾರಕ್ಕೆ ಗುರಿಯಾಗಬೇಕಾಗುತ್ತದೆ. ಲೈಂಗಿಕ ಆಕ್ರಮಣ ಎದುರಿಸಲು ಸಿದ್ಧಳಿಲ್ಲದ ಅಂಥ ಸಾಮರ್ಥ್ಯ ಬೆಳೆಸಿಕೊಳ್ಳದ ಹೆಣ್ಣು ಶೀಲದೊಂದಿಗೆ ಬದುಕಿನ ಆಧಾರವನ್ನು ಕಳೆದುಕೊಳ್ಳುತ್ತಾಳೆ.

ಬಿ.ಟಿ. ಲಲಿತಾ ನಾಯಕರ ಕಥೆ 'ಲೂಟಿ'ಯಲ್ಲಿ ರಾಮಿ ಅತ್ಯಾಚಾರಕ್ಕೊಳಗಾವುದಲ್ಲದೆ, ತನ್ನ ಕಾಲಲ್ಲಿದ್ದ ಬೆಳ್ಳಿಯ ಗೆಜ್ಜೆ ಮತ್ತು ಬದುಕಿನ ಆಧಾರವಾಗಿದ್ದ ಕೊಡಲಿಯನ್ನು ಕಳೆದುಕೊಳ್ಳುವ ಪರಿಸ್ಥಿತಿಯ ಚಿತ್ರಣವಿದೆ.

ರಾಮಿ ಐದು ಮಕ್ಕಳ ತಾಯಿ. ಗಂಡ ಅಪಘಾತದಲ್ಲಿ ಕಾಲು ಮುರಿದುಕೊಂಡು ಮನೆ ಸೇರಿದಾಗ, ಕುಟುಂಬದ ನೊಗಕ್ಕೆ ಹೆಗಲು ಕೊಟ್ಟವಳು. ಗಂಡ ದುಡಿಯುತ್ತಿದ್ದ ಸಾವುಕಾರನಿಂದ ಯಾವುದೇ ಸಹಾಯ ಸಿಗದೆ ಇದ್ದಾಗ ಕಾಡಿಗೆ ಹೋಗಿ ಕಟ್ಟಿಗೆ ಕಡಿದು, ಮಾರಿ ಬಂದ ದುಡ್ಡಿನಲ್ಲಿ ಗಂಡ ಮಕ್ಕಳ ಹೊಟ್ಟೆ ತುಂಬಿಸುವ ಉತ್ಸಾಹದಲ್ಲಿ ಎರಡಾಳಿನ ಭಾರ ಒಬ್ಬಳೇ ಹೊತ್ತು ಹೊರಟಾಗ ಎದುರಾದ ಗುತ್ತಿಗೆದಾರರು ಅವಳ ಮೇಲೆ ಅತ್ಯಾಚಾರ ಮಾಡಿದ್ದೂ ಅಲ್ಲದೆ ಅವಳ ಕಟ್ಟಿಗೆ ಕೊಡಲಿಗಳನ್ನು ಕೊಂಡೊಯ್ಯುತ್ತಾರೆ.

ರಾಮಿ ದುರ್ಗಕ್ಕೆ ಬರುವಾಗ ಸಿಕ್ಕಿದ್ದ ಕಾಳು, ದುರ್ಗದಲ್ಲಿ ಕರಡಿ ಬಂದಿರುವುದಾಗಿಯೂ ಅವು ಹೆಣ್ಣು ಮಕ್ಕಳನ್ನು ಕಂಡರೆ ಮಾನಭಂಗ ಮಾಡಿ ಸಾಯಿಸುತ್ತವೆಂದೂ ಹೇಳಿರುತ್ತಾನೆ. ಹಾಗೆ ಬಂದ ಕರಡಿ ವರದಿಗಾರ ಬೆಂಕಿ ತೋರಿಸಿದೊಡನೆ ಓಡಿ ಹೋಗುತ್ತದೆ. ಆದರೆ ಪ್ರಾಣಿಗೂ ಕನಿಷ್ಟವಾಗಿ ಪುರುಷರು ಹೆಣ್ಣಿನೊಂದಿಗೆ ವರ್ತಿಸುತ್ತಾರೆ ಎಂಬುದನ್ನು ಕಥೆ ಮನೋಜ್ಞವಾಗಿ ವಿವರಿಸುತ್ತದೆ. ಈ ಹಿಂದೆ ಮೂರನೇ ಅಧ್ಯಾಯದಲ್ಲಿ ಗಮನಿಸಿರುವಂತೆ ಮಹಿಳೆ ಒಂಟಿಯಾಗಿ ಎಲ್ಲಿಯಾದರೂ ಹೋಗಲು ಅನುಮತಿ ನೀಡದ ಸಮಾಜ

ಅವಳು ಜೀವನ ನಿರ್ವಹಣೆಗೆ ಸಂಪಾದಿಸಲು, ಉರುವಲು ಸಂಗ್ರಹಿಸಲು, ನೀರು ತರಲು ಹೋಗುವುದಕ್ಕೆ ಸಮ್ಮತಿಸುತ್ತದೆ. ಇಂಥ ಕಡೆಗಳಲ್ಲಿ ಹೊಂಚುವ ಕಾಮುಕರು ತಮ್ಮ ದಾಹಕ್ಕೆ ಮಹಿಳೆಯ ಶೀಲವನ್ನು ಬಲಿ ತೆಗೆದುಕೊಳ್ಳುತ್ತಾರೆ.

ಬಡತನ ಮತ್ತು ಒಂಟಿತನಗಳು ಹೆಣ್ಣು ಅಸಾಯಕಳಾಗುವಂತೆ ಮಾಡಿದರೆ ಅವುಗಳನ್ನು ತನ್ನ ಲೋಲುಪತೆಗೆ ಬಳಸಿಕೊಳ್ಳುವ ಗಂಡು ಮಹಿಳೆಯ ಬದುಕನ್ನು ದಾರುಣವಾಗಿಸುತ್ತಾನೆ. ಗಂಡ ಮಕ್ಕಳು ಮನೆಯನ್ನು ನಿರ್ವಹಿಸುವುದೇ ಒಂದು ಸಮಸ್ಯೆಯಾಗಿರುವಾಗ ಅತ್ಯಾಚಾರದಂಥ ಸಮಸ್ಯೆಯೂ ಆವರಿಸಿ ದೈಹಿಕ ಮಾನಸಿಕ ಹಿಂಸೆಗೆ ದೂಡುತ್ತದೆ.

'ಈ ಲಂಬಾಣಿ ಹೆಂಗಸು ರಾಮಿಬಾಯಿಯ ನಿರಾಧಾರ ಸ್ಥಿತಿ ಆಕೆಯ ಜನಾಂಗದ ಅಸಹಾಯಕ ಸ್ಥಿತಿಯನ್ನು ಧ್ವನಿಸುತ್ತದೆ ಎನ್ನುತ್ತಾರೆ ಡಾ. ಕರಿಗೌಡ ಬೀಚನಹಳ್ಳಿ'.[೨೨]

ತಪ್ಪಿದ ಸಂಸಾರದ ಲಯದ ಸುಧಾರಣೆಗೆ ಶ್ರಮಿಸುತ್ತಿರುವಾಗಲೆ ಒದಗಿದ ಅಘಾತದಲ್ಲಿ ರಾಮಿ 'ನೀವು ಯಾವ ಗವಿಯಾಗ ಹೋಗಿ ಅವಿತು ಕೊಂಡ್ರೂ ನಾ ಬಿಡಂಗಿಲ್ರೋ ನನ್ನ ಕೊಡ್ಲಿ ಕಸಗೊಂಡು, ಅದರಿಂದ ನಿಮ್ಮನ್ನ ಸಣ್ಣಗ್ ಕಡಿದು ಚೂರ್ ಚೂರ್ ಮಾಡಿದ ಮ್ಯಾಲೆ ನಾ ಮನಿಗ ಹೋಗ್ತೀನ್ರೋ'[೨೩] ಎನ್ನುವ ಮಾತು ಪೂಲನ್‌ದೇವಿ ಢಕಾಯಿತೆಯಾದ ಸಂದರ್ಭವನ್ನು ನೆನಪಿಸುತ್ತದೆ. ಹೀಗೆ ಪುರುಷ ತಾನು ಅಪರಾಧಿಯಾಗುವ ಮೂಲಕ ಮಹಿಳೆ ಅಪರಾಧಿಯಾಗಲು ಕಾರಣನಾಗುತ್ತಾನೆ ಎಂಬುದನ್ನು ಕಥೆ ಧ್ವನಿಸುತ್ತದೆ.

ಧರ್ಮಪೀಠವು ಹೊರತಲ್ಲ :

ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯಲ್ಲಿ ಪೂಜಾರಿಯ ಸಹಾಯ ಪಡೆದ ಊರ ಚೇರ್ಮನ್ ದೊಣ್ಣೆ ಸೋನಿಯನ್ನು ಉಪಾಯವಾಗಿ ಪ್ರಸಾದ ಕೊಡುವ ನೆವದಲ್ಲಿ ಸೇವಾಲಾಲನ ಗುಡಿಗೆ ಕರೆಸಿ ಅತ್ಯಾಚಾರವೆಸಗಲು ಪ್ರಯತ್ನಿಸುತ್ತಾನೆ. ತಕ್ಷಣ ಎಚ್ಚೆತ್ತುಕೊಂಡ ಸೋನಿ ಕೂಗಿಕೊಳ್ಳುವೆನೆಂದು ಹೆದರಿಸಿ ಪಾರಾಗುತ್ತಾಳೆ. ಇದೆ ಕಾದಂಬರಿಯಲ್ಲಿ ಮೈಸೂರು ನೋಡಲು ಹೋದ ಲಚ್ಚಿಯ ಗಂಡ ಕಾಲರಾಕ್ಕೆ ತುತ್ತಾಗುತ್ತಾನೆ. ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸುವಾಗಲೆ ಲಚ್ಚಿಗೆ ಹೆರಿಗೆಯಾಗಿ ಮಗು ಸಾಯುತ್ತದೆ. ಅಲ್ಲಿಗೆ ಬಂದ ಸ್ವಾಮಿಯೊಬ್ಬ ಆರೈಕೆಗೈಯುವದಾಗಿ ಲಚ್ಚಿಯನ್ನು ಮಠಕ್ಕೆ ಕರೆತರುತ್ತಾನೆ. ಅಲ್ಲಿ ಅವಳ ಮೇಲೆ ಅತ್ಯಾಚಾರವೆಸಗಿ ಗರ್ಭಿಣಿಯಾದಾಗ ಗರ್ಭಪಾತ ಮಾಡಿಸಿ ಕೈ ಬಿಡುತ್ತಾನೆ.

ಇಲ್ಲಿ ಅತ್ಯಾಚಾರಕ್ಕೆ ಬಳಕೆಯಾಗುವ ಸ್ಥಳ ದೇವಸ್ಥಾನ. ಪಾವಿತ್ರ್ಯದ ಸಂಕೇತವಾಗಿರುವಂಥದು. ಹೆಣ್ಣಿನ ಶೀಲ ಅದೂ ಪವಿತ್ರವಾಗಿರಬೇಕೆಂದು ನಿರೀಕ್ಷಿತವಾದುದು. ಆದರೆ ಲೋಲುಪತೆಗೆ ಯಾವ ನಿಯಮವೂ ಒಗ್ಗುವುದಿಲ್ಲ. ಪುರುಷಶಾಯಿ ಮಹಿಳೆಯನ್ನು ಹೇಗೆ ಬಳಸಿಕೊಳ್ಳುತ್ತದೆಂಬುದನ್ನು ಮೇಲಿನ ಘಟನೆಗಳು ನಿದರ್ಶಿಸುತ್ತವೆ.

ತಂದೆಯೇ ಅತ್ಯಾಚಾರಿ :

ಪರಂಪರೆ ಮತ್ತು ಸಂಪ್ರದಾಯಗಳಲ್ಲಿ ಅಚಲವಾದ ನಂಬಿಕೆ ಇರಿಸಿಕೊಂಡು ಬದುಕುವುದು ಮಹಿಳೆಯ ಜೀವನ ವಿಧಾನ ವ್ಯಕ್ತಿಬದುಕಿನ ಪಾವಿತ್ರ್ಯತೆಗೆ ಹೆಚ್ಚಿನ ಆದರ ಸೂಚಿಸುವ ಈ ಮಹಿಳೆಯರಿಗೆ ತಮ್ಮ

ಸುತ್ತಲೂ ನಿರ್ಮಿಸಿಕೊಳ್ಳಲಾದ ಸಾಮಾಜಿಕ ಸಾಂಸ್ಕೃತಿಕ ಪರಿಸರವನ್ನು ಕಾಪಾಡಿಕೊಳ್ಳುವ ಜಾವಬ್ದಾರಿಯಿದೆ. ಈ ಕಾರಣಕ್ಕಾಗಿಯೇ ಪರಂಪರಾಗತ ಮೌಲ್ಯಗಳಿಗೆ ಧಕ್ಕೆ ಒದಗಿದಾಗ ವ್ಯಕ್ತಿತ್ವ ಸಂಕಟಕ್ಕೆ ತಳಮಳಕ್ಕೆ ಗುರಿಯಾಗುತ್ತದೆ.

ಚಿತ್ರಶೇಖರ ಕಂಠಿಯವರ 'ಕಥೆಯಾದವಳು' ಕಥೆ ತಂದೆಯಿಂದಲೇ ಅತ್ಯಾಚಾರಕ್ಕೊಳಗಾದ ಮಗಳು ವಿಭಾ ತಾಯಿಯನ್ನರಸಿ ಹೋಗುವ ವಸ್ತುವುಳ್ಳದ್ದು. ವಿನಯಾ ಆಗರ್ಭ ಶ್ರೀಮಂತ ತಾರಾನಾಥನನ್ನು ಮದುವೆಯಾಗಿ ಅವನ ಹಿಂಸೆ ತಾಳದೆ ಮುಂಬೈಗೆ ಹೋಗಿ ಕೋಠಿಯೊಂದರ ಒಡತಿಯಾಗುತ್ತಾಳೆ. ವಿವಾಹ ಸಂಸ್ಥೆಯ ಹಿಂಸಾತ್ಮಕ ಬಂಧನದ ಪರಿಸರದಿಂದ ವಿನಯಾ ಬದುಕಿನ ಬಿಡುಗಡೆಯನ್ನು ವೇಶ್ಯಾ ಬದುಕಿನಲ್ಲಿ ಕಂಡುಕೊಳ್ಳುತ್ತಾಳೆ. ತಾನು ಆಯ್ಕೆ ಮಾಡಿಕೊಂಡ ಬದುಕಿಗೆ ಮಗಳನ್ನು ದೂಡಬಾರದೆಂದು ಬಿಟ್ಟು ಹೋಗುತ್ತಾಳೆ. ತಾರಾನಾಥನ ಮಗಳ ಮೇಲಿನ ಲೈಂಗಿಕ ಅತ್ಯಾಚಾರ ಕುಟುಂಬ ಸಂಸ್ಥೆ ಹೆಣ್ಣಿನ ಜೀವನಕ್ಕೆ ಎಷ್ಟರ ಮಟ್ಟಿಗೆ ಸುರಕ್ಷಿತವೆಂದು ಪ್ರಶ್ನಿಸಿಕೊಳ್ಳುವಂತೆ ಮಾಡುತ್ತದೆ. ಲೇಖಕ ನರೇಂದ್ರ ವಿಭಾಳನ್ನು ಅವಳ ತಾಯಿಯ ಪರಿಸರಕ್ಕೆ ಕಳಿಸದೆ, ತಾನು ಆಸರೆಯಾಗಲು ಯೋಚಿಸುವುದು ಮಾನವೀಯ ಸ್ಪಂದನವಾಗಿ ಮೂಡಿ ಬಂದಿದೆ.

'ಕಪ್ಪು ಮನುಷ್ಯಾಕೃತಿ ವಿಭಾ ಮಲಗಿದ್ದ ಮಂಚವನ್ನು ಸಮೀಪಿಸಿ ಕೋಮಲ ದೇಹವನ್ನು ಬಲಾಢ್ಯ ಬಾಹುಗಳಲ್ಲಿ ಬಂಧಿಸಿತು. ಕುಡಿದಮಲಿನ ಕೆಟ್ಟ ಹುಳುವಿಗೆ ಅಬಲೆಯೊಂದು ಬಲಿಯಾಗಿತ್ತು'[೨೯] ಎಂಬ ಸಾಲುಗಳು ಪುರುಷ ಸಾಮರ್ಥ್ಯವನ್ನು ಮಹಿಳೆಯ ದೌರ್ಬಲ್ಯವನ್ನು ಹೇಳುವ ಸಾಂಪ್ರದಾಯಿಕ ದೃಷ್ಟಿಯನ್ನೆ ಹೊಂದಿವೆ. ಹೆಣ್ಣಿಗೆ ಸಂಸ್ಕಾರದ ಪರಿಧಿಯನ್ನೆಳೆದು ಮೀರದಂತೆ ತರಬೇತಿಗೊಳಸುವ ಸಾಮಾಜೀಕರಣದಿಂದಾಗಿ, ಅವನ್ನು ಹೊರತಾಗಿ ಆಲೋಚಿಸುವ ಸಾಧ್ಯತೆ ಸಾಹಿತ್ಯದಲ್ಲೂ ಆಗದಿರುವುದನ್ನು ಕಥೆಯಲ್ಲಿ ಕಾಣಬಹುದು.

ಒಟ್ಟಾರೆ ಇಲ್ಲಿಯ ಕಥೆಗಳಲ್ಲಿ ಮಹಿಳೆಯ ಮೇಲೆ ಅತ್ಯಚಾರ ನಡೆದಾಗ ಕೆಲವರ ಬದುಕು ಸಹಾನುಭೂತಿ ಪಡೆದು ಸಾಂತ್ವನಗೊಂಡರೆ, ಮತ್ತೆ ಕೆಲವರದು ಹೀನಾಯವಾಗುತ್ತದೆ. ಕೆಲವರಂತೂ ಶೀಲ ಸರ್ವಸ್ವವೆಂದು ನಂಬಿದವರು ಅದನ್ನು ಕಳೆದುಕೊಂಡು ಬದುಕಲಾಗದೆ ಆತ್ಮಹತ್ಯೆಯ ಮೊರೆ ಹೋಗುತ್ತಾರೆ.

ಬದುಕು ಕೆಡಿಸುವವರಿರುವಂತೆ ಬದುಕು ಕಟ್ಟುವವರೂ ಇದ್ದಾರೆ ಎಂಬಂತೆ ಇಲ್ಲಿಯ ಅನೇಕ ಪುರುಷರು ಸ್ತ್ರೀಪರ ಕಾಳಜಿ ಸಮಾನ ನೆಲೆಯ ಚಿಂತನೆಯವರಾಗಿ ಕೆಟ್ಟ ಬದುಕನ್ನು ಸುಧಾರಿಸಲು ಯತ್ನಿಸುವವರೂ ಆಗಿದ್ದಾರೆ ಎಂಬುದನ್ನು ಕಥನಗಳಲ್ಲಿ ಕಾಣಬಹುದು.

ಪ್ರತಿರೋಧ ಒಡ್ಡಿದವರು :

ಅತ್ಯಾಚಾರದ ಎಲ್ಲಾ ಸಂದರ್ಭಗಳಲ್ಲಿ ಮಹಿಳೆ ಅಸಹಾಯಳಾಗಿ ಒಡ್ಡಿಕೊಂಡಿದ್ದಾಳೆಂದೇನು ಅಲ್ಲ. ಕೆಲ ಮಹಿಳೆಯರು ಸಾಮಾಜಿಕ ನಿರೀಕ್ಷೆಯನ್ನು ಮೀರಿ ತಮ್ಮ ಮೇಲಾದ ಲೈಂಗಿಕ ಆಕ್ರಮಣವನ್ನು ಅತ್ಯಂತ ಚಾಕಚಕ್ಯತೆಯಿಂದ ಸಮರ್ಥವಾಗಿ ಎದುರಿಸಿ ಪುರುಷನ ಒಣ ಪೌರುಷಕ್ಕೆ ಸವಾಲಾಗಿದ್ದಾರೆ. ಮರ್ಮಾಂತಿಕ ಆಘಾತವನ್ನು ನೀಡಿ ಎಚ್ಚರಿಸಿದ್ದಾರೆ. ಅಬಲೆತನದ ಆರೋಪವನ್ನು ಕಿತ್ತೊಗೆದು ರಣಚಂಡಿಯರಾಗಿದ್ದಾರೆ.

ಬಿ.ಟಿ. ಲಲಿತಾಯಾನಾಯಕರ 'ನೆಲೆ ಬೆಲೆ' ಕಾದಂಬರಿಯ ಜಯ ರೇಖಾಳನ್ನು ಅರಸಿ ಮನೆಗೆ ಬಂದಾಗ ರೇಖಾ ಬೆಡ್‌ರೂಂನಲ್ಲಿ ಇರುವಳೆಂದು ಹೇಳಿದ ವರದನ ಮಾತನ್ನು ನಂಬಿ ಹೋದರೆ, ಹಿಂದಿನಿಂದ ಬಂದ ವರದ ಅವಳನ್ನು ಬಲವಾಗಿ ಹಿಡಿದು ಹಾಸಿಗೆಗೆ ತಳ್ಳುತ್ತಾನೆ. 'ಏಯ್! ನೀನು ಹೀಗಾಡ್ತಾ ಇದ್ರೆ ಪ್ರಜ್ಞೆ ತಪ್ಪಿಸಬೇಕಾಗುತ್ತೆ ನೋಡು, ಆಮೇಲೆ ತಣ್ಣಗ ಬಿದ್ಕೊಂಡ್ರೆ ಅದರಲ್ಲೇನು ಸೊಗಸಿರಲ್ಲ. ನೀನೇನು ಮದುವೆಯಾಗದ ಹುಡುಗಿಯಲ್ಲ ಹೊಟ್ಟೆ ಮುಂದೆ ಬಂದ್ರೆ ಹೆದರೋಕೆ, ಖುಸಿಯಿಂದ ಸುಖ ಕೊಟ್ಟು ಸುಖ ಪಡು'[೯೦] ಎನ್ನುವ ವರದ ತನ್ನ ತೀಟೆಗೆ ಹೆಣ್ಣಿನ ಮೇಲೆ ಆಕ್ರಮಣ ಮಾಡುವುದೂ ಅಲ್ಲದೇ ಮದುವೆಯಾದವಳಿಗೆ ಅದೊಂದು ಸಮಸ್ಯೆ ಅಲ್ಲ ಎಂಬ ಸಮಜಾಯಿಸಿ ನೀಡುತ್ತಾನೆ. ಅವನ ಉದ್ದೇಶವರಿತ ಜಯ ಸಹಕರಿಸುವಂತೆ ನಟಿಸಿ ವಿಶ್ವಾಸಕ್ಕೆ ತೆಗೆದುಕೊಂಡು, ಪಕ್ಕದಲ್ಲಿನಿಂತ ಅವನ ತೊಡೆಯ ಭಾಗಕ್ಕೆ ತನ್ನೆಲ್ಲ ಶಕ್ತಿಯನ್ನು ಸೇರಿಸಿ ಜಾಡಿಸಿ ಒದೆಯುತ್ತಾಳೆ. ವರದ ವಿಕಾರವಾಗಿ ಕಿರುಚಿ ದೂರ ಬೀಳುತ್ತಾನೆ. ಜಯ ತಪ್ಪಿಸಿಕೊಂಡು ಓಡುವ ಮೂಲಕ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಾಳೆ.

ಕೊಪ್ಪಳದ ಬಾದರಬಂಡಿಯ ಲಂಬಾಣಿಗಳ ಬಗ್ಗೆ ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಗಮನಿಸಲಾಗಿದೆ. ಈ ಬಾದರಬಂಡಿಯನ್ನು 'ಹವನ' ಕಾದಂಬರಿಯ ಲಂಬಾಣಿಗರು ಬಿಟ್ಟುಬರುವಾಗಿನ ಒಂದು ಸಂಗತಿ, ಮಾನ್ಯನಾಯಕನ ಹೆಂಡತಿ ಹಾಂಸಿಬಾಯಿ ದೇಸಾಯಿ ವಾಸಪ್ಪನನ್ನು ಒದ್ದೋಡಿಸಿದ್ದು. 'ಭಾರಿ ಕಸುವುಳ್ಳಾಕಿ...... ಭಾಳ ಮಜಬೂತ್ ಹೆಣ್ಣುಮಗಳ್ರೀ. ನಾಕಾಳುಬಂದ್ರು ಜಪ್ಪೆನ್ನದಾಕಿ, ಯಾಕ್ಲಾ ಹಾಟ್ಯಾ.... ಭಾಂಚೋದ್..... ನನಗ್ ಹಿಡಿತಿದಿ? ಅಂದವಳೇ ಜಾಡಿಸಿ ವಾಸಪ್ಪನ ತೊಡೆಗೆ ಒದ್ರ ಅವ ಒಮ್ಮೆಲೆ ಮೂರ್ಚೆಹೋಗಿ ಮಾರುದ್ದ ದೂರ ಹೋಗಿ ಬಿದ್ದ'.[೯೧] ಹೀಗೆ ಹಾಂಸಿಬಾಯಿ ಅತ್ಯಾಚಾರಿಯನ್ನೆದುರಿಸಿ ತನ್ನ ಜನಾಂಗದ ಗೌರವಾದರಗಳನ್ನು ಪಡೆಯುತ್ತಾಳೆ ಎನ್ನುತ್ತಾರೆ ಮಲ್ಲಿಕಾರ್ಜುನ ಹಿರೇಮಠ.

ಮೂಲ ಮಹಾಭಾರತ ಕಥೆಯಲ್ಲಿ ದ್ರೌಪದಿ ದುಶ್ಯಾಸನ ತನ್ನ ಸೀರೆ ಸೆಳೆಯುವಾಗ ಕೃಷ್ಣನನ್ನು ಮೊರೆಹೊಕ್ಕರೆ ಜಯದೇವಿ ಗಾಯಕ್‌ವಾಡರ 'ಯಾಜ್ಞಸೇನೆಯ ಆತ್ಮಕಥನ' ಕಾದಂಬರಿಯ ದ್ರೌಪದಿ ದುಶ್ಯಾಸನನ್ನು ಒದ್ದು ನಿತ್ರಾಣವಾಗಿಸುತ್ತಾಳೆ.

ಹೀಗೆ ಮಹಿಳೆಯರು ಎಲ್ಲಾ ಸಂದರ್ಭಗಳಲ್ಲಿ ಲೈಂಗಿಕ ಆಕ್ರಮಣಗಳನ್ನು ಬಾಯಿಮುಚ್ಚಿಕೊಂಡು ಸಹಿಸದೆ ಪ್ರತಿಭಟಿಸಿದ, ತಮ್ಮನ್ನು ತಾವು ರಕ್ಷಿಸಿಕೊಂಡ ಸಂಗತಿಗಳನ್ನು ಕಥನ ಸಾಹಿತ್ಯ ನಿರೂಪಿಸಿದೆ. ಇಂಥ ಪ್ರತಿಭಟನೆಗೆ ಬಲ, ಆತ್ಮಸ್ಥೈರ್ಯ ಹಾಗೂ ಸಮಯಪ್ರಜ್ಞೆಗಳು ಮುಖ್ಯ ಎಂಬುದನ್ನು ಪರ್ಯಾಯವಾಗಿ ಹೇಳಲಾಗಿದೆ.

೪.೩.೧೨ ಕೌಟುಂಬಿಕ ಹಿಂಸೆಯ ಪ್ರತಿನಿಧಿಕರಣ :

ಪಿತೃಪ್ರಧಾನ ಸಮಾಜವು ಕುಟುಂಬವನ್ನು ಹೆಣ್ಣಿನ ಅತ್ಯಂತಿಕವೂ, ಸುರಕಿತವೂ ಆದ ಸಾಮಾಜಿಕ ಸಂಸ್ಥೆ ಎಂದು ವ್ಯಾಖ್ಯಾನಿಸುತ್ತದೆ[೯೨] ಕುಟುಂಬದ ಒಡತಿ ಮಹಿಳೆ ಎಂದು ವಿವರಿಸಲಾಗುತ್ತದೆ. ಆದರೆ ಕುಟುಂಬ ವ್ಯವಸ್ಥೆಯು ಪಿತೃಪ್ರಧಾನ ನಿರ್ದೇಶನಗಳ ಆಧಾರದ ಮೇಲೆ ರಚನೆಗೊಂಡದ್ದಾಗಿದ್ದು ಅಲ್ಲಿ ಮಹಿಳೆಯ ಸ್ಥಾನಮಾನ ಅವಕಾಶಗಳು ಪಕ್ಕಕ್ಕೆ ತಳ್ಳಲ್ಪಟ್ಟಿವೆ. ಮಹಿಳೆಯ ಮೇಲಿನ ದೌರ್ಜನ್ಯ ಅದರ ಸ್ಥಿರ

ಮೌಲ್ಯವಾಗಿರುತ್ತದೆ. ಈ ದೌರ್ಜನ್ಯವನ್ನು ಪರಿಹರಿಸದೆ ಕೌಟುಂಬಿಕ ವ್ಯಾಪ್ತಿಯಲ್ಲಿ ಮಹಿಳೆಯರು ಸುರಕ್ಷಿತರು ಎಂಬ ಅಭಿಪ್ರಾಯವನ್ನು ಸ್ವೀಕರಿಸುವ ಸ್ಥಿತಿಯಲ್ಲೂ ಇಲ್ಲ. ಕೌಟುಂಬಿಕ ಹಿಂಸೆಯ ಸಂದರ್ಭದಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪಿಸುವುದನ್ನು ಕಾನೂನು ರಚನೆಯ ಅಗತ್ಯವನ್ನು ಯಾವುದೆ ಅನ್ಯ ಸಂಸ್ಥೆಯ ಮಧ್ಯಸ್ಥಿಕೆಯನ್ನು ನಿರಾಕರಿಸಲಾಗುತ್ತದೆ. ಕುಟುಂಬದೊಳಗಿನ ಕಲಹವು ಭೀಕರ ಸ್ವರೂಪವನ್ನು ತಲುಪಿದಾಗಲೂ ಇನ್ನೊಬ್ಬರ ಮಧ್ಯಸ್ಥಿಕೆಯು ಅನಗತ್ಯವೆನ್ನಲಾಗುತ್ತದೆ.

ಮಹಿಳೆಯ ವಿರುದ್ಧ ನಡೆಯುವ ದೌರ್ಜನ್ಯ ಮತ್ತು ಹಿಂಸೆ ಪ್ರಧಾನವಾಗಿ ಗೃಹಿಣಿತ್ವ-ಸ್ತ್ರೀತ್ವವನ್ನೇ ಆಧರಿಸಿರುತ್ತವೆ. ಮೇಲ್ನೋಟಕ್ಕೆ ಇವುಗಳು ಮನೆಗೆ ಸಂಬಂಧಿಸಿದ್ದೆಂದು ಅನಿಸಿದರೂ ಬಹುಮುಖ್ಯವಾಗಿ ಈ ಪರಿಕಲ್ಪನೆಯು ಲೈಂಗಿಕತೆಯ ನಿರ್ಬಂಧದ ಒಳಗಡೆಗೆ ಸೃಷ್ಟಿಯಾಗಿದೆ. ಸಾಧಾರಣವಾಗಿ ಈ ಗೃಹಿಣಿತ್ವ ಸ್ತ್ರೀತ್ವ ಲೈಂಗಿಕತೆಯ ಪ್ರಶ್ನೆಗಳೇ ದೌರ್ಜನ್ಯ ಮತ್ತು ಹಿಂಸೆಗಳಲ್ಲಿ ಕಂಡುಬರುತ್ತದೆ.

ಕುಟುಂಬ ಹಿಂಸೆ ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಪ್ರತಿನಿಧೀಕರಣಗೊಂಡುದನ್ನು ಮುಂದಿನ ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯ ಸೋನಿ, ಜಂಬಣ್ಣ ಅಮರಚಿಂತರ 'ಕುರುಮಯ್ಯ ಮತ್ತು ಅಂಕುಶ ದೊಡ್ಡಿ' ಕಾದಂಬರಿಯ ಬುಡ್ಡಮ್ಮ, ಸಂಧ್ಯಾ ಹೊನಗುಂಟಿಕರ ಅವರ 'ಬಾಲ ಕತ್ತರಿಸಿದರೆ ಡೊಂಕೆಲ್ಲಿ' ಕಥೆಯ ಪಾರಮ್ಮ, ಚಂದ್ರಕಾಂತ ಕುಸನೂರರ 'ಗೋಹರ ಜಾನ್ ಮಾಲತಿ ಮತ್ತು ನಾನು' ಕಾದಂಬರಿಯ ವಿಮಲಾಬಾಯಿ, ಮಾಲತಿ, 'ಮಾಯೆ ಅಂದ್ರೆ ಮಾಯೆ' ಕಥೆಯ ರಾಚಮ್ಮ, ರಾಜಶೇಖರ ಹತಗುಂದಿಯವರ 'ಪೊರೆ ಕಳಚುವ ಪರಿ' ಕಥೆಯ ಶಾಣಮ್ಮ ಗೌಡ್ತಿ ಮೊದಲಾದ ಇಲ್ಲಿಯ ಮಹಿಳೆಯರು ಮನೆಯ ಜವಾಬ್ದಾರಿ ಹೊತ್ತು ನಿರ್ವಹಿಸುವವರಾದರೂ ಕುಟುಂಬ ಹಿಂಸೆಯಲ್ಲಿ ನರಳಿದವರು ಬೇಜವ್ದಾರಿ, ದುಡುಕು, ಸಣ್ಣತನ, ಹೊರಚಾಳಿ ಇಲ್ಲಿಯ ಗಂಡಸರ ಮುಖ್ಯ ಲಕ್ಷಣಗಳು. ಸೋಮಾರಿತನದಿಂದ ಕುಳಿತು ಉಣ್ಣುವವರೇ ಅಧಿಕ. ಕೈಹಿಡಿದ ಹೆಂಡತಿಯ ಮೇಲೆ ಕೌರ್ಯ, ಹಿಂಸೆ, ದೌರ್ಜನ್ಯ ಮತ್ತು ಅಧಿಕಾರ ಚಲಾಯಿಸುತ್ತಾರೆ. ಹೆಂಗಸರನ್ನು ಕಾಡಿದಷ್ಟು ಮನೆತನದ ಮರ್ಯಾದೆ ಗೌರವಗಳು ಇಲ್ಲಿನ ಗಂಡಸರನ್ನು ಕಾಣುವುದಿಲ್ಲ. ಸ್ವಾರ್ಥ ಸಾಧನೆಗೆ ಆಚಾರ-ವಿಚಾರಗಳನ್ನು ಗಾಳಿಗೆ ತೂರಿ ಮನಸ್ಸಿಗೆ ಸರಿಯಂದು ಕಂಡರೀತಿ ಬದುಕುವವರೇ ಹೆಚ್ಚು.

ಕುಟುಂಬ ಹಿಂಸೆಗೆ ಇಂಥದೆ ಕಾರಣ ಇರಬೇಕೆಂದೇನೂ ಇಲ್ಲ ಹೆಣ್ಣಿನ ಸಣ್ಣ ವಿರೋಧ, ಪ್ರಶ್ನೆ ಗಂಡಿನ ಅಹಂಕಾರಕ್ಕೆ ದಕ್ಕೆ ತರುವುದಾದರೆ ಹಿಂಸೆ ಆರಂಭವಾಗುತ್ತದೆ ಎಂಬುದನ್ನು ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿ ಪ್ರತಿನಿಧಿಸುತ್ತದೆ. ಸೋನಿ ದುಡಿದು ಕೂಡಿಟ್ಟ ಹಣದಲ್ಲಿ ಒಂದು ಕೋಳಿಯನ್ನು ಸಾಕಿರುತ್ತಾಳೆ. ಅದನ್ನು ಮಾರಿ ಮಕ್ಕಳಿಗೆ ಬಟ್ಟೆ ತರಬೇಕೆಂದುಕೊಂಡಿರುತ್ತಾಳೆ. ಮಾನ್ಯಾ ಹೇಳದೆ ಕೇಳದೆ ಅದನ್ನು ಮಾರಿದಾಗ ಸೋನಿ 'ನಾ ಕಟಗಿ ಮಾರಿದ ರೊಕ್ಕದಾಗ ಅದನ್ನ ಕೊಂಡಿದ್ನಿ ಸಂತಿಗೆ ಒಯ್ದು ಮಾರಿ ಮಕ್ಕಳಿಗೆ ಅರಿವಿ ತರಬೇಕಂತ ಮಾಡಿದ್ನಿ ಎಂದು ಮುಂದುವರಿದು ನಂಗೊಂದ್ಮಾತು ಹೇಳಿಲ್ಲಾ ಬಿಟ್ಟಿಲ್ಲ ಸುಳ್ಳೆ ಊರೆಲ್ಲಾ ಹುಡುಕಾಕ ಹಚ್ಚಿದಿ' ಎಂದಿದ್ದೆ ತಡ ಮಾನ್ಯ ತುಂಬಿದ ಹಿತ್ತಾಳೆ ಚರಿಗೆಯಿಂದ ತಲೆಗೆ ಹೊಡೆಯುತ್ತಾನೆ. ತಲೆಯೊಡೆದು ರಕ್ತ ಸುರಿಯತೊಡಗಿದಾಗ ಸೋನಿ ನಾನೇನು ಅಂಥಾದ್ದು ಆಡಬಾರದ್ದು ಆಡಿದ್ನೇಯವ್ವಾ ಇವನ ಕೈ ಸೇದ್ಹೋಗ್ಲಿ ನನ್ನ ತಲಿ ಒಡದ್ನಲ್ಲ ಇವನ ಕೈ ಕತ್ತರ್ಸಿ ಹೋಗ್ಲಿ" ಎಂದು ಬೈದಾಗ

'ಎಲಾ ರಂಡೆ ಹೊಳ್ಳಿ ನನ್ನ ಬೈತಿಯೇನ್ಲೇ ಎನ್ನುತ್ತ ಬೆನ್ನಿಗೆ ಒಂದೆ ಸಮ ಹೊಡೆಯುತ್ತಾನೆ. ಸೋನಿಯ ತಲೆಯಿಂದ ರಕ್ತ ಸುರಿಯುವುದನ್ನು ಕಂಡ ಕೆಲವರು 'ಹೆಣ್ಮಕ್ಕಳ ಬಾಳೆಲ್ಲ ಇಷ್ಟೇ ನೋಡು ಬದುಕಿರುತನಾ ಬರೆ ಬೈಸಿಕೊಂಬೋದು ಬಡಿಸಿಕೊಂಬೋದು' ಎಂದು ಮರುಗುತ್ತಾರೆ. ಹೀಗೆ ಮಾನ್ಯಾ ಸೋನಿಯನ್ನು ನಿರಂತರ ಶೋಷಣೆಗೆ ಈಡು ಮಾಡುತ್ತಾನೆ. ತಿಳಿವಳಿಕೆ ಹೇಳಲು ಬಂದ ಚಂದ್ರನೊಂದಿಗೆ ಸಂಬಂಧ ಕಟ್ಟುತ್ತಾನೆ.

ತನ್ನ ಸ್ವೇಚ್ಛಾವೃತ್ತಿಗೆ ಸ್ವಾರ್ಥ ಸಾಧನೆಗೆ ಯಾವ ಕೀಳ್ಮಟ್ಟಕ್ಕೂ ಇಳಿಯುವ ಮಾನ್ಯನ ಪಾತ್ರ ಬಹು ಸಂಖ್ಯಾತ ಸ್ತ್ರೀ ಶೋಷಣಾ ಚಟುವಟಿಕೆಯಲ್ಲಿ ತೊಡಗಿರುವವರ ಪ್ರತಿನಿಧಿಯಂತೆ ಚಿತ್ರಣಗೊಂಡಿದೆ. ಕುಟುಂಬ ಹಿಂಸೆ ವೈಯಕ್ತಿಕ ವ್ಯವಹಾರವಾಗಿ ಪರಿಗಣನೆಗೊಳ್ಳುವುದರಿಂದ ಅನ್ಯರ ಪ್ರವೇಶ ಇಲ್ಲಿ ನಿರಾಕರಿಸಲ್ಪಡುತ್ತದೆ. ಗಂಡಸರು ಹೆಂಡತಿಯನ್ನು ಹೊಡೆಯುವುದು, ಅಶ್ಲೀಲ ಬೈಗುಳಗಳನ್ನು ಬೈಯ್ಯುವುದು ಗಂಡಸುತನದ ಸಂಕೇತವೆಂದೇ ಭಾವಿಸುತ್ತಾರೆ. ಹೆಂಡತಿಯನ್ನು ನಿಯಂತ್ರಿಸಲಾಗದ ಗಂಡಸನ್ನು ಕೈಲಾಗದವನೆಂದು ಭಾವಿಸುವುದರಿಂದ ಗಂಡಸರು ಇಂಥ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳುತ್ತಾರೆ. ಗಂಡ-ಹೆಂಡತಿ ನಡುವೆ ಅನ್ಯೋನ್ಯತೆಗಿಂತ ಗಂಡನ ದಬ್ಬಾಳಿಕೆಗೇ ಮಾನ್ಯತೆ ಎಂಬಂತಾಗಿದೆ.

ಮಹಿಳೆಯ ಭಾವನಾತ್ಮಕ ಸಂವೇದನೆಯನ್ನು ಗ್ರಹಿಸಲಾಗದ ಪುರುಷರು ಅದನ್ನು ಹೀನಾಯವಾಗಿ ಕಂಡು ಅವಳನ್ನು ಘಾಸಿಗೊಳಿಸುತ್ತಾರೆ. ಮುಂದೆ ಅದು ದೈಹಿಕ ಹಿಂಸೆಗೆ ಕಾರಣವಾಗುವ ಸಂದರ್ಭವೊಂದು ಜಂಬಣ್ಣ ಅಮರಚಿಂತರ 'ಕುರುಮಯ್ಯ ಮತ್ತು ಅಂಕುಶ ದೊಡ್ಡಿ' ಕಾದಂಬರಿಯಲ್ಲಿ ಚಿತ್ರಣಗೊಂಡಿದೆ. ಬುಡ್ಡಮ್ಮ ಜಂಬಯ್ಯನನ್ನು ಎರಡನೆ ಮದುವೆಯಾದ ಮೇಲೆ ಮಗುವಿನಿಂದ ಅಗಲಿದ ದುಃಖವನ್ನು ಮರೆಯಲು ಬೆಕ್ಕೊಂದನ್ನು ಸಾಕುತ್ತಾಳೆ. ಅದು ಮರಿ ಹಾಕಿದಾಗ ಅದನ್ನು ತುಂಬ ಪ್ರೀತಿಯಿಂದ ನೋಡಿ ಕೊಳ್ಳುತ್ತಿರುತ್ತಾಳೆ. ಒಂದು ದಿನ ಜಂಬಯ್ಯ ಆ ಮರಿಗಳನ್ನು ದೂರ ಬಿಟ್ಟು ಬಂದುದನ್ನು ತಿಳಿದಾಗ 'ಮರಿಗಳು ಮನೆಯಲ್ಲಿದ್ದರೆ ನಿನ್ನ ಗಂಟೇನು ಹೋಗುತ್ತಿತ್ತು' ಎಂದು ಕೇಳಿದಾಗ ಜಂಬಯ್ಯ 'ಮೊದಲ ಮಗ ಗಂಡನಿಗೆ ಕೊಟ್ಟಿದ್ದು ಸಾಕಾಗದೆ ಬೆಕ್ಕು ಬೇರೆ ಕಡಿಮೆ ಬಿದ್ದಿದ್ದವೆ ಹಾಳು ಮಾಡಲು' ಎನ್ನುತ್ತಾನೆ. ಅಷ್ಟರಲ್ಲಿ ಬೆಕ್ಕಿನ ಮರಿಯನ್ನು ಹಾವುಗ ಕೊಂದದ್ದನ್ನು ಕಂಡ ಬುಡ್ಡಮ್ಮ ತಾಳದೆ ಸಾವಿಗೆ ಕಾರಣನಾದ ಗಂಡನನ್ನು ಸಿಟ್ಟಿನಿಂದ ಹೊಡೆಯುತ್ತಾಳೆ. ಜನರೆದುರು ತನ್ನನ್ನು ಹೊಡೆದ ಕಾರಣಕ್ಕೆ ಜಂಬಯ್ಯ ಅವಳನ್ನು ಉರುಳಾಡಿಸಿ ಹೊಡೆದು ಕಲ್ಲು ಎತ್ತಿ ಹಾಕಲು ಹೋಗುತ್ತಾನೆ. ಜನ ಬಿಡಿಸಿಕೊಳ್ಳುತ್ತಾರೆ. ಆಗ ಜಂಬಯ್ಯ ಹೆಂಡತಿಯ ತಪ್ಪು ಅಕ್ಷಮ್ಯವಾದುದು. ಅವಳ ಕಾಲುಗುಣ ಸರಿಯಿಲ್ಲ. ಅವಳನ್ನು ಮಾರುತ್ತೇನೆ ಎಂದು ಹೊರಟಾಗ ಬುಡ್ಡಮ್ಮ ತನ್ನನ್ನು ಮಾರಬೇಡವೆಂದು ಪರಿ ಪರಿಯಿಂದ ಬೇಡಿಕೊಳ್ಳುತ್ತಾಳೆ. ಜಂಬಯ್ಯ ಮಾರುವುದು ನಿಶ್ಚಯವೆಂದಾಗ ದಾರಿ ಕಾಣದೆ ಬುಡ್ಡಮ್ಮ ಮಗುವಿನೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಇಲ್ಲಿ ಜಂಬಯ್ಯ ಬುಡ್ಡಮ್ಮನನ್ನು ಅರ್ಥ ಮಾಡಿಕೊಳ್ಳುವುದಿರಲಿ ಪ್ರೀತಿಸಿದ, ಪ್ರೀತಿಯನ್ನು ಮರೆತು ಅಮಾನವೀಯವಾಗಿ ವರ್ತಿಸುತ್ತಾನೆ. ಬುಡ್ಡಮ್ಮನ ಆತ್ಮಹತ್ಯೆ ಕುಟುಂಬ ದೌರ್ಜನ್ಯಕ್ಕೊಳಗಾದ ಮಹಿಳೆಯರನ್ನು ಪ್ರತಿನಿಧಿಸುತ್ತದೆ.

ಹೆಣ್ಣು ಸುಖವಾಗಿ ಬದುಕಬೇಕಾದರೆ ಕೈಹಿಡಿದ ಗಂಡು ಸರಿಯಾಗಿರಬೇಕು ಇಲ್ಲದಿದ್ದರೆ ಅವಳ ಬಾಳು ಗೋಳು. ಆದರೂ ಮದುವೆ ಇಲ್ಲದ ಬದುಕನ್ನು ಕುರಿತು ಯೋಚಿಸುವಂತಿಲ್ಲ. ವೈವಾಹಿಕ ಬದುಕಿನಲ್ಲಿ ಸುಖವೆನ್ನುವುದು ಮರೀಚಿಕೆಯಾದಾಗ ಹೊಂದಾಣಿಕೆ ಅನಿವಾರ್ಯ. ಈ ಹೊಂದಾಣಿಕೆಯಲ್ಲಿ ಬದುಕುವ ಹೆಂಗಸಿಗೆ ಪ್ರತ್ಯೇಕ ವ್ಯಕ್ತಿತ್ವ ಎನ್ನುವುದು ಗೋಚರವಾಗುವುದಿಲ್ಲ. ಅವರ ಪಾತ್ರವೇನಿದ್ದರೂ ಹೆಂಡತಿ ಧರ್ಮ ಅನುಸರಿಸುವುದು. ಅದನ್ನು ವಿರೋಧಿಸುವವರು ಒಂಟಿತನ ಸಾವುಗಳಂಥ ಶಿಕ್ಷೆಗಳನ್ನು ಅನುಸರಿಸಬೇಕಾಗುತ್ತದೆ.

ಹೆಣ್ಣು ದಿನನಿತ್ಯ ಗಂಡಿನಿಂದ ಹೊಡೆಸಿಕೊಳ್ಳುವುದು, ಬಯ್ಸಿಕೊಳ್ಳುವುದು, ಅವಮಾನಿತಳಾಗುವುದು ಆದರೂ ಅವನನ್ನೇ ನಂಬಿ ಅನುನಯಿಸಿ ಬದುಕುವುದು ಶತಮಾನಗಳಿಂದ ನಡೆದು ಬಂದಿದೆ. ಆದರೆ ತಪ್ಪಿ ಹೆಣ್ಣು ಗಂಡಿನ ಮೇಲೆ ಕೈ ಮಾಡಿದರೆ ತಿರುಗಿ ಮಾತಾಡಿದರೆ, ಪ್ರಶ್ನಿಸಿದರೆ ಅವಳು, ಆ ಮನೆಯಿಂದ ಹೊರ ದೂಡಲ್ಪಡುತ್ತಾಳೆ. ಹಾಗೆ ನೆಲೆತಪ್ಪಿದವಳಿಗೆ ಯಾವುದೇ ಆಸರೆಗಳಿಲ್ಲದೆ ಅವಳು ಬೀದಿ ಪಾಲಾಗಬೇಕಾಗುತ್ತದೆ. ಕಾಮುಕ ಸಮಾಜ ಅವಳನ್ನು ಮರ್ಯಾದೆಯಿಂದ ಬದುಕದಂತೆ ಮಾಡುತ್ತದೆ. ಇದರಿಂದಾಗಿಯೆ ಎಷ್ಟೇ ಹಿಂಸೆಯಾದರೂ ಎದುರಾಡದೆ ತುಟಿಬಿಚ್ಚದೆ ಅನೇಕರು ಗಂಡನ ಮನೆಯಲ್ಲಿಯೆ ಬದುಕಿಗಾಗಿ ಹೋರಾಡುತ್ತಾರೆ. ಸಹನೆ ಮೀರಿದಾಗ ಅಲ್ಲಿಯೇ ಬದುಕನ್ನು ಕೊನೆಗೊಳಿಸುತ್ತಾರೆ. ಬುಡ್ಡಮ್ಮ ಒಂದು ಸಲ ಮಾರಾಟವಾಗಿ ಎರಡನೆಯ ಗಂಡನಿಂದ ಪ್ರತಿಕ್ಷಣ ನಿಂದೆ ಕಟಕಿ ಅವಮಾನ ಹೊಡೆತಗಳನ್ನು ಸಹಿಸಿಯೂ ಅವನೊಂದಿಗೇ ಬಾಳಬೇಕೆಂದು ಬಯಸುತ್ತಾಳೆ. ಆದರೆ ಜಂಬಯ್ಯ ಅದಕ್ಕೂ ಅವಕಾಶ ಕೊಡದೆ ಅವಳನ್ನು ಇನ್ನೊಬ್ಬರಿಗೆ ಮಾರಲು ಸಿದ್ಧನಾದಾಗ ಬುಡ್ಡಮ್ಮನಿಗೆ ಆತ್ಮ ಹತ್ಯೆ ಅನಿವಾರ್ಯವಾಗುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬುಡ್ಡಮ್ಮನ ಸಾವು ಕುರುಮಯ್ಯ ಜಂಬಯ್ಯರಷ್ಟೇ ಅಲ್ಲ ಕೊರವರೆಲ್ಲ ಗಂಭೀರವಾಗಿ ಆಲೋಚಿಸುವಂತೆ ಮಾಡುತ್ತದೆ, ಕುರುಮಯ್ಯ ತನ್ನ ಎರಡನೆಯ ಹೆಂಡತಿ ಓಡಿಹೋದದ್ದು ತಾಯವ್ವ (ಬಹಿಷ್ಕೃತನನ್ನು ವಿವಾಹವಾಗುವ ಧೈರ್ಯ ತೋರಿದ್ದು) ಮುದುಕನೊಂದಿಗೆ ವಿವಾಹವನ್ನು ತಿರಸ್ಕರಿಸಿ ಕುರುಮಯ್ಯನ ಹೆಂಡತಿಯಂತೆ ತಾನೂ ಓಡಿ ಹೋಗಬೇಕೆ ಎಂದು ಪ್ರಶ್ನಿಸಿದ್ದು, ಬುಡ್ಡಮ್ಮ ಆತ್ಮಹತ್ಯ ಮಾಡಿಕೊಂಡದ್ದು ಕೊರವರಲ್ಲಿ ಸ್ತ್ರೀವಿರೋಧಿ ಆಚರಣೆಗಳ ಕುರಿತು ಚಿಂತನೆಗೆ ತೊಡಗುವಂತೆ ಮಾಡುತ್ತದೆ. ಇತರ ಕೊರವರು ತಮ್ಮನ್ನು ಕೈಲಾಗದವರೆಂದರೂ ಸರಿಯೆ ಇನ್ನು ಮುಂದೆ ಹೆಣ್ಣುಗಳ ಮಾರಾಟ ನಿಲ್ಲಿಸಬೇಕೆಂದು ನಿರ್ಧರಿಸುವುದು ಪ್ರಗತಿಯ ಸಂಕೇತವಾಗಿದೆ.

ಸಂಧ್ಯಾ ಹೊನಗುಂಟಿಕರ ಅವರ 'ಬಾಲಕತ್ತರಿಸಿದರೆ ಡೊಂಕೆಲ್ಲಿ' ಕಥೆಯ ಪಾರಮ್ಮ ಬಸಪ್ಪನನ್ನು ಮದುವೆಯಾದ ಮೇಲೆ ಕೆಲದಿನ ಮಾತ್ರ ಸಂತಸದಿಂದ ಕಳೆಯುತ್ತಾಳೆ, ಬಸಪ್ಪ ಕುಡುಕರ ಸಹವಾಸದಿಂದ ಕುಡಿಯಲು ಆರಂಭಿಸಿದ ಮೇಲೆ ಅದನ್ನು ವಿರೋಧಿಸಿದ ಕಾರಣಕ್ಕೆ ಅವನಿಂದ ಹೊಡೆತ ತಿನ್ನುವದು ಬಯ್ಗುಳ ಕೇಳುವುದು ದಿನನಿತ್ಯದ ಕ್ರಮವಾಗುತ್ತದೆ. ಕಾರಣ ಕೇಳುವುದನ್ನು ಬಿಟ್ಟ ಮೇಲೂ ನೆವವಿಲ್ಲದೆ ಹೊಡೆತ ತಿನ್ನಬೇಕಾಗುತ್ತದೆ. ಆದರೆ ಒಮ್ಮೆ ಅಕಸ್ಮಾತ್ ಬಸಪ್ಪ ತೀರ ಸಂಭಾವಿತನಂತೆ ವರ್ತಿಸಿ, ಅವಳನ್ನು ನಂಬಿಸಿ ಅವಳ ತಾಯಿ ಅವಳಿಗಾಗಿ ಕೊಟ್ಟಿದ್ದ ಒಂದೇ ಒಂದು ಚಿನ್ನದ ಆಭರಣವನ್ನು ಸರಿ ಮಾಡಿಸಿಕೊಂಡು ಬರುವೆನೆಂದು ಹೇಳಿ ತೆಗೆದುಕೊಂಡು ಹೋಗಿ ಸಾಲಗಾರರಿಗೆ ಅದನ್ನು ಕೊಟ್ಟು, ಕುತ್ತಿಗೆ ಮಟ್ಟ ಕುಡಿದು ಮನೆಗೆ ಬಂದಾಗ 'ನಮ್ಮವ್ವ ನಂಗಂತ ಕ್ಟಟ್ಟಿದ್ದು ನಿಂಗ ಮರಾಕ ಏನು ಹಕ್ಕದ? ನಂಗ್ಯಾಕ ಸುಳ್ಳ ಹೇಳಿದಿ

ಎಂಬ ಪಾರ್ವತಿಯ ಪ್ರಶ್ನೆಗೆ ಬಸಪ್ಪ' ನೀ ನನ್ನ ಮದಿ ಮಾಡ್ಕಂಡಿ ಅಂತ ನಿಮ್ಮವ್ವ ಅದು ಕ್ವಟ್ಟಾಳ ನಾನಿನ್ನ ಗಂಡ ನಿನ್ನಮ್ಯಾಲ ಪೂರಾ ಹಕ್ಕದ ಇವತ್ತ ನಿನ್ನ ಸರ ಮಾರ್‍ರ್ನೀ ನಾಳೆ ನಿನ್ನು ಮಾರ್‍ತೀನಿ. ಆಗೇನು ಮಾಡ್ತಿ? ಸೂಳಿ ಹಕ್ಕ ಕೇಳಾಕ ಬಂದಾಳ ಹಕ್ಕ' ಎಂದು ಉತ್ತರಿಸಿ ದನಕ್ಕೆ ಬಡಿದಂತೆ ಬಡಿಯುತ್ತಾನೆ.

ಬಸಪ್ಪನ ಉತ್ತರ ಬರೀ ಒಬ್ಬ ಬಸಪ್ಪನದಲ್ಲ, ಬಸಪ್ಪನಂಥ ಕುಡುಕರ ಹೆಂಡತಿಯ ಮೇಲೆ ಅಮಾನವೀಯವಾಗಿ ಅಧಿಕಾರ ಚಲಾಯಿಸುವವರ ಧೋರಣೆ ಅದೆ ಆಗಿರುತ್ತದೆ. ಸಮಾಜದಲ್ಲಿ ಬಹುಪಾಲು ಗಂಡಸರು ದುಡಿದು ಮನೆಯ ಜವಾಬ್ದಾರಿ ನಿರ್ವಹಿಸುವುದಿರಲಿ ತಮ್ಮ ದುಶ್ಚಟಕ್ಕೆ ಇದ್ದುದೆಲ್ಲವನ್ನು ಕಳೆದುಕೊಂಡು ಕೊನೆಗೆ ಹೆಂಡತಿಯನ್ನು ಮಾರಲು ಹೇಸದವರಾಗುತ್ತಾರೆ. (ಹಣಕ್ಕಾಗಿ ಸ್ವಂತ ವಿಧವೆ ಅಕ್ಕ ಮತ್ತು ಆಕೆಯ ಮಕ್ಕಳನ್ನು ೫ಲಕ್ಷ ರೂಪಾಯಿಗೆ ಮಾರಿದ ಸಂಗತಿ ಪತ್ರಿಕೆಯಲ್ಲಿ ವರದಿಯಾಗಿತ್ತು.) ಇಂಥವರಿಗೆ ವಿವಾಹ ಮೋಜಿನ ಸಂಗತಿಯಾದರೆ ಹೆಣ್ಣಿಗೆ ಉರುಳಾಗಿ ಪರಿಣಮಿಸುತ್ತದೆ.

ಬಸಪ್ಪನ ಹೆಂಡತಿ ಬಗೆಗಿನ ಮಾತುಗಳನ್ನು ಕೇಳಿದ ಪಾರ್ವತಿ ಡೊಂಕನ್ನು ನಿವಾರಿಸಲು ನಾಯಿಬಾಲ ಕತ್ತರಿಸಿದಂತೆ ಹಕ್ಕು ಸ್ಥಾಪನೆಗೆ ಕಾರಣವಾದ ಹೆಂಡತಿ ಸಂಬಂಧವನ್ನೇ ಕತ್ತರಿಸಲು ಯೋಚಿಸಿ ನಿರಾಳವಾಗುತ್ತಾಳೆ. ಹೆಣ್ಣು ಬದುಕನ್ನು ಸುಧಾರಿಸಿಕೊಂಡು ಹೋಗಲು ಹೆಣಗಿದರೆ ಗಂಡು ಅದನ್ನು ಕೆಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾಗುತ್ತಾನೆ. ಪುರುಷ ಪ್ರಧಾನ ವ್ಯವಸ್ಥೆಯ ಪಕ್ಷಪಾತ ನೀತಿಯಿಂದಾಗಿ ಹೆಚ್ಚಿನ ಸಂದರ್ಭದಲ್ಲಿ ಗಂಡು ಸ್ವೇಚ್ಛಾಚಾರಿಯಾಗುತ್ತಾನೆ. ಅವನ ಸ್ವೇಚ್ಛೆ ಪಾರ್ವತಿಯಂಥ ಮುಗ್ಧಯುವತಿಯರ ಬದುಕನ್ನು ಹಿಂಸೆಯಲ್ಲಿ ನರಳುವಂತೆ ಮಾಡುತ್ತದೆಂಬುದನ್ನು ಕಥೆ ಪ್ರತಿನಿಧಿಸುತ್ತದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಹೀಗೆ ಇರಬೇಕೆಂದು ವಿಧಿನಿಯಮಗಳನ್ನು ರೂಢಿಸಲಾಗಿದೆ. ಜೀವನದ ಪ್ರತಿ ಸಂದರ್ಭಗಳಲ್ಲಿ ಅವಳು ಹೇಗೆ ವರ್ತಿಸಬೇಕೆಂದು ಸೂಚಿಸಲಾಗಿರುತ್ತದೆ. ಅದಕ್ಕೆ ವಿರುದ್ಧವಾಗಿ ನಡೆಯುವ ಸ್ವಾತಂತ್ರ್ಯ ಅವಳದಲ್ಲ. ಯಾವುದೇ ರೂಢಿ ನಿಯಮ ಮಹಿಳೆಗಾಗಿಯೆ ಸೃಷ್ಟಿಸಲ್ಪಡುತ್ತದೆ. ಮತ್ತು ಕಡ್ಡಾಯವಾಗಿ ಹೇರಲ್ಪಡುತ್ತದೆ.

ಚಂದ್ರಕಾಂತ ಕುಸನೂರರ 'ಗೋಹರಜಾನ್ ಮಾಲತಿ ಮತ್ತು ನಾನು' ಕಾದಂಬರಿಯಲ್ಲಿ ಹೆಂಗಸರು ಹೆಣದ ಮುಂದೆ ಅಳಬೇಕು ಎಂಬ ಕಡ್ಡಾಯವನ್ನು ಹೇರಲಾಗುತ್ತದೆ. ಸತ್ತವರ ಗುಣಗಾನ ಮಾಡಿ ಅಳುವುದು ವಾಡಿಕೆ.

ಸತ್ತವನು ಗೋಪಾಲನ ಚಿಕ್ಕಪ್ಪ ಬದುಕಿರುವವರೆಗೆ ಹೆಂಡತಿಯನ್ನು ಬಂಧು ಬಳಗವನ್ನು ದೂರೀಕರಿಸಿದವನು. ಇಟ್ಟುಕೊಂಡವಳ ಮನೆಯಲ್ಲಿ ಸಾಯುತ್ತಾನೆ. ಮಕ್ಕಳಿಲ್ಲದ ಅವನ ಆಸ್ತಿಯನ್ನು ಪಡೆಯಲು. ಅವನ ಹೆಂಡತಿಯ ಪ್ರೀತಿ ಗಳಿಸಲು ಸತ್ತವನ ಅಣ್ಣನ ಮಕ್ಕಳು ತಮ್ಮ ಹೆಂಡಿರನ್ನು ಹೆಣದ ಮುಂದೆ ಅಳುವಂತೆ ತಾಕೀತು ಮಾಡುತ್ತಾರೆ. ಗೋಪಾಲ ತನ್ನ ಹೆಂಡತಿಗೆ 'ನೀವಂತೂ ಹೆಂಗಸರು, ಸುಟ್ಟು ಸುಡುಗಾಡು ಮಾತಿಗೂ ಕಣ್ಣಾಗ ನೀರ ಬರ್‍ತಾವ. ಈಗಂತೂ ನಿಮ್ಮ ಮಾವ ಸತ್ತಾನ ಅಳಂಗಿಲ್ಲಾಂದ್ರ ಮಂದೇನಂದಾರು' ಎಂದರೆ 'ಅವರೆಂಥ ಮಾವರ್‍ರಿ ಭಾವಜಿ' ಎಂದು ಮುಂದೇನೊ ಹೇಳಾಬೇಕಂತ ಬಾಯಿ ತೆಗೆದರೆ ಉಮಾ ಬಾಯಿ ಆಗ ಅವರ ಗಂಡ ಮುರಳೀಧರ ಪಿ. ಜೋಸ್‌ಡಿ. ಸುಮ್ನೇ ಅಳು ಅಂದ್ರ ಅಳಬೇಕು ಇಲ್ಲದ ಪಂಚಾಯ್ತಿ ಮಾಡಬಾರ್ದು ಅತ್ತಿ ಸರಿ ಅಳ್ಳಿಲಾಂದ್ರ ಎರಡು ಲಗಾಸ್ತೀನಿ. ನೀನೇ ಅಳ್ತಿ ಎಂದು ಜಬರಿಸಿದರು.

'ಉಮಾಬಾಯಿ–ನಾಕ ಮಂದ್ಯಾಗ ಹೊಡೇದು ಬಡೇದು ಮಾಡಿ ನನ್ನ ಮರ್ಯಾದಿ ತಗೀರಿ ಮನ್ಯಾಗ ನಿತ್ಯ ಉಪಚರಿಸ್ಕೊಂಡಿದ್ದು ಸಾಕಾಗಿಲ್ಲೇನೊ. ಈಗ ಊರಾಗ ಹೊಡಿಬೇಕಂತ ಮಾಡೀರಿ ಹೆಂಗಸರ ಜೀವಂದ್ರ ನಿಮ್ಗ ಕಿಮ್ಮತ್ತೆ' ಇಲ್ಲ ಎಂದು ಅಳಲಾರಂಭಿಸಿದಳು.

ಈ ಸಂಭಾಷಣೆ ಪುರುಷಾಧಿಕಾರವನ್ನು ಸ್ಪಷ್ಟಪಡಿಸುತ್ತದೆ. ಮಹಿಳೆ ತನ್ನಿಚ್ಛೆಯಂತೆ ಏನೂ ಮಾಡುವಂತಿಲ್ಲ ಪುರುಷ ನಾಣತಿಯಂತೆ ಅಳಬೇಕು ನಗಬೇಕು. ಆಜ್ಞೆ ಪಾಲಿಸದಿದ್ದರೆ ಅಶ್ಲೀಲ ಬೈಗುಳೂ ಹೊಡೆತಗಳು ಅವಳ ಪಾಲಿಗೆ ಸಿದ್ಧವಾಗಿರುತ್ತವೆ. ಅದು ನಾಲ್ಕು ಗೋಡೆಯ ಮಧ್ಯದಲ್ಲೇ ಆಗಬೇಕೆಂದಿಲ್ಲ. ಮನೆಯ ಹೊರಗೂ ಮಹಿಳೆಯ ಮೇಲೆ ಹಿಂಸೆ ನಡೆಯುತ್ತದೆ. ನಿಂದೆ ಅವಮಾನ ಹಿಂಸೆ ತುಚ್ಛಭಾವಗಳನ್ನು ಎದುರಿಸುವುದು ಬಹುತೇಕ ಮಹಿಳೆಯರ ಬದುಕಿನ ಭಾಗ.

ಇದೆ ಕಾದಂಬರಿಯಲ್ಲಿ ಮಾಲತಿ ಎಸ್.ಎಸ್.ಎಲ್.ಸಿ.ಯ ನಂತರ ಕೆಲಸಕ್ಕೆ ಸೇರಲೊಪ್ಪದೆ ಓದು ಮುಂದುವರಿಸುವೆನೆಂದಾಗ, ಅವಳ ತಂದೆ ಅವಳನ್ನು ಸೀಮೆ ಎಣ್ಣೆ ಹಾಕಿ ಸುಡುವೆನೆನ್ನುತ್ತಾನೆ. ಮಗಳು ದುಡಿದು ತನ್ನ ದುಶ್ಚಟಕ್ಕೆ (ಕುಡಿತ) ಆಸರೆಯಾಗಬೇಕೆಂದು ಬಯಸುವ ತಂದೆ ಅವಳನ್ನು ರಂಡಿ, ಬೋಸಡಿ, ಸೂಳಿ ಎಂದೆಲ್ಲಾ ಬಯ್ಯುತ್ತಾನೆ. ಅವಳನ್ನು ಮದುವೆಯಾಗಲು ಬಯಸುವ ವಿರುಪಾಕ್ಷಿ ಮದುವೆಗೆ ಮೊದಲೇ ತನ್ನ ಗೆಳೆಯನೊಂದಿಗೆ ಲೈಂಗಿಕ ಸಂಬಂಧ ಬೆಳೆಸಲು ಹೇಳುತ್ತಾನೆ. ಮಾಲತಿಯ ಶೈಕ್ಷಣಿಕ ಪ್ರಗತಿಗೆ ಅವಳ ತಂದೆ ಮತ್ತು ವಿರುಪಾಕ್ಷಿ ಇಬ್ಬರೂ ಅಡ್ಡಿಯಾಗುತ್ತಾರೆ. ರಕ್ಷಿಸಬೇಕಾದ ಕುಟುಂಬವೇ ಅವಳ ಅದಃಪತನಕ್ಕೆಳಸುತ್ತದೆ.

ಚಂದ್ರಕಾಂತ ಕುಸನೂರರ 'ಯಾತನಾ ಶಿಬಿರ' ಕಾದಂಬರಿಯಲ್ಲಿ ಲಿಂಗಬಸ್ಯಾ ಹೆಂಡತಿ ಹಾದರದಿಂದ ಹಣ ಗಳಿಕೆಯ ಸಾಧನವಾಗಬೇಕು ಎಂದಾಗ ಗಂಗಿ ನಿರಾಕರಿಸುತ್ತಾಳೆ. ಗೌಡರಲ್ಲಿ ದೂರೊಯ್ಯುತ್ತಾಳೆ. ಗೌಡರೊಂದಿಗೆ ಅವಳ ಸಂಬಂಧ ಕಲ್ಪಿಸಿದಾಗ ಗಂಗಿ ಸಿಟ್ಟಿನಿಂದ ಅವನ ಕಪಾಳಕ್ಕೆ ಹೊಡೆಯುತ್ತಾಳೆ. ಇದನ್ನೇ ನೆವ ಮಾಡಿಕೊಂಡು ಲಿಂಗಬಸ್ಯಾ ಅವಳನ್ನು ನೆಲಕ್ಕೆ ಕೆಡವಿ ಎದೆ ಮೇಲೆ ಕುಳಿತು ಹೊಡೆದುದ್ದಲ್ಲದೆ ಕುತ್ತಿಗೆ ಹಿಸುಕಿ ಸಾಯಿಸಲು ಪ್ರಯತ್ನಿಸುತ್ತಾನೆ. ಗೌಡ ಕೊಡಲಿ ಹಿಡಿದು ಬಂದಾಗ ಓಡಿ ಹೋಗುತ್ತಾನೆ.

ಹೆಣ್ಣಿಗೆ ನೇರ ವಾಮ ಎಂದು ಯಾವ ಮಾರ್ಗವು ಇಲ್ಲ. ಗಂಡ ತೋರಿದ ಮಾರ್ಗವೇ ರಾಜಮಾರ್ಗವಾಗುತ್ತದೆ. ಹೆಣ್ಣು ಗರತಿಯೇ, ವೇಶ್ಯಯೇ ಎಂಬುದು ಪುರುಷನಿಚ್ಛೆಯನ್ನಾಧರಿಸಿದ್ದು ಎಂಬುದನ್ನು ಕಥೆ ಧ್ವನಿಸುತ್ತದೆ.

ಇದೇ ಕಾದಂಬರಿಯಲ್ಲಿ ಸಂತಾನಕ್ಕಾಗಿ ವಿವಾಹ ಬಾಹಿರ ಸಂಬಂಧ ಬೆಳೆಸಿದ ಬಸಮ್ಮ ಗಂಡ ಶಾಮರಾಯನಿಂದ ಒದೆ ತಿಂದು ಗರ್ಭಪಾತಕ್ಕೀಡಾಗುತ್ತಾಳೆ. ಹೆಣ್ಣನ್ನು ಹೊಡೆಯುವುದು ಹಿಂಸಿಸುವುದು ಗಂಡಿನ ಅಧಿಕಾರವೆಂದೇ ಭಾವಿಸಲಾಗಿದೆ. ವಿವಿಧ ಕಾರಣಗಳನ್ನು ಒಡ್ಡಿ ಕೆಲವೊಮ್ಮೆ ವಿನಾಕಾರಣ ಹೆಣ್ಣನ್ನು ಹಿಂಸಿಸಲಾಗುತ್ತದೆ.

ಸಿದ್ಧರಾಮ ಹೊನ್ಕಲ್‌ರ 'ಸ್ಯಾಡಿಸ್ಟ್' ಕಥೆಯಲ್ಲಿ ಬಿ.ಇ ಪದವೀಧರ ಅಮರೇಶ ತನಗೆ ನೌಕರಿ ಸಿಗಲಿಲ್ಲ ಅಥವಾ ಮಾವ ತನಗೆ ನೌಕರಿ ಕೊಡಿಸಲಿಲ್ಲವೆಂದು ಹೆಂಡತಿ ಸುಮಿತ್ರೆಯನ್ನು ದಿನವೂ

ಹೊಡೆಯುತ್ತಿರುತ್ತಾನೆ. ಬೇಡವೆಂದ ತಂದೆ ತಾಯಿಯರನ್ನು ಮನೆಯಿಂದ ಹೊರದೂಡುತ್ತಾನೆ. ಸುಮಿತ್ರೆಯನ್ನು ತವರಿಗೆ ಕಳಿಸದೆ ಕಾಡಿಸುತ್ತಾನೆ. ಪುರುಷ ತನ್ನೆಲ್ಲ ದೌರ್ಬಲ್ಯಗಳನ್ನು ಕೊರತೆಗಳನ್ನು ನೆಪವಾಗಿಸಿಕೊಂಡು ಹೆಂಡತಿಯನ್ನು ಹಿಂಸಿಸಲು ಮುಂದಾಗುತ್ತಾನೆ. ಗಂಡ ಹೆಂಡತಿಯನ್ನು ಹೊಡೆಯುವುದು ಒಂದು ಸಹಜ ಕ್ರಿಯೆ ಎಂಬಂತಾಗಿದೆ.

ರಾಜಶೇಖರ ಹತಗುಂದಿಯವರ 'ಪೊರೆ ಕಳಚುವ ಪರಿ' ಕಥೆ ಶಾಣಮ್ಮ ಗೌಡ್ತಿಯ ಮೇಲಾಗುವ ಕುಟುಂಬ ಹಿಂಸೆಯನ್ನು ಪ್ರತಿನಿಧಿಸುತ್ತದೆ. ಶಾಣಮ್ಮ ಗೌಡ್ತಿ ಗಾಣದೆತ್ತಿನ ಹಾಗೆ ದುಡಿದೂ ದುಡಿದೂ ಮೈಯಾಗಿನ ರಗುತ ಕಳಕೊಂಡ ಟಿಬಿ, ಬ್ಯಾನಿ ಬಂದವರಂಗಾಗಿ ಜೋಲಿ ಹೊಡೆಯುತ್ತಿದ್ದಳು. ಆದರೂ ಗಂಡ ಶಾಮರಾಯಗೌಡ ಅವಳನ್ನು ಲಕ್ಷಿಸುವುದಿಲ್ಲ. 'ಕುಡಿದು ಬಂದು ಧಪಾ ಧಪಾ ಬಡಿದಾಗ ಕಜ್ಜಿ ಹತ್ತಿದ ನಾಯಿಯಾಗುತ್ತಿದ್ದಳು. ಬಾಯಿಗೆ ಬಂದಂತೆ ಬೈದಾಡುತ್ತಿದ್ದಳು. ತಲೆ ಚಿಟ್ಟೆಂದು ಬ್ಯಾಸರಿಟ್ಟಾಗ ಸತ್ತೇ ಹೋಗಬೇಕೆಂದು ದಿನಕ್ಕೆ ಛಪ್ಪನ್ನ ಸರತಿ ಲೆಕ್ಕ ಹಾಕುತ್ತಿದ್ದಳು.

ಹೀಗೆ ಮಹಿಳೆ ಕುಟುಂಬಕ್ಕಾಗಿ ದುಡಿದರೂ ಗಣನೆಯಿಲ್ಲದೆ, ದುಡಿದ ದುಡ್ಡು ಗಂಡನ ಕುಡಿತಕ್ಕೆ ಬಳಕೆಯಾಗಿ, ಅವಳು ತೋರುವ ಸ್ವಲ್ಪ ವಿರೋಧವು ಪುನಃ ಅವಳಿಗೇ ಮಾರಕವಾಗಿ ಪರಿಣಮಿಸುತ್ತದೆ. ಸಾವಿಗಾಗಿ ಹಂಬಲಿಸುವುದು ಸಹಜವಾಗುತ್ತದೆ.

ಪುರುಷ ಹೇಗೇ ಇರಲಿ ಅದಕ್ಕೆ ಮಹಿಳೆ ತೋರುವ ವಿರೋಧ ಅವಳ ಜೀವಕ್ಕೆ ಮುಳುವಾಗುತ್ತದೆ. ಅವನನ್ನು ವಿರೋಧಿಸಿ ಬದುಕನ್ನು ಇನ್ನಷ್ಟು ದಾರುಣವಾಗಿಸಿಕೊಳ್ಳುವುದಕ್ಕಿಂತ ಹೊಂದಿಕೊಂಡು ಹೋಗುವುದೇ ಸರಿಯಾದ ಮಾರ್ಗವೆಂದು ಸೂಚಿಸುವ ಕಥೆ ಯಥಾಸ್ಥಿತಿಯನ್ನು ಪ್ರತಿನಿಧಿಸುತ್ತದೆ.

'ಹೆಣ್ಣು' ಎಂಬ ಪದಕ್ಕೆ ಪಿತೃ ಪ್ರಧಾನ ಸಮಾಜವು ಕೇವಲ ದೈಹಿಕ ನಿರ್ವಚನವನ್ನು ಮಾತ್ರ ಕೊಟ್ಟುಕೊಂಡಿರುವುದರಿಂದ ಹೆಣ್ಣಿನ ಮಾನಸಿಕ ಸ್ಥಿತಿಯ ಬಗ್ಗೆ ಅದಕ್ಕೆ ತನ್ನ ಆದರ್ಶದ ನೆಲೆಯಲ್ಲಿ ಕೂಡ ಅರಿವಿರುವುದಿಲ್ಲ’ ಎಂಬ ಉಷಾ ಅವರ ಮಾತು ಹೆಣ್ಣನ್ನು ಕೇವಲ ದೇಹವಾಗಿ ಭಾವಿಸಿ ಅವಳ ಯಾವುದೇ ಬಗೆಯ ವ್ಯಕ್ತಿತ್ವವನ್ನು ಪರಿಗಣಿಸದೆ ಇರುವುದನ್ನು ಸೂಚಿಸುತ್ತದೆ. ಇಲ್ಲಿಯ ಅಧ್ಯಯನದಲ್ಲಿ ಗಮನಿಸಿರುವಂತೆ ಹೆಣ್ಣಿನ ಮೇಲಿನ ಹೊಡೆತ ಬಡಿತಗಳ ಹಕ್ಕನ್ನು ಸಮಾಜದ ಎಲ್ಲ ಸ್ಥರಗಳು ಪುರುಷನ ಹಕ್ಕೆಂದೇ ಭಾವಿಸಿವೆ. ಇದು ಸ್ವತ: ಸ್ತ್ರೀಯರಿಗಾಗಲಿ ವಿದ್ಯಾವಂತ ಪುರುಷರಿಗಾಗಲಿ ಕೆಡುಕೆನಿಸುತ್ತಿಲ್ಲ. ಪುರುಷ ಮಹಿಳೆಯನ್ನು ಹಿಂಸಿಸುವುದು ತನ್ನ ಹಕ್ಕೆಂದು ಭಾವಿಸಿದ್ದಾನೆ. ಮಹಿಳೆ ಅದನ್ನು ಸಹಿಸುವುದು ತನ್ನ ವಿಧಿ ಎಂದು ಕೊಂಡಿದ್ದಾಳೆ.

೪.೩.೧೩ ಆಸ್ತಿ ಹಂಚಿಕೆ

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಮಹಿಳೆಗೆ ಕುಟುಂಬದ ಆರ್ಥಿಕ ಸಂಪನ್ಮೂಲಗಳ ಮೇಲೆ ಯಾವುದೇ ಅಧಿಕಾರವನ್ನು ನೀಡಲಾಗಿಲ್ಲ. ಆರ್ಥಿಕ ಸಂಬಂಧಿ ಕಾನೂನಿನ ಪರಿಧಿಯನ್ನು ಮೀರಿ ಅವಳಿಗೆ ಅದನ್ನು ನಿರಾಕರಿಸಲಾಗುತ್ತದೆ. ವಿಶ್ವದ ಆಸ್ತಿಯಲ್ಲಿ ಶೇಕಡ ೧ರಷ್ಟನ್ನು ಮಾತ್ರ ಮಹಿಳೆಯರು ಪಡೆದಿರುವುದು ಅವರ ಆರ್ಥಿಕ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಭಾರತೀಯ ಸಂವಿಧಾನದಂತೆ ಹಿಂದು ವಿವಾಹ

ಕಾನೂನಿನ ಪ್ರಕಾರ ಹಿಂದು ವಿಧವೆಗೆ ಗಂಡನ ಆಸ್ತಿಯಲ್ಲಿ ಪಾಲು ಸಿಗುತ್ತದೆ. ಆದರೆ ಸಿಗದಂತೆ ಮಾಡುವ ಪ್ರಯತ್ನಗಳು ನಡೆಯುತ್ತವೆ. ವಿಧವೆಗೆ ಮಕ್ಕಳಿಲ್ಲದಿದ್ದರೆ, ಹೆಣ್ಣು ಮಕ್ಕಳಿದ್ದರೆ, ಇಲ್ಲವೆ ಮಂದಬುದ್ಧಿಯ ಮಕ್ಕಳಿದ್ದರೆ ಅವಳ ಆಸ್ತಿಯನ್ನು ಹೇಗೋ ಲಪಟಾಯಿಸುವ ಹುನ್ನಾರಗಳು ಸೃಷ್ಟಿಯಾಗುತ್ತವೆ. ಕಥನ ಸಾಹಿತ್ಯದಲ್ಲಿ ಮಹಿಳೆಯ ಮೇಲಾದ ಆರ್ಥಿಕ ಶೋಷಣೆಯನ್ನು ಮುಂದಿನ ಚರ್ಚೆಯಲ್ಲಿ ಗಮನಿಸೋಣ.

'ಪಿತೃಪ್ರಧಾನತೆ ಮತ್ತು ಬಂಡವಾಳಶಾಯಿ ವ್ಯವಸ್ಥೆಗಳೆರಡು ಮಹಿಳೆಯ ಆರ್ಥಿಕ ಅಧೀನತೆಗೆ ಕಾರಣವಾದ ಅಂಶಗಳು ಎಂಬ ಮೂಲಭೂತ ತತ್ವವನ್ನು ಪ್ರತಿಪಾದಿಸಿದವರು ಹಾಯ್ಡಿ ಹಾಟ್‌ಮನ್'

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಚಂದ್ರಕಾಂತ ಕುಸನೂರರ 'ಗೋಹರ್‌ಜಾನ್ ಮಾಲತಿ ಮತ್ತು ನಾನು' ಕಾದಂಬರಿಯ ವೃಂದಾಬಾಯಿ ಮತ್ತು ಕಾಶಮ್ಮ 'ಕೆರೂರ ನಾಮಾ' ಕಾದಂಬರಿಯ ತುಳಸಕ್ಕ, ಜಯತೀರ್ಥ ರಾಜ ಪುರೋಹಿತರ 'ಗಂಧವತೀ ಪೃಥಿವಿ' ಕಥೆಯ ಶಾರದ, ಶ್ರೀಕಾಂತ ಪಾಟೀಲರ 'ಮೂಡಲದಾಗ ಕೆಂಪು ರಾಶಿ ಮೂಡಿತ್ತು' ಕಥೆಯ ಸಣ್ಣಿ ಮತ್ತು ಬಸಮ್ಮ, ಅಮರೇಶ ನುಗಡೋಣಿಯವರ 'ಮಣ್ಣು ಸೇರಿತು ಬೀಜ' ಕಥೆಯ ನಾಗಮ್ಮ ಆರ್ಥಿಕ ಶೋಷಣೆಗೆ ಒಳಪಟ್ಟವರು.

ಅಮರೇಶ ನುಗಡೋಣಿಯವರ ಕಥೆ 'ಮಣ್ಣು ಸೇರಿತು ಬೀಜ' ದಲ್ಲಿ ಸಾವಿನ ಎದುರು ಮನುಷ್ಯನ ಸಣ್ಣತನಗಳು ಹೇಗೆ ರಾರಾಜಿಸುತ್ತವೆ ಎಂಬುದರ ಭೀಭತ್ಸ ಚಿತ್ರವಿದೆ. ಸಾಯುತ್ತಿರುವ ಹೆಣ್ಣಿನ ಆಸ್ತಿಯನ್ನು ಅಪಹರಿಸಲು ಅನೇಕರು ಹಾತೊರೆಯುತ್ತಾರೆ. 'ಇದಂತು ಉಳ್ಯಾಂಗಿಲ್ಲ ಸಾಯ್ತದ ಗಂಟುಗಿಂಟು ಎಲ್ಲಿಟ್ಟಾದ ಕೇಳಿ ತಗಂಡು ಬಿಡು' ಎಂದು ಜಂಬಣ್ಣನಿಗೆ ಹೇಳುವ ಗುಂಡಮ್ಮ, ಮಗನಂತೂ ಹುಚ್ಚನಾದ ನಾಗಮ್ಮ ಸತ್ತ ಮೇಲೆ ಆಕೆ ಗಳಿಸಿದ ಆಸ್ತಿ ಗಂಟು ಎಲ್ಲ ತನಗಾದೀತು' ಎಂಬ ಆಸೆಯ ಜಂಬಣ್ಣ, ನಾಗಮ್ಮನ ಆಸ್ತಿಯನ್ನು ನುಂಗಿ ನೀರು ಕುಡಿಯಲು ಹೊಂಚುವ ಗೌಡ, ಕುಲಕರ್ಣಿ ಅವಳು ಹಾಸಿಕೊಂಡ ಹೊಸ ಕೌದಿಗಾಗಿ ಆಸೆಗಣ್ಣಿಂದ ನೋಡುವ ತಳವಾರ ಯಂಕ, ನಾಗಮ್ಮನ ಗುಂಡಿನ ಹೊಲ ಎತ್ತಿ ಹಾಕಿ ತನ್ನ ಸೂಳೆಗೆ ಕೊಟ್ಟರಾಯಿತೆಂದು ಯೊಚಿಸುವ ರುದ್ರಪ್ಪ ಸರಕಾರದ ಜನತಾ ಮನೆಗಳಿಗೆ ಗುಂಡಿನ ಹೊಲ ಸೂಕ್ತವೆಂದು ಭಾವಿಸುವ ಬೀರಪ್ಪ ಕ್ಯಾತಣ್ಣ ಇವರೆಲ್ಲರ ಆಸೆ ನಾಗಮ್ಮನ ಮಗ ಗಯ್ಯಪ್ಪನಿಗೆ ಮಾತು ಬರುವ ಮೂಲಕ ಮಣ್ಣುಗೂಡುತ್ತದೆ.

ವಿಧವೆ ನಾಗಮ್ಮ ವ್ಯವಹಾರ ಜ್ಞಾನವಿಲ್ಲದೆ ತನ್ನಲ್ಲಿದ್ದ ಹಣಕಾಸನ್ನು ಇತರರಿಗೆ ಕೊಟ್ಟು ಕಳೆದುಕೊಳ್ಳುತ್ತಾಳೆ. ಇವರೆಲ್ಲ ಗಯ್ಯಪ್ಪನಿಗೆ ಮದುವೆ ಮಾಡಿದರೆ ಸರಿಯಾಗುವನೆಂದು ನಂಬಿಸಿ ಹಣ ಕೀಳುತ್ತಾರೆ. ಅವಳ ಆಸ್ತಿಯ ಮೇಲೆ ಕಣ್ಣಿರಿಸಿದ್ದ ಗೌಡ ಹೆಣ್ಣು ಕೂಡದಂತೆ ಮಾಡುತ್ತಾನೆ. ತಾನು ಹೆಂಗಸಾದುದರಿಂದಲೆ ಹೀಗಾಯ್ತು ಈ ಎಲ್ಲ ಕೆಲಸಕ್ಕೆ ತನ್ನಣ್ಣನನ್ನು ಮುಂದೆ ಮಾಡಿದ್ದರೆ ಒಳ್ಳೆಯದಿತ್ತೇನೋ ಎಂದು ನಾಗಮ್ಮ ಯೋಚಿಸುವುದು ಸಹಜವೇ ಆಗಿದೆ. ಸಾಂಪ್ರದಾಯಿಕ ಕುಟುಂಬಗಳಲ್ಲಿ ಹೊರಗಿನ ಮತ್ತು ಆರ್ಥಿಕ ವ್ಯವಹಾರಗಳನ್ನು ಪುರುಷನೇ ನಿರ್ವಹಿಸುತ್ತಿದ್ದು ಮಹಿಳೆಗೆ ಆ ಅವಕಾಶ ಲಭಿಸಿಲ್ಲವಾಗಿ ಅವಳು ವ್ಯವಹಾರ ಕುಶಲಳಾಗುವುದು ಸಾಧ್ಯವಾಗಿಲ್ಲ.

ಹೆಣ್ಣಿನ ಅಂತರಂಗವನ್ನು ಒಳಹೊಕ್ಕು ಅವಳ ನೋವು ನಲಿವುಗಳನ್ನು, ನಲಿವುಗಳಿಗಿಂತ ಹೆಚ್ಚಾಗಿ ನೋವುಗಳನ್ನು ಬಿಡಿಸಿರುವುದು ಊಳಿಗ ಮಾನ್ಯ ಪದ್ಧತಿಯ ರಾಕ್ಷಸ ಸ್ವಭಾವವನ್ನು ನಿರ್ಮಮವಾಗಿ ತೋರಿಸಿರುವುದು ಕತೆಯ ಮಹತ್ವವನ್ನು ಹೆಚ್ಚಿಸಿದೆ.

'ಗೋಪರ್‌ಜಾನ್ ಮಾಲತಿ ಮತ್ತು ನಾನು' ಕಾದಂಬರಿಯಲ್ಲಿ ಚಂದ್ರಕಾಂತ ಕುಸನೂರರು ವಿಧವೆಯ ಆಸ್ತಿಯನ್ನು ಯಾರ್‍ಯಾರು ಹೇಗೆ ಹೊಡೆದುಕೊಳ್ಳಲು ಸಂಚು ನಡೆಸುತ್ತಾರೆಂಬ ವಿಷಯ ನಿರೂಪಿಸಿದ್ದಾರೆ. ರವೀಂದ್ರನ ಚಿಕ್ಕಮ್ಮ ವೃಂದಾಬಾಯಿ ಗಂಡನ ವಿವಾಹ ಬಾಹಿರ ಸಂಬಂಧದಿಂದ ಜೀವನದಲ್ಲಿ ನೊಂದವಳು. ಗಂಡನ ಸಾವಿನ ನಂತರ ತನಗೆ ದೊರೆಯುವ ಆಸ್ತಿಯಲ್ಲಿ ನೆಮ್ಮದಿಯಿಂದ ಬದುಕಲು ಆಶಿಸುತ್ತಾಳೆ. ವೃಂದಾಬಾಯಿಯನ್ನು ಇರುವವರೆಗೆ ಚನ್ನಾಗಿ ನೋಡಿಕೊಳ್ಳುವ ಭರವಸೆ ಕೊಟ್ಟರೆ ಆಸ್ತಿ ತಮಗಾಗುವ ಆಸೆ ದಾಯಾದಿಗಳದಾದರೆ, ಅವಳಿಗೆ ಆಸ್ತಿಯಲ್ಲಿ ಪಾಲು ಕೊಡಿಸಿ ಅದನ್ನು ಕಬಳಿಸುವ ಆಲೋಚನೆ ದೂರದ ಸಂಬಂಧಿ ಶ್ರೀಪತಿಯದು. ಶ್ರೀಪತಿಯ ಕುತಂತ್ರವರಿತ ವೃಂದಾಬಾಯಿ ಬೋಳುಬಂಡೆ ಸ್ವಾಮಿಯನ್ನು ನ್ಯಾಯಕ್ಕಾಗಿ ಆಶ್ರಯಿಸುತ್ತಾಳೆ. ಸ್ವಾಮಿ ಮೋಸದಿಂದ ಹೊಲವನ್ನು ತನ್ನದಾಗಿಸಿಕೊಳ್ಳುತ್ತಾನೆ. ಹೊಲದ ಮೇಲೆ ಟೇನೆಂಟ್ ಕೇಸ್ ಹಾಕಿಸಿದ ಶ್ರೀಪತಿಯ ಕೊಲೆಯಾಗುತ್ತದೆ. ಹೊಲ ಹಾಳು ಬೀಳುತ್ತದೆ. ಹೊಲವನ್ನು ಸಿದ್ದೇವಪ್ಪನ ಗುಡಿಗೆ ಪಡೆಯಬೇಕೆಂದು ಲಿಂಗಾಯಿತರು, ಮಾಳಪ್ಪನ ಗುಡಿಗೆ ಪಡೆಯಬೇಕೆಂದು ಕುರುಬರು ಪ್ರಯತ್ನಿಸುತ್ತಾರೆ. ಹೊಸೂರಲ್ಲಿ ವಿಶ್ವವಿದ್ಯಾಲಯ ಕಟ್ಟಡಕ್ಕೆ ಸರಕಾರ ಜಾಗ ಹುಡುಕುವಾಗ, ಹೊಲದ ದಾಖಲೆಗಳು ಸ್ವಾಮಿಯ ಹೆಸರಲ್ಲಿದ್ದುದರಿಂದ ಪರಿಹಾರ ಧನ ಸ್ವಾಮಿಗೆ ಸೇರುತ್ತದೆ. ಸ್ವಾಮಿ ಅದನ್ನು ತನ್ನ ಆಪ್ತ ಭಕ್ತಳಿಗೆ ನೀಡುತ್ತಾನೆ.

ಹೀಗೆ ವಿಧವೆಯ ಆಸ್ತಿ ಅವಳಿಗೆ ಸಲ್ಲದೆ, ಈ ಆಸ್ತಿ ಸಮಸ್ಯೆ ಊರವರ ಸಮಸ್ಯೆಯಾಗಿ ನ್ಯಾಯಯುತವಾಗಿ ಸೇರಬೇಕಾದ ವೃಂದಾಬಾಯಿಯ ಕೈ ಸೇರುವುದೇ ಇಲ್ಲ. ಮಹಿಳೆಯನ್ನು ಆಸ್ತಿಯಿಂದ ವಂಚಿಸುವಲ್ಲಿ ಊರೊಟ್ಟಿನ ಪುರುಷರೆಲ್ಲ ಶ್ರಮಿಸುವಲ್ಲಿ ವ್ಯವಸ್ಥೆಯ ಹುನ್ನಾರ ಅಡಗಿದೆ. ಮಹಿಳೆಯ ಬದುಕು ಅಭದ್ರ ಅರಕ್ಷಿತವಾಗಿದ್ದಷ್ಟು ಅವಳು ಅಸಹಾಯಳಾಗುತ್ತಾಳೆ. ಆ ಮೂಲಕ ಅವಳನ್ನು ಅಧೀನವಾಗಿಯೆ ಇರಿಸುವ ತಂತ್ರ ಕ್ರಿಯಾಶೀಲವಾಗಿರುತ್ತದೆ.

ಇದೇ ಕಾದಂಬರಿಯ ವಿಧವೆ ಕಾಶಮ್ಮ ಪತಿವಿಯೋಗದಿಂದ ನೆಲ ಹಿಡಿದಾಗ ಕಪನೂರ ಸ್ವಾಮಿ ಚಿಕಿತ್ಸೆ ನೀಡುತ್ತಾನೆ. ಚಿಕಿತ್ಸೆಗಾಗಿ ದಿನಾ ಅವಳ ಮನೆಗೆ ಬಂದು ಸಹಾನುಭೂತಿಪರವಾಗಿ ವರ್ತಿಸಿ ಕಾಶಮ್ಮನನ್ನು ಬಲೆಗೆ ಹಾಕಿಕೊಳ್ಳುತ್ತಾನೆ. ಅವಳಿಗರಿವಿಲ್ಲದೆ ಅವಳಿಂದ ಸ್ಟಾಂಪ್ ಮೇಲೆ ಸಹಿ ಪಡೆದು ಅವಳಿಂದ ದೂರಾಗಿ ಬೇರೆ ಹೆಣ್ಣಿನ ಬೆನ್ನು ಹತ್ತಿದಾಗ ಕಾಶಮ್ಮ 'ನೋಡು ಸ್ವಾಮಿ, ನಿನ್ನ ಹೆಂತಿ ಅದಾಳ, ಬೇಕಾದ್ರ ನೀ ಅಕಿ ಹಂತ್ಯಾಕ ಇರು, ಬ್ಯಾಡ ಅಂಬೋಣಿಲ್ಲ ನಾನೂ ನಿನ್ನ ಹೆಂತಿಕಿಂತಾ ಜಾಸ್ತಿ ಸೇವಾ ಮಾಡೀನಿ ಅಂತ ನಿನ್ಗ ಖೂನಾ ಅದ. ನಾ ಏಟಿದ್ರೂ ಇಟಗೊಂಡಾಕಿ ಹೊರಗಿನವಳೆ ಕಟಿಗೊಂಡಾಕಿನ್ನ ಮತ್ತು ಇಟಗೊಂಡಾಕಿನ್ನ ಇಬ್ಬರನ್ನೂ ಬಿಟ್ಟು ಇನ್ನೊಂದು ಸೂಳಿ ಸೀರ್‍ಯಾಗ ಸೇರಾಕತ್ತಿದೆಲ್ಲ. ಇದು ನನ್ಗ ಪಸಂದಿಲ್ಲ, ಮಠದ ಸ್ವಾಮಿ ಅದೀ ಒಂದೀಟ ನಾಚ್ಗಿ ಶರಮಾ ಇರಲಿ' ಎಂಬುದನ್ನು ಕೇಳಿ ಸ್ವಾಮಿ ಕಾಶಮ್ಮನ ಸರ್ವನಾಶಕ್ಕೆಳಸಿ ಅವಳ ಹೊಲ ತನ್ನದೆ ಎಂದು ಕೇಸ್ ಹಾಕುತ್ತಾನೆ. ಕಾಶಮ್ಮ ಸುಮ್ಮನಿರದೆ ಊರ ಜನರನ್ನೆಲ್ಲ ಸೇರಿಸಿ ಸಾಕ್ಷಿ ಹೇಳಿಸುವ ಮೂಲಕ ತನ್ನ ಹೊಲವನ್ನು ಉಳಿಸಿಕೊಳ್ಳುತ್ತಾಳೆ. ಹೊಲ ತಪ್ಪಿದರೂ ಚಿಂತೆಯಿಲ್ಲ ಬೆಳೆಯನ್ನಾದರೂ ಪಡೆದು ಅವಳಿಗೆ ಕಬ್ಜಾ ಕೊಡಬೇಕೆಂದ ಸ್ವಾಮಿಯ ತಂತ್ರ ಫಲಿಸುವುದಿಲ್ಲ.

ಜಯತೀರ್ಥ ರಾಜ ಪುರೋಹಿತರ 'ಗಂಧವತಿ ಪೃಥ್ವಿ' ಕಥೆ ಗಂಡು ಸಂತಾನವಿಲ್ಲದ ತಂದೆಯ ಆಸ್ತಿಯಲ್ಲಿ ಹೆಣ್ಣುಮಕ್ಕಳಿಬ್ಬರು ಪಾಲು ಕೇಳುವ ವಸ್ತುವನ್ನು ಆಧರಿಸಿದೆ. ಭಾರತೀಶ ಶಿಕ್ಷಕನಾಗಿ ದುಡಿದು ಸಂಪಾದಿಸಿದ ಸ್ಥಿರಾಸ್ತಿ ಎಂದರೆ ಮನೆ. ಹೆಂಡತಿ ಮಗ ತೀರಿಕೊಂಡ ಮೇಲೆ ಒಂಟಿಯಾಗಿರುತ್ತಿದ್ದಾಗ ಅದೆ ಊರಿಗೆ ವರ್ಗವಾಗಿ ಬಂದ ಹಿರಿಮಗಳು ಅಳಿಯನನ್ನು ಮನೆಯಲ್ಲಿ ಇರಿಸಿಕೊಳ್ಳುತ್ತಾನೆ. ಇದನ್ನು ಸಹಿಸದ ಕಿರಿಯ ಅಳಿಯ ಹೆಂಡತಿಯ ಮೂಲಕ ಪಾಲು ಕೇಳುತ್ತಾನೆ.

ತನ್ನ ಮನೆಯಲ್ಲಿ ಪಾಲು ಪಡೆದು ತನ್ನನ್ನು ಅಧಿಕಾರ ವಂಚಿತನನ್ನಾಗಿಸಲು ನೋಡುವರೆಂದು ಯೋಚಿಸುವ ಭಾರತೀಶ 'ನೀನು ಮಗಳು ಆದರೆ ನಿನ್ನ ಗಂಡ ನನ್ನ ಮಗನಾಗಬಲ್ಲನೆ? ಅವನು ಪರಕೀಯ ನನ್ನನ್ನೇಕೆ ಪರಾಧೀನ ಮಾಡುವಿ?' ಎಂದು ಪ್ರಶ್ನಿಸುತ್ತಾನೆ. ಆಸ್ತಿ ಹೆಣ್ಣಿನ ತಂದೆಯದೇ ಆದರೂ ಅದರ ಅಧಿಕಾರ ಪಡೆಯುವವನು ಅಳಿಯ. ಅಳಿಯನ ಮನೆಯಲ್ಲಿರುವುದು ಪರಾಧೀನತೆಯ ಸಂಕೇತ. ಇಂಥ ಪರಾಧೀನತೆಯಲ್ಲಿರಲು ಪುರುಷ ಮನಸ್ಸು ಎಂದಿಗೂ ಸಿದ್ಧವಾಗುವುದಿಲ್ಲ. ಅದೆ ಮಹಿಳೆಗೆ ಪರಾಧೀನತೆಯೆ ಬದುಕಿನ ನಿಯಮವಾಗಿದೆ. ಒಂದು ಪರಿಸರದಲ್ಲಿ ಬೆಳೆದು ಇನ್ನೊಂದು ಪರಿಸರಕ್ಕೆ ಹೊಂದಿಕೊಳ್ಳಬೇಕಾದಾಗ ಮಹಿಳೆಯೂ ಇಂಥವೇ ಮನಸ್ಥಿತಿಯನ್ನು ಅನುಭವಿಸುತ್ತಾಳೆ. ಅದೊಂದು ಸಹಜ ಸ್ಥಿತಿ ಎಂಬಂತೆ ಪರಿಗಣಿಸುವ ವ್ಯವಸ್ಥೆ ಪುರುಷನಿಗೆ ಅಂಥ ಸ್ಥಿತಿ ಒದಗಿದರೆ ಎಲ್ಲಿಲ್ಲದ ಸಹಾನುಭೂತಿ ತೋರಿಸುತ್ತದೆ. ಗಂಡು ಸದಾ ಸ್ವತಂತ್ರನಾಗಿರಬೇಕೆಂದೆ ಬಯಸುತ್ತಾನೆ. ಹೆಣ್ಣು ಆಸ್ತಿಯಲ್ಲಿ ಪಾಲು ಪಡೆದಾಗಲೂ ಬಳಸುವ ಸ್ವಾತಂತ್ರ್ಯ ಅವಳಿಗಿರುವುದಿಲ್ಲ. ಆಸ್ತಿಯ ಹಕ್ಕು ಹೆಸರಿಗೆ ಮಾತ್ರ ಇರುವುದರಿಂದಲೆ ಮಹಿಳೆಯರ ಬದುಕು ಪುರುಷಾಧಿಕಾರದಲ್ಲಿ ಬಂಧಿತವಾಗಿದೆ. ಪುರುಷ ನಿರ್ದೇಶನದಂತೆಯೆ ಭಾರತೀಶನ ಕಿರಿ ಮಗಳು ತಂದೆಯ ಆಸ್ತಿಯಲ್ಲಿ ಪಾಲು ಕೇಳುತ್ತಾಳೆ. ಹೆಣ್ಣು ಮಗಳು ಪರಕೀಯಳು. ಅವಳಿಗೆ ಕೊಡುವ ಆಸ್ತಿಯೂ ಪರಕೀಯವಾಗುತ್ತದೆ. ಮಗನ ಮನೆಯಲ್ಲಿ ಭಾವಿಸಲಾಗುವ ಸ್ವಂತಿಕೆ ಮಗಳ ಮನೆಯಲ್ಲಿ ಅನ್ಯವಾಗುವುದನ್ನು ಕಥೆ ನಿರೂಪಿಸುತ್ತದೆ. ಮಗ ಸ್ವಂತ ಮಗಳು ಅನ್ಯ ಎಂಬ ಪರಂಪರಾಗತ ನಂಬಿಕೆಯೆ ಗಂಡು ಸಂತಾನದ ಪ್ರಾಶಸ್ತ್ಯಕ್ಕೆ ಕಾರಣವಾಗುತ್ತದೆ. ಮಗನನ್ನು ಕಳೆದುಕೊಂಡ ಭಾರತೀಶ ತನ್ನತನವನ್ನು ಕಳೆದುಕೊಂಡಂತಾಗುತ್ತಾನೆ. ಅವನ ಆಸ್ತಿಯನ್ನು ಅವನ ಹೆಣ್ಣುಮಕ್ಕಳ ಮೂಲಕವೇ ಕಿತ್ತುಕೊಳ್ಳಲು ಅಳಿಯಂದಿರು ಪ್ರಯತ್ನಿಸುತ್ತಾರೆ. ಮಹಿಳೆ ಇಲ್ಲಿ ಬಳಕೆಯಾಗುತ್ತಾಳೆ. ಅವಳ ಹಿಂದಿನ ಪುರುಷ ಚಹರೆ ವ್ಯಕ್ತವಾಗದೆ ಅವಳೇ ದೋಷಿಯಾಗಿ ಭಾವಿಸಲ್ಪಡುತ್ತಾಳೆ.

ಚಂದ್ರಕಾಂತ ಕುಸನೂರರ 'ಕೆರೂರ ನಾಮಾ' ಕಾದಂಬರಿಯಲ್ಲಿ ತುಳಸಕ್ಕ ವಿಧವೆಯಾದರೂ ಮಡಿಯಾಗದೆ ಸಕೇಶಿಯಾಗುಳಿಯುತ್ತಾಳೆ. ಆಸ್ತಿಯಲ್ಲಿ ಭಾಗ ಪಡೆದು ಬೇರೆಯಾಗುತ್ತಾಳೆ. ಮಕ್ಕಳಿಲ್ಲದ ಅವಳು ಇರುವವರೆಗೆ ಮೈದುನನ ಕುಟುಂಬದೊಂದಿಗೆ ಕೂಡಿ ಇರಬೇಕೆಂದು ಹೇಳಿದರೂ ಹಟದಿಂದ ತುಳಸಕ್ಕ ಬೇರೆಯಾಗುತ್ತಾಳೆ. ಮೈದುನ ಶಾಂತಾರಾಮನಿಗೆ ತುಳಸಕ್ಕನ ಭಾಗಕ್ಕೆ ಒಳ್ಳೆಯ ಹೊಲ ಹೋದುದು ಬೇಸರವಾಗುತ್ತದೆ. ತುಳಸಕ್ಕ ಶ್ರಮಪಟ್ಟು ದುಡಿದು ಒಳ್ಳೆ ಬೆಳೆ ಪಡೆದಾಗಲೂ ಅಸಮಾಧಾನಗೊಳ್ಳುತ್ತಾನೆ.

ಹಿಂದೆ ತುಳಸಕ್ಕನನ್ನು ಮದುವೆಯಾಗಲು ಬಯಸಿದ್ದ ರಾಮಾಚಾರಿ ಅವಳಿಗೆ ವೈಧವ್ಯ ಪ್ರಾಪ್ತವಾದಾಗ ಸಂಗೀತ ಕಲಿಸುವ ನೆಪದಲ್ಲಿ ಹತ್ತಿರವಾಗಿ ತನ್ನ ಮಗನನ್ನು ಆಸ್ತಿಗೆ ಮುತ್ತನ್ನ ಮಾಡಬೇಕೆಂದು ಹೊಂಚುತ್ತಾನೆ. ಆದರೆ ತುಳಸಕ್ಕ ಆ ಕುರಿತು ಮಾತನಾಡದೇ ಇದ್ದಾಗ ಒಂದು ದಿನ ಮಧ್ಯಾಹ್ನ ಯಾರೂ ಇಲ್ಲದ ಸಮಯ ಸಾಧಿಸಿ ಅವಳ ಮೇಲೆ ಅತ್ಯಾಚಾರವೆಸಗುತ್ತಾನೆ. ತುಳಸಕ್ಕ ನೇಣು ಹಾಕಿಕೊಂಡು ಸಾಯುತ್ತಾಳೆ.

ಆಸ್ತಿಗೆ ಹೆಣ್ಣು ವಾರಸುದಾರಳಾಗುವುದನ್ನು ಸಹಿಸದ ಪುರುಷ ಸಮಾಜ ಅದನ್ನು ಹೇಗಾದರೂ ಕಬಳಿಸಲು ಪ್ರಯತ್ನಿಸುತ್ತದೆ. ತಾನೇ ಕಿತ್ತುಕೊಳ್ಳಲು ಸಾಧ್ಯವಿಲ್ಲದಾಗ ಅವಳೇ ಬಿಡುವಂತೆ ಪರಿಸ್ಥಿತಿಯನ್ನು ನಿರ್ಮಿಸುತ್ತದೆ. ಗಂಡ ಸತ್ತ ಮೇಲೆ ಯಾರ ಹಂಗಿಲ್ಲದೆ ದುಡಿದು ತನ್ನ ಪಾಡಿಗೆ ತಾನು ಬದುಕಬೇಕೆಂದರೂ ಅದಕ್ಕೆ ಅನುಕೂಲ ವಾತಾವರಣವಿಲ್ಲದೆ ಮಹಿಳೆಯ ಬದುಕು ಸಮಸ್ಯೆಗಳ ಸುಳಿಯಲ್ಲೆ ಸುತ್ತಬೇಕಾಗುವುದನ್ನು ಕಾದಂಬರಿ ಮಂಡಿಸುತ್ತದೆ.

ಕಾಶಮ್ಮ ಅಳುಮುಂಜಿಯಾಗದೆ ದಿಟ್ಟಳಾಗುವ ಮೂಲಕ ತನ್ನ ಹೊಲವನ್ನುಳಿಸಿಕೊಳ್ಳುತ್ತಾಳೆ. ಮಾತ್ರವಲ್ಲ ಸ್ವಾಮಿಯ ವರ್ತನೆಯನ್ನು ನೇರವಾಗಿ ಖಂಡಿಸುತ್ತಾಳೆ. ತನಗೆ ಅನ್ಯಾಯವಾಗದಂತೆ ಎಚ್ಚರವಹಿಸುತ್ತಾಳೆ.

ಶ್ರೀಕಾಂತ ಪಾಟೀಲರ 'ಮೂಡಲದಾಗ ಕೆಂಪು ರಾಶಿ ಮೂಡಿತ್ತು' ಕಥೆ ಆಸ್ತಿಗಾಗಿ ಸಣ್ಣಿಯ ಹೋರಾಟವನ್ನು ವಸ್ತುವಾಗಿ ಉಳ್ಳದ್ದು. ಸಣ್ಣಿ ಎಂದೇ ಗುರುತಿಸಲ್ಪಡುವ ಶಾಂತಾಬಾಯಿ ಶಾಂತಪ್ಪನ ಕೈಹಿಡಿದು ಬಂದವಳು. ಬಾಳೇವಂತ ಹೆಣ್ಣೆಂದು ಮನ್ನಣೆ ಪಡೆದವಳು. ಗಂಡು ಮಕ್ಕಳಿಲ್ಲದ ಸಣ್ಣಿಗೆ ಮೊದಲಿನಂದಲೂ ಅನ್ಯಾಯವಾಗುತ್ತ ಬಂದರೂ ಸಹಿಸಿಕೊಂಡು ಇದ್ದೊಬ್ಬ ಮಗಳ ಬಾಳನ್ನು ಚಂದವಾಗಿಸಲು ಶ್ರಮಿಸುತ್ತಾಳೆ. ಮನೆಬೇರೆಯಾದರೂ ಇವಳ ಪಾಲಿಗೆ ಬಂದದ್ದು ಖಾಲಿ ಜಾಗ ಅಲ್ಲೇ ಹೇಗೋ ಸುಧಾರಿಸಿಕೊಂಡು ಬಾಳುತ್ತಾಳೆ. ಹೊಲವೆಲ್ಲ ಓರಿಭಾವ ಭೀಮಶ್ಯಾನ ಹೆಸರಲ್ಲೇ ಇರುತ್ತದೆ. ಹೊಲಮನೆ ಕೊಡುವುದಾಗಿ ವಾಗ್ದಾನ ಮಾಡಿ ಮಗಳು ಬಸಮ್ಮನ ಮದುವೆ ಮಾಡುತ್ತಾರೆ. ಆದರೆ ಕೊಡಬೇಕಾಗಿ ಬಂದಾಗ ಕೊಡಬಾರದೆಂಬ ದೂರ್ತತನದಲ್ಲಿ ಹೊಡೆದು ಬಡಿದು ಹೆದರಿಸಿ ದಬ್ಬಾಳಿಕೆ ಮಾಡುತ್ತಾರೆ. ಅಳಿಯ ಪ್ರಕಾಶನನ್ನು ಹೆದರಿಸಿ ತಾವೇ ಗಳೆ ಹೂಡುತ್ತಾರೆ. ಸಣ್ಣಿ ದುಡಿದು ಹೊಲದಲ್ಲಿ ತುಂಬು ಬೆಳೆ ಬಂದಾಗ ದನ ಮೇಯಿಸಿ ಇಲ್ಲವೆ ಬೆಳೆ ಚಂಡಿಯಾಡಿ ಇವರಿಗೆ ದಕ್ಕದಂತೆ ಮಾಡುತ್ತಾರೆ, ಬೇಸತ್ತ ಸಣ್ಣಿ ಪಂಚಾಯ್ತಿಗೆ ಮೊರೆ ಹೋಗುತ್ತಾಳೆ.

ಪಂಚಾಯ್ತಿಯಲ್ಲಿ ಸಣ್ಣಿಯ ಭಾವಂದಿರಾದ ಭೀಮಶ್ಯಾ ಶಂಕರರು ಪಂಚರನ್ನೆ ಹೆದರಿಸಿ ಎದ್ದು ಹೋದಾಗ, ಉಪಾಯವಿಲ್ಲದೆ ನ್ಯಾಯಾಲಯದ ಕಟ್ಟೆ ಏರುತ್ತಾಳೆ. ಬೆದರಿಕೆಯ ಕಾರಣವಾಗಿ ಯಾರೂ ಸಾಕ್ಷಿ ನುಡಿಯದೆ ನ್ಯಾಯಾಲಯದಲ್ಲಿ ದಾವೆ ದುರ್ಬಲವಾದಾಗ, ಅಳಿಯನೂ ಹೆದರಿ ಊರು ಬಿಟ್ಟು ಹೋದಾಗ, ಸಣ್ಣಿ ಹೆದರದೆ ಮಗಳನ್ನು ಕರೆದುಕೊಂಡು ಮರುದಿನ ತಾನೆ ಹೊಲದಲ್ಲಿ ನೇಗಿಲು ಹೂಡುತ್ತಾಳೆ. ಗಂಡುಗಚ್ಚೆ ಹಾಕಿ ಟೊಂಕಕ್ಕೆ ಸೆರಗು ಸುತ್ತಿ ನೇಗಿಲು ಹೊಡೆವಾಗ ದರ್ಪದಿಂದ ಏರಿ ಬಂದ ಪರಮಣ್ಣನನ್ನು ಬಾರಕೋಲಿನಿಂದ ಮೈಮುರಿ ಹೊಡೆಯುತ್ತಾಳೆ. ಬಸಮ್ಮ ಕುಡಗೋಲು ಹಿಡಿದು ನಿಲ್ಲುತ್ತಾಳೆ. ಸಣ್ಣಿ 'ನೇಗಲಾ ಹೊಡ್ಡವರು ಯಾರಂತಿ ಏನೋ ಮನೆಮುರ್ಕಾ, ನಿನ್ನ ಮಾರಿಮ್ಯಾಲ ಮೀಸಿ ಇದ್ರ ನನ್ನ ಎದ್ಯಾಗ ಅವ್ಹೋ, ನೀವೆಲ್ಲಾ ಎಷ್ಟು ಬೀಜದವರಂತ ಇವತ್ತ ನೋಡೆ ಬಿಡ್ತೀನಿ' ಎಂದು ಹೊರಳಾಡಿಸಿ ಹೊಡೆಯುವಾಗ ಬಸಮ್ಮ 'ನನ್ನಪ್ಪನ ಆಸ್ತಿಗೆ ನೀವ್ಯಾರೋ ಕೇಳವರು ಇಂದ ನೀವರೆ ಇರಬೇಕು ಈ ಭೂಮಿತಾಯಿ ಮ್ಯಾಲ ಇಲ್ಲ ನಾವರೇ ಇರಬೇಕು.' ಎಂದು ಓಡಿ ಬಂದಾಗ ಪರಮಣ್ಣ ಹಿಂದೆ ನೋಡದೆ ಓಡಿ ಹೋಗುತ್ತಾನೆ.

ಇಡೀ ವ್ಯವಸ್ಥೆ ಅಂದರೆ ಪಂಚರು, ನ್ಯಾಯಾಲಯವೆಲ್ಲ ಪುರುಷ ಪರವಾಗಿರುವ ಸಂದರ್ಭದಲ್ಲಿ ತನ್ನ ಹಕ್ಕಿಗಾಗಿ ಯಾಚಿಸಿದರೆ ಸಾಲದು ಅದನ್ನು ಪಡೆಯಲು ಹೋರಾಟ, ಮನೋಬಲಗಳು ಅವಶ್ಯವೆಂಬುದನ್ನು ಕಥೆ ಸಣ್ಣಿಯ ಮೂಲಕ ಸಾಂದ್ರವಾಗಿಸುತ್ತದೆ.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಆಸ್ತಿ ಸಂಬಂಧಿ ಪ್ರಸ್ತಾಪ ಬರುವುದು ಸಾಮಾನ್ಯವಾಗಿ ವಿಧವೆಯರ ಸಂದರ್ಭದಲ್ಲಿ ವಿಧವೆಯರಿಗೆ ಪಾಲು ಕೊಡಬಾರದೆಂಬ ಧೋರಣೆಯೆ ಸಮಾಜದಲ್ಲಿ ನೆಲೆಗೊಂಡಿರುವುದನ್ನು, ವಿಧವೆಯ ಆಸ್ತಿಯನ್ನು ಸಂಬಂಧಿಗಳು, ಸಂಬಂಧಿಗಳಲ್ಲದವರು ಕಿತ್ತು ಕೊಳ್ಳಲು ಪ್ರಯತ್ನಿಸುವುದನ್ನು ಕಾಣಬಹುದು. ವಿಧವೆಯರೂ ತಮ್ಮ ಪಾಲನ್ನು ಪಡೆಯಲು ಹೋರಾಡುವುದು, ಕಾಶಮ್ಮ ಸಣ್ಣಿ ತುಳಜಾ ಈ ಪ್ರಯತ್ನದಲ್ಲಿ ಸಫಲರಾದರೆ ವೃಂದಾಬಾಯಿ ನಾಗಮ್ಮನಂಥವರು ವಿಫಲರಾಗುತ್ತಾರೆ. ಮಹಿಳೆ ಕಾನೂನುಬದ್ಧವಾಗಿ ಸಹಜವಾಗಿ ಆಸ್ತಿಪಾಲನ್ನು ಪಡೆಯಬಹುದಾದ ಅವಕಾಶವಿದ್ದಾಗಲೂ ಹೋರಾಡದೆ ಗತ್ಯಂತರವಿಲ್ಲ ಎಂಬಂಥ ಸ್ಥಿತಿಯೆ ಇಂದಿಗೂ ಕಂಡು ಬರುತ್ತದೆ.

೪.೩.೧೪ ಕಟ್ಟಿಕೊಂಡ ಬದುಕು

ಕುಟುಂಬವನ್ನು ಕಾಯುವ ಶಕ್ತಿ ಯಾವುದೆಂದು ಸ್ವಲ್ಪ ಆಲೋಚಿಸಿ ನೋಡಿದರೆ ಅದು ಹೆಣ್ಣು ಎಂಬುದು ಸ್ಪಷ್ಟವಾಗುತ್ತದೆ. ಒಂದು ವೇಳೆ ಮಹಿಳೆ ಈ ಕೆಲಸದಲ್ಲಿ ತೊಡಗಿಕೊಳ್ಳಲಿಲ್ಲವೆಂದರೆ, ಕುಟುಂಬ ಗತಿಯ ಕಾರ್ಯವಿಧಾನಕ್ಕೆ ಧಕ್ಕೆಯೊದಗಿತು ಎಂದರೆ ಕುಟುಂಬ ರಚನೆ ವಿಚ್ಛಿದ್ರಗೊಳ್ಳುವ ಅಪಾಯಕ್ಕೆ ತುತ್ತಾಗುತ್ತದೆ. ಸಮಾಜ ಸಮುದಾಯಗಳೊಂದಿಗೆ ಮಹಿಳೆಯ ಸಂಬಂಧ ಅಷ್ಟೊಂದು ಪ್ರಭಾವಶಾಲಿಯಾದದ್ದಾದರೂ ಅಲ್ಲಿ ಅವಳ ಸ್ಥಾನಮಾನಗಳೇನೂ ನಿರೀಕ್ಷಿತ ಮಟ್ಟದ ಗೌರವದಿಂದ ಕೂಡಿಲ್ಲ. ಇಷ್ಟಾದರೂ ಕುಟುಂಬ ಕಾಯುವ ಕೆಲಸದಿಂದ ಅವರು ಹಿನ್ನಡೆದಿಲ್ಲ. ತಮ್ಮ ದುಡಿಮೆ , ಸಮಯಗಳಷ್ಟನ್ನು ಕುಟುಂಬದ ಸುಭದ್ರತೆಗಾಗಿಯೇ ವ್ಯಯ ಮಾಡುತ್ತಾರೆ. ಹೈದರಾಬಾದ ಕರ್ನಾಟಕದ ಕಥನ ಸಾಹಿತ್ಯದಲ್ಲಿಯ ಮಹಿಳೆಯರು ಕುಟುಂಬದ ಉತ್ಪಾದನಾ ಚಟುಚಟಿಕೆಯಲ್ಲಿ ತೊಡಗಿಕೊಳ್ಳುವ ವಿಧಾನ ಬೆರಗುಗೊಳಿಸುವಂಥದು. ಮಹಿಳೆ ತನ್ನ ಜೀವಿತಾವಧಿಯ ಎಲ್ಲ ಸಮಯವನ್ನು ಬಳಸಿದರೂ ಸಾಕಾಗದೆ ಹೋಗುತ್ತದೆ. ಬದುಕು ಕಟ್ಟುವ ಅವರ ಪ್ರಯತ್ನ ಶ್ರಮ ಅಗಾಧವಾದುದು. ಸಾಮಾಜಿಕ ನಿರೀಕ್ಷೆಯಂತೂ ಮಹಿಳೆ ಹೀಗೇ ಇರಬೇಕೆಂದು ಬಯಸುತ್ತದೆ. ಅವರ ಶ್ರಮ ಮತ್ತು ಮಹತ್ವವನ್ನು ಗುರುತಿಸುವ ಪ್ರಯತ್ನ ಕಥನ ಸಾಹಿತ್ಯದಲ್ಲಿ ಮಂಡಿತವಾಗಿದೆ.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಬದುಕು ಕಟ್ಟುವವರಾಗಿ ಶಾಂತರಸರ ಸಣ್ಣಗೌಡಸಾನಿ ಕಾದಂಬರಿಯ ಮಾಬಮ್ಮ, ಬೂದೆಮ್ಮ, ರಾಚಮ್ಮ, ಮಲ್ಲಿಕಾರ್ಜುನ ಹಿರೇಮಠರ 'ಹವನ' ಕಾದಂಬರಿಯ ಡುಗ್ಲಿಬಾಯಿ, 'ಲಕ್ಕವ್ವನ ಮಂದಿ' ಕಥೆಯ ನಾಗವ್ವ, ಶ್ರೀಕಾಂತ ಪಾಟೀಲರ 'ಸನ್ಮಾರ್ಗ' ಕಥೆಯ ಸೋನಕ್ಕ, ರಾಜಶೇಖರ ನೀರಮಾನ್ವಿಯವರ 'ವೃತ್ತ' ಕಥೆಯ ಪಾರ್ವತಿ ಗೌಡತಿ, ಎಂ.ಜಿ. ದೇಶಪಾಂಡೆಯವರ 'ವಿಪರ್ಯಾಸ' ಕಥೆಯ ಪ್ರಿಯಾ 'ಚರಿತ್ರ ಹೀನ' ಕಥೆಯ ರಂಜಿನ, ಗೀತಾ ನಾಗಭೂಷಣರ 'ಧುಮಸ್ಸು' ಕಾದಂಬರಿಯ ಸೋನಿ, ಲಲಿತಾ ದೇಮಶೆಟ್ಟಿಯವರ 'ಆರಕ್ಷಕ' ಕಥೆಯ ಪಾರ್ವತಿ, ಬಿ.ಟಿ.ಲಲಿತಾನಾಯಕರ 'ಗತಿ' ಕಾದಂಬರಿಯ ಲಚ್ಚಿ, ಸಂಧ್ಯಾ ಹೊನಗುಂಟಿಕರ ಅವರ 'ಜಿಜೀವಿಷಾ' ಕಥೆಯ ನಾಯಕಿ, 'ಇಳಿ ಹೊತ್ತಿನಲ್ಲಿ ಕದ ತಟ್ಟಿದ ಅತಿಥಿ' ಕಥೆಯ ಡಾ. ಮಂದಾಕಿನಿ, ಜಯತೀರ್ಥ ರಾಜ ಪುರೋಹಿತರ 'ಕತೆಗಾರ್ತಿ' ಕಥೆಯ ಸೀತಾ, ಅಮರೇಶ ನುಗಡೋಣಿಯವರ 'ದಾರಿ ಮೂಡಿಸುವ ಹೆಜ್ಜೆಗಳು' ಕಥೆಯ ತಿಮ್ಮಕ್ಕ, ಗೀತಾನಾಗಭೂಷಣರ 'ಬದುಕು' ಕಾದಂಬರಿಯ ಬೆಳ್ಳಿ ಇವರೆಲ್ಲ ಜೀವನದಲ್ಲಿ ಎದುರಾದ ಸಮಸ್ಯೆಗಳನ್ನು ಅತ್ಯಂತ ಸಮರ್ಥವಾಗಿ ಎದುರಿಸಿ ತಮ್ಮ ಬದುಕನ್ನು ಕಟ್ಟಿಕೊಳ್ಳುವುದರ ಜೊತೆಗೆ ಇತರರ ಬದುಕನ್ನು ಕಟ್ಟಿಕೊಡುವವರಾಗಿದ್ದಾರೆ.

ಶಾಂತರಸರ 'ಸಣ್ಣ ಗೌಡಸಾನಿ' ಕಿರು ಕಾದಂಬರಿಯ ಮಾಬಮ್ಮ ಬದುಕು ಕಟ್ಟುವ ಹೆಣ್ಣಾಗಿ ಒಡಮೂಡಿದ್ದಾಳೆ. ಮಾಬಿ ಸಿದ್ದನಹಳ್ಳಿಗೆ ಬಂದಾಗ ಅವಳನ್ನು ಒಲಿಸಿಕೊಳ್ಳಲು ಸೂಗನ ಗೌಡ, ಗಂಗಪ್ಪ ಸಾಹುಕಾರನ ನಡುವೆ ತೀವ್ರ ಪೈಪೋಟಿ ನಡೆದು ಮಾಬಿ ಸೂಗನಗೌಡನಿಗೆ ಒಲಿದಾಗ ಗಂಗಪ್ಪ ನಿರಾಶನಾಗುತ್ತಾನೆ. ಕಾಳವ್ವನ ಮೇಲೆ ರೇಗುತ್ತಾನೆ. ಆಕೆ ತಾನೆಷ್ಟು ಪ್ರಯತ್ನಿಸಿದರೂ ಮಣಿಯದೆ 'ಆ ಸೊಟ್ ಮೋತಿ ಸಾಹುಕಾರನ ಕೂಡದಕ್ಕಿಂತ ಹೊಲೆ ಮಾದಿಗರ ಜತೆ ಮಲಗದು ಬೇಸು' ಎಂದು ಅಂದಳೆಂದು ಹೇಳುತ್ತಾಳೆ. ಈ ಒಂದು ಮಾತಿನಿಂದ ಗಂಗಪ್ಪನ ಸ್ವಾಭಿಮಾನ ಕೆರಳಿ ನಿಲ್ಲುತ್ತದೆ ಸೇಡಿಗೆ ಹೊಂಚುತ್ತಾನೆ.

ತನ್ನ ಉದಾತ್ತ ಗುಣದಿಂದ ಎಲ್ಲರ ಮನ ಗೆಲ್ಲುವ ಮಾಬಿ ಸಣ್ಣ ಗೌಡಸಾನಿ ಎಂಬ ಗೌರವಕ್ಕೆ ಪಾತ್ರಳಾಗುತ್ತಾಳೆ. ಸಣ್ಣ ಗೌಡಸಾನಿ ಮಾಬಮ್ಮ ದೇವ್ರಂತ ಮನಿಸ್ಯಾಳು, ಬಡವರ ಮ್ಯಾಲೆ ಬಾಳ ದಯಾ ಆಯಮ್ಮಂದು, ನನ್ನ ಮಾನ ಉಳಿಸಿದ್ಲು, ಆ ತಾಯಿನ್ನ ಬೆಳಗೆದ್ದು ನೆನಿಬೇಕು' ಎಂದು ಬಡವರ ಆದರ ಗಳಿಸುವ, 'ಮಾಬಮ್ಮಾ, ಈ ಗಂಡಸು, ಎಂದೂ ಹೆಂಗಸರ ಕಡೆ ಲಕ್ಷ ಕೊಡದಿಲ್ಲ, ತಮ್ಮ ಸುಖಾನೆ ನೋಡಿಕೆಂತಾರ, ಸುಖಕ್ಕೇನಾದ್ರೂ ಅಡ್ಡ ಬಂದ್ರೆ ನಮ್ಮನ್ನೇ ಗುರಿ ಮಾಡ್ತಾರ. ಗೌಡ್ರು ಹೆಂಗನ ಇರ್ಲಿ ನಾವು ಚಂದಾಗಿರಮ್ಮು' ಎನ್ನುವ ಪಾರ್ವತಿ ಗೌಡಸಾನಿಯ ಪ್ರೀತಿಯವಳಾಗುವ ಸಕ್ರೆಪ್ಪನ ಸೊಸೆಯ ಹೆರಿಗೆ ತೊಂದರೆದಾಯಕವಾದಾಗ ತನಗೆ ತಿಳಿದ ಉಪಾಯದಿಂದ ಹೆರಿಗೆಯನ್ನು ಸುಲಭವಾಗಿಸುವ ಮಾಬಮ್ಮ ಊರಿಗೆ ಬೇಕಾದವಳಾಗುತ್ತಾಳೆ. ಊರವರ ಕಷ್ಟಕ್ಕೆ ಮಿಡಿದು ಮಾನವೀಯ ಅಂಥಕ್ಕರಣದವಳಾಗುತ್ತಾಳೆ. ಆದರೆ ಗಂಗಪ್ಪನ ಎಡೆಬಿಡದ ಕಾಡುವಿಕೆಯಿಂದ ಬಿಡುಗಡೆಯಾಗದೆ ಊರಿಗೆ ಮಾತ್ರವಲ್ಲ ಜಗತ್ತಿಗೇ ಎರವಾಗುತ್ತಾಳೆ.

ಹೀಗೆ ಮಾಬಿ ಜೀವನ ಪರ್ಯಾಂತ ಸಂಘರ್ಷವನ್ನು ಎದುರಿಸಿದರೂ ತನ್ನಿಚ್ಛೆಯಂತೆ, ತನ್ನಾಯ್ಕೆಯ ಬದುಕನ್ನು ಕಟ್ಟಿಕೊಳ್ಳುತ್ತಾಳೆ. ಅದಕ್ಕೆ ಧಕ್ಕೆ ಬರುವಂತಾದಾಗ ಆತ್ಮಗೌರವಕ್ಕೆ ಚ್ಯುತಿ ತಂದುಕೊಳ್ಳದೆ, ಬಂದುದನ್ನು ಸಮತ್ವದಿಂದ ಸ್ವೀಕರಿಸಿ ಯಾವ ವಿರಾಗಿಗೂ ಕಡಿಮೆ ಇಲ್ಲದ ನಿರ್ಲಿಪ್ತತೆಯಿಂದ ತೆರಳುತ್ತಾಳೆ. ಕಾದಂಬರಿಯಲ್ಲಿ ಮಾಬಿ ಧೀರೋದಾತ್ತ ವ್ಯಕ್ತಿಯಾಗಿ ಪ್ರತಿನಿಧೀಕರಣಗೊಂಡಿದ್ದಾಳೆ.

ಇದೇ ಕಾದಂಬರಿಯಲ್ಲಿ ಪಾರ್ವತಿ ಹೆರಿಗೆಯಲ್ಲಿ ಅಸುನೀಗಿದಾಗ ಅವಳ ಮಗುವಿಗೆ ಸಣ್ಣಪ್ಪನ ಹೆಂಡತಿ ಬೂದೆಮ್ಮ ತನ್ನ ಎದೆ ಹಾಲು ಕೊಟ್ಟು ಪೋಷಿಸುತ್ತಾಳೆ. ಹೆರಿಗೆಯಾಗಿ ಎರಡು ತಿಂಗಳಾಗಿದ್ದ ಬೂದೆಮ್ಮ ತನ್ನ ಮಗುವಿನೊಂದಿಗೆ ಪಾರ್ವತಿಯ ಮಗುವನ್ನು ಬದುಕಿಸುವ ಮಹಾತಾಯಿಯಾಗುತ್ತಾಳೆ. ಸಾಮಾಜಿಕ ಬದುಕಿನಲ್ಲಿ ಇಂಥ ಮಹಿಳೆಯರನೇಕರಿದ್ದಾರೆ. ಅವರ ಜೀವದಾಯಿ ಕಾರ್ಯವನ್ನು ಶಾಂತರಸರು ಇಲ್ಲಿ ಗುರುತಿಸಿದ್ದಾರೆ.

ಪಾರ್ವತಿಯ ಸಾವಿಗೆ ಮಾಬಿಯೆ ಕಾರಣಳೆಂದು ಪ್ರಚಾರ ಮಾಡುವ ಮೂಲಕ ಸೂಗನಗೌಡ ಮಾಬಿಯರ ಬದುಕಿನ ನೆಮ್ಮದಿಯನ್ನು ಭಂಗಗೊಳಿಸುತ್ತಾನೆ ಗಂಗಪ್ಪ. ಇಂಥ ವಿಪರೀತ ಪರಿಸ್ಥಿತಿಯಲ್ಲಿ ಮನೆಯ ವಾತಾವರಣ ತಿಳಿಯಾಗಿ ಬದುಕು ಸುಗಮವಾಗಲು ಗುರುಬಸಪ್ಪನ ಹೆಂಡತಿ ರಾಚಮ್ಮನ ಪಾತ್ರ ಮಹತ್ವದ್ದು, ರಾಚಮ್ಮ ಗಂಡನಿಗೆ 'ಈಗ ಈ ಮಾಬಮ್ಗ ಸಂಶಯ ಬರಂತೆ ನಾವ್ ನಡದ್ರೆ, ಆಕಿ ಮನ್ಸಿಗೆ

ನೋವಾಗುವಂತೆ ನಾವೇನಾದ್ರೂ ಅಂದ್ರ ಆಕಿ ಖಂಡಿತ ಜೀವದಿಂದ ಉಳ್ಯದಿಲ್ಲ. ಬಲನಾಜೂಕು ಹುಡ್ಗಿ ಅದು. ಅವ್ಳು ಏನಾದ್ರೂ ಮಾಡಿಕೊಂಡ್ರೆ ಸೂಗಣ್ಣನ ಮನ್ಸು ಸರಿ ಉಳಿಲಿಕ್ಕಿಲ್ಲ. ಮಾಬಿ ಮ್ಯಾಲೆ ಬಾಳ ಪ್ರೀತಿ ಆತಂದು. ಆತಗ ಆದ ದುಃಖ ಮಾಬಿನೇ ಕಳೀಬೇಕು. ಮಾಬಿಗೆ ನೀವು ಧೈರ್ಯ ಹೇಳ್ರಿ. ಅಳ್ಯಾಗ ಹೇಳ್ರಿ. ನಾನೂ ಹೇಳ್ತೀನಿ'... ಎಂದು ಮನೆಯ ಗಂಭೀರ ವಾತಾವರ ತಿಳಿಗೊಳಿಸುವ ಪ್ರಯತ್ನ ಮಾಡುತ್ತಾಳೆ. ಅವಳೇನಾದರೂ ಅಲಕ್ಷಿಸಿದ್ದರೆ ಕೊಲೆಯಂತ ಅಪವಾದ ಹೊತ್ತ ಮಾಬಮ್ಮ ಬದುಕುಳಿಯುವುದು ಕಷ್ಟವಾಗುತ್ತಿತ್ತು. ಅವಳನ್ನೆ ನೆಚ್ಚಿದ ಸೂಗನ ಗೌಡನ ಬದುಕು ಘಾಸಿಗೊಳ್ಳುತ್ತಿತ್ತು. ರಾಚಮ್ಮ ಮನಸ್ಸುಗಳನ್ನು ಬೆಸೆದು ಬಿಕ್ಕಟ್ಟನ್ನು ಬಗೆಹರಿಸುತ್ತಾಳೆ. ಹೀಗೆ ಬದುಕು ಕಟ್ಟುವ ಕ್ರಿಯೆಯಲ್ಲಿ ಇಲ್ಲಿಯ ಮಹಿಳೆಯರು ಶ್ರಮಿಸುತ್ತಾರೆ.

ಮಲ್ಲಿಕಾರ್ಜುನ ಹಿರೇಮಠರ 'ಹವನ' ಕಾದಂಬರಿಯಲ್ಲಿ ಡುಗ್ಗಿಬಾಯಿ ತನ್ನ ಧಂದೆಯಿಂದ ಇತರರ ದೃಷ್ಟಿಯಲ್ಲಿ ಕೆಳಮಟ್ಟದವಳಾಗಿ ಕಂಡರೂ ಅವಳ ಮಾನವೀಯ ಗುಣ ಅಪರೂಪದ್ದು. ಅನಾಥ ಶಿಶುವೊಂದನ್ನು ಅತ್ಯಂತ ಪ್ರೀತಿಯಿಂದ 'ಇಲ್ಲದವರ ಮಕ್ಕಳು. ಇದ್ದವರ ಕೈಯಾಗ್' ಎಂಬಂತೆ ಮೊಲೆಯುಣಿಸಿ. ಆಡಿನ ಹಾಲು ಕುಡಿಸಿ ಜೋಪಾನ ಮಾಡುತ್ತಾಳೆ. ಹುಟ್ಟಿ ಬಂದ ಜೀವಿಯನ್ನು ಉಳಿಸೋದು ಬೆಳೆಸೋದು ಮನುಷ್ಯ ಧರ್ಮ ಎಂದು ಬರಿ ಬಾಯಲ್ಲಿ ಹೇಳದೆ ಆಚರಿಸುವವಳಾಗಿದ್ದಾಳೆ. ತನ್ನ ಬಡತನ ತನಗೆ ಹಾಸಿ ಹೊಚ್ಚುವಷ್ಟಿದ್ದರೂ ಇನ್ನೊಂದು ಜೀವವನ್ನ ಬದುಕಿಸಬೇಕೆಂಬ ಹಂಬಲ ಮಾನವೀಯವಾದುದು. ಬದುಕಿ ಬದುಕಿಸುವ ಹೆಣ್ಣಿನ ಗುಣ ಕಾದಂಬರಿಯಲ್ಲಿ ಸಂವೇದನಾ ಶೀಲವಾಗಿ ಪ್ರತಿನಿಧೀಕರಣಗೊಂಡಿದೆ.

ಕುಟುಂಬದಲ್ಲಿ ತನ್ನ ಮನಸ್ಸಿಗೆ ವಿರುದ್ಧವಾಗಿ ಏನಾದರೂ ನಡೆದರೆ, ಸಂಕಟ ಎದುರಾದರೆ, ಜೀವ ಹಾನಿಯಾದರೆ ಅದನ್ನು ಸಂಯಮದಿಂದ ಎದುರಿಸುವ ಪುರುಷರು ಅಪರೂಪ, ಮಹಿಳೆ ಇಂಥ ಸಂದರ್ಭಗಳನ್ನು ಸಮರ್ಥವಾಗಿ ಎದುರಿಸುತ್ತಾಳೆ ಮಾತ್ರವಲ್ಲ ಇತರರಿಗೂ ಆಸರೆಯಾಗುತ್ತಾಳೆ ಎಂಬದನ್ನು ಮಲ್ಲಿಕಾರ್ಜುನ ಹಿರೇಮಠರ 'ಲಕ್ಕವ್ವನ ಮಂದಿ' ಕಥೆಯ ನಾಗವ್ವ ಪ್ರತಿನಿಧಿಸುತ್ತಾಳೆ. ಎಪ್ಪತ್ತರ ಮುಪ್ಪಿನಲ್ಲಿಯೂ ಬೀಸುಕಲ್ಲಿಗೆ ಹೊಳೆ ಹಾಕಿ ತಾನೇ ಅರೆ ಹೊಟ್ಟೆಯವಳಾಗಿ ಬದುಕುತ್ತಿದ್ದರೂ ಬಸ್ಸಿನಲ್ಲಿ ಬರುವಾಗ ಮೂರು ಮಕ್ಕಳತಾಯಿ ಹನುಮವ್ವನನ್ನು ಅವಳ ಗಂಡ ಅಪರಿಚಿತ ಸ್ಥಳದಲ್ಲಿ ಬಿಟ್ಟು ಪಲಾಯನಗೈದುದನ್ನು ಕೇಳಿ. ದಿಕ್ಕೆಟ್ಟು ನಿಂತವಳಿಗೆ ಧೈರ್ಯ ಹೇಳಿ ತನ್ನೊಂದಿಗೆ ಕರೆದು ತಂದು, ತನ್ನ ತುತ್ತಿನಲ್ಲಿ ತುತ್ತು ಕೊಟ್ಟುದಲ್ಲದೆ. ಜ್ವರದಿಂದ ಬಳಲುವ ಮಗುವಿಗೆ ಇದ್ದ ಸ್ವಲ್ಪ ದುಡ್ಡನ್ನು ಕೊಟ್ಟು ಚಿಕಿತ್ಸೆ ಮಾಡಿಸುವ ಮೂಲಕ ಮಾನವೀಯತೆ ಮೆರೆಯುತ್ತಾಳೆ.

ಮಗುವಿಗೆ ಡಾಕ್ಟರಿಂದ ಔಷಧಿಯನ್ನು ತರುವಾಗ ಟ್ರಿಪಲ್ ಆ್ಯಂಟಿಜನ್ ಮಾಡಿಸಿದಿರೇನು? ಎಂದು ಕೇಳುವ ಸುಶಿಕ್ಷಿತ ಡಾಕ್ಟರ್ ಹಾಸ್ಯಾಸ್ಪದ ವ್ಯಕ್ತಿಯಾಗಿ ಕಾಣುತ್ತಾನೆ. ಬಡತನದ ರೇಖೆಯ ಕೆಳಗಿರುವ ಲಕ್ಕವ್ವನ ಮಂದಿಗೆ ಡಾಕ್ಟರ್‌ರಂತವರು ಹಾಸ್ಯಾಸ್ಪದ ವ್ಯಕ್ತಿಗಳಾಗಿ ಕಂಡರೆ ಆಶ್ಚರ್ಯವಿಲ್ಲ ಅಂತಹವರಿಗೆ ನಮ್ಮ ದೇಶದ ಬಡತನದ ಒಟ್ಟು ದಾರುಣ ಸ್ಥಿತಿ ಎಂತಹುದು ಎಂದು ಅರಿವು ಇರಲು ಸಾಧ್ಯವಿಲ್ಲ. ಈ ಕತೆಯಲ್ಲಿ ಕೂಡ ಬಡತನದ ಚಿತ್ರಣದ ಜೊತೆಗೆ ಮುದುಕಿ ನಾಗವ್ವನ ಮಾನವೀಯತೆಯ ಚಿತ್ರಣವು ಸೇರಿರುವುದರಿಂದ ಕಥೆಯು ಕೇವಲ ಯಾವುದೇ ಒಂದು ಯೋಚನೆಯನ್ನು ಅಥವಾ ಪಂಥವನ್ನು ಎತ್ತಿ ಹಿಡಿಯಲು ಬರೆದ ಕತೆಯಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂಬ ಮಾಧವ ಕುಲಕರ್ಣಿಯವರ ಅಭಿಪ್ರಾಯವನ್ನು ಒಪ್ಪುತ್ತಲೆ. ಬದುಕನ್ನು ಕಟ್ಟುವಲ್ಲಿ ನಾಗವ್ವನ ಪಾತ್ರದ ಉದಾತ್ತತೆಯನ್ನು ಮರೆಯಲಾಗದು.

ಇಬ್ಬರು ಗಂಡು ಮಕ್ಕಳು ಹರಯದವರಾಗಿ ಸತ್ತಾಗ ಆ ನೋವನ್ನು ಸಹಿಸದ ನಾಗವ್ವನ ಗಂಡ ಕುಡಿದು ಕುಡಿದು ಸಾಯುತ್ತಾನೆ. ತನ್ನೆಲ್ಲ ನೋವನ್ನು ಇತರರ ನೋವು ನಿವಾರಿಸುವಲ್ಲಿ ಮತ್ತು ಬಿಡುವಿಲ್ಲದ ದುಡಿಮೆಯಲ್ಲಿ ಮರೆಯಲು ಯತ್ನಿಸುವ ನಾಗವ್ವ ಪಿರಾಗಿಗೂ ಕಡಿಮೆಯಿಲ್ಲದ ಮನೋ ನಿಗ್ರಹಿಯಾಗಿ ಕಾಣುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆಯ ಸೃಷ್ಟಿಯಾದ ಅಬಲೆ ಅಸಹಾಯಕಳು ಎಂಬ ಶಬ್ದಗಳು ನಾಗವ್ವಳಂಥ ಗಟ್ಟಿ ವ್ಯಕ್ತಿತ್ವದೆದಿರು ಅರ್ಥ ಕಳೆದುಕೊಳ್ಳುತ್ತವೆ. ಮಹಿಳೆಯ ಸಾಮರ್ಥ್ಯವನ್ನು ಮಲ್ಲಿಕಾರ್ಜುನ ಹಿರೇಮಠರು ಸಶಕ್ತವಾಗಿ ಚಿತ್ರಿಸಿದ್ದಾರೆ.

ಮಹಿಳೆ ಸಮಾಜದಿಂದ ಏನನ್ನು ಪಡೆಯುತ್ತಾಳೋ ಅದನ್ನೇ ಸಮಾಜಕ್ಕೆ ನೀಡುತ್ತಾಳೆ. ಸಾಮಾನ್ಯವಾಗಿ ಇತರರ ಕಷ್ಟಕ್ಕೆ ಮಿಡಿಯುವುದು ಮಹಿಳೆಯ ಸ್ವಭಾವ. ಹೀನಾಯವಾಗಬಹುದಾದ ತನ್ನ ಬದುಕು ವಿವಾಹ ಸಂಸ್ಥೆಯ ಪ್ರವೇಶದಿಂದ ಒಂದು ಭದ್ರನೆಲೆಯನ್ನು ಕಂಡು ಆದರಿಸುವಂತಾದಾಗ, ಅಂಥ ಇಕ್ಕಟ್ಟಿಗೆ ಸಿಕ್ಕ ಮತ್ತೊಂದು ಬದುಕಿಗೆ ನೆಲೆಕಾಣಿಸುವುದನ್ನು 'ಸನ್ಮಾರ್ಗ' ಕಥೆ ಪ್ರತಿನಿಧೀಕರಿಸುತ್ತದೆ.

ಶ್ರೀಕಾಂತ ಪಾಟೀಲರ ಈ ಕಥೆಯು ಬದುಕಿ ಬದುಕಿಸುವ ಸೋನಕ್ಕನ ಜೀವನ ಸಿದ್ಧಾಂತವನ್ನು ಸಾರುತ್ತದೆ. ಸೋನಕ್ಕ ಜೀವನದಲ್ಲಿ ಸಾಕಷ್ಟು ನೊಂದು ಬೆಂದವಳು. ವೇಶ್ಯಾವೃತ್ತಿಗಿಳಿಯ ಬೇಕಾಗಿದ್ದ ಅವಳ ಬದುಕಿಗೆ ಮೋನಪ್ಪ ಪ್ರೀತಿಯ ಧಾರೆ ಎರೆದು ಗರತಿಯ ಘನತೆ ತಂದು ಕೊಡುತ್ತಾನೆ. ಕನಸಿನಲ್ಲೂ ಕಂಡರಿಯದ ಬದುಕು ಸೋನಕ್ಕಾಳದಾಗುತ್ತದೆ. 'ನಿನ್ನ ಪ್ರೀತಿಯ ಮುಂದೆ ಅಚ್ಚ ಬಂಗಾರವು ಸಣ್ಣದಾಯಿತು' ಎಂದು ಹಲುಬುವ ಸೋನಕ್ಕ ಮೋನಪ್ಪ ಸತ್ತ ಮೇಲೆ ಅವನ ಪ್ರತಿಮೆ ಮಾಡಿಸಿ ಪೂಜಿಸಲು ಮಗನಿಗೆ ಹೇಳುತ್ತಾಳೆ. ಅದಕ್ಕಾಗಿ ತಾಯಿ-ಮಗ ಹಣ ಕೂಡಿಡುತ್ತಾರೆ. ಪ್ರತಿಮೆ ಮಾಡಿಸಲು ಅಕ್ಕಸಾಲಿಗರ ಮನೆಗೆ ಹೊರಟ ಮಗ ಹಣ ಕೇಳಿದಾಗ ಸೋನಕ್ಕ ಹಣವನ್ನು ಒಂದು ಒಳ್ಳೆ ಕೆಲಸಕ್ಕೆ ಕೊಟ್ಟಿರುವುದಾಗಿ ಹೇಳುತ್ತಾಳೆ. ಅದೇ ಊರ ಸಾವಂತ್ರವ್ವ ಸೊಸೆಗೆ ಮದುವೆಯಲ್ಲಿ ಒಂದು ತೊಲೆ ಬಂಗಾರವನ್ನು ತವರವರು ಕೊಡಲಲ್ಲವೆಂಬ ಕಾರಣಕ್ಕೆ ಮಗ ಸೊಸೆಯನ್ನು ಒಂದಾಗಿಸದೆ ವ್ಯಭಿಚಾರದ ಪಟ್ಟಗಟ್ಟಿ ವಿಚ್ಛೇದನದ ಸಂಚು ನಡೆಸುತ್ತಾಳೆ. ಅವಳ ಬದುಕನ್ನು ಸರಿಪಡಿಸಲು ಗಂಡ-ಹೆಂಡತಿಗೆ ಊರು ಬಿಟ್ಟು ದೂರ ಹೋಗುವ ಸಲಹೆ ಇತ್ತು, ಹಣ ಸಹಾಯ ಮಾಡುತ್ತಾಳೆ. ಹೀಗೆ ಮುರಿದು ಹೋಗುತ್ತಿದ್ದ ಸಂಬಂಧವನ್ನು ಬೆಸೆದು ಬದುಕನ್ನು ಸುಗಮಗೋಳಿಸುವ ಸೋನಕ್ಕ ಗಂಡನ ಪ್ರತಿಮೆಗಿಂತ ಹೆಣ್ಣೊಬ್ಬಳ ಬದುಕು ಮುಖ್ಯವೆಂದು ಪರಿಭಾವಿಸುವುದನ್ನು ಕಥೆ ಪ್ರತಿನಿಧಿಸುತ್ತದೆ. ಮೋನಪ್ಪನಿಂದಾಗಿ ನಿತ್ಯ ನರಕವಾಗಬಹುದಾಗಿದ್ದ ಬದುಕಿನಿಂದ ಪರಾದ ಸೋನಕ್ಕ ಜೀವನದ ಮೌಲ್ಯವನ್ನು ಬಲ್ಲವಳಾಗಿ ಒಂದು ಬದುಕನ್ನು ಕಟ್ಟುತ್ತಾಳೆ.

ರಾಜಶೇಖರ ನೀರಮಾನ್ವಿಯವರ 'ವೃತ್ತ' ಕಥೆಯು ಗೌಡರ ಬದುಕು ಕಟ್ಟಿಕೊಟ್ಟ ಗೌಡತಿಯ ವ್ಯಕ್ತಿತ್ವದ ಘನತೆಯನ್ನು ಚಿತ್ರಿಸುತ್ತದೆ.

'ಹೋಗಪಾ ಹೋಗು ಗೌಡರ ಅಂಜಿಕಿ ತೋರಸ್ತಿದ್ದಿ ನನಗ. ಆತನ್ನ ನನ್ನ ಸೆರಗಿನ್ಯಾಗ ಕಟಿಗೊಂಡೀನಿ' ತನ್ನ ಹೆಣ್ಣಾಗುವ ಮೊದಲೆ ಜೋಗತಿಯಾಗಬೇಕಿದ್ದ ಲಚಮಿ ಗೌಡನನ್ನು ಕುರಿತು ಅವನ ಅಳಿಯನಿಗೆ ಆಡಿದ ಈ ಮಾತು ಜೋಗತಿಯೊಂದಿಗೆ ಬೆಳೆಸಬೇಕೆಂದಿದ್ದ ಸಂಬಂಧದಿಂದಲೇ ವಿಮುಖವಾಗಿಸಿ ಗೌಡತಿಯೊಂದಿಗೆ ಅನ್ಯೋನ್ಯ ದಾಂಪತ್ಯಕ್ಕೆ ಎಡೆಮಾಡಿಕೊಡುತ್ತದೆ.

ಹರಪಿಗೌಡರ ಮಗಳು ಪಾರ್ವತಿ ತನ್ನ ಬಾಲ್ಯದಲ್ಲಿ ಜಾತ್ರೆಯೊಂದರಲ್ಲಿ ಜನಜಂಗುಳಿಯ ಮಧ್ಯ ತನ್ನವರಿಂದ ಅಗಲಿದ್ದಾಗ, ನೆರವಾಗಿದ್ದ ಗೌಡನನ್ನೇ ಬಯಸಿ ಮದುವೆಯಾಗುತ್ತಾಳೆ. ರಜಾಕಾರ ಹಾವಳಿಯ ಸಂದರ್ಭದಲ್ಲಿ ದೂರ್ತನಾಗಿ ವರ್ತಿಸಿದ್ದ ಹುಸೇನಿ ತನ್ನ ಸಂಸಾರದೊಂದಿಗೆ ಬಂದು ಆಶ್ರಯ ಕೇಳುತ್ತಾನೆ. ಗೌಡರು ಹಿಂದೆ ಮುಂದೆ ನೋಡುತ್ತಿದ್ದಾಗ 'ನೀ ಈ ಕಡೆ ಬಾ ಮಾಬಮ್ಮಾ ಹಬೀಬನ್ನ ಕರಕೊಂಡು ಅವರಿಗೆ ಹೇಳಿಬಿಟ್ರಿ. ಇಲ್ಲೆ ಅಂಕಣದಾಗ ಮಲಕ್ಕೊಳ್ಳಿ, ನಾಳೆ ಮುಂಜಾನೆ ನೋಡಿದರಾಯ್ತೆಂದು' ಕೊಟ್ಟ ನಿರ್ಣಯ ಗೌಡನ ದೃಷ್ಟಿಯಲ್ಲಿ ಗೌಡತಿ ಊರವರ ದೃಷ್ಟಿಯಲ್ಲಿ ಗೌಡ-ಗೌಡ್ತಿ ಇಬ್ಬರು ಬಹು ಎತ್ತರದ ವ್ಯಕ್ತಿಗಳಾಗುವಂತೆ ಮಾಡುತ್ತದೆ.

ಪಿತೃ ಸಂಸ್ಕೃತಿಯಲ್ಲಿ ನಿರ್ಣಯಾತ್ಮಕವಾದ ಅಧಿಕಾರವನ್ನು ಹೆಣ್ಣಿಗೆ ನೀಡಿದ್ದು ವಿರಳ. ಅವಳೇನಿದ್ದರೂ ಪುರುಷ ನಿರ್ಣಯಗಳನ್ನು ಕೇಳಿ ಪಾಲಿಸಬೇಕಾದವಳು. ಆದರೆ ಕೆಲವೊಮ್ಮೆ ಆಕಸ್ಮಿಕವಾಗಿ ದೊರೆತ ಅಂತ ಅವಕಾಶವನ್ನು ಮಹಿಳೆ ಅತ್ಯಂತ ಸಮರ್ಥವಾಗಿ ನಿರ್ವಹಿಸಿದ್ದಾಳೆ.

ಎಂ.ಜಿ. ದೇಶಪಾಂಡೆಯವರ 'ವಿಪರ್ಯಾಸ' ಕಥೆ ಹೆಣ್ಣಿಗಾಗಿ ಹೆಣ್ಣು ಮಿಡಿಯುವ, ಬದುಕನ್ನು ಹಸನಾಗಿಸುವ ಉದಾತ್ತ ವಸ್ತುವಿನದು. ಪ್ರಿಯಾ-ಪೂಜಾ ಜೀವದ ಗೆಳತಿಯರು. ಬಿಟ್ಟಿರಲಾರದ ಅನ್ಯೋನ್ಯತೆ ಅವರದು. ಪ್ರಿಯಾಳ ಮದುವೆ ನಿಶ್ಚಯವಾಗುತ್ತದೆ. ಅಪಘಾತವೊಂದರಲ್ಲಿ ಪೂಜಾ ಕಣ್ಣು ಕಳೆದುಕೊಳ್ಳುತ್ತಾಳೆ. ತನ್ನ ಮದುವೆಗೆ ಬರಲಾಗದ ಗೆಳತಿಯನ್ನು ಭೇಟಿಯಾಗಲು ಪತಿಯೊಂದಿಗೆ ಪ್ರಿಯಾ ಬರುತ್ತಿದ್ದಾಗ ರಸ್ತೆ ಅಪಘಾತದಲ್ಲಿ ಪ್ರಿಯಾ ಕೊನೆಯುಸಿರೆಳೆಯುತ್ತಾಳೆ, ಸಾಯುವ ಮೊದಲು ಕತ್ತಲಾದ ಗೆಳತಿಯ ಬದುಕಿಗೆ ಬೆಳಕಾಗಲು ತನ್ನ ಕಣ್ಣುಗಳನ್ನು ನೀಡಬೇಕೆಂದು ಮತ್ತು ತನ್ನ ಗಂಡ ಮಧು ಅವಳನ್ನು ಮದುವೆಯಾಗಬೇಕೆಂದು ಕೇಳಿಕೊಂಡು ಪ್ರಾಣಬಿಡುತ್ತಾಳೆ.

ಪ್ರಿಯಾಳ ಗಾಢ ಸ್ನೇಹದ ಪರಿಣಾಮ ಪೂಜಾಳ ಬದುಕು ಎಲ್ಲಂದದಲ್ಲೂ ಸುಧಾರಿಸುತ್ತದೆ. ನೆಲೆ ಕಾಣುತ್ತದೆ. 'ಹೆಣ್ಣಿಗೆ ಹೆಣ್ಣು ಶತ್ರು'ವೆಂಬ ಪುರುಷ ಚಿಂತನೆ ಇಲ್ಲಿ ಅರ್ಥ ಕಳೆದುಕೊಳ್ಳುತ್ತದೆ. ಸಾಯುವ ಗಳಿಗೆಯಲ್ಲೂ ಗೆಳತಿಗಾಗಿ ಚಿಂತಿಸುವ ಪ್ರಿಯಾ ಉದಾತ್ತ ವ್ಯಕ್ತಿತ್ವದವಳಾಗಿ ಪ್ರತಿನಿಧೀಕರಣಗೊಂಡಿದ್ದಾಳೆ. ಉದಾತ್ತತೆ ದೌರ್ಬಲ್ಯಗಳು ಗಂಡು-ಹೆಣ್ಣು ಇಬ್ಬರಲ್ಲೂ ಇರುತ್ತವೆ. ಸಂದರ್ಭಕ್ಕೆ ತಕ್ಕಂತೆ ಅವು ಹೊರಹೊಮ್ಮುತ್ತವೆ ಎಂಬುದನ್ನು ಕಥೆಯಲ್ಲಿ ಕಾಣಬಹುದಾಗಿದೆ. ಹೀಗೆ ಪ್ರಿಯಾ ಪೂಜಾಳ ಬದುಕನ್ನು ಕಟ್ಟಿಕೊಡುತ್ತಾಳೆ.

ಎಂ.ಜಿ. ದೇಶಪಾಂಡೆಯವರ 'ಚರಿತ್ರಹೀನ' ಕಥೆ ಪ್ರೀತಿಸಿ ಮದುವೆಯಾದ ಪತಿಯಿಂದಲೇ ಪರಿತ್ಯಜಿಸಲ್ಪಟ್ಟ ಮಾಯಾದೇವಿಯ ಬದುಕು ಮಗಳು ರಂಜಿನಳಿಂದ ಕಟ್ಟಲ್ಪಡುತ್ತದೆ.

ಮಾಯಾದೇವಿ ರಾಜೇಂದ್ರನಾಥ ಪರಸ್ಪರ ಪ್ರೀತಿಸಿ ಮದುವೆಯಾಗುತ್ತಾರೆ. ಒಂದು ಹೆಣ್ಣು ಮಗು ಜನಿಸುವವರೆಗೆ ಜೀವನ ಚೆನ್ನಾಗಿರುತ್ತದೆ. ಅನಂತರ ಮಾಯಾಳಲ್ಲಿ ಆಸಕ್ತಿ ಕಳೆದುಕೊಂಡು ರಾಜೇಂದ್ರನಾಥ ಹಣ ಮದದಲ್ಲಿ ದಿನಕ್ಕೊಂದು ಹೆಣ್ಣಿನ ಸಂಗದಲ್ಲಿ ಮಾಯಾಳಿಂದ ದೂರವಾಗುತ್ತಾನೆ. ಹೀಗೊಮ್ಮೆ ಆಳು ರಾಮುವಿಗೆ ಅಂದಿನ ರಾತ್ರಿಗಾಗಿ ಕುಡಿಯುವ ಹಾಗು ಹೊಸ ಹೆಣ್ಣಿನ ಸಿದ್ಧತೆಗೆ ಹೇಳಿದಾಗ ರಾಜೇಂದ್ರನಾಥನ ಎದುರು ಹೊಸ ಹೆಣ್ಣಾಗಿ ಬಂದವಳು ರಂಜಿನ್. ನಾಥ ಮಗಳನ್ನು ಅಲ್ಲಿ ಕಂಡು ಗಾಬರಿಯಾಗುತ್ತಾನೆ.

ರಂಜಿನ್ ತನ್ನಂಥ ಎಷ್ಟೋ ಹೆಣ್ಣುಗಳು ಬಲಿಯಾಗಿರುವಾಗ ತನ್ನನ್ನು ಅನುಭವಿಸುಬಹುದೆಂದು ಹೇಳುತ್ತಾಳೆ. ನಾಥನ ಅಮಲು ಇಳಿಯುತ್ತದೆ. ಮಾಯಾದೇವಿಯೊಂದಿಗೆ ಮಗಳನ್ನು ಕರೆತಂದು ತನ್ನ ತಪ್ಪನ್ನು ಸುಧಾರಿಸಿಕೊಳ್ಳುತ್ತಾನೆ.

ಒಂದರ್ಥದಲ್ಲಿ ಗಂಡ-ಹೆಂಡತಿ ಒಂದಾದದ್ದು ಕಥೆಯ ಸುಖಾಂತವಾಗಿ ಕಂಡರೂ, ಇದೇ ತಪ್ಪನ್ನು ಮಾಯಾದೇವಿ ಮಾಡಿದ್ದರೆ ರಾಜೇಂದ್ರನಾಥ ಸ್ವೀಕರಿಸುತ್ತಿದ್ದನೆ ಎಂದು ಯೋಚಿಸಿದರೆ ಉತ್ತರ ನಕಾರಾತ್ಮಕವೆ ಆಗಿರುತ್ತದೆ. ಅಂದರೆ ಕಥೆಗಾರರು ಮಾಯಾದೇವಿಗೆ ನ್ಯಾಯಕೊಡಿಸುವ ಅವಸರದಲ್ಲಿ ಒಬ್ಬ ಚರಿತ್ರ ಹೀನನೊಂದಿಗೆ ಬಾಳಲು ಹೇಳುತ್ತಿರುವುದು ಪುರುಷ ಪ್ರಧಾನ ನಿಲುವಾಗಿಯೆ ಪ್ರತಿನಿಧಿಸಲ್ಪಟ್ಟಿದೆ. ಆದರೆ ಇವರದೆ ಇತರ ಕಥೆಗಳನ್ನು ನೋಡುವಾಗ ಮಹಿಳೆಗಾದ ಅನ್ಯಾಯವನ್ನು ಅವರು ನಿಷ್ಪಕ್ಷಪಾತವಾಗಿ ಚಿತ್ರಿಸಿದ್ದಾರೆ. ಒಟ್ಟಾರೆ ತಪ್ಪು ನಡೆಯುವುದು ಸಹಜ ಕ್ಷಮಿಸಿ ಸುಧಾರಿಸಿಕೊಳ್ಳುವ ಮನಸ್ಸು ಇಬ್ಬರಲ್ಲೂ ಬೇಕೆಂಬ ದೃಷ್ಟಿಕೋನ ಕಂಡುಬರುತ್ತದೆ. ಸಮಾನತೆಯ ನೆಲೆಯಲ್ಲಿ ಇವರ ಕಥೆಗಳು ರೂಪಗೊಂಡಿವೆ ಎಂದು ಹೇಳಬಹುದು.

ಸಂಸ್ಕೃತಿವಾಹಕರಾಗಿ ಹೆಂಗಸರು ಮತ್ತು ನೈತಿಕ ಚೌಕಟ್ಟಿನ ಆವರಣವಿಲ್ಲದೇ ಬದುಕುವ ಗಂಡಸರು ಒಂದೇ ಮನೆಯಲ್ಲಿ ಒಟ್ಟೊಟ್ಟಿಗೆ ಬದುಕುತ್ತಾರೆ. ಮನೆಯಲ್ಲಿ ಹೆಂಗಸರು ಸಹನಾಮೂರ್ತಿಗಳಾಗಿ ಮತ್ತು ಹೊಂದಾಣಿಕೆ ಸ್ವಭಾವದವರಾಗಲು ಗಂಡಸರು ಅಪ್ರತ್ಯಕ್ಷವಾಗಿಯೂ ಮತ್ತು ಸಾಮಾಜಿಕ ಕಾರಣಗಳು ಪ್ರತ್ಯಕ್ಷವಾಗಿಯೂ ಕೆಲಸ ನಿರ್ವಹಿಸುತ್ತವೆ. ಒಳ್ಳೆಯ ವಿಚಾರ ಸದ್‌ವರ್ತನೆ ಮತ್ತು ಸ್ತ್ರೀಪರ ವಿಚಾರಗಳನ್ನು ಅಳವಡಿಸಿಕೊಂಡ ಕೆಲವೇ ಪುರುಷ ಪಾತ್ರಗಳು ಇಲ್ಲಿವೆ.

ಗೀತಾ ನಾಗಭೂಷಣರ, 'ಧುಮ್ಮಸ್ಸು' ಕಾದಂಬರಿಯಲ್ಲಿ ಸೋನಿ ತನ್ನ ಬದುಕನ್ನು ಕಟ್ಟಿಕೊಳ್ಳುವ ಸಂಗತಿ ಇದೆ. ಮಲ್ಲೇಶಿಯನ್ನು ಪ್ರೀತಿಸಿ ಮದುವೆಯಾಗಬೇಕೆನ್ನುವಾಗ ಅವನು ಆಕಸ್ಮಿಕ ಅಪಘಾತದಲ್ಲಿ ಅಸುನೀಗುತ್ತಾನೆ. ಅದಾಗಲೆ ಗರ್ಭಿಣಿಯಾಗಿದ್ದ ಸೋನಿಯ ಗರ್ಭಪಾತಕ್ಕೆ ಯತ್ನಿಸಿದಾಗ ವಿರೋಧಿಸುತ್ತಾಳೆ. ವಿವಾಹವಿಲ್ಲದ ಗರ್ಭವನ್ನು ಮನ್ನಿಸಲಾಗದೆಂದು ಊರ ಗೌಡ ಕುಲಕರ್ಣಿಯರು ಪಂಚಾಯತಿ ನೆರೆಸುತ್ತಾರೆ. ಪಂಚಾಯಿತಿಯ ಮುಂದೆ ಸೋನಿ 'ಜನದ ಮುಂದ ಆಟೇ ಮದಿ ಆಗಿರಲಿಲ್ಲ. ನಾನೂ ಅವನೂ ಗಂಡಾಹೆಣ್ತಿ ಆಗಿ ಭಾಳದಿನಾ ಆಗಿತ್ತು. ಅದಕ್ಕೆ ನನ್ನ ಹೊಟ್ಟ್ಯಾಗಿರಾ ಈ ಕೂಸು ನನ್ನ ಗಂಡಂದು, ಹಾದರದ್ದಲ್ಲ. ನಾ ಈ ಹೊಟ್ಟೆ ಬೀಳಸ್ಗೊಂಡು ನನ್ನ ಕೂಸಿಗಿ ಸತ್ತ ನನ್ನ ಮಲ್ಲೂಗ ಧೋಕಾ ಮಾಡಂಗಿಲ್ರೀ, ಯಪ್ಪಾ ಇದೀಟೇ ನಾ ಹೇಳಾದು' ಎಂದು ತನ್ನ ಮತ್ತು ಮಲ್ಲೇಶಿಯ ಪ್ರೇಮದ ಪ್ರತೀಕವನ್ನು ನಾಶ ಗೈಯ್ಯಲೊಪ್ಪದೆ ಪಂಚರನ್ನು ಎದುರಿಸುತ್ತಾಳೆ. ಪಂಚರು ಅವಳಿಗೆ ಊರಿಂದ ಬಹಿಷ್ಕಾರ ಹಾಕಿದಾಗ ಅವಮಾನ ಸಹಿಸದ ಅವಳ ತಂದೆ ಸೀನಿಂಗ ಕುಲಕರ್ಣಿಯ ತೋಟದಲ್ಲಿ ನೇಣು ಹಾಕಿಕೊಳ್ಳುತ್ತಾನೆ. ಹೆದರಿದ ಕುಲಕರ್ಣಿ ಪೋಲೀಸ್‌ಗೌಡನನ್ನು ಕಟ್ಟಿಕೊಂಡು ಪಂಚನಾಮೆ ಇಲ್ಲದೆ ಶವಸಂಸ್ಕಾರಕ್ಕೆ ಅವಸರಿಸಿದಾಗ ಸೋನಿ ಇದು ಆತ್ಮಹತ್ಯೆಯಲ್ಲ, ಇದು ಕೊಲೆ ಪಂಚನಾಮೆಯಾಗುವವರೆಗೂ ಶವಸಂಸ್ಕಾರಕ್ಕೆ ಬಿಡುವುದಿಲ್ಲವೆಂದಾಗ ಗೌಡ ಕುಲಕರ್ಣಿ ಅವಳನ್ನು ಹೊಡೆದು ಹಿಂಸಿಸುತ್ತಾರೆ. ಅವಳು ಪ್ರಜ್ಞೆ ತಪ್ಪಿದಾಗ ಕಾರ್ಯ ತತ್ಪರರಾದವರನ್ನು ಸೋನಿ ತಾನೇ ಕುಣಿಯಲ್ಲಿ ಗುದ್ದಲಿ ಸಮೇತ ಜಿಗಿದು ಎಲ್ಲರನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಅಷ್ಟರಲ್ಲಿ ಪೋಲಿಸರು ಬಂದು ಗೌಡ

ಕುಲಕರ್ಣಿ ಮತ್ತು ಸೋನಿಯರನ್ನು ಬಂಧಿಸಿ ಕರೆದೊಯ್ಯುತ್ತಾರೆ. ಹಣ ಬಲದಿಂದ ಅವರು ಬಿಡುಗಡೆಯಾದರೂ ತನ್ನ ಶಕ್ತಿಮೀರಿ ನ್ಯಾಯಕ್ಕೆ ಸೋನಿ ಹೋರಾಡಿದ್ದು ಕೊನೆ ಪಕ್ಷ ಅವರನ್ನು ಪೋಲಿಸ್ ಠಾಣೆ ಹತ್ತಿಸಿದ್ದು ಅವಳ ಯಶಸ್ಸಾಗಿಯೆ ತೋರುತ್ತದೆ.

ಸೋನಿ ಬಹಿಷ್ಕರಿಸಿದ ಊರನ್ನು ತೊರೆದು ಕಲಬುರ್ಗಿಗೆ ಬಂದು ಪಾಶುಮೀಯಾನ ಆಸರೆಯಲ್ಲಿ ತನ್ನ ಬದುಕಿನ ನೆಲೆಯನ್ನು ಕಂಡುಕೊಳ್ಳುತ್ತಾಳೆ. ಮಗುವನ್ನು ಹೆತ್ತು ಸೀನಿಂಗನೆಂದು ಹೆಸರಿಡುತ್ತಾಳೆ. ತನ್ನನ್ನು ಗೌರವಿಸದ ಸ್ಥಾನದಲ್ಲಿರುವುದಕ್ಕಿಂತ ಅದನ್ನು ತೊರೆದು ಬದುಕನ್ನು ಕಟ್ಟಿಕೊಳ್ಳುತ್ತಾಳೆ. 'ನಮ್ಮ ಕೂಸು ನಾಳಿಗಿ ದೊಡ್ಡ ಮನುಷ್ಯ ಆಗಿ ಮೆರಿಬೇಕು. ಈ ಹಳ್ಳಿ ರೀತಿ ರಿವಾಜುಗೋಳಿಗಿ ಬೆಂಕಿಯಿಟ್ಟು ಸುಡಬೇಕು ಅಂವಾ. ಈ ಕೆಟ್ಟ ಮಂದಿ ಹುಟ್ಟಿಸಿರಾ ಖೊಟ್ಟ ಕಾನೂನ ರೀತಿ ನೀತಿಗೋಳ ಬೇರಿಗಿ ಕೊಡಲಿ ಹಾಕೊ ಹಂತಾ ತಾಕತ್ ನಮ್ಮ ಮಗನಿಗಿ ಬರೋಹಂಗ ಮಡ್ತೀನಿ ನಾ'[೧೧೧] ಸೋನಿಯ ಈ ಮಾತಿನಲ್ಲಿ ಪುರುಷ ಪ್ರಧಾನ ವ್ಯವಸ್ಥೆ ತನ್ನ ಸೌಲಭ್ಯಗಳನ್ನು ಸಾಧಿಸಲು ರೂಪಸಿದ ಸ್ತ್ರೀವಿರೋಧಿ ರೀತಿ ರಿವಾಜುಗಳನ್ನು ಪುರುಷನಾಗಿ ಬೆಳೆಯುವ ತನ್ನ ಮಗನಿಂದ ಇಲ್ಲವಾಗಿಸುವ ಅಪೇಕ್ಷೆಯಿದೆ. ಬದಲಾವಣೆಗೆ ಸ್ತ್ರೀ–ಪುರುಷರೀರ್ವರ ಪ್ರಯತ್ನ ಮುಖ್ಯವೆಂಬ ಸೂಚನೆಯೂ ಇಲ್ಲಿ ಅಡಕವಾಗಿವೆ.

ಸ್ತ್ರೀವಾದಿಗಳು ಹೇಳುವಂತೆ ತಾಯ್ತನ ಪ್ರಕೃತಿದತ್ತವಾಗಿದ್ದು. ಅದಕ್ಕೆ ವೈವಾಹಿಕ ಚೌಕಟ್ಟನ್ನು ಹೇರಿ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣನ್ನು ಶೋಷಿಸುತ್ತದೆ. ತಾಯ್ತನ ಮಹಿಳೆಯ ಆಯ್ಕೆಯಾಗಬೇಕು. ಸಂತಾನ ಯಾವಾಗ, ಎಷ್ಟು ಎಂಬುದನ್ನು ಅವಳೇ ನಿರ್ಧರಿಸುವಂತಾಗಬೇಕು. ಹಾಗಲ್ಲದೆ ಕೇವಲ ಗಂಡನ ಅಥವ ಗಂಡನ ಮನೆಯವರ ಇಚ್ಛೆಯಂತೆ ಹೆರುವುದಾದರೆ ಅವಳು ಹೆರಿಗೆಯ ಯಂತ್ರದಂತೆಯೆ ಸರಿ. ಹೆರಿಗೆಯ ನೋವು ಸಾವುಗಳನ್ನು ಮಹಿಳೆ ಅನುಭವಿಸಿದರೂ ಅವಳಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಂತಾನಕ್ಕೆ ಈರ್ವರೂ ಕಾರಣರಾಗುವಂತೆ ಸಂತಾನದ ಆಯ್ಕೆಯೂ ಸ್ತ್ರೀ–ಪುರುಷರಿಬ್ಬರದೂ ಆಗಬೇಕು.

ಸೋನಿ ಅವಿಹಾಹಿತೆಯಾದರೂ ತನ್ನ ಸಂತಾನದ ಹಕ್ಕನ್ನು ಬಿಟ್ಟುಕೊಡದೆ ಉಳಿಸಿಕೊಳ್ಳುತ್ತಾಳೆ. ಅದಕ್ಕಾಗಿ ನಾನಾ ರೀತಿಯ ಕಷ್ಟ ಹಿಂಸೆಯನ್ನು ಅನುಭವಿಸುತ್ತಾಳೆ. ಆದರೂ ತನ್ನ ಸ್ವಂತಿಕೆಯನ್ನು ಬಿಟ್ಟುಕೊಡುವುದಿಲ್ಲ. ತನ್ನಿಚ್ಛೆಯಂತೆ ತನ್ನ ಬದುಕನ್ನು ಕಟ್ಟಿಕೊಳ್ಳುತ್ತಾಳೆ.

ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯಲ್ಲಿ ಲಚ್ಚಿ ಎದುರಾದ ಸಂದರ್ಭದಲ್ಲಿ ಗಂಡ ಮಗನನ್ನು ಕಳೆದುಕೊಂಡು ಸ್ವಾಮಿಯೊಬ್ಬನ ಅತ್ಯಾಚಾರಕ್ಕೆ ಬಲಿಯಾದರೂ ಎರಡನೆ ಮದುವೆಯನ್ನು ಒಪ್ಪದೆ ಸ್ವತಂತ್ರವಾಗಿ ಬದುಕನ್ನು ಕಟ್ಟಿಕೊಳ್ಳುತ್ತಾಳೆ.

ಗರ್ಭಿಣಿ ಲಚ್ಚಿ ಗಂಡನೊಂದಿಗೆ ಮೈಸೂರು ದಸರಾ ನೋಡಲು ಹೋದಾಗ ಕಾಲರಾಕ್ಕೆ ಗಂಡ ಮತ್ತು ಹುಟ್ಟಿದ ಮಗು ಬಲಿಯಾಗುತ್ತಾರೆ. ಅನುಕಂಪ ತೋರಿ ಆಸರೆ ನೀಡುವ ನೆಪದಲ್ಲಿ ಮಠಕ್ಕೆ ಕರೆದೊಯ್ದು ಸ್ವಾಮಿ ಅವಳನ್ನು ಭೋಗಿಸಿ ಗರ್ಭಪಾತ ಮಾಡಿಸಿ ಬಸ್ಸು ಹತ್ತಿಸುತ್ತಾನೆ. ಇವಳ ಕಥೆಯನ್ನು ಕೇಳಿದ ತಂದೆ ತಾಯಿ ಮರು ಮದುವೆಯ ಪ್ರಸ್ತಾಪವೆತ್ತುತ್ತಾರೆ. ಇದಕ್ಕೊಪ್ಪದ ಲಚ್ಚಿ ಮೈದುನ ಅಪಹರಿಸಿದ್ದ ತನ್ನ ಆಸ್ತಿಯನ್ನು

ಮರಳಿ ಪಡೆದು, ಜೀವನ ನಿರ್ವಹಣೆಗೆ ಅಂಗಡಿ ಇಟ್ಟುಕೊಳ್ಳುತ್ತಾಳೆ. ಸೋನಿಯ ಬದುಕನ್ನು ನಿತ್ಯ ಗೋಳಿನದಾಗಿ ಮಾಡುತ್ತಿದ್ದ, ಅವಳನ್ನು ತುಚ್ಛವಾಗಿ ಕಾಣುತ್ತಿದ್ದ ಮಾನ್ಯಾ ಮತ್ತೆ ಪಂಚಾಯ್ತಿ ಸೇರಿಸಿ ಸೋನಿಯನ್ನು ತನ್ನ ಮನೆಗೆ ಕರೆದೊಯ್ಯಲು ಸಿದ್ಧನಾದಾಗ ಪಂಚಾಯ್ತಿಯ ತೀರ್ಮಾನ ಸೋನಿಯ ವಿರುದ್ಧವೆ ಇರುತ್ತದೆಂದು ಮನಗಂಡ ಲಚ್ಚಿ, ಪಂಚಾಯ್ತಿ ಸಮ್ಮುಖದಲ್ಲೆ ಮಾನ್ಯಾನನ್ನು ಕೊಲ್ಲುವ ನಿರ್ಧಾರ ಮಾಡಿರುವುದಾಗಿಯೂ ಚಂದು ಸೋನಿಯನ್ನು ಮದುವೆಯಾಗಿ ಅವಳಿಗೊಂದು ಬಾಳು ಕೊಡಬೇಕೆಂದು ಅದಕ್ಕಾಗಿ ತನ್ನ ಮನೆ ಮಾರಿ ಅವರಿಗೆ ಆರ್ಥಿಕ ಸಹಾಯ ಮಾಡುವುದಾಗಿಯೂ ತಿಳಿಸುತ್ತಾಳೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯವನ್ನು ಸ್ವತಃ ಅನುಭವಿಸಿದ್ದ ಲಚ್ಚಿ ವ್ಯವಸ್ಥೆಯ ಪಕ್ಷಪಾತ ನೀತಿಯ ವಿರುದ್ಧ ಹೋರಾಡಲು ಕೊಲೆಯ ಮಾರ್ಗವನ್ನು ಅನುಸರಿಸಲು ಯೋಚಿಸಿದ್ದು, ವ್ಯವಸ್ಥೆಯ ರಾಜಕಾರಣ ಮಹಿಳೆಯನ್ನು ಅಪರಾಧಿಯಾಗುವಂತೆ ಯೋಚಿಸುವಲ್ಲಿ ವ್ಯಕ್ತವಾಗುತ್ತದೆ.

ರಾಕ್ಷಸರನ್ನು ಸಂಹರಿಸುವ ಚಾಮುಂಡಿ ತಾನಾಗ ಬೇಕೆಂದು ಬಯಸುತ್ತಾಳೆ ಲಚ್ಚಿ. ತಾನು ಚಾಮುಂಡಿಯಾಗಿ ಸಂಹರಿಸಲು ನಿಂತರೆ ವ್ಯವಸ್ಥೆ ಸುಧಾರಿಸುತ್ತದೆ ಎಂದು ಯೋಚಿಸುವ ಲಚ್ಚಿ ಅದರ ಆಳ ಅಗಲಗಳನ್ನು ಅರಿಯದ ಮುಗ್ಧಳಾಗಿದ್ದಾಳೆ. ಮಾನ್ಯಾ ಮಗಳನ್ನು ಕೊಂದು ದಕ್ಕಿಸಿಕೊಳ್ಳಬಹುದು, ಹರಸಿಂಗ ತನ್ನ ಹೆಂಡತಿಯನ್ನು ಕೊಂದು ದಕ್ಕಿಸಿ ಕೊಳ್ಳಬಹುದು ಆದರೆ ಲಚ್ಚಿಯಂಥ ಮಹಿಳೆಯ ಗಂಡ ಕಾಲರಾಕ್ಕೆ ತುತ್ತಾದರೂ, ಅದನ್ನೇ ಹೆದರಿಸುವ ಅಸ್ತ್ರವಾಗಿಸಿಕೊಂಡ ಸ್ವಾಮಿ ಅವಳ ಮೇಲೆ ಅತ್ಯಾಚಾರವೆಸಗುತ್ತಾನೆ. ಪ್ರತ್ಯಕ್ಷವಾಗಿಯೋ ಪರೋಕ್ಷವಗಿಯೋ ಮಹಿಳೆಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ವ್ಯವಸ್ಥೆ ಪುರುಷನ ನೂರಾರು ಅಪರಾಧಗಳನ್ನು ಬೆಂಬಲಿಸುತ್ತದೆ.

ತನ್ನ ಬದುಕನ್ನು ತನ್ನಿಚ್ಛೆಯಂತೆ ಕಟ್ಟಿಕೊಳ್ಳುವ ಲಚ್ಚಿ ಸೋನಿಯ ಬದುಕನ್ನು ಕಟ್ಟಲು ಶ್ರಮಿಸುತ್ತಾಳೆ ಸೋನಿಯ ಬದುಕಿನ ಆಸರೆಯಾಗುತ್ತಾಳೆ. ಇಲ್ಲಿ ಹೆಣ್ಣಿಗೆ ಹೆಣ್ಣು ಶತ್ರುವಲ್ಲ ಎಂಬುದನ್ನು ಸೋನಿ–ಲಚ್ಚಿಯರ ಮೂಲಕ ಸಾಧಿಸುತ್ತಾರೆ ಲಲಿತಾ ನಾಯಕ.

ಸಂಧ್ಯಾ ಹೊನಗುಂಟಿಕರ ಅವರ 'ಜಿಜೀವಿಷಾ' ಕಥೆ ಆಘಾತದಿಂದ ಚೇತರಿಸಿಕೊಂಡ ಮಹಿಳೆ ಪುನ: ಬದುಕು ಕಟ್ಟಿಕೊಳ್ಳುವುದಾಗಿದೆ. ಜೀವನ ಸುಖದ ಸುಪ್ಪತ್ತಿಗೆಯಲ್ಲ. ಸುಖವಾಗಿ ಸಾಗುತ್ತದೆ ಎನ್ನುವಾಗಲೆ ಅವಘಡಕ್ಕೆ ಈಡಾಗುತ್ತದೆ. ಅಂಥ ಒಂದು ಅವಘಡಕ್ಕೊಳಗಾದ ಮಹಿಳೆ ಪುನಶ್ಚೇತನ ಪಡೆದು ಬದುಕಿಗೆ ಅಭಿಮುಖವಾಗುತ್ತಾಳೆ. ಆ ಅವಘಡ ಭೂಕಂಪವಾಗಿ ಬರುತ್ತದೆ. ಭೂಕಂಪದಲ್ಲಿ ಗಂಡ ರಾಜೀವ ಪ್ರಜ್ಞಾ ಶೂನ್ಯ ಸ್ಥಿತಿಗೆ ಹೋದರೆ, ಇಬ್ಬರು ಮಕ್ಕಳು ಅಸುನೀಗುತ್ತಾರೆ. ಅಘಾತಗೊಂಡ ನಾಯಕಿ ಕ್ರಿಯಾಶೂನ್ಯಳಾಗಿ, ಬದುಕಿರುವ ಗಂಡ ಮಗನನ್ನು ಅಲಕ್ಷಿಸುತ್ತಾಳೆ. ಆಘಾತದಿಂದ ಹೊರಬರುಲಾಗದೆ ಕೊರಗುತ್ತಿದ್ದವಳಿಗೆ ಜೇಡ ತಾನು ನೇಯ್ದ ಬಲೆ ಹಾಳಾದರೂ ಬಿಡದೆ ಪುನ: ಕಟ್ಟುವ ಛಲ, ಶ್ರಮ ಮತ್ತು ಇರುವೆಗಳ ಸತತ ಶ್ರಮ ಪ್ರಯತ್ನಗಳು ಚೇತರಿಕೆಯ ಕಾರಣವಾಗುತ್ತವೆ. ಇಲ್ಲಿ ಭೂಕಂಪದ ನೋವು ಆಘಾತ ದಂಪತಿಗಳೀರ್ವರಿಗೂ ಸಮಾನವಾಗಿ ತಟ್ಟಿದರೂ ಅದರಿಂದ ಬೇಗ ಮುಕ್ತಳಾದವು ಮಹಿಳೆಯೆ. ತನ್ನ ಗಂಡ ಮಗುವಿನ ಬದುಕಿಗೆ ತಾನೇ ಆಸರೆಯಾಗಬೇಕು ಎನ್ನುವ ತುಡಿತ ಬದುಕನ್ನು ಪುನ: ಕಟ್ಟಿಕೊಳ್ಳಬೇಕೆಂಬ ಛಲವಾಗಿ ಅವಳಲ್ಲಿ ಕಾಣಿಸಿಕೊಳ್ಳುತ್ತದೆ. ಅಂಥ ಒಂದು ಶಕ್ತಿ ಅವಳಲ್ಲಿ ಅದಮ್ಯವಾಗಿದ್ದು ಸಂಕಷ್ಟದ

ಸಂದರ್ಭದಲ್ಲಿ ಅದು ಅದ್ಭುತವಾಗಿ ಅಭಿವ್ಯಕ್ತಗೊಳ್ಳುತ್ತದೆ. ನಿಸರ್ಗ ಹೆಣ್ಣಿಗೆ ಅಂಥ ಶಕ್ತಿಯನ್ನು ನೀಡಿದೆ. ಆದರೆ ಆವಳ ಆ ಶಕ್ತಿ ಬಳಕೆಯಾಗದಂತೆ ಆವಳ ಸಾಮಾಜೀಕರಣ ತಡೆದಿರುತ್ತದೆ. ಪ್ರಸಂಗಾವಧಾನ ಸುಪ್ತಾವಸ್ಥೆಯಲ್ಲಿಯ ಆ ಸಾಮರ್ಥ್ಯ ಹೊರ ಹೊಮ್ಮುತ್ತದೆ. ಮಹಿಳೆ ಬದುಕು ಕಟ್ಟಿಕೊಳ್ಳಲು ಸಿದ್ಧಳಾಗುತ್ತಾಳೆ.

ಸಂಧ್ಯಾ ಹೊನಗುಂಟಿಕರ ಅವರ 'ಇಳಿ ಹೊತ್ತಿನಲ್ಲಿ ಕದ ತಟ್ಟಿದ ಅತಿಥಿ' ಕಥೆಯ ಡಾ. ಮಂದಾಕಿನಿ ತನ್ನ ಹರೆಯದಲ್ಲಿ ಎಲ್ಲರಂತೆ ಕನಸು ಕಾಣದೆ. ತಂದೆಯ ಪಾರ್ಶ್ವವಾಯುವಿನ ಕಾರಣದಿಂದ ಮನೆಯ ಜವಾಬ್ದಾರಿ ನಿರ್ವಹಿಸಲು ಸೇಲ್ಸ್‌ಗರ್ಲ್‌ಆಗಿ ಕೆಲಸಕ್ಕೆ ಸೇರುತ್ತಾಳೆ. ತಂಗಿ ತಮ್ಮ ತಾಯಿಗೆ ಆಧಾರವಾಗುತ್ತಾಳೆ. ತಂಗಿ ತಮ್ಮಂದಿರಿಗೊಂದು ಭದ್ರ ನೆಲೆ ಒದಗಿಸುವುದರಲ್ಲೆ ಅವಳ ಯವ್ವನ ಕಳೆದಿರುತ್ತದೆ. ತನ್ನ ಮದುವೆಯ ಬಗ್ಗೆ ಆಲೋಚಿಸಲೂ ಆಗದೆ. ಈ ನಡುವೆ ಸ್ನಾತಕೋತ್ತರ ಪದವಿ ಪಡೆದು ಉಪನ್ಯಾಸಕಿಯಾಗುತ್ತಾಳೆ. ಅನಂತರ ಡಾಕ್ಟರೇಟ್ ಪದವಿಯನ್ನು ಪೂರೈಸಿ ಉತ್ತಮ ಶಿಕ್ಷಕಿ ಎಂಬ ಗೌರವಕ್ಕು ಪಾತ್ರಳಾಗುತ್ತಾಳೆ.

ಒಮ್ಮೆ ವಿದ್ಯಾರ್ಥಿಗಳೊಂದಿಗೆ ಪ್ರವಾಸಕ್ಕೆ ಹೋಗಿದ್ದಾಗ ತನ್ನ ನಾಲ್ವತ್ತೇಳನೇ ವಯಸ್ಸಿನಲ್ಲಿ ಪ್ರಧಾನ ಎಂಬ ಉಪನ್ಯಾಸಕರ ಆಕರ್ಷಣೆಗೊಳಗಾಗುತ್ತಾಳೆ. ಪರಸ್ಪರರಲ್ಲಿ ಈ ಭಾವ ಸಮಾನವಾಗಿ ಉದಿಸಿದಾಗಲೂ ಡಾ.ಮಂದಕಿನಿ ಈ ವಯಸ್ಸಿನಲ್ಲಿ ಮದುವೆಯ ಕುರಿತು ಸಾಕಷ್ಟು ಯೋಚಿಸಿದ ನಂತರ ಅದೊಂದು ಅನಿವಾರ್ಯವಲ್ಲವೆಂಬ ನಿರ್ಣಯಕ್ಕೆ ತಲುಪುತ್ತಾಳೆ. ವಯಸ್ಸಲ್ಲದ ವಯಸ್ಸಲ್ಲಿ ತನ್ನಲ್ಲುದಿಸಿದ ಆಕರ್ಷಣೆಗೆ ಕೊರಳೊಡ್ಡದೆ ವಾಸ್ತವ ಮುಖಿಯಾಗುತ್ತಾಳೆ. ಇಳಿಹೊತ್ತಿನ ಮದುವೆ ಸಮಸ್ಯೆಯಾಗಬಹುದೆ ವಿನಃ ಆಸರೆಯಾಗದೆಂಬುದನ್ನು ಕಂಡುಕೊಳ್ಳುತ್ತಾಳೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು-ಗಂಡಿನ ಪಾತ್ರಗಳು ಪೂರ್ವನಿರ್ಧಾರಿತವಾಗಿರುತ್ತವೆ. ಗಂಡು ಹೊರಗೆ ದುಡಿದು ಆರ್ಥಿಕ ಹೊಣೆ ಹೊರಬೇಕು. ಹೆಣ್ಣು ಗೃಹ ಕೃತ್ಯಗಳನ್ನು ನಿಭಾಯಿಸಬೇಕು. ಹೆಣ್ಣಿನ ಜೀವನದಲ್ಲಿ ಮದುವೆ ಅತ್ಯಂತ ಅನಿವಾರ್ಯ ಅದಿಲ್ಲದೆ ಅವಳಿಗೆ ಮೋಕ್ಷವೇ ಇಲ್ಲ. ತಾಯ್ತನ ಪಡೆದಾಗಲೇ ಹೆಣ್ಣಿನ ಜೀವನದ ಸಾರ್ಥಕತೆ ಹೆಣ್ಣಿಗೆ ಗಂಡಿನ ಆಸರೆ ಬೇಕೇಬೇಕು. ಮೊದಲಾದ ಯಾವ ನಿಯಮಗಳೂ ಡಾ. ಮಂದಾಕಿನಿಯ ಜೀವನದಲ್ಲಿ ಕಾರ್ಯಗತವಾಗುವುದಿಲ್ಲ. ಇವೆಲ್ಲ ಇಲ್ಲದೆಯೂ ಹೆಣ್ಣೊಬ್ಬಳು ಬದುಕು ಕಟ್ಟಿಕೊಳ್ಳಬಹುದೆಂಬುದನ್ನು ಮಂದಾಕಿನಿಯ ಬದುಕು ಪ್ರತಿನಿಧಿಸುತ್ತದೆ.

ಅಮರೇಶ ನುಗಡೋಣಿಯವರ 'ದಾರಿ ಮೂಡಿಸುವ ಹೆಜ್ಜೆಗಳು' ಕಥೆ ತಿಮ್ಮಕ್ಕ ಬದುಕು ಕಟ್ಟಿಕೊಳ್ಳುವ ವಸ್ತುವಿನದು ಬಂಡಾಯದ ಬಹುಪಾಲು ಗುಣಗಳನ್ನು ಒಳಗೊಂಡಿರುವುದು ಅದರ ಅರ್ಥವಂತಿಕೆಯನ್ನು ಹೆಚ್ಚಿಸಿದೆ. ಬದುಕನ್ನು ಕಿಲುಬುಗಟ್ಟಿಸುವ ಸಾಂಪ್ರದಾಯಿಕತೆಯನ್ನು ವೈಯಕ್ತಿಕ ಜರೂರಿನಿಂದ ಧಿಕ್ಕರಿಸುವುದು ಜೀವನವನ್ನು ಹೊಸದಾಗಿ ಕಟ್ಟುವಂತೆ ಮಾಡುತ್ತದೆ. ಎಮ್ಮೆ ತಿಮ್ಮಕ್ಕನ ಬಾಳನ್ನು ಹೇಳುತ್ತಲೆ ಕಥೆ ನಮ್ಮ ಸಮಾಜದ ಜಾತಿ, ಮತ, ಮಠ ಜಮೀನುದಾರಿಕೆ ಎಲ್ಲವನ್ನು ಚಿತ್ರಿಸುತ್ತ ಅವುಗಳಿಂದ ಬಿಡುಗಡೆ ಪಡೆಯುವ ಶಕ್ತಿಯನ್ನು ಪ್ರದರ್ಶಿಸುತ್ತದೆ. ತಿಮ್ಮಕ್ಕಗೆ ಜಾತಿ ಅರ್ಥಹೀನ ಸಂಸ್ಥೆಯಾಗಿ ಅನುಭವಕ್ಕೆ ಬಂದಿದೆ. ಅವಳಲ್ಲಿ ಉಕ್ಕುವ ಮಾನವೀಯ ಸ್ಪಂದನ ಜೀವನ ಪ್ರೀತಿಯಿಂದ ಬಂದುದು. ಅವಳ ವ್ಯಕ್ತಿತ್ವ ಯಾವುದೇ ಸಿದ್ಧಾಂತದಿಂದ

ಬರದೆ ಬದುಕಿನ ನೇರ ಸಂಘರ್ಷದಿಂದ ರೂಪಿತವಾಗಿದೆ. ಕಥೆಯಿಂದಲೇ ತತ್ತ್ವ ಅರಳಿ ಜೀವನದ ರೀತಿಯಾಗುವುದು ಸುಂದರವಾಗಿದೆ. ವಸ್ತುವನ್ನು ರಕ್ತಮಾಂಸವನ್ನಾಗಿ ಮಾಡಿರುವುದು ಈ ಕಥೆಯ ವಿಶೇಷ. ತಿಮ್ಮಕ್ಕ ತನ್ನ ದಿಟ್ಟತನದಿಂದಾಗಿ ಜೀವನವನ್ನು ಸ್ವೀಕರಿಸುವ ಮುಕ್ತ ಮನಸ್ಸಿನಿಂದಾಗಿ ಓದುಗರ ಮನಸ್ಸಿನಲ್ಲಿ ನೆಲೆ ನಿಲ್ಲುತ್ತಾಳೆ.

ತನ್ನ ಮೇಲೆ ಎಷ್ಟೇ ದೌರ್ಜನ್ಯ ನಡೆದರೂ, ಬದುಕು ಅತಂತ್ರವಾದರೂ ಯಾರನ್ನು ದೂರದೆ ಎಲ್ಲರೊಂದಿಗೆ ಬೆರೆತು ಬಾಳುತ್ತಾಳೆ ತಿಮ್ಮಕ್ಕ. ತನ್ನ ಮಗಳನ್ನು ನೆಲೆಗಾಣಿಸಲು ನಿರಂತರ ಪ್ರಯತ್ನಶೀಲಳಾಗಿರುತ್ತಾಳೆ. ಅಷ್ಟರಲ್ಲಿ ಹುಸೇನಿ ತನ್ನ ಮಗಳ ಬಸಿರಿಗೆ ಕಾರಣವೆಂದು ತಿಳಿದಾಗ, ಮಗಳ ಕೆಟ್ಟ ಬದುಕನ್ನು ಸರಿಪಡಿಸಲು ಒಂದು ಕೈಯಲ್ಲಿ ತಾಳಿ ಇನ್ನೊಂದು ಕೈಯಲ್ಲಿ ಕುಡುಗೋಲು ಹಿಡಿದು ಹೊರಡುತ್ತಾಳೆ. ಮಧ್ಯ ಗುಡಿ ಎದುರು ನಿಂತು 'ಮಾರೆವ್ವ ತಾಯಿ...... ನೀನೇ ನನ್ನ ದೈವ ಉಳುಸದು ಅಳುಸದು ನಿನ್ನ ಕೈಯಾಗಾದ. ನಾ ಕಷ್ಟೇನ ಕರೆವ್ವ. ಅಂಗಂತ ನಾ ಚಿಂತಿ ಮಾಡಿಲ್ಲ. ಬದುಕು ನೀ ಕೊಟ್ಟಂಗ ನಾನು ನುಂಗಿಕೊಂಡು ಉಳಿದು ಬದುಕೀನಿ. ನನ್ನಾಂಗ ನನ್ನ ಮಗಳು ಬಾಳಿಪಿ ಆಗ ಬಾರದಂತ ಅಂದುಕೊಂಡಿದ್ದೇನವ್ವ! ಆದ್ರೆ ಈಗ ಆಕಿ ದಾರಿ ತಪ್ಪ್ಯಾಳ. ಎಂದೂ ನಾ ನಿನ್ನ ಏನೂ ಕೇಳಿಲ್ಲ. ಈಗಲೂ ಕೇಳಾಕ ನಿಂತಿಲ್ಲ. ನನ್ನ ಮಗಳನ್ನ ಆ ಹುಸೇನಿ ಹಾಳುಮಾಡ್ಯಾನ. ಈಗ ಅವ್ನು ನನ್ನ ಮಗಳಿಗೆ ತಾಳಿ ಕಟ್ಟಿ ಮನ್ಯಾಗ ಕರಕಳ್ಳಿ ನನಗೆನೂ ಜಾತಿ ಗೀತಿಯಿಲ್ಲ! ನನ್ನ ಮಗಳನ್ನ ತಾಳಿಕಟ್ಟಿ ಮನ್ಯಾಗ ಕರಕಂಡ್ರ ಸರಿ. ಇಲ್ಲಂದ್ರ ಈ ಕುಡುಗಲ್ಲಿನಿಂದ ಅವ್ನನ್ನ ಕಡಿದು ನಿನಗ ಬಲಿ ಕೊಡ್ತೀನಿ ಇದೇ ನನ್ನ ದಾರಿ' ಎಂದು ಹೊರಡುವ ತಿಮ್ಮಕ್ಕ ನ್ಯಾಯಕ್ಕಾಗಿ ಗೋಗರೆಯದೆ ನ್ಯಾಯವನ್ನು ಸ್ಥಾಪಿಸುವ ದೃಢತೆಯನ್ನು ಸಾರುತ್ತಾಳೆ. ಮಗಳ ಕೆಟ್ಟಬದುಕನ್ನು ಕಟ್ಟಲು ಸ್ವತಃ ಟೊಂಕಕಟ್ಟುತ್ತಾಳೆ.

ಶ್ರೀಕಾಂತ ಪಾಟೀಲರ 'ಗಟ್ಟಿ ಎಳೆ' ಕಥೆ ಬಾಲ್ಯ ವಿವಾಹವಾದ ಸುಗಂಧಿ ತನ್ನ ಬದುಕನ್ನು ತಾನೇ ಕಟ್ಟಿಕೊಳ್ಳುವಂತಾದ್ದು. ಹಗಲು ರಾತ್ರಿ ದುಡಿದು ಗಂಡ ವಕೀಲನಾಗಲು ಕಾರಣವಾಗುವ ಆದರೆ ಆ ಗಂಡ ತಾನು ನೆಲೆ ಕಂಡ ನಂತರ ಹೆಂಡತಿ ದಡ್ಡಿ ಎಂದು ವಿಚ್ಛೇದನ ಕೊಡುವುದನ್ನು ಚಿತ್ರಿಸುತ್ತದೆ.

ಸುಗಂಧಿ ಹಿರಿಯರಿಚ್ಛೆಯಂತೆ ಸೋದರಮಾವನನ್ನು ಮದುವೆಯಾಗಿ ತಾನೇ ದುಡಿದು ಅವನಿಗೊಂದು ನೆಲೆ ಕಾಣಿಸುತ್ತಾಳೆ. ಆದರೆ ಕೃತಘ್ನ ಚಂದ್ರಕಾಂತ ಹೆಂಡತಿ ತನಗೆ ಅರ್ಹಳಲ್ಲವೆಂದು ವಿಚ್ಛೇದನ ನೀಡುತ್ತಾನೆ. 'ನಾ ಹಾಲ ಎರ್ದಿದ್ದು ಹಾವಿಗಂತ ಈಗ ಗೊತ್ತಾಯ್ತು' ಎಂದು ಹೇಳುವ ಸುಗಂಧಿ ಮರುಗಳಿಗೆ ತನಗಾಗಿ ನೊಂದ ತಾಯಿಗೆ 'ಎವ್ವಾ ನೀವ್ಯಾರೂ ಚಿಂತಿ ಮಾಡಬ್ಯಾಡ್ರಿ. ನನ್ನ ಹೊಟ್ಟಿಗಿನ ಕೂಸಿಗಿ ಪರದೇಶಿ ಬಾಳ್ಯಾಮಾಡಿ ನರಕದಾಗ ಹಾಕಾಲ. ದಿವಸ ತುಂಬಿ ಜನ್ಮ ಕೊಡ್ತೀನಿ. ಅದರ ಕಾಲಮ್ಯಾಲ ತಾ ನಿಲ್ಲೂ ತನಕಾ ಜ್ವಾಪಾನ ಮಾಡ್ತೀನಿ. ಅಂವಾ ಸುಖದ ಬೆನ್ನ ಹತ್ತಿ ಹೋದ್ರ ಹೋಗಲಿ' ಎಂದು ಹೇಳುವ ಸುಗಂಧಿ ಈಗಾಗಲೆ ತಾನಿಟ್ಟ ಭರವಸೆ ಕುಸಿದಿದ್ದರೂ ಪುನಃ ಅಂಥದೇ ಸಾಹಸಕ್ಕೆ ಕೈಹಾಕುವ ಛಲವಂತಿಕೆಯನ್ನು ತೋರುತ್ತಾಳೆ. ಆದರೆ ಈ ಬಾರಿ ನಿರೀಕ್ಷೆಯನ್ನಿಟ್ಟುಕೊಳ್ಳದೆ ಕೇವಲ ಕರ್ತವ್ಯವೆಂಬ ಸ್ಥಿತಪ್ರಜ್ಞತೆ ಅವಳದಾಗುತ್ತದೆ. ಯಾರೋ ಮಾಡಿದ ತಪ್ಪಿಗೆ ಯಾರಿಗೋ ಶಿಕ್ಷೆ ಸಲ್ಲದೆಂಬ ಭಾವವಿದ್ದರೂ ಹುಟ್ಟುವ ಮಗು ಗಂಡಾದರೆ, ಬೆಳೆದು ದೊಡ್ಡವನಾದ ಮೇಲೆ ಬಹುಶಃ ಅವನೂ ಮಾಡಿದವರನ್ನು ಮರೆತು ಸುಖವನ್ನರಿಸಿ ಹೋಗುವವನೆ ಎಂಬ

ಅಂಶ ಸೂಚ್ಯವಾಗಿ ಕಥೆಯಲ್ಲಿ ಮಂಡಿತವಾಗಿವೆ. ಗಂಡನ ಬದುಕನ್ನು ಕಟ್ಟಿಕೊಟ್ಟು ತನ್ನ ಬದುಕನ್ನೂ ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಸುಗಂಧಿಯ ಪ್ರಯತ್ನ ಮೆಚ್ಚುವಂತದ್ದು.

ಗೀತಾ ನಾಗಭೂಷರ 'ಬದುಕು' ಕಾದಂಬರಿಯ ಬೆಳ್ಳಿ ಕೂಡ ಬದುಕಿನಲ್ಲಿ ಎದುರಾದ ಸಮಸ್ಯೆಗಳನ್ನು ಅತ್ಯಂತ ದೃಢತೆಯಿಂದ ಎದುರಿಸುತ್ತಾಳೆ. ಕೊಲೆಯ ಆಪಾದನೆಯಲ್ಲಿ ಹದಿನಾಲ್ಕು ವರ್ಷ ಜೈಲು ಶಿಕ್ಷೆಗೆ ಗುರಿಯಾದ ಗಂಡನಿಂದಾಗಿ ಇಡೀ ಮನೆತನದ ಲಯ ತಪ್ಪುತ್ತದೆ ಮಾವ ಮಲ್ಲಪ್ಪ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅತ್ತೆ ಮಲ್ಲವ್ವ ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಾಳೆ. ಇಂಥ ವಿಪರೀತ ಪರಿಸ್ಥಿತಿಯಲ್ಲಿ ಮೂರು ತಿಂಗಳ ಗರ್ಭಿಣಿ ಬೆಳ್ಳಿ ಮನೆತನದ ನೊಗಕ್ಕೆ ಹೆಗಲು ಕೊಡುತ್ತಾಳೆ. ಗಂಡನ ಖುಲಾಷೆಯ ಯತ್ನದಲ್ಲಿ ಇದ್ದುದೆಲ್ಲ ಬರಿದಾದಾಗ ಮನೆ ಖರ್ಚಿಗೆ ಬೆಳ್ಳಿ ಬುಟ್ಟಿ ಹೆಣೆಯುವ ಭಾರಗಿ ಕಟ್ಟುವ ಕೆಲಸವನ್ನು ಈಳಿಗರ ಈರವ್ವನಿಂದ ಕಲಿತು ಸಂಪಾಧನೆಯ ಮೂಲವನ್ನು ಕಂಡು ಕೊಳ್ಳುತ್ತಾಳೆ. ವಿರೂಪಾಕ್ಷ ಗೌಡನ ದುರಾಕ್ರಮಣದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಾಳೆ. 'ಬೆಳ್ಳಿ ಬಿಪಲಿ ಹೊಲಿಯುವ ಕೆಲಸ ಬೇಕಾದರೂ ಮಾಡುತ್ತಾಳೆ' ಎಂದು ನೆರೆಹೊರೆಯ ವ್ಯಂಗ್ಯಕ್ಕೆ ಕಿವಿಗೊಡದೆ ಶ್ರಮಿಸುತ್ತಾಳೆ.

ಗಂಡ ಜೈಲಿನಿಂದ ಬಿಡುಗಡೆಯಾಗಿ ಬರುವವರೆಗೆ ಸಂಯಮದಿಂದ ಕಾಯುವ, ಅವನಿಂದಾದ ಸಾಲವನ್ನು ದುಡಿದು ಮುಟ್ಟಿಸುವ. ಮಗ ಸಣ್ಣಮಲ್ಲು ತಂದೆಯೊಂದಿಗೆ ಸಂಬಂಧವನ್ನು ನಿರಾಕರಿಸಿದಾಗ ತಿಳಿ ಹೇಳುವ, ತನಗೂ ತಿಳಿಸದೆ ಮಗ ಮದುವೆಯಾದಾಗ ಎಲ್ಲಾದ್ದಲ್ಲರೂ ಸುಖವಾಗಿರಲೆಂದು ಹರಸುವ, ಗಂಡ ಕಲ್ಯಾಣಿ ಮರಳಿ ಬಂದಾಗ ಹೊಸ ಜೀವ ಬಂದಂತೆ ಸಂಭ್ರಮಿಸುವ ಬೆಳ್ಳಿ ಅತ್ಯಂತ ಗಟ್ಟಿ ಪಾತ್ರವಾಗಿ ಚಿತ್ರಣಗೊಂಡಿದ್ದಾಳೆ. ಪಿತೃ ಸಂಸ್ಕೃತಿಯ ಪರಿಪ್ರೇಕ್ಷದಲ್ಲಿದ್ದೆ ತನ್ನ ಸಾಮರ್ಥ್ಯವನ್ನು ಸಮರ್ಥವಾಗಿ ದುಡಿಸಿಕೊಳ್ಳುವ ಬೆಳ್ಳಿ ಬದುಕನ್ನು ಹದ ತಪ್ಪದಂತೆ ಕಟ್ಟಿಕೊಳ್ಳುತ್ತಾಳೆ.

ಹೀಗೆ ಇಲ್ಲಿ ಚರ್ಚೆಗೊಂಡ ಮಹಿಳೆಯವರು ಜೀವನದ ದುರ್ಭರ ಪರಿಸ್ಥಿತಿಗಳಲ್ಲಿ ತಮ್ಮೊಳಗಿನ ಸಾಮರ್ಥ್ಯವನ್ನು ಬಳಸಿಕೊಂಡು ಅತ್ಯಂತ ಸಮರ್ಥವಾಗಿ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಇತರರಿಗೆ ಮಾದರಿ ಎಂಬಂತೆ ಬದುಕುತ್ತಾರೆ. ಯಾರ ಆಸರೆ, ಸಹಾಯಕ್ಕಾಗಿ ನಿರೀಕ್ಷಿಸದೆ ತಮ್ಮ ಮೇಲೆ ನಂಬಿಗೆ ಇಟ್ಟುಕೊಂಡು ಸ್ವಾಭಿಮಾನದಿಂದ ಬದುಕುತ್ತಾರೆ. ತಮ್ಮನ್ನು ಆಶ್ರಯಿಸಿ ಬಂದವರ, ತಮ್ಮನ್ನೆ ನಂಬಿದವರ ಬದುಕನ್ನು ಕಟ್ಟಿ ಕೊಡುತ್ತಾರೆ. ಬದುಕಿ ಬದುಕಿಸುವ ಜೀವಪರ ಕಾಳಜಿಯವರಾಗಿದ್ದಾರೆ.

ಹೀಗೆ ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಮೂಡಿ ಬಂದ ಅನೇಕ ಮಹಿಳೆಯರು ಜೀವನದಲ್ಲಿ ಹತ್ತು ಹಲವು ಸಮಸ್ಯೆಗಳಲ್ಲಿ ಸಿಲುಕಿದರೂ ಬುದ್ಧಿವಂತಿಕೆ, ಧೈರ್ಯದಿಂದ ಅವನ್ನು ಎದುರಿಸಿ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಸ್ವಂತಿಕೆಯ ಬಲದಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡದ್ದಲ್ಲದೆ ಇತರರ ಬದುಕು ಕಟ್ಟಿಕೊಡುವಲ್ಲಿ ಶ್ರಮಿಸುತ್ತಾರೆ. ವ್ಯವಸ್ಥೆಯ ಹುನ್ನಾರಗಳು, ಕುತಂತ್ರಗಳು, ರಾಜಕಾರಣ ಯಾವುದೂ ಇವರನ್ನು ವಿಮುಖರಾಗುವಂತೆ ಮಾಡಲು ಶಕ್ತವಾಗುವುದಿಲ್ಲ. ಅಂಥ ಆತ್ಮಬಲದ ಕಾರಣ ಘನವಾದ ವ್ಯಕ್ತಿತ್ವಗಳಾಗಿ ರೂಪಗೊಳ್ಳುತ್ತಾರೆ. ಇತರರ ಬದುಕಿಗೆ ಆಸರೆಯಾದ, ಅನಾಥ ಮಕ್ಕಳ ತಾಯಂದಿರಾದ, ಬೇರೆಯವರ ಕಷ್ಟಕ್ಕೆ ಮಿಡಿದ, ಜೀವ ರಕ್ಷಕರಾದ, ವ್ಯವಸ್ಥೆಯ ವಿರುದ್ಧ ಸೆಣಸಿದ ಈ ಮಹಿಳೆಯರದು ಮಾದರಿ ರೂಪವಾಗಿದೆ.

೪.೪. ಸಾರ್ವಜನಿಕ ವಲಯದ ಪ್ರತಿನಿಧೀಕರಣ :

ಸಾರ್ವಜನಿಕ ವಲಯವೆಂಬುದನ್ನು ಕುಟುಂಬದ ಹೊರಗಿನ ವಲಯವಾಗಿ ಇಲ್ಲಿ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ. ಸಾರ್ವಜನಿಕ ವಲಯವು ಕೂಡ ಪುರುಷ ಪ್ರಧಾನ ಅಂಶಗಳಿಂದ ಮುಕ್ತವಾದುದಲ್ಲ. ಪುರುಷ ಕಲ್ಪಿಸಿದ ಎಲ್ಲ ಬಾಹ್ಯ ರಚನೆಗಳಲ್ಲಿಯೂ. ಈ ಅಂಶ ಸೇರಿಹೋಗಿದೆ. ಈ ಸಮಾಜ ರಚನೆ ಹಾಗೂ ಅದರ ವಿವಿಧ ಅಂಗಗಳು ಇದರಿಂದ ಹೊರತಾಗಿಲ್ಲ. ಶಿಕ್ಷಣ, ದುಡಿಮೆ, ಕಲೆ, ರಾಜಕೀಯ ಸಂಗತಿಗಳೆಲ್ಲ ಪುರುಷ ನಿರ್ಮಿತಿಯೇ ಆಗಿದ್ದು, ಸಹಜವಾಗಿಯೇ ಪಕ್ಷಪಾತ ನೀತಿಯನ್ನು ಅನುಸರಿಸುವಂಥವಾಗಿವೆ. ತೀರ ತಡವಾಗಿ ಇತ್ತೀಚೆಗೆ, ಮಹಿಳೆಗೆ ತೆರೆದುಕೊಂಡ ಈ ಅವಕಾಶಗಳೂ ಪುರುಷ ಹಿತಾಸಕ್ತಿಗನುಗುಣವಾಗಿಯೇ ಕೊಡಲ್ಪಟ್ಟಿವೆ. ವೇಶ್ಯಾವೃತ್ತಿ ಪುರುಷ ತನಗಾಗಿ ನಿರ್ಮಿಸಿಕೊಂಡ ಹೆಚ್ಚುವರಿ ಲೈಂಗಿಕ ಸೌಲಭ್ಯವಾಗಿದ್ದು ಸ್ತ್ರೀ ಶೋಷಣೆಯ ಕರಾಳ ಮುಖವನ್ನು ದರ್ಶಿಸುವಂಥದ್ದು ಹೈದರಾಬಾದ ಕರ್ನಾಟಕ ಸಾಹಿತ್ಯ ಇವುಗಳನ್ನು ಅಭಿವ್ಯಕ್ತಿಸಿದ ಕ್ರಮವನ್ನು ಅನ್ವಯಿಕ ಭಾಗದಲ್ಲಿ ಗಮನಿಸೋಣ.

೪.೪.೧ ಶೈಕ್ಷಣಿಕ ಬದುಕು :

ಶಿಕ್ಷಣವು ಮಾನವನ ಬದುಕನ್ನು ಅರ್ಥಪೂರ್ಣವಾಗಿ ಮಾಡುವಂಥ, ಸಂಸ್ಕೃತಿಯನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುವಂಥ ಮತ್ತು ಬದಲಾವಣೆಗಳನ್ನು ಸ್ವೀಕರಿಸಲು ಹಾಗೂ ತರಲು ಪ್ರೇರೇಪಣೆ ಮಾಡುವಂಥ ಒಂದು ಪ್ರಬಲ ಸಾಮಾಜಿಕ ಸಂಸ್ಥೆ. ಆಹಾರ, ಅರಿವೆ ಆಸರೆಗಳಂತೆ ಶಿಕ್ಷಣವನ್ನು ಮೂಲಭೂತ ಅವಶ್ಯಕತೆಯಾಗಿ ಗುರುತಿಸಲಾಗಿದೆ. ವ್ಯಕ್ತಿತ್ವ ನಿರ್ಮಾಣ ಶಿಕ್ಷಣದ ಅತ್ಯಂತ ಪ್ರಮುಖ ಕಾರ್ಯ. ಆದರೆ ಈ ವ್ಯಕ್ತಿಯಾರು ಎಂಬುದೂ ಅಷ್ಟೇ ಮುಖ್ಯ. ಶತಶತಮಾನಗಳಿಂದ ಮಹಿಳೆಯನ್ನು ಶಿಕ್ಷಣ ವಂಚಿತಳಾಗಿರಿಸಲಾಗಿದೆ. ಮಹಿಳೆಗೂ ಒಂದು ವ್ಯಕ್ತಿತ್ವ ಇದೆ ಎಂಬುದನ್ನಂತೂ ಪುರುಷ ಪ್ರಧಾನ ವ್ಯವಸ್ಥೆ ಒಪ್ಪಿಯೇ ಇಲ್ಲ. ಹಾಗಾಗಿ ಹೈದರಾಬಾದ ಕರ್ನಾಟಕದ ಕಥನ ಸಾಹಿತ್ಯದಲ್ಲಿ ಅದರಲ್ಲೂ ಆರಂಭದ ಕಥನಗಳಲ್ಲಿ ಶಿಕ್ಷಣ ವೆಂದರೇನೆಂದು ಕೇಳುವ ಮಹಿಳೆಯರು ಕಾಣಿಸಿಕೊಳ್ಳುತ್ತಾರೆ. ಶಿಕ್ಷಣದ ಕುರಿತು ಪ್ರಸ್ತಾಪ ಕೆಲವು ಕಥನಗಳಲ್ಲಿ ಕಂಡು ಬರುತ್ತದೆ.

ಚಂದ್ರಕಾಂತ ಕುಸನೂರರ 'ಗೋಪರಜಾನ್ ಮಾಲತಿ ಮತ್ತು ನಾನು' ಕಾದಂಬರಿಯಲ್ಲಿ ಚಂದಿ ನಿರೂಪಕನಿಗೆ 'ಸಾಲಿ' ಅಂದ್ರ ಏನೆಂದು ಕೇಳುತ್ತಾಳೆ. ಅಲ್ಲಿ ಓದಸ್ತಾರ ಬರಸ್ತಾರ ಎನ್ನಲು, ಯಾಕ ಓದಬೇಕು ಯಾಕ ಬರೀಬೇಕು ಎಂದು ಪುನಃ ಪ್ರಶ್ನಿಸುತ್ತಾಳೆ. ನನಗ ಅದರ ಉತ್ತರ ಹೊಳಿಲಿಲ್ಲ ಸುಮ್ಮನಾದೆ[11] ಎನ್ನುತ್ತಾನೆ ನಿರೂಪಕ.

ವಿದ್ಯೆಯಾಕೆ ಪಡೆಯಬೇಕು. ಅದರಿಂದ ಏನು ಲಾಭ ಎಂಬ ಅರಿವು ಪುರುಷರಿಗೆ ಇಲ್ಲದ ಪ್ರದೇಶದ ಮಹಿಳೆಗೆ ವಿದ್ಯೆಯ ಅವಕಾಶ ತೀರ ತಡವಾಗಿಯೆ ತೆರೆದುಕೊಂಡಿತು. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಸ್ತ್ರೀ ಶಿಕ್ಷಣಕ್ಕೆ ಹೇಳಿಕೊಳ್ಳುವಂಥ ಆಸಕ್ತಿ ಕಾಳಜಿಗಳಿಲ್ಲ.

ಇದೇ ಕಾದಂಬರಿಯಲ್ಲಿ ಬರುವ ಇನ್ನೊಂದು ಪಾತ್ರ ಮಾಲತಿಯದು. ವಿದ್ಯಾವಂತಳಾಗಬೇಕೆಂದು ಉತ್ಕಟೇಚ್ಛೆಯಲ್ಲಿ ಎಸ್.ಎಸ್.ಎಲ್.ಸಿಯ ನಂತರವೂ ವಿದ್ಯಾರ್ಜನೆಯನ್ನು ಮುಂದುವರಿಸಿದಾಗ ಮಾಲತಿಯ

ತಂದೆ 'ನಿನ್ನ ಹೆಸರು ನಿಂಗ ದಂಡೀಗಿ ಹಚ್ಚಾಂಗಿಲ್ಲ, ರಂಡಿ ಓದಿ ಬರದು ಊರ ಸೂಳಿ ಆಗಬೇಕಂತ ಮಾಡಿದಿ' ಎಂದು ಕೇಳಿದ ಪ್ರಶ್ನೆಯಲ್ಲಿ ವಿದ್ಯೆಯ ಕುರಿತು ಜನಾಭಿಪ್ರಾಯವೇನು ಎಂಬುದು ಸ್ಪಷ್ಟವಾಗುತ್ತದೆ. ನೃತ್ಯ ಸಂಗೀತದಂತೆ ವಿದ್ಯೆಯೂ ವೇಶ್ಯೆಯರಿಗೆ ಮಾತ್ರ ಎಂದು ನಂಬಿದ ಪರಿಸರದಲ್ಲಿ ಮಹಿಳೆಯ ಶಿಕ್ಷಣ ಮರೀಚಿಕೆ ಎಂಬಂತಾದುದು ಆಶ್ಚರ್ಯದ ಸಂಗತಿಯಲ್ಲ.

ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯಲ್ಲಿ ಸೋನಿಯ ಮಗಳನ್ನು ನೆರೆಮನೆಯ ಅವಳ ಗೆಳತಿ ಕುಳ್ಳು ಆಯಲು ಕರೆದಾಗ ಅಲ್ಲಿಯೆ ಇದ್ದ ಚಂದು 'ಶಾಲಿಗೆ ಹೋಗೋ ವಯಸ್ಸಿನಾಗ ಕುಳ್ಳು ತರಲಿಕ್ಕ ಹೋಗಬೇಕ! ಎಂದು ಕೇಳಿದಾಗ 'ಆಕಿನ ಅಪ್ಪ ಕಲ್ತು ಉದ್ಧಾರ ಆಗಿದ್ದು ಅಷ್ಟರಾಗ ಐತೇಳು, ಎಂದು ಸೋನಿ ಗೊಣಗುತ್ತಾಳೆ. ವಿದ್ಯಾವಂತನಾದ ಚಂದು 'ಶಾಲಿ ಕಲ್ತು ಕೆಡೋರು ಕಡಿಮಿ ಸೋನಿಬಾಯಿ ಕಲಿಲಾರ್ದ ಕೆಡೋರೆ ಭಾಳ. ಪ್ರತಿಯೊಬ್ಬ ಮನುಷ್ಯನಿಗೂ ವಿದ್ಯೆಯ ಅವಶ್ಯಕತೆ ಅದ' (೪೮) ಎಂದು ವಿದ್ಯೆಯ ಅವಶ್ಯಕತೆಯನ್ನು ಲೇಖಕಿ ಚಂದುವಿನ ಮುಖಾಂತರ ಹೇಳಿಸುತ್ತಾರೆ.

ಇವರದೆ ಇನ್ನೊಂದು ಕಾದಂಬರಿ 'ನೆಲೆ-ಬೆಲೆ' ಯಲ್ಲಿ ವಿದ್ಯೆಯ ಕುರಿತು ಸಾಂಪ್ರದಾಯಿಕ ಮನೋಭಾವದ ಸ್ತ್ರೀಯರ ಅನಿಸಿಕೆಯನ್ನು ಶಾಂತಮ್ಮ 'ನಮ್ಮಂಥ ಹೆಣ್ಣು ಮಕ್ಕಳು ಅದನ್ನೆಲ್ಲ ಕಟ್ಟಿಕೊಂಡು ಏನು ಮಾಡ್ಬೇಕಾಗಿದೆ ಹೇಳಿ. ನಮ್ಮನೆ ಗಂಡ-ಮಕ್ಕಳು ಇದೇ ನಮ್ಮ ಪ್ರಪಂಚ ಇವನ್ನು ಬಿಟ್ಟು ಬೇರೆ ಬೇರೆ ವಿಚಾರಗಳನ್ನೆಲ್ಲ ತಲೇಲಿ ತುಂಬ್ಕೊಂಡು ಯಾವ ರಾಜ್ಯ ಆಳಬೇಕಾಗಿದೆ ನಾವು. ಈಗಿನ ಕಾಲ ಕೆಟ್ಟಿರೋದೆ ಹೆಣ್ಣುಮಕ್ಕಳು ಹೆಚ್ಚಿನ ಓದು ಬರಹ ಕಲಿತಿದ್ದರಿಂದ ಕಣ್ರೀ' ಎಂದು ಅಭಿವ್ಯಕ್ತಿಸುತ್ತಾಳೆ.

ಶಿಕ್ಷಣದ ಕುರಿತು ಅನೇಕ ಹೆಂಗಸರಲ್ಲಿ ನಿರ್ಲಕ್ಷ ಅಸಡ್ಡೆಗಳೇ ಅಲ್ಲದೆ ಒಂದು ಬಗೆಯ ಗುಮಾನಿ ನೆಲೆಸಿದೆ. ಮೇಲಿನ ಈ ಮಾತುಗಳು ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣಿಗೆ ರೂಪಿಸಿದ ನೀತಿ ಸಂಹಿತೆಯಂತಿದೆ. ಶಾಂತಮ್ಮನಂತ ಸಂಪ್ರದಾಯವಾದಿ ಮನಸ್ಸುಗಳು ಆ ವ್ಯವಸ್ಥೆಯ ವಕ್ತಾರರಂತೆ ಕೆಲಸ ನಿರ್ವಹಿಸುತ್ತವೆ. ವ್ಯವಸ್ಥೆಯ ವಾಹಕರಾಗಿ ಈ ಮಹಿಳೆಯರು ಕಂಡು ಬರುತ್ತಾರೆ.

ಯಶೋದಮ್ಮ ಸಿದ್ದ ಬಟ್ಟೆಯವರ 'ಮಂಗಳಾ' ಕಾದಂಬರಿ ಸುಧಾರಣಾವಾದಿ ದೃಷ್ಟಿಕೋನದ್ದು ಕಾದಂಬರಿಯಲ್ಲಿ ಮಂಗಳಾ ಶ್ರೀನಾಥನ ಸಾವಿನ ನಂತರ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಲೇ ಪದವಿ ಶಿಕ್ಷಣವನ್ನು ಪೂರ್ಣಗೊಳಿಸುತ್ತಾಳೆ. ಅಣ್ಣ ಹಾಗೂ ಅಪ್ಪನ ಪ್ರೋತ್ಸಾಹದಿಂದ ಸ್ನಾತಕೋತ್ತರ ಪದವೀಧರಳಾಗುತ್ತಾಳೆ. ಕೆಲಸಕ್ಕೆ ರಜ ಹಾಕಿ ಪೂರ್ಣ ಪ್ರಮಾಣದ ವಿದ್ಯಾರ್ಥಿಯಾಗಿ ಶ್ರದ್ಧೆಯಿಂದ ಅಧ್ಯಯನ ಮಾಡುತ್ತಾಳೆ. ಹಾಗೆ ಸಲಹೆ ಇತ್ತವನು ಅವಳಣ್ಣ ರವಿ. ಹೀಗೆ ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆತದ್ದೂ ಇದೆ. ಮಂಗಳಾ ಕುಟುಂಬ ಸದಸ್ಯರ ಸಹಕಾರದಿಂದ ಉನ್ನತ ಶಿಕ್ಷಣ ಪಡೆದು ಉಪನ್ಯಾಸಕಿಯಾಗಿ, ಸಾಮಾಜಿಕ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಸ್ವಂತದ ಬದುಕನ್ನು ಸಮರ್ಥವಾಗಿ ರೂಪಿಸಿಕೊಂಡು ಸಾಮಾಜಿಕ ಮಾನ್ಯತೆಗೆ ಪಾತ್ರಳಾಗುತ್ತಾಳೆ.

ರಾಜಶೇಖರ ಹಂತಗುಂದಿಯವರ 'ಮರೀಚಿಕೆ' ಕಥೆಯ ಶಾಮಲ ಒಲ್ಲದ ವಿವಾಹ ಬಂಧನ ಕಳಚಿ ವಿದ್ಯಾರ್ಜನೆ ಕೈಗೊಳ್ಳುತ್ತಾಳೆ. ತನ್ನ ಬದುಕಿನ ಅಧಾರ ಕಂಡುಕೊಳ್ಳುತ್ತಾಳೆ. ಸಂಧ್ಯಾ ಹೊನಗುಂಟಿಕರರ 'ಇಳಿ ಹೊತ್ತಿನಲ್ಲಿ ಕದ ತಟ್ಟಿದ ಅತಿಥಿ' ಕಥೆಯ ಮಂದಾಕಿನಿ ಉದ್ಯೋಗದಲ್ಲಿದ್ದುಕೊಂಡೇ ಉನ್ನತ ಶಿಕ್ಷಣ ಪಡೆಯುತ್ತಾಳೆ.

ಹೀಗೆ ಆರಂಭದ ಕಥನಗಳಲ್ಲಿ ವಿದ್ಯೆಯ ಕುರಿತು ಅಸಡ್ಡೆಯ ಧೋರಣೆ ವ್ಯಕ್ತವಾಗಿದ್ದು, ಅನಂತರದಲ್ಲಿ ಪ್ರೋತ್ಸಾಹದಾಯಕ ಪರಿಸ್ಥಿತಿ ನಿರ್ಮಾಣವಾದುದನ್ನು ಗುರುತಿಸಬಹುದಾಗಿದೆ. ಇಂದಿಗೂ ಹೈದರಾಬಾದ ಕರ್ನಾಟಕ ಗ್ರಾಮೀಣ ಪರಿಸರದಲ್ಲಿ ವಿದ್ಯಾರ್ಜನೆಗೆ ಅಂಥ ಮಹತ್ವವೇನೂ ಇಲ್ಲ. ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆಯೂ ಅದಕ್ಕೊಂದು ಕಾರಣವಾಗಿದೆ.

೪.೪.೨ ರಾಜಕೀಯ ಬದುಕು :

ಆಧುನಿಕ ಜಗತ್ತಿನಲ್ಲಿ ರಾಜಕೀಯವು ಸಮಾಜದ ಅವಿಭಾಜ್ಯ ಅಂಗವಾಗಿ ಸಾಮಾಜಿಕ ಸಮಸ್ಯೆ, ಬದಲಾವಣೆ ಮುಂತಾದ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. 'ರಾಜಕೀಯ, ಘಟಿಂಗನ ಕೊನೆಯ ಆಸರೆ' ಎಂದು ಜಾನ್ಸನ್ ಹೇಳಿದನಾದರೂ ಇದು ಪುಢಾರಿ ಪ್ರಪಂಚಕ್ಕೆ ಪರಿಮಿತವಾದ ಹೇಳಿಕೆಯಾಗಿದೆಯೇ ಹೊರತು ದೇಶದ ಆಗು ಹೋಗುಗಳಲ್ಲಿ ಪಾತ್ರವಹಿಸುವ, ನಿರ್ಮಿಸುವ, ವ್ಯಾಪಕಾರ್ಥದ ರಾಜಕೀಯಕ್ಕೆ ಅನ್ವಯಿಸುವುದಿಲ್ಲ. ಆಧುನಿಕ ಜಗತ್ತಿನ ಸಂಕೀರ್ಣ ಬದುಕನ್ನು ಕಾಣುವ ಸಂವೇದನಾ ಶೀಲ ಸಾಹಿತಿಗೆ ಬದುಕಿನೊಂದಿಗೆ ಬೆರೆಯುವ ರಾಜಕೀಯಾಂಶಗಳು ಅನುಭವ ವೇದ್ಯವಾಗಬೇಕಾದದ್ದು ಸ್ವಾಭಾವಿಕ ಅನುಭವ ಮಂಥನದಿಂದ ಮೂಡಿದ ವಿಚಾರಪ್ರಣಾಲಿ ಸೃಜನಶೀಲ ಸಾಹಿತಿಗಳ ಸ್ವಭಾವ ಜನ್ಯ ಅಭಿವ್ಯಕ್ತಿಯಲ್ಲಿ ಒಡಮೂಡುತ್ತದೆ' ಎಂಬ ಬರಗೂರು ರಾಮಚಂದ್ರಪ್ಪನವರ ಹೇಳಿಕೆಯಂತೆ ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ವಿರಳವಾಗಿ ಅಂದರೆ ಕೇವಲ ಎರಡೇ ಎರಡು ಕಥೆಗಳಲ್ಲಿ ಮಹಿಳೆ ರಾಜಕೀಯ ಪ್ರವೇಶಿಸಿದ ಸಂಗತಿ ಚರ್ಚೆಯಾಗಿದೆ.

ಜಯತೀರ್ಥ ರಾಜಪುರೋಹಿತರ 'ಪಾರವ್ವನ ಪಂಚಾಯ್ತಿ' ಕಥೆ ಒಂದಾದರೆ ಶಿವಕುಮಾರ ನಾಗವಾರರ 'ಹರಿದ ಕಾಗದದ ಚೂರುಗಳು' ಕಥೆ ಮತ್ತೊಂದು. ಪಾರವ್ವನ ಪಂಚಾಯ್ತಿಯ ಪಾರವ್ವ ಮತ್ತು ಹರಿದ ಕಾಗದದ ಚುರುಗಳು ಕಥೆಯ ಶಿವಮ್ಮ ಗ್ರಾಮ ಪಂಚಾಯ್ತಿ ಚೇರಮನ್‌ರಾಗಿ ರಾಜಕೀಯ ಅಧಿಕಾರವನ್ನು ಪಡೆಯುವ ಮತ್ತು ಸ್ವಂತಿಕೆಯನ್ನು ಸಾಧಿಸುವ ಅಂಶವನ್ನು ಕಥೆಗಳು ಪ್ರತಿನಿಧಿಸುತ್ತವೆ.

'ಪಾರವ್ವನ ಪಂಚಾಯ್ತಿ' ಕಥೆ ಮಹಿಳೆಯ ರಾಜಕೀಯ ಸಾಮರ್ಥ್ಯವನ್ನು ಚಿತ್ರಿಸುವ ಜಯತೀರ್ಥ ರಾಜಪರೋಹಿತರ ಕಥೆ. ರಾಜಕೀಯಕ್ಕೂ ಮಹಿಳೆಗೂ ಸಲ್ಲದ ಅನುಬಂಧ ಎಂಬಂಥ ಪರಿಸರದಲ್ಲಿ ಪಂಚಾಯ್ತಿಗಳಲ್ಲಿ ನೀಡಲಾದ ಮೂವತ್ತುಮೂರು ಪ್ರತಿಶತ ಮಹಿಳಾ ಮೀಸಲಾತಿ ಮಹಿಳೆಯ ರಾಜಕೀಯ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿತು. ಅಂಥ ಒಂದು ಸಂಗತಿ ಇಲ್ಲಿ ಕಥಾ ವಸ್ತುವಾಗಿದೆ.

ಪಾರಾಸಾನಿ ಅಥವಾ ಪಾರವ್ವ ಪಾತರದವಳಾಗಿದ್ದು ವೇಶ್ಯಾ ಜೀವನ್ನವನ್ನು ಆಶ್ರಯಿಸಿ ಬಂದವಳು. ಆದರೆ ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ದಂಧೆಗಿಳಿಸದೆ ಹರಸಾಹಸ ಮಾಡಿ ಸಾಂಸಾರಿಕ ಜೀವನಕ್ಕೆ ಸೇರಿಸಿದ್ದಳು. ಪಂಚಾಯ್ತಿ ಎಲೆಕ್ಷನ್ ವಿಷಯ ಬಂದಾಗ ಜೀವನದಲ್ಲಿ ಸ್ವಲ್ಪವಾದರೂ ಸಾರ್ಥಕ ಕೆಲಸ ಮಾಡಬೇಕು ಎಂಬ ಸಂಕಲ್ಪದೊಂದಿಗೆ ಪಾರವ್ವ ಪಂಚಾಯ್ತಿ ಚೇರಮನ್ನಳಾಗುತ್ತಾಳೆ. ಗೌಡ ಕುಲಕರ್ಣಿಯರ ವೈಯಕ್ತಿಕ ಹಿತಾಸಕ್ಕೆ ತಾನು ದಾಳವಾಗಬಾರದೆಂದು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲ್ಲುವ ಮೂಲಕ ಯಾವ ಪಾರ್ಟಿಯ ದಬ್ಬಾಳಿಕೆ ನಡೆಯದಂತೆ ಎಚ್ಚರವಹಿಸುತ್ತಾಳೆ. ಯಾರ ವೈಯಕ್ತಿಕ ಅಭಿಲಾಷೆ, ಲಾಭಗಳಿಗೆ

ಆಸ್ಪದವೀಯದೆ ಸಮಾಜದ ಒಟ್ಟು ಪ್ರಗತಿಗೆ ಶ್ರಮಿಸುತ್ತಾಳೆ. ತನ್ನ ಕೆಲಸಕ್ಕೆ ಅಡ್ಡಿಪಡಿಸಲು ಪ್ರಯತ್ನಿಸಿದ ಗೌಡನನ್ನು ನೇರ ಸ್ಪಷ್ಟ ಮಾತುಗಳಿಂದ ಸುಮ್ಮನಾಗಿಸುತ್ತಾಳೆ. ಗ್ರಾಮದ ಪ್ರಗತಿಗೆ ತೀರ ಅವಶ್ಯವಾದ ನೀರು, ಬೆಳಕು, ರಸ್ತೆಗಳ ಸೌಲಭ್ಯ, ಸ್ವಚ್ಛತೆಯಿಂದ ತೆರಿಗೆ ವಸೂಲಿಮಾಡಿ ಆರ್ಥಿಕ ಲಾಭ ಪಡೆದು ಸಾಮಾಜಿಕ ಕಾರ್ಯ ಮಾಡುತ್ತಾಳೆ. ಸಕ್ಕರೆ ಅಕ್ಕಿಗಳನ್ನು ಸರಿಯಾಗಿ ವಿತರಿಸುವ ಮೂಲಕ ಪಾರವ್ವ ಸಮರ್ಥ ಚೇರಮನ್‌ಳೆಂದು ಮಂತ್ರಿಗಳಿಂದ ಹೊಗಳಿಸಿಕೊಳ್ಳುತ್ತಾಳೆ. ತನಗೆ ತಿಳಿಯದ್ದನ್ನು ತಿಳಿದವರಿಂದ ಕೇಳಿ ಮಾಡುವ ಮೂಲಕ ಪಾರವ್ವ ರಾಜಕೀಯ ಜ್ಞಾನವನ್ನು ಪಡೆದುಕೊಳ್ಳುತ್ತಾಳೆ. ಯಾವುದೇ ಕೆಲಸಕ್ಕೆ ಕಾಲೆಳೆಯುವವರಿರುವಂತೆ ಬೆಂಬಲಿಸುವವರೂ ಇರುತ್ತಾರೆ. ರಾಜಾರಾಮ ಶಂಭಯ್ಯರು ಉತ್ತಮ ಸಲಹೆ ಕೊಡುವ ಮೂಲಕ ಪಂಚಾಯಿತಿಯ ಕಾರ್ಯ ಸರಿಯಾಗಿ ನಡೆಯಲು ಕಾರಣರಾಗುತ್ತಾರೆ.

ಕಾರ್ಯಕ್ರಮದ ಬಳಿಕ ಪಾರವ್ವ ನಿರುಮ್ಮಳವಾಗಿ ಮಲಗುವುದು ಕೂಡ ಸಾರ್ಥಕ ಕೆಲಸದ ಸಂತೃಪ್ತ ಭಾವದ ಸಂಕೇತವೆಂಬಂತೆ ತೋರುತ್ತದೆ. ವಂಚನೆಯಿಂದ ಮಾನಸಿಕ ದೈಹಿಕ ಸ್ವಾಸ್ಥ್ಯ ಕೆಡುವುದು ಮಾತ್ರವಲ್ಲ, ಸಾಮಾಜಿಕ ರಾಜಕೀಯ ಸ್ವಾಸ್ಥ್ಯವೂ ಹಾಳಾಗುತ್ತದೆಂಬುದನ್ನು ಕಥೆ ಮಂಡಿಸುತ್ತದೆ.

ಶಿವಕುಮಾರ ನಾಗವಾರರ 'ಹರಿದ ಕಾಗದದ ಚೂರುಗಳು' ಕಥೆ ರಾಜಕೀಯದಲ್ಲಿ ಜಾತಿ ಹಾಗು ಲಿಂಗ ಶ್ರೇಣೀಕರಣಗಳ ಪಾತ್ರದ ಕುರಿತು ದಾಖಲಿಸುತ್ತದೆ.

ತಲೆ ತಲಾಂತರದಿಂದ ಪುರುಷ ಕೇಂದ್ರಿತವಾಗಿದ್ದು ಅಭಾದಿತವಾಗಿದ್ದ ರಾಜಕೀಯ ಕ್ಷೇತ್ರ, ವಿಕೇಂದ್ರೀಕರಣ ಹಾಗೂ ಮೀಸಲಾತಿ ಪ್ರಕ್ರಿಯೆಯ ಪರಿಣಾಮವಾಗಿ ರೂಪಗೊಂಡ ಗ್ರಾಮ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಮಹಿಳೆಯರ ಪ್ರವೇಶ ಸಾಧ್ಯವಾಯಿತು. ಆದರೆ ಅಧಿಕಾರವನ್ನು ಯಾವತ್ತು ತಮ್ಮ ಬಿಗಿಮುಷ್ಟಿಯಲ್ಲಿಟ್ಟುಕೊಂಡು ಅನುಭವಿಸುತ್ತ ಬಂದ ಮೇಲ್‌ಜಾತಿಯ ಪುರುಷರು ಇಂಥ ಸಂದರ್ಭಗಳನ್ನು ಹೇಗೆ ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಾರೆ. ಇವರೆದುರು ಕೆಳ ಜಾತಿಯವರು ಅದರಲ್ಲೂ ಮಹಿಳೆಯರು ಹೇಗೆ ರಾಜಕೀಯ ಅಧಿಕಾರ ಪಡೆದೂ ಅಸಹಾಯರಾಗಬೇಕಾಗುತ್ತದೆ, ಹಾಗು ಆರ್ಥಿಕ ಭದ್ರತೆ ತಂದುಕೊಡುವ ಮನೋಬಲವನ್ನು ಕಥೆ ಅನನ್ಯವಾಗಿ ಚಿತ್ರಿಸುತ್ತದೆ.

ಗೌಡರ ಮನೆಯ ಹೊಲೆಯಾಳು ಶಿವಮ್ಮ ಗೌಡರ ಮಾತಿನಂತೆ ಚುನಾವಣೆಗೆ ನಿಂತು ಗೆಲ್ಲುತ್ತಾಳೆ, ಸರಪಂಚಳಾಗುವ ಉಮೇದಿನಲ್ಲಿ ಬೀಗುತ್ತಾಳೆ, ಸರಪಂಚಳಾದಾಗ ಬದುಕಿನ ರೀತಿಯನ್ನೇ ಬದಲಿಸಿಕೊಳ್ಳುತ್ತಾಳೆ. ಆದರೆ ಗಂಡ ಶಂಕ್ರು ತಾನೇ ಸರಪಂಚನೆಂಬಂತೆ ಇರುವ ಕೆಲಸ ಬಿಟ್ಟು ಜನರಿಂದ ಅವರ ಕೆಲಸ ಮಾಡಿಸುವೆನೆಂದು ಹಣ ಪಡೆದು ಕುಡಿಯತೊಡಗಿದಾಗ ಜೀವನ ನಿರ್ವಹಣೆ ಕಷ್ಟದ್ದಾಗುತ್ತದೆ. ಸರಪಂಚಳಾಗಿಯೂ ಶಿವಮ್ಮ ಗೌಡರ ಹೊಲಕ್ಕೆ ಸದಿ ತೆಗೆಯಲು ಹೋಗತೊಡುಗುತ್ತಾಳೆ.

ಸರಪಂಚಳಾಗಿ ತರಬೇತು ಪಡೆದು ಬಂದ ಶಿವಮ್ಮ ಊರ ಸಮಸ್ಯೆಗಳನ್ನು ನಿವಾರಿಸಲು ಆಲೋಚಿಸಿ ಪಾನ ನಿಷೇಧಕ್ಕೆ ಮನವಿ ಸಲ್ಲಿಸಬೇಕೆಂದಾಗ ಗೌಡ ಮತ್ತು ಮುನೀಮ ವಿರೋಧಿಸುತ್ತಾರೆ. ಅವಳನ್ನು ಸರಪಂಚಳಾಗಿ ಮಾಡಿದ್ದೇ ತಪ್ಪು ಎಂಬಂತೆ ವರ್ತಿಸುತ್ತಾರೆ.

ಬಡವರಿಗೆ ಸಲ್ಲಬೇಕಾದ ಸರಕಾರಿ ಸವಲತ್ತುಗಳ ಪಟ್ಟಿಯಲ್ಲಿ ಸ್ಥಿತಿವಂತರ ಹೆಸರುಗಳನ್ನು ಕೇಳಿದಾಗ ಶಿವಮ್ಮ ಬೆರಗಾಗುತ್ತಾಳೆ. ಅದಕ್ಕೆ ಸಮ್ಮತಿಸದೆ ವಿರೋಧಿಸುತ್ತಾಳೆ. ಪರಿಣಾಮ ಮರುದಿನದಿಂದ ಅವಳಿಗೆ ಹೊಲದ ಕೆಲಸವನ್ನು ನಿರಾಕರಿಸಲಾಗುತ್ತದೆ. ಬೇಸತ್ತ ಶಿವಮ್ಮ 'ತಾನು ಯಾಕಾದರೂ ಸರಪಂಚಳಾದೆನೋ ಕೆಲಸವೂ ಸಿಗದ, ಅನ್ನವೂ ಸಿಗದ ಸರಪಂಚಗಿರಿ ತನ್ನಿಂದ ಮಾಡಾಕ ಆಗಲ್ಲೆಂದು' ಸೆಕ್ರೆಟರಿಗೆ ರಾಜಿನಾಮೆ ಪತ್ರ ಬರೆದುಕೊಂಡು ಬರಲು ಹೇಳುತ್ತಾಳೆ. ಅಷ್ಟರಲ್ಲಿ ಸರಪಂಚರಾದ ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಸರಕಾರ ಸಂಬಳ ನಿಗದಿಪಡಿಸಿದ್ದನ್ನು ತಿಳಿದು ಹೊಸ ಚೈತನ್ಯದಿಂದ ಅಧಿಕಾರದಲ್ಲಿ ಮುಂದುವರಿಯುತ್ತಾಳೆ. ರಾಜಿನಾಮೆ ಪತ್ರವನ್ನು ಹರಿದುಹಾಕುತ್ತಾಳೆ.

ಮೀಸಲಾತಿಯಿಂದಾಗಿ ಮಹಿಳೆಗೆ ಅಧಿಕಾರವನ್ನು ಕೊಡಲೇ ಬೇಕಾಗಿ ಬಂದಾಗಲೂ ಅವಳನ್ನು ಆರ್ಥಿಕವಾಗಿ ಅಸಹಾಯಳಾಗುವಂತೆ ಮಾಡುವ, ಅವಳ ಗಂಡನಿಗೆ ಆಮಿಷ ಒಡ್ಡಿ ಅವಳ ಮೇಲೆ ಒತ್ತಡ ಹೇರುವ, ಕುಟುಂಬ ಹಿಂಸೆಗೆ ಕಾರಣವಾಗುವ ಮೂಲಕ ಪುರುಷ ಪ್ರಧಾನ ವ್ಯವಸ್ಥೆ ಅವಳನ್ನು ನಿಯಂತ್ರಣದಲ್ಲಿರಿಸಿಕೊಂಡು ತಾನೇ ಅಧಿಕಾರ ಚಲಾಯಿಸಲು ನೋಡುತ್ತದೆಂಬುದನ್ನು ನಾಗವಾರರು ದಾಖಲಿಸುತ್ತಾರೆ. ಮಹಿಳೆ ನಿರಕ್ಷರಿಯಾದರೂ ಸಾಮಾಜಿಕ ಕಳಕಳಿಯುಳ್ಳವಳಾಗಿರುತ್ತಾಳೆ. ಅವಳು ಅಧಿಕಾರಕ್ಕೆ ಬಂದರೆ ಸುಧಾರಣೆ ಸಾಧ್ಯ ಎಂಬುದನ್ನು ನಿರೂಪಿಸುತ್ತಾರೆ. ಬೀದರ ಜಿಲ್ಲೆಯ ವಾಂಜರಖೇಡ ಮಹಿಳಾ ಪಂಚಾಯ್ತಿ ಈ ಕಥೆಗೆ ಪ್ರೇರಕವಾಗಿರುವ ಸಾಧ್ಯತೆ ಇದೆ. ಆರ್ಥಿಕ ಭದ್ರತೆ ಇದ್ದರೆ ಮಹಿಳೆಯು ರಾಜಕೀಯದಲ್ಲಿ ಮುನ್ನುಗ್ಗ ಬಹುದೆಂಬ ಸುಳಿವು ಕಥೆಯಲ್ಲಿದೆ.

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಪುರುಷರ ರಾಜಕೀಯ ಪ್ರವೇಶವೇ ಮುಕ್ತವಾಗಿಲ್ಲದ ಸಂದರ್ಭದಲ್ಲಿ ಮಹಿಳೆಯ ಪ್ರವೇಶ ಊಹೆಗೆ ಮೀರಿದ್ದು. ಆದರೆ ಈಗಾಗಲೆ ಹಿಂದಿನ ಅಧ್ಯಾಯದಲ್ಲಿ ವಿಶ್ಲೇಷಿಸಿರುವಂತೆ ಗ್ರಾಮ ಪಂಚಾಯ್ತಿ ಹಾಗೂ ಜಿಲ್ಲಾ ಪಂಚಾಯ್ತಿಗಳಂಥ ರಾಜಕೀಯ ವಿಕೇಂದ್ರೀಕರಣ ಪ್ರಕ್ರಿಯೆ ಹಾಗೂ ಕಡ್ಡಾಯ ಮಹಿಳಾ ಮೀಸಲಾತಿಯ ಪರಿಣಾಮ ಮಹಿಳೆಯರು ರಾಜಕೀಯ ಪ್ರವೇಶಿಸುವಂತಾಯಿತು. ಅಷ್ಟೇ ಅಲ್ಲ ಪುರುಷರ ಸ್ವಾರ್ಥ ರಾಜಕೀಯಕ್ಕೆ ಬೇಸತ್ತ ಬೀದರ ಜಿಲ್ಲೆಯ ವಾಂಜರಖೇಡ ಗ್ರಾಮದ ಮಹಿಳೆಯರು ಸ್ವತಃ ಚುನಾವಣೆಯೂ ಇಲ್ಲದಂತೆ ಆಯ್ಕೆ ಪ್ರಕ್ರಿಯೆಯಲ್ಲಿ ಪಂಚಾಯ್ತಿ ರಚಿಸಿ ಯಶಸ್ವಿಯಾಗಿ ನಿರ್ವಹಿಸಿ ಸೈ ಎನಿಸಿಕೊಂಡರು.

೪.೪.೩ ಶ್ರಮ–ದುಡಿಮೆಯ ಬದುಕು :

ಗೃಹಿಣಿಯರದ್ದು ಬಿಡುವಿಲ್ಲದ ಕೆಲಸ ಪ್ರತಿಫಲವಿಲ್ಲದ ಕೆಲಸ, ಯಾರ ಗಮನಕ್ಕೂ ಬಾರದೇ ಹೋಗುವ ಕೆಲಸ 'ದುಡಿಮೆ' 'ಕೆಲಸ' ವೆಂಬುದು ಅತ್ಯಂತ ಸಂಕೀರ್ಣವಾದ ಪರಿಭಾವನೆಯಾಗಿದೆ. ಮಹಿಳೆಯರ ದುಡಿಮೆಯು ಪ್ರಧಾನವಾಗಿ ವರಮಾನೇತರವೂ ಕುಟುಂಬ ಸಂಬಂಧಿಯೂ ಆಗಿರುತ್ತದೆ. ಸಂಪಾದನೆಗಿಂತ ಸಂಗೋಪನೆ ಗುಣ ಪ್ರಧಾನವಾಗಿರುತ್ತದೆ. ಇಲ್ಲಿ ವರಮಾನಕ್ಕಿಂತ ಬದುಕು ಸಾಗಿಸುವುದು ಮುಖ್ಯವಾಗಿರುತ್ತದೆ. ಅವಳ ದುಡಿಮೆ ಉಪಯೋಗಿ ಗುಣದ್ದಾಗಿರುತ್ತದೆ. ಮನೆಯೊಳಗಿನ ದುಡಿಮೆಯಾದುದುರಿಂದ ಖಾಸಗಿಯಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಅದು ಭಾವನಾತ್ಮಕವಾಗಿರುತ್ತದೆ. ಕುಟುಂಬದ ಹಿತಾಸಕ್ತಿಯನ್ನು ಪೂರೈಸುವದಾಗಿರುತ್ತದೆ. ಇವುಗಳಿಗೆ ಮಾರುಕಟ್ಟೆ ಮೌಲ್ಯವಿರುವುದಿಲ್ಲ. ಯಾವ ದುಡಿಮೆಯ ಗಣನೆ

ಸಾಧ್ಯವಿಲ್ಲವೋ ಅದನ್ನು ಸಮಾಜವಿಜ್ಞಾನಗಳು ದುಡಿಮೆ ಎಂದು ಪರಿಗಣಿಸುವುದಿಲ್ಲ. ಇದು ಅಳತೆಯ ವಿಧಾನದ ಲೋಪವಾಗಿದ್ದು ಮಹಿಳೆಯರ ದುಡಿಮೆಯನ್ನು ದುಡಿಮೆಯಲ್ಲವೆಂದು ಭಾವಿಸುವುದು ತಪ್ಪಾಗುತ್ತದೆ.

ಮಹಿಳೆ ಮನೆಯಲ್ಲಿ ದುಡಿದು ಹೊತ್ತು ಹೊತ್ತಿಗೆ ಪುರುಷನಿಗೆ ಸಹಕರಿಸದೆ ಹೋದರೆ, ಯಾವ ಪುರುಷನೂ ಹೊರಗೆ ಹೋಗಿ ದುಡಿಯುವುದು ಕಷ್ಟವಾಗುತ್ತದೆ. ಹಾಗೆಂದೇ ಸ್ತ್ರೀವಾದಿಗಳು ಮಹಿಳೆಯ ಮನೆಗೆಲಸಕ್ಕೆ ವರಮಾನ ನಿಗದಿಯಾಗಬೇಕೆಂದು ಕೇಳುತ್ತಿದ್ದಾರೆ. ದುಡಿಮೆಯು ಸಮಾನವಾಗಿ ಪರಿಗಣಿತವಾಗುವ ಬದಲಿಗೆ ಹೆಣ್ಣಿನ ದುಡಿಮೆ ಮತ್ತು ಗಂಡಿನ ದುಡಿಮೆಯೆಂದು ವರ್ಗೀಕರಣಕ್ಕೆ ಒಳಗಾಗಿದೆ. ಈ ಇಬ್ಬಗೆಯ ಮಾನದಂಡದಿಂದ ಮಹಿಳೆಗೆ ಅನ್ಯಾಯವಾಗಿದೆ. ಸಂತಾನೋತ್ಪತ್ತಿ ದುಡಿಮೆಯ ಜೊತೆಗೆ ಮಹಿಳೆಯರು ಆರ್ಥಿಕೋತ್ಪಾದನೆಯಲ್ಲೂ ನಿರತರಾಗಿದ್ದಾರೆ. ಸಂಗೋಪನೆ ಮತ್ತು ಸಂಪಾದನೆಗಳೆರಡನ್ನೂ ಅವರು ನಿಭಾಯಿಸುತ್ತಿದ್ದಾರೆ.

ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯ ಮಹಿಳೆಯರು, ಜಂಬಣ್ಣ ಅಮರಚಿಂತರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಕಾದಂಬರಿಯ ಬುಡ್ಡಮ್ಮ, ಮಲ್ಲಿಕಾರ್ಜುನ ಹಿರೇಮಠರ 'ಹವನ' ಕಾದಂಬರಿಯ ಲಂಬಾಣಿ ಮಹಿಳೆಯರು, 'ಲಕ್ಕವ್ವನ ಮಂದಿ' ಕಥೆಯ ನಾಗವ್ವ, ಜಯತೀರ್ಥ ರಾಜ ಪುರೋಹಿತರ 'ಸುಳಿ ಗಾಳಿ' ಕಾದಂಬರಿಯ ಹಂಪವ್ವ, ಫಾತಿಮಾ, ಶಾಂತರಸರ 'ಸಣ್ಣ ಗೌಡ ಸಾನಿ' ಕಾದಂಬರಿಯ ಮಾಬಮ್ಮ, ಕೋರಗಲ್ ವಿರುಪಾಕ್ಷಪ್ಪನವರ 'ಮಣ್ಣಿನ ಗುಣ' ಕಥೆಯ ಗಂಗಮ್ಮ, ಗೀತಾ ನಾಗಭೂಷಣರ 'ಚಿತ್ತಿ ಮತ್ತು ರಿಕ್ಷಾ' ಕಥೆಯ ಚಿತ್ತಿ, 'ಬದುಕು' ಕಾದಂಬರಿಯ ಬೆಳ್ಳಿ, 'ಏರಿಳಿತಗಳು' ಕಾದಂಬರಿಯ ಸ್ಮಿತಾ, ಚಿತ್ರಶೇಖರ ಕಂಠಿಯವರ 'ಅತೃಪ್ತೆ' ಕಥೆಯ ಸರಳಾ, ಯಶೋದಮ್ಮ ಸಿದ್ದ ಬಟ್ಟೆಯವರ 'ಮಂಗಳಾ' ಕಥೆಯ ಮಂಗಳಾ, ಸಂಧ್ಯಾ ಹೊನಗುಂಟಿಕರ ಅವರ 'ಚಿಗುರೊಡೆದ ನೆನಪು' ಕಥೆಯ ಸವಿತಾ, ಅರುಂಧತಿ ಚಾಂದಕವಟೆ ಅವರ 'ತೇನ–ವಿನಾ.' ಕಥೆಯ ರಮ್ಯ, ದುಡಿಮೆಯಲ್ಲಿ ತೊಡಗಿಸಿಕೊಂಡವರು. ಆದರೂ ಅವರ ದುಡಿಮೆಗೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಂಥ ಮಹತ್ವವೇನೂ ಇಲ್ಲ ಎಂಬುದನ್ನು ಕಾಣಬಹುದಾಗಿದೆ.

ಮಹಿಳೆ ಬಿಡುವಿಲ್ಲದಂತೆ ಇಡೀ ದಿನ ದುಡಿದರೂ ಅವಳ ದುಡಿಮೆಗೆ ಬೆಲೆ ಇಲ್ಲದಿರುವುದರಿಂದಲೇ ಅವಳ ಬದುಕು ಪರಾಧೀನವಾಗಿದೆ. ಮಹಿಳಾ ದುಡಿಮೆ ಕಥನ ಸಾಹಿತ್ಯದಲ್ಲಿ ಪ್ರತಿನಿಧೀಕರಣಗೊಂಡ ರೀತಿಯನ್ನು ಮುಂದೆ ಗಮನಿಸಬಹುದಾಗಿದೆ. ಸಂಘಟಿತ ಮತ್ತು ಅಸಂಘಟಿತ ದುಡಿಮೆಗಳೆರಡನ್ನೂ ಈ ಉಪ ಶೀರ್ಷಿಕೆಯಲ್ಲಿ ಚರ್ಚಿಸಲಾಗುವುದು.

ಹೆಣ್ಣು ಇಡೀ ದಿನ ಶ್ರಮವಹಿಸಿ ಕೆಲಸ ಮಾಡುತ್ತಿರಬೇಕು. ಅವಳಿಗೆ ಬಿಡುವು ದೊರೆತರೆ ಕೆಟ್ಟು ಹೋಗುವಳೆಂದು ಭಾವಿಸಲಾಗುತ್ತದೆ. ಅದಕ್ಕೆಂದೇ ಲಲಿತಾ ನಾಯಕರ 'ಗತಿ' ಕಾದಂಬರಿಯಲ್ಲಿ ಹಿಟ್ಟಿನ ಗಿರಣಿಯ ಪ್ರಸ್ತಾಪ ಬಂದಾಗ 'ಹೆಣ್ಣು ಮಕ್ಕಳು ಕೆಲ್ಸ ಇಲ್ದ ಕೆಟ್ಟು ಹೋಗ್ತರ ನಮ್ಮಳ್ಳಿಯಾಗ ಗಿರಣಿ ಮಾತ್ರ ಹಾಕಿಸಬಾರ್ದು ಎಂದು ವಿರೋಧಿಸಿದವರೇ ಹೆಚ್ಚು. ಇಲ್ಲಿ ಹೆಣ್ಣು ಬಿಡುವಿಲ್ಲದೆ ದುಡಿಯಬೇಕೆಂಬ ಭಾವ ವ್ಯಕ್ತವಾಗಿದೆ.

ಬಿ.ಟಿ. ಲಲಿತಾ ನಾಯಕರ 'ನೆಲೆ–ಬೆಲೆ' ಕಾದಂಬರಿಯಲ್ಲಿ ತಾಯವ್ವನನ್ನು ತುಮಕೂರಿಗೆ ಬಾಣಂತಿಯನ್ನು ನೋಡಿಕೊಳ್ಳಲು ಕಳಿಸುವ ಸಂದರ್ಭದಲ್ಲಿ ನಂಜಯ್ಯ ಹೇಳುವ ಹೆಣ್ಣಿನ ಕೆಲಸದ ವ್ಯಾಖ್ಯೆ ತುಂಬ ಸರಳವಾದುದು. 'ಆ ಪ್ಯಾಟೆ ಊರಾಗೆ ನೀನು ಗೇದು ಗೊಬ್ರ ಹಾಕೋದು ಅಷ್ಟರಾಗೆ ಐತೆ. ನಲ್ಲಿಯ ನೀರ ಹಿಡ್ಕಂಡ್, ಕುಂತ ಜಾಗದಾಗಿಷ್ಟು ಬೇಸ್ ಹಾಕ್ದ ಬಂದ'[೧೨೦]

ಗ್ರಾಮೀಣ ಜನತೆಯಲ್ಲಿ ಇಂದಿಗೂ ಮನೆಗೆಲಸ ಒಂದು ಕೆಲಸವೇ ಅಲ್ಲ, ಹೊಲದ ಕೆಲಸ ಮಾತ್ರ ಕೆಲಸ. ನೆರಳಲ್ಲಿ ಕುಳಿತು, ನಳದ ನೀರು ತುಂಬಿ ಮಾಡುವುದೇನೂ ದೊಡ್ಡ ಕೆಲಸವಲ್ಲವೆಂಬ ಧೋರಣೆ ಕಂಡು ಬರುತ್ತದೆ. ಮನೆಗೆಲಸ ಬಾಣಂತಿ ಕೆಲಸಗಳ ದ್ವಿಮುಖ ಹೊರೆಯೂ ಹಗುರವಾಗಿಯೆ ಪರಿಗಣಿಸಲ್ಪಡುವುದನ್ನು ಇಲ್ಲಿ ಚಿತ್ರಿಸಲಾಗಿದೆ.

ಜಂಬಣ್ಣ ಅಮರ ಚಿಂತರ 'ಕುರುಮಯ್ಯ ಅಂಕುಶ ದೊಡ್ಡಿ' ಕಾದಂಬರಿಯಲ್ಲಿ ಬುಡ್ಡಮ್ಮ ಮನೆಗೆಲಸದೊಂದಿಗೆ ಬಾರಿಗಿ ಜಲ್ಲೆಗಳನ್ನು ತಯಾರಿಸಿ ಮಾರುವ ಮೂಲಕ ಸಂಪಾದಿಸುವವಳಾಗಿದ್ದಾಳೆ. ಆದರೆ ಅವಳ ಸಂಪಾದನೆ ತನ್ನ ಕೈ ಸೇರಬೇಕೆಂದು ಜಂಬಯ್ಯ ವಿಧಿಸುತ್ತಾನೆ. 'ಬಾರಿಗಿ, ಜಲ್ಲೆ ಮಾರಿದ ರೊಕ್ಕ ಯಾರಿಗಿ ಕೊಟ್ಟಿದ್ದಿ ನೀನು ಹೇಳೆ ವಯ್ಯಾಲಿ ಬುಡ್ಡಕ್ಕ'[೧೨೧] ಎಂದು ಅವಳ ಗಳಿಕೆಯ ಲೆಕ್ಕ ಕೇಳುತ್ತಾನೆ. ಅವಳ ಸಂಪಾದನೆಯನ್ನು ಕಿತ್ತುಕೊಂಡು ಕೋಳಿ ಪಂದ್ಯ ಜೂಜುಗಳಿಗೆ ಹಾಳು ಮಾಡುತ್ತಾನೆ. ದುಡಿದು ಗಳಿಸಿದರೂ ಸ್ವತಃ ಬಳಸಲಾಗದೆ ಗಂಡನ ಕೈಗೆ ಒಪ್ಪಿಸುವುದೊಂದೇ ದಾರಿ ಅವಳಿಗೆ.

ಮನೆಯ ಆರ್ಥಿಕತೆಯನ್ನು ನಿಭಾಯಿಸುವುದು ಗಂಡಿನ ಕರ್ತವ್ಯ ಎಂಬ ನಿಯಮವಿದ್ದರೂ ಅದು ಅವನ ಮೇಲೆ ಒತ್ತಡವನ್ನೇನು ಹಾಕುವುದಿಲ್ಲ. ಅವನು ತನಗೆ ಬೇಕೆನಿಸಿದರೆ ಈ ನಿಯಮವನ್ನು ಉಲ್ಲಂಘಿಸುತ್ತಾನೆ. ಆದರೂ ಮನೆಯ ಯಜಮಾನನೇ ಆಗಿರುತ್ತಾನೆ. ಪಾಲನೆ ಸಂಗೋಪನೆಯ ಹೊಣೆ ಹೊತ್ತ ಮಹಿಳೆ ಅದನ್ನು ನಿಭಾಯಿಸಲು ಹೆಚ್ಚುವರಿ ಹೊಣೆಯನ್ನು ನಿಭಾಯಿಸುತ್ತಾಳೆ. ಬುಡ್ಡಮ್ಮನ ಪಾತ್ರ ಇದೆ ಬಗೆಯಲ್ಲಿ ಕಾದಂಬರಿಯಲ್ಲಿ ಪ್ರತಿನಿಧಿಸಲ್ಪಟ್ಟಿದೆ.

ಮಲ್ಲಿಕಾರ್ಜುನ ಹಿರೇಮಠರ 'ಹವನ' ಕಾದಂಬರಿಯಲ್ಲಿ ಮಹಿಳಾ ದುಡಿಮೆಗೆ ಆತಂಕವಾಗಿರುವ ಅರಣ್ಯ ನಿಯಮಗಳು ಅರಣ್ಯ ಸಂಪತ್ತನ್ನೇ ನಂಬಿ ಬದುಕುವ ಲಂಬಾಣಿಯಂಥ ಬುಡಕಟ್ಟು ಮಹಿಳೆಯರ ಮೇಲೆ ಅರಣ್ಯಾಧಿಕಾರಿಗಳ ದೌರ್ಜನ್ಯವನ್ನು ಚಿತ್ರಿಸುತ್ತದೆ.

'ಕುಲಮೂಲ ಬದುಕಿನ ವಿಧಾನದಿಂದ ಜಡವಾದ, ಸಮಾಜದಲ್ಲಿ ತೊಡಕುಗಳು ಪದರು ಪದರುಗಳಾಗಿ ಜಿಡ್ಡುಗೊಳ್ಳುತ್ತವೆ. ಈ ಜಿಡ್ಡನ್ನು ಸ್ವಚ್ಛಗೊಳಿಸುವುದು ಸುಲಭ ಸಾಧ್ಯವಲ್ಲ'[೧೨೨] ಎಂಬ ಡಾ.ವಿನಯಾ ಅವರ ಮಾತಿನಂತೆ ಆಧುನಿಕ ವ್ಯವಸ್ಥೆಯಲ್ಲಿ ಕುಲ ಕಸಬುಗಳನ್ನೇ ನಂಬಿದ ಮಹಿಳೆಯರ ಬದುಕು ಅತಂತ್ರವಾಗಿದೆ.

ಗುಡ್ಡದಲ್ಲಿ ಕಟ್ಟಿಗೆ ಸಂಗ್ರಹಿಸಲು ಹೋದ ಮಹಿಳೆಯರಿಗೆ ಫಾರೆಸ್ಟ ಗಾರ್ಡಗಳು ತೊಡೆಗಳಿಗೆ ಬಾವು ಬರುವಂತೆ ಹೊಡೆದು ಕೈಕಾಲು ಕಟ್ಟಿರುತ್ತಾರೆ. 'ನಾವು ಒಲಿ ಉರಿಸಾಕ ಸಣ್ಣ ಮಟ್ಟ ಕಟಿಗೀ ಮಾಡಿಕೊಂತೀವಿ. ನೀವು ದೊಡ್ಡ ದೊಡ್ಡ ಮಂದಿ ಲಾರಿ ತಗೊಂಡು ಬಂದು ಹೆಂಗ ಸಾಗಸ್ತೀರಿ ಗೊತ್ತೈತೇಳ್ರಿ ಭಾಡ್ಕೊಗೋಳ್ರ' ಎಂಬ ಅವರ ಮಾತಿನಲ್ಲಿ ಅಧಿಕಾರಿಗಳ ಭ್ರಷ್ಟತೆ ಬಯಲಾಗುತ್ತದೆ. 'ದಾರು ದಂಧೆ ಬ್ಯಾಡ ಅಂತಾರ,

ಕಟ್ಟಿಗೆ ಕಡಿಯಾದು ಬ್ಯಾಡ ಅಂತಾರ, ಕವಳಿ ಕಾಯಿ ಕೀಳಾಕೂ ಬ್ಯಾಡಂತಾರ, ಮತ್ತ ನಾವೇನು ಮಾಡಬೇಕು' ಎನ್ನುವ ಅವರ ಪ್ರಶ್ನೆಯಲ್ಲಿ ಅವರು ಅವಲಂಬಿಸಿದ ದುಡಿಮೆಗೆ ಕಂಟಕ ಒದಗಿದ ಸಂಕಟ ವ್ಯಕ್ತವಾಗಿದೆ. ಜಾಗತೀಕರಣದ ಕಬಂಧ ಬಾಹುವಿಗೆ ಸಣ್ಣ ಪುಟ್ಟ ಕೈಗಾರಿಕೆಗಳು ನಜ್ಜು-ಗುಜ್ಜಾಗುವ ಮೊದಲೆ ಅರಣ್ಯ ರಕ್ಷಣೆಯ ನೆಪದಲ್ಲಿ ಬಡ ಮಹಿಳೆಯ ದುಡಿಮೆಯ ಮೂಲ ನೆಲೆತಪ್ಪಿದ ಸ್ಥಿತಿಯನ್ನು ಕಾದಂಬರಿ ಪ್ರತಿನಿಧಿಸುತ್ತದೆ.

'ಹವನ' ಕಾದಂಬರಿಯ ಸೋಮಲ್ಯಾನಾಯಕನ ಮಗಳು ಝಿಮ್ರಿ ತನ್ನ ತಂದೆ ಮುದುಕನೊಂದಿಗೆ ಮದುವೆ ಮಾಡಲು ಯೋಚಿಸಿದಾಗ, ಸೋದರ ಮಾವ ಖೀರನೊಂದಿಗೆ ಗೋವಾಕ್ಕೆ ಓಡಿ ಹೋಗಿ ಮದುವೆಯಾಗಿ ಎರಡು ಮಕ್ಕಳ ತಾಯಿಯಾಗುವವರೆಗೆ ಗಂಡನೊಂದಿಗೆ ಸುಖವಾಗಿ ಬದುಕುತ್ತಾಳೆ. ಆದರೆ ಕಟ್ಟಡ ಕೆಲಸ ಮಾಡಿಸುವಾಗ ಮೂರಂತಸ್ತಿನಿಂದ ಕೆಳಗೆ ಬಿದ್ದ ಖೀರ ಎರಡೂ ಮಂಡಿಗಳ ಚಿಪ್ಪು ಒಡೆದು ಖೂಳನಾದಾಗ ಸಂಸಾರದ ಭಾರವನ್ನು ಝಿಮ್ರಿಯೆ ಹೊರುತ್ತಾಳೆ. ಅವಳ ದುಡಿಮೆಯ ಕೂಲಿ ಸಂಸಾರ ನಡೆಸಲೇ ಸಾಲದಾದರೂ ಖೀರ ಆಗಾಗ ಕುಡಿಯಲು ಹಣ ಕೇಳುತ್ತಾನೆ.

ಪುರುಷ ತಾನು ದುಡಿದು ಸಂಸಾರ ನಡೆಸುವಾಗಲೂ ತನ್ನ ದುಡಿಮೆಯ ಬಹುಪಾಲು ಹಣವನ್ನು ತನ್ನ ಖರ್ಚಿಗೇ ಬಳಸುತ್ತಾನೆ. ತಾನು ದುಡಿಯದ ಸ್ಥಿತಿಯಲ್ಲೂ ಮನೆಯಲ್ಲಿದ್ದು ಹೆಂಡತಿಗೆ ಸಹಾಯವಾಗುವ ಬದಲು ತನ್ನ ಏಕಾಕಿತನ ನೀಗಲು ಕುಡಿದು ಅವಳ ಹೊರೆಯನ್ನು ಮತ್ತೂ ಹೆಚ್ಚಿಸುತ್ತಾನೆ. ಗಂಡ ಮೂಲೆಗುಂಪಾದರೂ ದೃತಿಗೆಡದ ಝಿಮ್ರಿ ಅವನಿಗೆ ಆಸರೆಯಾಗುವುದರೊಂದಿಗೆ ಮಕ್ಕಳನ್ನು ಪೋಷಿಸುತ್ತಾಳೆ. ಗಂಡನೊಂದಿಗೆ ತವರಿಗೆ ಮರಳಿ ಬಂದು ತಂದೆಯ ದುಗಡವನ್ನು ನಿವಾರಿಸಲು ಯತ್ನಿಸುತ್ತಾಳೆ. ಬದುಕು ಲಯ ತಪ್ಪಿದ ಸಂದರ್ಭದಲ್ಲೂ ಅದನ್ನು ಹದಗೊಳಿಸಲು ಪ್ರವೃತ್ತಳಾಗುತ್ತಾಳೆ.

ಸಂಧ್ಯಾ ಹೊನಗುಂಟಿಕರ ಅವರ 'ಚಿಗುರೊಡೆದ ನೆನಪು' ಕಥೆಯಲ್ಲಿ ವರದಕ್ಷಿಣೆ ಕೊಡಲಾಗದೆ ಕೊರಗಿ ತಂದೆ ತೀರಿಕೊಂಡಾಗ, ಅಣ್ಣಂದಿರು ಮನೆಯ ಜವಾಬ್ದಾರಿ ಹೊರದೇ ಇದ್ದಾಗ ಸವಿತಾ 'ಶಿಕ್ಷಕಿ ಕೆಲಸಕ್ಕೆ ಸೇರಿ ತನ್ನ ತಾಯಿಯನ್ನು ಸಾಕುತ್ತಾಳೆ.'[೨೨] ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡು ದುಡಿದು ಮನೆಯ ಜವಾಬ್ದರಿ ನಿರ್ವಹಿಸುತ್ತಾನೆ ಎಂಬ ಕಾರಣಕ್ಕೆ ಅವನಿಗೆ ಹೆಚ್ಚಿನ ಸ್ಥಾನಮಾನ ಗೌರವ ನೀಡುತ್ತ ಬರಲಾಗಿದೆ. ಆದರೆ ಅನೇಕ ಸಂದರ್ಭಗಳಲ್ಲಿ ಗಂಡು ಬೇಜವಾಬ್ದಾರನಾದಾಗ ಹೆಣ್ಣು ಕೈಕಟ್ಟಿ ಕುಳಿತುಕೊಳ್ಳದೆ ಸಮರ್ಥವಾಗಿ ಕುಟುಂಬ ನಿರ್ವಹಿಸಿದ್ದನ್ನು ಸವಿತಾಳ ಪಾತ್ರ ಪ್ರತಿನಿಧಿಸುತ್ತದೆ.

ಮಲ್ಲಿಕಾರ್ಜುನ ಹಿರೇಮಠರ 'ಲಕ್ಕವ್ವನ ಮಂದಿ' ಕಥೆ ಅಲೆಮಾರಿ ಮಹಿಳೆ ನಾಗವ್ವನ ದುಡಿಮೆಯನ್ನು ಚಿತ್ರಿಸುವುದಾಗಿದೆ. ನಾಗವ್ವ ಎಪ್ಪತ್ತರ ಹರೆಯದಲ್ಲೂ ಬೀಸುವ ಕಲ್ಲಿಗೆ ಹೊಳಿ ಹಾಕಿ ಬಂದ ಉತ್ಪನ್ನದಲ್ಲೇ ಬದುಕು ಸಾಗಿಸುವವಳು. ಬೀಸುವ ಗಿರಣಿಗಳು ಬಂದ ನಂತರ ಮನೆಯಲ್ಲಿ ಬೀಸುವ ಪರಿಪಾಠ ತಪ್ಪಿ ಅದನ್ನೇ ನಂಬಿ ಬದುಕುವವರು ಆರ್ಥಿಕವಾಗಿ ತೀರ ದುರ್ಬಲರಾಗಬೇಕಾಗುತ್ತದೆ.

ಊರಿಂದೂರಿಗೆ ಅಲೆಯುತ್ತ ಮನೆ ಮನೆ ತಿರುಗಿ ಕೆಲಸ ಸಿಕ್ಕಾಗ ಸಿಕ್ಕಷ್ಟೆ ದುಡಿದು, ಅರೆ ಹೊಟ್ಟೆ ಬರೆ ಹೊಟ್ಟೆಯ ಜೀವನ ಯಾಂತ್ರೀಕರಣ ಪರಿಣಾಮವಾಗಿದೆ. ಕುಲಕಸುಬನ್ನೇ ನಂಬಿ ಬದುಕುವವರು ಪರ್ಯಾಯಗಳಿಲ್ಲದೆ ಬಳಲುವಂತಾಗಿದೆ. ಗಂಡಿಗಿಂತಲೂ ಹೆಣ್ಣು ಹೆಚ್ಚಾಗಿ ಆರ್ಥಿಕ ದುಸ್ಥಿತಿಯನ್ನು ಎದುರಿಸಬೇಕಾಗುತ್ತದೆಂಬುದನ್ನು ನಾಗವ್ವನ ದುಡಿಮೆ ಪ್ರತಿನಿಧಿಸುತ್ತದೆ.

ಆಧುನಿಕ ಸಂದರ್ಭದ 'ಅಭಿವೃದ್ಧಿ ಪಥ' ಮಹಿಳೆಯರನ್ನು ತನ್ನ ಹಿಂಸೆಯ ಪಥದಲ್ಲಿ ಸೇರಿಸಿಕೊಳ್ಳುತ್ತದೆ. ಅಭಿವೃದ್ಧಿ ಶೀಲ ದೇಶಗಳ ಸಂದರ್ಭದಲ್ಲಿ ಮಹಿಳೆಯರ ಮೇಲಿನ ಹಿಂಸೆಯು ಹೆಚ್ಚು ದುರಂತ ಮಯವೂ ಜಟಿಲವೂ ಆಗುತ್ತ ಹೋಗುತ್ತದೆ. ಭಾರತದಂಥ ದೇಶಗಳಲ್ಲಿ 'ಅಭಿವೃದ್ಧಿ ಪ್ರಕ್ರಿಯೆಯ ದೊಡ್ಡ ಫಲ ಎಂದರೆ ಮಹಿಳೆಯರ ಮೇಲೆ ಸೂಕ್ಷ್ಮ ಹಾಗೂ ನೇರ ಹಿಂಸೆಗಳ ಹೆಚ್ಚಳ ಎಂದೇ ಅರ್ಥ. ಆಧುನೀಕರಣವೆಂದರೆ ಹೆಂಗಸರ ಮೇಲಿನ ಹೊಸ ಹೊಸ ರೀತಿಯ ದಬ್ಬಾಳಿಕೆಯ ಸೃಷ್ಟಿ. ಈ ಪಥ ಮೇಲು ನೋಟಕ್ಕೆ ಸಂಪ್ರದಾಯಸ್ಥ ಮೌಲ್ಯಗಳ ಬಿಗಿಮುಷ್ಟಿಯಿಂದ ಬಿಡಿಸಿ ಹೊಸ ಸ್ವಾತಂತ್ರ್ಯಗಳ ವಿಸ್ತಾರಕ್ಕೆ ಕರೆದೊಯ್ಯುತ್ತದೆ ಎಂದು ಅನಿಸಿದರೂ ನಿಜ ಸ್ವರೂಪ ಬೇರೆಯೆ ಇದೆ. ಈ ಸ್ವಾತಂತ್ರ್ಯಗಳು ಏನಿದ್ದರೂ ಮೇಲು ವರ್ಗದ ಮತ್ತು ಮೇಲ್ ಮಧ್ಯಮ ವರ್ಗದ ಹೆಂಗಸರಿಗೆ ಮಾತ್ರ ಮೀಸಲು. ಗ್ರಾಮೀಣ ಪ್ರದೇಶದ ಕೆಳವರ್ಗಗಳ ಕೆಳ ಜಾತಿಗಳ ಮಹಿಳೆಯರಿಗೆ ಆಧುನಿಕ ತಂತ್ರಜ್ಞಾನ ಮತ್ತು ಆಧುನೀಕರಣ ಎಂದರೆ ಅವರ ವಿಶೇಷ ನೈಪುಣ್ಯಗಳ ನಿರ್ನಾಮ. ಅವರು ನೈಪುಣ್ಯಹೀನ ಕೂಲಿಗಳ ಮಟ್ಟಕ್ಕೆ ಇಳಿಯುವುದು ಎಂದು ಆಗುತ್ತದೆ. ಸಾಂಪ್ರದಾಯಿಕ ಉತ್ಪಾದನೆಗಳಲ್ಲಿ ಅನೇಕ ಕಸುಬುಗಳು ಮಹಿಳೆಯರಿಗೇ ಮೀಸಲಾಗಿದ್ದ, ಅವರಿಗೆ ಖಾತ್ರಿಯಾದ ಉದ್ಯೋಗ ಅದು. ಆದರೆ ಆಧುನೀಕರಣ ಅದನ್ನು ಇಲ್ಲವಾಗಿಸುತ್ತದೆ ಎಂಬುದೇ ದೊಡ್ಡ ದುರಂತ'[೧೨೫] ಎಂಬ ಡಿ.ಆರ್.ನಾಗರಾಜರವರ ವ್ಯಾಖ್ಯಾನ ಗ್ರಾಮೀಣ ದುಡಿಯುವ ಮಹಿಳೆಯ ಸ್ಥಿತಿಯನ್ನು ವಾಸ್ತವ ನೆಲೆಯಲ್ಲಿ ಗುರುತಿಸುತ್ತದೆ.

ಮಾರ್ಕ್ಸವಾದಿ ಸ್ತ್ರೀ ವಿಮೋಚನಾ ಚಿಂತಕರು ಕುಟುಂಬ ಮತ್ತು ದಾಂಪತ್ಯ ಸಂಸ್ಥೆಗಳ ಪಾವಿತ್ರ್ಯದ ನೆಪದಲ್ಲಿ ಹೆಣ್ಣಿನ ಮನೆ ದುಡಿಮೆಯ ಮೂಲಕ ಬಂಡವಾಳಶಾಹಿ ಮತ್ತಷ್ಟು ಹೆಚ್ಚಳ ಮೌಲ್ಯವನ್ನು ಬಿಟ್ಟಿ ಸಂಪಾದಿಸುತ್ತದೆ. ಎಂದು ಭಾವಿಸುತ್ತಾರೆ.

ಗ್ರಾಮೀಣ ಮಹಿಳೆ ಹೊಲ ಮನೆಗಳಲ್ಲಿ ಬಿಡುವಿಲ್ಲದೆ ಹೊಣೆ ಹೊತ್ತು ದುಡಿದರೂ ಪ್ರತಿಫಲ ಸಿಗುವುದಿಲ್ಲ. ಕೊನೆ ಪಕ್ಷ ಮಾಡಿದ್ದಾಳೆ ಎಂಬ ಪರಿಗಣನೆ ಇರುವುದನ್ನು ಯಾರಾದರೂ ಗುರುತಿಸಿ ಹೇಳಿದರೂ ಅದನ್ನು ಅಲ್ಲಗಳೆಯುವುದನ್ನು ಜಯತೀರ್ಥ ರಾಜಪುರೋಹಿತರ 'ಸುಳಿಗಾಳಿ' ಕಾದಂಬರಿಯ ಹಂಪವ್ವ ಘಾತಿಮಾರ ಸಂದರ್ಭದಲ್ಲಿ ಮನಗಾಣಬಹುದು. ಪೀರಣ್ಣನೊಂದಿಗೆ ದ್ವೈಪಾಯನರು ಮಹಿಳೆಯ ದುಡಿಮೆಯ ಕುರಿತು ಚರ್ಚಿಸಿದ್ದು ಹೀಗೆ.

ವಾಸ್ತವವಾಗಿಯೂ ಊರ ಮುಂದಿನ ಹೊಲದ ತೋಟದಲ್ಲಿ ಯಾವಾಗಲೂ ಹಂಪವ್ವ ಘಾತಿಮಾರದೇ ಹರಿದಾಟ ಆಳುಗಳೊಂದಿಗೆ ನೀರು ಕಟ್ಟುವಲ್ಲಿ ಕಳೆ ಕಿತ್ತುವಲ್ಲಿ, ಕಾಯಿಪಲ್ಯ ಹರಿಯುವಲ್ಲಿ ಎಲ್ಲೆಡೆಗೂ ಅವರ ವ್ಯಾಪ್ತಿ' ಎಂದು ನಿರೂಪಕ ಅವರ ದುಡಿಮೆಯನ್ನು ಗುರುತಿಸಿದರೆ, ಪೀರಣ್ಣ 'ಬಾಳೆವೆಲ್ಲ ಹೆಣಮಕ್ಕಳ ಮ್ಯಾಲ ಬಿಟ್ರೆ ಹೆಂಗಾದೀತ್ರಿ' ಎಂದು ಹೆಂಗಸರ ಕೆಲಸ ತಾತ್ಕಾಲಿಕವೆಂಬ ಭಾವವನ್ನು ವ್ಯಕ್ತಪಡಿಸುತ್ತಾನೆ. ಗಂಡು ಕುಟುಂಬದ ಹೊಣೆ ಹೊತ್ತಾಗ ಹೆಣ್ಣು ಮನೆಗೇ ಸೀಮಿತಳಾಗಿರಬೇಕು. ಅವನ ಅನುಪಸ್ಥಿತಿ ಅಥವಾ ಬೇರೆ ಜವಾಬ್ದಾರಿಗಳ ಸಂದರ್ಭದಲ್ಲಿ ಇಲ್ಲವೆ ಸೋಮಾರಿ ಪುರುಷರ ಸಂದರ್ಭದಲ್ಲಿ ಮಾತ್ರ ಮನೆತನದ ಜವಾಬ್ದಾರಿ ನಿರ್ವಹಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ಪುರುಷ ಸಮರ್ಥನಿದ್ದಾಗ ಮಹಿಳೆಗಲ್ಲಿ ಸ್ಥಾನವಿಲ್ಲವೆಂದೇ ಭಾವಿಸಲಾಗಿದೆ. ಮನೆತನದ ಹೊಣೆ ಹೊತ್ತಾಗಲೂ ದುಡಿಮೆ ಮಾತ್ರ ಮಹಿಳೆಯದು ಆರ್ಥಿಕ ನಿರ್ವಹಣೆ ಗಂಡ, ಮಗ, ತಂದೆ ಇಲ್ಲವೇ ಅಣ್ಣ ತಮ್ಮಂದಿರದೇ ಅಗಿರುತ್ತದೆ. ಇದು ಮಧ್ಯಮ ಹಾಗೂ ಕೆಳವರ್ಗದ

ಮಹಿಳೆಯರ ದುಡಿಮೆಯ ಬಗೆಯಾದರ ಮನೆಯ ಹೊರಗೆ ಕಾಲಿಡದ ಮೇಲ್ ಜಾತಿಯ ಮಹಿಳೆಯ ಕುರಿತ ದ್ವೈಪಾಯನನ ಅಭಿಪ್ರಾಯವಂತೂ ಆ ಮಹಿಳೆಯರನ್ನು 'ಋಣಗೂಳೂ ತಿನ್ನುವ ಹೆಣ ಮಕ್ಕಳು' ಎಂದು ಹೇಳುವಲ್ಲಿ ವ್ಯಕ್ತವಾಗಿದೆ. ಅವರು ಹಾಗಿರಲು ವ್ಯವಸ್ಥೆಯೆ ಕಾರಣವಾದರೂ ಅವರೇ ಕಾರಣರೆಂಬಂತೆ ಚಿತ್ರಿಸಲಾಗಿದೆ. ಮಹಿಳೆಯರ ದುಡಿಮೆ ಎಂದರೆ ಆಟಗಳಲ್ಲಿಯ ಹೆಚ್ಚುವರಿ ಹುದ್ದರಿಯ ಆಟದಂತೆ. ಅನುಬಂಧವಾಗಿ ಪರಿಗಣಿತವಾಗುವುದೇ ವಿನಃ ಪ್ರಧಾನವೆಂದಲ್ಲ.

ಶಾಂತರಸರ 'ಸಣ್ಣ ಗೌಡಸಾನಿ' ಕಾದಂಬರಿಯ ಮಾಬಮ್ಮ ತನ್ನ ದುಡಿಮೆಯಿಂದ ಸೋಮನಗೌಡನ ಮನೆತನದ ಬಹುತೇಕ ಹೊಣೆಯನ್ನು ವಹಿಸಿಕೊಳ್ಳುತ್ತಾಳೆ. ಮಾಬಿ ಸೋಮನಗೌಡನ ಹೆಣ್ಣಾಗಿ ಮನೆಗೆ ಬಂದ ಬಳಿಕ ಪಾರ್ವತಿಯೊಂದಿಗೆ ಆತ್ಮೀಯವಾಗಿದ್ದು. ಆಳುಮಕ್ಕಳಿಂದ ಕೆಲಸ ಮಾಡಿಸುತ್ತ, ಹೊಲಮನೆ ಕೆಲಸಗಳನ್ನು ನಿರ್ವಹಿಸುತ್ತಾಳೆ. 'ಬೆಳಗು ಮುಂಜಾನೆ ದನಗಳಿಗೆ ಮೇವು ತಿನ್ನಿಸಿ ಹತ್ತಿಕಾಳು ನೀರು ಕುಡಿಸಿ ಹೊಲಗಳಿಗೆ ಆಳು ಮಕ್ಕಳನ್ನು ಕಳಿಸುವ ಕೆಲಸವನ್ನು ತಾನೆ ಮಾಡತೊಡಗಿದಾಗ ನಿನ್ಯಾಕ ಮಾಡ್ತೆ ಅದನೆಲ್ಲ' ಎಂದು ಗೌಡ ಕೇಳಿದರೂ ನನ್ನ ಮನೆಕೆಲ್ಸ ನಾ ಮಾಡಬಾರದೇನು ಎಂದು ಕೇಳುತ್ತಲೆ ತನ್ನನ್ನು ತಾನು ದುಡಿಮೆಯಲ್ಲಿ ತೊಡಗಿಸಿಕೊಳ್ಳುತ್ತಾಳೆ.

ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆ ಸಮಾನತೆಯ ತಳಹದಿಯದಲ್ಲ ಶ್ರೇಷ್ಠ, ಕನಿಷ್ಟ ಪರಿಭಾವನೆಯಲ್ಲಿ ಶ್ರೇಷ್ಠನೆನಿಸಿಕೊಂಡ ಪುರುಷ ಪ್ರಧಾನನಾಗಿ, ಕನಿಷ್ಠಳೆನಿಸಿಕೊಂಡ ಮಹಿಳೆ ಆಧೀನಳಾಗಿ ರೂಪಗೊಂಡಿದ್ದಾರೆ. ಕನಿಷ್ಠಳಾದ ಮಹಿಳೆ ನಿರ್ವಹಿಸುವ ಕೆಲಸವನ್ನು ಕನಿಷ್ಠವಾಗಿಯೇ ಕಾಣಲಾಗಿರುವುದರಿಂದ ಪುರುಷ ಮಹಿಳೆಯ ಕೆಲಸವನ್ನು ಮಾಡುವುದು ಅವಮಾನಕಾರಿಯೆನಿಸಿದೆ. ಹಾಗಾಗಿ ಪುರುಷನ ಕೆಲಸ ಮಹಿಳೆಯ ಕೆಲಸಗಳು ಎಲ್ಲೂ ಸಂಮ್ಮಿಲಿತವಾಗುವುದಿಲ್ಲ. ಮಹಿಳೆ ಪುರುಷನ ಕೆಲಸಮಾಡುವುದು ಹೆಮ್ಮೆಯ ಸಂಗತಿಯಾದರೆ, ಪುರುಷ ಮಹಿಳೆಯ ಕೆಲಸ ಮಾಡುವುದು ಹೀನಾಯವಾಗಿದೆ.

ಬಾಲಚಂದ್ರ ಜಯಶೆಟ್ಟಿಯವರ 'ನನ್ನಾಕೆಯ ಸೋಷಿಯಲಿಜಂ' ಕಥೆ ಮಹಿಳಾ ಸ್ವಾತಂತ್ರ್ಯದ ತಪ್ಪು ಗ್ರಹಿಕೆಯನ್ನು ವಿಡಂಬಿಸುವ ವಸ್ತುವಿನದು. ಹಳ್ಳಿ ಹುಡುಗಿ ಶಶಿ ಪ್ರೊಫೆಸರ್ ಗಂಡನ ಪ್ರಯತ್ನದ ಫಲವಾಗಿ ಸಮಾಜ ಸೇವಕಿ, ಮಹಿಳಾ ಕಾರ್ಯಕರ್ತೆಯಾಗುತ್ತಾಳೆ. ಸ್ತ್ರೀ ಸ್ವಾತಂತ್ರ್ಯವೆಂದರೆ ಗಂಡನಿಂದ ಅಡಿಗೆ ಕೆಲಸ ಮಾಡಿಸುವುದೆಂದು ಭಾವಿಸುವ ಶಶಿ, ಹೆಂಡತಿ ಗುಲಾಮನಾಗಬಾರದೆಂದು ಶತಾಯಗತಾಯ ಪ್ರಯತ್ನಿಸುವ ಪ್ರೊಫೆಸರ್ ಇಬ್ಬರೂ ವಾಸ್ತವ ಚಿಂತನೆಯವರಾಗದೆ ಒಂದು ಬಗೆಯ ವಂಚಕ ಬದುಕನ್ನು ಬದುಕುತ್ತಾರೆ.

ಪ್ರಸ್ತುತ ಸ್ತ್ರೀವಾದಿಗಳು ಹೇಳುವಂತೆ ಸ್ತ್ರೀ-ಪುರುಷ ಸಮಾನತೆ ಬರಬೇಕೆ ಹೊರತು ಪುರುಷ-ಸ್ತ್ರೀಯರು ಪ್ರಧಾನ ಅಧೀನವಾಗುವುದಲ್ಲ. ಸ್ತ್ರೀ ಸ್ವಾತಂತ್ರ್ಯ ವೆಂಬುದು ಪುರುಷನನ್ನು ಅಧೀನಗೊಳಿಸುವುದಲ್ಲ. ಪರಸ್ಪರ ಸಮಾನರಾಗಿ ಸಹಕಾರದ ಬದುಕನ್ನು ರೂಢಿಸಿಕೊಳ್ಳುವುದು. ಸಮಾನತೆ ಸ್ವಾತಂತ್ರ್ಯ ಪರಸ್ಪರ ಗೌರವಗಳು ಸಮಾನ ನೆಲೆಯದಾಗಬೇಕು. ಆದರೆ ಕಥೆಯ ಕೊನೆಯಲ್ಲಿ ಗಂಡನನ್ನು ಮನೆಗೆಲಸಕ್ಕೆ ಹಚ್ಚುವವಳು ಆದರ್ಶ ಗೃಹಿಣಿಯಲ್ಲವೆಂದು ಹೊರಟು ಹೋಗುವ ತೀರ್ಪುಗಾರರು ಗಂಡನ ಮಾತು ಮೀರದ, ಎದುರು ನುಡಿಯದ ಹೆಣ್ಣು ಮಾತ್ರ ಆದರ್ಶ ಗೃಹಿಣಿ ಎಂದು ಎದ್ದು ಹೋಗುವುದು ಕಥೆಯಲ್ಲಿಯ ಪುರುಷ ಪ್ರಧಾನ ಅಂಶಗಳ ಸ್ಥಿರೀಕರಣಕ್ಕೆ ಸಾಕ್ಷಿಯಾಗಿದೆ. ಮಹಿಳೆ ಮನೆಯ ಹೊರಗೆ ಯಾವುದೇ ಹುದ್ದೆಯನ್ನು

ಅಲಂಕರಿಸಿದ್ದರೂ, ಮನೆಯಲ್ಲಿ ಒಬ್ಬಳೇ ನಿರ್ವಹಿಸಬೇಕಾದ ಮನೆಗೆಲಸಗಳಿಂದ ಅವಳಿಗೆ ಮುಕ್ತಿಯಿಲ್ಲ. ಮನೆಗೆಲಸ ಮಾಡುವುದು ಅವಮಾನಕಾರಿ ಎಂದು ಭಾವಿಸುವ ಪ್ರೋಫೆಸರ್, ಗೆಳತಿಯರ ಮುಂದಾದರೂ ಮನೆಗೆಲಸ ಮಾಡಿದಂತೆ ತನ್ನ ಗಂಡ ನಟಿಸಬೇಕೆಂದು ಬಯಸುವ ಶಶಿ ಇಬ್ಬರೂ ಪರಸ್ಪರ ಪ್ರತಿಷ್ಠೆಗಾಗಿ ಪರಿವರ್ತಿಸಲು ಯತ್ನಿಸುವುದೇ ಅವರ ಸೋಲಿಗೆ ಕಾರಣವಾಗುತ್ತದೆ ಎಂಬುದನ್ನು ಕಥೆ ಚಿತ್ರಿಸುತ್ತದೆ.

ವಿವಾಹವಾದ ಹೊಸತಿನಲ್ಲಿ ಹೆಂಡತಿ ನಡೆದರೆ ಮಣ್ಣುಣಾಗೀತು ಎಂದು ಚಿಂತಿಸುವ ಗಂಡ, ಬರುಬರುತ್ತಾ ಆಸಕ್ತಿಯನ್ನು ಕಳೆದುಕೊಂಡು ಆಸಡ್ಡೆಯನ್ನು ಬೆಳೆಸಿಕೊಳ್ಳುತ್ತಾನೆ. ದುಶ್ಚಟಗಳನ್ನು ಕಲಿತು ದುಡಿಮೆಯನ್ನು ಮರೆಯುತ್ತಾನೆ. ವೆಚ್ಚಕ್ಕೆ ಹಣವಿಲ್ಲದೆ ಹೆಂಡತಿಯನ್ನು ಹಣಕ್ಕಾಗಿ ಪೀಡಿಸುತ್ತಾನೆ. ಕೊಡದೇ ಇದ್ದಾಗ ಹೆಂಡತಿಯನ್ನು ಹೊಡೆದು ಬಡಿದು ಹಿಂಸಿಸುತ್ತಾನೆ. ಹೀಗೆ ಪುರುಷನ ಲೋಲುಪತೆ ಮಹಿಳೆಯ ಬದುಕನ್ನು ಶೋಷಿಸುತ್ತದೆ. ಅವಳ ದುಡಿಮೆಯ ಫಲ ಸಾರ್ಥಕವಾಗಿ ಬಳಕೆಗೊಳ್ಳದೆ ಪೋಲಾಗುತ್ತದೆ. ತನ್ನ ಗಳಿಕೆಯನ್ನು ತಾನೇ ಬಳಸದ ಸ್ಥಿತಿ ಮಹಿಳೆಯದಾಗುತ್ತದೆ.

ಲಕ್ಷ್ಮೀದೇವಿ ಶಾಸ್ತ್ರೀಯವರ 'ದ್ವಂದ್ವಕಥೆಯು' ಬಂಗಾರಿಯ ಬದುಕಿನ ಗೋಳನ್ನು ವಿವರಿಸುತ್ತದೆ. ಬಂಗಾರಿ ಶರಣಬಸವನನ್ನು ಮದುವೆಯಾಗಿ ಬಂದಾಗ ತನ್ನಷ್ಟು ಸುಖಿ ಯಾರಿಲ್ಲ. ಹಿಂದಿನ ಜನ್ಮದಲ್ಲಿ ತಾನು ನಾಲ್ಕಾರು ಹೂಗಳನ್ನು ದೇವರಿಗೆ ಹೆಚ್ಚಿಗೆ ಏರಿಸಿರುವುದರಿಂದಲೇ ತನಗೆ ಶರಣಬಸವನಂಥ ಒಳ್ಳೆ ಗಂಡ ದೊರೆತನೆಂದು ಹಿಗ್ಗುತ್ತಾಳೆ. ಆದರೆ ಚೊಚ್ಚಲ ಹೆರಿಗೆಗೆ ಹೋದಾಗ ಶರಣಬಸವ ಕುಡಿತದ ದಾಸನಾಗಿ ಕೆಲಸ ಕಳೆದುಕೊಳ್ಳುತಾನೆ. ಬಂಗಾರಿಯೆ ದುಡಿದು ಮನೆ ನಡೆಸ ಬೇಕಾಗುತ್ತದೆ. ಕುಡಿಯಲು ಹಣಕ್ಕಾಗಿ ಪೀಡಿಸುವುದು ಹೊಡೆಯುವುದು ಆರಂಭವಾಗುತ್ತದೆ. ಇವರ ಜಗಳ ಕೇಳಿದ ನೆರೆ ಮನೆಯ ಬಸಲಿಂಗವ್ವ 'ಬಂಗಾರಿ ನಿನ್ಗ ಏಸ್ ಕೆಪಿ ಹೇಳೀನಿ ಶರಣಬಸ್ಸುಂದು ಗುಣ ನೀ ನೋಡಿದ್ದೇ ಆದ! ಗಂಡಸರ ಬಾಯಿಗಿ ಹಿಂಗೆಲ್ಲ ಹತ್ತ ಬಾರ್ದವ್ವ'[೧೨೮] ಎಂದು ಬುದ್ಧಿ ಹೇಳುತ್ತಾಳೆ. ಅದಕ್ಕೆ ಬಂಗಾರಿ ನಾ ಎಲ್ಲಿ ಅವ್ನ ಬಾಯಿಗೆ ಹತ್ತೀನೆ ಬಸಲಿಂಗವ್ವಾಯಿ ನೀನೇ ನೋಡಿದ್ದೆಲ್ಲ ಈ ಮನೀಗಿ ನಡ್ಯಾಕ ಬಂದೀನಿ ಬಂದೀನಿ ನಾ ಏನ್ ಕುಂತ್ ಉಂಡಿದ್ದು ನೋಡಿದ್ಯಾ? ನಸುಕಿನ್ಯಾಗ ಎದ್ದು ಮನಿಕೆಲ್ಸ ಮಾಡಿ ಉಣ್ಣಾಕ ಮಾಡಿಟ್ಟು ಪುರುಸೊತ್ತು ಇಲ್ದೆ ದುಡ್ಯಾಕ್ ಹೋಗ್ತೀನಿ. ಒಂದಿನಾನ ಪಾಪ ಅಂದಾನೇನು. ಸಂಸಾರಕ್ಕಾಗಿ ಎಷ್ಟು ದುಡಿತಾದಲ್ಲ ಹೆಣ್ಣು ಜೀವಾs ಅಂತ ಕಕುಲಾತಿ ತೋರಿಸ್ಯಾನೇನು? ತಾನೇನೋ ದಾರಿ ಬಿಟ್ಟು ಹಾಳಾದ ತಾಯಿ ಮಗನೀಗನ ನಿಶ್ಚಿಂತರಾಗಿ ಇರಾಕ್ ಬಿಟ್ಟಾ ನಂದ್ರ ಎಲ್ಲಿ ಬಿಡ್ತಾನ? ನಾ ಹೈರಾಣಾಗಿ ದುಡ್ಡು ಮಾಡಿ ತಂದುದ್ದನ್ನು ಹಿಂಗ್ ಹರಾಮಿ ಹಾಳ್ ಮಾಡ್ತ್ರ ನಾವೇನ್ ಹೊಟ್ಟೇಗಿ ಕ್ಯಾರಾಳ್ ಹಾಕ್ಕೋಬೇಕಾ[೧೨೯] ಎಂದು ಕೇಳುತ್ತಾಳೆ.

ಇಲ್ಲಿಯ ಬಂಗಾರಿಯ ಮಾತು ದುಡಿಯುವ ಹೆಣ್ಣು, ಕುಡುಕ ದುಡಿಯದ ಗಂಡನಿರುವ ಯಾವುದೇ ಹೆಣ್ಣಿನ ಅಂತರಂಗದ ಅಭಿವ್ಯಕ್ತಿಯಾಗಿ ಒಡಮೂಡಿದೆ. ಕುಡಿತದ ಚಟಕ್ಕೆ ಅಂಟುವ ಮೊದಲು ಪ್ರೀತಿಸುವ ಗಂಡನಾಗಿದ್ದ ಶರಣಬಸವ ಕುಡಿತದಿಂದಾಗಿಯೆ ಹೆಂಡತಿ ಮಕ್ಕಳ ಪೀಡಕನಾಗುವುದು ಸಂಸಾರದ ನೆಮ್ಮದಿ ಹಾಳುಮಾಡುವ, ಹೊಡೆದು ಬಡಿದು ದೌರ್ಜನ್ಯವೆಸಗುವ ವ್ಯಕ್ತಿಯಾಗುತ್ತಾನೆ. ಕುಡಿತ ಜೂಜಾಟಗಳಂಥ ಸಂಸಾರ ವಿರೋಧಿ ಹವ್ಯಾಸಗಳನ್ನು ಬೆಳೆಸಿಕೊಳ್ಳುವ ಮೂಲಕ ಶರಣಬಸವ ಬದುಕಿನ ನೆಮ್ಮದಿ ಹಾಳು

ಮಾಡುತ್ತಾನೆ. ಅಷ್ಟಾದರೂ ಅವನು ಮನೆಗೆ ಬರುವುದು ಸ್ವಲ್ಪ ತಡವಾದರೆ ಮಗನನ್ನು ಹುಡುಕಲು ಕಳಿಸುವ ಬಂಗಾರಿ ಇದೆಲ್ಲ ಸಹಜವೆಂದೇ ಒಪ್ಪಿ ಬದುಕುವ ಮಹಿಳೆಯರ ಪ್ರತಿನಿಧಿಯಂತಿದ್ದಾಳೆ. ಅವಳಿಗೆ ಬುದ್ಧಿಹೇಳುವ ಬಸಲಿಂಗಮ್ಮಾಯಿ ಕೂಡ ಸಾಂಪ್ರದಾಯಕ ಪಾತ್ರದ ಪೋಷಕಿಯಾಗಿ ಚಿತ್ರಣಗೊಂಡಿದ್ದಾಳೆ.

ಗಂಡಿನ ಆಸರೆಯಲ್ಲಿ ಮಾತ್ರ ಹೆಣ್ಣು ಬದುಕಲು ಸಾಧ್ಯ ಆಸರೆ ತಪ್ಪಿದವಳು ಬೀದಿಪಾಲಾಗುತ್ತಾಳೆ, ಗತಿಗೇಡಿಯಾಗುತ್ತಾಳೆ ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ಎಂಬ ಸಾಂಸ್ಕೃತಿಕ ಪರಿಭಾವನೆಯನ್ನು ಮೀರಿ ಬದುಕನ್ನು ಸ್ವಂತ ಬಲದ ಮೇಲೆ ಸಮರ್ಥವಾಗಿ ಕಟ್ಟಿರುತ್ತಾಳೆ ಕೋರಗಲ್ ವಿರೂಪಾಕ್ಷಪ್ಪನವರ 'ಮಣ್ಣಿನ ಗುಣ'ದ ಗಂಗಮ್ಮ. ವರದಕ್ಷಿಣೆಯ ನೆಪದಲ್ಲಿ ಮೊದಲು ನಿಶ್ಚಯಗೊಂಡ ಕಡೆಮನಿ ಗಂಗಪ್ಪನೊಂದಿಗಿನ ಮದುವೆ ತಾಳಿ ಕಟ್ಟುವ ಮೊದಲು ನಿಂತು ಹೋಗುತ್ತದೆ. ಗಂಗಮ್ಮನ ತಂದೆ ಎದೆಯೊಡೆದು ಸಾಯುತ್ತಾನೆ, ಸ್ವಲ್ಪ ತಡವಾಗಿಯಾದರೂ ಮಹಾದೇವಪ್ಪನೊಂದಿಗೆ ಮದುವೆ ಅದ್ದೂರಿಯಾಗಿ ನಡೆಯುತ್ತದೆ. ಮೂರು ಮಕ್ಕಳು ಆಗುತ್ತಾರೆ. ಆದರೆ ನಡೆಯುವ ಮನೆಗೆ ನಾದಿನಿ ಮೂಲ ಎಂಬಂತೆ ಒಬ್ಬರಲ್ಲದೆ ಇಬ್ಬರು ನಾದಿನಿಯರು ಮಾತು ಮಾತಿಗೆ ಮೊದಲು ಮುರಿದ ಮದುವೆಗೂ ಇವಳ ನಡತೆ ಕಾರಣವೆಂಬಂತೆ ಆರೋಪಿಸುತ್ತ ಕೊನೆಗೊಮ್ಮೆ ಮನೆಯಿಂದ ಹೊರದೂಡುತ್ತಾರೆ. ಮಹದೇವ ನಿಷ್ಕ್ರಿಯನಾಗುತ್ತಾನೆ. ತವರಿಗೆ ಬಂದ ಗಂಗಮ್ಮ ತಾಯಿಯ ಬಲದಲ್ಲಿ ಹಾಲು ಬೆಣ್ಣೆಯ ವ್ಯಾಪಾರ ಅರಂಭಿಸುತ್ತಾಳೆ. ತಾಯಿ ಸತ್ತ ಮೇಲೆ ಹಳ್ಳಿ ಬಿಟ್ಟು ಕೊಪ್ಪಳಕ್ಕೆ ಬಂದು ತನ್ನದೇ ಚಿಕ್ಕ ಕೋಣೆಯನ್ನು ಹತ್ತು ರೂಪಾಯಿ ಬಾಡಿಗೆಗೆ ಹಿಡಿದು ವ್ಯಾಪಾರ ಮುಂದುವರಿಸುತ್ತಾಳೆ. ತನ್ನ ಬದುಕನ್ನು ಮೂಲೆಗುಂಪು ಮಾಡಲು ಬಯಸಿದ್ದ ಸಮಾಜದ ಎದುರು ತಲೆಎತ್ತಿ ಬದುಕುತ್ತಾಳೆ, ಹೆಣ್ಣಿಗೆ ಗಂಡಿನ ಆಸರೆ ಅನಿವಾರ್ಯವಲ್ಲವೆಂಬುದನ್ನು ಸಾಧಿಸಿ ತೋರಿಸುತ್ತಾಳೆ. ಅವಳನ್ನು ಪುನಃ ರಾಜಿ ಮಾಡಿಸಿ ಮನೆಗೆ ಸೇರಿಸಲು ಬಂದ ಸೋದರ ಮಾವನಿಗೆ 'ಬ್ಯಾಡ ಮಾರಾಯ ಮಕ್ಕಳ ಮ್ಯಾಲಿನ ಕಕ್ಕಲಾತಿ, ಗಂಡನ ಮ್ಯಾಲಿನ ಪಿರೂತಿ ಎಲ್ಲಾ ಕತ್ತರಿಸಿ ಬಂದಿನಿ' ಎಂದು ಹೇಳಿದರೂ ನಾನಿದ್ದೂ ನನ್ನ ಮಕ್ಕಳು ಪರದೇಶಿ ಆಗ್ಯವು 'ಎಂದು ಮರುಗುತ್ತಾಳೆ. ಗಂಡನಿಗೆ ತನ್ನ ಮೇಲೆ ಕಾಳಜಿ ಇದೆ ಎಂದು ಮಾವ ಹೇಳಿದರೆ 'ಈಗ ನನ್ನ ಬಗ್ಗೆ ಕಾಳಜಿ ಐತಿ, ಅನುಕಂಪ ಐತಿ ಅನ್ನೋದರ ಹಿಂದೆ ಏನೋ ಇರಬೇಕು'[೨೩೦] ಎಂದು ಅದರ ಹಿಂದಿನ ರಾಜಕಾರಣದ ಸುಳಿವನ್ನು ಗುರುತಿಸುತ್ತಾಳೆ. ಗಂಡನೊಂದಿಗಿನ ತನ್ನ ಭಾವಚಿತ್ರವನ್ನು ಟ್ರಂಕಿನಲ್ಲಿ ನಿಧಿಯಂತೆ ರಕ್ಷಿಸಿಕೊಂಡು ಬಂದ ಗಂಗಮ್ಮನಲ್ಲಿ ಗಂಡನ ಬಗ್ಗೆ ಅವಳಿಗಿರುವ ಪ್ರೀತಿ ವ್ಯಕ್ತವಾಗುತ್ತದೆ. ತನ್ನನ್ನು ಗೋಳು ಹೊಯ್ದು ಹೊರಗಟ್ಟಿದರೂ, ಪಾಶ್ಚಾತಾಪ ಪಟ್ಟ ಗಂಡ ಮಗ ಮಾವನೊಂದಿಗೆ ಕರೆಯಲು ಬಂದಾಗ ಗಂಗಮ್ಮ ಎಲ್ಲ ಮರೆತು ಮರಳುತ್ತಾಳೆ. ಹಾಗೆ ಮರಳಿದ್ದು ಅವಳ ದೌರ್ಬಲ್ಯವಾಗದೆ ಗಂಡನ ಪಶ್ಚಾತಾಪಕ್ಕೆ ಕ್ಷಮೆಯಾಗಿ, ಯಾವ ತಪ್ಪೂ ಮಾಡದ ಮಕ್ಕಳ ಬದುಕನ್ನು ರೂಪಿಸುವ ಹೊಣೆಯಾಗಿ ಸೂಕ್ತವೇ ಆಗಿದೆ ಎಂಬುದನ್ನು ಕಥೆ ಸಮರ್ಥವಾಗಿ ಪ್ರತಿನಿಧಿಸುತ್ತದೆ.

ಗೀತಾ ನಾಗಭೂಷಣ ಅವರ 'ಚಿತ್ತಿ ಮತ್ತು ರಿಕ್ಷಾ' ಕಥೆಯಲ್ಲಿ ಸಾಕು ತಂದೆ ಫಕೀರಪ್ಪನನ್ನು ತಾನು ರಿಕ್ಷಾ ತುಳಿದು ಸಾಕುವುದಾಗಿ ಹೇಳುತ್ತಾಳೆ ಚಿತ್ತಿ. ರಿಕ್ಷಾ ತುಳಿಯುವದು ಗಂಡಸರ ಕೆಲಸವೆಂದು ಭಾವಿಸಲಾಗಿದ್ದರೂ ತನ್ನ ದುಡಿಮೆಗೆ ಅದನ್ನೇ ಆರಿಸಿಕೊಳ್ಳುತ್ತಾಳೆ 'ಕಳ್ಳತನ ಹಾದರ ಅವಮಾನಕಾರಿಯೇ ಹೊರತು ರಿಕ್ಷಾ ತುಳಿಯುವುದಲ್ಲ' ಎನ್ನುತ್ತಾಳೆ.

ಅಸಂಪ್ರದಾಯಿಕ ವಿಧಾನವನ್ನು ತನ್ನ ದುಡಿಮೆಗೆ ಆಯ್ದುಕೊಂಡ ಚಿತ್ರಿ ಸ್ವಂತ ದುಡಿಮೆಯಲ್ಲಿ ಜೀವನ ನಡೆಸುತ್ತಾಳೆ. ಯಾರಿಗೂ ಹೆದರದ ಗಟ್ಟಿತನವನ್ನು ಬೆಳೆಸಿಕೊಳ್ಳುತ್ತಾಳೆ. ಸೋಮೂನೊಂದಿಗೆ ಮದುವೆಯಾದ ಮೇಲೆ ಗೃಹಿಣಿಯಾಗಿ ಮನೆಯಲ್ಲಿರಬೇಕೆಂದು ಬಯಸುತ್ತಾಳೆ. ಆದರೆ ಸೋಮೂ ಆ್ಯಕ್ಸಿಡೆಂಟ್‌ನಲ್ಲಿ ಕೊನೆ ಉಸಿರೆಳೆದಾಗ ರಿಕ್ಷಾ ಅವಳ ಜೀವನ ಸಂಗಾತಿಯಾಗುತ್ತದೆ.

ಹೀಗೆ ದುಡಿಮೆ ಕೂಡ ಸಾಮಾಜಿಕ ವ್ಯವಸ್ಥೆಯಲ್ಲಿ ಮುಕ್ತವಾಗಿಲ್ಲ. ಹಿಂದೆ ಈಗಾಗಲೆ ಹೇಳಿದಂತೆ ಇದು ಹೆಣ್ಣಿನ ದುಡಿಮೆ ಇದು ಗಂಡಿನ ದುಡಿಮೆ ಎಂದು ಗೆರೆ ಕೊರೆಯಲಾಗಿದೆ. ಈ ಗೆರೆಯನ್ನುದಾಟಿದಾಗ ಅಪಹಾಸ್ಯಕ್ಕೀಡಾಗಬೇಕಾಗುತ್ತದೆ. ಹೆಣ್ಣಿನ ದುಡಿಮೆ ಗೃಹಕ್ಕೆ ಸೀಮಿತ, ಒಂದು ವೇಳೆ ಅವಳು ಗಳಿಕೆಗಾಗಿ ದುಡಿಯಬೇಕಾದರೂ ಅದಕ್ಕಾಗಿಯೇ ಇರುವ ಅವಕಾಶಗಳನ್ನು ಮಾತ್ರ ಬಳಸಿಕೊಳ್ಳಬೇಕು. ಗಂಡಸರದೆಂದು ಭಾವಿಸಲಾಗಿರುವ ಕ್ಷೇತ್ರಕ್ಕೆ ಪ್ರವೇಶ ಪಡೆಯಲು ಬಯಸಬಾರದೆಂದೇ ನಿರೀಕ್ಷಿಸಲಾಗುತ್ತದೆ. ಹಾಗಿದ್ದೂ ಅದನ್ನು ಮೀರುವ ಪ್ರಯತ್ನ ಕಥೆಯಲ್ಲಿ ಕಂಡು ಬರುತ್ತದೆ. ಮೀರುವ ಬಯಕೆ, ಎದುರಿಸುವ ಛಲವಿದ್ದರೆ ಸಮಾಜ ತಾನೂ ಸಹಕರಿಸುತ್ತದೆಂಬುದನ್ನು ಕಥೆ ಪ್ರತಿಪಾದಿಸುತ್ತದೆ. ವಿವಾಹದ ಬಳಿಕ ರಿಕ್ಷಾ ತುಳಿಯುವುದು ಬೇಡವೆನ್ನುವ ಸೋಮು, ಬಿಡಲು ಒಪ್ಪುವ ಚಿತ್ತಿಯ ವಿವಾಹ ನೆರವೇರದೆ ಸಾಂಪ್ರದಾಯಿಕತೆಯನ್ನು ಮೀರಿದ ಆಶಯ ತಡೆ ರಹಿತವಾಗಿ ಮುಂದುವರಿಯುತ್ತದೆ.

ಚಿತ್ರಶೇಖರ ಕಂಠಿಯವರ 'ಅತೃಪ್ತೆ' ಕಥೆಯಲ್ಲಿ ಸೋಮಣ್ಣನೆಂಬ ನಿರುದ್ಯೋಗಿ, ದುಶ್ಚಟದ ಗಂಡಿನೊಂದಿಗೆ ವಿವಾಹ ಸಂಸ್ಥೆ ಪ್ರವೇಶಿಸಿದ ಸರಳಾ ತಾನೆ ಮನೆಯೊಳಗೂ ಹೊರಗೂ ದುಡಿದು ಸಂಸಾರದ ಹೊಣೆ ಹೊರುತ್ತಾಳೆ. ಅವಳ ಈ ಶ್ರಮವನ್ನು ಪರಿಗಣಿಸದ ಸೋಮಣ್ಣ ಅವಳು ಕೆಲಸದ ಒತ್ತಡದಿಂದ ತಡವಾಗಿ ಬಂದಾಗ ಅಸಭ್ಯವಾಗಿ ವರ್ತಿಸುವುದಲ್ಲದೆ ಸಂಬಳದ ಹಣವನ್ನೆಲ್ಲ ಕಿತ್ತುಕೊಳ್ಳುತ್ತಾನೆ. ಗಂಡನಾಗಿರುವುದರಿಂದ ಹಾಗೆ ವರ್ತಿಸುವುದು ತನ್ನ ಅಧಿಕಾರವೆಂದು ಹೇಳುತ್ತಾನೆ, ಸರಳಾಳಿಗೆ ವೈವಾಹಿಕ ಬದುಕು, ಹೆಣ್ಣನ್ನು ಗೋಳು ಗುಟ್ಟಿಸುವದಾಗುತ್ತದೆ. ಆದರೂ ಅದನ್ನು ಮೀರಿ ಹೋಗುವ ಮನೋಬಲವಿಲ್ಲದೆ ಅಲ್ಲಿಯೆ ನರಳುತ್ತಾಳೆ.

ಯಶೋದಮ್ಮ ಸಿದ್ದಬಟ್ಟೆಯವರ 'ಮಂಗಳಾ' ಕಾದಂಬರಿಯ ಮಂಗಳಾ ವಿವಾಹವಾದ ಎರಡು ವರ್ಷಕ್ಕೆ ಗಂಡ ಶ್ರೀನಾಥನ ಸಾವಿನಿಂದ ಶಿಕ್ಷಕ ವೃತ್ತಿ ಕೈಗೊಂಡು, ತನ್ನ ಮತ್ತು ತನ್ನ ಮಗುವಿನ ಬದುಕಿಗೆ ಆರ್ಥಿಕ ನೆಲೆಯನ್ನು ಕಂಡುಕೊಳ್ಳುತ್ತಾಳೆ. ಯಾರಿಗೂ ಭಾರವಾಗದಂತೆ ತನ್ನ ಬದುಕನ್ನು ರೂಪಿಸಿಕೊಂಡದ್ದಲ್ಲದೆ ಮಹಿಳಾ ಸಂಘ ಕಟ್ಟಿಕೊಂಡು ಮಹಿಳೆಯ ಸಮಸ್ಯೆಗಳ ನಿವಾರಣೆಗೆ ಶ್ರಮಿಸುತ್ತಾಳೆ. ಮಗನಿಗೆ ಉನ್ನತ ಶಿಕ್ಷಣ ಕೊಡಿಸುತ್ತಲೇ ತಾನೂ ಸ್ನಾತಕೋತ್ತರ ಪದವಿ ಪಡೆದು ಉಪನ್ಯಾಸಕಿಯಾಗುತ್ತಾಳೆ. ಜಿಲ್ಲಾಧಿಕಾರಿ ಸಕ್ಸೇನಾರನ್ನು ವಿವಾಹವಾಗಿ ಅವರಿಚ್ಛೆಯಂತೆ ವೃತ್ತಿಗೆ ರಾಜಿನಾಮೆ ಕೊಡಲು ಸಿದ್ದಳಾಗುತ್ತಾಳೆ. ಗಂಡನ ಸಂಪಾದನೆ ಸಂಸಾರಕ್ಕೆ ಸಾಕಾಗುವಂತಿದ್ದರೆ ಮಹಿಳೆ ದುಡಿಯಬೇಕಿಲ್ಲವೆಂಬ ಸಾಂಪ್ರದಾಯಿಕ ವಿಚಾರಕ್ಕೆ ಬದ್ಧಳಾಗುವ ಮಂಗಳಾ ಸ್ಥಿರಮಾದರಿಯ ಪಾತ್ರವಾಗಿ ಪ್ರತಿನಿಧೀಕರಣಗೊಂಡಿದ್ದಾಳೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯ ಬೆಳ್ಳಿ ಗಂಡ ಕಲ್ಯಾಣಿ ಕೊಲೆ ಕೇಸಿನಲ್ಲಿ ಜೈಲು ಸೇರಿದಾಗ ಎದೆಗುಂದದೆ ಸಂಸಾರದ ನೊಗಕ್ಕೆ ಹೆಗಲು ಕೊಡುತ್ತಾಳೆ. ಮಾನಸಿಕ ಸ್ಥಿಮಿತವಿಲ್ಲದ ಅತ್ತೆ,

ಶಿಶುತನ ಮೀರಿರದ ಮಗ ಸಣ್ಣ ಮಲ್ಲು, ಮೂರು ತಿಂಗಳ ತನ್ನ ಗರ್ಭ ಯಾವುದೂ ಅವಳನ್ನು ವಿಚಲಿತವಾಗಿಸುವುದಿಲ್ಲ. ಹೊಲದ ಕೆಲಸ, ಮನೆಗೆಲಸದೊಂದಿಗೆ ದಿನದ ಖರ್ಚು ನೀಗಲು ಕೊರವರ ಈರವ್ವನಿಂದ ಭಾರಿಗೆ ಕಟ್ಟುವ ಚಾಪೆ ಹೆಣೆಯುವ ಕೆಲಸ ಕಲಿತು ಆದಾಯ ಮೂಲವನ್ನು ಕಂಡುಕೊಳ್ಳುತ್ತಾಳೆ ಬಿಡುವಿಲ್ಲದೆ ದುಡಿಯುತ್ತಾಳೆ. ಮಗ ಸಣ್ಣ ಮಲ್ಲುನನ್ನು ಕಲಬುರ್ಗಿಯ ತಾಯಿ ಮನೆಯಲ್ಲಿರಿಸಿ ಶಿಕ್ಷಣ ಕೊಡಿಸುತ್ತಾಳೆ. ಕಲ್ಯಾಣಿಯ ಬಿಡುಗಡೆಗೆ ಶಕ್ತಿ ಮೀರಿ ಶ್ರಮಿಸುತ್ತಾಳೆ, ಎಲ್ಲ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಹೆಣ್ಣಿನ ಕುರಿತು ಬೆಳೆದು ಬಂದ ಸಾಂಸ್ಕೃತಿಕ ನಂಬಿಕೆಗೆ ಸವಾಲಾಗುತ್ತಾಳೆ. ಸಂದರ್ಭವೊದಗಿದಾಗ ಮಹಿಳೆ ತನ್ನ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿದ್ದನ್ನು ಬೆಳ್ಳಿಯ ಪಾತ್ರ ಪ್ರತಿನಿಧಿಸುತ್ತದೆ.

ಹೆಣ್ಣಿನಿಂದ ಸೇವೆ, ತ್ಯಾಗ, ಕರುಣೆ, ಪ್ರೀತಿಗಳನ್ನೇ ಪಡೆಯುತ್ತಾ ಬಂದ ಸಮಾಜ ಹೆಣ್ಣಿಗೆ ಸ್ವಾಭಿಮಾನ ಇರುವ ಸಾಧ್ಯತೆಯನ್ನು ನಿರಾಕರಿಸುತ್ತದೆ. ಬಹುಮಟ್ಟಿಗೆ ಅವಳು ಸ್ವಾಭಿಮಾನವನ್ನು ತೋರುವ ಸಂದರ್ಭಗಳನ್ನೆಲ್ಲಾ ಅಹಂಕಾರವೆಂದು ವ್ಯಾಖ್ಯಾನಿಸಲಾಗುತ್ತದೆ.

ಗೀತಾ ನಾಗಭೂಷಣರ 'ಏರಿಳಿತಗಳು' ಕಾದಂಬರಿಯಲ್ಲಿ ಸಾಗರನಿಂದ ವಂಚಿಸಲ್ಪಟ್ಟ ಸ್ಮಿತಾ ಅವನನ್ನು ತೊರೆದು ಹೈದರಾಬಾದಿನ ಕಂಪನಿಯಲ್ಲಿ ಕೆಲಸಕ್ಕೆ ಸೇರುತ್ತಾಳೆ. ತನ್ನ ಮಗಳು ದೀಪ್ತಿ ಹಾಗೂ ಅಕ್ಕನ ಮಗ ಅಭಿಜಿತರನ್ನು ಏಕ ಪಾಲಕತ್ವದಲ್ಲಿ ಬೆಳೆಸುತ್ತಾಳೆ. ಸ್ಮಿತಾಳ ಸ್ವಾವಲಂಬನೆಯ ಫಲವಾಗಿ ದೀಪ್ತಿ ವೈದ್ಯಳಾದರೆ ಅಭಿಜಿತ್ ಇಂಜಿನಿಯರ ಆಗುತ್ತಾನೆ. ಸಾಗರನ ಆಸರೆ ಇಲ್ಲದೆ ಸ್ವತಂತ್ರ ಬದುಕನ್ನು ಸ್ವಂತ ನಿರ್ಣಯದ ಬಲದಲ್ಲಿ ರೂಪಿಸಿಕೊಳ್ಳುವ ಸ್ಮಿತಾ ಸ್ವಾಭಿಮಾನದ ಆತ್ಮಗೌರವದ ಪ್ರತೀಕವಾಗಿ ಚಿತ್ರಣಗೊಂಡಿದ್ದಾಳೆ. ಸ್ವಂತದ ಸಂಪಾದನೆ ಆತ್ಮವಿಶ್ವಾಸಕ್ಕೆ ಪೂರಕವಾಗುತ್ತದೆಂಬುದನ್ನು ಕಾದಂಬರಿ ಮಂಡಿಸುತ್ತದೆ.

ರಾಜಶೇಖರ ಹತಗುಂದಿಯವರ 'ಮರೀಚಿಕೆ' ಕಥೆಯಲ್ಲಿ ಶಾಮಲಾ ತನ್ನ ಮನಸ್ಸಿಗೆ ವಿರುದ್ಧವಾಗಿ ತಂದೆಯ ಒತ್ತಾಯದಿಂದ ಬಾಲ್ಯ ವಿವಾಹಕ್ಕೆ ದೂಡಲ್ಪಡುತ್ತಾಳೆ. ಮೂವತ್ತೂರು ವರ್ಷದ ಪ್ರೌಢ ಮೃತ್ಯುಂಜಯ ಪ್ರಸ್ತದ ದಿನ ಶಾಮಲಾಳನ್ನು ಬಲಾತ್ಕಾರವಾಗಿ ವಶಪಡಿಸಿಕೊಳ್ಳಲು ನೋಡಿದಾಗ ಹೇಗೋ ತಪ್ಪಿಸಿಕೊಂಡು ಪಾರಾಗಿ ಬಂದವಳು ಪುನಃ ಗಂಡನ ಮನೆಗೆ ಹೋಗದೆ ವಿದ್ಯಾಭ್ಯಾಸ ಮುಂದುವರಿಸಿ ಉಪನ್ಯಾಸಕಿಯಾಗುತ್ತಾಳೆ. ಒಲ್ಲದ ಬದುಕಿಗೆ ತನ್ನನ್ನು ಒಡ್ಡಿಕೊಳ್ಳದೆ ಸ್ವತಂತ್ರವಾಗಿ ಬದುಕುತ್ತಾಳೆ.

ಮಹಿಳೆ ವಿದ್ಯಾವಂತಳಾದರೂ, ಉದ್ಯೋಗಸ್ಥಳಾದರೂ ನಿರ್ಬಂಧಗಳಿಂದ ಅವಳಿಗೆ ಮುಕ್ತಿ ಇಲ್ಲ. ಮನೆತನದ ಮರ್ಯಾದೆಗಾಗಿ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಬಲಿಕೊಡಲು ಸಿದ್ಧಳಾಗಬೇಕೆಂದೇ ನಿರೀಕ್ಷಿಸಲಾಗುತ್ತದೆ. ಸ್ವಜಾತಿಯ ಸಾಂಪ್ರದಾಯಿಕ ನಿಯಮಗಳಿಗೆ ಹೊಂದುವ ವಿವಾಹಗಳೆ ನೆರವೇರಬೇಕೆಂಬ ನಂಬಿಕೆಯ ಫಲವಾಗಿ ಮದುವೆ ಒಂದು ವ್ಯವಹಾರವೆಂಬಂತಾಗಿ ವರನ ಕಡೆಯವರ ಬೇಡಿಕೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ತಮ್ಮ ಇರುವ ಆಸ್ತಿಯನ್ನು ಕಳೆದುಕೊಂಡು ಬೀದಿಪಾಲಾಗಬೇಕಾದ ಸ್ಥಿತಿ ಏರ್ಪಟ್ಟರೂ ವಿವಾಹದ ಕಟ್ಟುನಿಟ್ಟುಗಳು ಬದಲಾಗದೆ ಇರುವುದನ್ನು ಅರುಂಧತಿ ಚಾಂದ ಕವಟೆಯವರ 'ತೇನ–ವಿನಾ' ಕಥೆ ಚಿತ್ರಿಸುತ್ತದೆ, ರಮ್ಯ ಪದವೀಧರೆ, ಟೈಪಿಷ್ಟ ಉದ್ಯೋಗದಿಂದ ಮನೆಗೆ ಸಹಾಯವಾದವಳು. ಆಕರ್ಷಕವಲ್ಲದ ರೂಪದಿಂದಾಗಿ ಕಂಕಣಬಲ ಕೂಡದೆ, ಎಡಬಿಡದ ಕನ್ಯಾಪರೀಕ್ಷೆಗೆ ಬೇಸತ್ತು ವಿವಾಹದ

ಬಗ್ಗೆಯೇ ಜುಗುಪ್ಸೆಗೊಳ್ಳುತ್ತಾಳೆ. ಆಫೀಸಿಗೆ ಹೊಸದಾಗಿ ಬಂದ ಅಧಿಕಾರಿ ಮದುವೆಯಾಗುವ ಒಲವು ತೋರಿದಾಗ ಜಾತಿಯ ಕಾರಣವಾಗಿ ಮನೆಯವರು ನಿರಾಕರಿಸುತ್ತಾರೆ. ಸ್ವಜಾತಿಯಲ್ಲಿ ಮದುವೆ ನಿಶ್ಚಯಿಸಿ ವರದಕ್ಷಿಣೆ ಹೊಂದಿಸಲಾಗದೆ ಮದುವೆ ಮಂಟಪದಿಂದಲೆ ವರನೆದ್ದು ಹೋದಾಗ ರಮ್ಯಳ ಅಧಿಕಾರಿ ಮುಂದೆ ಬಂದು ಅವಳ ತಂದೆಯನೊಪ್ಪಿಸುತ್ತಾನೆ.

ಹೀಗೆ ವಿದ್ಯ ಉದ್ಯೋಗ ಯಾವುದೂ ಸಾಂಪ್ರದಾಯಿಕ ನಿಯಮಗಳನ್ನು ಬದಲಾಯಿಸಲು ಸಮರ್ಥವಾಗಿಲ್ಲ. ಆರ್ಥಿಕ ಭದ್ರತೆಯೂ ಅವಳಿಗೆ ಬಿಡುಗಡೆಯಾಗದೆ, ಕೆಲವೊಮ್ಮೆ ಹೆಚ್ಚಿನ ಹೊರೆಯೆ ಆಗುತ್ತದೆ. ಉದ್ಯೋಗ ರಮ್ಯಳಂಥ ಮಹಿಳೆಯರಿಗೆ ಸ್ವಾವಲಂಬನೆಯ ಸಾಧನವಾಗದೆ ತಂದೆತಾಯಿಗೆ ಅಥವಾ ಗಂಡನಿಗೆ ಹಣಗಳಿಸಿ ತಂದು ಕೊಡುವ ಮಾಧ್ಯಮವಾಗುತ್ತದೆಂಬುದನ್ನು ಕಥೆ ನಿರೂಪಿಸುತ್ತದೆ.

ಉದ್ಯೋಗ ಹೆಣ್ಣಿಗೆ ಹೊರ ಜಗತ್ತಿನಲ್ಲಿ ಬೆರೆಯುವ, ಅನುಭವಗಳಿಸುವ ಅವಕಾಶಗಳನ್ನು ಸೃಷ್ಟಿಸುತ್ತದೆ. ಮಾನಸಿಕ ಹಾಗು ನೈತಿಕ ಬೆಂಬಲ ಒದಗಿಸುತ್ತದೆ. ಆದರೆ ಕೆಲವೊಮ್ಮೆ ಹೊರೆಯಾಗಿ ಅವಳನ್ನು ಕಾಡುವದೂ ಇದೆ. ಉದ್ಯೋಗಸ್ಥೆಯ ಪತಿ ನಿರುದ್ಯೋಗಿ ದುಶ್ಚಟದವನಾದರೆ ಹೊರೆ ಮಾತ್ರವಲ್ಲ ಹಿಂಸೆಯೂ ಆಗುತ್ತದೆ. ಪುರುಷ ಉದ್ಯೋಗಿಗಿರುವ ಪ್ರಾಶಸ್ತ್ಯ ಗೌರವ ಸವಲತ್ತುಗಳು ಮಹಿಳಾ ಉದ್ಯೋಗಿಗಿರುವುದಿಲ್ಲ ಎಂಬುದನ್ನೆ ಇಲ್ಲಿನ ಬಹುತೇಕ ಕಥೆಗಳಲ್ಲಿ ಚಿತ್ರಿಸಲಾಗಿದೆ. ವಿವಾಹದ ನಂತರ ಉದ್ಯೋಗ ಬಿಡಿಸುವ ಪುರುಷರಿರುವಂತೆ ಬಿಡಲು ಬಯಸುವ ಮಹಿಳೆಯರೂ ಇದ್ದಾರೆ. 'ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯು ಪ್ರವೇಶಿಸಿ ದಶಕಗಳೆ ಕಳೆದರೂ ಸಹಜವಾಗಿಯೇ ಅಲ್ಲಿ ಅವಳಿಗೆ ಪುರುಷನಿಗೆ ದಕ್ಕುವಂಥವೇ ಅನುಭವಗಳು ಸಾಧನೆಗಳು, ತುಮುಲಗಳು, ಸಿಕ್ಕುಗಳು ಎದುರಾಗುತ್ತಿದ್ದರೂ ಸಮಾಜಕ್ಕಾಗಲೀ ಸಾಹಿತ್ಯಕ್ಕಾಗಲೀ ಅವುಗಳನ್ನು ದಾಖಲಿಸುವುದು ಅಷ್ಟೊಂದು ಮುಖ್ಯವಾಗುತ್ತಿಲ್ಲ ಬದಲಿಗೆ ಕುಟುಂಬ ವ್ಯವಸ್ಥೆಗೆ ಮುಖ್ಯವಾಗಿ ಪುರುಷನ ಸುಖ ಜೀವನಕ್ಕೆ ಯಾವ ರೀತಿಯಲ್ಲಿ ತೊಡಕುಂಟಾಗುತ್ತಿದೆ ಎಂಬ ಪ್ರಶ್ನೆಯೇ ಮುಖ್ಯವಾಗಿ, ಇಂತಹ ತೊಡಕನ್ನುಂಟು ಮಾಡಲು ಹೊರಟಿರುವ ಹೆಣ್ಣನ್ನು ಯಾವ ರೀತಿಯಲ್ಲಿ ಮತ್ತೆ ಮನೆಗೆ ಕಟ್ಟಿಹಾಕಬೇಕು ಎಂಬ ಬಗ್ಗೆ ಬೇಕಾದಷ್ಟು ಹುನ್ನಾರಗಳು ನಡೆದಿವೆ. ಇದಕ್ಕೆ ಬಗ್ಗದೆ ಅವಳು ತಲೆ ಎತ್ತಿದರೆ ಹೇಗೆ ತರಾಟೆಗೆ ತೆಗೆದುಕೊಳ್ಳಲಾಗುವುದು ಎಂಬ ಬಗ್ಗೆ ಸೂಚನೆ, ಬೆದರಿಕೆ, ದಿಗ್ಬಂಧನ ಮೊದಲಾದ ಸಂದೇಶಗಳನ್ನು ಸಮಾಜ ಹಲವು ಮಾಧ್ಯಮಗಳ ಮೂಲಕ ಅವಳಿಗೆ ರವಾನಿಸುತ್ತದೆ. ಅಂತಹ ಒಂದು ಪ್ರಮುಖ ಮಾಧ್ಯಮವಾಗಿ ಸಾಹಿತ್ಯವೂ ದುಡಿಯುತ್ತಿದೆ' ಎಂಬ ಡಾ. ಎಚ್. ಎಸ್. ಶ್ರೀಮತಿಯವರ ಗುರುತಿಸುವಿಕೆ ವಾಸ್ತವವೆ ಆಗಿದೆ.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಮಹಿಳೆಯ ದುಡಿಮೆಯನ್ನು ಕುರಿತ ಪುರುಷ ನಿರ್ವಚನ ಅಸಡ್ಡೆಯಿಂದ ಕೂಡಿದ್ದಾಗಿದೆ. ಮಹಿಳೆ ದುಡಿಯಬೇಕಾದುದು ಪುರುಷನಿಗಾಗಿ ಎಂಬ ಧೋರಣೆ ಪ್ರತಿ ಹಂತದಲ್ಲಿ ಕಂಡುಬರುತ್ತದೆ. ಮನೆಗೆಲಸವಂತೂ ದುಡಿಮೆಯ ವ್ಯಾಪ್ತಿಯಲ್ಲಿ ಸೇರುವುದೇ ಇಲ್ಲ. ಅದರಲ್ಲೂ ನಗರ ಪ್ರದೇಶದ ಮಹಿಳೆಯ ನಲ್ಲಿ ನೀರು ಹಿಡಿಯುವ, ಗ್ಯಾಸ್‌ನಲ್ಲಿ ಹೊಗೆ ಇಲ್ಲದೆ ಅಡಿಗೆ ಮಾಡುವ ಕೆಲಸವಂತೂ ಕೆಲಸವೇ ಅಲ್ಲ. ಮಹಿಳೆ ಬಿಡುವಿಲ್ಲದೆ ದುಡಿಯುತ್ತಿದ್ದರೆ ಮಾತ್ರ ಶುದ್ಧಳೂ ಪವಿತ್ರಳೂ ಆಗಿರುತ್ತಾಳೆ. ಇಲ್ಲವಾದರೆ ಹಾಳಾಗುತ್ತಾಳೆ, ಅವಳು ದುಡಿದು ನಾಲ್ಕು ಕಾಸು ಗಳಿಸಿದರೂ ಗಂಡ ಕೇಳಿದ ತಕ್ಷಣ ಕೊಡಬೇಕು. ಯಾಕೆಂದು ಕೇಳುವಂತಿಲ್ಲ. ಕೇಳಿದರೆ ಮೈ ಮುರಿಯುವಂತೆ ಹೊಡೆತ ತಿನ್ನಬೇಕಾಗುತ್ತದೆ.

ಎಂಬಂಥ ಪುರುಷ ದಬ್ಬಾಳಿಕೆಯ ನಿಲುವುಗಳು ಮಹಿಳಾ ದುಡಿಮೆಯನ್ನು ಕುರಿತ ಸಂದರ್ಭಗಳಲ್ಲಿ ವ್ಯಕ್ತವಾಗಿವೆ. ಆದರೂ ಇಲ್ಲಿಯ ಕೆಲ ಮಹಿಳೆಯರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಬಾರಿಗೆ ಕಟ್ಟುವ, ಬುಟ್ಟಿ ಹೆಣೆಯುವ ಹಾಲು ಮಾರುವ, ಕೋಳೀ ಸಾಕುವ, ಹೊಲಗಳಲ್ಲಿ ದುಡಿಯುವ, ಕಲ್ಲಿಗೆ ಹೊಳೆಹಾಕುವ ಕೆಲಸ ನಿರ್ವಹಿಸುತ್ತಾರೆ. ವಿದ್ಯಾವತಿಯರಾದ ಕೆಲವರು ಸರಕಾರಿ ಉದ್ಯೋಗ ಮಾಡುವವರಾಗಿದ್ದಾರೆ. ಕಥನ ಸಾಹಿತ್ಯದಲ್ಲಿ ಗಮನಿಸಿದಂತೆ ಇವರಾರ ದುಡಿಮೆಯೂ ಇವರಿಗೆ ಸುಖ ನೆಮ್ಮದಿ ಗೌರವ ಘನತೆ ತಂದಿರುವುದು ಕಂಡು ಬರುವುದಿಲ್ಲ. ಬದಲಾಗಿ ಒಳ ಹೊರಗೆ ಎರಡೂ ಕಡೆ ದುಡಿಯುವ ಹೊರೆಯನ್ನು ಹೆಚ್ಚಿಸಿದಂತಿದೆ.

೪.೪.೪ ಸಂಘರ್ಷಕ್ಕೆ ಬಲಿಯಾದ ಬದುಕು :

ಸಂಘರ್ಷಗಳು, ಹೋರಾಟಗಳು, ಯುದ್ಧಗಳು, ಚಳುವಳಿಗಳು ಸೇಡು, ಯಾವುದು ನಡೆದರೂ ದಾಳಿಕಾರರ ಯುದ್ಧಾಕಾಂಕ್ಷಿಗಳ ಕ್ರೂರ ದೃಷ್ಟಿಗೆ ಬೀಳುವುದು ಮಹಿಳೆಯೆ ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ರಜಾಕಾರ ಹಾವಳಿಗೆ ಪುರುಷರ ಸೇಡಿಗೆ ಬಲಿಯಾದ ಮಹಿಳೆಯರ ಬದುಕಿನ ಸಂಗತಿಗಳು ಸೇರಿವೆ. ಜಾತಿಯ ನಿಯಮಗಳನ್ನು ಮಡಿವಂತಿಕೆಯನ್ನು ಮನೆತನದ ಗೌರವವನ್ನು ರಕ್ಷಿಸಿಕೊಂಡು ಹೋಗುವ ಹೊಣೆಯನ್ನು ಮಹಿಳೆಯ ಮೇಲೆ ಹೊರಿಸಿ ಮೀರದಂತೆ ನಿರ್ಬಂಧಿಸಲಾಗಿದೆ. ಹೀಗೆ ನಿರ್ಬಂಧಿಸುತ್ತಲೆ ಅವನ್ನು ಮೀರುವ ಸ್ವಾತಂತ್ರ್ಯವನ್ನು ಪುರುಷ ತನ್ನದಾಗಿಸಿಕೊಂಡಿದ್ದಾನೆ. ಅಂತೆಯೆ ತನ್ನ ಎದುರಾಳಿಯನ್ನು ಸೋಲಿಸಿದ ಪುರುಷ ಅಷ್ಟಕ್ಕೆ ತೃಪ್ತನಾಗದೆ ಸೋತವನ ಹೆಂಡತಿಯ ಮೇಲೆ ಅತ್ಯಾಚಾರವೆಸಗುವ ಇಲ್ಲವೆ ಗುಲಾಮಳಾಗಿಸಿಕೊಳ್ಳುವದನ್ನು ಹೆಮ್ಮೆಯ ಸಂಗತಿ ಎಂದುಕೊಳ್ಳುತ್ತಾನೆ. ಸಂಘರ್ಷದಲ್ಲಿ ಮಹಿಳೆಯ ಪಾತ್ರವೇನೂ ಇಲ್ಲದೆ ಇದ್ದಾಗಲೂ ಮಹಿಳೆಯನ್ನು 'ವಿನಾ ಕಾರಣ ಎಳೆ ತರುವ , ತಂದ ಸಂದರ್ಭಗಳು ಚರಿತ್ರೆಯುದ್ಧಕ್ಕೂ ದಾಖಲಾಗಿವೆ. ಅದರಲ್ಲೂ ಒಂಟಿಯಾದ, ವಿಧವೆಯಾದ ಇಲ್ಲವೆ ಕೆಳಜಾತಿಯ ಹೆಣ್ಣನ್ನು ಸಾರ್ವತ್ರಿಕ ಆಸ್ತಿ ಎಂದೆ ಭಾವಿಸಲಾಗಿದೆ. ಇಂಥ ಅನೇಕ ಸಂದರ್ಭಗಳು ಹೈದರಾಬಾದ ಕರ್ನಾಟಕದ ಕಥನ ಸಾಹಿತ್ಯದಲ್ಲಿ ನಿರೂಪಿಸಲ್ಪಟ್ಟಿವೆ. ಮುಂದಿನ ಚರ್ಚೆಯಲ್ಲಿ ಅವನ್ನು ಗಮನಿಸಬಹುದಾಗಿದೆ.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ರಜಾಕರ ಹಾವಳಿಗೆ ಬಲಿಯಾದ ಮಹಿಳೆಯರ ಬದುಕಿನ ಸಂಗತಿಗಳಿವೆ. ಶಾಂತರಸರ 'ಉರಿದ ಬದುಕು' ಕಥೆಯ ನಬೆಮ್ಮ, 'ತೋರಣ ಹರಿಯಲಿಲ್ಲ' ಕಥೆಯ ಮಲ್ಲಿಗೆ, 'ನಾಯಿ ಮತ್ತು ಪಿಂಚಣಿ' ಕಥೆಯ ಈರವ್ವ, 'ಬಡೆಸಾಬು ಪುರಾಣ'ದ ರಾಮವ್ವ, ಅಗಸರ ನಾಗಲಿಂಗಿ, ನಾರಾಯಣನ ತಾಯಿ, ಜಂಗಲೆಪ್ಪನ ಅಕ್ಕ, ರಾಜಶೇಖರ ಹತಗುಂದಿಯವರ 'ಕಾಳ ಬೆಳದಿಂಗಳ ಸಿರಿ' ಕಥೆಯ ಮಹಾದೇವಿ ಮೊದಲಾದ ಮಹಿಳೆಯರ ಬದುಕು ಪುರುಷನ ಸಂಘರ್ಷಕ್ಕೆ, ಸೇಡಿಗೆ, ಲೋಲುಪತೆಗೆ, ಈಡಾಗಿ ಘಾಸಿಗೊಂಡುದನ್ನು ಕಥನ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಸಂಘರ್ಷದ ಪರಿಣಾಮ :

ಶಾಂತರಸರ 'ಉರಿದ ಬದುಕು' ಕಥೆ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಸ್ವಾತಂತ್ರ್ಯಾನಂತರ ಭಾರತದೊಂದಿಗೆ ವಿಲೀನವಾಗದೆ ಸ್ವತಂತ್ರವಾಗಿರಲು ಬಯಸಿದ ನಿಜಾಮಶಾಹಿ ವ್ಯವಸ್ಥೆಯಲ್ಲಿ ರಜಾಕಾರರು ಹಿಂದುಗಳ ಮೇಲೆ ನಡೆಸಿದ ಧಾಂದಲೆ ದೌರ್ಜನ್ಯಗಳಲ್ಲಿ ಪ್ರಾಣಹಾನಿ ಮಾನಹಾನಿಗಳನ್ನು ಚಿತ್ರಿಸುತ್ತದೆ.

ಕಾಸಿಮಲಿ ಎಂಬ ರಜಾಕಾರನ ದೌರ್ಜನ್ಯವೊಂದರಲ್ಲಿ ಪ್ರಾಣ ಕಳೆದುಕೊಂಡ ಹಡಪದ ರಾಚಪ್ಪನ ಮಗ ತಿಪ್ಪಣ್ಣ ಸೇಡು ತೀರಿಸಿಕೊಳ್ಳಲು ಹೊರಟಾಗ ಕಾಸಿಮಲಿಯ ಕ್ರೂರ ದೃಷ್ಟಿಗೆ ಬಿದ್ದು ದಾರಿ ಕಾಣದೆ ನಬೆಮ್ಮನ ಮನೆ ಹೊಕ್ಕು ರಕ್ಷಣೆ ಕೇಳಿದಾಗ, ಅವನಿಗೆ ಸೀರೆ ಉಡಿಸಿ ತನ್ನ ಸೊಸೆಯ ಪಕ್ಕ ಮಲಗಲು ಹೇಳುತ್ತಾಳೆ. ಕಾಸಿಮಲಿ ಶೋಧಿಸಲು ಬಂದಾಗ ಜನಾನಾದಲ್ಲಿ ತನ್ನ ಮಗಳು ಮತ್ತು ಸೊಸೆ ಮಲಗಿದ್ದಾರೆಂದು ಹೇಳುತ್ತಾಳೆ. ನಂಬದ ಕಾಸಿಮಲಿ ಹಿತ್ತಿಲು ಮುಂಬಾಗಿಲುಗಳಿಗೆ ಬೀಗ ಹಾಕಿ ನಬೆಮ್ಮನ ಮಗಳು ಗಂಡನ ಮನೆಯಲ್ಲೇ ಇರುವುದನ್ನು ಖಚಿತ ಪಡಿಸಿಕೊಂಡು ಮನೆಗೆ ಬೆಂಕಿ ಹಾಕಿಸುತ್ತಾನೆ. ಬಾಗಿಲು ತೆರೆದು ಹೊರಗೆ ಬಂದ ನಬೆಮ್ಮನನ್ನು ಹೊಡೆದು ಕೊಲ್ಲುತ್ತಾನೆ. ಒಳಗಿದ್ದ ತಿಪ್ಪಣ್ಣ ಮತ್ತು ನಬೆಮ್ಮನ ಸೊಸೆ ಬೆಂಕಿಗೆ ಆಹುತಿಯಾಗುತ್ತಾರೆ.

ಪ್ರಭುತ್ವದ ಆಸರೆಯಲ್ಲಿ ಮುಸ್ಲಿಂ ದಾಳಿಕೋರರು ಹಿಂದೂಗಳನ್ನು ವಿನಾಶಗೈದರೂ, ಹಿಂದುಗಳೊಂದಿಗೆ ಅನ್ಯೋನ್ಯವಾಗಿ ಬಾಳಿ ಬದುಕಿದ್ದ ಮುಸಲ್ಮಾನರನೇಕರು ಹಿಂದುಗಳಿಗೆ ರಕ್ಷಣೆ ನೀಡಿದರು. ರಕ್ಷಣೆ ನೀಡಿದ ಫಲವಾಗಿ ತಮ್ಮ ಪ್ರಾಣವನ್ನೆ ಕಳೆದುಕೊಂಡರು. ಪ್ರಾಣಬೆದರಿಕೆ ಒಡ್ಡಿದರೂ ತಿಪ್ಪಣ್ಣನನ್ನು ಕಾಸಿಮಲಿಗೆ ಒಪ್ಪಿಸದ ನಬೆಮ್ಮ ಅವನ ಕೋಪಕ್ಕೆ ಬಲಿಯಾಗುತ್ತಾಳೆ. ಅವಳ ಬಲಿದಾನ ವ್ಯರ್ಥವಾಗುತ್ತದೆ. ಅವಳದು 'ಉರಿದ ಬದುಕಾ'ಗುತ್ತದೆ.

ರಕ್ಷಣೆ ಬೇಡಿ ಬಂದವನಿಗೆ ಆಶ್ರಯ ನೀಡುವ ನಬೆಮ್ಮ ಅಬಲೆಯಲ್ಲ. ಹೆದರುವ ಹೀನ ಬದುಕಿಗಿಂತ ಸ್ವಾಭಿಮಾನದ ಸಾವನ್ನು ಆಹ್ವಾನಿಸುತ್ತಾಳೆ. ಮತಾಂದಥೆಯಲ್ಲಿ ಮಾನವೀಯತೆಯನ್ನು ಮರೆಯುವುದು ಪುರುಷ ಧೋರಣೆಯಾಗಿ, ಮಾನವೀಯತೆಗೆ ಮಿಡಿಯುವುದು ಸ್ತ್ರೀನೀತಿಯಾಗಿ ಕಥೆಯಲ್ಲಿ ಮಂಡಿತವಾಗಿದೆ.

ಮಹಿಳೆಗೆ ಪುರುಷನ ರಕ್ಷಣೆ ಅನಿವಾರ್ಯವೆಂದು ಧಾರ್ಮಿಕ ಸಾಮಾಜಿಕ ನಿಯಮಗಳು ಸಾರುತ್ತ ಬಂದಿವೆ. ಸ್ವತಃ ಪುರುಷ ಸಂಕಟಕ್ಕೆ ಸಿಕ್ಕಿ ಹಾಕಿಕೊಂಡ ಸಂದರ್ಭದಲ್ಲಿ ಮಹಿಳೆ ರಕ್ಷಣೆಗೆ ಮುಂದಾಗುತ್ತಾಳೆ. ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡುತ್ತಾಳೆ. ಅವಳ ಇಂಥ ಸಾಮರ್ಥ್ಯವನ್ನು ಗುರುತಿಸದ ವ್ಯವಸ್ಥೆ ಅವಳನ್ನು ಇನ್ನೊಬ್ಬರ ಆಸರೆಗೆ ದೂಡುತ್ತದೆ. ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಮಹಿಳೆ ಸಾಹಸ ತೋರಿಸಿದ್ದನ್ನು ಕಥಾ ಸಾಹಿತ್ಯ ಪ್ರತಿನಿಧೀಕರಿಸುತ್ತದೆ.

ಸೇಡಿಗೆ ಬಲಿಯಾದ ಬದುಕು :

ಶಾಂತರಸರ 'ತೋರಣ ಹರಿಯಲಿಲ್ಲ' ಕಥೆ ಯಾರದೊ ಸೇಡಿಗೆ ಇನ್ನಾರದೊ ಜೀವನ ಸರ್ವನಾಶವಾಗುವುದನ್ನು ಮನೋಜ್ಞವಾಗಿ ಪ್ರತಿನಿಧಿಸುತ್ತದೆ. ಮಲ್ಲಿಗೆ-ಶಂಕ್ರು ಬಾಲ್ಯ ಸ್ನೇಹಿತರು ಯವ್ವನಕ್ಕೆ ಅಡಿಯಿರಿಸುತ್ತಿದ್ದಂತೆ ಸ್ನೇಹ ಪ್ರೇಮವಾಗಿ, ಎರಡು ಕುಟುಂಬಗಳ ಸಮ್ಮತಿಯಲ್ಲೆ ನಿಶ್ಚಯಕಾರಣ ನಡೆಯುವಾಗ, ಊರ ಗೌಡ ಹಣಮಂತ ಕರಿಬಸಪ್ಪನನ್ನು ಕರೆ ಕಳಿಸಿ, ತಾನು ವಿವಾಹವಾಗುವ ಅಭಿಲಾಷೆ ವ್ಯಕ್ತಪಡಿಸಿ ನಿಶ್ಚಯ ಕಾರ್ಯ ನಿಲ್ಲಿಸುತ್ತಾನೆ. ಕರಿಬಸಪ್ಪ ಬಡವನಾದ್ದರಿಂದ ವಿವಾಹದ ಎಲ್ಲ ಖರ್ಚು ತಾನೇ ವಹಿಸಿಕೊಳ್ಳುವದಾಗಿ ಹೇಳಿ ಮಲ್ಲಿಗೆಯನ್ನು ಕರೆದೊಯ್ಯುತ್ತಾನೆ, ಹಣಮಂತ ಗೌಡನ ಇಟ್ಟುಕೊಂಡವಳಾದ ರಾಮಿಯ ಸಂಚಿನಂತೆ ಮಲ್ಲಿಗೆಯ ವಿವಾಹ ಮುರಿಯುತ್ತದೆ. ಆ ಸಂಚಿಗೆ ಕಾರಣ ಕರಿಬಸಪ್ಪನ ಹೆಂಡತಿ ಸಂಗಮ್ಮ 'ರಾಮಿ ಹಣಮಪ್ಪನ ಹೆಂಡತಿಯನ್ನು ತವರು ಮನೆಗೆ ಓಡಿಸಿದಳು. ಈ ಪಾಪ ಅವಳಿಗೆ ತಗುಲದೇ ಬಿಡ್ತದೇನು?' ಎಂದ ಮಾತು ರಾಮಿಗೆ ಪಾಪ ತಗುಲುವುದು ಒತ್ತಟ್ಟಿಗಿರಲಿ ಪಾಪವರಿಯದ ನಿಷ್ಕಲ್ಮಶ ಮನಸ್ಸಿನ ಮಲ್ಲಿಗೆಗೆ ಈ ಮಾತಿನಿಂದ ಹಾನಿಯಾದದ್ದು ನಿಜ.

ಮಲ್ಲಿಗೆಯನ್ನು ಎರಡು ದಿನ ತನ್ನ ಮನೆಯಲ್ಲಿರಿಸಿಕೊಂಡ ಗೌಡ ಅವಳು ಶಂಕ್ರೂನಿಂದ ಶೀಲಗೆಟ್ಟಿರುವುದರಿಂದ ತಾನೊಲ್ಲೆನೆಂದು ಹೇಳಿ ಕಳಿಸಿಕೊಡುತ್ತಾನೆ. ಮಲ್ಲಿಗೆ ನಲುಗಿ ಹೋಗುತ್ತಾಳೆ. ಮಲ್ಲಿಗೆಯೊಂದಿಗೆ ತನ್ನ ವಿವಾಹ ಮುರಿದು ಹೋದಾಗ ಮನಸ್ಸಿಗೆ ಸ್ಥಿಮಿತ ತಂದುಕೊಳ್ಳಲು ಊರು ಬಿಟ್ಟು ಹೋಗಿದ್ದ ಶಂಕ್ರು ಮರಳಿ ಬಂದು ಮಲ್ಲಿಗೆಯನ್ನು ವಿವಾಹವಾಗಲು ನಿಶ್ಚಯಿಸುತ್ತಾನೆ. ಮಲ್ಲಿಗೆಯೂ ಒಪ್ಪುತ್ತಾಳೆ. ಆದರೆ ಕಾರುಣ್ಣಿವೆಯ ಕರಿ ಹರಿಯಬೇಕಿದ್ದ ಎತ್ತು ಮಲ್ಲಿಗೆಯನ್ನಿರಿದು ಕೊಲ್ಲುತ್ತದೆ. ಮಲ್ಲಿಗೆಯ ಬದುಕು ದುರಂತದಲ್ಲಿ ಕೊನೆಗೊಳ್ಳುತ್ತದೆ. ಹುಣ್ಣಿಮೆಯಂದು ತೋರಣ ಹರಿಯದ್ದು, ಏನು ಅನಾಹುತಕ್ಕೆ ಕಾರಣವಾಗುತ್ತದೋ ಎಂದು ಜನ ಮಾತಾಡಿಕೊಳ್ಳತ್ತಿದ್ದರೆ ತನ್ನ ಮತ್ತು ಮಲ್ಲಿಗೆಯ ಬದುಕನ್ನು ನಾಶಗೈದುದಕ್ಕಿಂತ ಬೇರೆ ಅನಾಹುತ ಎಂಥದು. ಊರ ತೋರಣ ಹರಿಯದಿದ್ದರೂ ತಮ್ಮ ಬದುಕಿನ ತೋರಣ ಹರಿಯಿತೆಂದುಕೊಳ್ಳುತ್ತಾನೆ ಶಂಕ್ರು. ಈ ವಾಕ್ಯ ಅವರ ಬದುಕಿನ ದುರಂತಕ್ಕೆ ಸಂಕೇತವಾಗುತ್ತದೆ. ಸಂಗಮ್ಮನ ಮೇಲಿನ ಸೇಡನ್ನು ಅವಳ ಮಗಳು ಮಲ್ಲಿಗೆಯ ಮೇಲೆ ತೀರಿಸಿಕೊಳ್ಳುತ್ತಾಳೆ ರಾಮಿ. ಸೇಡು ಹೆಣ್ಣಿನದೇ ಆಗಲಿ, ಗಂಡಿನದೇ ಆಗಲಿ ಅದರ ಝಳಕ್ಕೆ ಉರಿದು ಹೋಗುವುದು ಮಹಿಳೆಯ ಬದುಕೆ ಎಂಬುದನ್ನು ಶಾಂತರಸರು ತುಂಬ ಚನ್ನಾಗಿ ನಿರೂಪಿಸಿದ್ದಾರೆ. ಆದರೆ ಇದೆ ಕಥೆಯನ್ನು ಸುಖಾಂತವಾಗಿಸುವಲ್ಲಿ ಹೆಣ್ಣಿನ ಶೀಲ ಚಾರಿತ್ರ್ಯದ ಪ್ರಶ್ನೆ ಅವರನ್ನು ಕಾಡಿದೆಯೆ? ಅಪವಾದಕ್ಕೊಳಗಾದವಳನ್ನು ವಿವಾಹ ಸಂಸ್ಥೆಗೆ ಸೇರಿಸಲು ಹಿಂಜರಿದರೆ ಎಂಬ ಪ್ರಶ್ನೆ ಕಾಡುತ್ತದೆ.

ಸಂಘರ್ಷದ ಪರಿಣಾಮ :

ಶಾಂತರಸರ 'ನಾಯಿ ಮತ್ತು ಪಿಂಚಣಿ' ಕಥೆ ಮನುಷ್ಯನಿಗಿಂತ ಪ್ರಾಣಿ ನಿಯತ್ತಿನದು. ಮನುಷ್ಯ ಸ್ವಾರ್ಥ ಅವರನ್ನು ಯಾವ ಮಟ್ಟಕ್ಕೆ ಬೇಕಾದರೂ ಕೊಂಡೊಯ್ಯುತ್ತದೆ. ಆದರೆ ನಾಯಿ ಯಾವುದೇ ಕಾರಣಕ್ಕು ತನ್ನನ್ನು ನಂಬಿದವರಿಗೆ ದ್ರೋಹ ಬಗೆಯದು, ಅದರಲ್ಲೂ ಒಂಟಿ ಮಹಿಳೆ ಕಾಮುಕ ಗಂಡಸರ ಕ್ರೂರ ನಡತೆಯಿಂದ ರಕ್ಷಣೆ ಪಡೆಯಲು ಇಂಥ ಪ್ರಾಣಿಗಳು ಸಹಾಯಕ ಎಂಬುದನ್ನು ಕಥೆ ಪ್ರತಿನಿಧಿಸುತ್ತದೆ.

ಹೈದರಾಬಾದ ಕರ್ನಾಟಕದಲ್ಲಿ ನಡೆದ ರಜಾಕಾರ ಹಾವಳಿಯ ಸಂದರ್ಭದಲ್ಲಿ ಅನೇಕರು ರಜಾಕಾರರ ವಿರುದ್ಧ ಸೆಣಸಲು ಊರು ತೊರೆದು ಭೂಗತರಾಗಿ ಶಿಬಿರಗಳಲ್ಲಿ ವಾಸಿಸುತ್ತಿದ್ದರು. ರಜಾಕಾರರ ಬಲ ಅಡಗಿಸಲು ಟಪ್ಪಾಖಾನಿ ಸುಡುವುದು, ತಸೀಲ್ ಕಛೇರಿಗೆ ಬೆಂಕಿ ಇಡುವುದು, ರಜಾಕಾರರ ಶಿಬಿರದ ಮೇಲೆ ಬಾಂಬ ಒಗೆಯುವುದು, ಸರಕಾರಿ ಕಟ್ಟಡಗಳ ಮೇಲೆ ತ್ರಿವರ್ಣ ಧ್ವಜ ಹಾರಿಸುವುದು ಹೋರಾಟಗಾರರು ಮಾಡುತ್ತಿದ್ದರು, ಈರವ್ವನ ಗಂಡ ಸಂಗಪ್ಪನೂ ಇಂಥ ಕೆಲಸಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಒಮ್ಮೆ ಟಪ್ಪಾಖಾನಿಗೆ ಬೆಂಕಿ ಹಚ್ಚಲು ಹೋಗಿ ಪೋಲಿಸರ ಗುಂಡಿಗೆ ಆಹುತಿಯಾಗುತ್ತಾನೆ. ಮೈದುನ ನಿಂಗಣ್ಣ ರಜಾಕಾರರ ಹೊಡೆತದಿಂದ ಹಾಸಿಗೆ ಹಿಡಿದವನು ಹನ್ನೊಂದು ವರ್ಷ ನರಳಿ ನರಳಿ ಸಾಯುತ್ತಾನೆ. ಈರವ್ವ ಒಂಟಿಯಾಗುತ್ತಾಳೆ.

ಸ್ವಾತಂತ್ರ್ಯ ದೊರೆತು ಊರಿಗೆ ಮರಳಿದಾಗ ಈರವ್ವನಿಗೆ ಪರಿಸ್ಥಿತಿ ಮೊದಲಿಗಿಂತ ಕಷ್ಟದ್ದಾಗಿ ತೋರುತ್ತದೆ. ರಜಾಕಾರ ಹಾವಳಿಯಲ್ಲಿ ಒಬ್ಬ ಮೌಲಾನಾಯ್ಕ ಈರವ್ವನ ಮೇಲೆ ಕೆಟ್ಟ ದೃಷ್ಟಿ ಹಾಕಿದರೆ ಈಗ ಅಂಥವರ ಸಂಖ್ಯೆ ಹೆಚ್ಚಿತ್ತು. ರಂಗಣ್ಣ ಮೌಲಾನಾಯ್ಕ ಪಿಂಜಾರ ಹುಸೇನಿ ಎಲ್ಲ ಕೆಣಕಿ ಒಂದು ಕೈ

ನೊಡೋಣವೆನ್ನುವವರೆ, ಈಗ ಅವಳ ಕಣ್ಣಿಗೆ ಎಲ್ಲರೂ ರಜಾಕಾರರಂತೆಯೆ ಕಾಣತೊಡಗಿದ್ದರು. ಶಿಬಿರದಿಂದ ಮರಳಿದ ಮೇಲೆ ಹೋರಾಟಗಾರನ ಹೆಂಡತಿ ಎಂದು ತನಗೆ ಗೌರವ ಸಿಗುತ್ತದೆಂದು ಭಾವಿಸಿದ್ದವಳಿಗೆ ಎಲ್ಲಾ ಉಲ್ಟಾ ಆದಂತೆ ತೋರುತ್ತದೆ. ಇದಕ್ಕೆ ಕಾರಣ ರಂಗಣ್ಣ ಅವಳ ಬಗ್ಗೆ 'ಸಂಗಪ್ಪ ಸತ್ತ ನಂತರ ಈರವ್ವ ಎಲ್ಲೊ ಆದವಾನಿ ಸಮೀಪದ ಊರಲ್ಲಿ ಯಾರ ಜೊತೆಗೋ ಇದ್ದಾಳಂತೆ. ನೀತಿಗೆಟ್ಟವ್ದಳೆಂದು ಅನ್ನುತ್ತಿದ್ದರು'[೧೨೨] ಎಂದು ಊರಲ್ಲಿ ಹರಡಿದ ಸುದ್ದಿ. 'ಈ ದೇಶದಲ್ಲಿ ಒಂಟಿ ಹೆಣ್ಣು ದಿಕ್ಕಿಲ್ಲದವಳು ಇರಬಾರದು. ಇದ್ದರೂ ಅವಳು ಸೂಳೆಯಾಗಿರಬೇಕು. ಇಲ್ಲದಿದ್ದರೆ ಅವರು ಸೂಳೆಯನ್ನಾಗಿ ಮಾಡುತ್ತಾರೆ. ಬದುಕು ಬೇಡವಾದರೆ ಸಾಯಬೇಕು'[೧೨೩] ಎಂದು ಆಲೋಚಿಸ ಬೇಕಾದರೆ ಈರವ್ವ ಅವುಭವಿಸಿದ ಕಿರುಕುಳದ ಪರಿಚಯವಾಗುತ್ತದೆ.

ಈರವ್ವ ಊರ ಕೆಳಜಾತಿಯ ಜನರ ಕಷ್ಟಕ್ಕೆ ಸಹಾಯವಾಗುತ್ತ ಅವರ ಪ್ರೀತಿ ವಿಶ್ವಾಸ ಗಳಿಸುವುದಲ್ಲದೆ ತನ್ನ ಒಂಟಿ ಬದುಕಿಗೊಂದು ಅರ್ಥ ಕಂಡುಕೊಳ್ಳುತ್ತಾಳೆ. ನಾಯಿ ಮಲ್ಲಣ್ಣ ಅವಳ ಸಂಗಾತಿಯಾಗುತ್ತದೆ. ಮೇಲು ವರ್ಗದ ನಿರ್ಬಂಧಿತ ಬದುಕಿಗಿಂತ ಕೆಳವರ್ಗದ ಸಹಜ ಬದುಕು ಒಳ್ಳೆಯದೆನಿಸುತ್ತದೆ ಈರವ್ವಳಿಗೆ. ಸ್ವಾರ್ಥಿ ಕಾಮುಕ ಪುರುಷರ ನಡುವೆಯೆ ಕಾಳಪ್ಪನಂಥ ಹೆಂಗರುಳ ಪುರುಷನಿದ್ದು ಈರವ್ವಳಿಗೆ ಆಸರೆಯಾಗುತ್ತಾನೆ. ಅವಳಿಗೆ ಕಿರುಕುಳ ಕೊಡುತ್ತಿದ್ದವರಿಗೆ ಎದುರಾಗುವ ಮೂಲಕ ಅವಳಲ್ಲೊಂದು ವಿಶ್ವಾಸ ಮೂಡಲು ಕಾರಣವಾಗುತ್ತಾನೆ. ಆ ವಿಶ್ವಾಸವನ್ನು ಕೊನೆವರೆಗೆ ಉಳಿಸಿಕೊಳ್ಳುತ್ತಾನೆ, ಹಾಗಾಗಿ ಈರವ್ವ ಗೌರವದಿಂದ ಬಾಳಲು ಸಾಧ್ಯವಾಗುತ್ತದೆ.

ರಂಗಪ್ಪ ರಜಾಕಾರರನ್ನು ಎದುರಿಸಿ ಹೋರಾಟವನ್ನೇನೂ ಮಾಡದೇ ಹೋದರೂ ಊರು ಬಿಟ್ಟು ಹೋದದ್ದೊಂದು ನೆವವನ್ನು ಹೋರಾಟಗಾರನೆಂದು ಗುರುತಿಸಿಕೊಳ್ಳಲು ಬಳಸಿಕೊಳ್ಳುತ್ತಾನೆ. ನಿಜವಾಗಿ ಹೋರಾಡಿ ಸತ್ತ ಸಂಗಪ್ಪನನ್ನಾಗಲಿ, ಈರವ್ವನನ್ನಾಗಲಿ ಜನ ಆಧರಿಸದಂತೆ ಕಥೆ ಕಟ್ಟುತ್ತಾನೆ. ಈರವ್ವನನ್ನು ವಶವಡಿಸಿಕೊಳ್ಳುವ ಸಂಚು ಹೂಡುತ್ತಾನೆ, ಈರವ್ವಳ ದಿಟ್ಟತನ ಹಾಗೂ ಕಾಳಪ್ಪನ ಭಯದಿಂದ ದಾರಿ ಕಾಣದೆ ಸುಮ್ಮನಾಗುತ್ತಾನೆ. ಈರವ್ವ ಪಿಂಚಣಿ ಪಡೆಯಲು ಒಪ್ಪದೆ ಇದ್ದಾಗ ಅವಳ ಹೆಸರಲ್ಲಿ ತನಗೇ ದುಡ್ಡು ಬರುವಂತೆ ಮಾಡಿಕೊಳ್ಳುತ್ತಾನೆ. ಈರವ್ವ ಕೊನೆಯವರೆಗೆ ಸ್ವಂತ ದುಡಿಮೆಯಲ್ಲೇ ಬದುಕುತ್ತಾಳೆ. ಯಾರ ಹಂಗಿಗೂ ಒಳಗಾಗುವುದಿಲ್ಲ. ಹೋರಾಟಗಾರನ ಹೆಂಡತಿ ಎಂದು ಸರಕಾರದಿಂದ ಪಿಂಚಣಿಯನ್ನು ಪಡೆಯುವುದಿಲ್ಲ, ವಿಪರೀತ ಪರಿಸ್ಥಿತಿಗಳಲ್ಲೂ ವಿಚಲಿತಳಾಗದೆ ದಿಟ್ಟಳಾಗಿ ಬದುಕುತ್ತಾಳೆ. ಒಮ್ಮೆ ಮೌಲಾನಾಯ್ಕ ರಂಗಪ್ಪನಿಗೆ 'ಆವಾಗ ಈಕಿನ್ನ ನಾನು ಏನೂ ಮಾಡಾದಾಗ್ಲಿಲ್ಲ, ತಪ್ಪಿಸಿಗೆಂಡ ಓಡಿಹೋದ್ಲು ರಂಡೆ, ಈಗ ನೀನು ಬೇಕಾದ್ದು ಮಾಡಿ ದಕ್ಕಿಸೇಬೌದಲ್ಲ, ಈ ಮೂಳ್ ರಂಡೆಗೆ ಏನ್ ಮಾಡಿದ್ರೂ ಯಾರ್ ಕೇಳವ್ರ ಅದಾರ, ಒಂದು ಕೈ ನೋಡಲ್ಲ'[೧೨೪] ಎಂದು ಹೇಳುವುದು ಸ್ವಾತಂತ್ರ್ಯ ನಂತರದ ರಾಜಕೀಯ ಅಧಿಕಾರವನ್ನು ನಾಯಕರೆನಿಸಿಕೊಂಡ ಕೆಲವರು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಪ್ರತಿನಿಧಿಸುತ್ತದೆ.

ಹೆಣ್ಣು ಎಂದರೆ ಲೈಂಗಿಕವಾಗಿ ನೋಡುವ ವ್ಯವಸ್ಥೆ, ಯಾರೂ ಇಲ್ಲದ ಹೆಣ್ಣನ್ನು ಯಾರೆಂದರವರ ಸ್ವತ್ತು ಬಯಸಿದವರಲ್ಲಿಗೆ ಅವಳು ಹೋಗಬೇಕು. ಹೋಗದಿದ್ದರೆ ಹೋಗುವಂತೆ ಮಾಡಲಾಗುತ್ತದೆ. ಒಟ್ಟಿನಲ್ಲಿ ಒಂಟಿ ಹೆಣ್ಣಿಗೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಬದುಕುವ ಹಕ್ಕಿಲ್ಲ ಎಂಬಂತೆಯೆ ನಡೆದು ಕೊಳ್ಳಲಾಗುತ್ತದೆ.

ಹೆಣ್ಣು ಬದುಕಿರುವವರೆಗೂ ಹೋರಾಡಬೇಕಾಗುತ್ತದೆ. ಹಾಗೆ ಈರವ್ವಳ ಬದುಕು ನಿರಂತರ ಹೋರಾಟದ್ದಾಗುತ್ತದೆ. ಅವಳು ಸತ್ತ ಕ್ಷಣ ರಂಗಪ್ಪ ಮಹಿಳಾ ಮಂಡಳಿಯ ಬೋರ್ಡ ತೂಗು ಹಾಕಿ ಅವಳ ಮನೆಯನ್ನು ವಶಪಡಿಸಿಕೊಳ್ಳುತ್ತಾನೆ. ಎಮ್ಮೆಲ್ಲೆಯಾದ ಮೇಲೆ ಬಸವಿ ಮಾರಕ್ಕನಿಗೆ ವೃದ್ಧಾಪ್ಯವೇತನ ಕೊಡಿಸುವ ಆಮಿಷ ಒಡ್ಡಿ ಅವಳಲ್ಲಿಯ ಹಣ ಬಂಗಾರ ದೋಚುತ್ತಾನೆ. ಹೀಗೆ ಪುಕ್ಕಟೆ ಸಿಗುವ ಹೆಣ್ಣು, ಆಸ್ತಿಯನ್ನು ವಶಪಡಿಸಿಕೊಳ್ಳಲು ಪುರುಷ ಹೊಂಚುವುದನ್ನು ಕಥೆ ಶಕ್ತವಾಗಿ ಕಥಿಸಿದೆ. ಆಸ್ತಿ ಇದ್ದರೂ ಇಲ್ಲದಿದ್ದರೂ ಹೆಣ್ಣಿನ ಶೋಷಣೆ ನಡೆಯುತ್ತಲೇ ಇರುತ್ತದೆ.

ಶಾಂತರಸರ 'ಬಡೆಸಾಬು ಪುರಾಣ' ಕಥೆಯೂ ರಜಾಕಾರ ಹಾವಳಿಯ ಸಂದರ್ಭದಲ್ಲಿ ತಮ್ಮ ಯಾವ ತಪ್ಪೂ ಇಲ್ಲದೆ ರಜಾಕಾರರ ದೂರ್ತತೆಗೆ. ಅತ್ಯಾಚಾರಕ್ಕೆ ಅನೇಕ ಮಹಿಳೆಯರ ಬದುಕು ನಾಶವಾಗುವುದನ್ನು ಚಿತ್ರಿಸುತ್ತದೆ. ಚಿಲ್ಲರೆ ವ್ಯಾಪಾರಿ ಬಡೆಸಾಬು ವಿಧವೆ ಬುಡ್ಡಮ್ಮನ ಸೌಂದರ್ಯಕ್ಕೆ ಮರುಳಾಗಿ ಅವಳನ್ನು ಈಗಾಗಲೆ ಇಬಿಸಿಕೊಂಡಿದ್ದ. ಸಾಬಣ್ಣನಿಂದ ಬಿಡಿಸಿ ಬಿಂದಪ್ಪನ ಮಧ್ಯಸ್ತಿಕೆಯಲ್ಲಿ ತನ್ನವಳಾಗಿಸಿಕೊಳ್ಳುತ್ತಾನೆ. ಬುಡ್ಡಮ್ಮನ ಷರತ್ತಿನಂತೆ ಖಾಯಂಆಗಿ ಅದೇ ಊರಲ್ಲಿ ಉಳಿಯುತ್ತಾನೆ. ಕಿರಾಣಿ ವ್ಯಾಪಾರದೊಂದಿಗೆ ಸೆರೆ ಹಾಗೂ ಮಾಂಸದ ವ್ಯಾಪಾರವನ್ನು ಆರಂಭಮಾಡಿ ಹಣವಂತನಾದೊಡನೆ ಕರ್‍ಯ, ದಸ್ತಗೀರ ಮೊದಲಾದವರಿಗೆ ಸಹಾಯ ಮಾಡುವ ನೆಪದಲ್ಲಿ ಅವರ ಮೇಲೆ ಹತೋಟಿ ಸಾಧಿಸುತ್ತಾನೆ. ಇವರ ಮುಖಾಂತರ ತನಗೆ ಬೇಡಾದವರನ್ನು ಬಗ್ಗು ಬಡಿಯ ತೊಡಗುತ್ತಾನೆ. ಕರ್‍ಯನ ತಂಗಿ ನಿಂಗಿಯೊಂದಿಗೆ ಸಂಭಂದವಿರಿಸಿಕೊಂಡು ಬುಡ್ಡಮ್ಮನ ಕೋಪಕ್ಕೆ ಕಾರಣನಾಗುತ್ತಾನೆ. ತನ್ನ ವಿರುದ್ಧ ಮಾತನಾಡಿದವರನ್ನು ಪರೋಕ್ಷವಾಗಿ ಪೀಡಿಸುತ್ತಾನೆ.

ಊರಲ್ಲಿಯ ಹೆಂಗಸರ ಸ್ಥಿತಿಯಂತೂ ಶೋಚನೀಯವಾಗುತ್ತದೆ. ಅದರಲ್ಲೂ ಬಡೆಸಾಬು ರಜಕಾರರಾದ ಮೇಲಂತೂ ಸಶಸ್ತ್ರ ದೌರ್ಜನ್ಯವೇ ಆರಂಭವಾಗುತ್ತದೆ. ಅವನ ಚೇಲಾಗಳೂ ಊರ ಹೆಣ್ಣುಮಕ್ಕಳನ್ನು ಕೆಣಕಲು ಆರಂಭಿಸುತ್ತಾರೆ. ವಿರೂಪಾಕ್ಷಿಯ ತಂಗಿ ಬಾಲ ವಿಧವೆ ರಾಮವ್ವನಿಗೆ ಹಳ್ಳ ಹೊಡೆಯುತ್ತಾರೆ. ವಿಚಾರಿಸಲು ಬಂದವರನ್ನೇ ದಬಾಯಿಸಿ ಕಳಿಸುತ್ತಾನೆ. ಊರ ಪ್ರಮುಖರು ವಿಚಾರಿಸಿದರೆ 'ಅವುನೇನ್ ಆಕೇನ ಕೆಡಸಲಿಲ್ಲ, ಮೊಲೆ ಹಿಚಿಕ್ಯಾನ ಅಷ್ಟೇ, ಯಾಕಳ್ತೀರಿ ಅದೂ ಮಾಡಿದ್ರೆ ಏನ್ ಮಾಡಂತಿದ್ರಿ? ಎಂದಾಗ ನಮ್ಮನ್ನ ಏನರೆ ಮಾಡ್ರಿ, ಇದ್ದದ್ದೆಲ್ಲ ಕಸಗಳ್ರಿ, ಆದ್ರೆ ನಮ್ಮ ಹೆಂಗಸರ ಮಾನಾ ಕಳಿಬ್ಯಾಡ್ರಿ, ನೀವ್ ಹೇಳದಂಗ ಕೇಳ್ತೀವಿ' ಎನ್ನುವ ಸಂಗಯ್ಯನ ಮಾತು ಮಾನವೆಂಬುದು ಹೆಂಗಸಿಗೆ ಅವಳ ಲೈಂಗಿಕತೆಗೆ ಮಾತ್ರ ಮೀಸಲಾದದ್ದು, ಆ ಮಾನವನ್ನಳಿಸಲು ತಾವು ಏನು ಬೇಕಾದರೂ ಮಾಡಲು ಸಿದ್ಧ ಎಂಬ ದೋರಣೆಯೆ ಹೆಣ್ಣಿನ ಮಾನಹರಣದ ಮೂಲಕವೇ ಸೇಡು ತೀರಿಸಿಕೊಳ್ಳ ಬೇಕೆಂಬ ಭಾವನೆಯನ್ನು ಗಂಡಿನಲ್ಲಿ ಪ್ರಚೋದಿಸುತ್ತದೆ. ಯಾರೋ ಮಾಡುವ ತಪ್ಪಿಗೆ ಹೆಣ್ಣು ಶಿಕ್ಷೆ ಅನುಭವಿಸಬೇಕಾಗುತ್ತದೆ. ಎಲ್ಲಿಯವರೆಗೆ ಹೆಣ್ಣು ಗಂಡಿನ ಶೀಲದ ಪ್ರಶ್ನೆ ಸಮಾನ ನೆಲೆಯದಾಗದೋ ಅಲ್ಲಿಯೆವರೆಗೆ ಹೆಣ್ಣು ಲೈಂಗಿಕ ಆತ್ಯಾಚಾರಕ್ಕೊಳಗಾಗುವುದು ತಪ್ಪುವುದಿಲ್ಲ.

ಹೀಗೆ ಗಂಡಿನ ಲೈಂಗಿಕ ದುರ್ನಡತೆಗೆ ರಾಮವ್ವ ಉರುಲುಹಾಕಿ ಕೊಂಡು ಸತ್ತರೆ, ಅಗಸರ ನಾಗಲಿಂಗಿ ಕಟ್ಟಿ ಹಾಕಲ್ಪಟ್ಟ ಗಂಡನ ಎದುರಲ್ಲೆ ರಜಾಕರ ದೂರ್ತರಿಂದ ಅತ್ಯಾಚಾರಕ್ಕೊಳಗಾಗುತ್ತಾಳೆ. ತಮ್ಮ ಹೆಣ್ಣು

ಮಕ್ಕಳ ಮರ್ಯಾದೆ ಉಳಿಸಿ ಕೊಳ್ಳಲು ಸಾಧ್ಯವಾಗದ ಸ್ಥಿತಿಗೆ ಕುಬೇರ ನಾರಾಯಣ ಉಪ್ಪಾರ ಜಂಗಲೆಪ್ಪ ಊರಿಂದ ಮಾಯವಾಗುತ್ತಾರೆ. ನಾರಾಯಣನ ತಾಯಿ, ಜಂಗಲೆಪ್ಪನ ಅಕ್ಕನನ್ನ ಎಳೆತಂದ ರಜಾಕಾರರು ಅವರನ್ನು ಹೊಡೆದು, ಬಡಿದು ಮಾಡಬಾರದ್ದನ್ನು ಮಾಡುತ್ತಾರೆ. ಆದರೂ ಸಮಾಧಾನವಾಗದೆ ಕೊನೆಗೆ ಅವರ ಯೋನಿಗಳಲ್ಲಿ ಕಾರಪುಡಿಯನ್ನು ತುಂಬುತ್ತಾರೆ. ಇಡೀ ರಾತ್ರಿ ಅವರು ಗೋಳಾಡಿದರೂ ಯಾರೂ ಹತ್ತಿರ ಬರವುದಿಲ್ಲ. ಗಂಡಿನ ವಿಕೃತ ಮನಸ್ಥಿತಿಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ.

ಮನೆತನಸ್ಥರ ಸ್ಥಿತಿ ಇದಾದರೆ ಎಲ್ಲ ಬಿಟ್ಟ ಬುಡ್ಡಮ್ಮ, ನಿಂಗಿಯರು ಮಾತ್ರ ಇಂಥ ದೂರ್ತರ ಸಹವಾಸದಲ್ಲಿ ಸುಖವಾಗಿದ್ದರು. ಇಂಥ ವಿಪರೀತ ಸಂದರ್ಭಗಳಲ್ಲಿ ಮಹಿಳೆಯನ್ನು ಉದಾರವಾಗಿ ನೋಡುವ ಮನೋಭಾವವಿದ್ದಿದ್ದರೆ ಈ ಅಮಾಯಕ ಹೆಣ್ಣು ಮಕ್ಕಳು ಸಾಯಬೇಕಾಗುತ್ತಿರಲಿಲ್ಲ. ಇಂದಿಗೂ ಇಂಥದ್ದೇ ಸ್ಥಿತಿ ಸಮಾಜದಲ್ಲಿ ಮುಂದುವರಿದಿದೆ. ಹೈದರಾಬಾದ ಕರ್ನಾಟಕ ಪ್ರದೇಶ ಭಾರತ ಒಕ್ಕೂಟದಲ್ಲಿ ವಿಲೀನವಾದ ಬಳಿಕ ಬಡೆಸಾಬನಿಗೆ ಶಿಕ್ಷಿಸುವ ಪೋಲಿಸಗೌಡ ಬುಡ್ಡಮ್ಮ ನಿಂಗಿಯರನ್ನು ತನ್ನ ಮನೆಗೆ ಕರೆದೊಯ್ಯುತ್ತ ತನ್ನ ಸಾಚಾತನದ ಬಗ್ಗೆ ಕೇಳಿದಾಗ 'ತಮ್ಮನ ಹೆಂಡತಿಯನ್ನು ಬಿಡದವನು ಇವರನ್ನೇನು ಬಿಡುತ್ತಿ' ಎನ್ನುವ ಎಂಕಟನ ಧ್ವನಿಪೂರ್ಣವಾಕ್ಯ ಗೌಡನ ಲೈಂಗಿಕ ಜೀವನಕ್ಕೆ ಕನ್ನಡಿ ಹಿಡಿಯುತ್ತದೆ.

ಲೋಲುಪತೆಗೆ ಬಲಿ :

ಮಹಿಳೆಯರನ್ನು ಸಂಸ್ಕೃತಿ ರಕ್ಷಕರನ್ನಾಗಿ ಪರಿಭಾವಿಸಿರುವುದರಿಂದ, ಮಹಿಳೆಯ ಉಡುಗೆ, ತೊಡುಗೆ, ವಿವಾಹ, ವೈದವ್ಯ, ಗೃಹಿಣಿತ್ವ, ತಾಯ್ತನಗಳೆಲ್ಲ ಸಂಸ್ಕೃತಿ ನಿರ್ವಚಿಸಿದ ವಿಧಾನದಲ್ಲೇ ಸಾಗಬೇಕಾಗುತ್ತದೆ. ಪಿತೃವ್ಯವಸ್ಥೆಯನ್ನು ಎಲ್ಲೆಡೆ ಬಲಪಡಿಸುವ ನಿಟ್ಟಿನಲ್ಲಿ ಸಾಮಾಜಿಕ ನಿಯಮಗಳು ರೂಪುಗೊಂಡಿವೆ. ಹಾಗಾಗಿ ಅನ್ಯ ಜಾತಿ, ಧರ್ಮ, ವಿವಾಹಗಳು ನಿಷೇದಿಸಲ್ಪಟ್ಟಿವೆ. ಗಂಡು ಹೆಣ್ಣು ಈರ್ವರಿಗೂ ಈ ನಿಷೇಧ ಅನ್ವಯಿಸಿದರು ಹೆಣ್ಣಿಗೆ ಹೆಚ್ಚು ಅನ್ವಯಿಸುತ್ತದೆ. ಹೆಣ್ಣು ಅನ್ಯ ಜಾತಿಯವರನ್ನು ಪ್ರೀತಿಸಿದರೂ ಸಾಮಾಜಿಕ ಸಮ್ಮತಿ ದೊರೆಯದೇ ಸಜಾತಿಯ ಯುವಕನನ್ನು ವಿವಾಹವಾಗಬೇಕಾಗುತ್ತದೆ. ದುರ್ಗುಣಗಳಿಂದಾಗಿ ಯುವಕ ಕೊಲೆಯಾದಾಗ ವೈಧವ್ಯ ಹೆಣ್ಣಿಗೆ ಅನಿವಾರ್ಯವಾಗುತ್ತದೆ ಎಂಬುದನ್ನು ಹತಗುಂದಿಯವರ 'ಕಾಳ ಬೆಳದಿಂಗಳ ಸಿರಿ' ಕಥೆಯು ನಿರೂಪಿಸುತ್ತದೆ.

ಮಹಾದೇವಿಯ ಬದುಕು ವಿರೂಪಾಕ್ಷಗೌಡನ ಕೊಲೆಯಿಂದ ವೈಧವ್ಯದ ಗೋಳಿಗೆ ದೂಡಲ್ಪಡುವ ವಸ್ತುವಿನದು. ಪಾಳೆಗಾರಿ ವ್ಯವಸ್ಥೆಯ ಪರಿಣಾಮದಿಂದಾಗಿ ಸ್ವೇಚ್ಛಾ ಬದುಕನ್ನು ಅಪ್ಪಿಕೊಂಡ ವಿರೂಪಾಕ್ಷಗೌಡ ಮದುವೆಯಾದ ಎರಡೇ ವರುಷಗಳಲ್ಲಿ ಕಂಡ ಹೆಂಗಸರ ಬೆನ್ನು ಬಿದ್ದು, ಯಾರ ಬುದ್ಧಿವಾದಕ್ಕೂ ಮಣಿಯದೆ ಊರವರ ಕೆಂಗಣ್ಣಿಗೆ ಬಲಿಯಾದಾಗ ಅವನ ತಂದೆ ಸಾಹೇಬಗೌಡನಿಗೆ ಬಸಣ್ಣಿ 'ಗೌಡ್ರೆ ಕಾಲಾ ಭಾಳ ನಾಜೂಕಾಗ್ಯಾವ ಊರಾನ ಮಂದಿ ಸಂಗಾಟ ಹಚ್ಗೊಂಡು ಹೊಂದಕೊಂಡು ಹೋಗಲಕ್ಕ ವಿರೂಪಾಕ್ಷಗ ಹೇಳ್ರಿ, ಮನ್ಯಾಗ ಬಂಗಾರದಂತಾ ಹೆಣ್ತಿಗ ಬಿಟ್ಟು ಊರ ಹೆಂಗಸರ ಹಿಂದೆ ಬಿದ್ದು ತಬಾ ಮಾಡ್ಯಾನಂತ ಊರ್ಮಂದಿ ಆಡ್ಕೊಳ್ಳಲಕತ್ತಾರ' ಎಂದು ಎಚ್ಚರಿಸುತ್ತಾನೆ. ತನ್ನ ಯವ್ವನದಲ್ಲಿ ಸಾಹೇಬಗೌಡನೂ ಇಂಥದ್ದೆ ಬದುಕನ್ನು ಬದುಕಿದವನಾದ್ದರಿಂದ ಮಗನಿಗೆ ಹೇಳುವ ನೈತಿಬಲವಿಲ್ಲದೆ ಮಗನನ್ನು ಕಳೆದುಕೊಳ್ಳುತ್ತಾನೆ. ಪುರುಷ ತನ್ನ ಅಪರಾಧದಿಂದ ಕೊಲೆಗೀಡಾದರೂ ಅದರ ವಿಪರೀತ ಪರಿಣಾಮವನ್ನು ಮಹಿಳೆಯೆ ಅನುಭವವಿಸಬೇಕಾಗುತ್ತದೆ.

ಪದವಿ ಶಿಕ್ಷಣ ಪಡೆಯುವಾಗ ಪ್ರಗತಿಪರ ಸಂಘಟನೆಯ ಒಡನಾಟದ ಫಲವಾಗಿ ಮಾದೇವಿ ಅನ್ಯ ಜಾತಿಯ ಯುವಕನನ್ನು ಪ್ರೀತಿಸಿ ಮದುವೆಯಾಗಬೇಕೆಂದಾಗ ಜಾತಿಯ ಕಟ್ಟುಪಾಡಿನ ತಂದೆ ಯಶವಂತರಾಯ ಎರಡೇ ದಿನದಲ್ಲಿ ಸಾವಿರಾರು ಎಕರೆ ಜಮೀನಿನ ಒಡೆಯ, ಸ್ವಜಾತಿಯವನೆಂದು ವಿರೂಪಾಕ್ಷಗೌಡನೊಂದಿಗೆ ಮದುವೆ ಮಾಡುತ್ತಾನೆ. ಮನೆತನದ ಗೌರವ ಸ್ವಜಾತಿ ರಕ್ಷಣೆಗಳು ಮುಖ್ಯವಾಗಿ ಮಾದೇವಿಯ ಬಯಕೆಗೆ ಮನ್ನಣೆ ಇಲ್ಲವಾಗಿ ಹಿರಿಯರ ಇಚ್ಛೆಯೇ ಊರ್ಜಿತವಾಗಿ ಜೀವನ ಪರ್ಯಂತ ವೈಧವ್ಯದ ಪಟ್ಟ ಕಟ್ಟಿಕೊಂಡು ಬದುಕಬೇಕಾಗುತ್ತದೆ.

ಶಾಂತರಸರ 'ಉರಿದ ಬದುಕು' ಕಥೆಯ ನಬೆಮ್ಮ ರಜಾಕಾರರಿಂದ ತಿಪ್ಪಣ್ಣನನ್ನು ರಕಿಸಲು ತನ್ನ ಬದುಕನ್ನೇ ಬಲಿಯಾಗಿಸುತ್ತಾಳೆ. 'ತೋರಣ ಹರಿಯಲಿಲ್ಲ' ಕಥೆಯ ಮಲ್ಲಿಗೆಯ ಬದುಕು ಸೇಡಿಗೆ ಸಂದರೆ, 'ನಾಯಿ ಮತ್ತು ಪಿಂಚಣಿ' ಕಥೆಯ ಈರಮ್ಮನ ಬದುಕು ರಜಾಕಾರರಿಂದಲ್ಲದೆ ರಂಗಪ್ಪನಂಥವರಿಂದಲೂ ಘಾಸಿಗೊಳ್ಳುತ್ತದೆ. 'ಬಡೆಸಾಬು ಪುರಾಣ' ಕಥೆಯ ಹೆಂಗಸರಂತೂ ಧರ್ಮ ಸಂಘರ್ಷದ ದುರಂತಕ್ಕೀಡಾಗುತ್ತಾರೆ. ರಾಜಶೇಖರ ಹತಗುಂದಿಯವರ 'ಕಾಳ ಬೆಳದಿಂಗಳ ಸಿರಿ' ಕಥೆಯ ಮಹಾದೇವಿಯ ಬದುಕು ಗಂಡನ ಲಂಪಟತನದಿಂದ ವೈಧವ್ಯಕ್ಕೆ ದೂಡಲ್ಪಡುತ್ತದೆ. ಹೀಗೆ ಗಂಡಸರ ಮಹತ್ವಾಕಾಂಕ್ಷೆ, ಸೇಡು, ಲಂಪಟತನ ಏನಿದ್ದರೂ ಎಲ್ಲದರ ಪರಿಣಾಮವನ್ನು ಮಹಿಳೆ ಅನುಭವಿಸಬೇಕಾಗುತ್ತದೆ ಎಂಬುದನ್ನು ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯ ಚಿತ್ರಿಸಿದೆ.

೪.೪.೫ ಕಲಾವಿದೆಯ ಬದುಕು

ಮನುಷ್ಯ ಮನಸ್ಸನ್ನು ರಂಜಿಸಲು ಕಲೆ ಅವಶ್ಯ. ಆ ಕಲೆ ಕಲಾವಿಧರಿಂದ ಅಭಿವ್ಯಕ್ತಗೊಳ್ಳುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕಲಾರಂಗವೂ ತಾರತಮ್ಯ ನೀತಿಯಿಂದ ಹೊರತಾದುದಲ್ಲ. ಕಲಾವಿದೆಯೊಬ್ಬಳು ಬಣ್ಣ ಹಚ್ಚಿಕೊಂಡು ರಂಗವೇದಿಕೆಯಲ್ಲಿರುವವರೆಗೆ, ಅವಳನ್ನು ಗುರುತಿಸುವ ಗೌರವಿಸುವ ಜನ, ಅವಳ ವೈಯಕ್ತಿಕ ಬದುಕನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳಲು ಯತ್ನಿಸುವುದೇ ಹೆಚ್ಚು. ತಮ್ಮ ಅಂಕೆಗೆ ಒಳಪಡುವವಳನ್ನು ಹಾಡಿ ಹೊಗಳುವವರು, ಅದಕ್ಕೆ ಹೊರತಾದವಳನ್ನು ನಾನಾ ರೀತಿ ಪೀಡಿಸುವದನ್ನು ಶಾಂತರಸರ 'ನಾಟ್ಯರಾಣಿಯ ಅಂತ್ಯ' ಕಥೆ ಶಕ್ತವಾಗಿ ಪ್ರತಿನಿಧಿಸುತ್ತದೆ.

ಕಲಾವಿದೆ ಸುಂದರಮ್ಮ ಪ್ರತಿಭಾವಂತೆ ಹತ್ತು ಹಲವು ಪಾತ್ರಗಳಲ್ಲಿ ಜನಮೆಚ್ಚುಗೆ ಗಳಿಸಿದವಳು ಪುರುಷ ಜಗತ್ತು ಅವಳ ಕಲೆಯಿಂದ ತೃಪ್ತವಾಗದೆ ಅವಳನ್ನೇ ಲೈಂಗಿಕವಾಗಿ ಬಳಸಿಕೊಳ್ಳಲು ಹಾತೊರಿಯುತ್ತದೆ. ನಾಟಕ ಕಂಪನಿಯ ಮಾಲಿಕರೂ, ಊರ ಶ್ರೀಮಂತರು ಸುಂದರಮ್ಮನ ಮೇಲೆ ಬಲೆ ಬೀಸಲು ಯತ್ನಿಸುತ್ತಾರೆ. ಒಮ್ಮೆ ತಿಳಿಯದೇ ತಪ್ಪು ನಡೆದು ಕಮಲಳನ್ನು ಹೆತ್ತ ಸುಂದರಮ್ಮ ಮುಂದೆ ತುಂಬಾ ಎಚ್ಚರಿಕೆ ವಹಿಸುತ್ತಾಳೆ.

ಸುಂದರಮ್ಮನಿಂದ ತಿರಸ್ಕರಿಸ್ಪಟ್ಟವರು ಬಗೆ ಬಗೆಯಲ್ಲಿ ಅವಳನ್ನು ಪೀಡಿಸುತ್ತಾರೆ. ಅವಳ ಮನೆಯೊಂದು ವೇಶ್ಯಾವಾಟಿಕೆ ಎಂದು ಆರೋಪಿಸಿ ಊರು ಬಿಟ್ಟು ಓಡಿಸಲು ಪ್ರಯತ್ನಿಸುತ್ತಾರೆ. ಆದರೆ ಸುಂದರಮ್ಮನನ್ನು ಕಲಾವಿದೆಯಾಗಿ ಆರಾಧಿಸಿದವರ ಮಾನಸಿಕ ಬೆಂಬಲದಿಂದ ಅವಳು ದೃಢವಾಗಿ ಬದುಕುತ್ತಾಳೆ. ಕಲಾವಿದೆಯರು ಕೇವಲ ಶ್ರೀಮಂತರ ಭೋಗವಸ್ತುವಲ್ಲ ಎಂಬುದನ್ನು ಸಾಧಿಸಿ ತೋರಿಸುತ್ತಾಳೆ. ತಾನು ಶ್ರೀಮಂತಳಲ್ಲವಾದರೂ ಅನೇಕ ಕಲಾವಿದರಿಗೆ ಆಶ್ರಯವಾಗುತ್ತಾಳೆ.

ಸುಂದರಮ್ಮ ಲೈಂಗಿಕ ಬಳಕೆಗೆ ಸಿಗಲಿಲ್ಲವೆಂಬ ಕಾರಣಕ್ಕೆ ದೊಡ್ಡ ಜಾತಿ ದೊಡ್ಡ ಜನರೆನಿಸಿಕೊಂಡವರು ಮನುಷ್ಯ ಬದುಕಿಗಿಂತ ಜಾತಿ ದೊಡ್ಡದೆಂದು ವಾದಿಸಿ ಅವಳ ಶವಸಂಸ್ಕಾರಕ್ಕೆ ಜಾಗವನ್ನು ಕೊಡುವುದಿಲ್ಲ. ಶವಸಂಸ್ಕಾರದ ಖರ್ಚಿಗೆ ಧನ ಸಹಾಯ ಕೇಳಿದರೆ ಸುಂದರಮ್ಮನ ಮನೆಯನ್ನು ಶೋಧಿಸಿ ಅಲ್ಲಿದ್ದ ನಕಲಿ ಆಭರಣಗಳನ್ನು ದೋಚುವ ಕೀಳುತನಕ್ಕಿಳಿಯುತ್ತಾರೆ.

ಪೇಟಿ ಕಾಮಣ್ಣ ಅಂದು ಬರಬೇಕಿದ್ದ ಸುಂದರಮ್ಮನ ಪಿಂಚಣಿ ಹಣವನ್ನು ಉಪಾಯವಾಗಿ ಪಡೆದು ಶವಸಂಸ್ಕಾರವಾಗುವಂತೆ ಮಾಡುತ್ತಾನೆ. ಕಲಾವಿದರೆಲ್ಲಾ ತಮ್ಮಲ್ಲಿದ್ದ ಚಿಲ್ಲರೆ ದುಡ್ಡನ್ನು ಕೊಡುವ ಮೂಲಕ ಕಲಾವಿದರಿಗೆ ಜಾತಿಯಿಲ್ಲ. ಮಾನವೀಯತೆಯೇ ಅವರ ಜಾತಿಯೆಂದು ತೋರಿಸುತ್ತಾರೆ.

ಎಂಕಟಶೆಟ್ಟಿ ಸುಂದರಮ್ಮನ ಹೆಣವ ಮುಂದೆಯೇ ಅವಮಾನಿಸಲು ತೊಡಗಿದಾಗ ಕಲ್ಲಾಸಾನಿ ಅವನ ಜನ್ಮ ಜಾಲಾಡುತ್ತಾಳೆ. ಹೆದರಿದ ಶೆಟ್ಟಿ ಮನೆ ಸೇರುತ್ತಾನೆ. ಹೆದರಿದರೆ ಹೆದರಿಸುವ ಈ ಸಮಾಜ ಹೆದರಿಸಿದರೆ ಹಿಂದೆ ಸರಿಯುತ್ತದೆಂಬುದನ್ನು ಶಾಂತರಸರು ಕಲ್ಲಾಸಾನಿಯ ಮೂಲಕ ಸಾಧಿಸುತ್ತಾರೆ.

ಕಲಾವಿದೆಯೊಬ್ಬಳು ಸ್ವಾಭಿಮಾನದಿಂದ ಬದುಕಲು ಏನೆಲ್ಲ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕಲಾವಿದರನ್ನು ನೋಡುವ ಪುರುಷ ಪ್ರಧಾನ ಸಮಾಜದ ದೃಷ್ಟಿ ಎಂಥದು ಎಂಬುದನ್ನು ತುಂಬ ಸೂಕ್ಷ್ಮವಾಗಿ ಕಥೆ ಕಟ್ಟಿಕೊಡುತ್ತದೆ.

ಇದೇ ಕಥೆಯ ಕಾಂತಮ್ಮ ಕಲಾವಿದೆಯಾಗಿದ್ದವಳು. ಒಬ್ಬನ ಇಟ್ಟುಕೊಂಡವಳಾದ ಮೇಲಿನ ತನ್ನ ಪಾಡನ್ನು ಸವಾರಮ್ಮನ ಮುಂದೆ ಹೀಗೆ ಹೇಳುತ್ತಾಳೆ.

‘ನನ್ನ ಹಣೆಬರಹ ಸವಾರೆಮ್ಮನಕ್ಕಿಂತ ಕೆಟ್ಟು ಸವಾರೆಮ್ಮ’ ನಾನು ಸುಂದರಮ್ಮ ಕೂಡೇ ಪಾತ್ರ ಮಾಡ್ತಿದ್ವೆಲ್ಲ. ಅವನು ಹ್ಯಾಂಗ್ ಗಂಟುಬಿದ್ನೋ ನನ್ಗೆ ತಿಳಿಯದು. ನನ್ನ ಇಟುಗೊಂಡ ನಾಟಕ ಬಿಡಿಸಿದ. ನಾನವನ್ನ ನಂಬಿದೆ. ಏಳೆಂಟು ವರ್ಷ ಬೇಸಿದ್ದ ಆಮೇಲೆ ಕೂಡ್ಯಾದೆಚ್ಚಾಯ್ತು. ಮಕ್ಳು ಕೈಯಾಗ ವ್ಯವಹಾರ್ ತಗಂಡ್ರು. ತಿಂಗಳಿಗೆ ಇಷ್ಟಂತ ಕೊಡಾಕಾ ಸುರುಮಾಡಿದ್ರು, ಅದು ಸಾಕಾಗ್ಲಿಲ್ಲ. ನನ್ನ ದಂಧ ಮಾಡಂದ ವಲ್ಲೆಂದೆ, ಹೊಡೆಯಾಕ ಸುರುಮಾಡ್ದ. ಹೊಡ್ತಾತಾಲಾರ್ದೆ ಓಡೋದೆ. ಯಾ ನಾಟಕ್ ಕಂಪಾನ್ಯಾಗೂ ಕರಕಿಳ್ಲಿಲ್ಲ, ಮತ್ತೆ ಅವನತ್ರ ಬಂದೆ ದಂಧ ಮಾತ್ರ ಮಾಡ್ಲಿಲ್ಲ. ಸುಮ್ಮಸುಮ್ಮೆ ನನ್ನ ಮ್ಯಾಲೆ ಸಂಶಯಮಾಡಿ ಹೊಡಿತಾನ, ನಾ ಎಲ್ಲಿಗೂ ಓಗ್ವಾದ್ರು ಅವನೆದ್ರಿಗೆ ಕುಂತಿರಬೇಕು. ಅಪ್ಪಿ ತಪ್ಪಿ ಎಲ್ಗೆನಾ ಹೋಗಿಬಂದ್ರೆ ಯಾ ಮಿಂಡ್‌ನತ್ರ ಮಕ್ಕಂಬಂದಿ? ಅವ ಎಷ್ಟುಕೊಟ್ಟ ಏನ್‌ಕೊಟ್ಟ ಅಂತ ಮೈಹೊಳೆ ಬಡಿತಾನ’.[೧೬೮]

ಇದು ಕೇವಲ ಕಲಾವಿದೆ ಕಾಂತಮ್ಮನ ಬದುಕಿನ ರೀತಿಯಾಗಿ ಇಲ್ಲಿ ಚಿತ್ರಣಗೊಂಡಿದೆ. ಆದರೆ ಬಹುತೇಕ ಗರತಿಯರು ಇಂಥದ್ದೇ ಮಾತನ್ನು ತಮ್ಮ ಗಂಡಂದಿರಿಂದ ಕೇಳಬೇಕಾಗುತ್ತದೆ. ಗಂಡನ ದುಶ್ಚಟಕ್ಕೆ ಹೆಂಗಸರು ತಮ್ಮ ದೇಹವನ್ನೇ ವ್ಯಾಪಾರದ ಬಂಡವಾಳವಾಗಿಸಬೇಕಾಗುತ್ತದೆ. ಕೆಲವೊಮ್ಮೆ ಶೀಲ ಕಳೆದುಕೊಳ್ಳದೇ ಹೋದರೂ ಶೀಲ ಸಂಬಂಧಿಯಾದ ಅಶ್ಲೀಲ ಮಾತುಗಳನ್ನು ಕೇಳಬೇಕಾಗುತ್ತದೆ. ಮನೆತನಸ್ಥರ ಪಾಡು ಹೀಗಿರುವಾಗ ಕಲಾವಿದರ ಪಾಡು ಮಾತಿಗೆ ಮೀರಿದ್ದು.

ಶಾಂತರಸರದೇ ಇನ್ನೊಂದು ಕಥೆ 'ರೋಗಿ' ಆಧುನಿಕ ರಂಗಭೂಮಿ, ಜನಪದ ರಂಗಭೂಮಿಯಂತೆ (ಬಯಲಾಟಗಳನ್ನು ಬಿಡುವಿನ ವೇಳೆಯಲ್ಲಿ ಆಡುವ ಹವ್ಯಾಸಿ ಕಲಾವಿದರು) ಹವ್ಯಾಸಿ ಕಲಾವಿದರ ಸೃಷ್ಟಿಗೆ ಕಾರಣವಾಯಿತು. ವೃತ್ತಿಕಲಾವಿದರ ಬದುಕು ಕಲೆಯನ್ನೇ ಆಧರಿಸಿದರೆ, ಹವ್ಯಾಸಿಗಳು ಪ್ರವೃತ್ತಿಯಾಗಿ ಕಲೆಯನ್ನು ಬೆಳೆಸಿಕೊಳ್ಳುತ್ತಾರೆ. ಅಂಥ ಕಥೆ 'ರೋಗಿ'ಯಲ್ಲಿ ಹವ್ಯಾಸಿ ಕಲಾವಿದೆ ಸಾವಿತ್ರಿ ತನ್ನ ವಿವಿಧ ಚಟುವಟಿಕೆಗಳಿಂದ ಕ್ರಿಯಾಶೀಲಳಾದವಳು. ವಿವಾಹದ ನಂತರವೂ ತನ್ನ ಅಭಿನಯ ಕಲೆಯನ್ನು ಮುಂದುವರೆಸುತ್ತಾಳೆ. ಗಂಡನೂ ಅದನ್ನೇನೂ ವಿರೋಧಿಸುವುದಿಲ್ಲ. ಆದರೆ ಪ್ರೋತ್ಸಾಹಿಸುವುದೂ ಇಲ್ಲ. ಗಂಡನಿಂದ ಪ್ರೋತ್ಸಾಹದ ನಿರೀಕ್ಷೆಯಿಟ್ಟುಕೊಂಡ ಸಾವಿತ್ರಿ ಸಿಗದೇ ಇದ್ದಾಗ, ಮನೋಐತ್ತಡಕ್ಕೆ ತುತ್ತಾಗುತ್ತಿರುತ್ತಾಳೆ. ಅವಳ ಚಿಕಿತ್ಸೆ ಮಾಡಿದ ಡಾ. ಸಾಂಬಯ್ಯ ರೋಗಮೂಲ ಪತ್ತೆ ಹಚ್ಚುತ್ತಾನೆ. ಸಾವಿತ್ರಿಯ ಮುಕ್ತ ಮಾತುಕತೆ ಕಪಟವಿಲ್ಲದ ಸ್ವಭಾವವನ್ನು ತನ್ನೆಡೆಗಿನ ಆಕರ್ಷಣೆಯಂದು ತಪ್ಪಾಗಿ ಭಾವಿಸುತ್ತಾನೆ. ಅವಳು ಇತರ ಗಂಡಸರೊಂದಿಗೆ ಯಾವುದೇ ಮುಜುಗರ ವಿಲ್ಲದೆ ನಡೆದುಕೊಳ್ಳುವುದನ್ನು ಅವಳ ಮುಕ್ತ ಲೈಂಗಿಕತೆಯಂದು ಅರ್ಥೈಸಿಕೊಂಡು ತಾನೂ ಒಂದು ಪ್ರಯತ್ನಮಾಡಿ ಛೀಮಾರಿ ಹಾಕಿಸಿಕೊಳ್ಳುತ್ತಾನೆ.

ಹೀಗೆ ಮಹಿಳೆ ಎಂದರೆ ಅದರಲ್ಲೂ ವಿವಾಹಿತ ಮಹಿಳೆ ಗಂಡನೊಂದಿಗೆ ಮಾತ್ರ ಸಲಿಗೆ, ಸ್ನೇಹದಿಂದಿರಬೇಕು. ಇತರರೊಂದಿಗೆ ಒಂದು ಅಂತರವನ್ನು ಕಾಯ್ದುಕೊಳ್ಳಬೇಕು. ಗಂಡಸರೊಂದಿಗೆ ಅವಳ ಸ್ನೇಹವು ತಪ್ಪು ಎಂದೇ ಇಂದಿಗೂ ಸಾಮಾಜಿಕವಾಗಿ ಭಾವಿಸಲಾಗುತ್ತದೆ. ಹಾಗಾಗಿಯೆ ಮಹಿಳೆಯರು ಕಲಾರಂಗದಲ್ಲಿ ಅಪರೂಪವಾಗಿಯೇ ಕಾಣಿಸಿಕೊಳ್ಳುತ್ತಾರೆ.

ಶಾಂತರಸರ 'ಸಣ್ಣಗೌಡಸಾನಿ' ಕಾದಂಬರಿಯ ಮಾಬಮ್ಮ ಎಂಬ ಜಾತಿಗೇರ ಮಹಿಳೆ ಹತ್ತಾರು ಜನರ ಲೈಂಗಿಕ ಭೋಗಕ್ಕೆ ತುತ್ತಾಗುವ ಬದಲು ಒಬ್ಬನ ಇಟ್ಟುಕೊಂಡವಳಾಗಿ ಕಲಾ ಪ್ರಪಂಚಕ್ಕೆ ವಿದಾಯ ಹೇಳಬೇಕಾಗುತ್ತದೆ.

ರಂಗಭೂಮಿಯಲ್ಲಿ ಹಿಂದೆ ಕೇವಲ ಜಾತಿಗೇರ ಇಲ್ಲವೇ ಪಾತರದ ಅಂದರೆ ಕೆಳವರ್ಗದ ಮಹಿಳೆಯರೇ ಅಭಿನಯಿಸುತ್ತಿದ್ದು ಅವರು ಹೋದ ಹೋದಲ್ಲೆಲ್ಲಾ ಶ್ರೀಮಂತರ ಸ್ವತ್ತಾಗಬೇಕಾಗುತ್ತಿತ್ತು. ಇಲ್ಲವೇ ಒಬ್ಬನ ಇಟ್ಟುಕೊಂಡವರಾಗಿ ಬದುಕಬೇಕಿತ್ತು. ಕೆಲವೊಮ್ಮೆ ಕಂಪನಿ ಮಾಲಿಕರ ಎರಡನೇ ಹೆಂಡತಿಯಾಗಿಯೋ ಇಟ್ಟುಕೊಂಡವಳಾಗಿಯೋ ಬದುಕುತ್ತಿದ್ದರು. ಒಬ್ಬನ ವಶದಲ್ಲಿಲ್ಲದ ಕಲಾವಿದೆಯನ್ನು ವಶೀಕರಿಸಿ ಕೊಳ್ಳಲು ಹತ್ತಾರು ಗಂಡುಗಳು ಯತ್ನಿಸುತ್ತಿದ್ದರು. ಅವಳ ಕಾಲಾ ಪ್ರತಿಭೆಗಿಂತ ಅವಳ ಸೌಂದರ್ಯ ಪುರುಷ ಪ್ರಧಾನ ವ್ಯವಸ್ಥೆಗೆ ಮುಖ್ಯವಾಗುತ್ತಿತ್ತು ಎಂಬುದನ್ನು ಇಲ್ಲಿಯ ಕಥೆಗಳು ಮಂಡಿಸುತ್ತವೆ.

೪.೪.೬ ಜೋಗತಿ ಹಾಗೂ ವೇಶ್ಯಾ ಬದುಕು :

ವೇಶ್ಯಾ ಬದುಕು :

ಪಿತೃ ಪ್ರಧಾನ ಸಮಾಜದ ಒಂದು ಅನಿವಾರ್ಯವಾದ ಮೌಲ್ಯವಾಗಿ ವೇಶ್ಯೆಯರ ಸೃಷ್ಟಿಯಾಗಿದೆ. ಹೆಣ್ಣಿನ ಲೈಂಗಿಕ ಸ್ವಾತಂತ್ರ್ಯ, ಸಂತಾನೋತ್ಪತ್ತಿ ಹಾಗೂ ಶ್ರಮ ಎಲ್ಲದರ ಮೇಲೂ ಅಸಾಧ್ಯ ಹಿಡಿತವನ್ನು ಹೊಂದಿರುವ ಪುರುಷ, ಸಮಾಜದ ಪಾಳೇಗಾರಿ ಮೌಲ್ಯಗಳಿಂದಾಗಿ ಹೆಣ್ಣನ್ನು ವ್ಯಕ್ತಿಯಾಗಿ, ಮನುಷ್ಯ

ಜೀವಿಯಾಗಿ ಪರಿಭಾವಿಸಿಯೇ ಇಲ್ಲ. ವೇಶ್ಯೆಯರು ಅಧಿಕಾರಿಗಳ ಶ್ರೀಮಂತ ವರ್ಗದವರ ಕಾಮ ಪೂರೈಕೆಯ ವಸ್ತುಗಳಾಗಿದ್ದಾರೆ. ಹೆಣ್ಣಿನ ಲೈಂಗಿಕ ಸಮಸ್ಯೆ ಹಲವಾರು ಆಯಾಮಗಳನ್ನು ಪಡೆದಿದ್ದು, ವೇಶ್ಯೆ ಸಮಾಜದ ಸಂಸ್ಕೃತಿಯ ಭಾಗವಾಗಿದ್ದಾಳೆ. ಬದುಕಿನ ಬಡತನ, ಅನಿವಾರ್ಯತೆ, ಸಾಂಸ್ಕೃತಿಕ ಒತ್ತಾಯ ವೇಶ್ಯಾವೃತ್ತಿಯ ಹೆಚ್ಚಳಕ್ಕೆ ಕಾರಣವಾಗಿವೆ.

ಬಹುತೇಕ ಸಂದರ್ಭದಲ್ಲಿ ಹೆತ್ತವರು, ಒಡಹುಟ್ಟಿದವರು ಮಹಿಳೆಯನ್ನು ಈ ವೃತಿಗೆ ನೂಕುತ್ತಾರೆ. ಅತ್ಯಾಚಾರಕ್ಕೆ ಗುರಿಯಾಗಿ ಮನೆಯವರಿಂದ ತ್ಯಜಿಸಲ್ಪಟ್ಟ, ಕದ್ದೊಯ್ಯಲ್ಪಟ್ಟ, ಮಾರಾಟವಾದ, ಪ್ರೀತಿಸಿ ವಂಚಿಸಲ್ಪಟ್ಟ, ಜೋಗತಿಯರಾದ ಹೀಗೆ ಹಲವಾರು ಕಾರಣಗಳಿಂದ ಈ ಪಾಪ ಕೂಪಕ್ಕೆ ಮಹಿಳೆಯರು ಸಿಲುಕುತ್ತಾರೆ.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ವೇಶ್ಯಾ ಬದುಕಿನ ಪ್ರತಿನಧೀಕರಣದ ಕುರಿತು ಇನ್ನು ಮುಂದೆ ಚರ್ಚಿಸಲಾಗುವುದು. ಜಯತೀರ್ಥ ರಾಜಪುರೋಹಿತರ 'ಸುಳಿಗಾಳಿ' ಕಾದಂಬರಿಯ ಜಮರುದ್ ಬೇಗಮ್, ಚಂದ್ರಕಾಂತ ಕುಸನೂರರ 'ಗೋಹರಜಾನ್ ಮಾಲತಿ ಮತ್ತು ನಾನು' ಕಾದಂಬರಿಯ ಗೋಹರ್‌ಜಾನ್ ಮಾಲತಿ, ಹಾಗೂ ಚಂದಿ, ಸೂಗಯ್ಯ ಹಿರೇಮಠರ 'ಉಕ್ಕು' ಕಥೆಯ ಬಸಂತಿ, ಎಂ.ಜಿ. ದೇಶ ಪಾಂಡೆಯವರ 'ಇದೂ ಒಂದು ಬದುಕು' ಕಥೆಯ ರತ್ನಾ ಇವರೆಲ್ಲ ಗಂಡಸರ ಸೋಮಾರಿತನ, ತಲೆ ಹಿಡುಕ ಪ್ರವೃತ್ತಿ, ಆಡಂಬರ ಜೀವನಕ್ಕೆ ಕೆಲವರು ವೇಶ್ಯಯರಾದರೆ, ಪ್ರೀತಿಸಿ ವಂಚಿಸಲ್ಪಟ್ಟು ಇಲ್ಲವೇ ಪ್ರೀತಿಗೆ ಜಾತಿ ಅಡ್ಡ ಬಂದ ಪರಿಣಾಮ ಕೆಲವರು ವೇಶ್ಯಯ ರಾಗಬೇಕಾಗುತ್ತದೆ. ಯಾವ ಹೆಣ್ಣು ಸ್ವತಃ ಬಯಸಿ ವೇಶ್ಯಾ ಜೀವನಕ್ಕೆ ಪ್ರವೇಶಿಸಿದ್ದನ್ನು ಕಥನ ಸಾಹಿತ್ಯ ದಾಖಲಿಸಿದಂತಿಲ್ಲ.

ಶ್ರೀಮಂತಿಕೆ ಆಡಂಬರದ ಬದುಕಿಗೆ ಒಗ್ಗಿದವರು ಕಾಲಪರಿಸ್ಥಿತಿಗಳಿಗನುಗುಣವಾಗಿ ಒದಗಿದ ಆರ್ಥಿಕ ದುಸ್ಥಿತಿಯನ್ನು ಎದುರಿಸಲಾಗದೆ ಹಣಗಳಿಸುವ ಒಳಮಾರ್ಗಗಳನ್ನು ಶೋಧಿಸಿಕೊಳ್ಳುತ್ತಾರೆ. ಗೌರವ, ಘನತೆಗಳಿಂದ ಬಾಳಿದವರು ತಮ್ಮ ದಿವಾಳಿತನವನ್ನು ಬಹಿರಂಗವಾಗಿ ಒಪ್ಪಿಕೊಳ್ಳಲಾಗದೆ ಮುಖವಾಡಗಳನ್ನು ಆಶ್ರಯಿಸುತ್ತಾರೆ. ಅಧಿಕಾರ ದರ್ಪಗಳಲ್ಲಿ ಅನ್ಯರಿಂದ ದುಡಿಸಿಕೊಂಡವರು ಸ್ವತಃ ದುಡಿಯುವುದನ್ನು ಅವಮಾನವೆಂದು ಭಾವಿಸುತ್ತಾರೆ. ಇದಾವುದು ಬದುಕಿನ ನಿರ್ವಾಹಣೆಗೆ ಸಹಕಾರಿಯಲ್ಲ. ಬದುಕಿಗೆ ಹಣ ಅತ್ಯಂತ ಅವಶ್ಯಕ. ಅಂಥ ಸಂದರ್ಭಗಳಲ್ಲಿ ಹಣ ಸಂಪಾದನೆಗೆ ಕತ್ತಲ ಬದುಕನ್ನು ಪರದೆಯ ಮರೆಯಲ್ಲಿ ನಡೆಸುವುದನ್ನು ರಾಜಪುರೋಹಿತರು 'ಸುಳಿಗಾಳಿ' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

ಹೈದರಾಬಾದ್ ಸಂಸ್ಥಾನ ಭಾರತ ರಾಷ್ಟ್ರದೊಂದಿಗೆ ವಿಲೀನವಾದ ಬಳಿಕ ನವಾಬ ಮನೆತನ ತನ್ನ ದುಂದು ವೆಚ್ಚದಿಂದಾಗಿ ಬೀದಿಪಾಲಾದ ಧಾರುಣ ಸ್ಥಿತಿಯನ್ನು ಹೆಂಡ ಕುಡುಕ, ಸ್ತ್ರೀಲೋಲುಪ ಕಿರಿನವಾಬ, ದುಡಿಯದ ಮಕ್ಕಳು, ಗಂಡನಿಂದ ಪರಿತ್ಯಕ್ತಳಾದ ಮಗಳು ಷಿರೀನ್, ಪಾರ್ಟಿ ಕ್ಲಬ್‌ಗಳಲ್ಲಿ ದಿನದೂಡುವ ಜಮರುದ್ ಬೇಗಂ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯಿಂದಾಗಿ ಬೀದಿಪಾಲಾಗಿ ಹೊಟ್ಟೆಪಾಡಿಗೆ ತಾಯಿ-ಮಗಳು ವೇಶ್ಯಾವೃತ್ತಿಗಿಳಿಯಬೇಕಾದ ದುರ್ಭರ ಸಂದರ್ಭವನ್ನು 'ಸುಳಿಗಾಳಿ' ಕಾದಂಬರಿಯಲ್ಲಿ ಜಯತೀರ್ಥ ರಾಜಪುರೋಹಿತರು ಮನೋಜ್ಞವಾಗಿ ಚಿತ್ರಿಸುತ್ತಾರೆ.

ಅಧಿಕಾರ ಅಂತಸ್ತು ಅರಮನೆಯ ವೈಭೋಗದಲ್ಲಿ ದುಡಿಯದೇ ಸುಖ ಭೋಗವನ್ನು ಅನುಭವಿಸಿದ ನವಾಬ ಕುಟುಂಬ ಸಕಾಲದಲ್ಲಿ ಎಚ್ಚೆತ್ತುಕೊಳ್ಳದೆ ಯಥಾಸ್ಥಿತಿಯಲ್ಲಿ ಮುಂದುವರೆದು ಅದರ ದುಷ್ಪರಿಣಾಮಗಳನ್ನು ಅನುಭವಿಸುತ್ತದೆ.

'ಜಮರುದ್ ಬೇಗಂ ಮುಂದಾಲೋಚನೆಯಿಂದ ಏರ್ಪಡಿಸಿದ ಪಾರ್ಟಿಗಳಿಂದ ಅವಳ ತಮ್ಮ ಆರಿಫ್ ತಾಲುಕುದಾರನಾಗಲು ಸಹಾಯವಾಗುತ್ತದೆ. ಅದರೆ ಅವನು ಜಮರುದಳಿಗೆ ಆರ್ಥಿಕ ಬೆಂಬಲವಾಗುವುದಿಲ್ಲ. ದುರ್ಬಲ ಗಂಡ, ವಶಮೀರುವ ತನ್ನ ಬಿಸಿ ರಕ್ತದೊಡನೆ, ಸ್ವಲ್ಪ ಅಲಕ್ಷಿಸಿದರೂ ಬಾಡುವ ತನ್ನ ಏಕೈಕ ಸ್ವತ್ತಾದ ರೂಪದೊಡನೆ, ಇಳಿಮುಖದಲ್ಲಿರುವ ನವಾಬೀ ಹೆಮ್ಮೆಯೊಡನೆ, ಕುಂದುತ್ತಿರುವ ವರಮಾನದೊಡನೆ, ಬೆಳೆಯುತ್ತಿರುವ ಕುಟುಂಬದೊಡನೆ ಅವಳ ಹೋರಾಟ ಸಾಗುತ್ತದೆ.'

ಘನತೆ ಗೌರವಗಳಿಂದ ಬಾಳಿದ ಕರಾಮತ್ ಮಂಜಿಲ್ 'ದಿಲ್‌ಸುಖ್' ಹೋಟಲ್ ಆಗಿ, ಅದೇ ಹೋಟಲ್‌ನಲ್ಲಿ ಬದುಕಿನ ನಿರ್ವಹಣೆಗೆ ಗಿರಾಕಿಗಳಿಗೆ ಮೈಯೊಪ್ಪಿಸಬೇಕಾದ ಸ್ಥಿತಿ ಜಮರುದ್ ಮತ್ತು ಅವಳ ಮಗಳು ಷಿರಿನ್‌ಳದಾಗುತ್ತದೆ. ಬಹಿರಂಗವಾಗಿ ದುಡಿದುಣ್ಣಲು ಅಡ್ಡಿಯಾದ ನವಾಬಿ ಪ್ರತಿಷ್ಠೆ, ಕತ್ತಲ ಕೂಪಕ್ಕೆ ದೂಡುತ್ತದೆ. ಕುಡಿದು ಹತ್ತೆಂಟು ಜನ ದಾಸಿಯರೊಂದಿಗೆ ದಿನಗಳೆಯುತ್ತಿದ್ದ ಕಿರಿ ನವಾಬ, ಹೆಂಡತಿ ಮೈಮಾರಿ ಬ್ರಾಂಡಿ ತಂದುಕೊಟ್ಟರೂ ಕುಡಿಯುವುದನ್ನು ಬಿಡುವುದಿಲ್ಲ. ಲೋಲುಪ ನವಾಬನಿಂದಾಗಿ ಜಮರುದಳ ಬದುಕು ಬೀದಿ ವೇಶ್ಯಯದಾಗುತ್ತದೆ.

ಕರಾಮತ್ ಮಂಜಿಲ್‌ನಲ್ಲಿ ತನ್ನ ಆಯುಷ್ಯದ ನಾಲ್ವತ್ತೆರಡು ವರ್ಷ ದಾಸಿಯಾಗಿ ಕಳೆದ ಗುಲಾಬಿ ಅನಿರೀಕ್ಷಿತವಾಗಿ ಆ ಮನೆಯಿಂದ ಹೊರದೂಡಲ್ಪಡುತ್ತಾಳೆ. ತಮ್ಮ ಆರ್ಥಿಕ ಸ್ಥಿತಿ ಚನ್ನಾಗಿರುವವರಗೆ ಅವರಿಗೆ ಹೊಟ್ಟೆ ಬಟ್ಟೆಗೆ ಕೊಟ್ಟು ದುಡಿಸಿಕೊಳ್ಳುವ ಶ್ರೀಮಂತ ವರ್ಗ ಬರಿಗೈಯಿಂದ ಹೊರಗೆ ಹಾಕುತ್ತದೆ. ಈ ವಯಸ್ಸಿನಲ್ಲಿ ತಾನು ಹೇಗೆ ಬದುಕುವದೆಂದು ಪ್ರಶ್ನಿಸಿದಾಗ ತಮ್ಮ ಬದುಕೇ ತಮಗೆ ಭಾರವಾಗಿರುವಾಗ, ಅವಳ ಹೊಣೆ ತಮ್ಮದಲ್ಲವೆಂಬಂತೆ ಜಾರಿಕೊಳ್ಳುತ್ತಾರೆ. ಸಂಬಳವಿಲ್ಲದ ಜೀತದ ದುಡಿಮೆ ಮುಪ್ಪಿನಲ್ಲಿ ಬೀದಿಪಾಲಾಗುವಂತೆ ಮಾಡುತ್ತದೆ. 'ತನ್ನಲ್ಲಿ ಯೌವ್ವನ ಸೌಂದರ್ಯಗಳಿದ್ದರೆ ಧಂದೆ ಮಾಡಿಯಾದರೂ ಬದುಕುತ್ತಿದ್ದೆ' ಎಂಬ ಗುಲಾಬಿಯ ಮಾತು ಹೆಣ್ಣಿಗೆ ಯಾವ ಕೆಲಸ ಸಿಗದೇ ಇದ್ದಾಗ ಅವಳ ಶರೀರವೇ ಅವಳ ದುಡಿಮೆಯ ಸಾಧನವಾಗುವುದನ್ನು ಹೇಳುತ್ತದೆ.

ಸಾಮಾಜೀಕರಣದ ಎರಕದಿಂದಾಗಿ ಬಹುತೇಕ ಮಹಿಳೆಯರು ವಿವಾಹ ಸಂಸ್ಥೆಯ ನಿಯಮಗಳಂತೆ ಗರತಿಯರಾಗಿ ಬದುಕಲು ಆಶಿಸುತ್ತಾರೆ. ಆದರೆ ಅವರ ಕೈವಶಮೀರಿ ಅನ್ಯಜಾತಿ, ಧರ್ಮಗಳ ಸಂಗಾತಿಯಲ್ಲಿ ಉದಿಸಿದ ಪ್ರೀತಿಯನ್ನು ಸಮ್ಮತಿಸದ ಸಾಮಾಜಿಕ ವ್ಯವಸ್ಥೆ ವಿವಾಹವನ್ನು ತಡೆಯುತ್ತದೆ ಮಾತ್ರವಲ್ಲ ಇಂಥ ಪ್ರಯತ್ನಗಳು ಪುನಃ ನಡೆಯಬಾರದೆಂದು ಕ್ರೂರವಾಗಿ ಶಿಕ್ಷಿಸುತ್ತದೆ. ಮಾನವೀಯತೆಗಿಂತ ಜಾತಿ, ಧರ್ಮಗಳು ಮುಖ್ಯವಾಗಿ ವ್ಯಕ್ತಿ ಸ್ವಾತಂತ್ರ್ಯ ಹರಣಗೊಳ್ಳುತ್ತದೆ. ಮಹಿಳೆಯ ಶೀಲ ಸಂಬಂಧೀ ವದಂತಿಗಳನ್ನು ಹರಡುವ ಮೂಲಕ ಅವಳ ಬದುಕನ್ನು ಹೀನತೆಗೆ ತಳ್ಳಲಾಗುತ್ತದೆ.

ಚಂದ್ರಕಾಂತ ಕುಸನೂರರ 'ಗೋಹರಜಾನ್ ಮಾಲತಿ ಮತ್ತು ನಾನು' ಕಾದಂಬರಿಯಲ್ಲಿ ನರಸಿಂಹನ ಹೆಂಡತಿ ಗಂಡನ ದುಶ್ಚಟದಿಂದುಂಟಾದ ಆರ್ಥಿಕ ಕೊರತೆಯನ್ನು ನೀಗಲು ವೇಶ್ಯಾವೃತ್ತಿಗಿಳಿಯುತ್ತಾಳೆ.

ನರಸಿಂಹ ಒಬ್ಬ ಶಿಕ್ಷಕ ಆದರೆ ಇಸ್ಪೀಟಾಡುವ, ಬೀಡಿ ಸೇದುವ, ಕಂಟ್ರಿ ಸರಾಯಿ ಕುಡಿಯುವ, ವೇಶ್ಯಾಗಮನಕ್ಕೆಳಸುವ ಸರ್ವಗುಣ ಸಂಪನ್ನ ಹೆಂಡತಿಯ ಬೇಕು ಬೇಡಗಳನ್ನು ಲಕ್ಷಿಸದೆ ಇದ್ದಾಗ ಅವಳು ಅನಿವಾರ್ಯವಾಗಿ ವೇಶ್ಯಾವೃತ್ತಿಗಿಳಿದು ಬದುಕು ಸಾಗಿಸುತ್ತಾಳೆ. ನರಸಿಂಹನ ದೃಷ್ಟಿಯಲ್ಲಿ ತನ್ನದು ತಪ್ಪಲ್ಲ. ಆದರೆ ತನ್ನ ಹೆಂಡತಿಯದು ಮಾತ್ರ ಮಹಾಪರಾಧವಾಗಿ ಕಾಣುತ್ತದೆ.

'ನಿಯತ್ತಿನ ರಂಡಿ ಗೂಡ ಸಹವಾಸ ಮಾಡಬಹುದು ರವಿ ಬೇನಿಯತ್ತಿನ ಮಡದಿಗೂಡ ಸಂಸಾರ ಮಾಡೋದು ಭಾಳ ಕಷ್ಟ ಭಾಳ ಕಷ್ಟ' ಎನ್ನುವ ನರಸಿಂಹನ ಮಾತು. ಹೆಂಡತಿ ಮಾತ್ರ ನಿಯತ್ತಿನಿಂದಿರಬೇಕು. ಎಂಬುದನ್ನು ನಿರೀಕ್ಷಿಸುವಂಥದ್ದಾಗಿದೆ. ಅವಳ ನಿರೀಕ್ಷೆಗಳಿಗೆ ಇಲ್ಲಿ ಮಾನ್ಯತೆ ಇಲ್ಲ ಎಂಬುದನ್ನು ಕಥೆ ಪ್ರತಿನಿಧಿಸುತ್ತದೆ.

ಇದೇ ಕಾದಂಬರಿಯಲ್ಲಿ ಬರುವ ರವೀಂದ್ರ ಮಾಲತಿಗೆ ಟ್ಯೂಷನ್ ಹೇಳಲು ಹೊಗುತ್ತ ಮಾಲತಿಯೊಂದಿಗೆ ಲೈಂಗಿಕ ಸಂಬಂಧ ಬೆಳೆಸುತ್ತಾನೆ. ಮಾಲತಿಯೂ ಸಮ್ಮತಿಸಿಯೇ ಒಂದಾಗುತ್ತಾಳೆ. ಆದರೆ ಈ ಸಂಬಂಧವನ್ನು ಬಹಿರಂಗವಾಗಿ ಒಪ್ಪಿಕೊಳ್ಳುವ ಮನೋಬಲ, ಜಾತಿ, ಕುಲ ಗೋತ್ರಗಳಿಲ್ಲದ ಮಾಲತಿಗಿರುವಷ್ಟು, ಇವುಗಳಿಂದ ಬಂಧಿತನಾದ ರವೀಂದ್ರನಿಗಿರುವುದಿಲ್ಲ. ಮಾಲತಿ ಒಬ್ಬ ವೇಶ್ಯೆಯ ಮಗಳಾಗಿರುತ್ತಾಳೆ. ಅವಳನ್ನು ಸುತ್ತವರಿದ ಪರಿಸರವೂ ಅಂಥದ್ದೇ ಆಗಿರುತ್ತದೆ. ಮಾಲತಿ ತಾನಿಷ್ಟಪಟ್ಟ ರವೀಂದ್ರನೊಂದಿಗೆ ಲೈಂಗಿಕ ಸಂಬಂಧ ಹೊಂದುತ್ತಾಳೆ. ಅವಳಿಗೆ ಅದರ ಬಗ್ಗೆ ಯಾವುದೇ ಪಾಪಪ್ರಜ್ಞೆ ಪಶ್ಚಾತಾಪವೂ ಇರುವುದಿಲ್ಲ ಆದರೂ ತಮ್ಮಂಥ ಹೆಣ್ಣುಗಳು ಬಳಕೆಗೊಂಡ ನಂತರ ಹೇಗೆ ನೆಲೆಯಿಲ್ಲದವರಾಗಬೇಕಾಗುತ್ತದೆಂಬ ನೋವು ಅವಳ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ರವೀಂದ್ರ 'ನೀನು ಹಾಳಾಗೋದ್ಕ ನಾನೇ ಜವಾಬ್ದಾರನೆಂದು ಒಪ್ಪಿಕೊಳ್ತೀನಿ' ಎಂದಾಗ ಮಾಲತಿ ಬೀದಿಪಾಲಾದರೇನು,? ಹಾದಿ ಪಾಲಾದರೇನು? ನಾಲ್ಕು ಮಂದಿ ಮುಂದ ಒಪ್ಪಿಕೊಳ್ಳೋದು ಭಾಳ ಕಷ್ಟ ಸಾರ್ ಯಾರು ಒಪ್ಪಿಕೊಂಡು ತಮ್ಮ ಸಂಸಾರ ಹಾಳ ಮಾಡಿಕೊಳ್ಳಿಕ್ಕಿ ಸಿದ್ಧರಾಗ್ತಾರ? ಇಂಥ ದಡ್ಡತನ ನೀವೂ ಮಾಡೋದಿಲ್ಲ ಮಾಲತಿ ನಿಮ್ಮ ಜೀವನದಲ್ಲಿ ಬಂದಳು...... ಹೋದಳು..... ನಿಮ್ಗೇನಾಯ್ತು ಏನಿಲ್ಲ. ಏನೇನೋ ಇಲ್ಲ.' ಎನ್ನುವಲ್ಲಿ ಇಂಥ ಸಂಬಂಧಗಳಿಂದ ಪುರುಷನಿಗೆ ಯಾವುದೆ ಹಾನಿಯಾಗದೇ ಮಹಿಳೆ ಮಾತ್ರ ಅದರ ಪರಿಣಾಮವನ್ನು ಅನುಭವಿಸಬೇಕಾಗುತ್ತದೆಂಬ ವಾಸ್ತವ ಚಿಂತನೆ ಇದೆ.

ಮಾಲತಿ ಪಿತೃ ಪ್ರಧಾನ ಮೌಲ್ಯಗಳನ್ನು ಕತ್ತು ಬಗ್ಗಿಸಿ ಒಪ್ಪದೆ. ತನ್ನಿಷ್ಟದಂತೆಯೆ ತನ್ನ ಬದುಕನ್ನು ರೂಪಿಸಿಕೊಳ್ಳುತ್ತಾಳೆ. ಆದರೆ ರವೀಂದ್ರನ ಪುಕ್ಕಲುತನ ಸಾಚಾತನದ ಸೋಗುಗಳನ್ನು ನೇರವಾಗಿ ಖಂಡಿಸುತ್ತಾಳೆ. ರವೀಂದ್ರನಿಂದ ದೂರವಿರಲಾಗದೆ ತಾನೆ ದೂರ ಹೋಗುತ್ತಾಳೆ. ಎಲ್ಲಿಗೆ ಏನು ಎಂದು ತಿಳಿಸದೆ ಹೋದಾಗ ರವೀಂದ್ರ ಅವಳನ್ನು ಶೋಧಿಸಲು ಯತ್ನಿಸುತ್ತಾನೆ. ಮುಂಬೈಯಂಥ ಮಹಾನಗರಿಯಲ್ಲಿ ಮಾಲತಿ ಏನಾದಳು 'ಕಾಮಾಟಿಪುರದ, ಕೇಜಿನಲ್ಲಿ ನಗ್ನಾವಸ್ಥೆಯಲ್ಲಿ ಅಸಹಾಯಕವಾಗಿ ಬಿದ್ದು ನರಪಶುಗಳಿಗೆ ತುಂಡು ತುಂಡು ದೇಹ ನೀಡುತ್ತಿರಬೇಕು. ಅಸಹ್ಯವೇದನೆಯಿಂದ ಚೀರುತ್ತಿರಬೇಕು. ಉರಿಯುತ್ತಿರುವ ಸಿಗರೇಟ ತುಂಡುಗಳಿಂದ ತೊಡೆಗಳ ಮೇಲೆ ಸುಡಿಸಿಕೊಳ್ಳುತ್ತಿರಬೇಕು. ತನ್ನಂತೆ ಒದ್ದಾಡುವ ಹೆಣ್ಣುಗಳೊಂದಿಗೆ ಗೋಳಾಡುತ್ತ ಬಿದ್ದಿರಬೇಕು, ಸೈಕಲ್ ಚೈನು, ಬೆಲ್ಟುಗಳಿಂದ ಜಿತ್ತಲೆ ಮೈಮೇಲೆ ಪೆಟ್ಟು ತಿನ್ನುತ್ತಿರಬೇಕು, ಬಾಸುಂಡೆಗಳಿಂದ ಕಂದಗಟ್ಟಿದ ಮೈ ನೊಡಿಕೊಂಡು ಅಳುತ್ತಿರಬೇಕು' ಎಂದೆಲ್ಲ ಯೋಚಿಸುತ್ತಾನೆ. ಮುಂಬೈಗೆ ಸಾಗಿಸಲ್ಪಡುವ ಹೆಣ್ಣುಗಳು ಎದುರುಗೊಳ್ಳುವ ಬದುಕಿನ ಚಿತ್ರಣವನ್ನು ಮೇಲಿನ ಮಾತುಗಳು ನೀಡುತ್ತವೆ.

ಇದೇ ಕಾದಂಬರಿಯಲ್ಲಿ ಬರುವ ಚಂದಿ ದೇಸಾಯಿ ಮನೆತನದಲ್ಲಿ ಮದುವೆಯಾಗಿ ಹೋದರೂ ಗಂಡ ಮತ್ತು ಮಾವನ ಲೈಂಗಿಕ ಅತ್ಯಾಚಾರದೊಂದಿಗೆ ಸ್ವತಃ ಗಂಡನೇ ವ್ಯಭಿಚಾರಕ್ಕೆ ಒತ್ತಾಯಿಸುವ. ಒಪ್ಪದಿದ್ದಾಗ ಹೊಡೆದು ಹಿಂಸಿಸುವ ಕ್ರೌರ್ಯಕ್ಕೆ ಬೇಸತ್ತು, ಅವರಿಂದ ದೂರಾಗಿ ತಾನೆ ವೇಶ್ಯಾವೃತ್ತಿಗಿಳಿವ ನಿರ್ಧಾರ ಕೈಗೊಳ್ಳುತ್ತಾಳೆ. ಮೈಯ ಬಲ ತೀರಿದಾಗ ಭಿಕ್ಷಾಟನೆಯಲ್ಲಿ ಹೊಟ್ಟೆ ಹೊರೆದುಕೊಳ್ಳುತ್ತಾಳೆ. ವಿವಾಹ-ಕುಟುಂಬ ವ್ಯವಸ್ಥೆಯೆ ಇಲ್ಲಿ ಚಂದಿಯನ್ನು ವೇಶ್ಯಾ ವೃತ್ತಿಗಿಳಿಸುವ ದುರಂತವಿದೆ. ದುರುಳರು ವಿವಾಹ ಸಂಸ್ಥೆಯನ್ನು ದಂಧೆಗೆ ಬಳಸಿಕೊಳ್ಳುತ್ತಿರುವ ಸಂಗತಿಯನ್ನು ಕಾದಂಬರಿ ಹೊರಗೆಡಹುತ್ತದೆ.

ಸೂಗಯ್ಯ ಹಿರೇಮಠರ 'ಉಕ್ಕು' ಕಥೆ ವಿವಾಹ ವಂಚಿತ ಬಸಂತಿ ವೇಶ್ಯಾವೃತ್ತಿಗೆ ದೂಡಲ್ಪಡುವ ವಸ್ತುವಿನದು. ಬಸಂತಿ ಹಾಗು ಅವಳ ತಮ್ಮ ರವಿ ತಂದೆ ತಾಯಿಯರನ್ನು ಕಳೆದುಕೊಂಡು ಅನಾಥರಾದಾಗ ತಾಂಡಾದ ಮುಖ್ಯಸ್ಥ ಲೋಕ್ಯಾನಾಯಕ ಅವರಿಗೆ ಆಸರೆಯಾಗುತ್ತಾನೆ. ಜನಾಂಗದ ಒಳಿತಿಗೆ ಶ್ರಮಿಸುವವನಾಗಿ ಬಸಂತಿಯ ಓದಿಗೆ ಕಾರಣನಾಗುತ್ತಾನೆ. ಪ್ರತಿಭಾವಂತೆ ಬಸಂತಿ ಲೋಕ್ಯಾ ನಾಯಕನ ಆಕಸ್ಮಿಕ ಮರಣದಿಂದ ಓದು ನಿಲ್ಲಿಸುವೆನೆಂದಾಗ ಬಿ.ಎಲ್. ನಾಯಕ ಪ್ರೋತ್ಸಾಹಿಸಿ ತನ್ನ ಕಾಲೇಜಿನಲ್ಲಿಯೇ ಸೇರಿಸುತ್ತಾನೆ. ಪಾಠದ ಚರ್ಚೆಯ ಕಾರಣ ಹತ್ತಿರವಾದ ಇಬ್ಬರೂ ಮದುವೆಯಾಗುವ ನಿರ್ಣಯ ಕೈಗೊಂಡು ಮೈಮರೆಯುತ್ತಾರೆ. ರವಿಯ ಎಚ್ಚರಿಕೆ ವ್ಯರ್ಥವಾಗುತ್ತದೆ. ಜಾತಿಯ ಒಳಪಂಗಡದ ಕಾರಣ ಮದುವೆಗೆ ಒಪ್ಪದ ತಾಯಿ ಹಾಗೂ ಅಣ್ಣನ ಮಾತಿನಂತೆ ನಾಯಕ ಬೇರೆ ಮದುವೆಯಾಗುತ್ತಾನೆ. ಅವನನ್ನೆ ಮದುವೆಯಾಗುವ ಪ್ರಬಲ ಇಚ್ಛೆಯ ಬಸಂತಿ ತಮ್ಮನೊಂದಿಗೆ ಅವನ ಮನೆ ಪ್ರವೇಶಿಸುತ್ತಾಳೆ. ನಾಯಕ ತನ್ನ ಗೂಂಡಾ ಶಿಷ್ಯರಿಂದ ಹೊಡೆಸಿ, ಕಂಪ್ಲೇಂಟ್ ಕೊಟ್ಟು ರಿಮಾಂಡ ಹೋಮಿಗೆ ಹಾಕಿಸಿ ಅಪಪ್ರಚಾರ ಮಾಡಿದ್ದರ ಪರಿಣಾಮ ಬಸಂತಿ ವೇಶ್ಯಾವೃತ್ತಿಗಿಳಿಯ ಬೇಕಾಗುತ್ತದೆ.

ಇಲ್ಲಿ ಪ್ರೀತಿ ಕೇವಲ ನಟನೆಯಾಗುತ್ತದೆ. ಸ್ವಲ್ಪ ಹಣ ಕೊಟ್ಟು ಅವಳನ್ನು ನಿವಾರಿಸಿಕೊಳ್ಳಲು ನೋಡುವ ನಾಯಕ ಸ್ವಾರ್ಥದ ಪ್ರತೀಕವಾಗಿ ಕಾಣುತ್ತಾನೆ. ಬಸಂತಿ ಇಂಥ ನಯವಂಚಕನನ್ನು ನಂಬಿ ಘಾಸಿಗೊಳ್ಳುತ್ತಾಳೆ. ವಿದ್ಯಾವಂತಳಾಗಿ ಮಾನವಾಗಿ ಬದುಕಬೇಕಾದವಳು ಹೀನ ಬದುಕು ಬದುಕಬೇಕಾಗುತ್ತದೆ.

ಮಹಿಳೆಯ ಅನಾಥಸ್ಥಿತಿಗೆ ಆಸರೆಯಾಗುವ; ಬೆಂಬಲವಾಗುವ ಭರವಸೆತೋರಿ ಲೈಂಗಿಕವಾಗಿ ಬಳಸಿಕೊಂಡು ಬೀದಿಪಾಲು ಮಾಡುವುದಲ್ಲದೆ, ಸಾರ್ವಜನಿಕವಾಗಿ ಅವಳು ಕಳಂಕಿಯೆಂದು ಪಟ್ಟಗಟ್ಟುವ ಮೂಲಕ ಅನೇಕ ಮಹಿಳೆಯರು ವೇಶ್ಯಾವೃತ್ತಿಯನ್ನು ಅನುಸರಿವಂತೆ ಮಾಡಲಾಗುತ್ತದೆ. ಅವಳ ಬದುಕು ಪುರುಷ ನಿರೀಕ್ಷೆಯಂತೆ ರೂಪಿತವಾಗುತ್ತದೆ.

ಸ್ತ್ರೀ-ಪುರುಷ ಸಂಬಂಧದಲ್ಲಿ ಪರಸ್ಪರ ಆಕರ್ಷಣೆ ಪ್ರಧಾನವಾಗಿರುವಂಥಹದು. ಗಂಡು ಹೆಣ್ಣಿನ ಈ ಆಕರ್ಷಣೆ ದೈಹಿಕ ಮಟ್ಟದ್ದಾಗಿರಬಹುದು. ದೈಹಿಕ ಮಾನಸಿಕ ಸಾಂಗತ್ಯಕ್ಕಾಗಿ ಇರುವ ಹಂಬಲದಿಂದ ಪ್ರೇರಣೆ ಪಡೆದುದಾಗಿರಬಹುದು. ಈ ಸಂಬಂಧಗಳ ಹುಟ್ಟು, ಬೆಳವಣಿಗೆ ಮತ್ತು ಮುಕ್ತಾಯಗಳಲ್ಲಿ ಹೆಣ್ಣಿನ ಬದುಕಿನಲ್ಲಿ ಉಂಟಾಗುವ ಬದಲಾವಣೆಗಳ ಕಾರಣವಾಗಿ ಅವಳ ವ್ಯಕ್ತಿತ್ವವನ್ನು ಭಾದಿಸುವ ಅಂಶಗಳೇ ಹೆಚ್ಚಾಗಿರುತ್ತವೆ.

ವಿವಾಹ ಸಂಸ್ಥೆ ಮೂಲಭೂತವಾಗಿ ಹೆಣ್ಣಿನ ಪಾವಿತ್ರ್ಯವನ್ನು ಗಂಡನಿಗೆ ಮೀಸಲಾಗಿಸುತ್ತದೆ. ಹೆಣ್ಣಿನ ವಿವಾಹ ಬಾಹಿರ ಸಂಬಂಧಕ್ಕೆ ಇಲ್ಲಿ ಅವಕಾಶವಿರುವುದಿಲ್ಲ. ಆದರೆ ದುಡಿಯದ ಕೆಲ ಸೋಮಾರಿ ಗಂಡಂದಿರು ವಿವಾಹ ಸಂಸ್ಥೆಯಲ್ಲಿಯೆ ಮಹಿಳೆಯ ದೇಹವನ್ನು ವ್ಯಾಪಾರದ ಬಂಡವಾಳವಾಗಿ ಬಳಸಿಕೊಳ್ಳುವುದನ್ನು ಎಂ.ಜಿ.ದೇಶಪಾಂಡೆಯವರ 'ಇದೂ ಒಂದು ಬದುಕು' ಕಥೆ ವಿವರಿಸುತ್ತದೆ.

ದುಡಿಯದ ಗಂಡ ಮನೆ ತುಂಬ ಮಕ್ಕಳು ಬದುಕಿಗೆ ಗಂಡನೇ ತೋರಿದ ಮಾರ್ಗ ವ್ಯಭಿಚಾರ. ಹಾಗೆ ಗಳಿಸಿದ ಹಣವಾದರು ಬಳಕೆಯಾಗುವುದು ಬಹುಪಾಲು ಗಂಡನ ಕುಡಿತಕ್ಕೆ. ದುಡಿದು ಗಳಿಸದಿದ್ದರು ದುಶ್ಚಟಗಳ ದಾಸನಾಗುವ ಗಂಡಸು ಹೆಂಡತಿಗೇ ತಲೆ ಹಿಡುಕನಾಗುವುದು, ಹೆಣ್ಣಿನ ಪಾವಿತ್ರ್ಯಕ್ಕೆ ಮಹತ್ವವಿತ್ತ ಸಮಾಜದ ವಿಕೃತ ವ್ಯಂಗ್ಯದಂತೆ ತೋರುತ್ತದೆ. ತನಗೆ ಬೇಕಾದಾಗ ಪವಿತ್ರಳಾಗಿರಬೇಕೆಂದು ಬಯಸುವ, ತನ್ನ ಹಿತಾಸಕ್ತಿಗೆ ವ್ಯಭಿಚಾರಿಯಾಗಿಯೂ ಬಳಸಿಕೊಳ್ಳುವ ಪುರುಷ ಅನುಕೂಲಸಿಂಧೂ ಪ್ರವೃತ್ತಿಯವನಾಗಿ ಭಾಸವಾಗುತ್ತಾನೆಂಬುದನ್ನು ಕಥೆ ಪ್ರತಿನಿಧಿಸುತ್ತದೆ.

ಗಂಡಸು ದುಡಿದು ಸಂಸಾರ ಸಲಹುತ್ತಾನೆ ಎಂಬುದು ಇಲ್ಲಿ ಅರ್ಥ ಕಳೆದುಕೊಳ್ಳುತ್ತದೆ. ಹೆಣ್ಣಿನ ಶೀಲ ಮಾರಾಟದ ವಸ್ತುವಾಗುತ್ತದೆ. ಈ ವಿವಾಹ ಮಾರಾಟದ ಕೇಂದ್ರವಾಗುತ್ತದೆ. ರತ್ನಾಳಿಗೆ 'ಇದೆಲ್ಲ ಏನು' ಎಂದು ಕೇಳುವ ವ್ಯಕ್ತಿಗೆ ಅವಳು ಇದು ನನ್ನ ಸಂಸಾರ ಅವರು ನನ್ನ ಪತಿ'[೭೨೬] ಎಂದು ಉತ್ತರಿಸುವುದು ವಿವಾಹ ಸಂಸ್ಥೆಯ ಕುರಿತ ವ್ಯಂಗ್ಯವಲ್ಲದೆ ಬೇರಿಲ್ಲ.

ಪಿತೃ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಗೆ ಎರಡು ಸ್ಥಾನಗಳು ಸೂಚಿತವಾಗಿವೆ. ಒಂದು ವಿವಾಹ ಪರಿಪ್ರೇಕ್ಷದಲ್ಲಿ ಬಂಧಿತಳಾಗಿ ಗರತಿ ಪಾತ್ರವನ್ನು ನಿರ್ವಹಿಸುವುದು. ಇಲ್ಲಿ ಮಹಿಳೆಯ ಲೈಂಗಿಕತೆ ಪತಿಗೆ ಮಾತ್ರ ಸೀಮಿತವಾಗಿದ್ದು ಅದನ್ನು ಮೀರದಂತೆ ನಿರ್ಬಂಧಿಸಲಾಗಿದೆ. ಒಂದು ವೇಳೆ ಮೀರಿದರೆ ಪಾವಿತ್ರ್ಯ ನಿರೂಪಣೆಗೆ ಅಗ್ನಿಪರೀಕ್ಷೆಗೆ ಸಿದ್ಧಳಾಗಬೇಕಾಗುತ್ತದೆ. ಇನ್ನೊಂದು ವೇಶ್ಯಾಬದುಕು. ಒಮ್ಮೆ ವೇಶ್ಯೆಯಾದವಳು ಯಾವುದೇ ಕಾರಣಕ್ಕೂ ವಿವಾಹ ಸಂಸ್ಥೆ ಪ್ರವೇಶಿಸುವಂತಿಲ್ಲ. ಅವಳ ಲೈಂಗಿಕತೆ ಮಾರಾಟದ ವಸ್ತುವಾಗುತ್ತದೆ. ವೇಶ್ಯೆ ಸಾರ್ವಜನಿಕ ಸ್ವತ್ತಾಗುತ್ತಾಳೆ. ಇಲ್ಲಿಯ ಅನೇಕ ಕಥೆ ಕಾದಂಬರಿಗಳಲ್ಲಿ ಗಂಡಸರು ವಿವಾಹ ಸಂಸ್ಥೆಯ ಅಡಿಯಲ್ಲಿಯೇ ಹೆಂಡತಿಯಾದವಳನ್ನು ತಮ್ಮ ಧನದಾಹಕ್ಕೆ ವೇಶ್ಯೆಯರನ್ನಾಗಿಸಿದ್ದಾರೆ. ತಂದೆ, ಅಣ್ಣ, ಗಂಡ ಎಂಬ ಭೇದವಿಲ್ಲದೆ ಮಹಿಳೆಯನ್ನು ಹೀನ ಬದುಕಿಗೆ ದೂಡಿದ ಸಂಗತಿ ಕಥನ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿದೆ.

ಜೋಗತಿ ಬದುಕು :

ಜೋಗತಿಯ ಮೂಲ ನೆಲೆ ಚಿಂಚನಸೂರ :

'ಜೋಗತಿ' ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ 'ಚಿಂಚನ ಸೂರ' ಗ್ರಾಮದಲ್ಲಿ ಜಾರಿಯಲ್ಲಿರುವ ಸೇವೆ ಸಂಪ್ರದಾಯ. ಹೈದರಾಬಾದ ಕರ್ನಾಟಕದ ತುಂಬ ವ್ಯಾಪಿಸಿದೆ. ಅಕ್ಷತ್ತದಿಗಿ ಅಮವಾಸ್ಯೆಯಿಂದ ಬಾದಾಮಿ ಅಮವಾಸ್ಯೆಯವರೆಗೆ ಮಾಮರ ತಾಯಿಯ ಸನ್ನಿಧಿಯಲ್ಲಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಹರಕೆಗಳು ಸಲ್ಲುತ್ತವೆ.

ಸೇವೆ ಸಮರ್ಪಣೆಯಲ್ಲಿ ಎರಡು ವಿಧಗಳಿವೆ. ಬೇವಿನ ಅಥವಾ ಲಕ್ಕಿಯ ಗಿಡದ ತಪ್ಪಲನ್ನು ಅಂಗಾಂಗಳಿಗೆ ಮರೆ ಮಾಡಿಕೊಂಡು ಸಲ್ಲಿಸುವ ಸೇವೆಗೆ ಉಟಗಿ ಸೇವೆ ಎಂದು ಕರೆಯುವರು. ಮೈ ತುಂಬ ಕೇವಲ ಭಂಡಾರ ಹಚ್ಚಿಕೊಂಡು ಸಲ್ಲಿಸುವ ಸೇವೆಗೆ ಬೆತ್ತಲೆಸೇವೆ ಎಂದು ಹೆಸರು. ಸಾವಿರಾರು ಜನರಸಮ್ಮುಖದಲ್ಲಿ ನಡೆಯುವ ಈ ಸೇವೆಯ ಸಂದರ್ಭದಲ್ಲಿ ಕುರಿ ಕೋಳಿಗಳ ಬಲಿಯೂ ನಡೆಯುತ್ತದೆ.

ಮಾಪುರ ತಾಯಿಗೆ 'ಜೋಗತಿ' ಬಿಡುವ ಸಂಪ್ರದಾಯವಿತ್ತು. ಸದ್ಯ ಕಾನೂನು ಇದನ್ನು ನಿಷೇಧಿಸಿದೆ. ಆದರೂ ಅಲ್ಲಲ್ಲಿ ಕದ್ದು ಮುಚ್ಚಿ ನಡೆಯುತ್ತದೆ. ಹೀಗೆ ಜೋಗುತಿ ಬಿಡುವವರನ್ನು 'ಜೋಗಣಿ'ಎಂದು ಕರೆಯುತ್ತಾರೆ. ಸುಂದರಿಯೂ ಕಲಾವಿದೆಯು ಆದ ಕನ್ಯೆಯೊಬ್ಬಳು ದೇವರ ಸೇವೆಗೆ ಅವಶ್ಯವೆಂದು ನಂಬಿ ಹುಟ್ಟಿಕೊಂಡ ಪದ್ಧತಿ ಕೊನೆಗೆ ಆಕೆಯ ಸೇವೆ ದೇವಾಲಯಕ್ಕೆ ಸಂಬಂಧಿಸಿದವರಿಗೆ ಸಂದದ್ದು ಇದರ ದುರಂತ. ಇಂದಿಗೂ ಇದನ್ನು ಸಂಪೂರ್ಣವಾಗಿ ನಿಲ್ಲಿಸುವುದು ಸಾಧ್ಯವಾಗಿಲ್ಲ. ಕೆಳಜಾತಿಗಳಲ್ಲಿಯೇ 'ಜೊಗತಿ'ಬಿಡುವ ಸಂಪ್ರದಾಯವಿದೆ.

ಜೋಗತಿಯರು ಕೊರಳಲ್ಲಿ ಕವಡಿಸರ, ಹಣೆಯಲ್ಲಿ ಭಂಡಾರ, ತಲೆಯ ಮೇಲೆ ಪರಡಿ, ಕೈಯಲ್ಲಿ ದೀವಟಿಗೆ, ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ತುಂತುಣಿವಾದ್ಯದ ಜೊತೆ ದೇವಿಯ ಮಹಿಮೆ ಸಾರುವ ಹಾಡುಗಳನ್ನು ಹಾಡುತ್ತಾ ನರ್ತಿಸುವರು. ದೇವಿಯ ಹೆಸರಲ್ಲಿ ಭಿಕ್ಷೆಬೇಡುವರು, ಹೊಟ್ಟೆಹೊರೆಯಲು ಎಲ್ಲೆಡೆ ಚದುರಿ ಹೋಗಿದ್ದರೂ ಜಾತ್ರೆಗೆ ತಪ್ಪದೆ ಬಂದು ಸೇವೆ ಸಲ್ಲಿಸುತ್ತಾರೆ.

ಹೀಗೆ ಜೋಗತಿ ಬಿಡುವ ವಿವರ ಅನೇಕ ಕಥೆಗಳಲ್ಲಿ ಬಂದಿದ್ದು ಅವುಗಳ ಆಶಯವೇನೆಂಬುದನ್ನು ಅಂಥ ಮಹಿಳೆಯ ಬದುಕಿನ ಮೇಲಾದ ಪರಿಣಾಮಗಳನ್ನು ಮುಂದೆ ಪರಿಶೀಲಿಸುವ.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಗೀತಾ ನಾಗಭೂಷಣರ 'ಮಾಪುರ ತಾಯಿಯ ಮಕ್ಕಳು' ಕಾದಂಬರಿಯ ಸಿಂಗಾರಿ, 'ಬದುಕು' ಕಾದಂಬರಿಯ ನೀಲವ್ವ ಹಾಗೂ ತುಳಜಾ, ಬಾಲಚಂದ್ರ ಜಯಶೆಟ್ಟಿಯವರ 'ಎಲ್ಲಮ್ಮನ ಸೇವೆ' ಕಥೆಯ ಚನ್ನಿ, ಶಿವಕುಮಾರ ನಾಗವಾರರ 'ಕಾಮನ ಬಿಲ್ಲು' ಕಥೆಯ ಮಾದಿ ಈ ಸಂಪ್ರದಾಯಕ್ಕೆ ಸಿಲುಕಿದ ಮಹಿಳೆಯರು.

ಜೋಗತಿ ಸಂಪ್ರದಾಯ ಮಹಿಳೆಯ ಮೇಲೆ ಹೇರಲಾದ ಅನಿಷ್ಟ ಸಂಪ್ರದಾಯ. ಹೆಣ್ಣನ್ನು ಬೇವಿನ ಉಡುಗೆಯಲ್ಲಿ ಇಲ್ಲವೇ ಬೆತ್ತಲೆಯಾಗಿ ನೋಡುವ ಚಪಲಕ್ಕೆ ಧರ್ಮಸಮ್ಮತಿಯ ಮೊಹರು ಹಾಕಲಾಗಿದೆ. ಧರ್ಮವು ಪುರುಷ ನಿರ್ಮಿತವೇ ಆಗಿದ್ದು, ಅವನ ಅನುಕೂಲಕ್ಕೆ ತಕ್ಕಂತೆ ನೀತಿ ನಿಯಮಗಳು ರೂಪಿತವಾಗಿವೆ. ದೈವಿ ಭಯದ ಮಾನಸಿಕ ಪಾತಳಿಯಲ್ಲಿ ಆರ್ಥಿಕ ಅತಂತ್ರತೆಯನ್ನು ಸೃಷ್ಟಿಸಿ ಜೋಗತಿಯ ಬದುಕನ್ನು ಪಿತೃ ವ್ಯವಸ್ಥೆ ತನ್ನ ಹಿಡಿತದಲ್ಲಿರಿಸಿಕೊಂಡಿದೆ. ಹೀಗೆ ಕಾನೂನಿನನ್ವಯ ನಿಷೇದಗೊಂಡಿದ್ದರೂ, ಹಿಂದಿಗೂ ಅಲ್ಲಲ್ಲಿ ಜೋಗತಿ ಬಿಡುವುದು ನಡದೇ ಇದೆ. ಕಾನೂನಿಗೆ ಹೆದರಿ ಈಗ ಸಾರ್ವಜನಿಕವಾಗಿ ನಡೆಯುತ್ತಿಲ್ಲ. ಹೆಣ್ಣಿಗೆ ಮದುವೆ ಮಾಡಲೇಬೇಕೆಂಬ ಕಾನೂನಿನ ಒತ್ತಾಯದಂತೆ ಬಾಡಿಗೆ ಗಂಡಿನೊಂದಿಗೆ ವಿವಾಹ ಪ್ರಹಸನ ನಡೆಯುತ್ತದೆ. ಹಣಕ್ಕಾಗಿಯೇ ಮದುವೆಯಾಗುವ ಗಂಡು ಅನಂತರ ಅದಕ್ಕೂ ತನಗೂ ಯಾವುದೇ ಸಂಬಂಧವಿಲ್ಲದಂತೆ ಹೊರಟುಹೋಗುತ್ತಾನೆ. ಜೋಗತಿ ಮನೆತನದ ಹೆಣ್ಣುಗಳೊಂದಿಗೆ ವಿವಾಹವಾದರೆ

ದೇವರ ಶಾಪ ತಟ್ಟಿ ವಿವಾಹವಾದವನ ಬದುಕು ಸರ್ವನಾಶವಾಗುತ್ತದೆ ಎಂಬ ನಂಬಿಕೆ ನೆಲೆಗೊಂಡಿರುವುದನ್ನು ಹಿಂದಿನ ಅಧ್ಯಾಯದಲ್ಲಿಯೇ ಪರಿಶೀಲಿಸಲಾಗಿದೆ. ಹೀಗಾಗಿ ಇಂದಿಗೂ ಈ ಮಹಿಳೆಯರ ವಿವಾಹ ಮರೀಚಿಕೆಯಾಗಿದೆ.

ಗೀತಾ ನಾಗಭೂಷಣ ಅವರ 'ಮಾಪುರ ತಾಯಿಯ ಮಕ್ಕಳು' ಕಾದಂಬರಿ ಜೋಗತಿ ಸಂಪ್ರದಾಯದಿಂದ ಬದುಕೆಲ್ಲ ನರಳಿದ ಸಿಂಗಾರಿಯ ಗೋಳನ್ನು ಅಂಥ ಸುಳಿಗೆ ಸಿಕ್ಕ ಇತರ ಹೆಂಗಸರ ಬದುಕನ್ನು ರಕ್ಷಿಸುವ ಆಶಯವನ್ನು ವಸ್ತುವಾಗಿ ಚಿತ್ರಿಸಿದೆ.

ಸಿಂಗಾರಿ ಹೊಲೆಯರ ಚಂದಪ್ಪ ದುರ್ಗವ್ವ ದಂಪತಿಗಳ ಪ್ರೀತಿಯ ಮಗಳು. ದುರ್ಗವ್ವನ ತಮ್ಮ ಶಿವರುದ್ರನ ಜೊತೆ ಜಗಳ ಕಾಯುತ್ತಲೆ ಅವನ ಪ್ರೀತಿಗೆ ಸೆರೆಯಾದವಳು. ಈ ಪ್ರೇಮ ಚಿಗುರಿ ಹೊಂಗನಸು ಕಾಣುತ್ತಿರುವಾಗಲೆ ಪೂಜಾರಿಯ ಮೈಯಲ್ಲಿ ಬಂದ ಮಾಪುರ ತಾಯಿ, ಜ್ವರದಿಂದ ಬಳಲಿದ ಸಿಂಗಾರಿ ಬದುಕಿ ಉಳಿಯಬೇಕಾದರೆ ಆಕೆಯನ್ನು ಜೋಗಿಣಿ ಬಿಡಬೇಕು ಎಂದು ಅಪ್ಪಣೆ ಕೊಟ್ಟಳು. ಮುಗ್ಧ ತಂದೆ ಇದಕ್ಕೆ ಒಪ್ಪಿಕೊಂಡರು ಶಿವರುದ್ರ ಸಿಂಗಾರಿಯನ್ನು ರಕ್ಷಿಸಲು ಹೋರಾಡುತ್ತಾನೆ. ಗೌಡ ಕುಲಕರ್ಣಿಯ ಸಂಚಿನಂತೆ ಹೊಲೆಯರೇ ಆದ ಅವರ ಆಳುಗಳು ಶಿವರುದ್ರನನ್ನು ಕೊಲ್ಲುತ್ತಾರೆ. ಸಿಂಗಾರಿ ಜೋಗುಣಿಯಾಗುತ್ತಾಳೆ. ಕೆಲ ದಿನಗಳ ನಂತರ ಮುಂಬೈಯ ಕೋಠಿಯೊಂದಕ್ಕೆ ಮಾರಾಟವಾಗುತ್ತಾಳೆ. ಸಿಂಗಾರಿಯಿಂದ ಚಮೇಲಿಬಾಯಿಯಾಗುತ್ತಾಳೆ. ಇವಳ ರೂಪಕ್ಕೆ ಮರುಳಾದ ಸೇಠ್ ಚಮನಲಾಲ್ ಘರವಾಲಿಗೆ ಕೇಳಿದಷ್ಟು ದುಡ್ಡು ಕೊಟ್ಟು ಚಮೇಲಿಯನ್ನು ಖರೀದಿಸುತ್ತಾನೆ. ಅವಳಿಗೆ ಒಂದಷ್ಟು ಆಸ್ತಿ ಬಿಟ್ಟು ಸಾಯುತ್ತಾನೆ. ಚಮೇಲಿ ಅದನ್ನೆಲ್ಲ ಮಾರಿ ಊರಿಗೆ ಮರಳಿ ಶಿವರುದ್ರನ ತೋಟದಲ್ಲಿ ಮನೆಮಾಡಿಕೊಂಡಿರುತ್ತಾಳೆ. ಮಾದೇವಿಯನ್ನು ಜೋಗುಣಿ ಬಿಡಲು ಸಿದ್ಧತೆ ನಡೆದಾಗ, ಅವಳನ್ನು ಪ್ರೀತಿಸುತ್ತಿದ್ದ ಶಂಕ್ರನೊಂದಿಗೆ ಪೋಲಿಸರ ಸಮ್ಮುಖದಲ್ಲಿ ಮದುವೆ ಮಾಡಿಸುತ್ತಾಳೆ. ಜೋಗುಣಿಯಾಗಿ ತಮಗೆ ಮಾರಲು ಸಿಗಬಹುದಾದ ಒಂದು ಹೆಣ್ಣಿನ ಮದುವೆ ಮಾಡಿ ತಮಗೆ ಬರಬಹುದಾದ ೧೦,೦೦೦ಕ್ಕೆ ಕಲ್ಲು ಹಾಕಿದ ಸಿಂಗಾರಿಯನ್ನು ದಲ್ಲಾಳಿಗಳು ಇರಿದು ಕೊಲ್ಲುತ್ತಾರೆ. ಸಿಂಗಾರಿ ಒಂದು ಅನಿಷ್ಠ ಸಂಪ್ರದಾಯವನ್ನು ನಿಲ್ಲಿಸಲೆಂದು ತನ್ನ ಪ್ರೀತಿಯನ್ನು ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾಳೆ.

ಕಾದಂಬರಿಯಲ್ಲಿ ಪುರುಷನ ಮುಕ್ತ ಲೈಂಗಿಕತೆಯನ್ನು ಹೇಗೆ ಬೆಂಬಲಿಸಲಾಗಿದೆ. ಎಂಬುದನ್ನು ಗೀತಾ ಅವರು ಚಂದಪ್ಪನ ತಾಯಿ ಮುಖಾಂತರ ಹೇಳಿಸಿದ್ದು ಹೀಗೆ 'ಅಲ್ಲಗ... ನಿನಗೇನು ಅಂವಾ ಕಮ್ಮಿ ಮಾಡ್ಯಾನಂತ ಈ ಪಾಟಿ ರಂಪಾ ಮಾಡ್ತೇ ದುರ್ಗಿ? ಆಳವನಿಗೆ ಅವರತ್ತು ಮಂದಿ ಹೆಂಡ್ರು, ಹತ್ತು ಹೆಣ್ಣಗೋಳಿಗೆ ಆಳಾ ತಾಕತ್ ಅದಾ ನನ್ ಮಗನ ಬಲ್ಲಿ. ಕೈಯಾಗ ರೊಕ್ಕ ಮೈಯಾಗ ಸೊಕ್ಕ ಇದ್ದಮ್ಯಾಗ ಗಂಡಸರೆಂದೂ ಹೆಂಡರ ಗುಲಾಮರಾಗಂಗಿಲ್ಲ.'[೧೪೪]

ಜೋಗುಣಿ ಸಂಪ್ರದಾಯದ ಹಿಂದೆ ಪುರುಷ ಪ್ರಧಾನ ವ್ಯವಸ್ಥೆಯ ಬಹುದೊಡ್ಡ ರಾಜಕಾರಣವೆ ಅಡಗಿರುವುದನ್ನು ಕಾದಂಬರಿ ಸರಿಯಾಗಿಯೆ ಗುರುತಿಸಿದೆ. ಸಿಂಗಾರಿಯನ್ನು ಜೋಗಣಿಯಾಗಿಸಲು ಹಿಂದೇಟು ಹಾಕುವ ಚಂದಪ್ಪ ದುರ್ಗವ್ವರನ್ನು ಮಾನಸಿಕವಾಗಿ ಸಿದ್ಧರಾಗುವಂತೆ ಮಾಡಲು ಹೊಲೆಯರ ಗುಡಿಸಲುಗಳಿಗೆ ಬೆಂಕಿ ಇಟ್ಟು ಅದು ಮಾಪುರ ತಾಯಿಯ ಕೋಪದಿಂದ ಆದದ್ದು ಎಂದು ಹೇಳಲಾಗುತ್ತದೆ. ಗುಡಿಸಲು

ವಾಸಿಗಳು ದುಃಖಿಸಿ ಗೋಳಾಡುವಾಗ ಬಂದ ಗೌಡ, ಅವರ ಗುಡಿಸಲುಗಳಿಗೆ ಬೇಕಾದ ವಸ್ತುಗಳನ್ನು ಕೊಡುವ ಉದಾರತೆ ತೋರುತ್ತಾನೆ. ಹೀಗೆ ತಾವೇ ಸೃಷ್ಟಿಸಿದ ಜಾಲಕ್ಕೆ ಬಡವರು ಅನಿವಾರ್ಯವಾಗಿ ಅವಲಂಬಿಸುವಂತೆ ಮಾಡಿ ತಮಗೆ ಬೇಕಾದ ನಿಯಮಗಳನ್ನು ಅವರ ಮೇಲೆ ಹೇರುತ್ತಾರೆ. ಜೊತೆಗೆ 'ಸಿಂಗಾರಿಗೆ ಜೋಗಣಿ ಬಿಡು ನನ್ನ ಸೇವಾಕ... ಅಂದ್ರೇ ಅಕಿ ಉಳಿತಾಳ ಇಲ್ಲಂದ್ರ... ಬಾಳಿ ಹಣ್ಣ ನುಂಗೋ ಹಾಂಗ ಅಕಿಗಿ ನುಂಗಿ ಬಿಡ್ತಿನೋ.... ನಿಮ್ಮನ್ಯಾಗ ರಗತದ ಕಾಲವಿ ಹರಸ್ತಿನೋ ತಮ್ಮ... ರಗತದ ನಾಲಿಗಿ ಚಾಚಿ ಅಳ್ಳ ಹುರ್ದಂಗ ನಿನ್ ಮನ್ಯಾನ ಮಂದಿಗಿ ಹುರ್ದು ಮುಕ್ಕತೀನಿ ಇದ್ದೊಬ್ಬ ನಿನ್ ಮಗನಿಗಿ ಸೀರಿ ಉಡಿಸಿ, ಬಳಿ ತೊಡಿಸಿ ತೆಲಿ ಮ್ಯಾಲ ನನ್ ಪರಡಿ ಹೊರಸ್ತಿನೋ' ಎಂದು ಭಯ ಹುಟ್ಟಿಸಿ ಮಾನಸಿಕ ದೌರ್ಬಲ್ಯಕ್ಕೀಡಾಗುವಂತೆ ಮಾಡಲಾಗುತ್ತದೆ. ತನ್ನ ತಂದೆ ತಾಯಿಗಳ ಅಜ್ಞಾನದಿಂದ ಹಾಳಾದ ತನ್ನ ಬದುಕಿನಂತೆ ಬೇರೆ ಹೆಣ್ಣುಮಕ್ಕಳ ಬದುಕು ಹಾಳಾಗಬಾರದೆಂದು ಚಮೇಲಿ ಮುಂಬೈಗೆ ಹುಡುಗಿಯರನ್ನು ಮಾರಲು ಬರುವ ದಲ್ಲಾಳಿಗಳಿಂದ ತಾನೇ ಅವರನ್ನುಕೊಂಡು ಅವರ ಭವಿಷ್ಯ ರೂಪಿಸಲು ಯತ್ನಿಸುತ್ತಾಳೆ. ಅಷ್ಟೇ ಅಲ್ಲ ತಮ್ಮೂರ ಮಹಾದೇವಿ ಜೋಗಣಿಯಾಗುವುದನ್ನು ತಪ್ಪಿಸಿ ಮದುವೆ ಮಾಡುವುದು ಕಾದಂಬರಿಯ ಸುಧಾರಣಾವಾದಿ ದೃಷ್ಟಿಯನ್ನು ತೋರಿಸುತ್ತದೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಲ್ಲಿ ಜೋಗುಣಿ ಪದ್ಧತಿಗೆ ಬಲಿಯಾಗುವ ನೀಲವ್ವ, ಜೋಗಣಿಯಾಗಿಯೂ ವೈವಾಹಿಕ ಬದುಕನ್ನು ಪ್ರವೇಶಿಸುವ ತುಳಜಾಳ ಎರಡು ಮಾದರಿಗಳನ್ನು ಗುರುತಿಸುಬಹುದು.

ತನ್ನದೇ ಆದ ಆಪ್ತ ಅಪ್ಯಾಯಮಾನ ಕನಸು ಕನವರಿಕೆಗಳಿಗೆ ರೂಪ ನೀಡಬಹುದಾದ ಬಯಕೆ ಭಾವನೆಗಳಿಗೆ ಆಸರೆಯಾಗಬಹುದಾದ, ಸುಂದರ ಭಾವ ಪ್ರಪಂಚವೊಂದರ ನಿರೀಕ್ಷೆಯನ್ನಿರಿಸಿಕೊಂಡು, ಆ ಕನಸಿನ ಗೋಪುರ ಭಗ್ನವಾದಾಗ ಸಾವಿಗೆ ಶರಣಾಗುತ್ತಾಳೆ ನೀಲವ್ವ. ಜಮಾದಾರ ಮಲ್ಲಪ್ಪನ ದೊಡ್ಡಿಯ ಹೊಲೆಯ ಭರಮಪ್ಪನ ಮಗಳು ನೀಲವ್ವ, ತಂದೆ ತಾಯಿಯ ಹರಕೆಗೆ ಜೋಗಣಿ ಪಟ್ಟ ಕಟ್ಟಿಸಿಕೊಂಡು ಹೀನ ಬಾಳು ಬಾಳಲಾಗದೆ, ಆತ್ಮಹತ್ಯೆ ಮಾಡಿಕೊಂಡ ನತದೃಷ್ಟೆ.

ತಂದೆ ಭರಮಪ್ಪನ ಹರಕೆಯ ಅರಿವಿದ್ದೂ, ತುಕ್ಕಪ್ಪನನ್ನು ಮನಸಾರೆ ಪ್ರೀತಿಸಿ, ಎಲ್ಲಾದರೂ ದೂರ ಹೋಗಿ ಮದುವೆಯಾಗಿ, ಗರತಿಯಂತೆ ಬಾಳಬೇಕೆಂದು ಆಶಿಸಿದ್ದಳು ನೀಲವ್ವ. ತುಕ್ಕಪ್ಪ ಅದಕ್ಕೆ ಒತ್ತಾಸೆ ನೀಡಿದ್ದ. ಆದರೆ ಸುಳಿವರಿತ ಭರಮಪ್ಪ ಮಗಳು ಎಷ್ಟೇ ಅಲ್ಪರಿದು ಬೇಡಿದರೂ ಒಪ್ಪದೆ, ಜೋಗುಣಿ ಪಟ್ಟ ಕಟ್ಟಿಸಿಯೇ ಬಿಟ್ಟ. ದಲಿತ ಜನಾಂಗದವನೇ ಆದ ಪೂಜಾರಿ ವೈದಿಕ ಸಂಸ್ಕತಿಯ ಏಜಂಟನಂತೆ ಪಟ್ಟಭದ್ರರ ಆಮಿಷಕ್ಕೆ ಬಲಿಯಾಗಿ, ಹೇಳಿಕೆಯ ನೆವದಲ್ಲಿ ಹುಟ್ಟು ಹಾಕಿದ್ದ ದೈವಿಭಯ, ದಲಿತರ ವಿಚಾರಶಕ್ತಿಯನ್ನು ಮೊಟಕುಗೊಳಿಸಿತ್ತು. ಪಿತೃ ಪ್ರಧಾನ ಸಂಸ್ಕೃತಿಯಲ್ಲಿ ಪುರುಷನಾಗಿರುವುದೆ ಔನತ್ಯದ ಸಂಕೇತ. ಅಂಥ ಪುರುಷತ್ವ ಹರಕೆ ತಪ್ಪುವ ಮೂಲಕ ಇಲ್ಲವಾಗುತ್ತದೆ ಎಂಬುದೇ ಭಯಂಕರ ಸಂಗತಿ. ಅಷ್ಟಲ್ಲದೆ ವಂಶ ನಿರ್ವಂಶವಾಗುವ ಮತ್ತೊಂದು ಅಷ್ಟೇ ಭಯಂಕರವಾದ ಭಯವನ್ನು ಹರಡಿ ದಲಿತರನ್ನು ತಮ್ಮ ಬಿಗಿ ಮುಷ್ಠಿಯಲ್ಲಿಟ್ಟುಕೊಂಡ ಮೇಲುವರ್ಗ ತನಗೆ ಬೇಕಾದಂತೆ ಅವರನ್ನು ಬಳಸಿಕೊಳ್ಳುತ್ತದೆ.

'ನೀ ಹರಕಿ ಹೇಳ್ಕೊಂಡಂಗ ನಡೀಲಿಲ್ಲಂದ್ರ ಆ ದೇವಿ ನಿನ್ನ ಸಂಸಾರೆಲ್ಲಾ ನಾಶ ಮಾಡಿ ಬಿಡ್ತಾಳ. ನಿನ್ನ ವಂಸ ನಿರ್ವಂಸ ಮಾಡ್ತಾಳ. ನಿನ್ನ ಮೀಸಿ ಜೋಳ್ಸಿ ನಿನ್ನ ಗಂಡಸ್ತನ ಕಳ್ಳು ನಿನಗ ಸೀರಿ ಉಡ್ಸಿ, ಹಸರ ಬಳಿ ತೊಡ್ಸಿ ನೆತ್ತಿ ಮ್ಯಾಲಿ ಪರಡಿ ಹೊರಸ್ತಾಳ. ನೋಡು ಹುಷಾರ್' ಎಂಬ ಪೂಜಾರಿಯ ಹೇಳಿಕೆಗೆ ಭರಮಪ್ಪ ಗಾಬರಿಗೊಂಡು ಮಗಳನ್ನು ಜೋಗುಣಿಯಾಗಿಸುತ್ತಾನೆ.

ತನ್ನ ಪುರುಷತ್ವ ಮತ್ತು ವಂಶದ ಮುಂದೆ ಭರಮಪ್ಪನಿಗೆ ಮಗಳ ಬದುಕು ಮುಖ್ಯವಾಗುವುದಿಲ್ಲ. ತಂದೆಯಿಂದ ನಿರಾಶಳಾದ ನೀಲವ್ವ ಪ್ರೀತಿಸಿದ ತುಕ್ಕಪ್ಪನಾದರೂ ತನಗೊಂದು ಬಾಳು ಕೊಡಬಹುದೆಂದು ಆಶಿಸಿದಾಗ ಅವನೂ 'ಕೆಟ್ಟ ಹೆಣ್ಣಿಗೆ ನಾ ಮದ್ವಿ ಆಗಂಗಿಲ್ಲ' ಎಂದು ಹೇಳುತ್ತಾನೆ. ಎಲ್ಲಿ ಹೆಣ್ಣಿನ ಶೀಲವನ್ನು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ ರಕ್ಷಿಸಬೇಕೆಂದು ಹೇಳಿದೆಯೋ ಅಲ್ಲಿಯೆ ತಂದೆ ಮಗಳನ್ನು ಪಟ್ಟಕ್ಕೆ ಹಾಕುವ, ಪ್ರೀತಿಸಿಯೂ ಜಾರಿಕೊಳ್ಳುವ ಪುರುಷರು ಇದ್ದಾರೆ. ತನ್ನ ಪುರುಷತ್ವದ ಉಳಿವಿಗಾಗಿ ಮಗಳನ್ನೇ ಬಲಿಯಾಗಿಸುವ ತಂದೆ ಯಯಾತಿಯ ಪ್ರತಿರೂಪದಂತೆ ಭಾಸವಾಗುತ್ತಾನೆ.

ನೀಲವ್ವಳನ್ನು ಜೋಗುಣಿಯಾಗಿ ಮಾಡಬಾರದಾಗಿತ್ತು ಎಂದು ಹೇಳುವ ಮಲ್ಲಪ್ಪ, ಮರುಕ್ಷಣ ಮಾಪುರತಾಯಿಯ ನೆನಪಾಗಿ, ಗಲ್ಲಗಲ್ಲ ಬಡಿದುಕೊಳ್ಳುವ ದೃಶ್ಯ, ಜನಮಾನಸದಲ್ಲಿ ಬೇರೂರಿರುವ ಪಾಪ ಪ್ರಜ್ಞೆಯ ಆಳವನ್ನು ದರ್ಶಿಸುತ್ತದೆ. ಮಾಪುರ ತಾಯಿ 'ತಾನೊಂದು ಹೆಣ್ಣಾಗಿ ಹೆಣ್ಣುಮಕ್ಕಳಿಗಿ ಜೋಗುಣಿ ಆಗಿ ತನ್ನ ಸೇವಾಕ್ಕ ನಿಂತು ಬಂದ ಗಂಡಸರ ತೆಳಗೆ ಸೆರಗ ಹಾಸಿ ಹಾದರ ಮಾಡಂತ ಹೇಳ್ತಾಳಂತೀಯೇನು?' ಎಂಬ ಮಲ್ಲವಳ ಪ್ರಶ್ನೆಯಲ್ಲಿ ಲೇಖಕಿ ಸಂಪ್ರದಾಯದ ಸತ್ಯಾಸತ್ಯತೆಯ ಕುರಿತು ಆಲೋಚಿಸುವಂತೆ ಮಾಡುತ್ತಾರೆ.

ಜಾತಿ ವ್ಯವಸ್ಥೆಯ ವಿಕೃತಿಯಂತಿರುವ 'ಜೋಗುಣಿ' ಸಂಪ್ರದಾಯವನ್ನು ಲೇಖಕಿ, ವಿವರ ವಿವರವಾಗಿ ತೆರೆದಿಡುತ್ತಾರೆ. ಈ ಸಂಪ್ರದಾಯದ ನೆಪದಲ್ಲಿ ಕೆಳಜಾತಿಯ ಹೆಂಗಸರ ಚಲುವಿಗೆ ಮಾರು ಹೋಗಿ, ಅವರನ್ನು ಹರೆಯದ ದಿನಗಳಲ್ಲಿ ಬಳಸಿಕೊಂಡು ಆ ಮೇಲೆ ಬಿಸಾಡಿ ಬಿಡುವ ಮೇಲ್ಜಾತಿ ಗಂಡಸರು, ಅವರು ಕೊಡುವ ದುಡ್ಡಿಗೆ ಆಸೆ ಬಿದ್ದು, ಅವರು ಹೇಳಿದಂತೆ ಕೇಳುವ ಕೆಳಜಾತಿಯವನೇ ಆದರೂ ಅವರ ಕೈಗೊಂಬೆಯಾಗಿ ವರ್ತಿಸುವ ಪೂಜಾರಿ, ಗರತಿಯ ಬಾಳನ್ನು ಬಾಳಬೇಕೆಂಬ ಆಸೆ ಇದ್ದರೂ ಹರಕೆಯ ಹೆಸರಲ್ಲಿ ಜೋಗುಣಿಯರಾಗಬೇಕಾಗಿ ಬರುವ ಹೆಣ್ಣಳ ದುರಂತ, ತಾಯ್ತಂದೆಯರ ಮೌಢ್ಯ, ಮೌಢ್ಯದಿಂದ ಬೆಳೆದು ಬಂದ ದೈವಿಭಯ, ಹೆಣ್ಣು ಕೀಳಾಗಿ ಬದುಕಬೇಕೆಂದು ದೇವತೆ ಹೇಳುತ್ತಾಳೆಯೇ ಎಂಬ ವಿಚಾರ ಮೊಳೆತರೂ ಆಡಲು ಭಯ ಪಡುವ ಜನ ಮುಂತಾದವೆಲ್ಲ ಕಾದಂಬರಿಯಲ್ಲಿ ಚರ್ಚೆಗೊಳ್ಳುತ್ತವೆ.

ತುಕಾರಾಮನನ್ನು ಪ್ರೀತಿಸಿ, ಬಲವಂತಕ್ಕೆ ಜೋಗುಣಿಯಾಗಿ ತುಕಾರಾಮನಿಂದ ತಿರಸ್ಕೃತಳಾಗಿ ಆತ್ಮಹತ್ಯೆ ಮಾಡಿಕೊಳ್ಳುವ ನೀಲವ್ವ ಈ ಅನಿಷ್ಟ ಸಂಪ್ರದಾಯದ ವಿಷಾದನೀಯ ಮುಖವಾದರೆ, ತುಳಜಾಳ ಪ್ರಸಂಗ ವೈಚಾರಿಕ ನೆಲೆಯಲ್ಲಿ ಇತ್ಯಾತ್ಮಕವಾಗಿ ಚಿತ್ರಣಗೊಳ್ಳುತ್ತವೆ. ಜೋಗುಣಿಯಾದ ತುಳಜಾ ಕಲಬುರ್ಗಿಗೆ ಬಂದಾಗ ಹುಸೇನಪ್ಪನ ದೃಷ್ಟಿಗೆ ಬಿದ್ದು ಪರಸ್ಪರ ಒಪ್ಪಿಗೆಯ ಮೇರೆಗೆ ಮದುವೆಯಾಗುತ್ತಾರೆ. ನಂತರ ಹಳ್ಳಿಗೆ ಬಂದಾಗ

ಗೊಂದಲವೇಳುತ್ತದೆ. ಹೀಗೆಯೆ ಬಿಟ್ಟರೆ ಎಲ್ಲ ಜೋಗುಣಿಯರೂ ಮದುವೆಯಾಗಿ ತಮ್ಮ ಭೋಗಕ್ಕೆ ಹೆಣ್ಣುಗಳು ಸಿಕ್ಕದೆ ಹೋದಾರೆಂದು ಮೇಲ್ಜಾತಿ ಜನ ಏರ್ಪಡಿಸುವ ಪಂಚಾಯ್ತಿ. ಆ ಪಂಚಾಯ್ತಿಯಲ್ಲಿ ಅತ್ಯಂತ ದಿಟ್ಟತನದಿಂದ ಇಡೀ ಜೋಗುಣಿ ಪದ್ಧತಿಯ ಮೌಢ್ಯ, ದೋಷ ಮತ್ತು ಮೋಸಗಳನ್ನು ಧಿಕ್ಕರಿಸಿ ನಿಲ್ಲುವ ತುಳಜಾ ಲೇಖಕಿಯ ವೈಚಾರಿಕತೆಯ ಅಭಿವ್ಯಕ್ತಿಯಾಗಿದ್ದಾಳೆ.

ಬಸವಿಯಾದರೂ ತಾನು ಪ್ರೇಮಿಸಿದ ಸುಖರಾಮನೊಂದಿಗೆ ತನ್ನ ಬದುಕನ್ನು ಬೆಸೆಯುವ ಅದಕ್ಕೆ ಸುಖರಾಮನೂ ಬೆಂಬಲವಾಗುವ ವಸ್ತುವುಳ್ಳದ್ದು ಶರಣಪ್ಪ ವಡಗೇರಿಯವರ 'ಮಾಯಕಾರತಿ' ಕಥೆ. ಬಸವಿಯಾದವಳು ಸಾರ್ವಜನಿಕರ ಸ್ವತ್ತು. ಗರತಿಯಂತೆ ಒಬ್ಬನೊಂದಿಗೇ ಬದುಕುವುದು ತಪ್ಪೆಂದು ಸಾವುಕಾರ ಮಾನಪ್ಪ ಪಂಚಾಯ್ತಿ ನೆರೆಸಿ, ಬಹಿಷ್ಕಾರ ಹಾಕುವ ಬೆದರಿಕೆ ಒಡ್ಡಿದಾಗಲೂ ದುರ್ಗಿ ತನ್ನ ನಿಲುವಿನಿಂದ ಬದಲಾಗುವುದಿಲ್ಲ. ಸುಖರಾಮ ಈ ಅವಾಂತರಗಳಿಂದ ತಪ್ಪಿಸಲು ತನ್ನ ಮನೆಗೇ ದುರ್ಗಿಯನ್ನು ಕರೆದೊಯ್ಯುವ ಸಾಹಸ ಮಾಡುವುದು ಸ್ವಲ್ಪ ಮಟ್ಟಿನ ಪ್ರಗತಿಯಾಗಿ ಕಥೆಯಲ್ಲಿ ಕಾಣಿಸುತ್ತದೆ. ಇಲ್ಲಿ ದುರ್ಗಿ ವಿವಾಹ ಸಂಸ್ಥೆ ಪ್ರವೇಶಿಸದೆ ಇದ್ದರೂ ಜಾತಿ ನಿಯಮಗಳಂತೆ ಇಟ್ಟುಕೊಂಡವಳೆ ಆದರೂ ತನ್ನಾಯ್ಕೆಯ ಸಂಗಾತಿಯೊಂದಿಗಿನ ಬದುಕನ್ನು ಪಡೆಯುವದಲ್ಲದೆ ಕೇರಿಯಿಂದ ಊರಿಗೆ ಪ್ರವೇಶ ಪಡೆಯುವುದನ್ನು ಕಥೆ ಚಿತ್ರಿಸುತ್ತದೆ. ದುರ್ಗಿ ಯಾರ ಒತ್ತಾಯಕ್ಕೂ ಮಣಿಯದ ದಿಟ್ಟಳಾಗಿ ಪ್ರತಿನಿಧೀಕರಿಸಲ್ಪಟ್ಟಿದ್ದಾಳೆ.

ಶಿವಕುಮಾರ ನಾಗವಾರರ 'ಕಾಮನಬಿಲ್ಲು' ಕಥೆ ಕೆಳ ಜಾತಿಗಳಲ್ಲಿಯ ಜೋಗತಿಯಂಥ ಅನಿಷ್ಠ ಸಂಪ್ರದಾಯ, ಮೂಢನಂಬಿಕೆಗಳು ಮಹಿಳೆಯ ಬದುಕನ್ನು ಹೀನಾಯಗೊಳಿಸಿದ ಶೋಷಿಸಿದ ವಸ್ತುವನ್ನು ಕೂಲಂಕಶವಾಗಿ ಚರ್ಚಿಸುತ್ತದೆ. ಮತಾಂತರವನ್ನು ಬಿಡುಗಡೆಯ ಮಾರ್ಗವಾಗಿ ಪರಿಭಾವಿಸುತ್ತದೆ.

ಶತಶತಮಾನಗಳಿಂದ ಜಾತಿ ಶ್ರೇಣೀಕರಣದ ಅಂಚಿನಲ್ಲಿದ್ದು ಅಸ್ಪೃಶ್ಯತೆಯ ಶಾಪದಲ್ಲಿ ನರಳುತ್ತಿರುವ ದಲಿತರು, ಮೇಲ್ ಜಾತಿಯವರು ಸೃಷ್ಟಿಸಿದ ನಿಯಮಗಳಲ್ಲಿ ಬಂಧಿತರಾಗಿ ಬದುಕಿದ್ದಾರೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಹೇಳಿದಷ್ಟು ಕೇಳಿಕೊಂಡು ಉಸಿರೆತ್ತದೆ ಸಂಪ್ರದಾಯಗಳನ್ನು ಪಾಲಿಸುತ್ತ ಬಂದಿದ್ದಾರೆ. ಮೇಲ್ಜಾತಿಯವರ ವಿವಾಹ ಬಾಹಿರ ಕಾಮತುಷ್ಟಿಗೆ ತಮ್ಮ ಹೆಣ್ಣುಗಳನ್ನು ಯಾವ ವಿರೋಧವೂ ಇಲ್ಲದೆ ದೇವರ ಹೆಸರಲ್ಲಿ ಒಪ್ಪಿಸಿದ್ದಾರೆ. ಶಿಕ್ಷಣ ವಂಚಿತರಾಗಿದ್ದು, ವೈಚಾರಿಕ ಚಿಂತನೆಯಿಂದ ದೂರಾಗಿ ಬದುಕುತ್ತ ಸಂಪ್ರದಾಯವನ್ನು ವಿರೋಧಿಸುವುದೂ, ದೇವರ ಮುನಿಸಿಗೆ ತುತ್ತಾಗುವುದು ಬೇಡವೆಂದು ಹಾಗೆ ಬದುಕುತ್ತ ಬಂದವರಿಗೆ, ಸ್ವಾತಂತ್ರ್ಯಾನಂತರ ದೊರೆತ ಶಿಕ್ಷಣ ಚಿಂತನಶೀಲರಾಗುವಂತೆ ಮಾಡುತ್ತದೆ. ಆದರೆ ದಲಿತರಾಗಿದ್ದುಕೊಂಡು ಸಂಪ್ರದಾಯವನ್ನು ವಿರೋಧಿಸುವದಾಗದೆಂದು ಭಾವಿಸುವ ಮಾದಿಯಪ್ಪ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುತ್ತಾನೆ.

ಈಗಾಗಲೆ ದಲಿತ ಚಲುವೆ ಮಾದಿಯನ್ನು 'ಜಾಣಿಯಾಗಿಸಲು' (ಜೋಗತಿ)ನಡೆದ ಆಲೋಚನೆಯನ್ನು ಮುರಿದು ಜೋಗತಿ ಪದ್ಧತಿಯ ಕುರಿತು ಸಂಶೋಧನೆಗೆ ಬಂದ ವ್ಯಕ್ತಿಯೊಂದಿಗೆ ಮಾದಿಯ ವಿವಾಹ ನಿಶ್ಚಯಿಸುತ್ತಾನೆ.

ದಲಿತನಾಗಿರುವವರೆಗೆ ಸಂಪ್ರದಾಯವನ್ನು ಮೀರಲಾಗದ ಮನಸ್ಥಿತಿಯಲ್ಲಿದ್ದ ಮಾದಿಯಪ್ಪನಿಗೆ ಮತಾಂತರ ಪ್ರಕ್ರಿಯೆ ಹೊಸ ಚೈತನ್ಯವನ್ನು ವಿಚಾರ ಶಕ್ತಿಯನ್ನು ನೀಡುತ್ತದೆ. ಅದು ದಲಿತ ಬದುಕಿನ ಬಿಡುಗಡೆಯ ಮಾರ್ಗವಾಗುತ್ತದೆಂಬುದನ್ನು ಕಥೆ ಚಿತ್ರಿಸುತ್ತದೆ. ವಾಸ್ತವ ಪ್ರಪಂಚದಲ್ಲೂ ದಲಿತರು ಬೌದ್ಧರಾಗಿ,

ಮುಸ್ಲಿಮರಾಗಿ ಇಲ್ಲವೆ ಕ್ರಿಶ್ಚಿಯನ್‌ರಾಗಿ ಮತಾಂತರಗೊಳ್ಳುತ್ತಿದ್ದಾರೆ. ಕಥೆ ನಿರೂಪಿಸುವಂತೆ ಮತಾಂತರವೇ ದಲಿತ ಬದುಕಿನ ಉನ್ನತೀಕರಣದ ಏಕೈಕ ಸೂತ್ರವಾಗದಾದರೂ, ಬದುಕನ್ನು ಸುಧಾರಿಸಬಹುದಾದ ಅಂಶಗಳಲ್ಲಿ ಅದೂ ಒಂದೆಂಬುದನ್ನು ಒಪ್ಪಬಹುದಾಗಿದೆ.

ಜೋಗತಿ ಸಂಪ್ರದಾಯಕ್ಕೆ ಒಳಪಟ್ಟ ಹೆಣ್ಣುಗಳು ಬಹುತೇಕ ಒತ್ತಾಯಕ್ಕೆ ಮಣಿದವರು. ಕೆಲವರು ಅನಿವಾರ್ಯವೆಂದು ಭಾವಿಸಿದವರು. ಮತ್ತೆ ನೀಲವ್ವನಂಥ ಕೆಲವರು ಅದನೊಲ್ಲದೆ ಆತ್ಮಾರ್ಪಣೆ ಮಾಡಿಕೊಂಡರೆ, ದುರ್ಗಿ ಏಕ ಸಂಗಾತಿಯೊಂದಿಗೆ ಕೊನೆವರೆಗೆ ಬದುಕುತ್ತಾಳೆ. ತುಳಜಾ ವಿವಾಹ ಸಂಸ್ಥೆ ಪ್ರವೇಶಿಸಿ ಗರತಿಯಾಗುತ್ತಾಳೆ. ಸಿಂಗಾರಿ ತಾನು ಜೋಗತಿಯಾದರೂ ಮಾದೇವಿ ಜೋಗತಿಯಾಗುವುದನ್ನು ತಪ್ಪಿಸುತ್ತಾಳೆ. ಮಾದಿಯಪ್ಪ ಈ ಅನಿಷ್ಟ ಪದ್ಧತಿಯಿಂದ ಪಾರಾಗಲೂ ಮತಾಂತರಗೊಳ್ಳುತ್ತಾನೆ. ಹೀಗೆ ಕಥನ ಸಾಹಿತ್ಯದಲ್ಲಿ ಜೋಗತಿ ಪದ್ಧತಿಯ ನಿವಾರಣೆಗೆ ದಾರಿಗಳನ್ನು ಸೂಕ್ಷ್ಮವಾಗಿ ನಿರೂಪಿಸುತ್ತದೆ.

೪.೫ ಮನೋವಲಯದ ಪ್ರತಿನಿಧೀಕರಣ :

ಮನುಷ್ಯ ಮನಸ್ಸು ಸರಳವಾದುದಲ್ಲ. ಸಂಕೀರ್ಣ ಮತ್ತು ಗಹನವಾದುದು. ಜಟಿಲ ಕುಟಿಲವಾದುದು ಕೂಡ. ಆದ್ದರಿಂದಲೇ ಅದು ಮನೋ ವಿಜ್ಞಾನದ ಅಧ್ಯಯನಕ್ಕೆ ವಸ್ತುವಾಗಿದೆ. ಮನಸ್ಸಿನಲ್ಲಿ ಮುಖ್ಯವಾಗಿ ಜಾಗೃತ ಮತ್ತು ಸುಪ್ತ ಎಂದು ಎರಡು ಸ್ತರಗಳನ್ನು ಗುರುತಿಸಲಾಗಿದೆ. ಜಾಗೃತ ಚಿತ್ತದಲ್ಲಿ ಬೆಳಕಿದ್ದರೆ. ಸುಪ್ತ ಚಿತ್ತದಲ್ಲಿ ಕತ್ತಲೆ ಇರುತ್ತದೆ.

'ಅಖಂಡವಾದ ಮನಸ್ಸು ವಿರಳವಾಗಿ ಎಲ್ಲೋ ಕೆಲವರಲ್ಲಿ ಇರಬಹುದು. ಉಳಿದವರಲ್ಲಿ ಮನಸ್ಸು ಹೋಳು ಹೋಳಾಗಿರುತ್ತದೆ. ಆದ್ದರಿಂದಲೇ ಮನುಷ್ಯ ಸ್ವಭಾವದಲ್ಲಿ ಅನಂತ ವೈವಿಧ್ಯವಿರುವುದು. ಸಾಹಿತ್ಯ ಈ ವೈವಿಧ್ಯವನ್ನು ಗ್ರಹಿಸಿ ಚಿತ್ರಿಸುತ್ತದೆ. ಮಾನವ ಚಿತ್ತದ ಹೋರಾಟ ಹೊಯ್ದಾಟಗಳನ್ನು ನಿರೂಪಿಸುತ್ತದೆ'.

೪.೫.೧ ಮನೋರೂಪಿಕೆಯಲ್ಲಿ ಸಾಮಾಜೀಕರಣ :

ವ್ಯಕ್ತಿಗೂ ಸಮಾಜಕ್ಕೂ ಅವಿನಾಭಾವ ಸಂಬಂಧವಿದ್ದು, ವ್ಯಕ್ತಿಯ ಇಡಿಯಾದ ವ್ಯಕ್ತಿತ್ವದ ರೂಪಿಕೆ ಸಮಾಜದಲ್ಲಿಯೆ ಆಗುತ್ತದೆ. ಸಮಾಜ ಎನ್ನುವುದು ಅನೇಕ ಸಂಸ್ಥೆಗಳನ್ನು ಒಳಗೊಂಡ ಸಂರಚನೆ. ಇಲ್ಲಿ ಸ್ಥಾಪಿತ ನಿಯಮಗಳಿದ್ದು ಅದರಂತೆ ನಡೆಯುವ ವ್ಯವಸ್ಥೆ ಇರುತ್ತದೆ. ಇದು ನಿರ್ಧಿಷ್ಟ ಉದ್ದೇಶ ಈಡೇರಿಸಲು ಹುಟ್ಟಿಕೊಂಡ ಸಂಸ್ಥೆಯಾಗಿದ್ದು ಈ ಉದ್ದೇಶದ ಅಡಿಯಲ್ಲಿಯೇ ಸಮಾಜವು ಜನ್ಮ ತಾಳಿದೆ. ಹೀಗೆ ಉದ್ದೇಶದ ಸಫಲತೆಗಾಗಿ ನಿರ್ದೇಶಿಸಲ್ಪಟ್ಟ ನೀತಿ ನಿಯಮಗಳನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆ ಸಮಾಜ ಇದಕ್ಕೆ ಪೂರಕವಾಗಿ ಕುಟುಂಬ, ವಿವಾಹ, ಧರ್ಮ ಮೊದಲಾದ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತವೆ. ಹೀಗೆ ವ್ಯಕ್ತಿಯು ಸಾಮಾಜೀಕರಣಕ್ಕೆ ಒಳಗುತ್ತಾಳೆತ್ತಾನೆ. ಒಟ್ಟಿನಲ್ಲಿ ವ್ಯಕ್ತಿ ಜೈವಿಕ ಸ್ಥಿತಿಯಿಂದಾಗಿ ಸಮಾಜ ಜೀವಿಯಾಗಿ ಪರಿವರ್ತನೆಗೊಳ್ಳುವುದು. ಸಾಮಾಜೀಕರಣವು ಪ್ರಬಲರ ಪರ ದುರ್ಬಲರ ವಿರೋಧವಾಗಿ ಸಂರಚಿತವಾದ ಸಂಕೀರ್ಣವಾದ ಪ್ರಕ್ರಿಯೆಯಾಗಿದೆ. ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾಜದ ಎಲ್ಲಾ ಕಾರ್ಯಗಳೂ ಪುರುಷ ನೇತೃತ್ವದಲ್ಲೇ ನಡೆಯುವುದರಿಂದ ಮಹಿಳೆಯು ಸತತವಾಗಿ ಅಂಚಿಗೆ ತಳ್ಳಲ್ಪಡುತ್ತಾಳೆ. ಹಾಗು ಶೋಷಣೆಯನ್ನು ಅನುಭವಿಸುತ್ತಾಳೆ. ಇಂತಹ ವಾತಾವರಣದಲ್ಲಿ ರೂಪಿತವಾದ ಮಹಿಳೆಯ ಮನೋ ರೂಪಿಕೆಯಲ್ಲಿ ಸಾಮಾಜೀಕರಣದ ಪಾತ್ರವು ರೂಪಿತವಾದ ಅತಿ ಮುಖ್ಯವಾದುದು.

ವಿಧೇಯತೆ ಸಾಮಾಜೀಕರಣದ ಸಾಮಾನ್ಯ ಲಕ್ಷಣವಾದುದರಿಂದ ಇಲ್ಲಿ ವ್ಯಕ್ತಿಗಳು ತಮ್ಮ ಮನಸ್ಸಿಗನುಗುಣವಾಗಿ ವರ್ತಿಸಲಾಗದೆ. ಸಾಮಾಜೀಕರಣದಿಂದ ನಿಯಂತ್ರಿಸಲ್ಪಟ್ಟಿರುತ್ತಾರೆ. ಸಮಾಜದ ನೀತಿ ನಿಯಮಗಳನ್ನು ಮೀರಿದ ವರ್ತನೆಗಳಿಗೆ ಅಪಸಾಮಾನ್ಯ ವರ್ತನೆಗಳೆಂದು ಕರೆಯಲಾಗುತ್ತವೆ. ಇಂಥ ಅಪಸಾಮಾನ್ಯ ವರ್ತನೆಯನ್ನು ಕಥನ ಸಾಹಿತ್ಯ ಪ್ರತಿನಿಧಿಸಿದ ಬಗೆಯನ್ನು ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

೪.೫.೨ ದೇವರು–ದೆವ್ವಗಳ ಬಳಕೆ

ಸಮಾಜದಲ್ಲಿ ಪ್ರತಿಯೊಂದು ಸಂಬಂಧಗಳೂ ಭಾವನಾತ್ಮಕವಾಗಿವೆ. ಆದರೆ ಇದಕ್ಕೆ ವಿರುದ್ಧವಾಗಿ ಕೆಲ ಸಂಬಂಧಗಳು ಮುಖವಾಡ ಹೊಂದಿದ್ದು, ಬಲವಾದ ಆಧಾರ ಪುರಾವೆಗಳಿಲ್ಲದೆ ಪಾರಂಪರಿಕವಾಗಿ ಜನರ ಮೌಢ್ಯ ಮತ್ತು ಮುಗ್ಧತೆಯನ್ನೇ ಬಂಡವಾಳ ಮಾಡಿಕೊಂಡು ಆಧುನೀಕರಣದಂಥ ಇಂದಿನ ಸಂದರ್ಭದಲ್ಲೂ ಅಸ್ತಿತ್ವದಲ್ಲಿವೆ. ಭಾವನಾತ್ಮಕ ನಂಬಿಕೆಗಳು ನಮ್ಮ ಪ್ರಗತಿಗೆ ಪೂರಕವಾಗಿದ್ದರೆ, ಮೂಢ ನಂಬಿಕೆಗಳು ಮಾರಕವಾಗಿವೆ. ಮೂಢ ನಂಬಿಕೆಗಳು ಎಷ್ಟರ ಮಟ್ಟಿಗೆ ನೆಲೆಗೊಂಡಿವೆ ಎಂದರೆ ಅವುಗಳಿಲ್ಲದೆ ದೈನಂದಿನ ಚಟುವಟಿಕೆಗಳೆ ಇಲ್ಲ ಎಂಬಂತಿದೆ. ಇಂಥ ನಂಬಿಕೆಗಳಿಗೆ ಧರ್ಮ–ಶಾಸ್ತ್ರ–ಪುರಾಣಗಳು ಪ್ರೇರಣೆಯಾಗಿದ್ದು ದೇವರು–ದೆವ್ವಗಳೆನ್ನುವ ಅಮೂರ್ತ ಕಲ್ಪನೆಗಳನ್ನು ಹುಟ್ಟು ಹಾಕಿವೆ. ದೇವರು–ದೆವ್ವ ಎರಡೂ ಅಮೂರ್ತವಾದರೂ ನಂಬಿಕೆಯ ನೆಲೆ ಭಿನ್ನವಾಗಿದೆ.

ದೇವರು ದೆವ್ವಗಳು ಭಿನ್ನ ಬಗೆಯಲ್ಲಿ ಭಯದ ಬೀಜವನ್ನು ಜನಮನದಲ್ಲಿ ಬಿತ್ತಿವೆ, ದೇವರು ಭಕ್ತಿಯಿಂದ ನಡೆದವರನ್ನು ಕಾಯುತ್ತಾನೆ ಎಂಬ ನಂಬಿಕೆಯೊಂದಿಗೆ ತಪ್ಪು ಮಾಡಿದರೆ ಶಿಕ್ಷಿಸುತ್ತಾನೆ ಎಂಬ ನಂಬಿಕೆಯೂ ನೆಲೆಗೊಂಡಿದೆ. ದೆವ್ವ ಮಾತ್ರ ಯಾವಾಗಲೂ ಪೀಡಿಸುವುದೇ ಆಗಿದೆ. ದೇವರನ್ನು ರಕ್ಷಣಾತ್ಮಕ ನೆಲೆಯಲ್ಲಿ ಗುರುತಿಸಿದರೆ ದೆವ್ವವನ್ನು ಶೋಷಣಾತ್ಮಕ ನೆಲೆಯಲ್ಲಿ ಗುರುತಿಸಲಾಗಿದೆ. ಆದರೆ ಅನೇಕ ಸಂದರ್ಭಗಳಲ್ಲಿ ದೇವರನ್ನು ಶೋಷಣೆಯ ಸಾಧನವಾಗಿ ಬಳಸಿರುವುದನ್ನು ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯ ನಿರೂಪಿಸುತ್ತದೆ.

ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಗೀತಾ ನಾಗಭೂಷಣರ 'ಬದುಕು' ಕಾದಂಬರಿಯ ನೀಲವ್ವಳನ್ನು ಜೋಗತಿಯಾಗಿಸುವಾಗ, ಜಂಬಣ್ಣಮರಚಿಂತರ 'ಕುರುಮಯ್ಯ ಅಂಕುಶ ದೊಡ್ಡಿ' ಕಾದಂಬರಿಯಲ್ಲಿ ಕೊರವರನ್ನು ಊರು ಬಿಡಿಸುವಾಗ, ಗೀತಾ ಅವರ 'ಢಾಲು' ಕಥೆಯ ಮಾಗಿ ಶೀಲ ರಕ್ಷಣೆಗೆ, ಭಾಲಚಂದ್ರ ಜಯಶೆಟ್ಟಿಯವರ 'ಎಲ್ಲಮ್ಮನ ಸೇವೆ' ಕಥೆಯಲ್ಲಿ ಚನ್ನಿಯನ್ನು ದೇವರಿಗೆ ಬಿಡಲು ಒತ್ತಾಯಿಸಿ, ಚಂದ್ರಕಾಂತ ಕುಸನೂರರ 'ಕೆರೂರ ನಾಮಾ' ಕಾದಂಬರಿಯ ಅಂಬವ್ವ ಬಡತನ ನೀಗಲು ದೇವರನ್ನು ಬಳಸಿಕೊಂಡರೆ ಭಾಲಚಂದ್ರ ಜಯಶೆಟ್ಟಿಯವರ 'ರಾಚಿ' ಕಥೆಯ ಮಾದನನ್ನು ಕೊಲ್ಲಲು ದೆವ್ವವನ್ನು ಬಳಸಿಕೊಳ್ಳಲಾಗಿದೆ. ಮುಂದೆ ಇವನ್ನು ವಿವರವಾಗಿ ನೋಡಬಹುದಾಗಿದೆ.

ಬದುಕು ಕಾದಂಬರಿಯಲ್ಲಿ ದೇವರು ಮೈಮೇಲೆ ಬರುವುದು ನೀಲವ್ವಳನ್ನು ಜೋಗಣಿ ಬಿಡಿಸಲೆಂದು ಮತ್ತು ಕಾಶಮ್ಮ ಗಂಡನ ಮನೆ ಬಿಟ್ಟು ಲಿಂಗರಾಜನ ಮನೆ ಸೇರುವ ಪೂರ್ವದಲ್ಲಿ.

ಮೊದಲ ಘಟನೆ ಸಮಾಜದಲ್ಲಿ ಜಾತಿ ವ್ಯವಸ್ಥೆಯ ಕಾರಣವಾಗಿ ನಿರ್ಮಾಣವಾದದ್ದು. ಸಾಮಾಜಿಕ ಜಾತಿ ಪದ್ಧತಿಯಲ್ಲಿ ಮೇಲು ವರ್ಗದವರು ಕೆಳವರ್ಗದವರನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಾರೆ. ಹಾಗೆ ಬಳಕೆಗೊಳ್ಳಲು ಒಪ್ಪದವರನ್ನು ದೇವರ ಹೆಸರು ಹೇಳಿ ಪಾಪ ಪ್ರಜ್ಞೆ ಬೆಳೆಸಿ, ಜೀವ ಭಯ ಹುಟ್ಟಿಸಿ ತಮ್ಮ ದಾರಿಗೆ ಬರುವಂತೆ ಮಾಡುತ್ತಾರೆ.

ನೀಲವ್ವ ಕೆಳಜಾತಿಯ ಚಲುವೆ. ಅವಳ ಮೇಲೆ ಊರ ಗೌಡನ ಕಣ್ಣಿರುತ್ತದೆ. ತನ್ನಿಚ್ಛೆಗೆ ನೇರವಾಗಿ ಅವಳನ್ನು ಬಳಸಿಕೊಳ್ಳಲಾಗಿದೆ. ಪೂಜಾರಿಯ ಮೈಮೇಲೆ ದೇವರು ಬಂದಂತೆ ನಟಿಸಲು ಹೇಳಿ ಜೋಗುಣಿ ಬಿಡುವಂತೆ ಮಾಡುತ್ತಾನೆ. ಪೂಜಾರಿ ಕೆಳಜಾತಿಯವನಾದರೂ, ಗೌಡ ಕೊಡುವ ಹಣ, ಹೆಂಡದ ಆಮಿಷಕ್ಕೆ ಒಳಗಾಗಿ ತನ್ನ ಜಾತಿಯವರಿಗೇ ಅನ್ಯಾಯವೆಸಗುತ್ತಾನೆ. ಈ ಇದರ ಹಿಂದಿನ ರಾಜಕಾರಣವರಿಯದ ಮುಗ್ಧ ಜನ ದೇವರ ಹೇಳಿಕೆ ನಿಜವೆಂದು ನಂಬಿ ನೀಲವ್ವಳನ್ನು ಬಲಿ ಕೊಡುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆ ಪುರುಷನ ವಿವಾಹ ಬಾಹಿರ ಕಾಮವಾಂಛೆಗೆ ಈ ರೀತಿಯಲ್ಲಿ ಧರ್ಮ ಸಮ್ಮತಿಯನ್ನು ಸೃಷ್ಟಿಸಿಕೊಂಡಿದೆ. ಧರ್ಮವು ಪುರುಷ ನಿರ್ಮಿತಿಯೆ ಆದ್ದರಿಂದ ಅದು ಪುರುಷನ ಬೇಕು ಬೇಡಗಳಿಗೆ ತಕ್ಕಂತೆಯೆ ರೂಪಿತವಾಗಿದೆ. ಶತಮಾನಗಳಿಂದ ಶಿಕ್ಷಣವಂಚಿತರಾಗಿ ವೈಚಾರಿಕತೆಯಿಂದ ದೂರವಾಗಿ ಮೇಲು ವರ್ಗದವರ ಮಾತೇ ವೇದವಾಕ್ಯವೆಂದು ನಂಬಿರುವ ಜನ ಈ ಹುನ್ನಾರದ ಹಿಂದಿನ ಸ್ವಾರ್ಥವನ್ನು ಅರಿಯದೆ ಬಲಿಯಾಗುತ್ತಿದ್ದಾರೆ ಎಂಬುದನ್ನು ಗೀತಾ ನಾಗಭೂಷಣ ಅವರು ಕಾದಂಬರಿಯಲ್ಲಿ ಮನಂಬುಗುವಂತೆ ಚಿತ್ರಿಸಿದ್ದಾರೆ.

ಇಲ್ಲಿಯ ಎರಡನೆಯ ಘಟನೆ ಕಾಶಮ್ಮ ತನ್ನ ಒಗೆತನವನ್ನು ಕಿತ್ತು ಬಿಸುಟು, ಲಿಂಗರಾಜನ ಮನೆ ಸೇರುವ ಪೂರ್ವದಲ್ಲಿ ದೇವರ ಹೇಳಿಕೆಯ ರೂಪದಲ್ಲಿ ವ್ಯಕ್ತವಾಗುತ್ತದೆ. ವರ್ಷದ ಪದ್ಧತಿಯಂತೆ ಮಲ್ಲಪ್ಪ ಜಮಾದಾರನ ಮನೆಗೆ ಬಂದ ಅಲಾಯಿ ದೇವರು ಮೈತುಂಬಿ 'ಕಟ್ಟಿ ಕಲ್ಲು ಕಟ್ಟಿಗೆ ಕೂಡಿಸಿದ್ದೆ ಖರೇ ಅದು ಗಟ್ಯಾಗಿ ಕೂಡಂಗ ಗಚ್ಚಾಕಿ ಬಿಗಿ ಮಾಡು ಉಚ್ಚಿ ಬಿದ್ದರ ಮಾತ ಘಾತಾಗ್ತದೋ ಬೇಟಾ' ಎಂದು ಸಾಂಕೇತಿಕ ಭಾಷೆಯಲ್ಲಿ ಹೇಳುವುದರ ಮೂಲಕ ಮಲ್ಲಪ್ಪನ ಮಾನಸಿಕ ನೆಮ್ಮದಿಯನ್ನು ಹದಗೆಡಿಸುತ್ತದೆ. ಮಲ್ಲಪ್ಪ ಕೇಡಿನ ಸೂಚನೆಯಿಂದ ಆತಂಕಿತನಾಗುತ್ತಾನೆ. ದೇವರ ಹೇಳಿಕೆ ಎಂದೂ ನೇರವಾಗಿರುವುದಿಲ್ಲ, ಸಂಕೇತಾತ್ಮಕವಾಗಿದ್ದು ಕಾಕತಾಳೀಯವೆಂಬಂತೆ ಕೆಲವೊಮ್ಮೆ ನಿಜವಾಗುತ್ತದೆ. ಹೀಗೆ ದೇವರು ಹೇಳುವವರು ಅದೇ ಪರಿಸರದವರೇ ಆಗಿರುವುದರಿಂದ ವ್ಯಕ್ತಿಗಳ ಚಲನವಲನವನ್ನು ಗಮನಿಸುವವರೇ ಆಗಿರುತ್ತಾರೆ. ತಮ್ಮ ಸುತ್ತಮುತ್ತ ನಡೆಯುವ ವಿದ್ಯಮಾನಗಳಿಂದ ತಮ್ಮ ತರ್ಕಕ್ಕೆ ನಿಲುಕಿದ ಅಂಶಗಳನ್ನು ಹೇಳಿಕೆಯ ರೂಪದಲ್ಲಿ ಹೊರ ಹಾಕುತ್ತಾರೆ. ಜನ ಅದನ್ನು ಪ್ರಶ್ನಿಸದೆ ನಂಬುತ್ತಾರೆ.

ಜಂಬಣ್ಣ ಅಮರಚಿಂತರ 'ಕುರಮಯ್ಯ ಅಂಕುಶ ದೊಡ್ಡಿ' ಕಾದಂಬರಿಯಲ್ಲಿ ಸಂಶಾಲಪ್ಪ ಮತ್ತು ಕುಶಾಲಪ್ಪರ ವೈರ ಮತ್ತು ಸ್ವಾರ್ಥ ಸಾಧನೆಗೆ ಕೊರವ ಜನಾಂಗವಿಡೀ ಬಲಿಯಾಗುವುದು. ಅವರ ಬಡತನ, ಅಸಹಾಯಕತೆ, ಪರಾವಲಂಬನೆಯ ಲಾಭ ಪಡೆದು ದೇವರು ಧರ್ಮವನ್ನು ಬಳಸಿಕೊಂಡು ನೆಲೆ ತಪ್ಪಿಸಿ ಗುಳೇ ಹೋಗುವಂತೆ ಮಾಡುವುದಲ್ಲದೇ ತಾವೇ ಗುಂಡಾಗಳಿಂದ ದಾಳಿಮಾಡಿಸಿ, ಜೈಲಿಗೆ ಕಳುಹಿಸುವ ಮೂಲಕ ಅವರ ಹೆಣ್ಣು ಮಕ್ಕಳಿಗೆ ದುಡಿಯಲು ಕೆಲಸವೂ ಲಭಿಸದೆ ಹೊಟ್ಟೆಪಾಡಿಗೆ ವೇಶ್ಯಾವೃತ್ತಿಗಿಳಿಯುವ ಅನಿವಾರ್ಯ ಸ್ಥಿತಿಯನ್ನುಂಟು ಮಾಡುತ್ತಾರೆ.

ಧೋ ಎಂದು ಸುರಿಯುವ ಮಳೆಯಲ್ಲಿ ನಿಲ್ಲಲು ಆಸರೆ ಇಲ್ಲದೆ, ಬೆಟ್ಟದ ಮೇಲಿನ ಶಂಕರಲಿಂಗನ ಗುಡಿಯನ್ನು ಆಶ್ರಯಿಸಿದ್ದೆ ಮಹಾಪರಾಧವಾಗಿ ಕೊರವರು ತಾವು ಅದುವರೆಗೆ ಬಾಳಿದ್ದ ಸ್ಥಳವನ್ನೇ ಬಿಡಬೇಕಾಗುತ್ತದೆ. ಅದಕ್ಕಾಗಿ ಸಮಾಜದ ಗಣ್ಯರೆನಿಸಿಕೊಂಡವರು ಪೂಜಾರಿಗೆ ಲಂಚ ಕೊಟ್ಟು ದೇವರ ಹೇಳಿಕೆ ಹೇಳಿಸುತ್ತಾರೆ. ಪಾಪಭೀರು ಕೊರವರು ಸಾಲು ಬೆಟ್ಟಗಳಲ್ಲಿ ಹೊಸದಾಗಿ ನೆಲೆಸಿದಾಗ ಜೀವನ ನಿರ್ವಹಣೆ ದುಸ್ತರವಾಗುತ್ತದೆ, ಅವರ ಜೀವನಾಧಾರವಾಗಿದ್ದ ಹಂದಿಗಳನ್ನು ರೋಗ ಹರಡುವ ನೆಪದಲ್ಲಿ ಕೊಲ್ಲಿಸುತ್ತಾರೆ. 'ಈಚಲ ದಬ್ಬೆಗಳಿಂದ ಬುಟ್ಟಿ ತಡಿಕೆ ಚಾಪೆ ಹೆಣೆದು ಬದುಕಲೂ ಯಂಕನ ಗೌಡ ಅಡ್ಡಿಯಾದಾಗ ಅನೇಕ ಕುಟುಂಬಗಳು ಗುಳೆಹೋಗುತ್ತವೆ. ತನ್ನ ಜನರನ್ನು ಬಿಟ್ಟು ಹೋಗಲಾಗದ ಜಂಗ್ಲಪ್ಪ ಹೊಟ್ಟೆಪಾಡಿಗ ಕಳ್ಳತನವನ್ನಾಶ್ರಯಿಸಿ ಜೈಲು ಸೇರುತ್ತಾನೆ. ಕುಟುಂಬದ ಹೊಣೆ ಹೊತ್ತ ಮಂಗಮ್ಮ ಆಗೊಮ್ಮೆ ಈ ಗೊಮ್ಮೆ ಮೆರವಣಿಗೆಗಳಲ್ಲಿ ಬಿಜಲಿ ಹೊತ್ತು ಗಳಿಸಿದ ಪುಡಿ ಕಾಸಿನಲ್ಲಿ ಜೀವನ ನಿರ್ವಹಣೆ ಸಾಧ್ಯವಾಗದೆ ವೇಶ್ಯಾ ವೃತ್ತಿಗಿಳಿಯುತ್ತಾಳೆ. ಹೀಗೆ ದೇವರ ಹೇಳಿಕೆ ಸುತ್ತಿ ಬಳಸಿ ಮಹಿಳೆಯ ಬದುಕನ್ನೆ ಆವರಿಸುತ್ತದೆ. ಎಂಬುದನ್ನು ಕಾದಂಬರಿ ಮನಗಾಣಿಸುತ್ತದೆ.

ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯ ನಿರ್ಮಿತ ನೀತಿ ನಿಯಮಗಳ ಪರಿಣಾಮವಾಗಿ ಅಥವಾ ಸ್ವಾರ್ಥ ಸಾಧನೆಗಾಗಿ ಹುಟ್ಟುಹಾಕುವ ಸಮಸ್ಯೆಗಳನ್ನು ದೈವ ನಿರ್ಮಿತವೆಂದು ನಂಬುವುದು, ನಂಬಿಸುವುದು ಅನುಚಾನವಾಗಿ ನಡೆದು ಬರುತ್ತಿದೆ. ಮಲ್ಲಿಕಾರ್ಜುನ ಹಿರೇಮಠರ 'ಹವನ' ಕಾದಂಬರಿಯಲ್ಲಿ ಲಂಬಾಣಿಗಳು ಸರಕಾರಿ ಜಮೀನಿನಲ್ಲಿ ಶ್ರಮ ಪಟ್ಟು ದುಡಿದು ಬೆಳೆದುಣ್ಣಬೇಕೆಂದುದನ್ನು ಸಹಿಸದ ಮೇಲು ವರ್ಗದವರು ತಾಂಡಾದ ಮೇಲೆ ದಾಳಿ ಮಾಡಿ ಮನೆ–ಮಾನಗಳನ್ನು ದೋಚಿದಾಗ ಸೋಮಲ್ಯಾನಾಯಕ ಇದೆಲ್ಲ ದೇವಿಯ ಕಾಟವೆಂದು ಭಾವಿಸುತ್ತಾನೆ. ಸೇವಾ ಭಾಯಿಯನ್ನೇ ಕಾಡಿದ ದೇವಿ ತಮ್ಮನ್ನು ಕಾಡದಿರುತ್ತಾಳೆಯೆ? ಎನ್ನುವಲ್ಲಿ ಹೆಣ್ಣು ದೇವತೆ ಕಾಡುವವಳೆಂಬ ಪುರುಷ ನಿರ್ಮಿತ ನಂಬಿಕೆ ವ್ಯಕ್ತವಾಗಿದೆ. ಗಂಡು ದೇವರು ಶ್ರೇಷ್ಠನಾಗಿದ್ದು ರಕ್ಷಕನಾದರೆ, ಹೆಣ್ಣು ದೇವತೆ ರೋಗಗಳನ್ನು ತರುವವಳು, ಕಷ್ಟ ಕೊಡುವವಳೂ ಆಗಿ ಬಿಂಬಿತಳಾಗುತ್ತಾಳೆ. ಒಟ್ಟಿನಲ್ಲಿ ಹೆಣ್ಣು ದೇವರಾಗಲಿ, ಮನುಷ್ಯಳಾಗಲಿ ಅವಳು ಸಮಸ್ಯೆಯ ಮೂಲವೆಂದು ಹೇಳಲಾಗುತ್ತದೆ.

ಗೀತಾ ನಾಗಭೂಷಣರ 'ಢಾಲು' ಕಥೆಯಲ್ಲಿ ಮಾಗಿ ದೇವರನ್ನು ತನ್ನ ಶೀಲ ರಕ್ಷಣೆಯ ಢಾಲನ್ನಾಗಿ ಬಳಸಿಕೊಳ್ಳುತ್ತಾಳೆ. ಢಾಲು ಒಂದು ಜೀವ ರಕ್ಷಣೆಯ, ಸಾಧನವಾಗಿ ಯುದ್ಧಗಳಲ್ಲಿ ಬಳಕೆಗೊಂಡರೆ, ದೇವರು ಎಂಬ ಢಾಲು ಶೀಲ ರಕ್ಷಣೆಯ ಸಾಧನವಾಗುತ್ತದೆ.

ಸಾವುಕಾರ ಪರಮೇಶಪ್ಪನನ್ನು ರಕ್ಷಿಸಲು ಅವನು ಮಾಡಿದ ಕೊಲೆಯನ್ನು ತಾನೇ ಮಾಡಿದ್ದೆಂದು ಹೇಳಿ ಮಾಗಿಯ ಗಂಡ ಕರೆಪ್ಪ ಜೇಲು ಸೇರುತ್ತಾನೆ, ಮುಂದೆ ಕೆಲ ದಿನಗಳಲ್ಲೆ ಮಾಗಿಗೆ ಆಮಿಷ ಒಡ್ಡಿ ಒಲಿಸಿಕೊಳ್ಳಲು ಸಾವುಕಾರ ಯತ್ನಿಸಿ ಸೋಲುತ್ತಾನೆ. ಅವನಿಂದೇನೋ ಬಚಾವಾದಳೆಂದು ಮಾಗಿ ಯೋಚಿಸುತ್ತಿದ್ದರೆ ಅದೇ ಕೇರಿಯ ಕೆಲವರು ಆಕೆಯನ್ನು ವಶಪಡಿಸಿಕೊಳ್ಳಲು ಮುಂದಾಗುತ್ತಾರೆ.

ಅಮವಾಸ್ಯೆಯ ದಿನ ದುರಗಮ್ಮನ ಗುಡಿಗೆ ಮಾಗಿ ಹೋಗಿದ್ದಾಗ ಪೋತುರಾಜ ದೇವಿಯನ್ನು ಆವಾಹಿಸುತ್ತಿದ್ದುದನ್ನು ಗಮನಿಸಿ ಅದನ್ನು ತನ್ನ ಶೀಲ ರಕ್ಷಣೆಗೆ ಬಳಸಿಕೊಳ್ಳುತ್ತಾಳೆ. ಗುಡಿಯಲ್ಲಿ ಕುಂತಲ್ಲೇ ಮುಲುಗುತ್ತಿದ್ದ ಮಾಗಿ ಚಿಟ್ಟನೇ ಚೀರಿ 'ಏ ऽऽ ನನ್ ಮಕ್ಳೇ... ಇಂದಿನಿಂದ ಇದು ನನ್ ಸವಾರಿ....

ಅದಾರೋ ನಂದೇ ಖಾಸಾ ಸವಾರಿ ಮಾಗಿ ಮೈ ಮ್ಯಾಲ ಯಾವ ಬ್ಯಾರೆ ಗಂಡಸನ ನೆಳ್ಳನೂ ಬೀಳಬಾರ್ದು ಬೀಳಲಾರ್ದಂಗ ಕೇರಿ ಮಂದೆಲ್ಲಾ ಕಾಯ್ಬೇಕು ಮಗನೇ...ಏನರೇ ಹೆಚ್ಚೂ ಕಮ್ಮಿ ಆಯ್ತಂದ್ರ ನಾ ಸುಮ್ಕಿರಾಣಿಲ್ರೋ... ನಿಮ್ ಕೇರ್ಯಾಗ ನೆತ್ತರದ ಕಾಲಪಿ ಹರಸ್ತೀನಿ. ಎಲ್ಲಾರಿಗೂ ಅಳ್ದು ನಾಸ್ ಮಾಡ್ತೀನಿ. ನಿಮಗೆಲ್ಲಾ ಅಳ್ಳ ಹುರ್ದಂಗ ಹುರ್ದು ಮುಕ್ಕತೀನ್ರೋ... ನಿಮ್ ಮಕ್ಕಳು ಮರಿಗೋಳಿಗೆಲ್ಲ ಬಾಳಿ ಹಣ್ಣ ಮಾಡಿ ನುಂಗಿ ನೀರ ಕುಡಿತಿನ್ರೋ ಹುಷಾರ್.... ಎಂದಾಗ ಎಲ್ಲರೂ ಗಡಗಡ ನಡುಗಿದರು.

ಆಗಲೆವ್ವೋ ತಾಯೀ... ಆಗಲಿ ಮಾಗಿ ಜುಮ್ಮೇದಾರಿ ನಮಗಿರಲಿ ಎಂದು ಆಶ್ವಾಸನೆ ಕೊಡುತ್ತಾರೆ. ಹೀಗೆ ಮಾಗಿ ತನ್ನ ರಕ್ಷಣೆಯ ಭಾರವನ್ನು ದೇವರ ಮೂಲಕ ಕೇರಿಯವರಿಗೆ ಒಪ್ಪಿಸುತ್ತಾಳೆ.[೧೫೦] ದೇವಿ ಮೈಮೇಲೆ ಬಂದಂತೆ ಉಗ್ರ ನಟಿಸಿ ತನ್ನ ಶೀಲ ಕಾಯುವ ಆಶ್ವಾಸನೆಯನ್ನು ಕೇರಿಯವರಿಂದ ಪಡೆಯುತ್ತಾಳೆ. ಅಮವಾಸ್ಯೆ ಹುಣ್ಣಿಮೆಗಳಂದು ಭಕ್ತರ ಸಮಸ್ಯೆಗಳಿಗೆ ಪರಿಹಾರ ಹೇಳುತ್ತ ಅವು ಕಾಕತಾಳೀಯವಾಗಿ ನೆರವೇರಿ ಜನರ ನಂಬಿಕೆಗೆ ಪಾತ್ರಳಾಗುತ್ತಾಳೆ.

ಪುರುಷ ಪ್ರಧಾನ ವ್ಯವಸ್ಥೆ ಹೇಳಿಕೆಯನ್ನು ತನ್ನ ಸ್ವಾರ್ಥ ಸಾಧನೆಗೆ ದುರ್ಬಲರ ಪೀಡನೆಗೆ, ಮಹಿಳೆಯ ಶೋಷಣೆಗೆ ಬಳಸಿಕೊಂಡರೆ, ಮಾಗಿ ತನ್ನ ಶೀಲ ರಕ್ಷಣೆಗೆ ಆ ಮೂಲಕ ತನ್ನ ಬದುಕಿನ ರಕ್ಷಣೆಗೆ ಬಳಸಿಕೊಳ್ಳುತ್ತಾಳೆ. ಮುಳ್ಳನ್ನು ಮುಳ್ಳಿನಿಂದ ತೆಗೆಯುವಂತೆ ವ್ಯವಸ್ಥೆಯಲ್ಲಿಯ ರಾಜಕಾರಣದಿಂದಲೆ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾಳೆ, ಕೆಳವರ್ಗದ ಮಹಿಳೆ ಕೇವಲ ಮೇಲು ವರ್ಗದ ಪುರುಷರಿಂದ ಶೋಷಿಸಲ್ಪಡದೆ ಕೆಳವರ್ಗದವರಿಂದಲೂ ಶೋಷಣೆಗೀಡಾಗುವುದನ್ನು ಕಥೆ ಪ್ರತಿನಿಧಿಸುತ್ತದೆ.

ಮೇಲ್ವರ್ಗದ ಪುರುಷರು ಕೆಳವರ್ಗದ ಮಹಿಳೆಯನ್ನು ದೇವದಾಸಿಯಾಗಿಸಲು ಹತ್ತು ಹಲವು ರೀತಿಯ ತಂತ್ರಗಳನ್ನು ಹೂಡುತ್ತಾರೆ. ಪಾಲಕರ ಮುಪ್ಪಿನ ಆಸರೆ ಅವರ ಮಗಳೇ ಎಂದು ಹೇಳುವ, ಸಂಪತ್ತಿನ ಆಸೆ ಒಡ್ಡುವ ದೈವಿಭಯ ಸೃಷ್ಟಿಸುವ ಮೂಲಕ ಮಹಿಳಾ ಬದುಕಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುತ್ತಾರೆ. ಹಾಗೆಂದೇ ಸ್ತ್ರೀವಾದಿಗಳು ಮೇಲ್ವಗದ ಮಹಿಳೆ ಕೇವಲ ಮೇಲ್ವರ್ಗದ ಪುರುಷರಿಂದ ಶೋಷಿಸ್ಪಟ್ಟರೆ, ಕೆಳವರ್ಗದ ಮಹಿಳೆ ಮೇಲ್ವರ್ಗದ ಸ್ತ್ರೀಪುರುಷರಲ್ಲದೇ ಕೆಳವರ್ಗದ ಪುರುಷರಿಂದಲೂ ಶೋಷಿಲ್ಪಡುತ್ತಾಳೆ ಎನ್ನುತ್ತಾಳೆ.

ಬಾಲಚಂದ್ರ ಜಯಶೆಟ್ಟಿಯವರ 'ಎಲ್ಲಮ್ಮನ ಸೇವೆ' ಕಥೆಯು ಮೇಲ್ವರ್ಗದಿಂದ ಶೋಷಿಸಲ್ಪಡುವ ಚನ್ನಿಯ ಬದುಕನ್ನು ಚಿತ್ರಿಸುತ್ತದೆ.

ಮಗಳು ಚೆನ್ನಿ ಚಲುವಿನ ಖಣಿಯಾಗಿ ಬೆಳೆದು ನಿಂತಾಗ ಕತಾಲಪ್ಪ ಮದುವೆ ಮಾಡಲು ನಿಶ್ಚಯಿಸುತ್ತಾನೆ. ವಿಷಯ ತಿಳಿದ ಗೌಡ ಅವನನ್ನು ಕರೆಸಿ, ಚನ್ನಿಯನ್ನು ತನ್ನ ಆಳುಮಗನೊಂದಿಗೆ ಮದುವೆ ಮಾಡಲು ಹೇಳುತ್ತಾನೆ, ಹಾಗೆ ಹೇಳುವುದರ ಹಿಂದೆ ಆಳುವಗನ ಹೆಂಡತಿಯನ್ನು ಸುಲಭವಾಗಿ ಬಳಸಿಕೊಳ್ಳುವ ಹುನ್ನಾರವಿರುತ್ತದೆ.

'ಆದರೆ ಚನ್ನಿ ತನ್ನ ಮನೆಗೊಂದು ಕಳ್ಳ ಬಾಗಿಲಿರುವುದು ಮತ್ತು ಆಕಳ್ಳ ಬಾಗಿಲು ತನ್ನ ನಿದ್ದೆ ಕೆಡಿಸುವುದನ್ನು ನಿರಾಕರಿಸುತ್ತಾಳೆ'.[೧೫೧]

'ಚನ್ನಿಯ ದೃಢ ನಿರ್ಧಾರದಿಂದ ಅವಳ ಮದುವೆ ಸಿದ್ಧವಾಗುತ್ತದೆ. ಆದರೆ ಮದುಮಗ ದೇವರಿಗೆ ನಮಿಸಲು ಬಂದಾಗ ಒದ್ದಾಡಿ ಸಾಯುತ್ತಾನೆ. ಇದೆಲ್ಲ ದೇವರಿಗೆ ಹರಕೆ ಸಲ್ಲಿಸದ ಪರಿಣಾಮವೆಂದು ಹೇಳಲಾಗುತ್ತದೆ. ಇದರಿಂದ ದೇವರು ಮುನಿದು, ಊರಿಗೆ ಕೇಡುಂಟಾಗುತ್ತದೆ ಊರ ಹೆಣ್ಣು ಮಕ್ಕಳು ಬಂಜೆಯರಾಗುತ್ತಾರೆ ಎಂದೆಲ್ಲ ಹೇಳಲಾಗುತ್ತದೆ. ಹೀಗೆ ಮುಗ್ಧ ಮನಸ್ಸುಗಳಲ್ಲಿ ಭಯ ಹುಟ್ಟಿಸುವ ಮೂಲಕ ಬೆತ್ತಲ ಸೇವೆ ಮಾಡಿಸುತ್ತಾರೆ. ಆದರೆ ಗೌಡ ಹಾಗೂ ಪೂಜಾರಿಯ ಕುತಂತ್ರದಿಂದ ಪ್ರಸಾದ ತಿಂದ ಚನ್ನಿ ಅರೆ ಪ್ರಜ್ಞಾವಸ್ಥೆಯಲ್ಲಿದ್ದರೂ ತಾನು ಗೌಡನ ಅತ್ಯಾಚಾರಕ್ಕೆ ಬಲಿಯಾಗಬಾರದೆಂಬ ಪ್ರಜ್ಞೆ ಜಾಗೃತವಾಗಿದ್ದುದರಿಂದ ಅವನು ಆಕ್ರಮಣಕ್ಕೆ ಸಿದ್ಧನಾದಾಗ ಅವನ ಮರ್ಮಸ್ಥಾನಕ್ಕೆ ಒದ್ದು ದೂರ ಬೀಳುವಂತೆ ಮಾಡುತ್ತಾಳೆ.

ಅದೆ ಗಳಿಗೆಯಲ್ಲಿ ಅಲ್ಲಿಂದ ಓಡಿ ಹೋದ ಪುರುಷನೊಂದಿಗೆ ತನ್ನ ಹೆಂಡತಿ ರಮಿಸುತ್ತಿದ್ದುದನ್ನು ತಿಳಿದ ಗೌಡನನ್ನು ಚನ್ನಿಯ ಸ್ಥಾನದಲ್ಲಿ ನಿಲ್ಲಿಸುವಲ್ಲಿ ಕಥೆ ಶೋಷಿತರ ಪರಿಸ್ಥಿತಿಯ ಅರಿವು ಮಾಡಿಕೊಡುವ ಆಶಯ ಹೊಂದಿದೆ.

ಈ ಕಥೆಯಲ್ಲಿ ದೇವರ ಹೆಸರಲ್ಲಿ ದಲಿತ ಹೆಣ್ಣುಗಳ ಮೇಲೆ ನಡೆಯು ಶೋಷಣೆಯ ಚಿತ್ರಣವಿದೆ. ಮೇಲುವರ್ಗದ ಮಹಿಳೆಯ ಲೈಂಗಿಕತೆ ಅವಳ ಗಂಡನಿಗೆ ಮಾತ್ರ ಮೀಸಲಾಗಿದ್ದರೆ, ಕೆಳವರ್ಗದ ಮಹಿಳೆಯ ಲೈಂಗಿಕತೆಯನ್ನು ಶ್ರೀಮಂತ ಅಧಿಕಾರ ವರ್ಗದ ಪಾಲಾಗುವಂತೆ ಮಾಡಲಾಗಿದೆ. ಇಂಥ ಸ್ತ್ರೀ ವಿರೋಧಿ ನೀತಿಯನ್ನು ಸ್ವಯಂ ಮಹಿಳೆಯೆ ನಿಭಾಯಿಸಬೇಕೆನ್ನುವ ಸಂಕೇತ ಕಥೆಗಳಲ್ಲಿ ಅಂತರ್ಗತವಾಗಿದೆ. ವ್ಯವಸ್ಥೆ ಹೆದರಿರುವವರೆಗೆ ಸವಾರಿ ಮಾಡುತ್ತದೆ. ಸೆಟೆದು ನಿಂತರೆ ದೂರ ಸರಿಯುತ್ತದೆ. ದಾಸ್ಯದಿಂದ ಹೊರಬರಲು ಸ್ವಂತಿಕೆ ಬೆಳೆಸಿಕೊಳ್ಳುವುದು ಅನಿವಾರ್ಯ. ಅದರೊಂದಿಗೇ ಬರುವ ಹೊಣೆಗಾರಿಕೆಯನ್ನು ಹೊರಲು ಸಿದ್ಧರಾಗಬೇಕಾಗುತ್ತದೆ. ಆದರೆ ತಲೆ ತಲಾಂತರದಿಂದ ಬಂದ ದಾಸ್ಯ ಆಮಿಷಗಳಲ್ಲಿ ಬಂಧಿಸುತ್ತದೆ. ಆಮಿಷ ಒಡ್ಡಿದವರು ತಮ್ಮದೇ ನಿಯಮಗಳನ್ನು ದುರ್ಬಲರ ಮೇಲೆ ಹೇರುತ್ತಾರೆ. ನಿಯಮಗಳಲ್ಲಿ ಸಿಲುಕಿದವರಿಗೆ ತಮ್ಮದೇ ಅದ ಹಕ್ಕನ್ನು ಕೇಳುವ ತ್ರಾಣವಿರುವುದಿಲ್ಲ, ಮಹಿಳೆಯ ಬದುಕು ಪುರುಷ ನಿಯಂತ್ರಣಕ್ಕೊಳಪಟ್ಟದೂ ಹೀಗೆಯೇ.

ಸಮಾಜದಲ್ಲಿ ಜಾತೀಯ ಭಾವನೆ ಎಷ್ಟು ಆಳಕ್ಕೆ ಬೇರುಬಿಟ್ಟಿದೆ ಎಂದರೆ ಅದನ್ನು ಕೀಳುವುದಿರಲಿ ಅಲುಗಿಸುವುದೂ ಅಸಾಧ್ಯವೆಂಬಂತಾಗಿದೆ. ಹಾಗಾಗಿಯೆ ಅಂತರ್ ಜಾತಿಯ ಅಂತರ್ ಧರ್ಮಿಯ ವಿವಾಹಗಳಿಗೆ ಇಂದಿಗೂ ಸಮಾಜಿಕ ಮನ್ನಣೆ ಇಲ್ಲ. ಭಾಲಚಂದ್ರ ಜಯಶೆಟ್ಟಿಯವರ 'ರಾಚಿ' ಕಥೆಯಲ್ಲಿ ತನ್ನ ಮಗಳು ವಿಲೋಮ ವಿವಾಹಕ್ಕೆ ಸಮ್ಮತಿಸದ ದೇಸಾಯಿ ರಾಚಿ, ದೆವ್ವದ ಹೆಸರಲ್ಲಿ ಮಾದನನ್ನು ಕೊಲ್ಲುತ್ತಾನೆ.

ಕಪಿಲಾ ಮಾದನ ಸಾವಿನಿಂದ ಹುಚ್ಚಿಯಾಗುತ್ತಾಳೆ. 'ಮಾದ ಎಲ್ಲೂ ಹೊಗಿಲ್ಲ. ಬರ್ತಾನ, ಬಂದೆ ಬರ್ತನ. ಈಗ ಬೆಳ್ಯಾಕ ಹತ್ಯಾನ ಇನ್ನಾ ಬೆಳೀಬೇಕು ನೌ. ಮಾಸ ತುಂಬಬೇಕು. ಮಾದ ಬರಬೇಕು ನಿಮ್ಮ ಹೆಣಾ ಎತ್ತಬೇಕು'[೨೫] ಎಂದು ಹೇಳುತ್ತ ರಾಚಿ ದೆವ್ವ ತನ್ನ ಮೇಲೆ ಬಂದಿದೆ ಎಂದು ತೋರಿಸಿಕೊಳ್ಳುತ್ತ, ಮಾದ ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಸಂಗತಿಯನ್ನು ಸಾರುತ್ತಾಳೆ. ಪಿತೃ ಸಂಸ್ಕೃತಿಯಲ್ಲಿ ಮಹಿಳೆಗೆ ತನ್ನ ಸಂಗಾತಿಯನ್ನು ತಾನೆ ಆಯ್ದುಕೊಳ್ಳುವ ಸ್ವಾತಂತ್ರ್ಯವಿಲ್ಲ. ಜಾತಿ ವರ್ಗ ಕೆಲವೊಮ್ಮೆ ಅಂತಸ್ತು ಅದಕ್ಕೆ ಅಡ್ಡಿಯಗುತ್ತದೆ.

ದೇವರು ಪಿತೃ ಸಂಸ್ಕೃತಿಯ ಅಸ್ತ್ರವಾಗಿ ಮಹಿಳಾ ಶೋಷಣೆಗೆ ಬಳಕೆಯಾಗಿದೆ. ದೆವ್ವವು ಕೆಲವೊಮ್ಮೆ ಅಸ್ತ್ರವಾಗಿದೆ. ತನಗೆ ಬೇಕಾದುದನ್ನು ಪಡೆಯಲು ಬೇಡವಾದುದನ್ನು ಪರ್ಯಾಯವಾಗಿ ಸಾಧಿಸಲು ದೇವರು-ದೆವ್ವಗಳನ್ನು ಸೃಷ್ಟಿಸಲಾಗಿದೆ. ಭಯ-ಭಕ್ತಿಗಳೆರಡು ಮನಸ್ಸನ್ನು ನಿಯಂತ್ರಿಸುವಂಥವು ಈ ನಿಯಂತ್ರಕಗಳನ್ನು ಮಹಿಳೆಯರು ಕೆಲ ಸಂದರ್ಭಗಳಲ್ಲಿ ಎದುರೇಟುಕೊಡುವಂತೆ ಉಪಯೋಗಿಸಿಕೊಂಡಿದ್ದಾರೆ. ಮಾಗಿ ತನ್ನ ಶೀಲ ರಕ್ಷಣೆಗೆ ದೇವರನ್ನು ಆಶ್ರಯಿಸಿದರೆ ಕಪಿಲ ತನ್ನ ತಂದೆಯ ದೂರ್ತತೆಯನ್ನು ಹೊರಹಾಕಲು ದೆವ್ವವನ್ನು ಆಶ್ರಯಿಸುತ್ತಾಳೆ. ಇವು ಪುರುಷ ಸೃಷ್ಟಿಗಳಾದರೂ ಸಾಂದರ್ಭಿಕವಾಗಿ ಮಹಿಳೆಯ ಬಳಕೆಗೂ ಬಂದಿವೆ.

ಗೀತಾ ನಾಗಭೂಷಣರ 'ಧುಮಸ್ಸು' ಕಾದಂಬರಿಯಲ್ಲಿ ಸೋನಿ ತನಗಾದ ಅನ್ಯಾಯವನ್ನು ವಿರೋಧಿಸಿ ಒಮ್ಮೆ ನಗುವ ಒಮ್ಮೆ ಅಳುವ ಮಾನಸಿಕ ಒತ್ತಡಕ್ಕೆ ಒಳಗಾದಾಗ ಜನ, ಸತ್ತ ಅವಳ ಪ್ರಿಯಕರ ಮಲ್ಲೇಶಿಯೇ ದೆವ್ವವಾಗಿ ಹಿಡಕೊಂಡಿರಬೇಕೆಂದು ಭಾವಿಸುತ್ತಾರೆ. ದೆವ್ವ ಬಿಡಿಸುವ ಕಾಳಿಂಗನನ್ನು ಕರೆಸುತ್ತಾರೆ. ಕಾಳಿಂಗ ದೆವ್ವಬಿಡಿಸುವ ನೆಪದಲ್ಲಿ ಅವಳ ಸ್ಪರ್ಶಸುಖದ ಮತ್ತಿಗೇರಿ ಅವಳೊಂದು ದಿನ ತನ್ನ ಬಳಿಗಿದ್ದರೆ ದೆವ್ವ ಬಿಟ್ಟುಹೋಗುವುದೆಂದು ಹೇಳುತ್ತಾನೆ. ಸೋನಿ ಅವನ ಕುತಂತ್ರವರಿತು ತನಗೆ ದೆವ್ವ ಬಡಿದಿಲ್ಲವೆಂದು ಸ್ಪಷ್ಟಪಡಿಸುತ್ತಾಳೆ.

ಚಂದ್ರ ಕಾಂತ ಕುಸನೂರರ 'ಕೇರೂರ ನಾಮಾ' ಕಾದಂಬರಿಯ ಅಂಬಕ್ಕ ಪಂಥರಿಯ ಹೆಂಡತಿ, ಕೆಟ್ಟ ಬಡತನ, ಕೆಲಸಕ್ಕೆ ಬಾರದ ಗಂಡನೊಂದಿಗೆ ಐದಾರು ವರ್ಷ ಉಪವಾಸ ವನವಾಸ ಕಳೆಯುತ್ತಾಳೆ. ಒಮ್ಮೆ ಚಮತ್ಕಾರವೆಂಬಂತೆ 'ಅಂಬಕ್ಕ ಮೌಲಾಲಿಯನ್ನು ಕರೆದು 'ಏ ಮೌಲಾಲಿ, ನಿನ್ನ ಕುದುರಿಗೆ ಸೆಟಿಬ್ಯಾನಿ ಬರ್ತದೋ ಊರ ಗೌಡ ಗ್ವಾಡೀಗಿ ಕುಂದ್ರತಾನ, ಊರ ಹಳ್ಳದಾಗ ಸ್ವಾಮೀ ಹೆಣಾ ಹರಕೊಂಡು ಹೋಗ್ತದೊ, ದ್ಯಾವರ ಗುಡಿ ಮುಂದ' ಗಂಗಮ್ಮ ಬಂದು ಗುಡಿಕಳಸಕ್ಕ ಮುಟ್ತಾಳೋ' ಎಂಬ ಮಾತು ಹೇಳಿದಾಗ ಅವಳ ಮೈಯಲ್ಲಿ ದೇವರು ಬರುತ್ತದೆಂದು ಜನ ನಂಬುವಂತೆ ಆಗುತ್ತದೆ. ಇದರಿಂದ ಅವಳ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ. ಜೊತೆಗೆ ಊರಿನಲ್ಲಿ ಹೊಸ ಸಂಚಲನೆ ಉಂಟಾಗುತ್ತದೆ. ಊರಿಗೆ ಕೆಲವು ಅನುಕೂಲಗಳು ಒದಗಿ ಬರುತ್ತವೆ. ಕಿಶನರಾಯ ಆರ್ಥಿಕವಾಗಿ, ಲೈಂಗಿಕವಾಗಿ ಅಂಬಕ್ಕನನ್ನು ನೆಚ್ಚಿದರೆ ಮೌಲಾಲಿ ಹೊಟ್ಟೆ ಬಟ್ಟೆಗಾಗಿ ಅವಳನ್ನು ಆಶ್ರಯಿಸುತ್ತಾನೆ.

ಊರೊಳಗೆ ಭಕ್ತರು ಹುಟ್ಟಿಕೊಂಡಂತೆ ಅಂಬಕ್ಕನನ್ನು ಪೋಷಿಸುವವರು ಹುಟ್ಟಿಕೊಳ್ಳುತ್ತಾರೆ. ಗೌಡ ಹಾಸಿಗೆ ಪಥ್ಯೆ ಮಾಡದೆ ಸತ್ತರೂ, ಅಂಬಕ್ಕನಿಂದಾಗಿಯೇ ಸತ್ತನೆಂದು ಜನ ರೋಷಗೊಳ್ಳುತ್ತಾರೆ. ಯಾವುದೋ ಗಳಿಗೆಯಲ್ಲಿ ಅವಳಾಡಿದ ಮಾತಿನಿಂದ ದೊರೆತ ಜನಸ್ಪಂದನೆ ಅವಳ ಬದುಕನ್ನು ಸುಧಾರಿಸುತ್ತದೆ. ಆದರೆ ಅದೆ ಜನ ಅವಳನ್ನು ಊರು ಬಿಟ್ಟು ಓಡಿಸಲೂ ಹಿಂದಾಗುವುದಿಲ್ಲ. ಭ್ರಮಾತ್ಮಕ ನಂಬಿಕೆಗಳು ಬಹು ಕಾಲ ಬಾಳವು ಎಂಬುದನ್ನು ಅಂಬವ್ವನ ಪಾತ್ರದ ಮೂಲಕ ಪ್ರತಿನಧಿಸಲಾಗಿದೆ.

ದೇವರು ದೆವ್ವಗಳನ್ನು ಸಾಂದರ್ಭಿಕವಾಗಿ ವಿಶ್ಲೇಷಿಸಿರುವ ಕಥನ ಸಾಹಿತ್ಯದಲ್ಲಿ ಇದುವರೆಗೆ ಗಮನಿಸಿದಂತೆ ಪುರುಷರು ಈ ಪರಿಕಲ್ಪನೆಯನ್ನು ಮಹಿಳಾ ಶೋಷಣೆಯ ಅಂಶವಾಗಿ ಬಳಸಿಕೊಂಡಿರುವುದು ಸ್ಪಷ್ಟವಾದರೆ, ಮಹಿಳೆಯರು ತಮ್ಮ ಶೀಲ ರಕ್ಷಣೆಗೆ ಆರ್ಥಿಕ ಅಭಿವೃದ್ಧಿಗೆ ಈ ಪರಿಕಲ್ಪನೆಯನ್ನು ಆಶ್ರಯಿಸಿದರುವುದು

ತಿಳಿದು ಬರುತ್ತದೆ. ಪುರುಷರು ಬದುಕನ್ನು ಬಾಧಿಸುವವರಾಗಿಯೂ ಮಹಿಳೆಯರು ಬದುಕನ್ನು ಪೋಷಿಸುವವರಾಗಿ ಪ್ರತಿನಿಧಿಸಲ್ಪಟ್ಟಿದ್ದಾರೆ.

೪.೫.೩ ಮನೋರೋಗ-ಮನಶಾಸ್ತ್ರಜ್ಞರ ನಿಲುವು.

ಮನಸ್ಸಿನ ಉನ್ಮಾದವನ್ನು ಹಿಸ್ಟಿರಿಯಾ ಎಂದು ಕರೆಯಲಾಗುತ್ತದೆ. ಇದು ಕೇವಲ ಹೆಂಗಸರಿಗೆ ಬರುವ ಸ್ಥಿತಿಯೆಂದು ಮೊದಲು ನಂಬಲಾಗಿತ್ತು ಇಂಥ ಸ್ಥಿತಿಗೆ ಒಳಗಾದ ಮಹಿಳೆಯರನ್ನು ಹೊಡೆಯುವುದು, ಹೆದರಿಸುವುದು ಬರೆ ಹಾಕುವುದು, ಕೊಠಡಿಯಲ್ಲಿ ಒಂಟಿಯಾಗಿ ಕೂಡಿ ಹಾಕುವುದು ಮುಂತಾಗಿ ಶಿಕ್ಷಿಸಲಾಗುತಿತ್ತು. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಇಂಥ ವರ್ತನೆಗೆ ದೆವ್ವ ಮೆಟ್ಟಿಕೊಂಡಿದೆ ಎಂದು ನಂಬಲಾಗುತ್ತಿತ್ತು. ಇಂದಿಗೂ ಆ ನಂಬಿಕೆ ಇದೆ. ಮೇಲಿನ ಶಿಕ್ಷೆಗಳಿಂದ ಇವನ್ನು ಸರಿಪಡಿಸಬಹುದೆಂದು ಭಾವಿಸಲಾಗಿತ್ತು.

ಮನೋ ವಿಜ್ಞಾನದ ಪಿತಾಮಹ ಸಿಗ್ಮಂಡ ಪ್ರಾಯ್ಡನ ಅಧ್ಯಯನಗಳಿಂದ ಹಾಗೂ ಮೊದಲ ಹಾಗು ಎರಡನೆಯ ಮಹಾಯುದ್ಧದ ಅವಧಿಯಲ್ಲಿ ಹಿಸ್ಟಿರಿಯಾ ಪೀಡಿತರಾದ ಅಸಂಖ್ಯಾತ ಸೈನಿಕರ ಅಧ್ಯಯನದಿಂದ, ಹಿಸ್ಟರಿಯಾ ಬಗ್ಗೆ ವೈದ್ಯಕೀಯ ಜ್ಞಾನ ಹೆಚ್ಚಿತು. ಈ ಕಾಯಿಲೆ ಹೆಂಗಸರಲ್ಲಷ್ಟೇ ಅಲ್ಲ ಗಂಡಸರಲ್ಲೂ ಕಂಡು ಬರುತ್ತದೆ. ಅತಿಯಾದ ಮಾನಸಿಕ ಒತ್ತಡಕ್ಕೆ ಒಳಗಾದ ಯಾವುದೇ ವ್ಯಕ್ತಿಯಲ್ಲಿ ಹಿಸ್ಟಿರಿಯಾ ಕಾಣಿಸಿಕೊಳ್ಳಬಹುದು. ಹೆಚ್ಚಿನ ಪ್ರಕರಣಗಳಲ್ಲಿ ಇದು ಹೆಚ್ಚು ಕಾಲ ಇರದೆ ತನಗೆ ತಾನೆ ಕಡಿಮೆಯಾಗಿ ಬಿಡುತ್ತದೆ. ಅದು ಹೇಗೆ ಮತ್ತು ಏಕೆ ಬರುತ್ತದೆ ಎಂಬುದು ರೋಗಿಗೆ ತಿಳಿಯುವುದಿಲ್ಲ. ಇತ್ಯಾದಿ ಅಂಶಗಳು ಬೆಳಕಿಗೆ ಬಂದವು.

'ಸಿಗ್ಮಂಡ ಫ್ರಾಯ್ಡ್‌ನ ಸಿದ್ಧಾಂತದಂತೆ ಹಿಸ್ಟಿರಿಯಾ ಚಿನ್ಹೆ ಉತ್ಪತ್ತಿಯಾಗುವುದು ಸುಪ್ತ ಮನಸ್ಸಿನ ಪರಿಹಾರ ಕಾಣದ ದ್ವಂದ್ವ ಅಥವಾ ಸಮಸ್ಯೆಯಿಂದ ನಮ್ಮ ಜಾಗೃತ ಮನಸ್ಸಿನ ಅಹಿತ, ಸಂಕೋಚ ಮತ್ತು ನೋವನ್ನುಂಟು ಮಾಡುವ ಆಸೆ, ವಿಚಾರ, ಅನುಭವಗಳನ್ನು ನಾವು ಸುಪ್ತ ಮನಸ್ಸಿನೊಳಕ್ಕೆ ತಳ್ಳಿ ಬಿಡುತ್ತೇವೆ. ತಾತ್ಕಾಲಿಕವಾಗಿ ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳುತ್ತೇವೆ. ಆದರೆ ಸುಪ್ತ ಮನಸ್ಸಿನಲ್ಲಿ ದಮನ ಸ್ಥಿತಿಯಲ್ಲಿರುವ ಈ ವಿಚಾರಗಳು ಅಲ್ಲಿಯ ಒತ್ತಡವನ್ನು ಹೆಚ್ಚಿಸುತ್ತವೆ. ಮತ್ತೆ ಜಾಗೃತ ಮನಸ್ಸಿನೊಳಗೆ ಬಂದು ಬಿಡುವ ಅಪಾಯವನ್ನೊಡ್ಡುತ್ತವೆ. ಆಗ ನಮ್ಮ ಸುಪ್ತ ಮನಸ್ಸು ಪರಿಹಾರೋಪಾಯವಾಗಿ ;ಈ ವಿಚಾರಗಳನ್ನು ರೋಗ ಚಿನ್ಹೆಯಾಗಿ ಮಾರ್ಪಡಿಸಿ ಹೊರಗಡೆ ಪ್ರಕಟವಾಗುವಂತೆ ಮಾಡುತ್ತದೆ. ಇದರಿಂದ ಒತ್ತಡ ಕಡಿಮೆಯಾಗುವುದಲ್ಲದೆ, ವ್ಯಕ್ತಿ ಮನೆಯವರ ಮತ್ತು ಸಂಬಂಧಿಕರ ಸಹಾನುಭೂತಿ ಸಹಾಯ ಮತ್ತು ರಿಯಾಯಿತಿಗಳನ್ನು ಪಡೆಯುತ್ತಾನೆ. ಹೀಗೆ ಹಿಸ್ಟಿರಿಯಾ ಎರಡು ಬಗೆಯಲ್ಲಿ ವ್ಯಕ್ತಿಗೆ ನೆರವಾಗುತ್ತದೆ. ಒಂದು ವ್ಯಕ್ತಿಯ ಒಳ ಮನಸ್ಸಿನ ಆತಂಕ ನಿವಾರಣೆ ಎರಡನೆಯದು ಇತರರ ಗಮನ ಸೆಳೆದು ನೆರವನ್ನು ಗಿಟ್ಟಿಸುವುದು' ಎಂದು ಮನೋ ವಿಜ್ಞಾನಿಗಳು ಹೇಳುತ್ತಾರೆ. ಮನಶಾಸ್ತ್ರದ ಈ ವಿವರ ಕಥೆಗಳಲ್ಲಿಯ ಅನೇಕ ಮನೋರೋಗಿಗಳ ಅಪಸಾಮನ್ಯ ವರ್ತನೆಯ ಕಾರಣವನ್ನು ಪರಿಹಾರವನ್ನು ಸೂಚಿಸುವುದಾಗಿರುವುದರಿಂದ ಈ ಹಿನ್ನೆಲೆಯಲ್ಲಿ ಕಥನ ಸಾಹಿತ್ಯದ ಅಂಥ ಸಂಗತಿಗಳನ್ನು ಪರಿಶೀಲಿಸಬಹುದಾಗಿದೆ.

೪.೫.೪ ಕಥನಗಳಲ್ಲಿ ಮನೋವಿಶ್ಲೇಷಣೆ :

ಹೈದರಾಬಾದ ಕರ್ನಾಟಕದ ಕಥನಗಳಲ್ಲಿ ಜಯತೀರ್ಥ ರಾಜಪುರೋಹಿತರ 'ದೆವ್ವದ ಬಂಗಾರ' ಕಥೆಯ ಭದ್ರವ್ವ 'ದೇವಿಯೊ ಹುಚ್ಚಿಯೊ' ಕಥೆಯ ಸುಮನಾ, ಶಾಂತರಸರ 'ರೋಗಿ' ಕಥೆಯ ಸಾವಿತ್ರಿ, ಚಂದ್ರಕಾಂತ ಕುಸನೂರರ 'ಗೋಹರಜಾನ್ ಮಾಲತಿ ಮತ್ತು ನಾನು' ಕಾದಂಬರಿಯ ಸರಾಫ ಸಾಂಬನಾಯಕನ ಸೊಸೆ, ಲಲಿತಾ ದೇಮಶೆಟ್ಟಿಯವರ 'ವೈದೇಹಿ' ಕಾದಂಬರಿಯ ವೈದೇಹಿ ಗವೀಶ ಹಿರೇಮಠರ 'ಹಕ್ಕಿ ಗೂಡು ಸೇರಿತು' ಕಾದಂಬರಿಯ ಜಯಾ, ಗೀತಾ ನಾಗಭೂಷಣರ 'ಬದುಕು' ಕಾದಂಬರಿಯ ಮಲ್ಲವ್ವ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ.

ಜಯತೀರ್ಥ ರಾಜ ಪುರೋಹಿತರ 'ದೆವ್ವದ ಬಂಗಾರ' ಕಥೆ ಮನೋವ್ಯಾಪಾರವನ್ನು ಆಧರಿಸಿದ್ದು ದೆವ್ವದ ಕುರಿತು ಇಲ್ಲಿ ಚರ್ಚಿಸಲಾಗಿದೆ. ದೆವ್ವಗಳವೆ. ಅತೃಪ್ತ ಆತ್ಮಗಳು ದೆವ್ವವಾಗಿ ದುರ್ಬಲ ಮನಸ್ಸನ್ನು ಆಶ್ರಯಿಸುತ್ತವೆ. ಸಾಮಾನ್ಯವಾಗಿ ಮಹಿಳೆಯರ ಮನಸ್ಸು ದುರ್ಬಲವಾಗಿರುವುದರಿಂದ ದೆವ್ವಗಳ ಪ್ರಭಾವ ಹೆಚ್ಚಾಗಿ ಅವರ ಮೇಲಾಗುತ್ತದೆಂದು ಕಥೆ ವಾದಿಸುತ್ತದೆ.

ಕಥೆಯಲ್ಲಿ ತಿಮ್ಮಪ್ಪ ಶೆಟ್ಟಿಯ ಹೆಂಡತಿ ಭದ್ರವ್ವನ ಮೈಯಲ್ಲಿ ಅವಳು ಕಂಡು ಕೇಳರಿಯದ, ಈಗಾಗಲೆ ೨೦ ವರ್ಷಗಳ ಹಿಂದೆ ಸತ್ತು ಹೋದ ವ್ಯಕ್ತಿಯ ದೆವ್ವದ ಪ್ರವೇಶವಾಗುತ್ತದೆ. ಹಾಗೆ ಪ್ರವೇಶವಾದ ಬಳಿಕ ಅವಳು ಸಂಸ್ಕೃತ ಶ್ಲೋಕಗಳನ್ನು ನಿರರ್ಗಳವಾಗಿ ಹೇಳಲು ಆರಂಭಿಸುತ್ತಾಳೆ. ಆಶ್ಚರ್ಯ ಗೊಂಡ ಅವಳ ಪತಿ ತಿಮ್ಮಪ್ಪ ಶೆಟ್ಟಿ ಕಾಡು ಉಪಾಯಗಳನ್ನು ಮಾಡದೆ, ಮಾಂತ್ರಿಕರಿಂದ ಘಾಸಿಗೊಳಿಸದೆ ಪರಿಹಾರ ಕಂಡು ಕೊಳ್ಳಲು ಅಕ್ಷೋಭ್ಯ ತೀರ್ಥ ಮಠದ ಶ್ರೀ ರಘುಕಾಂತ ತೀರ್ಥ ಯತಿಗಳನ್ನು ಮೊರೆಹೊಕ್ಕನು, ಅವರು ಕೇಳಿದ್ದಕ್ಕೆಲ್ಲ ಆ ದೆವ್ವ ತಾನು ವೆಂಕಟರಮಣನೆಂಬ ಬ್ರಾಹ್ಮಣ ಪಂಡಿತನಾಗಿದ್ದು ಧನದ ವ್ಯಾಮೋಹದಲ್ಲಿ ಸತ್ತು ಧನ ಪಿಶಾಚಿಯಾಗಿರುವೆನೆಂದು ಹೇಳುತ್ತದೆ. ತಿಮ್ಮಪ್ಪನೆ ಹಣ ನುಂಗಿದ್ದರಿಂದ ತಿಮ್ಮಪ್ಪನನ್ನು ಪೀಡಿಸಬೇಕಾಗಿತ್ತು ಎಂದು ಸ್ವಾಮಿಗಳು ಹೇಳಿದಾಗ ಸ್ವಾಮೀ ಭೂತ ಬಾಧೆಯೂ ಒಂದು ರೋಗ, ರೋಗಾಣುಗಳು ನಿರೋಧ ಶಕ್ತಿ ಇಲ್ಲದ ದುರ್ಬಲ ಶರೀರಗಳ ಮೇಲೆ ದಾಳಿ ಮಾಡುವಂತೆ ಜೀವಾಣುಗಳಾದ ನಮಗೂ ದುರ್ಬಲ ಮನಸ್ಸಿನ ಜೀವಗಳ ಮೇಲೆ ಆಕ್ರಮಣ ಸುಲಭ ಎನ್ನುತ್ತದೆ'.[illegible] ಹೀಗೆ ಮಹಿಳೆಯ ಮಾನಸಿಕತೆ ದುರ್ಬಲವೆಂಬುದನ್ನು ಕಥೆ ಹೇಳುತ್ತದೆ.

ದೆವ್ವ ದೇವರುಗಳೆರಡೂ ಅಮೂರ್ತ ಕಲ್ಪನೆಗಳಾದ್ದು. ದುರ್ಬಲ ಮನಸ್ಸಿನ ಭಯವೆ ಹಾಗೆ ಭ್ರಮಿಸುವ ಸಾಧ್ಯತೆ ಇದೆ. ಹೆಣ್ಣಿನ ಮನಸ್ಸು ದುರ್ಬಲವಾಗಲು ಅವಳಿಗೆ ದೊರೆತ ಸಾಮಾಜೀಕರಣವೇ ಕಾರಣವಾಗುತ್ತದೆ. ಗಂಡು ಮಗುವನ್ನು ಧೈರ್ಯಶಾಲಿಯಾಗಿಯೂ, ಗಟ್ಟಿಗನಾಗಿಯೂ ಬೆಳೆಯುವಂತೆ ಪ್ರೇರಿಸುವ ಸಾಮಾಜೀಕರಣ ಪ್ರಕ್ರಿಯೆ ಹೆಣ್ಣು ಮಗು ಕೋಮಲ ಪುಕ್ಕಲು ಸ್ವಭಾವಗಳನ್ನು ಅಳವಡಿಸಿಕೊಳ್ಳುವಂತೆ ಮಾಡುತ್ತದೆ. ಸುತ್ತ ಮುತ್ತಿನ ಪರಿಸರ ನಿರಂತರ ಹೆದರಿಸುವುದೇ ಆಗಿರುತ್ತದೆ. ಹಾಗಾಗಿ ಇಲ್ಲದ ದೆವ್ವಗಳು ಹೆಣ್ಣನ್ನು ಕಾಡುತ್ತವೆ.

ಜಯತೀರ್ಥ ರಾಜಪುರೋಹಿತರು ಈ ಕಥೆಯಲ್ಲಿ ಇದೊಂದು ದುರ್ಬಲ ಮನಸ್ಸಿನ ಪ್ರಕ್ರಿಯೆ ಎಂಬ ವೈಜ್ಞಾನಿಕ ಸಂಗತಿಯನ್ನು ಸ್ಪಷ್ಟಪಡಿಸುತ್ತಾರೆ. ಸುಪ್ತ ಮನಸ್ಸಿನಲ್ಲಿ ನೆಲೆಗೊಂಡ ಭೂತಭಯ ಯಾವುದೋ

ದುರ್ಬಲಗಳಿಗೆಯಲ್ಲಿ ಅಪಸಾಮಾನ್ಯ ವರ್ತನೆಯಾಗಿ ಹೊರಹೊಮ್ಮುತ್ತದೆ. ಅದಕ್ಕೆ ಸೂಕ್ತ ಸಾಂತ್ವನ ಭರವಸೆಗಳು ದೊರೆತಾಗ ಅವರಿಂದ ಮುಕ್ತರಾಗಬಹುದು. ಆದರೆ ಸಂಸ್ಕೃತ ಗೊತ್ತಿಲ್ಲದ ಭದ್ರವ್ವ ಸಂಸ್ಕೃತ ಶ್ಲೋಕ ಹೇಳಿದ್ದು, ವೆಂಕಟರಮಣನ ಜೀವನ ವಿವರಗಳನ್ನು ;ಹೇಳಿದ್ದಕ್ಕೆ ಶಾಸ್ತ್ರೀಯ ವಿವರಣೆ ದೊರೆಯದಾದ್ದರಿಂದ ದೇವರು ದೆವ್ವಗಳಂಥ ಅತೀಂದ್ರಿಯ ಪ್ರತೀತಿಗಳನ್ನು ಅಲ್ಲಗಳೆಯುವುದಿಲ್ಲವೆನ್ನುತ್ತಾರೆ. ಮನ ಶಾಸ್ತ್ರದ ತಾತ್ವಿಕತೆಯನ್ನು ಅರಿತೂ ಪರಿಹಾರವಿಲ್ಲದ ಕೆಲ ಸಂಗತಿಗಳಿಗೆ ಪರಿಹಾರ ಸಿಗುವವರೆಗೆ ಈ ನಂಬಿಕೆಗಳು ಹೀಗೇ ಮುಂದುವರಿಯುತ್ತವೆ.

ಜಯತೀರ್ಥ ರಾಜಪುರೋಹಿತರ 'ದೇವಿಯೋ, ಹುಚ್ಚಿಯೋ' ಕಥೆ ಕಾಮುಕ ಸಮಾಜದ ಲೈಂಗಿಕ ಕ್ರೌರ್ಯ ಸುಮನಾ ಕೊಲೆಗಾರ್ತಿಯಾಗಿ, ಚಲ್ಲಿದ ರಕ್ತದ ಭಯಾನಕತೆಯಲ್ಲಿ ಮನಸ್ಸಿನ ಸ್ಥಿಮಿತ ಕಳೆದುಕೊಂಡು ಕೆಲವರಿಗೆ ದೇವಿಯಾಗಿ ಮತ್ತೆ ಕೆಲವರಿಗೆ ಹುಚ್ಚಿಯಾಗಿ ಕಾಣುವ ಮನೋ ವಿಕಲ್ಪದ ವಸ್ತು ಕೇಂದ್ರದ್ದು.

ತಂದೆ ತಾಯಿಗಳಿಲ್ಲದ ಸುಮನಾ ತನ್ನ ತಮ್ಮನನ್ನು ಪಟ್ಟಣಕ್ಕೆ ಕರೆ ತಂದು ಹೊಲದಿಂದ ಬರುವ ಸ್ವಲ್ಪ ಅದಾಯಕ್ಕೆ ತಾನು ಅಡಿಗೆ ಮಾಡಿ ತಂದ ಹಣವನ್ನು ಸೇರಿಸಿ ಬಿ.ಎ. ವರೆಗೆ ಓದಿಸುತ್ತಾಳೆ. ಅರೆ ಹೊಟ್ಟೆಯ ಪರಿಣಾಮ ತಮ್ಮನಿಗೆ ಬೆನ್ನುನೋವು ಕಾಣಿಸಿಕೊಂಡಾಗ, ತಪಾಸಣೆಗೆ ಕರೆ ಪುಢಾರಿ ಪರಪ್ಪನ ಮಗನ ಕಾರು ರಿಕ್ಷಾಕ್ಕೆ ಡಿಕ್ಕಿ ಹೊಡೆದು ತಮ್ಮ ಕಾಲು ಮುರಿದುಕೊಳ್ಳುತಾನೆ. ಸಹಾಯದ ಭರವಸೆ ಇತ್ತ ಪರಪ್ಪ ತನ್ನ ಮಗನ ಮೇಲೆ ಕೇಸಾಗದಂತೆ ರಕ್ಷಿಸಿಕೊಳ್ಳುತ್ತಾನೆ. ಸಹಾಯವನ್ನೇನೂ ಮಾಡುವುದಿಲ್ಲ ಡಾಕ್ಟರರ ಅಚಾತುರ್ಯದಿಂದ ಮುರಿದ ಅವನ ಕಾಲು ಮಡಿಚಲು ಬಾರದೆ ಸಂಕಟದಿಂದ ಒದ್ದಾಡಿ, ಅದರೊಂದಿಗೆ ಕಾಣಿಸಿಕೊಂಡ ಕ್ಷಯ ರೋಗದಲ್ಲಿ ತಮ್ಮ ಸತ್ತು ಹೋಗುತ್ತಾನೆ. ಮಾನವಿಯತೆಯನ್ನೆ ಮರೆತ ಪುರೋಹಿತಶಾಹಿ ಶವ ಸಂಸ್ಕಾರದ ನೆಪದಲ್ಲಿ ಅವಳನ್ನು ಅರ್ಥಿಕವಾಗಿ ಸುಲಿಯುತ್ತದೆ. ಆಸರೆಯಾಗಿದ್ದ ಗೋಪಿನಾಥರಾಯರು ವರ್ಗವಾಗಿ ಹೋದಾಗ ನಿಲ್ಲಲು ನೆಲೆ ಇಲ್ಲದ ಸುಮನಾ ಹನುಮನ ಗುಡಿಯನ್ನು ಆಶ್ರಯಿಸುತ್ತಾಳೆ. ಪರಪ್ಪ ತನ್ನ ಮನೆಯಲ್ಲಿ ಅಡಿಗೆ ಮಾಡಿಕೊಂಡಿರಲು ಕರೆಯುತ್ತಾನೆ. ಅವನ ಹಸಿದ ಕಣ್ಣಿನ ಹಿಂದಿನ ಆಸೆಯನ್ನು ಗುರುತಿಸಿ ತಿರಸ್ಕರಿಸುತ್ತಾಳೆ. ಹನುಮನ ಗುಡಿಯಲ್ಲಿ ಅವಳ ಮೇಲೆ ದಾಸರಮಲ್ಲ ಅತ್ಯಾಚಾರಕ್ಕೆ ಪ್ರಯತ್ನಿಸಿದಾಗ ಸಿಕ್ಕ 'ಚೂಪಾದ ಕಬ್ಬಿಣದ ಸಲಾಕಿಯಿಂದ ಮಲ್ಲನ ಹೊಟ್ಟೆಗೆ ಚುಚ್ಚುತ್ತಾಳೆ, ಮಲ್ಲ' ಸಾಯುತ್ತಾನೆ. ಅವನ ಹೆಣವನ್ನು ನೋಡಿ ಗಹ ಗಹಿಸುತ್ತ ಸುಮನಾ 'ಹದ್ದುಗಳು ರಣಹದ್ದುಗಳು ಹ.. ಹ.. ಹ.. ಹ..' ನಾಯಿ ಮೇಲೆ ಹರಿಯುತ್ತೀಯಾ ರಣಹದ್ದು, ನಾಯಿ ಅಯ್ಯೋ ತಮ್ಮ, ಡಾಕ್ಟರ್! ಇಂಟರವ್ಯುವ್, ರಣಹದ್ದು ಪುಢಾರಿ ರಣಹದ್ದು ಪುರೋಹಿತ, ಗಂಡಸರೆಲ್ಲಾ ರಣ ಹದ್ದುಗಳು ಹ.. ಹ.. ಹ.. ಹ.. ಎಂದು ಹೇಳುತ್ತ ಇಡೀ ಆಯಸ್ಸು ಹುಚ್ಚಿಯಾಗಿ ಅಲೆಯುತ್ತಾಳೆ. ಒಂಟಿ ಹೆಣ್ಣಿನ, ದುರ್ಬಲ ತಮ್ಮನ ಅಸಹಾಯಕತೆಗೆ ನಾಯಿಯನ್ನು, ಅವಳ ಅಸಹಾಯಕತೆಯನ್ನು ಬಳಸಿಕೊಳ್ಳಲೆಳಸಿದ ಸಮಾಜದ ಗಂಡಸರನ್ನು ರಣ ಹದ್ದುಗಳಾಗಿ ಸಂಕೇತಿಸಲಾಗಿದೆ.

ದುರ್ಬಲ ಮನಸ್ಸಿನ ಮೇಲೆ ಒಂದಾದ ಮೇಲೆ ಒಂದರಂತೆ ಉಂಟಾದ ಆಘಾತಗಳು ಸುಮನಾಳನ್ನು ಹುಚ್ಚಿಯಾಗಿಸುತ್ತವೆ. ಅಥವಾ ಕ್ರೂರ ವ್ಯವಸ್ಥೆಯ ಕೌರ್ಯದಿಂದ ರಕ್ಷಣೆ ಪಡೆಯಲು ಸುಮನಾ ಹುಚ್ಚುತನವನ್ನು ಆರೋಪಿಸಿಕೊಳ್ಳುತ್ತಾಳೆ. ನೀನು ಯಾರು ಎಂಬ ಪ್ರಶ್ನೆಗೆ 'ದೇವೀ ಅರಳೀ ಕಟ್ಟಿ ದೇವಿ ಅನ್ನಿರಿ... ಬೇಕಾದರೆ

ಹುಚ್ಚಿ ಅನ್ನಿರಿ' ಎನ್ನುವ ಉತ್ತರ ಅವಳು ತನ್ನ ಶೀಲ ರಕ್ಷಣೆಗೆ ಪ್ರಜ್ಞಾಪೂರ್ವಕವಾಗಿ ಹುಚ್ಚನ್ನು ಆರೋಪಿಸಿ ಕೊಂಡಂಥ ಸೂಚನೆ ಕೊಡುವಂತಿದೆ.

ಹೆಣ್ಣಿಗೆ ವಿಧಿಸಲಾದ ಶೀಲ-ಪಾವಿತ್ರ್ಯಯದ ನಿಯಮ ಸುಮನಾಳ ಮನಸ್ಸಿನಲ್ಲಿ ಮೀರಲೇ ಬಾರದ ಅಂಶವಾಗಿ ಅವಳ ಇಡೀ ಬದುಕನ್ನು ಬರ್ಬರವಾಗಿಸುತ್ತದೆ. ಸ್ವಸ್ಥ ಮನಸ್ಕಳ ಮನಸ್ಥಿತಿಯನ್ನು ಕಡಿಸಿ ಅವಳು ದೇವಿ ಅವಳಿಂದ ಹೊಡೆಸಿಕೊಂಡರೆ ತಮಗೆ ಶುಭವಾಗುತ್ತದೆಂಬ ಗಂಡಸರ ನಡವಳಿಕೆ ಒಂದು ಭಯಂಕರ ವ್ಯಂಗ್ಯವಾಗಿ ಇಲ್ಲಿ ಕಾಣಿಸಿಕೊಳ್ಳುತ್ತದೆ.

ಶಾಂತರಸರ 'ರೋಗಿ' ಕಥೆ ಸಾವಿತ್ರಿಯ ಅಸ್ಥಿರ ಮನಃಸ್ಥಿತಿಯನ್ನು ಮನಶಾಸ್ತ್ರೀಯ ನೆಲೆಯಲ್ಲಿ ಗುರುತಿಸುವ ವಸ್ತುವಿನದು. ಸಾಪಿತ್ರಿಯ ಅಸ್ವಾಸ್ಥ್ಯದ ಕಾರಣವನ್ನು ಶೋಧಿಸಲು ನಿವಾರಿಸಲು ಯತ್ನಿಸುವ ಡಾ. ಸಾಂಬಣ್ಣ ಸ್ವತಃ ಮನಸ್ಸಿನಲ್ಲಿ ನಿಯಂತ್ರಣ ಕಳೆದುಕೊಳ್ಳುವ ಸ್ಥಿತಿಯನ್ನು ಕಥೆಯಲ್ಲಿ ಶಾಂತರಸರೇ ಕೂಲಂಕಶವಾಗಿ ಸೆರೆಹಿಡಿಯುತ್ತಾರೆ.

ಸಾವಿತ್ರಿ ಹಲವು ಹವ್ಯಾಸಗಳ ಕ್ರಿಯಾಶೀಲ ವ್ಯಕ್ತಿ ಹೆಚ್ಚು ಮಾತನಾಡುವ ಅನಿಸಿದ್ದನ್ನು ತಕ್ಷಣ ಹೇಳುವ ಸ್ವಭಾವದವಳು. ಗಂಡ ನಾಗೇಶ ಕೂಡ ಒಳ್ಳೆಯ ಮನುಷ್ಯನೇ ಆದರೆ ಪಿತೃ ವ್ಯವಸ್ಥೆಯಲ್ಲಿ ಹೆಣ್ಣು ಸಾರ್ವಜನಿಕವಾಗಿ ಗಂಡಸರೊಂದಿಗೆ ಬೆರೆಯುವುದನ್ನು ಅಭಿನಯ, ಸಂಗೀತದಂಥ ಹವ್ಯಾಸಗಳನ್ನು ಇತ್ಯಾತ್ಮಕವಾಗಿ ನೋಡದೆ ಹಗುರವಾಗಿ ಮಾತಾಡುವುದನ್ನು ಕೇಳಿ ಹೆಂಡತಿಯನ್ನು ನಿಯಂತ್ರಿಸಲು ನೋಡುತ್ತಾನೆ. ಆದರೆ ಅವುಗಳಿಂದ ದೂರವಾಗಲು ಸಾವಿತ್ರಿ ಒಪ್ಪುವುದಿಲ್ಲ. ಸಾವಿತ್ರಿಯನ್ನು ಬಿಟ್ಟಿರಲಾರದ ನಾಗೇಶ್ ಅವಳೊಂದಿಗೆ ಜಗಳವಾಡಿ ರಾಜಿಯಾಗುತ್ತಿರುತ್ತಾನೆ. ಇಂಥ ಸಂದರ್ಭಗಳಲ್ಲಿ ಸಾವಿತ್ರಿ ಉದ್ವೇಗಕ್ಕೊಳಗಾಗಿ ಹೇಗೇಗೋ ವರ್ತಿಸುತ್ತಾಳೆ. ಎದೆನೋವೆಂದು ನರಳುತ್ತಾಳೆ. ನಾಗೇಶ್ ಡಾಕ್ಟರ್‌ರನ್ನು ಚಿಕಿತ್ಸೆಗೆ ಕರೆಸಿದಾಗ ಸ್ವಲ್ಪವೊತ್ತಿಗೆಲ್ಲ ಸಾವಿತ್ರಿ ಸರಿಯಾಗುತ್ತಿರುತ್ತಾಳೆ. ನಾಗೇಶನಿಗೆ ಇದೊಂದು ನಟನೆ ಎಂಬಂತಾಗುತ್ತದೆ. ನಾಗೇಶ ಸಾವಿತ್ರಿಯ ಹವ್ಯಾಸಗಳನ್ನು ನಿಯಂತ್ರಿಸಲು ಜಗಳವಾಡಿದಾಗಲೆಲ್ಲ ಸಾವಿತ್ರಿ ಎದೆನೋವಿನಿಂದ ನರಳುತ್ತಾಳೆ. ಗಂಡ ರಾಜಿಯಾದೊಡನೆ ಸಾಮಾನ್ಯ ಸ್ಥಿತಿಗೆ ಬರುತ್ತಾಳೆ.

ಇವಳ ಈ ಅಪಸಾಮಾನ್ಯ ವರ್ತನೆಗೆ ಗಂಡ ತನ್ನ ಕಲೆಯನ್ನು ಪ್ರೋತ್ಸಾಹಿಸಬೇಕು, ತನ್ನ ಬಾಯಿತುಂಬಾ ಹೊಗಳಬೇಕು ಎಂಬ ಸುಪ್ತ ಬಯಕೆಯೇ ಕಾರಣವೆಂದು ಡಾ. ಸಾಂಬಣ್ಣ ಕಂಡುಕೊಳ್ಳುತ್ತಾನೆ. ಆದರೆ ಮುಂದೊಂದು ದಿನ ಸಾವಿತ್ರಿಯ ಸರಳ ಬೆರಯುವಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡು ಅವಳನ್ನು ಬಯಸುತ್ತಾನೆ. ಅವಳೊಂದಿಗೆ ಯಾರಾದರೂ ಸಲಿಗೆಯಿಂದ ವರ್ತಿಸಿದರೆ ಉದ್ವೇಗಗೊಳ್ಳುತ್ತಾನೆ. ಅವಳ ಸಲಿಗೆಯ ವರ್ತನೆ ಲೈಂಗಿಕ ಮುಕ್ತತೆ ಎಂದು ಪುರುಷ ಚಿಂತನೆ ಪರಿಭಾವಿಸುತ್ತದೆ. ಕಲಾವಿದೆಯೊಬ್ಬಳನ್ನು ಕೇವಲ ಕಲಾವಿದೆಯಾಗಿ ನೋಡದೆ ಒಂದು ಲೈಂಗಿಕ ಪರಿಕರವಾಗಿಯೆ ನೋಡಲಾಗುತ್ತದೆ ಎಂಬುದನ್ನು ಕಥೆ ನಿರೂಪಿಸುತ್ತದೆ.

ಚಂದ್ರಕಾಂತ ಕುಸನೂರರ 'ಗೋಹರಜಾನ್ ಮಾಲತಿ ಮತ್ತು ನಾನು' ಕಾದಂಬರಿಯಲ್ಲಿ ಬರುವ ದೆವ್ವದ ಸಂಗತಿಯಲ್ಲಿ ಕೂಡ ದುರ್ಬಲ ಮನಸ್ಸಿನ ಕಾರಣ, ಅತೃಪ್ತ ಆತ್ಮಗಳ ಪ್ರವೇಶವಾಗುತ್ತದೆಂಬ ಅಂಶ ಕಂಡುಬರುತ್ತದೆ.

'ಸರಾಫ್' ಸಾಂಬ ನಾಯಕನ ಜೊತೆಗೆ ಬಡಕೊಂಡ ದೆವ್ವ ಡಾಕ್ಟರಿಕೆ ಪಾಸ್ ಮಾಡಿದ್ದು, ಜೀವಂತ ಇದ್ದಾಗ ಅವಳನ್ನು ಇಷ್ಟಪಟ್ಟಿತ್ತು. ಆದರೆ ಅವಳ ಮದುವೆ ನಾಯಕರ ಮಗನೊಂದಿಗಾದಾಗ ನೊಂದ ಡಾಕ್ಟರ್ ನಿದ್ರೆ ಮಾತ್ರೆ ಸೇವಿಸಿ ಸತ್ತು ದೆವ್ವವಾಗಿ, ಅವಳ ಮೈಸೇರುತ್ತಾನೆ. ಎಜುಕೇಟೆಡ್ ದೆವ್ವ ಭಾರಿ ಚಾಣಾಕ್ಷದ. ಹೋಗ್ತೀನಿ ಅಂತದ, ಹೋದ್ಹಾಂಗ ಮಾಡ್ತದೆ. ಮತ್ತ ಬರ್ತದ' ಎನ್ನುತ್ತಾನೆ. ದೆವ್ವ ಬಿಡಿಸುವ ಶೇಷಪ್ಪ.

ರವೀಂದ್ರನ ಚಿಕ್ಕಪ್ಪ ವಿಠೋಬರಾಯರ ಮೈಯಲ್ಲಿ ಸೇರಿದ್ದ ಶರಬಯ್ಯನ ದೆವ್ವ ಶೇಷಪ್ಪ ಹೇಳಿದಂತೆ ಮಾಡಿದಾಗ ಬಿಟ್ಟು ಹೋಗುತ್ತದೆ.

ಈ ದೃಶ್ಯ ಜಗತ್ತಿನಿಂದ ಬೇರ್ಪಟ್ಟದ್ದು, ಇನ್ನೊಂದು ಜಗತ್ತು ಇದೆಯಾ? ಅಲ್ಲಿದ್ದ ಜೀವರಾಶಿಗಳ, ಜೀವನ ಕ್ರಮವೇನು. ತರ್ಕಕ್ಕೆ ನಿಲುಕಲಾರದಂಥ ಘಟನೆಗಳಿಗೆ, ಈ ಅದೃಶ್ಯ ಜಗತ್ತಿನ ಮಾಧ್ಯಮವನ್ನೇ ಬಯಸುವ ಕಾರಣವೇನು? ಈ ಭೂಮಿಯ, ಈ ಜೀವನದ ಅಂಶ ಆಕರ್ಷಣೆ ಇಷ್ಟೊಂದು ಪ್ರಬಲವಾಗಿರುತ್ತದೆಯಾ ನಮ್ಮ ಜೊತೆಗೆ, ಇನ್ನೊಂದು ವಿಶ್ವ ಇನ್ನೊಂದು ಲೋಕ ಇದ್ದಿದ್ದು ಅದ್ಭುತವಲ್ಲವೆ? ಎಂದು ಕತೆಗಾರರು ಬೆರಗುಗೊಳ್ಳುವುದರೊಂದಿಗೇ ಓದುಗರು ಚಿಂತನಾಪರರಾಗುವಂತೆ ಮಾಡುತ್ತಾರೆ.

ಸಂವೇದನೆಗೆ ಬರಹಗಾರ ಅಥವಾ ಬರಹಗಾರ್ತಿ ಎಂಬ ಹಣೆಪಟ್ಟಿ ಆಕ್ಷೇಪಾರ್ಹ. ಹಾಗೂ ಕೃತ್ರಿಮವಾದರೂ ಒಂದು ಸಮೂಹದ ನೋವನ್ನು ಎರವಲು ಅನುಭವವನ್ನಾಗಿಸಿಕೊಂಡು ಬರಹಗೊಳಿಸುವುದಕ್ಕೂ, ನೋವುಂಡ ಸಮೂಹದ ಒಂದು ಘಟಕವಾಗಿ ನೋವನ್ನು ಬರಹ ಗೊಳಿಸುವುದಕ್ಕೂ ಇರುವ ವ್ಯತ್ಯಾಸವನ್ನು ಅವುಗಳ ದಟ್ಟತನ, ದಿಟ್ಟತನ ಗಟ್ಟಿತನದ ತೀವ್ರತೆಯಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳಬಹುದು. ಈ ಮಾತಿಗೆ 'ವೈದೇಹಿ' ಕಾದಂಬರಿ ಒಂದು ಉತ್ತಮ ಉದಾಹರಣೆ.

ಶ್ರೇಣೀಕೃತ ಸಮಾಜ ವ್ಯವಸ್ಥೆ ರೂಢಿಸಿದ ಸಂಪ್ರದಾಯ ನಂಬಿಕೆಗಳು ಹೇಗೆ ಮನೋಲೋಕವನ್ನು ಪ್ರಭಾವಿಸುತ್ತವೆ. ಅಂಥ ನಂಬಿಕೆಗಳನ್ನೇ ವಾಸ್ತವವೆಂದು ನಂಬಿದ ಮನಸ್ಸು ಅದಕ್ಕೆ ವಿರುದ್ಧವಾಗಿ ಹೋಗಬೇಕಾದ ಸಂದರ್ಭವನ್ನು ಎದುರಿಸುವಲ್ಲಿ ಸೋಲುತ್ತದೆ. ಪ್ರತಿಕ್ಷಣ ಎದುರಾಗುವ ಸೋಲು ಕೇವಲ ನಂಬಿದವರನ್ನು ಘಾಸಿಗೊಳಿಸದೆ ಅವರ ಸುತ್ತಿನ ಪರಿಸರವನ್ನು ಆಕ್ರಮಿಸುತ್ತದೆ. ಪರಿಣಾಮ ಕೌಟುಂಬಿಕ ವಾತಾವರಣ ಹದಗೆಟ್ಟು ದಾಂಪತ್ಯವೇ ಒಂದು ಸಮಸ್ಯೆಯಾಗುವ ಬದುಕು ಭಾರವಾಗುವ ಸಂಯಮ ತಲೆ ತಪ್ಪಿದ ಸ್ಥಿತಿಯಲ್ಲಿ ಪ್ರೀತಿಯ ಸ್ಥಾನದಲ್ಲಿ ದೌರ್ಜನ್ಯ ಕಾಣಿಸಿಕೊಂಡು ದುರಂತಕ್ಕೊಳಗಾಗುವ ಕ್ಷಣದಲ್ಲಿ ಎಚ್ಚೆತ್ತ ಪ್ರಜ್ಞೆ ವಾಸ್ತವ ಗ್ರಹಿಸುವಲ್ಲಿ ಕಥೆ ಸುಖಾಂತವಾಗುತ್ತದೆ.

ಕಾದಂಬರಿಯ ಕೇಂದ್ರ ಪಾತ್ರ 'ವೈದೇಹಿ' ಬದುಕಿನ ಆರಂಭದಲ್ಲಿ ತಾನು ಪ್ರೀತಿಸಿದ ಅನ್ಯ ಧರ್ಮೀಯ ಯುವಕ ಅನ್ವರನನ್ನು ವಿವಾಹವಾಗಲಾಗದೇ ಹಿರಿಯರ ಒತ್ತಾಯಕ್ಕೆ ಮಣಿದು ಸ್ವಜಾತಿಯ ವರನೊಂದಿಗೆ ಅನಿವಾರ್ಯವಾಗಿ ವಿವಾಹವಾಗುತ್ತಾಳೆ. ಹೇಗೋ ಪಾಲಿಗೆ ಬಂದದ್ದನ್ನು ಸ್ವೀಕರಿಸಿದರಾಯ್ತೆಂದು ಗಂಡನ ಮನೆಗೆ ಹೋದಾಗ ಅಲ್ಲಿ ಅವಳು ಎದುರುಗೊಂಡದ್ದು ನಿರಂತರ ದೌರ್ಜನ್ಯ. ತನ್ನನ್ನು ಬಲಿತೆಗೆದುಕೊಳ್ಳುವ ಹುನ್ನಾರದ ಸುಳಿವರಿತು ತವರು ಮನೆಗೆ ಸಾಂತ್ವನ ಅರಸಿ ಬಂದರೆ ಅಲ್ಲೂ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ'

ಎಂಬ ಧೋರಣೆಯಿಂದ ಅತ್ತ ದರಿ ಇತ್ತ ಪುಲಿ ಎಂಬಂಥ ಇಕ್ಕಟ್ಟಿನ ಸ್ಥಿತಿಯಲ್ಲಿ ನೆಲೆತಪ್ಪಿ ಸಾಯಲೂ ಆಗದೆ ಬದುಕಲೂ ಆಗದೆ ಅನ್ವರನಲ್ಲಿ ಅಳಲು ತೋಡಿಕೊಂಡಾಗ, ದೊರೆತ ಆಸರೆಯ ಭರವಸೆ ಬದುಕಿಗೆ ಆಶಾಕಿರಣವಾಗುತ್ತದೆ. ಆದರೆ ಅಂತರ್‌ಜಾತಿಯ ಪ್ರೇಮ ಸಮಾಜ ಸಮ್ಮತವಾಗುವುದಿಲ್ಲ. ಪಂಚಾಯತಿಯಲ್ಲಿ ಉತ್ತರಿಸಬೇಕಾದ ಸ್ಥಿತಿ ನರಕ ಸದೃಶ. ಕುಟುಂಬ ದೌರ್ಜನ್ಯವನ್ನು ಸಹಿಸಿ, ಹೇಗೊ ಪಾರಾಗಿ ಬದುಕಲು ಬಂದವಳಿಗೆ ನಲ್ಲನ ಆಸರೆ ಹೊಸ ಭರವಸೆ ನೀಡುತ್ತದೆ. ಪಂಚರ ಪ್ರಶ್ನೆಗಳಿಗೆ ವೈದೇಹಿ 'ನಾನೂ ಮನುಷ್ಯಳು ನನಗೂ ಮನಸ್ಸಿದೆ ಆಸೆಗಳಿವೆ. ಆಗಿ ಹೋದುದನ್ನು ಮರೆತು ಕೈ ಹಿಡಿದವನನ್ನು ಪ್ರೀತಿಸಬೇಕು ಗೌರವಿಸಬೇಕು. ಈ ನನ್ನ ಬದುಕನ್ನು ಅವನಿಗೆ ಕಾಯಾ ವಾಚಾ ಮನಸ್ಸಾಧಾರೆಯೆರೆದು ಕನಸುಗಳನ್ನೆಲ್ಲಾ ನನಸಾಗಿಸಬೇಕೆಂದೇ ಹೋಗಿದ್ದೆ, ಆದರೆ ಕೆಲವೇ ದಿನಗಳಲ್ಲಿ ನನ್ನ ಆಶೆಯ ಬಳ್ಳಿನೆಲ ಕಚ್ಚಿತು. ಅತ್ತೆ ಅನ್ನಿಸಿಕೊಂಡವಳು ಪ್ರತಿನಿತ್ಯ ಪೀಡಿಸಿ..... ಕೊಡಬೇಕಾದ ವರದಕ್ಷಣೆ ಬಾಕಿಯನ್ನೇ ಮುಟ್ಟಿಸಿಲ್ಲ ಎಂದೂ, ಮಾತೆತ್ತಿದರೆ ನಿನ್ನ ಮುಖ ನೋಡಿಕೊ ತಿರುಪತಿ ತಿಮ್ಮನಂತೆ ಕಲೀಕಲ್ಲು ದರಿದ್ರಮ್ದು ಎಂದು ಸೋಟೆ ತಿವಿಯುತ್ತಿದದ್ದರು. ಅನ್ನಿಸಿಕೊಂಡು ಬೇಸತ್ತ ನಾನು ಒಂದು ದಿನ 'ದೇವರು ಕೊಟ್ಟ ಬಣ್ಣ ನಾನೇನು ಮಾಡಲಾದೀತು ಅಂದದ್ದಕ್ಕೆ 'ಮಿಟುಕಲಾಡಿ ಏನೇ ತಿರುಗಿ ಮಾತಾಡುವಷ್ಟು ಕೊಬ್ಬೆ ನಿನಗೆ' ಎಂದು ಅಲ್ಲಿಯೇ ಬಿದ್ದ ಊದುಗೋಳವೆಯಿಂದ ಚನ್ನಾಗಿ ಥಳಿಸಿದಾಗ ತಲೆ ಯೊಡೆದು ರಕ್ತ ಹರಿಯಿತು ಮನೆಯವರಿಗೆಲ್ಲಾ ಏನೇನೋ ಹೇಳಿದರು. ನನ್ನ ಮತ್ತು ಅನ್ವರನ ವಿಷಯ ಅವರಿಗೆ ಹೇಗೋ ತಿಳಿದಿದೆ ಎಂಬುದು ನನಗೆ ಗೊತ್ತಾಯಿತು. ಆ ಮೇಲೆ ಪ್ರತಿದಿನ ಏನಾದರು ನೆಪಮಾಡಿಕೊಂಡು ಎಲ್ಲರೂ ಸೇರಿ ಹೊಡೆಯೋದು, ಮೈ ತುಂಬ ಬರೆ ಹಾಕೋದು, ಸೂಜಿ ಡಬ್ಬಣ, ಬ್ಲೇಡುಗಳಿಂದ ಮೈತುಂಬ ಗಾಯ ಮಾಡಿ ಸುಣ್ಣದ ನೀರನ್ನು ಸುರಿಯೋದೆಲ್ಲ ನಡೆಯಿತು. ಕೊನೆಯಲ್ಲಿ ಈ ಮನೆಬಿಟ್ಟು ಎಲ್ಲಾದರೂ ಹಾಳಾಗಿ ಹೋಗು ಎಂದು ಪೀಡಿಸ ತೋಡಗಿದರು. ಒಂದು ದಿನ ಅವರೆಲ್ಲರೂ ಸೇರಿ ನನ್ನನ್ನು ಸುಡ ಬೇಕೆಂದು ಮಾಡಿದ ಸಂಚು ತಿಳಿದು ಹೇಗೋ ತಪ್ಪಿಸಿಕೊಂಡು ಊರು ಸೇರಿದೆ 'ಕೆಟ್ಟು ತವರನ್ನು ಸೇರಿದವಳಗೆ ಯಾವ ಬೆಲೆ!

'ಹೆಣ್ಣಿನ ಪಾಲಿಗೆ ಹುಟ್ಟಿದ ಮನೆ ಕೊಟ್ಟ ಮನೆಗಳೆರಡೂ ನರಕ ಸದೃಶವಾದರೆ ಅವಳು ಬದುಕುವದೆಂತು'

ಹೇಳಿ ಪಂಚರೇ ಜಾತಿ ಕುಲಗೋತ್ರ ಸಂಪ್ರದಾಯಗಳನ್ನು ಎತ್ತಿ ಹಿಡಿಯುವ ಈ ಸಮಾಜ ನನಗೆ ಹೊಸ ಬದುಕನ್ನು ಕೊಡುತ್ತದೆಯೇ ಎಂಬ ಇಲ್ಲಿಯ ಪ್ರಶ್ನೆ ಶತಮಾನಗಳಿಂದ ದೌರ್ಜನ್ಯಕ್ಕೊಳಗಾಗಿ ನರಳಿದ ಮಹಿಳೆಯರ ಪ್ರಶ್ನೆ ಎಂಬಂತೆ ತೋರುತ್ತದೆ. ಪುರುಷ ಹಿತಚಿಂತನೆಯನ್ನು ಗುರಿಯಾಗಿಟ್ಟುಕೊಂಡು ರೂಪಿಸಲ್ಪಟ್ಟ ಸಾಮಾಜಿಕ ನಿಯಮಗಳು ಮಹಿಳೆಯ ಬದುಕಿಗೆ ಮಾರಕವಾಗಿವೆ ಎಂಬುದನ್ನು ಮೇಲಿನ ಮಾತುಗಳು ಪ್ರತಿನಿಧಿಸುತ್ತವೆ.

ಅನ್ಯ ಧರ್ಮೀಯರೀರ್ವರ ಪ್ರೇಮ ವೈಯಕ್ತಿಕವಾಗದೆ ಕುಟುಂಬ ಮತ್ತು ಜಾತಿ ವ್ಯವಸ್ಥೆಯನ್ನು ವ್ಯಾಪಿಸುತ್ತದೆ. ವೈದೇಹಿಯ ಮೀರುವಿಕೆಯಿಂದಾಗಿ ಅವಳ ತಂದೆಯ ಸ್ಥಾನಮಾನಕ್ಕೆ ಧಕ್ಕೆಯುಂಟಾಗುತ್ತದೆ. ಆರ್ಥಿಕ ಆಸರೆಯಾಗಿದ್ದ ಪೌರೋಹಿತ್ಯ ಕೈ ತಪ್ಪುತ್ತದೆ. ಮಾತ್ರವಲ್ಲ ಅವಳ ತಂಗಿಯ ಭವಿಷ್ಯದ ಬದುಕನ್ನು ಅದು ಪ್ರಭಾವಿಸುತ್ತದೆ. 'ಹೆಣ್ಣು ಹೆತ್ತದ್ದಕ್ಕೆ ಈಗಾಗಲೇ ಬೇಕಾದಷ್ಟು ಪಶ್ಚಾತಾಪವಾಗಿದೆ ಉಳಿದಿದೆ ಯಾದರೂ

ಏನೂ' ಎಂದು ಆಚಾರ್ಯರು ಹೇಳುವಲ್ಲಿ ಸಮಸ್ಯೆ ಕೇವಲ ಪ್ರೇಮಿಸಿದ ಹೆಣ್ಣಿಗೆ ಸಂಬಂಧಿಸಿದ್ದಲ್ಲ. ಅದು ಮಹಿಳೆಯ ಬದುಕಿನೊಂದಿಗೆ ಅವಳ ಕುಟುಂಬ ಸದಸ್ಯರ ಬದುಕನ್ನು ದಾರುಣವಾಗಿಸುತ್ತದೆ ಎಂಬುದನ್ನು ಮನಗಾಣಿಸುತ್ತದೆ.

ಲಲಿತಾ ದೇಮಶೆಟ್ಟಿಯವರ ಕಾದಂಬರಿಯನ್ನು ಮನೋ ವೈಜ್ಞಾನಿಕ ಮಹತ್ವದ್ದೆಂದು ಮುನ್ನುಡಿಯಲ್ಲಿ ಮಾಗಳದ ಅವರು ಗುರುತಿಸುತ್ತಾರೆ. ಸಾಹಿತ್ಯ ಕೃತಿಗೂ ಲೋಕಕ್ಕೂ ಇರುವ ಸಂಬಂಧ ಹಲವು ಬಗೆಯದು. ಚರಿತ್ರೆ, ತತ್ವಶಾಸ್ತ್ರ, ಸಮಾಜಶಾಸ್ತ್ರ, ಮನಶಾಸ್ತ್ರ, ಇವೆಲ್ಲವೂ ಒಂದಿಲ್ಲೊಂದು ಬಗೆಯಲ್ಲಿ ಮನುಷ್ಯರನ್ನು ಕುರಿತ 'ಸತ್ಯ'ದ ಅನ್ವೇಷಣೆಯನ್ನು ಕೈಗೊಂಡಿರುವುದಾಗಿ ಘೋಷಿಸಿವೆ. ಹಾಗಾಗಿ ಇಂಥದೆ ಒಂದು ಅನ್ವೇಷಣೆಯಲ್ಲಿ ತೊಡಗಿರುವ ಸಾಹಿತ್ಯ ಕೃತಿಗೂ ಈ ಜ್ಞಾನ ಶಿಸ್ತುಗಳಿಗೂ ಸಾಹಚರ್ಯದ ಸಂಬಂಧಮೊಂದು ಸಾಧ್ಯವೆಂದು ಕೆಲವರು ತಿಳಿಯುತ್ತಾರೆ. ಸಾಹಿತ್ಯ ಮತ್ತು ಮನಶಾಸ್ತ್ರದ ಕುರಿತು, ಇರುವ ತಿಳಿವಳಿಕೆಯೂ ಆ ಬಗೆಯದು.

ಮನೋ ಲೋಕದ ಸಮಸ್ಯೆಯನ್ನು ತುಂಬ ಢಾಳಾಗಿ ನಿರೂಪಿಸುವ ಲಲಿತಾ ದೇಮಶೆಟ್ಟಿಯವರು ಆ ಸಮಸ್ಯಯ ಸ್ಥಿತಿಯಿಂದ ಹೊರಬರಲು ಸಹಜೀವಿಗಳ ಸಹಕಾರ, ಅನುಕಂಪ, ಸಹಾನುಭೂತಿ, ತಿಳುವಳಿಕೆಗಳು ಮುಖ್ಯವೆಂದು ತಿಳಿಯುತ್ತಾರೆ. ಮನೋ ವಿಕಾರ ಬಲಿತು ರೋಗವಾಗಿ ಪರಿಣಮಿಸುವ ಮೊದಲೇ ಪರಸ್ಪರ ಅರಿತು ಪಾರಾಗುವಂತೆ ಕಥೆಯನ್ನು ನಿರ್ವಹಿಸುತ್ತಾರೆ. ಪರಸ್ಪರ ಅರಿವಿನ ಪ್ರೀತಿ ಸಿಂಚನವೇ ರೋಗ ನಿಧಾನವಾಗುತ್ತದೆ.

ಮದುವೆಯ ಸಂತೊಷಕೂಟಕ್ಕೆ ಮುಸ್ಲಿಂ ಸಂಪ್ರದಾಯದಂತೆ ಅಡಿಗೆ ಸಿದ್ಧಪಡಿಸಲೆಂದು ಹೋತ ಒಂದನ್ನು ಕೊಂದಾಗ ಚಿಮ್ಮಿದ ರಕ್ತ ಮತ್ತು ಕೂಗಿನ ವಿಕಾರತೆಗಳನ್ನು ಕಂಡು ಕೇಳಿದ ವೈದೇಹಿ ತಾನೂ ವಿಕಾರವಾಗಿ ಕಿರುಚಿ ಥರಥರ ಕಂಪಿಸಿ ಭಯಗ್ರಸ್ತ ಮೂರ್ಛೆಗೊಳಗಾಗುತ್ತಾಳೆ. ಅವಳ ಮನಸ್ಸಿನ ಮೇಲೆ ತೀವ್ರ ಆಘಾತವನ್ನುಂಟು ಮಾಡಿದ ಈ ದೃಶ್ಯ, ಅವಳ ಸುಪ್ತ ಪ್ರಜ್ಞೆಯಲ್ಲಿ ಗಟ್ಟಿಗೊಂಡು ಅಪ ಸಾಮಾನ್ಯ ವರ್ತನೆಗೆ ಕಾರಣವಾಗುತ್ತದೆ. ತನ್ನದು ಶ್ರೇಷ್ಠಜಾತಿ, ಅನ್ವರನದು ಮಾಂಸ ತಿನ್ನುವ ಹೀನ ಧರ್ಮ ಎಂಬ ಭಾವನೆ ಅವನೊಂದಿಗಿನ ಶರೀರ ಸಂಬಂಧಕ್ಕೆ ಸಮ್ಮತಿಸುವುದಿಲ್ಲ. ಪ್ರಾಣಿ ಹತ್ಯೆ ಮಾಂಸ ಸೇವನೆ ಪಾಪವೆಂಬ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದವಳಿಗೆ ಈ ಎರಡರಲ್ಲಿ ತೊಡಗಿರುವ ಅನ್ವರ ಪ್ರೀತಿಸಲು ಬೇಕು ಪ್ರಣಯ ಕೇಳಿಗೆ ಬೇಡ ಎಂದು ದೂರವಿರಿಸುತ್ತಾಳೆ. ಅನ್ವರ್ ಅವಳನ್ನು ಒಲಿಸಲು ಪ್ರಯತ್ನಿಸಿದರೂ ದೂರವಾಗುತ್ತಾಳೆ. ಒಂದೇ ಸೂರಿನಡಿ ವೈವಾಹಿಕ ಬಂಧನದಲ್ಲೂ ಕೈಗೂಡದ ಬಯಕೆಯ ಪರಿಣಾಮ ಬಹು ಬೇಗ ಕಾಣಿಸಿ ಕೊಳ್ಳುತ್ತದೆ. ವೈದೇಹಿಯನ್ನು ಗಾಢವಾಗಿ ಪ್ರೀತಿಸುವ ಅನ್ವರ್ ಅವಳ ಮನಸ್ಸಿನ ವಿರುದ್ಧ ವರ್ತಿಸದೆ ಸಂಯಮ ತೋರುತ್ತಾನೆ. ಆದರೆ ಹೆಚ್ಚು ದಿನ ಪ್ರಕೃತಿಯ ವಿರುದ್ಧ ಸೆಣಸಲಾಗದೆ. ಒತ್ತಾಯ್ಯದಿಂದ ತನ್ನಿಚ್ಛೆಯನ್ನು ಪೂರೈಸಿಕೊಳ್ಳಲೂ ಆಗದೆ ಅಪಸಾಮಾನ್ಯ ವರ್ತನೆಗೀಡಾಗುತ್ತಾನೆ. ಅಂಥ ಸ್ಥಿತಿಯಲ್ಲಿ ವೈದೇಹಿಯ ಕೊಲೆಗೂ ಎಳಸುತ್ತಾನೆ. ಅವಳ ನೋವಲ್ಲಿ ಸಂತಸ ಕಾಣುವ ವಿಕೃತಿಗೊಳಗಾಗುತ್ತಾನೆ. ಸಾಮಾನ್ಯ ಸ್ಥಿತಿಗೆ ಬಂದಾಗ ಇಬ್ಬರೂ ಪಶ್ಚಾತಾಪ ಪಡುತ್ತಾರೆ. ತಮ್ಮ ದೌರ್ಬಲ್ಯವೇನು ಎಂಬುದು ಇಬ್ಬರಿಗೂ ತಿಳಿದಿದೆ ಅದನ್ನು ಮೀರಲು ಇಬ್ಬರೂ ಶ್ರಮಿಸುತ್ತಾರೆ. ಆದರೆ ಇದರ ಸುಳಿವು ದೊರೆತ ಹಿರಿಯರು ಮಗನ

ಮರುಮದುವೆಯಿಂದ ಸಮಸ್ಯೆ ಬಗೆಹರಿಸಲು ಯೋಚಿಸುವಲ್ಲಿ ಪಿತೃ ಪ್ರಧಾನ ಆಲೋಚನೆ ಕೆಲಸ ಮಡುತ್ತದೆ. ಸೊಸೆ ಉಂಡರೂ ಉಪವಾಸವಿದ್ದರೂ ಕೇಳದ ಜನ ಮಗನ ಆರೋಗ್ಯದ ಸುಧಾರಣೆಗೆ ಯೋಚಿಸುವುದು ಸ್ತ್ರೀವಿರೋಧಿಯಾಗಿಯೆ. 'ಪುರುಷ ಅಪಸಾಮಾನ್ಯ ವರ್ತನೆ ಕುಟುಂಬ ನೆಲೆಯ ಸಹಾನುಭೂತಿಗೆ ಪಾತ್ರವಾಗಿ ಬೇಗ ಗುಣಮುಖವಾಗುವ ಅವಕಾಶ ಪಡೆದರೆ ಸ್ತ್ರೀಯ ಅಪಸಾಮಾನ್ಯ ವರ್ತನೆ ವೈಯಕ್ತಿಕ ನೆಲಯಲ್ಲಿ ಗುರುತಿಸಲ್ಪಟ್ಟು ಸಮಸ್ಯೆ ಸಂಕೀರ್ಣವಾಗುತ್ತ ಹೋಗುತ್ತದೆ' (ಎಚ್. ಎಸ್ ಶ್ರೀಮತಿ ಯವರೊಂದಿಗಿನ ಚರ್ಚೆಯಲ್ಲಿ ಹೇಳಿದ್ದು) ಮಹಿಳೆಗೆ ಯಾವುದೇ ಸಹಕಾರ, ಸಹಾನುಭೂತಿ ದೊರೆಯದಿದ್ದಾಗಲೂ ಅವಳ ಮನೋಬಲವೇ ಕೆಲಮೊಮ್ಮೆ ಅವಳು ಆ ಸ್ಥಿತಿಯಿಂದ ಹೊರಬರಲು ಕಾರಣವಾಗುತ್ತದೆ.

ಅನ್ವರನ ಬಿಗಡಾಯಿಸುತ್ತಿದ್ದ ಆರೋಗ್ಯ ಸ್ಥಿತಿ, ಮರುಮದುವೆಯ ಏರ್ಪಾಡು, ತನ್ನ ಅಸ್ತಿತ್ವದ ಚಿಂತನೆ ವೈದೇಹಿ ಸಮಸ್ಯೆಯನ್ನು ಗ್ರಹಿಸುವಂತೆ ಮಾಡುತ್ತವೆ. ಬದುಕಬೇಕೆಂಬ ತೀವ್ರ ಹಂಬಲ ಪರಿಹಾರದ ಶೋಧಕ್ಕೆ ತೊಡಗಿಸುತ್ತವೆ. ಅನ್ವರನ ಅರೆ ಪ್ರಜ್ಞಾವಸ್ಥೆಯ ಬಡಬಡಿಸುವಿಕೆಯೂ ತನ್ನ ಮೇಲಿನ ಪ್ರೀತಿಯನ್ನೇ ಸಾರಿದಾಗ ಸಂಪ್ರದಾಯ ನಂಜಿಕೆಗಳು ನೆಲೆ ತಪ್ಪುತ್ತವೆ. ಬದುಕಿ ಬದುಕಿಸುವ ಧರ್ಮವೊಂದೇ ಧರ್ಮವಾಗುತ್ತದೆ. ಪ್ರೇಮ ಎಲ್ಲವನ್ನು ಮೀರುತ್ತದೆ.

ವೈದೇಹಿ ಬದುಕಿನ ಹೋರಾಟದಲ್ಲಿ ಸಮಾಜ ಸಂಪ್ರದಾಯ ಧರ್ಮಗಳ ಕಟ್ಟಳೆಯನ್ನು ಮೀರುವ ಪ್ರತಿರೋಧದ ಮಾದರಿಯಾಗಿ ಪ್ರತಿನಿಧಿಸಲ್ಪಟ್ಟಿದ್ದಾಳೆ. ಬದುಕನ್ನು ಒಂದು ಹೇರಿಕೆಯಾಗಿ ಒಪ್ಪದೆ ತನ್ನಿಚ್ಛೆಯಂತೆ ರೂಪಿಸಿಕೊಳ್ಳುತ್ತಾಳೆ. ತೀರ ವಿರುದ್ಧವಾದ ಪರಿಸರದಲ್ಲೂ ಅವಳಿಗೆ ಮಾವ ಮತ್ತು ಗಂಡನ ಸಹಕಾರ ಎಲ್ಲವನ್ನು ಸಹ್ಯವಾಗಿಸುತ್ತದೆ. ತನ್ನನ್ನು ತುಚ್ಛವಾಗಿ ಕಂಡ ಮೊದಲ ಮದುವೆಯನ್ನು ಧಿಕ್ಕರಿಸಿ, ತನ್ನ ಪ್ರಿಯನನ್ನು ಸೇರುವ, ಪುನರ್ ವಿವಾಹದಿಂದ ಸಾಮಾಜಿಕ ಸ್ಥಾನಮಾನ ಕಲ್ಪಿಸಿಕೊಳ್ಳುವ ವೈದೇಹಿ ಲೇಖಕಿಯ ನಿರೀಕ್ಷೆಯ ಮಹಿಳಾ ಮಾದರಿಯಂತಿದ್ದಾಳೆ. ಇದು ಕೇವಲ ಕಲ್ಪನೆಯಲ್ಲ ಸತ್ಯ ಘಟನೆಯಾಧಾರಿತ ಎಂಬುದು ಗಮನಾರ್ಹ ಸಂಗತಿ. ವಾಸ್ತವದಲ್ಲಿ ದುರಂತವಾಗಿದ್ದರೂ ಘಟನೆಯನ್ನು ಕಥನವಾಗಿಸುವಲ್ಲಿ ಸುಖಾಂತಗೊಳಿಸಲಾಗಿದೆ. ಪ್ರೇಮ ವಿವಾಹಗಳ ದುರಂತಕ್ಕೆ ಮುಂದಿನ ಪರಿಣಾಮಗಳ ಚಿಂತನೆಯ ಕೊರತೆಯೆ ಕಾರಣ, ಆ ಅರಿವು ಮತ್ತು ಎದುರಿಸುವ ಮನೋಬಲವಿದ್ದಾಗ ಪ್ರೇಮ ವಿವಾಹ ಯಶಸ್ವಿಯಾಗುತ್ತದೆ ಎಂಬ ಆಶಯ ಇಲ್ಲಿಯದು.

ಗವೀಶ ಹಿರೇಮಠರ 'ಹಕ್ಕಿ ಗೂಡು ಸೇರಿತು' ಜಯಾಳ ಬಳಕೆಗೊಂಡ ಬದುಕು, ಸಾಮಾಜಿಕ ಶೋಷಣೆಯನ್ನು ವಸ್ತುವಾಗುಳ್ಳ ಕಥೆ. ಜಯಾಳ ಶೋಷಣೆ ಕುಟುಂಬ ಸಂಸ್ಥೆಯಿಂದ ಆರಂಭವಾಗುತ್ತದೆ. ಶೀಲ ಪಾವಿತ್ರ್ಯಗಳೇ ಮುಖ್ಯವೆಂದು ಹೇಳಿ ಕೈಗೆ ಸಿಕ್ಕ ಯಾವುದೋ ಪತ್ರವನ್ನು ನೆಪವಾಗಿಟ್ಟುಕೊಂಡು, ಅವಳು ತಾನು ಶೀಲಗೆಟ್ಟಿಲ್ಲವೆಂದು ಪರಿಪರಿಯಾಗಿ ಹೇಳಿದಾಗಲೂ ಪರಿತ್ಯಜಿಸುತ್ತಾನೆ ರಮೇಶ. ಅವಳ ಬದುಕಿನ ನೋವನ್ನು ಕೇಳಿ ಸಾಂತ್ವನ ನೀಡ ಬರುತ್ತಿದ್ದ ಮಾದೇವ ಮದುವೆಯಾಗುವುದಾಗಿ ಹೇಳಿ ವಂಚಿಸುತ್ತಾನೆ. ಪ್ರೀತಿ ತೋರಿದ ಸೋದರ ಮಾವ ಕುಡಿದು ಬಂದು ಅತ್ಯಾಚಾರ ವೆಸಗುತ್ತಾನೆ. ನ್ಯಾಯ ನಿಷ್ಠುರತೆಗಳ ಬಗ್ಗೆ ಬರೆದು ಖ್ಯಾತನಾಗಿದ್ದ ಚಂದ್ರಕಾಂತ ತನ್ನ ಕೆಲಸದವಳೊಂದಿಗೆ ಅನೈತಿಕ ಸಂಬಂಧವಿರಿಸಿಕೊಂಡಿರುತ್ತಾನೆ. ಈಗೆ ಪುರುಷ ಪ್ರಧಾನ ಸಮಾಜ ಹೊರಪ್ರಪಂಚ ಕಾಣುವಂತೆ ಒಳಗಿರುವುದಿಲ್ಲವೆಂಬುದೆ ಮುಗ್ಧ ಜಯಾಳ

ಮಾನಸಿಕ ಆಘಾತಕ್ಕೆ ಕಾರಣವಾಗುತ್ತದೆ. ಅವಳು ಮನೋ ರೋಗಿಯಾಗಿ ಆಸ್ಪತ್ರೆ ಸೇರುತ್ತಾಳೆ. ಅವಳು ಚೇತರಿಸಿಕೊಳ್ಳಲು ಯತ್ನಿಸಿದಾಗಲೆಲ್ಲ ಅವಳ ಮನಸ್ಸನ್ನು ಘಾಸಿಗೊಳಿಸುವ ಘಟನೆಗಳೇ ನಡೆಯುತ್ತವೆ. ಇಡೀ ಜಗತ್ತೇ ವಂಚಕವಾದುದು. ಮೋಸವೇ ಇದರ ನೀತಿ 'ಪ್ರತಿ ಮನುಷ್ಯನ ಕಾಮದ ಬದುಕಿಗೆ ಒಂದು ಪರದೆ ಇರುತ್ತದೆನಿಸಿತು. ಪರದೆ ಹೊರಗಡೆ ಆತ ಅಧಿಕಾರಿ ಸಮಾಜ ಸುಧಾರಕ ವಿದ್ಯಾವಂತ ಪದಪೀಧರ ಭಾರೀ ನಿಷ್ಠಾವಂತ ಇನ್ನೂ ಏನೇನೋ... ಆದರೆ ಪರದೆ ಸರಿಸಿದರೆ ಛೆ ಎಂಥ ಕ್ಷುಲ್ಲಕ ಬದುಕು' 'ಥೂ... ಸ್ವಾರ್ಥಿ ಗಂಡಸು' ಎಂದು ಗಂಡಸರ ಬಗ್ಗೆ ಜಯಾ ತಾತ್ಸಾರ ಬೆಳೆಸಿಕೊಳ್ಳುವಂತಾಗುತ್ತದೆ. ಶೀಲವತಿಯಾಗಿ ಬದುಕಬೇಕೆಂದವಳ ಶೀಲದ ಮೇಲೆ ಮತ್ತೆ ಮತ್ತೆ ಆಕ್ರಮಣ ನಡೆಯುತ್ತದೆ. ಇದನ್ನೇ ಅವಳು ಡಾಕ್ಟರಗೆ 'ಹೆಣ್ಣು ತನ್ನ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಬದುಕಿದರೂ ಈ ಕಾಮುಕರು ಬದುಕಗೊಡುವುದಿಲ್ಲ. ಅವಳ ಸೀರೆ ಸೆಳೆದು ಬತ್ತಲೆ ಮಾಡಿ ಸುಖಿಸಬೇಕೆನ್ನುವ ದುಶ್ಯಾಸನರು ಇಲ್ಲಿ ಸಾಕು ಸಾಕೆನ್ನಿಸುವಷ್ಟು ಜನ. ಡಾಕ್ಟರ ನಾನು ಹೋರಾಡಿದ್ದು ಕಾಡು ಹಂದಿಗಳ ಜೊತೆ. ಮೃಗಗಳ ಜೊತೆ. ಪಶುಗಳ ಜೊತೆ ಕೊನೆಗೆ ಸೋತದ್ದು ನಾನೇ ನನ್ನ ಸೋದರ ಮಾವ ನನ್ನ ಬಗ್ಗೆ ಅನುಕಂಪ ಪಟ್ಟಿದ್ದು. ಕೊನೆಗೆ ಆತ ಮಾಡಿದ್ದೇನು? ಹೀಗೆ ಗಂಡ. ಗೆಳೆಯ. ಸೋದರ ಮಾವ ಎಲ್ಲರೂ ಅವಳನ್ನು ಬಳಸಿಕೊಂಡು ಕೈ ಬಿಡುತ್ತಾರೆ. ಅವಳ ಮನೋವಿಕಲತೆಗೆ ಕಾರಣರಾಗುತ್ತಾರೆ. ಆದರೆ ಅನಿರೀಕ್ಷಿತವಾಗಿ ಅವಳ ಬದುಕಿನ ಬಿರುಗಾಳಿಯನ್ನು ನಿವಾರಿಸುವ. ತನಗರಿವಿಲ್ಲದೆ ಇಷ್ಟೆಲ್ಲಕ್ಕು ಕಾರಣನಾದ ದಯಾನಂದನ ಆಗಮನ. ಅವಳ ಬದುಕಿಗೆ ಹೊಸತನ ನೀಡುತ್ತದೆ. ಜಯಾ ಅವನ ವರ್ತನೆಯನ್ನು ಅನುಮಾನಿಸುವಾಗ ಅವನು 'ಜಯಾ ನೀನು ನನ್ನ ಆತ್ಮೀಯ ಸಹೃದಯದವಳೆಂದು ಒಂದೇ ಗೊತ್ತು ನನಗೆ ನಿನ್ನ ಶೀಲ.... ಅಶ್ಲೀಲ... ಪಾಪ... ಪುಣ್ಯ... ನಾ ವಿಚಾರಿಸಲಾರೆ, ಅವುಗಳಿಗೆ ನನ್ನಲ್ಲಿ ಬೆಲೆಯಿಲ್ಲ' ಎಂದು ಹೇಳಿದ್ದು ಜಯಾಳ ಬದುಕಿಗೆ ಭರವಸೆ ತುಂಬುತ್ತದೆ. ಶೀಲ ಪಾವಿತ್ರ್ಯದ ಕಾರಣಕ್ಕೆ ಹೆಣ್ಣಿನ ಬದುಕನ್ನು ಹಾಳುಗೆಡಹುವವರಿದ್ದಂತೆ, ಹೆಣ್ಣಿನ ಬದುಕಿಗೆ ಭರವಸೆಯಾಗುವವರೂ ಇದ್ದಾರೆ ಎಂಬುದನ್ನು ಕಥೆ ನಿರೂಪಿಸುತ್ತದೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯ ಮಲ್ಲವ್ವ ದ್ವಂದ್ವ ವ್ಯಕ್ತಿತ್ವದ ಪಾತ್ರವಾಗಿ ಚಿತ್ರಣ ಗೊಂಡಿದ್ದಾಳೆ. ನೀಲವ್ವ ಜೋಗುಣಿಯಾಗಲು ಒಲ್ಲದೆ ಆತ್ಮಹತ್ಯೆ ಮಾಡಿಕೊಂಡಾಗ ದೇವರು-ಧರ್ಮ ಮತ್ತು ಹರಕೆಯ ಕುರಿತು, ಪ್ರೀತಿ ಪ್ರೇಮದ ಕುರಿತು ಅತ್ಯಂತ ವೈಚಾರಿಕಳಾಗಿ ವರ್ತಿಸುವ ಮಲ್ಲವ್ವ, ಮಲ್ಲಪ್ಪನ ಸಾವಿನಿಂದ ಆಘಾತಕ್ಕೊಳಗಾಗಿ ಸ್ವತಃ ಮನೋರೋಗಿಯಾಗುತ್ತಾಳೆ. ಅವಳ ಮಾನಸಿಕ ಒತ್ತಡ ವಿವಿಧ ವಿಚಿತ್ರ ವರ್ತನೆಯಲ್ಲಿ ಹೊರ ಹೊಮ್ಮುತ್ತದೆ. ಮನೆಯವರು ಅದನ್ನು ದೆವ್ವವೆಂದು ಭಾವಿಸುತ್ತಾರೆ. ದೆವ್ವ ಬಿಡಿಸಲೆಂದೆ ಜೀವಣಗಿ ಅಂಬಾಬಾಯಿ ಯಲ್ಲಿಗೆ ಕರೆದೊಯ್ಯುತ್ತಾರೆ ಆ ಅಂಬಾಬಾಯಿ ಮಲ್ಲವ್ವಳ ಮೈಯಲ್ಲಿ ಮಾದರ ಕಳಸಪ್ಪನ ದೆವ್ವ ಸೇರಿದೆ ಎಂದು ಹೇಳುತ್ತಾಳೆ. ಮಲ್ಲವ್ವ ತನಗೆ ದೆವ್ವ ಮೆಟ್ಟಿಕೊಂಡಿದೆ ಎಂದು ನಂಬುತ್ತಾಳೆ.

ವಾಸ್ತವವಾಗಿ ಮಲ್ಲವ್ವ ಗಂಡನ ಸಾವಿನಿಂದ ಆಘಾತಕ್ಕೆ ಒಳಗಾಗಿರುತ್ತಾಳೆ. ಮಗಳ ಅಗಲಿಕೆ ಅವಳನ್ನು ಮತ್ತೂ ಘಾಸಿಗೊಳಿಸುತ್ತದೆ. ಅವಳನ್ನು ಕಾಣಬೇಕು, ಮಾತಾಡಬೇಕು ಎಂಬ ಹಂಬಲ ಚಡಪಡಿಕೆಯಾಗಿ. ಗೀಳಾಗಿ ಮನೋ ರೋಗವಾಗುತ್ತದೆ. ಮಗಳು ಏನೇ ತಪ್ಪು ಮಾಡಿರಬಹುದು ಸಂಬಂಧ ಕಡಿದುಕೊಂಡು ಬದುಕುವುದು ಅವಳಿಂದ ಸಾಧ್ಯವಾಗುವುದಿಲ್ಲ.

'ಆಕಿ ಹೆಸರ ತಗದರೇ ನನ್ ಹೊಟ್ಯಾಗ ಬೆಂಕಿ ಬೀಳ್ತದೆ ತಂಗೀ... ಒಂಬತ್ತು ತಿಂಗಳ ಹೊತ್ತು, ಬ್ಯಾನಿತಿಂದು ಹಡ್ದು, ಜ್ವಾಕಿ ಜತನ ಮಾಡಿದ ಮಗಳಿಗಿ ಮರಿ ಅಂದ್ರ ಹ್ಯಾಂಗ ಮರೀಲಿ ನಾನು. ಅಕಿನ ಹಣೇಬರಾ ಕೆಟ್ಟು ಓಂತಾ ಮಾಡಬಾರ್ದ್ದ ಕೆಲಸಾ ಮಾಡ್ಯಾಳ ಖರೇ... ಹಾಗಂತ ಅಕೀಗಿ ಪೂರಾ ಎರು ಮಾಡಿ ಬಿಟ್ಟು ಮಾರಿ ಕರ್‍ತ್ರಗ ಮಾಡ್ಕೊಂಡು ಕೂಡಂದ್ರ ಹ್ಯಾಂಗ ಕೂಡ್ಲೀ ಅತ್ತೀ. ಹಡ್ದ ಕಳ್ಳದೂ ಕೇಳಂಗಿಲ್ಲೇ ಎವ್ವಾ.. ಜೀವದಲಿಂದಿದ್ದು.... ಒಂದೇ ಊರಾಗ ಹೀಂಗ ಮಗಳ ಮಾರಿ ಯರು ಮಾಡದಕ್ಕಿಂತಾ ನನ್ ಗಂಡನಂಗ ಒಮ್ಮಿಗಲೇ ಸಾಯೋದು ಛೋಲೋ ಖರೇ ಆದರ ಆ ಸಾವಿಗಿ ನನ್ ಮ್ಯಾಲ ಕರುಣಾ ಬರಂಗಿಲ್ಲಾಗ್ಯಾದಲ್ಲೋ ಶಿವನೇ' ಅಂತಂದು ಮಲ್ಲವ್ವ ಸೆರಗು ಹಚ್ಚಿಕೊಂಡು ಅಳತೊಡಗುತ್ತಾಳೆ.

ಮೇಲಿನ ವಿವರವನ್ನು ನೋಡಿದರೆ ಮಲ್ಲವ್ವ ತನ್ನ ಭಾವನೆಗಳನ್ನು ಅದುವಿಟ್ಟು, ಕಾಶಮ್ಮಳನ್ನು ಮಾತಾಡಿಸಿದರೆ ಮಗನೇನ್ನುತ್ತಾನೋ ಎಂಬ ಹೆದರಿಕೆಯಿಂದಲೇ ಮನೋರೋಗಿಯಾದದ್ದು ಸ್ಪಷ್ಟವಾಗುತ್ತದೆ. ಗಂಡನೊಂದಿಗೆ ಬದುಕುವಾಗ ಅವನಿಗೆ ಹೆದರಿ, ಮುಂದೆ ಮಗ ಮನೆಯ ಜವಾಬ್ದಾರಿ ಹೊತ್ತಾಗ ಅವನಿಗೆ ಹೆದರಿ ಮನಸ್ಸಿನ ಸ್ಥಿಮಿತವನ್ನು ಕಳೆದುಕೊಳ್ಳುತ್ತಾಳೆ. ಹೆಣ್ಣು ತನ್ನ ಜೀವಿತದ ಯಾವ ಕ್ಷಣದಲೂ ಸ್ವತಂತ್ರಳಲ್ಲ. ಗಂಡನ ಆಸರೆಯಲ್ಲೆ ಜೀವನ ಕಳೆಯಬೇಕು. ಆಸರೆ ಎನ್ನುವುದಕ್ಕಿಂತ ಅಂಕೆಯಲ್ಲಿ ಕಳೆಯಬೇಕಾದುದೆ ವಾಸ್ತವ. ಕಿರಿಯನಿರಲಿ ಹಿರಿಯನಿರಲಿ ಗಂಡು ಆಳುವವನಾಗಿ ಹೆಣ್ಣು ಆಳಿಸಿಕೊಳ್ಳುವವಳಾಗಿ ಇರಬೇಕಾದುದು ಸಮಾಜ ನಿಶ್ಚಯಿಸಿದ ನಿಯಮ ಅದನ್ನು ಮೀರಲಾಗದು, ಮೀರಿದವರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಮೀರದೆ ಬದುಕಲು ಹೊರಡುವವರನೇಕರು ಮನೋರೋಗಿಗಳಾಗುತ್ತಾರೆ. ಮಲ್ಲವ್ವಳ ಮಾನಸಿಕ ಅಸ್ವಸ್ಥತೆ ವ್ಯವಸ್ಥೆಯ ಕಾರಣವಾಗಿ ಗುಣವಾಗುವುದಿಲ್ಲ. ಆರಂಭದಲ್ಲಿ ಮಗ ಕಲ್ಯಾಣಿ ಅವಳನ್ನು ಗುಣಮುಖಳಾಗಿಸಲು ಶ್ರಮಿಸುತ್ತಾನೆ. ಅವನು ಕೊಲೆ ಆರೋಪದಿಂದ ಜೈಲು ಸೇರಿದಾಗ ಮಲ್ಲವ್ವ ಜರ್ಜರಿತಳಾಗುತ್ತಾಳೆ. ದಾರಿಗಾಣದಂತಾಗಿ ಮನೋರೋಗಿಯಾಗಿಯೆ ಕೊನೆಗಾಣುತ್ತಾಳೆ. ಬೇನೆಯೊಂದು ಬರೆಯೊಂದಾದರೆ ಗುಣವಾಗಲು ಸಾಧ್ಯವಿಲ್ಲವೆಂಬ ಸಂಗತಿಯನ್ನು ಗೀತಾ ಅವರು ಹೃದಯ ಸ್ಪರ್ಶಿಯಾಗಿ ಕಥಿಸಿದ್ದಾರೆ.

ಸಿಗ್ಮಂಡ ಫ್ರಾಯ್ಡನ ವಿಚಾರಗಳು ಪುರುಷ ಕೇಂದ್ರಿತವಾಗಿ, ಶರೀರದ ಪ್ರತ್ಯಕ್ಷ ವ್ಯತ್ಯಾಸಗಳನ್ನು ಮಾನದಂಡವಾಗಿಟ್ಟುಕೊಂಡು ಮಾನಸಿಕ ವ್ಯತ್ಯಾಸಗಳಿಗೆ, ಹೆಣ್ಣಿನ ಹೀನಸ್ಥಿತಿಗೆ ಅದೇ ಆಧಾರವೆಂದು ಪ್ರತಿಪಾದಿಸುತ್ತವೆ. ಇಂದಿನ ಸ್ತ್ರೀವಾದಿ ವಿಮರ್ಶಕರು ಸ್ತ್ರೀಯಾತ್ಮಕ ಪುರುಷಾತ್ಮಕಗಳ ಗುಣಗಳು ಮಾನಸಿಕವೆ, ಜೀವಶಾಸ್ತ್ರೀಯವೆ ಅಥವಾ ಸಾಮಾಜಿಕ ರಚನೆಗಳೇ ಎಂಬ ಸಮಸ್ಯೆಯನ್ನು ಚರ್ಚಿಸಲು ಮನೋ ವಿಶ್ಲೇಷಣೆಯನ್ನು ಬಳಸಿಕೊಳ್ಳುತ್ತಿದ್ದಾರೆ.

ನ್ಯಾನ್ಸಿಚೋಡರೋವ್ ಸುಪ್ತ ಪ್ರಜ್ಞೆಯ ಮಾನಸಿಕ ಪ್ರಕ್ರಿಯೆಗಳನ್ನು ನಿರಾಕರಿಸುವ, ಲಿಂಗಪ್ರಭೇದ ಕುರಿತ ಜೀವಶಾಸ್ತ್ರೀಯ ಮತ್ತು ಸಾಮಾಜಿಕ ಸಿದ್ಧಾಂತಗಳಿಗೆ ಉತ್ತರಿಸಲು ಮನೋವಿಶ್ಲೇಷಣಾವಾದವನ್ನು ಬಳಸಲೆತ್ನಿಸುತ್ತಾಳೆ. ಈಡಿಪಸ್ ಕಾಂಪ್ಲೆಕ್ಸ್‌ಗೆ ಮುನ್ನಿನ ಹಂತದ ತಾಯಿ–ಮಗ, ತಂದೆ–ಮಗಳು ಸಂಬಂಧಗಳಿಗೆ ಹೋಲಿಸಿದಂತೆ ತಾಯಿ–ಮಗಳ ಸಂಬಂಧದ ಗುಣಾತ್ಮಕತೆಗೆ ಹೆಚ್ಚು ಒತ್ತು ಕೊಡುತ್ತಾಳೆ. ತಾಯ್ತನದಿಂದಾಗಿ ಮಹಿಳೆ ತನ್ನ ತಾಯಿ ಹಾಗು ತನ್ನ ಮಗುವಿನ ಜೊತೆ ಎರಡು ನೆಲೆಯಲ್ಲಿ ಸಮೀಕೃತಳಾಗುತ್ತಾಳೆ. ಆ ಮೂಲಕ ತಾಯಿ–ಮಗುವಿನ ಚರಿತ್ರೆಯನ್ನು ಪುನರಾವರ್ತಿಸುತ್ತಾಳೆ. ಇದರಿಂದ ತಾಯಿ–ಮಗಳ ಸಂಬಂಧ

ಬಲಗೊಳ್ಳುತ್ತವೆ'.   ಎಂಬ ಪಿವರ ಮಲ್ಲಿಪ್ವಳ ಮನಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಕಾಶಮ್ಮನ ನಡತೆಯನ್ನು ತಪ್ಪು ಎಂದು ನಿರ್ಣಯಿಸುವ ಕಲ್ಯಾಣಿ ತನಗೆ ಅತ್ಯಂತ ಪ್ರಿಯಳಾದರೂ ಆ ಕ್ಷಣ ಅವಳ ಸಂಬಂಧವನ್ನು ಕಡಿದುಕೊಳ್ಳುತ್ತಾನೆ. ಆದರೆ ತಾಯಿಯಾಗಿ ಮಲ್ಲವ್ವಳಿಗೆ ಅದು ಸಾಧ್ಯವಾಗುವುದಿಲ್ಲ. ಅವಳು ಮಗಳಿಗೆ ಮಾನಸಿಕವಾಗಿ ಮತ್ತೂ ಹತ್ತಿರವಾಗುತ್ತಾಳೆ. ಅವಳ ಅಗಲಿಕೆಯನ್ನು ಸಹಿಸದೆ ಮನೋ ರೋಗಿಯಾಗುತ್ತಾಳೆ ಎಂಬುದನ್ನು ಕಾದಂಬರಿ ಶಕ್ತವಾಗಿ ಚಿತ್ರಿಸುತ್ತದೆ.

ಮನೋರೋಗಕ್ಕೆ ತುತ್ತಾದ ಹೈದರಾಬಾದ ಕರ್ನಾಟಕ ಕಥನ ಸಾಹಿತ್ಯದಲ್ಲಿ ಪ್ರತಿನಿಧೀಕರಣಗೊಂಡ ಪಾತ್ರಗಳು ಈಗಾಗಲೆ ಆಯಾ ಕಥೆಗಳನ್ನಾಧರಿಸಿದ ವಿಶ್ಲೇಷಣೆಯಲ್ಲಿ ಗಮನಿಸಿದಂತೆ ಮಾನಸಿಕ ಒತ್ತಡಕ್ಕೆ ಸಿಲುಕಿ ನರಳುತ್ತವೆ. ಲಲಿತಾ ದೇಮಶೆಟ್ಟಿಯವರ ವೈದೇಹಿ ಶಾಂತರಸರ ಸಾವಿತ್ರಿ, ಜಯತೀರ್ಥ ರಾಜಪುರೋಹಿತರ ಭದ್ರಮ್ಮ, ಚಂದ್ರಕಾಂತ ಕುಸನೂರರ ಸರಾಫ್ ಸಾಂಬನಾಯಕನ ಸೊಸೆ, ಗವೀಶ ಹಿರೇಮಠರ ಜಯಾ ಸಮಯಕ್ಕೆ ಒದಗಿದ ಆತ್ಮೀಯ ಆಸರೆ ಹಾಗೂ ಚಿಕಿತ್ಸೆಗಳಿಂದ ಗುಣಮುಖರಾದರೆ ಜಯತೀರ್ಥ ರಾಜಪುರೋಹಿತರ ಸುಮನಾ ಇವುಗಳ ಕೊರತೆಯಲ್ಲಿ ಹುಚ್ಚಿಯಾಗುತ್ತಾಳೆ ಗೀತಾ ನಾಗಭೂಷಣರ ಮಲ್ಲವ್ವ ಮನೋರೋಗಿಯಾಗಿ ಅಸುನೀಗುತ್ತಾಳೆ.

ಬಾಹ್ಯಕಾರಣವು ತಮ್ಮ ಸ್ವಭಾವ ಮತ್ತು ಬದುಕನ್ನು ನಿಯಂತ್ರಿಸುದನ್ನು ಪ್ರತಿಭಟಿಸುವ ಹಿನ್ನೆಲೆಯಲ್ಲಿ ಮಹಿಳೆಯಲ್ಲಿ ಮೂಡಿದ ಅಪಸಾಮಾನ್ಯ ವರ್ತನೆಯನ್ನು ಇಲ್ಲಿ ಕಾಣಿಸಲಾಗಿದೆ. ಒತ್ತಡ ನಿಯಂತ್ರಣಗಳು ಹೆಚ್ಚಾಗಿ ತೋರಿದಡೆಯಲ್ಲೆಲ್ಲ ಹುಚ್ಚು ಕಾಣಿಸಿದೆ. ಮರಳುತನ ಉನ್ಮಾದ, ಹುಚ್ಚು ಮತ್ತು ದೈವ ಹವಾಹನೆ ಕಥನಗಳಲ್ಲಿ ಅಭಿವ್ಯಕ್ತಗೊಂಡ ಮಾನಸಿಕ ಅಸ್ವಸ್ಥತೆಗಳು ಅಪ್ರಜ್ಞಾವಸ್ಥೆಯ ಹೆಣ್ಣಿನ ವರ್ತನೆಗಳು ಅಪಸಾಮಾನ್ಯ ವರ್ತನೆಗಳ ಸಂಕೇತಗಳಾಗಿವೆ.

೪.೬. ಜನಪದ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ :

ವಿಶ್ವದಾದ್ಯಂತ ಪುರುಷ ಪ್ರಧಾನ ಸಂಸ್ಕ್ರತಿಯೇ ಮುಖ್ಯವಾಗಿ ಕಂಡು ಬರುತ್ತಿದೆ. ಇಂಥ ಸಂಸ್ಕೃತಿಯಲ್ಲಿ ಪುರುಷನ ಅಧೀನಳಾಗಿ ಬದುಕುವ ಹೆಣ್ಣಿನ ಸ್ಥಾನ ಎರಡನೆಯ ದರ್ಜೆಯದು. ಪುರುಷ ಶ್ರೇಷ್ಠ ಹೆಣ್ಣು ಕನಿಷ್ಠ ಎಂಬ ಭಾವನೆ ಸಮಾಜದಲ್ಲಿ ಆಳವಾಗಿ ನೆಲೆಯೂರಿಬಿಟ್ಟಿದೆ. ಪುರುಷ ಕೇಂದ್ರಿತ ಸಮಾಜ, ಅತ್ಯಂತ ಚಾಕಚಕ್ಯತೆಯಿಂದ ಶೀಲಚಾರಿತ್ರ್ಯ, ಪಾತಿವ್ರತ್ಯ, ವಿಧೇಯತೆ, ತ್ಯಾಗ, ಸಹನೆ, ಕಷ್ಟಸಹಿಷ್ಣುತೆ ಮುಂತಾದ ಗುಣಗಳನ್ನು ಹೆಣ್ಣಿನ ಪರಮೋಚ್ಚಗುಣಗಳೆಂದು ಆರೋಪಿಸಿ, ಸೀತೆ ಸಾವಿತ್ರಿಯರಂಥ ಹೆಣ್ಣಿನ ಮಾದರಿಗಳನ್ನು ಚಾಲ್ತಿಯಲ್ಲಿ ತಂದಿದೆ. ಈ ಸ್ಥಾಪಿತ ಮೌಲ್ಯಗಳನ್ನು ಒಪ್ಪಿಕೊಂಡ ಹೆಣ್ಣಿಗೆ ಸಮಾಜದಲ್ಲಿ ಹೆಚ್ಚಿನ ಗೌರವವಿರುವುದರಿಂದ ಸಹಜವಾಗಿಯೇ ಜನಪದ ಮಹಿಳೆಯರು ಆ ಮೌಲ್ಯಗಳತ್ತ ಆಕರ್ಷಿತರಾಗಿದ್ದಾರೆ. ಆದರೆ ಶೀಲ, ಪಾತಿವ್ರತ್ಯಗಳ ಕಟ್ಟುಪಾಡು, ಹೆಣ್ಣಿಗೆ ಮಾತ್ರ ಮೀಸಲಾಗಿದ್ದು ಈ ದ್ವಂದ್ವ ನೀತಿಯಿಂದಾಗಿಯೇ ಅವಳ ಜೀವನ ಮತ್ತಷ್ಟು ದಾರುಣಗೊಂಡಿದೆ. ಜೊತೆಗೆ ಕೆರೆ, ಕೋಟೆ ಇತ್ಯಾದಿಗಳಿಗೆ ಮಹಿಳೆಯರನ್ನೆ ಬಲಿನೀಡುವುದುರ ಮೂಲಕ, ಪಕ್ಷಪಾತ ಧೋರಣೆ ಇನ್ನಷ್ಟು ಹೆಚ್ಚಿದೆ. ಹೀಗೆ ಸಮಾಜದ ಎಲ್ಲ ಅನಿಷ್ಟ ಪರಂಪರೆಗೂ ಗುರಿಯಾಗುತ್ತ ಕೌಟುಂಬಿಕ ಶೋಷಣೆಯನ್ನು ಸಹಿಸಿಕೊಳ್ಳುತ್ತ ಹೆಣ್ಣು ಬದುಕುಳಿದಿರುವುದೇ ಸೋಜಿಗದ ಸಂಗತಿ. ಅಂತಹ ದುರ್ಭರವಾದ ಬದುಕಿನ ಮಧ್ಯೆಯೂ ಜೀವಿಸ ಬೇಕೆಂಬ ಆಕಾಂಕ್ಷೆಯೊಂದಿಗೆ

ಅವಳು ಬಾಳಿನಲ್ಲಿ ಅದಮ್ಯ ಉತ್ಸಾಹ ಪ್ರೀತಿಗಳನ್ನು ತೋರಿಸುತ್ತ ಬಂದಿದ್ದಾಳೆ. ಆದರೆ ಇಂತಹ ಜೀವನಪ್ರೀತಿ ಬಾಳಲ್ಲಿ ಕಾಣಿಸಿಕೊಳ್ಳುವುದಕ್ಕೆ ಅಥವಾ ಜೀವನವನ್ನು ಸಹ್ಯ ಮಾಡಿಕೊಳ್ಳುವುದಕ್ಕೆ ಅವಳಿಗೆ ಹಾಡಿನ ಮಾಧ್ಯಮ ಸಹಾಯಕವಾಗಿರುವುದರಲ್ಲಿ ಸಂದೇಹವಿಲ್ಲ. ಜನಪದ ಗರತಿ ತನ್ನ ಬಾಳಿನ ಆಸರಿಕೆ ಬೇಸರಿಕೆಗಳನ್ನೆಲ್ಲ ತೋಡಿಕೊಂಡಿದ್ದು ಬೀಸುಕಲ್ಲಿನ ಮುಂದೆ, ಕುಟ್ಟುವ ಒನಕೆಯ ಮುಂದೆ, ಮತ್ತು ಆತ್ಮೀಯ ಗೆಳತಿಯರ ಮುಂದೆ.

ಔಪಚಾರಿಕ ವಿದ್ಯೆಯನ್ನಾಗಲೀ ಅಕ್ಷರವನ್ನಾಗಲೀ ಬಯಸದೆ ಬಳಸದೆ ನೂರಾರು ಪ್ರತಿಭಾನ್ವಿತರು ಶೃತಿ ಸಂಪ್ರದಾಯದಲ್ಲಿ ತಮ್ಮನ್ನು ಅಭಿವ್ಯಕ್ತಿಸಿ ಕೊಂಡಿದ್ದಾರೆ. ಬರಹಕ್ಕಿಳಿಯದ ನಿರ್ದಿಷ್ಟ ಕೃತಿಕಾರರ ಹೆಸರಿಲ್ಲದ ಜನಪದ ಸಾಹಿತ್ಯ ಸಾಮಾನ್ಯವಾಗಿ ಮಹಿಳಾ ಅಭಿವ್ಯಕ್ತಿಯಾಗಿದ್ದು ಅಡೆತಡೆಗಳನ್ನು ಮೀರಲು ಸಹಾಯ ಮಾಡಿವೆ. ಆದರೆ ಅನಕ್ಷರತೆಯ ಕಾರಣದಿಂದ ಅಮೂಲ್ಯವಾದ ಅಸ್ವೀಕೃತವಾದ ಹಲವಾರು ಅಭಿವ್ಯಕ್ತಿಗಳು ನಷ್ಟಗೊಂಡಿರುವುದೂ ಹೌದು.

ಶಿಷ್ಟ ಸಮಾಜದಲ್ಲಿ ಸ್ಮೃತಿ ಪುರಾಣಗಳ ಮೂಲಕ ಪುರುಷ ಪ್ರಧಾನತೆಯು ಬಲಗೊಳಿಸಲ್ಪಟ್ಟು ಇದೇ ಸಮಾಜದ ಭಾಗವಾಗಿ ಬದುಕುತ್ತಿದ್ದ ಎಲ್ಲ ಜನವರ್ಗಗಳ ಮೇಲೂ ಅದರ ಪ್ರಭಾವ ಗಟ್ಟಿಗೊಂಡಿತು. ಧಾರ್ಮಿಕ ಸಾಮಾಜಿಕ, ಆರ್ಥಿಕ ಅಧಿಕಾರವುಳ್ಳ ಸಮಾಜ ನಿರ್ದೇಶಕರ ಅನುಕರಣೆ ಸಮಾಜದ ಉಳಿದ ಸದಸ್ಯರಿಂದಾದದ್ದು ಸಹಜವಿದೆ. ಸ್ಮೃತಿಕಾರರು ಸ್ತ್ರೀಯರಲ್ಲದ ಕಾರಣ ಸ್ತ್ರೀಯರ ಜೀವನ ರೀತಿನೀತಿಗಳು ಗಂಡಸರಿಂದಲೇ ನಿರ್ಮಿತವಾದವು. ಶೀಲದ ವಿಷಯದಲ್ಲಿ ದ್ವಿಸ್ತರ ನೀತಿಹುಟ್ಟಿಕೊಂಡಿತು. ಪುರುಷರ ಬಲವನ್ನು ಪೌರುಷವೆಂಬ ಹೆಸರಿನಲ್ಲಿ ವೈಭವೀಕರಿಸಿದ ವ್ಯವಸ್ಥೆ ಸ್ತ್ರೀಯರ ಸಂತಾನ ಶಕ್ತಿಯನ್ನು ಅದೇ ದೃಷ್ಟಿಕೋನದಲ್ಲಿ ನೋಡಲಿಲ್ಲ, ಆದರೆ ಆ ಶಕ್ತಿಯೆ ಅವಳನ್ನು ಗೃಹ ಬಂಧನದಲ್ಲಿಡಲು ವ್ಯವಸ್ಥೆಗೆ ನೆರವಾಯಿತು. ಹೊಸ್ತಿಲ ಹೊರಗೆ ಹೆಣ್ಣು ಹೊಗುವುದನ್ನು 'ಹೆಣ್ಣು ತಿರುಗಿ ಕೆಟ್ಟಳು, ಗಂಡು ಕುಳಿತು ಕೆಟ್ಟ' ಇತ್ಯಾದಿ ಗಾದೆ ಮಾತುಗಳ ಮೂಲಕ ನಿಷೇಧಿಸಿದ ಪುರುಷ ಪ್ರಧಾನ ಸಮಾಜ ಸ್ತ್ರೀಯರನ್ನು ಅವಶ್ಯಕ ಶಿಕ್ಷಣದಿಂದಲೂ ವಂಚಿಸಿ 'ಹೆಣ್ಣಿನ ಬುದ್ಧಿ ಮೊಳಕಾಲ ಕೆಳಗೆ' ಎನ್ನುತ್ತ ಡಂಗುರ ಬಡಿಯಿತು. ಇಂಥ ಹೇಳಿಕೆಗಳನ್ನು ಪ್ರಶ್ನಿಸಲಾಗದೆ ಸ್ತ್ರೀ ತಾನು ಎಷ್ಟೆಂದರೂ ಹೆಣ್ಣು ಎಂದು ತನ್ನ ಹುಟ್ಟಿನ ಬಗ್ಗೆ ಕೀಳರಿಮೆ ತಳೆಯುವಂತಾಯಿತು, ಹೀಗೆ ಸ್ತ್ರೀ–ಪುರುಷರ ಜೈವಿಕ ವ್ಯತ್ಯಾಸ ಪುರುಷರಿಂದಲೇ ವ್ಯಾಖ್ಯಾನಿಸಲ್ಪಟ್ಟು ಸ್ತ್ರೀಯರ ಮಾನಸಿಕ ಅವಸ್ಥೆಯನ್ನೇ ಹತ್ತಿಕ್ಕಿತು. ಸ್ತ್ರೀಯರು ಪುರುಷರ ಕಣ್ಣುಗಳ ಮೂಲಕ ತಮ್ಮನ್ನು ಕಂಡುಕೊಂಡರು. ಪುರುಷ ಬದುಕನ್ನು ತನ್ನಿಷ್ಟದಂತೆ ಅನುಭೋಗಿಸಿದರೆ ಮಹಿಳೆ ತಾಯಿಯಾಗಿ, ಹೆಂಡತಿಯಾಗಿ, ಪ್ರೇಯಸಿಯಾಗಿ, ಸೂಳೆಯಾಗಿ ಪುರುಷನಿಗಾಗಿ ಬದುಕಬೇಕಾಯಿತು. ಇದೇ ನಿಜವಾದ ಬದುಕು ಎನ್ನುವಂತಾಯಿತು.

೪.೬.೧ ಸ್ಥಿರಮಾದರಿ

ತಾವರೆಯು ಕೊಳದಲ್ಲಿ ಹುಟ್ಟಿ ದೇವರಿಗೆ ಅರ್ಪಿಸಲ್ಪಡುವಂತೆ ಹೆಣ್ಣು ತವರು ಮನೆಗೆ ಎರವಾಗಲೇ ಬೇಕು. ಮನೆ ಮಂದಿಯ ಸುಖಕ್ಕಾಗಿಯೇ ಬದುಕುವುದು ಅವಳ ಧರ್ಮವೂ ಹೌದು ಕರ್ಮವೂ ಹೌದು. ಹೆಣ್ಣು ಹೆತ್ತವರು ಅವಳನ್ನು ನೆರೆಮನೆ ಸಿರಿದೇವಿಯಾಗಿಯೇ ಕಾಣುತ್ತಾರೆ. ಗಂಡು ಮಗು ಮಾತ್ರ ಮನೆಗೆ ತೊಲೆಗಂಬ ಮಗನನ್ನು ಪಡೆಯದೆ ಹೆಣ್ಣುಗಳನ್ನೇ ಹೆತ್ತರೆ ಬಂಜೆ ಎಂದೇ ನಂಬಿಕೆ. ಅತ್ತೆ ಮಾವಗಂಜಿ ಸುತ್ತೇಳು ನೆರೆಗಂಜಿ ಬಾಳಿದರೂ ಸಮಾಜದ ನಿಂದೆ ಆಕೆಗೆ ತಪ್ಪಿದ್ದಲ್ಲ ಹಾಗಾಗಿಯೇ

ಹೆಣ್ಣಾಗಿ ಹುಟ್ಟೋಕ್ಕಿಂತ ಮಣ್ಣಾಗಿ ಹುಟ್ಟಿದರೆ
ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದರೆ
ಪುಣ್ಯವಂತರಿಗಿ ನೆರಳಾದೆ[೧೭೭]

ಎಂದು ಅಸಹಾಯಕಳಾಗಿ ರೋಧಿಸುತ್ತಾಳೆ. ಮಣ್ಣು ಮರಗಳಿಗಿರುವಷ್ಟು ಗೌರವವೂ ಅವಳಿಗೆ ಇರುವುದಿಲ್ಲ. ಹಾಗಾಗಿ ಹೆಣ್ಣಾಗಿ ಹುಟ್ಟುವುದು ಬೇಸರದ ಸಂಗತಿಯಾಗುತ್ತದೆ.

ಹೆಣ್ಣೆಂಬ ಜನುಮವು ಇನ್ಬೇಡ ಶಿವಗುರುವೆ
ಇನ್ನೊಬ್ಬ ತಾಯಿ ಬಸುರಲ್ಲಿ ಬಂದಾರೆ
ಹೆಣ್ಣಂತ ಪಾಪಿ ಮಗು ಬೇಡ.[೧೭೮]

ಎಂದು ಬೇಡುತ್ತಾಳೆ. ಬಹಳ ಪಾಪ ಮಾಡಿಯೇ ಹೆಣ್ಣಾಗಿ ಹುಟ್ಟುತ್ತಾರೆ ಎಂಬ ಪುರುಷ ಚಿಂತನೆ ಆಕೆಯಲ್ಲಿ ನೆಲೆಗೊಂಡಿದೆ. ಇಂಥ ಆಲೋಚನೆಗಳನ್ನು ಹುಟ್ಟುಹಾಕಿ ಹಾಗೆ ಅವಳು ನಂಬುವಂತೆ ಮಾಡುವಲ್ಲಿ ಅದು ಯಶಸ್ವಿಯಾಗಿದೆ. ಹುಟ್ಟಿನಿಂದ ಸಾವಿನವರೆಗೆ ತಂತಿಯ ಮೇಲಿನ ನಡಿಗೆಯಂಥ ನಿಯಂತ್ರಿತ ಬದುಕನ್ನೇ ಅನುಭವಿಸುವವಳಿಗೆ ತನ್ನ ಜನ್ಮ ಪಾಪದ್ದೆಂದೆನಿಸಿದ್ದು ವಿಶೇಷವೇನಲ್ಲ.

ಹೆಣ್ಣು ಮಕ್ಕಳ ಯಾಕ್ಹಡದೆ ನನ್ನಮ್ಮಾ
ಎಣ್ಣ್ಯಾಗ ಬತ್ತಿ ಉರಿದಂಗ ಮಾನವರ
ಕಣ್ಣಾಗ ನಾವು ಉರದೇವು.[೧೭೯]

ಲೋಕದ ಕಣ್ಣಿಗೆ ಬೆಳಕಷ್ಟೇ ಕಾಣುತ್ತದೆ. ಬತ್ತಿಕರಟಿದ್ದನ್ನು ನೋಡುವವರಾರು? ದೀಪನಂದಿದ ಮೇಲೆ ಬತ್ತಿಯ ಮಹತ್ವ ತಿಳಿದೀತು. ಸದಾ ಉರಿಯಬೇಕಾದ ಹೆಣ್ಣ ಬದುಕಿನ ರೀತಿಯನ್ನು ಕಂಡು ಇಂಥ ಬೇಗುದಿಯಲ್ಲಿ ಬೇಯುವದಕ್ಕಿಂತ ಬೀದಿ ನಾಯಾಗಿ ಹುಟ್ಟುವದು ಲೇಸು ಎಂದು ತನ್ನ ನಿಕೃಷ್ಠ ಸ್ಥಿತಿಯ ಬಗ್ಗೆ ಹೇಸಿನುಡಿಯುತ್ತಾಳೆ.

ಹೆಣ್ಣಿನ ಜನುಮಕ ಅಣ್ಣ ತಮ್ಮರು ಬೇಕ
ಬೆನ್ನು ಕಟ್ಟುವರು ಸಭೆಯೊಳಗೆ ಸಾವಿರ
ಹೊನ್ನು ಕಟ್ಟುವರು ಉಡಿಯೊಳಗೆ[೧೮೦]

ತಾನು ಹುಟ್ಟಿಬೆಳೆದ ತವರ ಬಗ್ಗೆ ಹೆಣ್ಣಿಗೆ ಅಲುಗದ ಭರವಸೆ ನಿರೀಕ್ಷೆ. ಗಂಡನ ಮನೆಯೇನಿದ್ದರೂ ತನ್ನಿಂದ ಕರ್ತವ್ಯವನ್ನು ಮಾತ್ರ ನಿರೀಕ್ಷಿಸುವಂಥದು. ಹೆಣ್ಣಿನ ಗೌರವಕ್ಕೆ ಧಕ್ಕೆ ಬಂದಾಗ ರಕ್ಷಿಸುವವರು ಅಣ್ಣತಮ್ಮಂದಿರು ಎನ್ನುವ ಆಶಯ ಇಲ್ಲಿಯದು. ಜಗಳ ಯುದ್ಧಗಳ ಕಾರಣವೇನೇ ಇರಲಿ ಅಲ್ಲಿ ಹೆಣ್ಣನ್ನು ಅವಮಾನಿಸಲಾಗುತ್ತದೆ ಇಲ್ಲವೇ ಹೆಣ್ಣಿನ ಬದುಕನ್ನೇ ಸಂಕಷ್ಟಕ್ಕೆ ಒಡ್ಡಲಾಗುತ್ತದೆ. ಹೆಣ್ಣನ್ನು ಬಳಸಿಕೊಳ್ಳುವ ಮನಸ್ಥಿತಿ ಎದುರಾಳಿಯನ್ನು ಕೆರಳಿಸುವುದೇ ಅಗಿರುತ್ತದೆ. ಹೀಗೆ ಕೆರಳಿಸುವ, ಕೆರಳುವವರ ಮಧ್ಯ ನರಳುವವಳು ಹೆಣ್ಣೆ, ಆದರೂ ಅವಳಿಗೊಂದು ನಿರೀಕ್ಷೆ ಒಡಹುಟ್ಟಿದವರ ಮೇಲೆ.

ಗಂಡನಾದವನು ಸಾಮಾನ್ಯವಾಗಿ ಹೆಣ್ಣಿನ ಮೇಲೆ ಅಧಿಕಾರ ಚಲಾಯಿಸುವವನು. ಅವಳನ್ನು ಅರಿತು ಬಾಳಿದ್ದು ಅಪರೂಪವೇ. ಹೆಣ್ಣನ್ನು ನಡೆಸಿಕೊಳ್ಳುವುದೆಂದರೆ ಅವಳ ಪ್ರತಿ ಕೆಲಸದಲ್ಲಿ ತಪ್ಪು ಹುಡುಕುವುದು

ಅದರಿಂದಲೇ ಜನಪದ ಗರತಿ 'ಗಂಡನೆಂದರೆ ತಲೆದಿಂಬಿನ ಹಾವಿನ ಸಿಂಬಿ' ಎಂದೂ ಸದಾ ಸಂಶಯ ಪಡುವ ಗಂಡನಾದರೆ 'ಗಂಡ ಕುಳಿತು ಹಾದರ ಕಲಿಸಿದ' ನೆಂದೂ ಹೇಳುತ್ತಾಳೆ. ತೀರ ಕಿರಿಕಿರಿಯ ಗಂಡನನ್ನು ಕುರಿತು 'ಉಂಡರುಟ್ಟರು ಸೇರ, ಮಂಡೆ ಬಾಚಲು ಸೇರ, ಗಂಡನಲ್ಲ ಕಾಣೆ ದುಸ್ಮಾನ' ಎನ್ನುತ್ತಾಳೆ. ಪ್ರೀತಿಯಲ್ಲೇ ಆಗಲಿ ಸಿಟ್ಟಿನಲ್ಲೇ ಆಗಲಿ ಗಂಡ ಹೆಣ್ಣನ್ನು ಹೊಡೆಯುವದು ತನ್ನ ಅಧಿಕಾರವೆಂದು ಭಾವಿಸಿದಂತಿದೆ. ಮದುವೆಯಾಗುವ ಹೆಣ್ಣು ಸಲ್ಲಕ್ಷಣ ಸಂಪೂರ್ಣವಾಗಿರಬೇಕೆಂದು ಬಯಸುವ ಸಮಾಜ ಗಂಡ ಹೇಗಾದರೂ ಇರಲಿ ಅವನು ಗಂಡು ಎಂಬುದು ಮುಖ್ಯ ಎಂಬಂತೆ ಹೆಣ್ಣಿಗೆ ಮನವರಿಕೆ ಮಾಡಿಸಲಾಗುತ್ತದೆ. ಕುಂಟನಿರಲಿ, ಕುರುಡನಿರಲಿ, ಗಂಟುಮೋರೆಯಾಗಿರಲಿ ಬಂಟನೆಂದು ಬಾಳ್ವೆ ಮಾಡಿ, ಭಾಗ್ಯವಂತಿಯಾಗಬೇಕು ಎಂಬುದು ಸಾಮಾಜಿಕ ನಿರೀಕ್ಷೆಯಷ್ಟೆ ಅಲ್ಲ ನಿಯಮ ಅದನ್ನು ಮೀರಿದವಳಿಗೆ ಸಮಾಜದಲ್ಲಿ ಯಾವುದೇ ಸ್ಥಾನ ಮಾನವಿಲ್ಲ. ಇಂಥ ಪರಿಸರದಲ್ಲೂ ಹೆಣ್ಣು ತನ್ನ ಮದುವೆಯ ಸಂದರ್ಭದಲ್ಲಿ ತನ್ನಿಚ್ಛೆಯನ್ನು ಮೆಲ್ಲನುಸುರಿದ್ದಿದೆ.

ವರಗೇಡಿ ವಗತನ ಕೊಡಬ್ಯಾಡ ಹಡದಮ್ಮ
ವರನೋಡಿ ವರನ ಗುಣನೋಡಿ ಮನಿಯಾನ
ಸಾಸೀವಿ ಕಾಳಷ್ಟು ರಿಣ ನೋಡಿ[೧೭೮]

ಬಹುಪತ್ನಿತ್ವ ಹೆಣ್ಣಿನ ಜೀವನದಲ್ಲಿ ಶಾಪವಾಗಿ ಪರಿಣಮಿಸುವ ಇನ್ನೊಂದು ಅನಿಷ್ಟ. ಹೆಣ್ಣಿಗೆ ಮಾತ್ರ ಜೀವನದಲ್ಲಿ ಒಂದೇ ಮದುವೆಗೆ ಮಾನ್ಯತೆ. ಗಂಡಿಗಾದರೆ ಕಾರಣ ಸಹಿತ ಕಾರಣರಹಿತ ಬಹುವಿವಾಹಗಳ ಅವಕಾಶ. ಹೀಗೆ ಆದ ವಿವಾಹದಿಂದ ಬರುವ ಸವತಿಯರಲ್ಲಿ ವೈಮನಸ್ಸು ಸಹಜ. ಅದಕ್ಕೆಂದೇ ಗರತಿ ಅಂಥ ಮದುವೆ ಬೇಡವೆಂದು ಸ್ಪಷ್ಟವಾಗಿ ಹೇಳುತ್ತಾಳೆ. ತೆರ ಕೊಟ್ಟು ಮದುವೆಯಾಗುತ್ತಿದ್ದ ಸಂದರ್ಭದಲ್ಲೂ ಸವತಿಯ ಮನೆ ಒಪ್ಪದ ಮನಸ್ಥಿತಿ ಅವಳದು.

ಸಾವಿರ ಕೊಟ್ಟರೂ ಸವತೀಯ ಮನಿಬ್ಯಾಡ
ಸಾವಿರದ ಮ್ಯಾಲ ಐನೂರು ಕೊಟ್ಟರೂ
ಮಲಮಕ್ಕಳೆಂಬ ಮನಿಬ್ಯಾಡ.[೧೭೯]

ಹೀಗೆಂದು ಹೇಳಿದಾಗಲೂ ಕೆಲ ಸಂದರ್ಭಗಳು ಹೇಗೆ ಒದಗುತ್ತವೆಂದರೆ ಇಲ್ಲಿ ಮಹಿಳೆ ಸವತಿಯನ್ನು ಒಪ್ಪಲೇ ಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಗಂಡನ ಸಂಚಿಗೆ ತನ್ನ ತಂಗಿಯೆ ಬಲಿಯಾಗಿ ಗರ್ಭಿಣಿಯಾದಾಗ ಅವಳ ಬದುಕನ್ನು ನೇರ್ಪಡಿಸಲು ಎರಡನೆಯ ಮದುವೆಗೆ ಮಹಿಳೆಯೆ ಸಮ್ಮತಿಸಿದ ಉದಾಹರಣೆಗಳು ಸಾಕಷ್ಟಿವೆ. ಬಹು ಪತ್ನಿತ್ವ ವ್ಯವಸ್ಥೆಯಲ್ಲಿ ಸವತಿ ಮಾತ್ಸರ್ಯ ವಿಶ್ಲೇಷಿಸಿದಾಗ ಅಲ್ಲಿ ಮಾತೃತ್ವ ದೊರೆಯದ ಹೆಣ್ಣಿನ ಕೊರಗಿನೊಂದಿಗೆ ಹೆಣ್ಣಿನ ಅಸ್ಮಿತೆಯ ಪ್ರಶ್ನೆಯೂ ಕುಟುಂಬದಲ್ಲಿ ಅವಳ ಸ್ಥಾನ ಮಾನಗಳ ವಿಚಾರವೂ ಅಡಗಿದೆ. ಕಾಡಸಿದ್ದಮ್ಮ ಸೌಂಸೌಂ ತೇರು ಕಥನ ಗೀತೆಗಳು ಇದಕ್ಕೆ ನಿದರ್ಶನವಾಗಿವೆ.

ಅತ್ತೆ ಮನೆ ಹೆಣ್ಣಿನ ಜೀವನದಲ್ಲಿ ಸುಖ ಸಮೃದ್ಧಿಯ ತಾಣವಾದದ್ದು ಇಲ್ಲವೆಂದೇ ಕಾಣುತ್ತದೆ. ಅಪರಾಧಿ ಶಿಕ್ಷೆ ಅನುಭವಿಸುವ ಸ್ಥಳ ಎಂಬಂಥ ಅನಿಸಿಕೆಯೆ ಹೆಚ್ಚಾಗಿ ಕಂಡುಬರುತ್ತದೆ. ಇಲ್ಲಿ ಸೊಸೆ ಪ್ರತಿಹೇಳದೆ ದುಡಿಯಬೇಕಾದ ತೊತ್ತು ತಡವಾಗಿ ನೀಡಿದರು ಉಂಡು ತವರಿಗೆ ಹೆಸರು ತರಬೇಕಾದ ಹೊಣೆ ಆಕೆಯದು.

ಅತ್ತಿಯ ಮನಿಯಾಗ ಅರವತ್ತು ಗಂಗಾಳ
ಬೆಳಗೂತಿಸತ್ತಿ ಜೈಬ್ರಾಡ ತವರರು
ಸರ ಮುತ್ತು ಮಾಡಿ ಸಲುವ್ಯಾರ.

ಎಂದು ಅನುನಯದಿಂದ ಕೇಳಿಕೊಳ್ಳುವ ದಯನೀಯ ಸ್ಥಿತಿ ಮಹಿಳೆಯದು. ಗಂಡನ ಮನೆಯಲ್ಲಿ ಹೆಣ್ಣು ಸವತಿ ಅತ್ತೆಯರಿಂದ ಕಷ್ಟಕ್ಕೀಡಾಗುತ್ತಾಳೆ. ನಾದಿನಿಯರಿಂದಲೂ ಕಷ್ಟವನ್ನು ಅನುಭವಿಸುತ್ತಾಳೆ. 'ನಡೆಯುವ ಮನೆಗೆ ನಾದಿನಿ ಮೂಲ' ಎಂಬ ಗಾದೆಯೆ ಇದೆ. ಬೇರೆ ಹೆಣ್ಣೊಂದು ತಮ್ಮ ಮನೆಗೆ ಬಂದು ಅಣ್ಣನ ಒಲವನ್ನು ಪಡೆದು ಮಹತ್ವದ ಸ್ಥಾನವನ್ನು ಗಿಟ್ಟಿಸುವುದನ್ನು ಸಹಿಸದ ಈ ಹೆಣ್ಣುಗಳು ತಮ್ಮ ಸ್ಥಾನ ಭದ್ರತೆಗಾಗಿ ಈ ರೀತಿ ಹಗೆಯನ್ನು ಸಾಧಿಸುತ್ತಾರೆ. ಮಗನನ್ನು ತನ್ನಿಂದ ಕಿತ್ತುಕೊಳ್ಳದಂತೆ ತಾಯಿ, ಅಣ್ಣನನ್ನು ತನ್ನಿಂದ ಕಿತ್ತು ಕೊಳ್ಳದಂತೆ ತಂಗಿ ಜಾಗ್ರತೆ ವಹಿಸುತ್ತಾರೆ. ಕಾರಣ ಮಗ ಅಥವಾ ಅಣ್ಣ ಹೆಂಡತಿಯ ಪಾಲಾದರೆ ತಮಗಿರುವ ಜೀವನಭದ್ರತೆ ತಪ್ಪೀತು ಎಂಬ ಭಯ ಅವರದ್ದು. ತತ್ಪರಿಣಾಮವಾಗಿ ಹೊರಗಿನಿಂದ ಬಂದ ಸೊಸೆಗೆ ಚಿತ್ರಹಿಂಸೆ ಸವತಿ ಮಾತ್ಸರ್ಯದಲ್ಲಾಗಲಿ ಅತ್ತೆ ನಾದಿನಿಯರ ಕಾಟದಲ್ಲಾಗಲೀ, ಹಿನ್ನೆಲೆಯಲ್ಲಿ ಕೆಲಸ ಮಾಡುವುದು ಆರ್ಥಿಕ ಹಾಗು ಸಾಮಾಜಿಕ ಅಭದ್ರತೆಯ ತಲ್ಲಣಗಳೆ ಕುಸುಮಾಲೆ ಅತ್ತೆ ನಾದಿನಿಯರ ಕಾಟಕ್ಕೆ ಬಲಿಯಾದರೆ ಕೆಂಚಮ್ಮ ಅಣ್ಣನ ಮದುವೆಯನ್ನು ತಪ್ಪಿಸುತ್ತಾಳೆ

ಜನಪದರು ಹೆಣ್ಣಿನ ಶೀಲ ಹಾಗೂ ಪಾತಿವ್ರತ್ಯಕ್ಕೆ ಕೊಟ್ಟ ಮಹತ್ವವನ್ನು ಬೇರಾವುದಕ್ಕೂ ಕೊಟ್ಟಿಲ್ಲ. ಹೆಣ್ಣು ಶೀಲವಂತಳಾಗಿರುವುದಷ್ಟೆ ಅಲ್ಲ ಅದನ್ನು ಸಾಬೀತು ಪಡಿಸಬೇಕಾದ ಕಠಿಣ ಪ್ರಸಂಗಗಳೂ ಅವಳ ಬಾಳಿನಲ್ಲಿ ಬರುತ್ತವೆ. ಅಂತಹ ದಿವ್ಯಗಳನ್ನು ಅವರು ಎದುರಿಸಿದ ಬಗೆ ನಿಜಕ್ಕೂ ತುಂಬ ಮನೋವೇದಕವಾದುದು. ಒಮ್ಮೆ ಶೀಲದ ಶಂಕೆ ಬಂದರೆ ಸಾಕು ಹೆಣ್ಣಿನ ಬಾಳು ಕಣ್ಣೀರಿನ ಕೋಡಿಯೇ. ಮತ್ತೆ ಅವಳು ಜೀವನದಲ್ಲಿ ಸುಖ ಸಂತೋಷ ನೆಮ್ಮದಿಗಳನ್ನು ಕಾಣುವ ಸಾಧ್ಯತೆಯೇ ಇರಲಿಲ್ಲ. ಉತ್ತರದೇವಿ ವಲ್ಲಣದೇವಿ ಜಾಯೂ ಜೂಯೂ ಗಾಣಿಗ, ಅತುಮವ್ವಿಯ ಹಾಡು ಮೊದಲಾದವು ಇಂಥ ಕಥನ ಗೀತೆಗಳು.

ತಾಯ್ತನ ಹೆಣ್ಣಿಗೆ ಅನಿವಾರ್ಯ ಎಂಬುದು ವ್ಯವಸ್ಥೆ ರೂಪಿಸಿದ ಮೌಲ್ಯ. ಹಡೆಯುವ ನೋವನ್ನು 'ಹೆತ್ಯೋ' 'ಸತ್ಯೋ' ಎಂಬ ಶಬ್ದಗಳಲ್ಲಿ ಸ್ತ್ರೀಯರು ಹಿಡಿದಿಟ್ಟಿದ್ದಾರಾದರು ಹಡೆಯುವುದು ತಮ್ಮ ಕರ್ತವ್ಯವೆಂದು ಭಾವಿಸಿದ್ದಾರೆ, ಅದನ್ನು ಅಲ್ಲಗಳೆಯುವುದಕ್ಕೆ ಆಸ್ಪದ ಕೊಡದ ಹಾಗೆ ವ್ಯವಸ್ಥೆ ತಾಯ್ತನವನ್ನು ವೈಭವೀಕರಿಸಿದೆ.

ಕಂದನ ಕೊಡು ಶಿವನೆ ಬಂಧನ ಪಡಲಾರೆ
ಹಂಗೀನ ಬಾನ ಉಣಲಾರೆ ಮರ್ತ್ಯದಾಗ
ಬಂಜೆಂಬ ಶಬ್ದ ಹೊರಲಾರೆ.[೧೨೪]

ಸಾಮಾನ್ಯವಾಗಿ ಮಾತೃ ವಾತ್ಸಲ್ಯಕ್ಕೆ ಈ ತ್ರಿಪದಿಯನ್ನು ಸಾಕ್ಷಿ ಮಾಡುವುದುಂಟು. ಹೆರುವುದು ಹೆಣ್ಣಿನ ಸಹಜ ಬಯಕೆ. ತಾಯಾಗದ ಹೆಣ್ಣು ಹೆಣ್ಣೇ ಅಲ್ಲ. ಮುಂತಾದ ವಿಚಾರಗಳನ್ನು ಹೆಣ್ಣಿಗೆ ಮನಗಾಣಿಸಲಾಗಿ. ವಾಸ್ತವ ಬೇರೆಯೇ ಇದೆ. ಹೆರದಳನ್ನು ವ್ಯವಸ್ಥೆ ಒಪ್ಪುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯ ವಾಹಕರಾದ ಪುರಾಣಕಾರರು, ಕತೆಗಾರರು, ಕತೆ ಉಪಕತೆಗಳ ಮೂಲಕ ಮಕ್ಕಳಿಲ್ಲದ ಮಹಿಳೆಯನ್ನು ತುಂಬ ಕೀಳಾಗಿ

ಚಿತ್ರಿಸಿದರಷ್ಟೇ ಅಲ್ಲ. ಮಕ್ಕಳಿಲ್ಲದವರನ್ನು ಬಂಜೆ ಎಂದು ಕರೆದು ಅವಮಾನಿಸಿದರು. ಬಂಜೆತನ ಸ್ತ್ರೀಯರ ಪೂರ್ವಜನ್ಮದ ಪಾಪದ ಫಲ ಎಂದು ಹೇಳಿದರು. ಇಂಥ ಸ್ತ್ರೀಯರನ್ನು ತೀರ ನಿಕೃಷ್ಟವಾಗಿ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ನೋಡಿಕೊಳ್ಳಲಾಯಿತು.

ಮಕ್ಕಳನ್ನು ಹೇರದ ಕಾರಣದಿಂದ ಸಮಾಜದಲ್ಲಿ ಕುಟುಂಬದಲ್ಲಿ ಅವಳು ಹಲವು ಕಷ್ಟಗಳನ್ನು ಅನುಭವಿಸಬೇಕಾಗಿತ್ತು. ಬಂಜೆಯೆಂಬ ಶಬ್ದ ಸಮಾಜದಲ್ಲಿ ಹೀನಾರ್ಥವನ್ನು ಹೊಂದಿದ್ದ ಕಾರಣ ಮಕ್ಕಳಿಲ್ಲದವರ ಕಿವಿಗೆ ಅದು ಕರ್ಕಶವಾಗಿತ್ತು. ಅಲ್ಲದೆ ಸಮಾಜದಲ್ಲಿ ಇವರ ಬಗ್ಗೆ ಹಲವಾರು ಮೂಢನಂಬಿಕೆಗಳು ಹುಟ್ಟಿಕೊಂಡಿದ್ದವು. ಅವುಗಳನ್ನು ಮಕ್ಕಳಿಲ್ಲದವಳಿಗೆ ಅನ್ವಯಿಸಿ, ಅವಳ ಮನಸ್ಸು ನೋಯುವಂತೆ ನಡೆಸಿಕೊಳ್ಳಲಾಗುತ್ತಿತ್ತು. ಹೆಣ್ಣು ತಾನು ಉಂಡ ಗಂಡನ ಮನೆಯ ಅನ್ನದ ಋಣ ತೀರಿಸಲು ಅವರ ಮನೆಯ ವಾರಸುದಾರನನ್ನು ಹಡೆದು ಕೊಡುವುದು ಅಗತ್ಯವೆಂದು ಸಮಾಜ ಅವಳಿಗೆ ನಂಬಿಸಿತ್ತು. ಆ ಋಣದಿಂದ ಮುಕ್ತಳಾಗುವುದಕ್ಕೆ ಅವಳು ಸದಾ ಹಂಬಲಿಸುವಂತಾಯಿತು. ಕೆಲವೊಮ್ಮೆ ಇದನ್ನು ಮೀರಿ ಪರ್ಯಾಯವನ್ನು ಕಂಡು ಕೊಂಡವರೂ ಇದ್ದಾರೆ. 'ಮಕ್ಕಳ ಇಲ್ಲಂತ ಮರಗಲೆ ಹಡದಂಥ ಅಕ್ಕನ ಮಗ ನನಗ್ಹಾನ ದೇವೇಂದ್ರ ಸಣ್ಣಮ್ಮನಂತ ಸಲುವ್ಯಾನ' ಎಂಬಲ್ಲಿ ತನ್ನ ಮಕ್ಕಳಿಲ್ಲದ ಕೊರತೆಯನ್ನು ತುಂಬುವುದಲ್ಲದೆ ತನ್ನ ಮುಪ್ಪಿನ ಆಸರೆಯೂ ತನ್ನ ಅಕ್ಕನ ಮಗ ಎಂಬ ಆಶಯ ವ್ಯಕ್ತವಾಗಿದೆ.

೪.೬.೨ ಪ್ರತಿರೋಧದ ಸ್ವರೂಪ :

ಮದುವೆಯಾದ ಹೆಣ್ಣು ತನ್ನ ಗಂಡನೊಂದಿಗೆ ಒಂದು ಸುಂದರ ಭಾವ ಪ್ರಪಂಚವನ್ನು ನಿರ್ಮಿಸಿಕೊಂಡಿರುತ್ತಾಳೆ. ತನ್ನ ಮನೆ, ತನ್ನ ಗಂಡ, ತನ್ನ ಮಕ್ಕಳು, ಎಂಬ ಭಾವನಾತ್ಮಕತೆಯನ್ನು ಬೆಳೆಸಿಕೊಂಡಿರುತ್ತಾಳೆ. ಆದರೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷನಿಗೆ ನೀಡಲಾಗಿರುವ ಬಹುಪತ್ನಿತ್ವದ ಅವಕಾಶದಿಂದಾಗಿ ಆತಂಕ ಅವಳನ್ನು ಕಾಡುತ್ತಿರುತ್ತದೆ. ಮದುವೆಯ ಮೊದಲೇ ಸವತಿಯ ಮನೆ ಬೇಡವೆಂದು ಹೇಳಿದಾಗಲೂ, ಎಷ್ಟೋ ಸಲ ಮದುವೆಯ ನಂತರ ಸವತಿ ಬರುವ ಸಂಭವವಿರುತ್ತದೆ. ಅಂಥ ಸುಳಿವು ದೊರೆತ ಗರತಿ ಗಂಡನಿಗೆ ಪ್ರತಿರೋಧ ತೋರಿಸಿದ್ದಿದೆ.

ಹೆಣ್ಣು ಹಾಗಲಕಾಯಿ ಎಣ್ಣೇಲಿ ಕರದೇನು
ಉಂಡಾರು ನೋಡೊ ರುಚಿಗಾರ ನನ ಮೇಲೆ
ತಂದಾರ ನೋಡಾ ಸವತಿಯ.[೧೭೫]

ಅತ್ತೆ ಸೊಸೆಯ ಸಂಬಂಧ ಹದವಾಗಿದ್ದದ್ದು ಅಪರೂಪವೆ. ಅತ್ತೆ ಹೇಳಿದ ಕೆಲಸವನ್ನೆಲ್ಲ ಮಾಡಿದ ಮೇಲೂ ಅತ್ತೆ ಸೊಸೆಯೊಂದಿಗೆ ಗುಸುಮುಸು ಮಾಡುವುದು ಕಾಡುವುದು ಹೊಸದೇನೂ ಅಲ್ಲ. ಇದನ್ನೆಲ್ಲ ಬಾಯಿಮುಚ್ಚಿಕೊಂಡು ತಮ್ಮ ಹಣೆ ಬರಹವೆಂದು ಅನುಭವಿಸುವ ಸೊಸೆಯಂದಿರೆ ಹೆಚ್ಚು. ಇದಕ್ಕೆ ವಿರುದ್ಧವಾಗಿ ಕೆಲವೊಮ್ಮೆ ಅತ್ತೆಯನ್ನು ತರಾಟೆಗೆ ತೆಗೆದುಕೊಂಡು ಸಂದರ್ಭಗಳೂ ಇಲ್ಲದಿಲ್ಲ.

ಸಿರಿಗೌರಿ ಅತ್ತೆಮ್ಮ ಸಿಟ್ಟು ಮಾಡಲಿ ಬ್ಯಾಡ
ಸಿಟ್ಟಿನ ನನ್ನ ತವರವರು ಕೇಳಿದರೆ
ಕೆಟ್ಟಿತ್ತ ನಿನ್ನ ಸಂಸಾರ.[೧೭೬]

ತವರ ಬೆಂಬಲವಿದ್ದರೆ ಮಹಿಳೆಯ ಆತ್ಮಬಲ ಹೆಚ್ಚುತ್ತದೆ. ಆಗವಳು ತನ್ನ ಮೇಲಾಗುವ ದಬ್ಬಾಳಿಕೆಯನ್ನು ತಡೆಯಲು ಯತ್ನಿಸುತ್ತಾಳೆ. ಸ್ವಲ್ಪ ಮಟ್ಟಿನ ಪ್ರತಿರೋಧ ತೋರಲು ಸಮರ್ಥಳಾಗುತ್ತಾಳೆ.

ತನಗಾದ ಅನ್ಯಾಯವನ್ನು ಮಹಿಳೆ ಎಲ್ಲ ಸಂದರ್ಭಗಳಲ್ಲಿಯೂ ಮೌನವಾಗಿಯೇ ಸಹಿಸಿಲ್ಲ. ಪುರುಷ ನಿರ್ಮಿತ ಸಮಾಜದ ನಿಯಮಗಳನ್ನು ಮೀರಿ ಪ್ರತಿಭಟಿಸುವ ಧೈರ್ಯವನ್ನು ತೋರಿಸಿದ್ದಾಳೆ.

ಕರಿಯ ಕಂಬಳಿಯ ತಂದು ಹೊದಿಯಲಾರದ ಮೇಲೆ
ಅದನ್ಯಾಕ ತಂದ್ಯೋ ಬಿಕನಾಸಿ, ಬಾಲೆಯ
ಮದುವ್ಯಾಗಿ ಗೋಳ ಕಟ್ಟಿಕೊಂಡಿ.[೧೭೭]

ಎಂದು ಪರ್ಯಾಯವಾಗಿ ಅವನ ಅಸಾಮರ್ಥ್ಯವನ್ನು ಸೂಚಿಸಿದ್ದಾಳೆ. ಲೈಂಗಿಕ ಅಸಾಮರ್ಥ್ಯವಿದ್ದಾಗಲೂ ಮದುವೆಯಾಗುವ ಗಂಡು ಮಹಿಳೆಗೆ ದೊಡ್ಡ ಅನ್ಯಾಯವನ್ನೇ ಮಾಡುತ್ತಾನೆ. ಒಮ್ಮೆ ಮದುವೆಯಾದ ಹೆಣ್ಣಿಗೆ ಗೋಳಾಡುವುದನ್ನು ಬಿಟ್ಟರೆ ಬೇರೆ ದಾರಿಯಿಲ್ಲದ ಸಂಧರ್ಭದಲ್ಲಿ ಅವಳ ಗೋಳೆ ಅವನಿಗೆ ಶಾಪವಾಗಿ ಕಾಡುತ್ತದೆಂದು ಹೇಳುತ್ತಾಳೆ.

ಗಂಡಿನ ಮಿತಿ ಮೀರಿದ ದೌರ್ಜನ್ಯ ಸಹಿಸಲಾಗದೆ ಅವನ ಸಾವಿಗೆ ಹಾರೈಸುತ್ತಾಳೆ. ಯಾವ ಸಾಮಾಜಿಕ ವ್ಯವಸ್ಥೆಯಲ್ಲಿ ಮಾರಾಯರ ಮುಂದೆ ಮರಣಕ್ಕಾಗಿ ಹಂಬಲಿಸುವ ಗರತಿಯರಿದ್ದಾರೊ ಅಲ್ಲಿಯೇ ಅದಕ್ಕೆ ಪ್ರತಿರೋಧ ಒಡ್ಡುವವರೂ ಇದ್ದಾರೆ. ಬದುಕಿನಲ್ಲಿ ನೆಮ್ಮದಿ ನೀಡದ ಗಂಡ ಇರುವುದಕ್ಕಿಂತ ಸಾಯುವುದೆ ಸರಿ. ಹಾಗೆ ಸತ್ತವನನ್ನು ಹೆಂಡತಿಯಾದವಳು ಇಲ್ಲದ ದುಃಖ ತೋಡಿಕೊಂಡು ಅತ್ತು ಹೆಣಕ್ಕೆ ಸಿಂಗಾರ ಮಾಡಬೇಕೆಂದು ನಿರೀಕ್ಷಿಸುವ ಸಂದರ್ಭದಲ್ಲಿ ಇಲ್ಲಿಯ ಗರತಿ ಅವನ ಶವ ಸಂಸ್ಕಾರಕ್ಕೆ ಉಂಡು ಹೋಗುವ ಮಾತನಾಡುತ್ತಾಳೆ.

ಉಂಡರುಟ್ಟರು ಸೇರ ಮಂದಿ ಮಕ್ಕಳ ಸೇರ
ಎಂದೀಗೆ ಸೇರ ದುಸಮಾನ ಸತ್ತರ
ಉಂಡೋಗಿ ಮಣ್ಣ ಮಾಡೇನ.[೧೭೮]

ಗರತಿ ತನ್ನ ಗಂಡನಿಂದ ಎಷ್ಟರ ಮಟ್ಟಿಗೆ ನೊಂದಿದ್ದಾಳೆಂದರೆ ಅವನು ಅವಳಿಗೆ ವೈರಿಯಂತೆ ಕಾಣುತ್ತಾನೆ. ಅವನೊಂದಿಗಿರುವುದರಲ್ಲಿ ಯಾವ ಅರ್ಥವಿಲ್ಲ ನಿಜ. ಆದರೆ ಗಂಡ ಬಿಟ್ಟವಳಾಗಿ ಮುಕ್ತಿ ಪಡೆಯಲಾಗದ ಗರತಿ ಅವನ ಸಾವಿನಲ್ಲಿ ಅದರ ಪರಿಹಾರ ಹುಡುಕುತ್ತಾಳೆ.

ಸದಾ ಮಹಿಳೆಯನ್ನು ಹೆದರಿಸಿ ಅಂಕೆಯಲ್ಲಿಟ್ಟುಕೊಳ್ಳುವುದು ಪುರುಷ ಪ್ರಧಾನ ವ್ಯವಸ್ಥೆಯ ನಡವಳಿಕೆಯಾಗಿದೆ. ಅವಳಿಗೆ ಎಲ್ಲ ಬಗೆಯ ಸ್ವಾತಂತ್ರ್ಯವನ್ನು ನಿರಾಕರಿಸಲಾಗಿದೆ. ಅವಳನ್ನು ನಿಯಂತ್ರಿಸಲು ನಾನಾ ಹುನ್ನಾರಗಳು ನಡೆಯುತ್ತವೆ.

ಅಂಜಿಕಿ ತೋರಿದರ ಅಂಜುವರ ಮಗಳಲ್ಲ
ಮುಂಜಾವದಾಗ ಹುಲಿ ಕರಡಿ ತೋರಿದರ
ಅಂಜಿ ತಿರುಗುವರ ಮಗಳಲ್ಲ.[೧೭೯]

ಇಂಥ ಬೆದರಿಕೆಗಳು ತನ್ನನ್ನೇನು ಮಾಡಲಾರವು. ಅವುಗಳಿಗೆಲ್ಲ ತಾನು ಹೆದರುವವಳೇ ಅಲ್ಲವೆನ್ನು ದಾಷ್ಟ್ಯವನ್ನು ಗರತಿ ಸ್ಪಷ್ಟವಾಗಿ ತೋರುತ್ತಾಳೆ.

ಸಾತು ಕ್ಯಾಮಣ್ಣನ ಲಾವಣಿಯೊಂದರಲ್ಲಿ ಪ್ರಾಪಂಚಿಕನ ಹೆಂಡತಿ ತನ್ನ ಗಂಡನ ಜೀವ ಉಳಿಸುವುದಕ್ಕ ತಾಯಿ ತಂದೆ ಬಂಧುಗಳು ಒಪ್ಪದಾಗ ತಾನೇ ಪ್ರಾಣ ತೆರಬೇಕೆಂದಾಗ ಅದನ್ನು ಪ್ರತಿಭಟಿಸುತ್ತಾಳೆ. 'ತೀರ ಅಡವಿ ಮ್ಯಾಲ ಬಿದ್ದಿಲ್ರೆಪಾ ನನ್ನ ಪ್ರಾಣ' ಎಂದು ಪ್ರತಿಕ್ರಿಯಿಸುವಲ್ಲಿ, ಗಂಡನಿಂದ ಹೊರತಾಗಿ ತನಗೆ ಸ್ವತಂತ್ರ ಅಸ್ತಿತ್ವವಿರುವುದನ್ನು ಸ್ಪಷ್ಟಪಡಿಸುತ್ತಾಳೆ. ಉಳಿದವರು ಮಾಡಲಾರದ ತ್ಯಾಗವನ್ನು ತಾನೇಕೆ ಮಾಡಬೇಕೆಂದು ಪ್ರಶ್ನಿಸುತ್ತಾಳೆ. ಇಂಥಲ್ಲಿ ಪತಿಯೇ ದೈವವೆಂಬ ಪರಂಪರಾಗತ ಧೋರಣೆಯನ್ನು ಹುಸಿ ನಂಬಿಕೆಗಳನ್ನು ಅಲ್ಲಗಳೆಯುವುದನ್ನು ಕಾಣಬಹುದು.

ಶಿಷ್ಟ ಸಾಹಿತ್ಯದಲ್ಲಿ ಪುರುಷ ಪ್ರಧಾನ ಮೌಲ್ಯಗಳು ಸುರಕ್ಷಿತವಾಗಿರುವಷ್ಟು ಜನಪದ ಸಾಹಿತ್ಯದಲ್ಲಿ ಸುರಕ್ಷಿತವಾಗಿಲ್ಲ. ಹೆಣ್ಣಿನ ಒಳಮನಸ್ಸಿನ ಕಿಡಿಗಳಿಗೂ ಇಲ್ಲಿ ಆಸ್ಪದವಿದೆ. ಸೀತಾ ಮೌಲ್ಯಕ್ಕೆ ಪ್ರತಿನುಡಿದ ಜನಪದ ಗರತಿಯೆ.

ಬಾಳೆ ಕಡಿದಾರೆ ತೋಟ ಹಾಳಾಗಬಲ್ಲದೆ
ಬಾಳಿಸಲಾರದ ಮಡದಿಯ ಬಿಟ್ಟರೆ
ಬಾಳೆ ಹಣ್ಣೇನೆ ಕೊಳೆಯಾಕ.[೧೮೦]

ಎಂಬ ಕಡಿದರೂ ಸಾಯದ ಸತ್ವವನ್ನು ಅವಳು ತೋರಿದ್ದಾಳೆ. ಕುಟುಂಬವನ್ನು ಪ್ರಶ್ನಿಸುವ, ವಿರೋಧಿಸುವ ಧೈರ್ಯ ಜನಪದ ಸಾಹಿತ್ಯದ ಮಹಿಳೆಗಿದೆ. ತಾನು ಕೇವಲ ಎಲ್ಲಕ್ಕೂ ತಲೆಯಾಡಿಸುವ ಸ್ವಾಭಿಮಾನ ಶೂನ್ಯಳಲ್ಲ ಎಂಬುದನ್ನು ಜನಪದ ಮಹಿಳೆ ಕಾಣಿಸಿಕೊಂಡಿದ್ದಾಳೆ. ಅಷ್ಟೇ ಅಲ್ಲ. ಬಿಟ್ಟಾಡಿಕೊಳ್ಳುವ ಭಾಗಾದಿ ಮನಿಮುಂದ ಬಿಚ್ಚುಗತ್ಯಾಗಿ ಹೊಳೆದೇನ ಎನ್ನಬಲ್ಲಳು.

ಹೆಣ್ಣು ಯಾವಾಗಲೂ ಅಸಹಾಯಕಳಾಗಿ ಗಂಡಿನ ಬಲಾತ್ಕಾರಕ್ಕೆ ಬಲಿಯಾಗಲಿಲ್ಲ, ಎಂಬ ಚಿತ್ರ ಜನಪದ ಸಾಹಿತ್ಯದಲ್ಲಿ ನಮಗೆ ಸಿಗುತ್ತದೆ. ಅಪಾಯದಿಂದ ಪಾರಾಗುವ ಹಲವು ಹತ್ತು ವಿಧಾನಗಳಾಗಿ ಪ್ರಯತ್ನಿಸಿದ್ದಾಳೆ. ಹಲವು ದಾರಿಗಳಲ್ಲಿ ನುಸುಳಿದ್ದಾಳೆ. ಹೆಣ್ಣಿನ ಆತ್ಮಕಥೆಯಂಥ ಜನಪದ ಸಾಹಿತ್ಯದಲ್ಲಿ ಈ ಎಲ್ಲದರ ಇತಿಹಾಸವಿದೆ. 'ಎಳ್ಳಾ ಮಾಸಿ ಹಾಡಿನ' ನಾಗೂಬಾಯಿ 'ಜೈನರ ಹಾಡಿನ' ಅಕ್ಕಮಹಾದೇವಿ. 'ನೀಲಗಂಗಾನಹಾಡಿನ' ನೀಲಗಂಗಾ ಇವರೆಲ್ಲರೂ ತಾವೊಲ್ಲದ್ದನ್ನು ಎಂದೂ ಒಪ್ಪಿಕೊಳ್ಳಲಿಲ್ಲ.

೪.೬.೩ ಪರ್ಯಾಯ ಮಾದರಿ

ಕೆಲವು ಕಥನ ಗೀತೆಗಳಲ್ಲಿ ಮದುವೆಯಾಗಿದ್ದರೂ ಪತಿಯ ಸಹವಾಸದಿಂದ ಸುಖ ದೊರೆಯದ ಕೆಲವು ಹೆಣ್ಣುಗಳು ಪರಪುರುಷನನ್ನ ಮೋಹಿಸಿ ಅವರೊಡನೆ ಜೀವಿಸಿದ್ದುಂಟು. ಯಲು ರಾಜನ ಮಡದಿಯಲ್ಲಿ ಯಲುರಾಜ ದಂಡಿಗೆ ಹೋದಾಗ ಹೆಂಡತಿ ಹೊಲೆಯರವನೊಬ್ಬನ ಕಲೆಗೆ ಮಾರು ಹೋಗಿ ಅವನೊಂದಿಗೆ ಇರತೊಡಗುತ್ತಾಳೆ. ಮರಳಿದ ಗಂಡನಿಗೆ ವಿಷಯ ತಿಳಿಯುತ್ತದೆ. ಅವನು ಹೆಂಡತಿಯನ್ನು ಹೊಲೆಯನಿಗೇ ಒಪ್ಪಿಸುತ್ತಾನೆ.[೧೮೧]

ಗಂಡು ಹೆಣ್ಣಿನ ಅನೈತಿಕ ಸಂಬಂಧವನ್ನು ಸಮಾಜ ಒಪ್ಪಲಾರದಿದ್ದಾಗ ಗೆಣೆಯನ ಮೇಲಿನ ಪ್ರೇಮವನ್ನು ತಮ್ಮ ಹೃದಯದೊಳಗೆ ಬಚಿಟ್ಟುಕೊಳ್ಳಬೇಕಾಗಿದ್ದ ಗರತಿಯರು ತಮ್ಮ ಅಸಹಾಯಕತೆಯನ್ನು ನಾನಾ ಬಗೆಯಲ್ಲಿ ವ್ಯಕ್ತಪಡಿಸಿದ್ದಂಟು ಜನಪದ ತ್ರಿಪದಿಯೊಂದರಲ್ಲಿ ಹೆಣ್ಣು

ಪಂಜರದ ಗಿಣಿ ಬರಲಾರೆ ತಾವಿಲ್ಲ
ದನಿ ತೋರಲಾರೆ ತೆರ ಇಲ್ಲ । ನನ ಗೆಣೆಯ
ಗಿಣಿಯಾಗಿ ಬಾರೋ ಹೊಸಲಿಗೆ[೧೮೨]

ಎನ್ನುತ್ತಾಳೆ. ಪ್ರೀತಿಸಿದ್ದ ಗೆಳೆಯನ ಸಾವಿನ ಸುದ್ದಿ ಕೇಳಿದ ಗರತಿಯೊಬ್ಬಳು

ಅತ್ತೆ ಕಾಣದಂಗ ಮಾವ ನೋಡದಂಗ
ಒಪ್ಪದಲಿ ನಾನು ಬಳಸಿದ್ದ । ಈ ಕೊಡವು
ನುಚ್ಚುನೂರಾಯಿತು ನಿರಹೊಳೆಯಲ್ಲಿ[೧೮೩]

ಎಂದು ದುಃಖಿಸುವುದನ್ನು ಕಾಣುತ್ತೇವೆ. ಸಮಾಜದ ಚೌಕಟ್ಟನ್ನು ಮೀರಲಾರದೆ ಸ್ಥಾಪಿತ ಮೌಲ್ಯಗಳ ಉರುಳಿನಲ್ಲಿ ನರಳುತ್ತಾ ಬಾಳಿದವರು ಇಂತಹ ಅನೇಕ ಹತ ಭಾಗ್ಯ ಮಹಿಳೆಯರು.

೪.೬.೪ ಸಮಾನತೆಯ ಅಭಿವ್ಯಕ್ತಿ :

ಸಮಾನತೆಯ ನೆಲೆಯನ್ನು ಸಾರುವ ಕೆಲವು ಸಂದರ್ಭಗಳು ಸನ್ನಿವೇಶಗಳು ಜನಪದ ಸಾಹಿತ್ಯದಲ್ಲಿ ದೊರೆತಿರುವುದು ಗಮನಿಸಬೇಕಾದ ಅಂಶ. ಶಿಷ್ಟಪದ ಸಾಹಿತ್ಯದಲ್ಲಿ ದೊರೆಯಲಾರದ ಈ ಅಂಶಗಳು ಜನಪದ ಸಾಹಿತ್ಯವನ್ನು ವಿಶಿಷ್ಟಗೊಳಿಸುತ್ತವೆ. ಜನಪದ ಗೀತ ಪ್ರಕಾರದಲ್ಲಿ ಕಲ್ಗಿ ತುರಾ ಲಾವಣಿಗಳು ಹೆಣ್ಣು ಹೆಚ್ಚೋ ಗಂಡು ಹೆಚ್ಚೋ ಎಂದು ಪ್ರಶ್ನಿಸಿ ಇಬ್ಬರೂ ಸಮ ಎಂಬ ಅಂತಿಮ ನಿರ್ಣಯಕ್ಕೆ ಬರುತ್ತವೆ.

'ಗಂಡ-ಹೆಂಡತಿ' ಎಂಬ ಕತೆ ಕೌಟುಂಬಿಕ ಕೆಲಸಗಳನ್ನು ಗಂಡು ಹೆಣ್ಣು ಇಬ್ಬರೂ ಸಮನಾಗಿ ಹಂಚಿಕೊಂಡು ಮಾಡುವ ಅವಶ್ಯಕತೆಯನ್ನು ಅರುಹುತ್ತದೆ. ಗೊಂದಲಿಗರ ಕತೆ 'ಬಾಳಾವತಿ'ಯಲ್ಲಿ ಮಕ್ಕಳಿಲ್ಲದ ಅರಸನನ್ನು ಭಿಕ್ಷಕ್ಕೆ ಬಂದ ಬಾವಾಜಿಗಳು 'ಬಂಜೆ' ಎಂದು ತಿರಸ್ಕರಿಸುವುದನ್ನು ಕಾಣಬಹುದು. ಬೇಸರದಿಂದ ಅಡವಿಗೆ ಹೋದ ಅರಸ ಅಡವಿಯಲ್ಲಿ ನೀರು ಕುಡಿಯಲು ಬಾವಿಗಿಳಿದರೆ, ಬಂಜೆ ಯಾದವನು ನೀರನ್ನು ಮುಟ್ಟದಿರಲೆಂದು ನೀರು ಕೆಳಗೆ ಸರಿಯುತ್ತದೆ. ಮಕ್ಕಳಾಗದುದಕ್ಕೆ ಯಾವಾಗಲೂ ಹೆಣ್ಣನ್ನೇ ದೋಷಿಯಂದು ಸಮಾಜ ಪರಿಗಣಿಸುತ್ತಿರುವಾಗ ಗೊಂದಲಿಗರ ಕತೆ ಪುರುಷನನ್ನು ದೋಷಿಯೆಂದು ಪರಿಗಣಿಸುವುದರ ಮೂಲಕ ಸಮಾನತೆಯನ್ನು ಮೆರೆದದ್ದು ಇಲ್ಲಿ ಸ್ಪಷ್ಟ. ಸ್ತ್ರೀವಾದಿ ದೃಷ್ಟಿಕೋನದ ಹಿನ್ನೆಲೆಯಲ್ಲಿ ಇದು ಮಹತ್ವದ ವಿಚಾರ, ಇದೇ ವಿಷಯ 'ರಾಜಾ ಕ್ಷೀರಸೇನ' 'ನಳನಳಿ' ಮುಂತಾದ ಕತೆಗಳಲ್ಲಿಯೂ ಪುನರುಕ್ತಿಗೊಂಡಿದೆ. ಹೀಗೆ ಕೆಲವೇ ಸಂದರ್ಭಗಳಲ್ಲಿ ಆಗಲೀ ಸ್ತ್ರೀ ಪುರುಷ ಸಮಾನತೆಯನ್ನು ಸಾರಿರುವ ಅಂಶ ಜನಪದ ಸಾಹಿತ್ಯದಲ್ಲಿ ಕಂಡು ಬರುತ್ತದೆ.

ಹೆಣ್ಣು ಹೆಣ್ಣಿನ ಸಂಬಂಧದ ಪ್ರೀತಿ-ದ್ವೇಷಗಳೆರಡೂ ಜನಪದ ಸಾಹಿತ್ಯದಲ್ಲಿ ದನಿ ಪಡೆದಿದೆ. ತವರಿನಲ್ಲಿ ಅತ್ತಿಗೆ-ನಾದಿನಿಯರನ್ನು ಬಿಟ್ಟರೆ, ಉಳಿದ ಸಂಬಂಧಗಳು ಪ್ರೀತಿಪೂರ್ಣವಾದವುಗಳಾಗಿವೆ. 'ದಂಡ ಬಂತವ್ವ

ದಂಡ' ಗೀತೆಯಲ್ಲಿನ ತಾಯಿಯಂತೆ 'ಹುಟ್ಟಿದ ಮಗಳವ್ವ ಕಟ್ಟಿಕಲ್ಲ ಇಳಿದಿಲ್ಲ, ಬ್ಯಾಡ ನನ ಮಗಳ ಹೊರಿಯಾಕ' ಎಂದು ಜೊಪಾನ ಮಾಡುವ ತಾಯಂದಿರಿದ್ದಾರೆ. ಕುಂಬಳಕಾಯಿಯನ್ನು ಕುಡಗೋಲಿಗೆ ಕೊಟ್ಟಂತೆ ಮಗಳನ್ನು ಕೊಟ್ಟು ಕೊರಗಿದ್ದಾರೆ. ಅಪಹರಣ, ಅತ್ಯಾಚಾರಗಳು ಪ್ರಭುಶಕ್ತಿಯಿಂದಲೇ ನಡೆದಾಗ ಹೆಣ್ಣುಗಳು ದಂಡಿನ ಪಾಲಾದಾಗ 'ದಂಡೀಗಿ ಧಾರಿ ಎರೆದೀದಿನೇನ' ಎಂದು ಹೆತ್ತವರು ದುಃಖದಿಂದ ಪ್ರಶ್ನಿಸಿದ್ದಾರೆ. ಗಂಡನ ಮನೆಯಲ್ಲಿ ಮಹಿಳೆ ನಡೆಸುವ ಹೋರಾಟದಲ್ಲಿ ಮುಖ್ಯವಾಗಿ ಅವಳಿಗೆ ಎದುರಾಗುವವರು ಅತ್ತೆ ನಾದಿನಿ ನೆಗೆಯಣ್ಣಿ ಮತ್ತು ಸವತಿಯರು. ಪುರುಷ ಪ್ರಧಾನ ಸಮಾಜವು ಸೃಷ್ಟಿಸಿದ ಇಕ್ಕಟ್ಟು ಹೆಣ್ಣನ್ನು ಹೆಣ್ಣಿನ ವಿರುದ್ಧವಾಗಿ ಹೇಗೆ ಹೋರಾಟಕ್ಕೆ ಬಿಟ್ಟಿದೆ ಎಂಬುದು ಗಮನಾರ್ಹ.

ಜನಪದ ಕಥೆಗಳಲ್ಲಿ ಮಹಿಳೆಯನ್ನು ಗಮನಿಸುವಾಗ ಮುಖ್ಯವಾಗಿ ಮೂರು ಗುಂಪಿನ ಕಥೆಗಳನ್ನು ನೋಡಬಹುದಾಗಿದೆ. ಮೊದಲ ಗುಂಪಿನ ಕಥೆಗಳಲ್ಲಿ ಬರುವ ಮಹಿಳೆಯರೆಲ್ಲರೂ ಆದರ್ಶ ನಾರಿಯರ ಪ್ರತಿರೂಪವಾಗಿದ್ದಾರೆ. ಇವರು ಪಾತಿವ್ರತ್ಯ, ಚಾರಿತ್ರ್ಯ, ಶೀಲ, ಗುರು ಹಿರಿಯರಲ್ಲಿ ಭಕ್ತಿ, ವಿಧೇಯತೆ ವಿನಯ ಮೊದಲಾದ ಸದ್ಗುಣಗಳ ಪ್ರತೀಕವಾಗಿದ್ದಾರೆ. ಯಾವುದಕ್ಕು ಎದುರಾಡದೆ ಮೌನವಾಗಿ ಸಹಿಸಿಕೊಳ್ಳುವ, ಪರರ ಸುಖ ಸಂತೋಷಗಳಿಗಾಗಿ ಸ್ವಂತ ಸುಖವನ್ನು ತ್ಯಾಗ ಮಾಡುವ ಮಹಿಳೆಯರೇ ಹೆಚ್ಚಾಗಿ ಕಂಡು ಬರುತ್ತಾರೆ. ಸದ್ಗುಣಗಳಲ್ಲಿ ಹೆಚ್ಚಿನ ಆದ್ಯತೆ ಪಾತಿವ್ರತ್ಯ ಮತ್ತು ಶೀಲಗಳಿಗೆ, ಜನಪದ ಸಾಹಿತ್ಯ ಪತಿವ್ರತಾ ಮಹಿಳೆಯರಿಂದ ತುಂಬಿ ಹೋಗಿದೆ. ಇಲ್ಲಿಯ ಮಹಿಳೆಯರಿಗೆ ಎದುರಾಗುವ ಸವಾಲು, ಪರೀಕ್ಷೆ ಸಂಕಟಗಳೆಲ್ಲವೂ ಅವರ ಪಾತಿವ್ರತ್ಯ ಹಾಗೂ ಶೀಲಗಳಿಗೆ ಸಂಬಂಧಿಸಿವೆ. ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿಯೇ ಅವರು ನಾನಾ ಕಷ್ಟಗಳನ್ನು ಅನುಭವಿಸುತ್ತಾರೆ. ಪವಾಡಗಳನ್ನು ಮಾಡುತ್ತಾರೆ. ಕಥೆಗಳಲ್ಲಿಯ ಪುರುಷರು ತಮ್ಮ ದೈಹಿಕ ಬಲ ಪರಾಕ್ರಮಗಳಿಂದ ಬುದ್ಧಿವಂತಿಕೆಯಿಂದ, ಅತಿ ಮಾನುಷ ಶಕ್ತಿಗಳ ಸಹಾಯದಿಂದ ಅಸಾಧ್ಯ ಪರೀಕ್ಷೆಗಳನ್ನು ಜಯಿಸಿದರೆ, ಮಹಿಳೆಯರು ಕೇವಲ ಪಾತಿವ್ರತ್ಯ ಬಲದಿಂದಲೇ ಎಂತಹ ಕಠಿಣ ಪರೀಕ್ಷೆಯಾದರೂ ಜಯಿಸುತ್ತಾರೆ.

ಕಥೆಗಳಲ್ಲಿಯ ಮಹಿಳೆಯರು ಪಾತಿವ್ರತ್ಯ ಭಂಗಕ್ಕಾಗಿ ಅನುಭವಿಸುವ ಶಿಕ್ಷೆಯೂ ಬಹು ಗಂಭಿರ ಸ್ವರೂಪದ್ದಾಗಿರುತ್ತದೆ. ಇಂಥವರು ಯಾವುದೇ ಸ್ಥಿತಿಯಲ್ಲಿದ್ದರೂ ನಿರ್ದಯವಾಗಿ ಕಾಡಿಗಟ್ಟುವ ಶಿಕ್ಷೆಗೊಳಗಾಗುತ್ತಾರೆ.

ಕೆಲ ಕಥೆಗಳಲ್ಲಿಯ ಮಹಿಳೆಯರಲ್ಲಿ ವಿಧೇಯತೆಯ ಗುಣ ಎದ್ದು ಕಾಣುತ್ತದೆ. ಬದುಕಿನಲ್ಲಿ ಎದುರಾದ ಎಲ್ಲ ಕಷ್ಟನಷ್ಟಗಳಿಗೂ ವಿಧೇಯತೆಯಿಂದ ತಲೆ ಬಾಗುವುದೇ ಇವರ ಸ್ಥಿತಿಯಾಗಿದೆ. ವಾಸ್ತವವಾಗಿ ಇಂಥ ಗುಣವೇ ಅವರ ಎಲ್ಲಾ ಕಷ್ಟಗಳ ನೆಲೆಯಾಗಿದೆ. ಇಂಥ ಸ್ಥಿತಿಯನ್ನೇ ಇವರು ಸ್ವ ಇಚ್ಛೆಯಿಂದಲೇ ಆಯ್ದುಕೊಳ್ಳುತ್ತಾರೆ. ಸತ್ತಿಕರಾಯನ ಕಥೆ ಅಂಥದು. ಶವದೊಂದಿಗೆ ವಿವಾಹವಾದರೂ ಅವನನ್ನೇ ಆಕೆ ಬದುಕಿಸಿಕೊಳ್ಳುತ್ತಾಳೆ.. ಆದರೆ ಅವನು ಬೇರೊಬ್ಬಳೊಂದಿಗೆ ಬಾಳುತ್ತಾನೆ. ತಾನೆ ಅವನ ಹೆಂಡತಿ ಎಂದು ಹೇಳದ ವಿಧೇಯತೆ ಆಕೆಯದು.

ತಮ್ಮ ವಿರುದ್ಧ ಆಪಾದನೇ ಮಾಡಿದರೂ ಸಂಚು ಹೂಡಿದರು ಇವರು ಮೌನವಾಗಿ ಇರುತ್ತಾರೆ. ಈ ಮೌನದ ಕಾರಣ ಅನೇಕ ಅನ್ಯಾಯಗಳಿಗೆ ತುತ್ತಾಗುತ್ತಾರೆ. ಎಷ್ಟೋ ಕಥೆಗಳಲ್ಲಿ ಮಾತಾಡಬಾರದು ಎಂಬುದೇ ಇವರಿಗೆ ವಿಧಿಸಿದ ನಿರ್ಬಂಧವಾಗಿರುತ್ತದೆ.

ಮಹಿಳೆಯ ಅಭಿಪ್ರಾಯವನ್ನೇ ಕೇಳದೆ ಪಂಥಕ್ಕಿಡುವ, ಗೆದ್ದವನಿಗೆ ಕೊಡುವ, ಬಲಿಕೊಡುವ ಸಂಗತಿಗಳು ಅನೇಕ ಕಥೆಗಳಲ್ಲಿವೆ. ಮಹಿಳೆಯ ಮೇಲೆ ಹೇರಲಾದ ಇನ್ನೊಂದು ಆದರ್ಶ ತಾಯಿತನದ್ದು. ಮಕ್ಕಳಿರದ ಕಾರಣಕ್ಕಾಗಿ ಕುಟುಂಬದ ಜನರಿಂದ ವಿವಿಧ ರೀತಿಯ ಕಿರುಕುಳವನ್ನು ಅನುಭವಿಸುತ್ತಾರೆ. ಈ ಗುಂಪಿನ ಕಥೆಗಳ ಮಹಿಳೆಯರು ಬದುಕಿನಲ್ಲಿ ನಾನಾ ರೀತಿಯ ಕಷ್ಟಗಳನ್ನು ಅನುಭವಿಸುತ್ತಾರೆ. ನಡತೆ ಸರಿಇಲ್ಲೆಂಬ ಅಪವಾದ, ಕಾಮುಕರಿಂದ ಪೀಡನೆ, ಬಂಜೆ ಎಂಬ ಹೀಯಾಳಿಕೆ ಸವತಿ ನಾದಿನಿ ಅತ್ತೆಯರ ಕಿರುಕುಳ ಏನೇ ಕಾರಣವಿರಲಿ ಒಟ್ಟಿನಲ್ಲಿ ಅವರದು ಕಣ್ಣೀರಿನ ಬಾಳು. ಇಲ್ಲಾ ಕಷ್ಟಗಳನ್ನು ಅನುಭವಿಸಿಯೂ ಅದನ್ನು ಆದರ್ಶಗಳ ಭ್ರಮೆಯಲ್ಲಿ ಮರೆಯುವ ವ್ಯಕ್ತಿಗಳಾಗಿ ಕಾಣುತ್ತಾರೆ.

ಇನ್ನೊಂದು ಗುಂಪಿನ ಕಥೆಗಳಲ್ಲಿ ಹೆಣ್ಣಿನ ವ್ಯಭಿಚಾರಕ್ಕೇ ಹೆಚ್ಚು ಒತ್ತು ಕೊಡಲಾಗಿದೆ. ಪ್ರಿಯಕರನೊಂದಿಗೆ ಬೆರೆಯಲು ಅನುಕೂಲವಾಗುವಂತೆ ತನ್ನ ಗಂಡ ಕುರುಡಾಗಲಿ ಎಂದು ಹರಕೆ ಕಟ್ಟಿಕೊಳ್ಳುವ, ಪ್ರಿಯಕರನಿಗಾಗಿ ಉತ್ತಮ ತಿನಸುಗಳನ್ನು ಮಾಡಿ ಗಂಡನನ್ನು ಉಪವಾಸವಿಡುವ, ಪರಪುರಷನ ನೆರಳು ಬೀಳದಂತೆ ನೆಲಮಾಳಿಗೆಯಲ್ಲಿಟ್ಟರೂ ಹೇಗೋ ಪರಪುರುಷನನ್ನು ಬೆರೆಯುವ ಮಹಿಳೆಯರು ಇಲ್ಲಿ ಕಂಡು ಬರುತ್ತಾರೆ. ಈ ಕಥೆಗಳಲ್ಲಿ ಸಿಗುವ ಚಿತ್ರಣದಿಂದ ಹೆಣ್ಣೆಂದರೆ ವ್ಯಭಿಚಾರಿ ಕೈಹಿಡಿದ ಗಂಡನಿಗೆ ಅವಳೆಂದೂ ನಿಷ್ಠಳಾಗಿರುವುದಿಲ್ಲ. ಪರಪುರಷನ ಸಂಗಕ್ಕೆ ಹಾತೊರಿಯುವುದೇ ಅವಳ ಪ್ರವೃತ್ತಿ ಅದಕ್ಕಾಗಿ ಎಂತಹ ನೀಚ ಮಟ್ಟಕ್ಕೂ ಇಳಿಯುತ್ತಾಳೆ ಎಂದು ವಿವರಿಸುವ ಕಥೆಗಳು ಹಾಸ್ಯಕಥೆಗಳ ರೂಪದಲ್ಲಿ ಪ್ರಚಲಿತವಾಗಿವೆ. ಈ ಕಥೆಗಳಲ್ಲಿ ಹೆಣ್ಣನ್ನು ಅತೀಕೀಳಾಗಿ ಚಿತ್ರಿಸುವ ಮೂಲಕ ಹೆಂಗಸರು ಅಂತಹ ಗುಣಗಳನ್ನು ಬೆಳೆಸಿಕೊಳ್ಳಬಾರದು. ಹಾಗೆ ಮಾಡಿದರೆ ಅವರಿಗೆ ಅವಮಾನ, ದೂಷಣೆ, ಶಿಕ್ಷೆ ತಪ್ಪಿದ್ದಲ್ಲ ಎಂಬುದನ್ನೇ ಈ ಕಥೆಗಳು ಶ್ರುತಪಡಿಸುತ್ತವೆ.

ಇದಕ್ಕೆ ವಿರುದ್ಧವಾಗಿ ಕೆಲ ಕಥೆಗಳಲ್ಲಿಯ ಮಹಿಳೆಯರು ಬುದ್ಧಿವಂತೆಯರು, ಕುಶಾಗ್ರಮತಿಗಳು, ಹೆಣ್ಣಿನ ಆದರ್ಶಗಳು ಎಂದು ಹೇಳಲಾದ ಗುಣಗಳನ್ನು ಬಿಟ್ಟುಕೊಡದೇ, ತಮಗಾದ ಅನ್ಯಾಯಗಳ ವಿರುದ್ಧ ನೇರವಾಗಿ ಸಿಡಿದೇಳದೆ ಜಾಣತನದಿಂದ ಕೆಲಸ ಸಾಧಿಸುತ್ತಾರೆ. ಸೂಳೆಯ ವಶನಾದ ಗಂಡನನ್ನು ಉಪಾಯದಿಂದ ಬಿಡಿಸುವ ಮಹಿಳೆಯರು ಇಲ್ಲಿದ್ದಾರೆ. ಜಂಬೂರ ನಾಗಯ್ಯನ ಸೊಸೆ ಅಂಥ ಕತೆ ಆದರೆ ಇಂತಹ ಮಹಿಳೆಯರು ಧೈರ್ಯ ಬುದ್ಧಿವಂತಿಕೆಯ ಹೆಣ್ಣುಗಳೆಂದು ಚಿತ್ರಣಗೊಳ್ಳದೇ ಬಜಾರಿಯರಂತೆ ಚಿತ್ರಣಗೊಂಡಿದ್ದರಿಂದ ಕಥೆಗಳು ಬೀರಬೇಕಾದ ಮಟ್ಟಿನ ಪರಿಣಾಮ ಬೀರುವುದಿಲ್ಲ.

ಒಟ್ಟಿನಲ್ಲಿ ಜನಪದ ಕಥೆಗಳು ಹೆಣ್ಣನ್ನು ಸಂಸ್ಕೃತಿ ನಿರ್ಮಿತ ಚೌಕಟ್ಟಿನಲ್ಲಿ ನೋಡಲಿಚ್ಛಿಸುತ್ತವೆ. ಹೆಣ್ಣಿನ ಬಗ್ಗೆ ಒಳ್ಳೆಯ ಮಾತನ್ನೇ ಹೇಳಲಿ, ಕೆಟ್ಟ ಮಾತನ್ನೆ ಹೇಳಲಿ ಅವು ಅಂತಿಮವಾಗಿ ಧ್ವನಿಸುವ ಮತ್ತು ಪ್ರತಿಪಾದಿಸುವ ಸ್ತ್ರೀ ಮಾದರಿಗಳು ಮಾತ್ರ ಭಾರತೀಯ ಸಂಸ್ಕೃತಿಯಲ್ಲಿರುವ ಹೆಣ್ಣಿನ ಪಡೆಯಚ್ಚಾಗಿವೆ. ಜಾನಪದದ ಬೇರೆಲ್ಲಾ ಪ್ರಕಾರಗಳಿಗಿಂತ ಜನಪದ ಕಥೆಗಳೇ ಈ ವಿಷಯವಾಗಿ ಹೆಚ್ಚು ಶ್ರಮಿಸುತ್ತಿರುವುದು ಕುತೂಹಲಕಾರಿಯಾಗಿದೆ.

ಟಿಪ್ಪಣಿಗಳು :

೦೧. ಎಚ್.ಎಸ್. ಶ್ರೀಮತಿ (೨೦೦೩) ಸೇರಕೊಂಡ ಎಳೆಗಳು : ಸಿಜಿವಿ ಪಬ್ಲಿಕೇಶನ್ಸ್, ಬೆಂಗಳೂರು. ಪು. ೯.

೦೨. ಜೋತಿ ಶಶಿಕುಮಾರ (೨೦೦೭) ಮಹಿಳಾ ಸಾಮಾಜಿಕತೆ : ಮಹಿಳಾ ಅಧ್ಯಯನ ಕೇಂದ್ರ, ಕ.ವಿ.ವಿ. ಹಂಪಿ. ಪು.೪೯

೦೩. ಡಾ. ಇಂದಿರಾ (೨೦೦೨) ಮಹಿಳೆ ಸಮಾಜ ಸಂಸ್ಕೃತಿ : ಪ್ರಸಾರಾಂಗ ಕ.ವಿ.ವಿ.ಹಂಪಿ. ಪು.೩೬

೦೪. ಎಚ್.ಪಂಪಯ್ಯಶೆಟ್ಟಿ (೧೯೯೫) ಬಿಸಿಲ ಹನಿಗಳು : ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು. ಪು.೨

೦೫. ಜಯತೀರ್ಥ ರಾಜ ಪುರೋಹಿತ (೧೯೬೯) ರೋಹಿಣಿ : ಪ್ರಕಾಶನ ಪ್ರಕಾಶನ ರಾಯಚೂರು.

೦೬. ಅದೆ.ಪು.೪

೦೭. ಶಾಂತರಸ (೧೯೯೭) ಶಾಂತರಸರ ಸಮಗ್ರ ಕಥೆಗಳು : ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. ಪು.೨೪೩

೦೮. ಅದೆ.ಪು.೨೪೫

೦೯. ಶಿವಕುಮಾರ ನಾಗವಾರ (೨೦೦೦) ಹಣದಿ : ಲೋಹಿಯಾ ಪ್ರಕಾಶನ ಬಳ್ಳಾರಿ. ಪು.೪೯

೧೦. ಅದೆ ಪು.೫೧

೧೧. ಅದೆ ಪು. ೫೨

೧೨. ಬಿ.ಟಿ ಲಲಿತಾನಾಯಕ (೧೯೮೯) ಹಬ್ಬ ಮತ್ತು ಬಲಿ : ಲಂಬಾಣಿ ಒಕ್ಕೂಟ ಪ್ರಕಾಶನ ಬೆಂಗಳೂರು. ಪು.೭೫

೧೩. ಅದೆ ಪು. ೬೯

೧೪. ಅದೆ ಪು. ೮೫

೧೫. ರಾಜಶೇಖರ ಹತಗುಂದಿ (೧೯೯೯) ಕಾಳ ಬೆಳದಿಂಗಳ ಸಿರಿ. ಲೋಹಿಯಾ ಪ್ರಕಾಶನ, ಬಳ್ಳಾರಿ. ಪು.೭೫

೧೬ ಅದೆ ಪು.೭೫

೧೭ ಜಯದೇವಿ ಗಾಯಕವಾಡ (೨೦೦೨) ಯಾಜ್ಞಸೇನಿಯ ಆತ್ಮಕಥನ : ಸಿದ್ಧಲಿಂಗ ಪ್ರಕಾಶನ ಗುಲಬರ್ಗಾ-೧ ಪು.೪೭

೧೮. ಅದೆ ಪು.೫೧

೧೯. ಅದೆ ಪು.೧೦೪

೨೦. ಅದೆ ಪು.೧೦೫

೨೧. ನಿರುಪಮಾ (೨೦೦೨) ಮಹಿಳೆ ಮತ್ತು ವಿವಾಹ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೨. ಗೀತಾ ನಾಗಭೂಷಣ (೧೯೮೬) ಸವತಿ ಶ್ರೀಗಂಧ : ಪ್ರಿಯಾ ಪ್ರಕಾಶನ ಗುಲಬರ್ಗಾ ಪು.೮೨

೨೩. ಅದೆ ಪು. ೭೧

೨೪. ಅಮರೇಶ ನುಗಡೋಣಿ (೧೯೭೭) ಮಣ್ಣು ಸೇರಿತು ಬೀಜ : ನಮ್ಮ ಪ್ರಕಾಶನ, ತಿಪಟೂರ. ಪು೧೨೮

೨೫. ಲಲಿತಾ ದೇಮಶೆಟ್ಟಿ (೧೯೯೭) ಮಾತಂಗಿ ಮತ್ತು ಇತರ ಕಥೆಗಳು : ಮಮತಾ ಪ್ರಕಾಶನ, ಕೊಪ್ಪಳ. ಪು.೬

೨೬ ಮಲ್ಲಿಕಾರ್ಜುನ ಹಿರೇಮಠ (೧೯೯೩) ಅಮಿನಪುರದ ಸಂತೆ : ಚೈತನ್ಯ ಪ್ರಕಾಶನ ಹುನಗುಂದ. ಪು.೯೫

೨೭ ಸಂಧ್ಯಾ ಹೊನಗುಂಟಿಕರ (೨೦೦೨) ಕಡಲ ಒಡಲು ಬಗೆದಷ್ಟು : ಸಿದ್ಧಲಿಂಗ ಪ್ರಕಾಶನ ಗುಲಬರ್ಗಾ. ಪು.೧೦೪

೨೮. ಅದ್ಧೆ ಪು.೬೭-೬೮

೨೯. ಸಂಧ್ಯಾ ಹೊನಗುಂಟಿಕರ (೨೦೦೨) ಕಡಲ ಒಡಲು ಬಗೆದಷ್ಟು : ಸಿದ್ಧಲಿಂಗ ಪ್ರಕಾಶನ ಗುಲಬರ್ಗಾ. ಪು.೧೦೪

೩೦. ಅದೆ ಪು. ೧೧೦

೩೧. ಲಲಿತಾ ದೇಮಶೆಟ್ಟಿ (೧೯೮೬) ಮಾತಂಗಿ ಮತ್ತು ಇತರ ಕಥೆಗಳು : ಮಮತಾ ಪ್ರಕಾಶನ ಕೊಪ್ಪಳ ಪು.೬೨

೩೨. ಭಾಲಚಂದ್ರ ಜಯಶೆಟ್ಟಿ (೧೯೯೩) ಮಿರ್ಜಬಾಬಾ ಮತ್ತು ಇತರ ಕಥೆಗಳು : ಬಸವ ಪ್ರಕಾಶನ ಗುಲಬರ್ಗಾ ಪು.೭೦

೩೩. ಅದೆ ಪು. ೭೧.

೩೪. ಅದೆ ಪು. ೭೮.

೩೫. ಅದೆ ಪು. ೮೬

೩೬. ಯಶೋದಮ್ಮ ಸಿದ್ಧಬಟ್ಟೆ (೧೯೯೫) ಮಂಗಳಾ : ಕಾವ್ಯಶ್ರೀ ಪ್ರಕಾಶನ, ಬೀದರ ಪು.೬೧.

೩೭. ಅದೆ ಪು. ೯೪

೩೮. ಅದೆ ಪು.೧೩೫

೩೯. ಮಹಿಳಾ ಅಧ್ಯಯನ ಸಂಚಿಕೆ ೨೦೦೨ ಪು.೪೪

೪೦. ಅದೆ ಪು.೪೫

೪೧. ಸಾಹಿತ್ಯ ವಿಮರ್ಶೆ (೧೯೯೮) ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಪು.೧೬೫

೪೨. ಮಹಿಳಾ ಅಧ್ಯಯನ ಸಂಚಿಕೆ (೨೦೦೨) ಕನ್ನಡ ವಿಶ್ವವಿದ್ಯಾಲಯ ಹಂಪಿ. ಪು.೫೩

೪೩. ಅದೆ. ಪು.೫೪

೪೪. ಅದೆ ಪು. ೫೫

೪೫. ಎಲ್.ಜಿ. ಮೀರಾ (೨೦೦೪) ಸ್ತ್ರೀಸಂವೇದನೆಯಲ್ಲಿ ಕನ್ನಡ ಕಥನ : ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಶರ್ಸ್, ಬೆಂಗಳೂರು. ಪು.೧೩೩

೪೬. ಗೀತಾ ನಾಗಭೂಷಣ (೧೯೯೪) ಧುಮಸ್ಸು : ಮಹಿಳಾ ಸಾಹಿತ್ಯಿಕಾ, ನವನಗರ ಹುಬ್ಬಳ್ಳಿ ಪು.೨೧೧-೨೧೨

೪೭. ಸಂಧ್ಯಾಹೊನಗುಂಟಿಕರ (೨೦೦೨) ಕಡಲ ಒಡಲು ಬಗೆದಷ್ಟು : ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ. ಪು.೧೮

೪೮. ಅದೆ ಪು.೩೯

೪೯. ಬಿ.ಟಿ. ಲಲಿತಾ ನಾಯಕ (೧೯೮೯) ಹಬ್ಬ ಮತ್ತು ಬಲಿ : ಲಂಬಾಣಿ ಒಕ್ಕೂಟ ಪ್ರಕಾಶನ, ಬೆಂಗಳೂರು. ಪು.೪೨

೫೦. ಅಮರೇಶ ನುಗಡೋಣಿ (೧೯೭೭) ಮಣ್ಣು ಸೇರಿತು ಬೀಜ : ನಮ್ಮ ಪ್ರಕಾಶನ, ತಿಪಟೂರು. ಪು.೧೦೬

೫೧. ಅದೆ ಪು.೧೦೬

೫೨. ಅದೆ ಪು.೧೦೧

೫೩. ಶ್ರೀಕಾಂತ ಪಾಟೀಲ್ (೧೯೯೭) ಬೆಂಕಿ ಮರೆಯ ತಂಪು : ಶಶಿ ಪ್ರಕಾಶನ, ಬೆಟಗೇರಾ. ಪು.೫೦

೫೪. ಶಾಂತರಸ (೧೯೯೭) ಶಾಂತರಸರ ಸಮಗ್ರ ಕಥೆಗಳು : ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು. ಪು.೨೧೯

೫೫. ಗೀತಾ ನಾಗಭೂಷಣ (೧೯೯೭) ದಂಗೆ : ನವ ಕರ್ನಾಟಕ ಪ್ರಕಾಶನ, ಬೆಂಗಳೂರು. ಪು.೧೩೭

೫೬. ಚಂದ್ರಕಾಂತ ಕುಸನೂರು (೨೦೦೫) ಕೆರೂರು ನಾಮಾ : ಲೋಹಿಯಾ ಪ್ರಕಾಶನ ಬಳ್ಳಾರಿ. ಪು.೧೨೭

೫೭. ಶಿವಕುಮಾರ ನಾಗವರ (೨೦೦೭) ಹಣದ : ಲೋಹಿಯಾ ಪ್ರಕಾಶನ, ಬಳ್ಳಾರಿ ಪು.೨೬

೫೮. ಸಿದ್ಧರಾಮ ಹೊಸ್ಕಲ್ (೧೯೯೮) ಬಯಲ ಬಿತ್ತನೆ : ಜಾಗೃತಿ ಪ್ರಕಾಶನ ಶಹಪೂ ಪು. ೪೫

೫೯. ಗೀತಾ ನಾಗಭೂಷಣ (೨೦೦೧) ಬದುಕು : ಲೋಹಿಯಾ ಪ್ರಕಾಶನ, ಬಳ್ಳಾರಿ ಪು.೩೫೪

೬೦. ಡಾ.ಮ.ನ. ಜವರಯ್ಯ (ಅನು) (೧೯೯೯) ಜಾತಿ ಸತಿ ಮತ್ತು ಮಹಿಳೆ : ಸಿದ್ಧಾರ್ಥ ಗ್ರಂಥಮಾಲೆ ಮೈಸೂರು ಪು.೨೪೯

೬೧. ಪಂಪಯ್ಯ ಶೆಟ್ಟಿ (ಪ್ರಸಂ.) (೧೯೯೫) ಬಿಸಿಲ ಹನಿಗಳು : ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರು ಪು.೧೧೮

೬೨. ಅದೆ ಪು. ೧೨೪

೬೩. ಅದೆ ಪು. ೧೨೬

೬೪. ಲಲಿತಾ ದೇಮಶೆಟ್ಟ (೧೯೮೬) ಮಾತಂಗಿ ಮತ್ತು ಇತರ ಕಥೆಗಳು : ಮಮತಾ ಪ್ರಕಾಶನ ಕೊಪ್ಪಳ. ಪು.೧೦೮

೬೫. ಅದೆ ಪು. ೧೦೯

೬೬. ಜೆ.ಕೃಷ್ಣ (೨೦೦೦) ಮಾನವ ಅಭಿವೃದ್ಧಿ ಪ್ರಾದೇಶಿಕ ಆಯಾಮಗಳ ಅಧ್ಯಯನ : ಕನ್ನಡ ಪಿಶ್ವಪಿದ್ಯಾಲಯಕ್ಕೆ ಸಾದರ ಪಡಿಸಿದ ಪಿ.ಎಚ್‌ಡಿ ಪ್ರಬಂಧ ಪು.೨೦೭ (ಅಪ್ರಕಟಿತ)

೬೭. ಗೀತಾ ನಾಗಭೂಷಣ (೧೯೯೪) ಧುಮಸ್ಸು : ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ. ಪು.೩೨.

೬೮. ಗೀತಾ ನಾಗಭೂಷಣ (೨೦೦೧) ಬದುಕು : ಲೋಹಿಯಾ ಪ್ರಕಾಶನ, ಬಳ್ಳಾರಿ ಪು.೨೮೫

೬೯. ಚಿತ್ರಶೇಖರ ಕಂಠಿ (೧೯೯೦) ನೇಪಥ್ಯ : ಗೆಳೆಯರ ಬಳಗ ಪ್ರಕಾಶನ ಯಾದಗಿರಿ. ಪು.೪೪

೭೦. ಬಿ.ಟಿ.ಲಲಿತಾನಾಯಕ (೧೯೯೩) ನೆಲೆ ಬೆಲೆ : ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು. ಪು.೫

೭೧. ಜಯತೀರ್ಥ ರಾಜಪುರೋಹಿತ (೧೯೬೮) ರೋಹಿಣಿ : ಪ್ರಕಾಶನ ಪ್ರಕಾಶನ, ರಾಯಚೂರು. ಪು.೧೧೨

೭೨. ಮಹಿಳಾ ಅಧ್ಯಯನ ಸಂಚಿಕೆ (೨೦೦೦) ಕ.ವಿ. ಹಂಪಿ. ಪು.೪೩

೭೩. ಶಾಂತರಸ (೧೯೯೭) ಶಾಂತರಸರ ಸಮಗ್ರ ಕಥೆಗಳು : ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು ಪು.೩೯೪.

೭೪. ಬಾಲಚಂದ್ರ ಜಯಶೆಟ್ಟಿ (೧೯೯೬) ಮಿರ್ಚಿ ಬಾಬಾ ಮತ್ತು ಇತರ ಕಥೆಗಳು : ಬಸವ ಪ್ರಕಾಶನ, ಗುಲಬರ್ಗಾ. ಪು.೬೭

೭೫. ಅಮರೇಶ ನುಗಡೋಣಿ (೧೯೭೭) ಮಣ್ಣು ಸೇರಿತು ಬೀಜ : ನಮ್ಮ ಪ್ರಕಾಶನ, ತಿಪಟೂರ. ಪು.೪೪

೭೬. ಪಂಪಯ್ಯ ಶೆಟ್ಟಿ (ಸಂ) (೧೯೯೫) ಬಿಸಿಲ ಹನಿಗಳು : ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು. ಪು.೧೪೬

೭೭. ಗೀತಾ ನಾಗಭೂಷಣ (೧೯೯೪) ಧುಮಸ್ಸು : ಮಹಿಳಾ ಸಾಹಿತ್ಯಿಕಾ ಹುಬ್ಬಳ್ಳಿ. ಪು.೧೪೬

೭೮. ಡಾ. ವಿಜಯಶ್ರೀ ಸಬರದ (೨೦೦೫) ಶೈಲಶ್ರೀ : ಚೇತನ ಪ್ರಕಾಶನ, ಗುಲಬರ್ಗಾ. ಪು.೧೦೮

೭೯. ಬಿ.ಟಿ ಲಲಿತಾ ನಾಯಕ (೧೯೯೫) ನೆಲೆ ಬೆಲೆ : ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು. ಪು.೭

೮೦. ಚಂದ್ರಕಾಂತ ಕುಸನೂರ (೧೯೬೯) ಚರ್ಚ್‌ಗೇಟ್ : ಸತ್ಯಸ್ನೇಹ ಪ್ರಕಾಶನ, ರಾಯಚೂರು. ಪು.೯೪

೮೧. ಅದೆ ಪು.೯೮

೮೨. ಡಾ. ವಿಜಯಶ್ರೀ ಸಬರದ (೨೦೦೫) ಶೈಲಶ್ರೀ : ಚೇತನ ಪ್ರಕಾಶನ, ಗುಲಬರ್ಗಾ. ಪು.೧೦೮

೮೩. ಗೀತಾ ನಾಗಭೂಷಣ (೧೯೯೪) ಧಮಸ್ಸು : ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ. ಪು.೧೪೫

೮೪. ಎಂ.ನಾರಾಯಣ (೨೦೦೪) ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಬದಲಾವಣೆ ಚೇತನ ಬುಕ್ ಹೌಸ್. ಮೈಸೂರು. ಪು. ೧೮೯

೮೫. ಚಿತ್ರಶೇಖರ ಕಂಠಿ (೧೯೯೦) ನೇಪಥ್ಯ : ಗೆಳೆಯರ ಬಳಗ ಪ್ರಕಾಶನ, ಯಾದಗಿರಿ. ಪು.೫೬

೮೬. ಅದೆ ಪು.೫೮

೮೭. ಪಂಪಯ್ಯ ಶೆಟ್ಟಿ (೧೯೯೫) ಬಿಸಿಲ ಹನಿಗಳು : ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು. ಪು.೨೧೬.

೮೮. ಬಿ.ಟಿ ಲಲಿತಾ ನಾಯಕ (೧೯೮೯) ಹಬ್ಬ ಮತ್ತು ಬಲಿ : ಲಂಬಾಣಿ ಒಕ್ಕೂಟ ಪ್ರಕಾಶನ, ಬೆಂಗಳೂರು. ಪು.೧೯

೮೯. ಚಿತ್ರಶೇಖರ ಕಂಠಿ (೧೯೯೦) ನೇಪಥ್ಯ : ಗೆಳೆಯರ ಬಳಗ ಪ್ರಕಾಶನ, ಯಾದಗಿರಿ. ಪು.೪೧.

೯೦. ಬಿ.ಟಿ. ಲಲಿತಾನಾಯಕ (೨೦೦೧) ನೆಲೆ ಬೆಲೆ : ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು. ಪು.೫೧

೯೧. ಮಲ್ಲಿಕಾರ್ಜುನ ಹಿರೇಮಠ (೨೦೦೧) ಹವನ : ಆನಂದ ಕಂದ ಗ್ರಂಥಮಾಲೆ, ಮಲ್ಲಾಡಳ್ಳಿ. ಪು.೧೧

೯೨. ಎಂ.ಉಷಾ (೨೦೦೪) ಮಹಿಳಾ ಚಳುವಳಿಗಳು ಮತ್ತು ಮಹಿಳಾ ವಿಷಯಗಳು : ಕ.ವಿ.ವಿ ಹಂಪಿ. ಪು.೧೪೮

೯೩. ಬಿ.ಟಿ. ಲಲಿತಾನಾಯಕ (೧೯೯೧) ಗತಿ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಪು.೧೦.

೯೪. ಅದೆ ಪು. ೧೧

೯೫. ಜಂಬಣ್ಣ ಅಮರ ಚಿಂತ (೧೯೯೪) ಕುರುಮಯ್ಯ ಮತ್ತು ಅಂಕುಶದೊಡ್ಡಿ : ಮಾರ್ಕ್ಸ ಲೆನಿನ್ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ. ಪು.೫೬

೯೬. ಸಂಧ್ಯಾ ಹೊನಗುಂಟಕರ (೨೦೦೨) ಕಡಲ ಒಡಲು ಬಗೆದಷ್ಟು : ಸಿದ್ಧಲಿಂಗೇಶ್ವರ ಪ್ರಕಾಶನ, ಬೆಂಗಳೂರು. ಪು.೫೬

೯೭. ಚಂದ್ರಕಾಂತ ಕುಸನೂರ (೧೯೮೬) ಗೋಹರ್‌ಜಾನ್ ಮಾಲತಿ ಮತ್ತು ನಾನು : ಐ.ಬಿ.ಎಚ್ ಪ್ರಕಾಶನ, ಬೆಂಗಳೂರು. ಪು.೫೨

೯೮. ಎಂ.ಉಷಾ. (೨೦೦೪) ಮಹಿಳಾ ಚಳುವಳಿಗಳು ಮತ್ತು ಮಹಿಳಾ ವಿಷಯಗಳು ಕ.ವಿ.ವಿ. ಹಂಪಿ. ಪು.೧೫೧

೯೯. ಮಹಿಳಾ ಅಧ್ಯಯನ ಸಂಚಿಕೆ ೨೦೦೧ ಪು.೬೪

೧೦೦. ಅಮರೇಶ ನಗಡೋಣಿ (ದ್ವಿಮು.೧೯೯೭) ಮಣ್ಣು ಸೇರಿತು ಬೀಜ : ನಮ್ಮ ಪ್ರಕಾಶನ, ತಿಪಟೂರು. ಪು.೯

೧೦೧. ಚಂದ್ರಕಾಂತ ಕುಸನೂರ (೧೯೮೬) ಗೋಹರಜಾನ್ ಮಾಲತಿ ಮತ್ತು ನಾನು : ಐ.ಬಿ. ಎಚ್ ಪ್ರಕಾಶನ, ಬೆಂಗಳೂರು. ಪು.೯

೧೦೨. ಜಯತೀರ್ಥ ರಾಜಪುರೋಹಿತ (೧೯೬೯) ರೋಹಿಣಿ : ಪ್ರಕಾಶ ಪ್ರಕಾಶನ, ರಾಯಚೂರು. ಪು.೬೨

೧೦೩ ಶ್ರೀಕಾಂತ ಪಾಟೀಲ್ (೧೯೯೭) ಬೆಂಕಿ ಮರೆಯ ತಂಪು : ಶಶಿ ಪ್ರಕಾಶನ, ಬೆಟಗೇರಿ ಪು.೨೫

೧೦೪. ಶಾಂತರಸ (೧೯೯೮) ಸಣ್ಣ ಗೌಡಸಾನಿ : ನೃಪತುಂಗ ಅಧ್ಯಯನ ಕೇಂದ್ರ, ಸೇಡಂ. ಪು.೧೮

೧೦೫. ಅದೆ ಪು. ೩೫

೧೦೬. ಅದೆ ಪು. ೫೯

೧೦೭. ಅದೆ ಪು. ೬೦

೧೦೮. ರಾಜಶೇಖರ ನೀರಮಾನ್ವಿ (೧೯೯೮) ಹಂಗಿನರಮನೆಯ ಹೊರಗೆ : ಲೋಹಿಯ ಪ್ರಕಾಶನ, ಬಳ್ಳಾರಿ. ಪು.೨

೧೦೯. ಅದೆ ಪು. ೨೦

೧೧೦. ಗೀತಾ ನಾಗಭೂಷಣ (೧೯೯೪) ಧುಮಸ್ಸು : ಮಹಿಳಾ ಸಾಹಿತ್ಯಿಕಾ, ನವನಗರ ಹುಬ್ಬಳ್ಳಿ. ಪು.೧೭೬

೧೧೧. ಅದೆ ಪು. ೨೨೪

೧೧೨. ಅಮರೇಶ ನುಗಡೋಣಿ (೧೯೭೭) ಮಣ್ಣು ಸೇರಿತು ಬೀಜ : ನಮ್ಮ ಪ್ರಕಾಶನ, ತಿಪಟೂರು. ಪು.೩೬

೧೧೩. ಶ್ರೀಕಾಂತ ಪಾಟೀಲ್ (೧೯೯೭) ಬೆಂಕಿ ಮರೆಯ ತಂಪು : ಶಶಿ ಪ್ರಕಾಶನ, ಬಟಗೇರಿ. ಪು.೩೮-೩೯

೧೧೪. ಚಂದ್ರಕಾಂತ ಕುಸನೂರ (೧೯೬೯) ಗೋಹರಜಾನ್ ಮಾಲತಿ ಮತ್ತು ನಾನು : ಐ.ಬಿ.ಎಚ್. ಪ್ರಕಾಶನ, ಬೆಂಗಳೂರು. ಪು.೨೯

೧೧೫. ಅದೆ ಪು.೧೧೦

೧೧೬. ಬಿ.ಟಿ. ಲಲಿತಾನಾಯಕ (೧೯೯೧) ಗತಿ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು. ಪು.೪೫

೧೧೭. ಬಿ.ಟಿ. ಲಲಿತಾ ನಾಯಕ (೧೯೯೫) ನೆಲೆ ಬೆಲೆ : ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು. ಪು.೬೭

೧೧೮. ಬರಗೂರು ರಾಮಚಂದ್ರಪ್ಪ (೧೯೯೮) ಸಾಹಿತ್ಯದಲ್ಲಿ ರಾಜಕಾರಣ : ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಪು.೨೫

೧೧೯. ಶಿವಕುಮಾರ ನಾಗವಾರ (೨೦೦೦) ಹಣದಿ : ಲೋಹಿಯಾ ಪ್ರಕಾಶನ, ಬಳ್ಳಾರಿ ಪು.೩೪

೧೨೦ ಬಿ.ಟಿ. ಲಲಿತಾನಾಯಕ (೧೯೯೫) ನೆಲೆ ಬೆಲೆ : ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು. ಪು.೮

೧೨೧. ಜಂಬಣ್ಣ ಅಮರಚಿಂತ (೧೯೯೪) ಕುರುಮಯ್ಯ ಮತ್ತು ಅಂಕುಶದೊಡ್ಡಿ : ಮಾರ್ಕ್ಸ್ ಲೆನಿನ್ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ. ಪು.೭೮

೧೨೨. ಹೊಸತು ಮಾಸಪತ್ರಿಕೆ (೨೦೦೫) ಪು.೫೧

೧೨೩. ಮಲ್ಲಿಕಾರ್ಜುನ ಹಿರೇಮಠ (೨೦೦೧) ಹವನ : ಆನಂದ ಕಂದ ಗ್ರಂಥಮಾಲೆ ಮಲ್ಲಾಡಳ್ಳಿ, ಚಿತ್ರದುರ್ಗ. ಪು.೫೭

೧೨೪. ಸಂಧ್ಯಾ ಹೊನಗುಂಟಕರ್ (೨೦೦೨) ಕಡಲ ಒಡಲು ಬಗೆದಷ್ಟು : ಸಿದ್ಧಲಿಂಗ ಪ್ರಕಾಶನ, ಗುಲಬರ್ಗಾ. ಪು.೯

೧೨೫. ಅಗ್ರಹಾರ ಕೃಷ್ಣಮೂರ್ತಿ (ಸಂ) (೨೦೦೨) ಸಂಸ್ಕೃತಿ ಕಥನ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಪು.೩೫೫

೧೨೬. ಜಯತೀರ್ಥ ರಾಜಪುರೋಹಿತ (೧೯೮೪) ಸುಳಿಗಾಳಿ : ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು. ಪು.೨೨

೧೨೭. ಶಾಂತರಸ (೧೯೯೮) ಸಣ್ಣಗೌಡಸಾನಿ : ನೃಪತುಂಗ ಅಧ್ಯಯನ ಕೇಂದ್ರ, ಸೇಡಂ. ಪು.೩೩

೧೨೮. ಲಕ್ಷ್ಮೀದೇವಿ ಶಾಸ್ತ್ರಿ (೧೯೯೬) ಹೃದಯಕ್ಕೆ ಹತ್ತಿರಾದವರು ಮತ್ತು ಇತರ ಕಥೆಗಳು : ವಿಶ್ವಪ್ರಕಾಶನ, ರಾಯಚೂರು. ಪು.೧೫೪.

೧೨೯. ಅದೆ ಪು.೫೬

೧೩೦. ಎಚ್. ಪಂಪಯ್ಯಶೆಟ್ಟಿ (ಸಂ) (೧೯೯೫) ಬಿಸಿಲ ಹನಿಗಳು : ಕನ್ನಡ ಸಾಹಿತ್ಯ ಪರಿಷತ್ತು, ರಾಯಚೂರು. ಪು.೧೭೦

೧೩೧. ಶಾಂತರಸ (೧೯೯೭) ಶಾಂತರಸರ ಸಮುದ್ರ ಕಥೆಗಳು : ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. ಪು.೧೦೧-೧೦೨

೧೩೨. ಅದೆ ಪು.೧೧೨.

೧೩೩. ಅದೆ ಪು.೧೩೯

೧೩೪. ಅದೆ ಪು. ೧೪೫

೧೩೫. ಅದೆ ಪು. ೧೬೦

೧೩೬. ಅದೆ ಪು.೧೬೪

೧೩೭. ರಾಜಶೇಖರ ಹತಗುಂದಿ (೧೯೯೯) ಕಾಳ ಬೆಳದಿಂಗಳ ಸಿರಿ : ಲೋಹಿಯಾ ಪ್ರಕಾಶನ, ಬಳ್ಳಾರಿ. ಪು.೮

೧೩೮. ಶಾಂತರಸ (೧೯೯೭) ಶಾಂತರಸರ ಸಮುದ್ರ ಕಥೆಗಳು : ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. ಪು.೬೬

೧೩೯. ಜಯತೀರ್ಥ ರಾಜಪುರೋಹಿತ (೧೯೮೩) ಸುಳಿಗಾಳಿ : ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು. ಪು.೧೧೦

೧೪೦. ಚಂದ್ರಕಾಂತ ಕುಸನೂರು (೧೯೮೬) ಗೋಹರಜಾನ್ ಮಾಲತಿ ಮತ್ತು ನಾನು : ಐ,ಬಿ.ಎಚ್ ಪ್ರಕಾಶನ, ಬೆಂಗಳೂರು. ಪು.೨೪೯

೧೪೧. ಅದೆ ಪು.೨೨೫

೧೪೨. ಅದೆ ಪು.೧೮೫

೧೪೩. ಎಮ್.ಜಿ. ದೇಶಪಾಂಡೆ (೧೯೯೮) ಪಾರಿಜಾತ : ಖಡಕೆ ಪತ್ರಿಕೆ ಪ್ರಕಾಶನ, ಬೀದರ. ಪು.೪

೧೪೪. ಗೀತಾ ನಾಗಭೂಷಣ (೧೯೮೩) ಮಾಪುರ ತಾಯಿಯ ಮಕ್ಕಳು : ಮಯೂರ ಮಾಸ ಪತ್ರಿಕೆ. ಪು.೬೯

೧೪೫. ಅದೆ ಪು.೭೫

೧೪೬. ಗೀತಾ ನಾಗಭೂಷಣ (೨೦೦೧) ಬದುಕು : ಲೋಹಿಯಾ ಪ್ರಕಾಶನ, ಬಳ್ಳಾರಿ ಪು.೫೯

೧೪೭. ಅದೆ ಪು.೭೫

೧೪೮. ಪ್ರಜಾವಾಣಿ ದಿ.೦೪-೦೬-೨೦೦೬

೧೪೯. ಗೀತಾ ನಾಗಭೂಷಣ (೨೦೦೧) ಬದುಕು : ಲೋಹಿಯಾ ಪ್ರಕಾಶನ, ಬಳ್ಳಾರಿ. ಪು.೧೮೮

೧೫೦. ಗೀತಾ ನಾಗಭೂಷಣ (೧೯೯೩) ಅವ್ವ ಮತ್ತು ಇತರ ಕಥೆಗಳು : ಬಸವ ಪ್ರಕಾಶನ, ಗುಲಬರ್ಗಾ. ಪು.೧೮

೧೫೧. ಬಾಲಚಂದ್ರ ಜಯಶೆಟ್ಟಿ (೧೯೯೧) ಕೋಡ್ಗಲ್ಲಿನ ಕೂಗು : ಪ್ರಜ್ಞಾ ಪ್ರಕಾಶನ, ಗುಲಬರ್ಗಾ. ಪು.೧೮

೧೫೨. ಬಾಲಚಂದ್ರ ಜಯಶೆಟ್ಟಿ (೧೯೯೧) ಕೋಡ್ಗಲ್ಲಿನ ಕೂಗು : ಪ್ರಜ್ಞಾ ಪ್ರಕಾಶನ, ಗುಲಬರ್ಗಾ. ಪು.೧೦೬

೧೫೩. ಚಂದ್ರಕಾಂತ ಕುಸನೂರ (೨೦೦೫) ಕಿರೂರ ನಾಮಾ : ಲೋಹಿಯಾ ಪ್ರಕಾಶನ, ಬಳ್ಳಾರಿ. ಪು.೯

೧೫೪. ಸಿ.ಆರ್. ಚಂದ್ರಶೇಖರ (೧೯೯೮) ಮಹಿಳೆರ ಮಾನಸಿಕ ಅಸ್ವಸ್ಥತೆಗಳು : ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೫೫. ಜಯತೀರ್ಥ ರಾಜಪುರೋಹಿತ (೧೯೬೭) ಪಾರವ್ವನ ಪಂಚಾಯಿತಿ : ನೃಪತುಂಗ ಪ್ರಕಾಶನ, ಕಲಬುರ್ಗಿ. ಪು.೧೦೩

೧೫೬. ಅದೆ ಪು.೪೬

೧೫೭. ಚಂದ್ರಕಾಂತ ಕುಸನೂರ (೧೯೪೬) ಗೋಹರ್‌ಜಾನ್ ಮಾಲತಿ ಮತ್ತು ನಾನು : ಐ.ಬಿ.ಎಚ್ ಪ್ರಕಾಶನ, ಬೆಂಗಳೂರು. ಪು.೧೪೬

೧೫೮. ಅದೆ ಪು.೧೪೦

೧೫೯. ಲಲಿತಾ ದೇಮಶೆಟ್ಟಿ (೧೯೯೧) ವೈದೇಹಿ : ಮಮತಾ ಪ್ರಕಾಶನ, ಕೊಪ್ಪಳ ಪು.೨೦-೨೨

೧೬೦. ಅದೆ ಪು.೩೦

೧೬೧. ಗವೀಶ ಹಿರೇಮಠ (೨೦೦೩) ಹಕ್ಕಿಗೂಡು ಸೇಲಿತು : ಯುವಜನ ಸಾಹಿತ್ಯಾಧ್ಯಾಯನ ವೇದಿಕೆ, ಇಲಕಲ್. ಪು.೯೮

೧೬೨. ಅದೆ ಪು.೧೧೭

೧೬೩. ಅದೆ ಪು.೧೨೪

೧೬೪. ಅದೆ ಪು.೧೩೨

೧೬೫. ಗೀತಾ ನಾಗಭೂಷಣ (೨೦೦೧) ಬದುಕು : ಲೋಹಿಯಾ ಪ್ರಕಾಶನ, ಬಳ್ಳಾರಿ. ಪು.೩೭೭

೧೬೬. ಸುಮಿತ್ರಾಬಾಯಿ ಬಿ.ಎನ್ (೧೯೯೫) ಸ್ತ್ರೀವಾದ ಪ್ರವೇಶಿಕೆ : ಕನಾಟಕ ಲೇಖಕಿಯರ ಸಂಘ, ಬೆಂಗಳೂರು. ಪು.೧೨೨

೧೬೭. ಹಲಸಂಗಿ ಗೆಳೆಯರು (೨೦೦೦) ಗರತಿಯ ಹಾಡು : ಸಮಾಜ ಪುಸ್ತಕಾಲಯ, ಧಾರವಾಡ. ಪು.೧೦೮

೧೬೮. ಚನ್ನಣ್ಣ ವಾಲೀಕಾರ (೧೯೮೬) ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು : ಯುನಿವರ್ಸ್‌ಲ್ ಪಬ್ಲಿಕೇಶನ್ಸ್, ರಾಯಚೂರು. ಪು.೫೧

೧೬೯. ಹಲಸಂಗಿ ಗೆಳೆಯರು (೨೦೦೦) ಗರತಿಯ ಹಾಡು : ಸಮಾಜ ಪುಸ್ತಕಾಲಯ, ಧಾರವಾಡ. ಪ.೧೦೮

೧೭೦. ಅದೆ ಪು.೫೬

೧೭೧. ಚನ್ನಣ್ಣ ವಾಲಿಕಾರ (೧೯೮೬) ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು : ಯುನಿವರ್ಸಲ್ ಪಬ್ಲಿಕೇಷನ್, ರಾಯಚೂರು. ಪು.೨೮

೧೭೨. ಬಿ.ಎಮ್ ರೋಹಿಣಿ (೧೯೯೫) ಸ್ತ್ರೀಸಂವೇದನೆ : ಹೇಮಾಂಶ ಪ್ರಕಾಶನ, ಮಂಗಳೂರು. ಪು.

೧೭೩. ಚನ್ನಣ್ಣ ವಾಲಿಕಾರ (೧೯೮೬) ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು : ಯುನಿವರ್ಸಲ್ ಪಬ್ಲಿಕೇಶನ್, ರಾಯಚೂರು. ಪು೬೨.

೧೭೪. ಹಲಸಂಗಿ ಗೆಳೆಯರು (೨೦೦೦) ಗರತಿಯ ಹಾಡು : ಸಮಾಜ ಪುಸ್ತಕಾಲಯ, ಧಾರವಾಡ. ಪು.೧೦೮

೧೭೫. ಹಲಸಂಗಿ ಗೆಳೆಯರು (೨೦೦೦) ಗರತಿಯ ಹಾಡು : ಸಮಾಜ ಪುಸ್ತಕಾಲಯ, ಧಾರವಾಡ ಪು.೧೨೧

೧೭೬. ಚನ್ನಣ್ಣ ವಾಲಿಕಾರ (೧೯೮೯) ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು ಯುನಿವರ್ಸಲ್ ಪಬ್ಲಿಕೇಶನ್, ರಾಯಚೂರು. ಪು.೬೨

೧೭೭. ಶಾಲಿನಿ ರಘುನಾಥ (೨೦೦೨) ಹಸುಬೆ : ಜಾನಪದ ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು. ಪು.೧೧೦

೧೭೮. ಅದೆ ಪು.೧೧೦

೧೭೯. ಹಲಸಂಗಿ ಗೆಳೆಯರು (೨೦೦೦) ಗರತಿಯ ಹಾಡು : ಸಮಾಜ ಪುಸ್ತಕಾಲಯ, ಧಾರವಾಡ. ಪು.೭೫

೧೮೦. ಸಂಧ್ಯಾ ಕೆ. ಆರ್. (ಸಂ) (೨೦೦೩) ಮಹಿಳಾ ಜಾನಪದ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು. ಪು.೫೨

೧೮೧. ಹೆಗಡೆ ಎಲ್.ಆರ್ (೧೯೭೯) ಪು.೧೯

೧೮೨. ಶಾಲಿನಿ ರಘುನಾಥ (೨೦೦೨) ಹಸುಬೆ : ಜಾನಪದ ಅಧ್ಯಯನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು ಪು.೮೨

೧೮೩. ಅದೆ ಪು.೮೨

ಅಧ್ಯಾಯ : ಐದು

ಸಮಾರೋಪ

೧. ಅಧ್ಯಯನದ ಸಮೀಕ್ಷೆ

೨.ಅಧ್ಯಯನದ ಫಲಿತಗಳು

೩. ಅಧ್ಯಯನದ ಸಲಹೆ ಹಾಗೂ ಸಾಧ್ಯತೆಗಳು

ಅಧ್ಯಾಯ : ಐದು

ಸಮಾರೋಪ

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣವೆಂಬ ಈ ಸಂಶೋಧನಾ ಅಧ್ಯಯನವು ಮುಖ್ಯವಾಗಿ ಹೈದರಾಬಾದ ಕರ್ನಾಟಕ ಪ್ರದೇಶದ ಮಹಿಳಾ ಬದುಕನ್ನು ಅಧ್ಯಯನ ಮಾಡುವ ಚೌಕಟ್ಟನ್ನು ಇಟ್ಟುಕೊಂಡದ್ದಾಗಿದೆ. ಮಹಿಳಾ ಬದುಕನ್ನು ಅಧ್ಯಯನ ಮಾಡಲು ನಿಖರವಾದ ಯಾವುದೇ ಆಧಾರಗಳು ಸಿಗದಿರುವುದರಿಂದ ಇಂಥ ವಿಷಯವನ್ನು ಸಂಶೋಧಿಸಲು ಇತ್ತೀಚೆಗೆ ಮಹಿಳೆಯರು ತಮ್ಮದೇ ಆದ ಪರಿಕಲ್ಪನೆ, ವಿಧಾನಗಳನ್ನು ಕಟ್ಟಿಕೊಂಡಿದ್ದಾರೆ. ಅವುಗಳನ್ನಾಧರಿಸಿ ವಿವಿಧ ಜ್ಞಾನಶಿಸ್ತುಗಳಲ್ಲಿ ಶೋಧಿಸುತ್ತ ಹೋದಂತೆ ಮಹಿಳಾ ಬದುಕಿನ ಸಂಗತಿಗಳು ಅನಾವರಣಗೊಳ್ಳಬಹುದಾಗಿದೆ. ನನ್ನದು ಕಥನ ಸಾಹಿತ್ಯದಲ್ಲಿ ಮಹಿಳಾ ಬದುಕನ್ನು ಶೋಧಿಸುವ ಸೀಮಿತ ಪ್ರಯತ್ನ. ಅದರೊಂದಿಗೇ ಚರಿತ್ರೆ, ಜಾನಪದ ಮತ್ತು ಪರಂಪರೆಯಲ್ಲಿಯ ಮಹಿಳಾ ಬದುಕು ಏನಾಗಿದೆ? ಸಮಕಾಲೀನ ಮಹಿಳಾ ಬದುಕು ಯಾವ ಬಗೆಯದು ಎಂಬುದನ್ನು ಕಂಡುಕೊಳ್ಳುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಅಧ್ಯಯನವನ್ನು ಒಟ್ಟಾಗಿ ಒಂದೆಡೆ ಕೂಡಿ ಹಾಕಿದರೆ ಗ್ರಹಿಕೆಗೆ ತೊಡಕುಂಟಾಗುವುದು ಸಹಜ. ಹಾಗಾಗಿ ಅಧ್ಯಯನದ ಅನುಕೂಲಕ್ಕೆ ಸಂಪ್ರಬಂಧದ ರಚನೆಯನ್ನು ಐದು ಅಧ್ಯಾಯಗಳಲ್ಲಿ ವಿಭಾಗಿಸಿಕೊಳ್ಳಲಾಗಿದೆ.

೧. ಅಧ್ಯಯನದ ಸಮೀಕ್ಷೆ :

ಸಾಮಾಜಿಕ ವ್ಯವಸ್ಥೆ ಭಾರತೀಯವಾಗಿರಬಹುದು, ಜಾಗತಿಕವಾಗಿರಬಹುದು ಅದರ ಸ್ವರೂಪ ಪುರುಷ ಪ್ರಧಾನವೇ ಆಗಿದೆ. ಸಮುದಾಯಗಳು ನೆಲೆನಿಂತ ಸಂದರ್ಭದಲ್ಲಿ ಹುಟ್ಟಿಕೊಂಡ ಕುಟುಂಬ ಧರ್ಮವೇ ಮೊದಲಾದ ವಿವಿಧ ಸಂಸ್ಥೆಗಳ ಮೂಲಕ ಇದು ಗಟ್ಟಿಗೊಂಡಿದೆ ಎಂಬುದನ್ನು ಈಗಾಗಲೇ ಅಧ್ಯಯನಗಳು ಗುರುತಿಸಿವೆ. ಹಾಗೆಯೇ ಕರ್ನಾಟಕದ ಸಂದರ್ಭದಲ್ಲಿ ಅದರಲ್ಲೂ ಹಿಂದುಳಿದುದೆಂದು ಗುರುತಿಸಲ್ಪಟ್ಟಿರುವ ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆ ಹೆಚ್ಚು ತಾರತಮ್ಯದಿಂದ ಕೂಡಿದೆ. ಹೈದರಾಬಾದ ಕರ್ನಾಟಕವೆಂಬುದು ನಿಜಾಂ ಆಡಳಿತದಿಂದ ಇಂದಿನ ಪ್ರಜಾಪ್ರಭುತ್ವವೆನಿಸಿಕೊಂಡ ಆಡಳಿತ ವ್ಯವಸ್ಥೆಯಲ್ಲೂ ನಿರ್ಲಕ್ಷ್ಯಕ್ಕೊಳಗಾಗುತ್ತಲೇ ಇದೆ. ಹಾಗಾಗಿ ಎಲ್ಲ ರಂಗಗಳಲ್ಲೂ ಹಲವು ಬಗೆಯ ಅಸಮಾನತೆ ತಲೆದೋರಿದೆ. ಶೈಕ್ಷಣಿಕವಾಗಿ ಬುದ್ಧಿಜೀವಿಗಳ ಕೊರತೆ, ಭಾಷಿಕವಾಗಿ ಹೇಳಿಕೊಳ್ಳುವಂಥ ಯಾವ ಶಿಷ್ಟ ಪತ್ರಿಕೆಗಳು, ನಿಯತಕಾಲಿಕೆಗಳು ಪ್ರಕಟವಾಗದಿರುವುದೂ ಇದರ ಹಿಂದುಳಿಯುವಿಕೆಗೆ ಕಾರಣವಾಗಿದೆ. ಇತ್ತೀಚೆಗೆ ಪ್ರಗತಿಯ ಲಕ್ಷಣಗಳು ಕಂಡು ಬರುತ್ತಿದ್ದರೂ ಮಹಿಳೆಯ ಪ್ರವೇಶದ ಸುಳಿವುಗಳು ಅಪರೂಪವೇ.

ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣಕ್ಕೆ ಪೂರಕವಾಗಿ ಈ ಪ್ರದೇಶಕ್ಕೆ ಸಂಬಂಧಿಸಿದ ಚಾರಿತ್ರಿಕ, ಸಾಮಾಜಿಕ ಸ್ಥಿತ್ಯಂತರಗಳನ್ನು ಅಧ್ಯಯನ ಮಾಡಲಾಗಿದೆ. ಈ ಸ್ಥಿತ್ಯಂತರಗಳ ಪರಿಣಾಮವನ್ನು ಹೈದರಾಬಾದ ಕರ್ನಾಟಕದ ಕಥನಕಾರರು ತಮ್ಮ ಸೃಜನಶೀಲ ಕೃತಿಗಳಲ್ಲಿ ಅಭಿವ್ಯಕ್ತಿಸಿದ ಬಗೆಯನ್ನು ವಿಶ್ಲೇಷಿಸಲಾಗಿದೆ. ಇಲ್ಲಿ 'ಮಹಿಳಾ ಬದುಕು' ಎಂಬುದನ್ನು ಮಹಿಳೆಯ ಹುಟ್ಟಿನಿಂದ ಸಾವಿನವರೆಗಿನ ಪ್ರತಿಕ್ಷಣದ ಬದುಕು ಎಂದೇ ಪರಿಭಾವಿಸಲಾಗಿದೆ.

ಮೊದಲ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ ಹಾಗೂ ಈವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ಎಂಬ ಉಪಶೀರ್ಷಿಕೆಗಳನ್ನು ವಿವರಿಸಿಕೊಳ್ಳಲಾಗಿದೆ.

ಹೈದರಾಬಾದ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯು ಸಂಪೂರ್ಣವಾಗಿ ಪುರುಷ ಪ್ರಧಾನವಾಗಿದ್ದು, ಇಂದಿಗೂ ಸ್ವಲ್ಪವೂ ಅಲುಗದ ಸ್ಥಿತಿಯಲ್ಲಿದೆ. ಇದರೊಂದಿಗೆ ಅನಕ್ಷರತೆ, ಮೂಢನಂಬಿಕೆ ಬಡತನ ಹಾಗೂ ಶ್ರೇಣೀಕರಣಗಳು ಸೇರಿಕೊಂಡು ಇನ್ನೂ ಭಯಂಕರವಾಗಿ ಗಟ್ಟಿಗೊಳ್ಳುತ್ತಿದೆ. ನಗರ ಪ್ರದೇಶದ ಚಹರೆಗಳು ಸ್ವಲ್ಪ ಮಟ್ಟಿಗೆ ಬದಲಾಗುತ್ತಿರುವುದು ಕಂಡು ಬರುತ್ತಿದೆ.

ಹನ್ನೆರಡನೇ ಶತಮಾನದ ವಚನ ಚಳುವಳಿಯ ಸಂದರ್ಭದಲ್ಲಿ ಸಮಾನ ನೆಲೆಯ ಸ್ಥಾನಮಾನವನ್ನು ಪಡೆದಿದ್ದ ಈ ಪ್ರದೇಶದ ಮಹಿಳೆ ನಂತರದ ರಾಜಕೀಯ ಸ್ಥಿತ್ಯಂತರಗಳ ಪ್ರಭಾವದಲ್ಲಿ ಪುನಃ ಅಧೀನ ಸ್ಥಿತಿಗೆ ತಳ್ಳಲ್ಪಟ್ಟು ಅವಕಾಶ ವಂಚಿತಳಾದದ್ದು ಮಾತ್ರವಲ್ಲ, ಹೆಣ್ಣು ಶಿಶು ಮಾರಾಟ, ಭಾನಾಮತಿ ಸಿಡಿ ಆಡುವುದು, ಬೆತ್ತಲೆ ಸೇವೆ ಹಾಗೂ ಜೋಗತಿಯಂಥ ಅನಿಷ್ಠ ಸಂಪ್ರದಾಯ ಆಚರಣೆಗಳಿಗೆ ಸಿಲುಕಿ ನರಳುತ್ತಿದ್ದಾಳೆ. ಮೇಲ್ವರ್ಗದ ಮಹಿಳೆ ರಕ್ಷಣೆಯ ನೆಪದಲ್ಲಿ ಗೃಹಬಂಧಿಯಾಗಿದ್ದರೆ, ಕೆಳವರ್ಗದ ಮಹಿಳೆ ರಕ್ಷಣೆಯೇ ಇಲ್ಲದವಳಾಗಿದ್ದಾಳೆ.

ಧರ್ಮಕ್ಕಿರುವ ಶ್ರೀಮಂತರ ಆರ್ಥಿಕ ಬೆಂಬಲದ ಪ್ರತಿಫಲವಾಗಿ ಶ್ರೀಮಂತರಿಗೆ ಒದಗಿದ ಧರ್ಮದ ಕುಮ್ಮಕ್ಕು ಅವರ ಲೋಲುಪತೆಯನ್ನು ಧರ್ಮಬದ್ಧವಾಗಿಸಿ, ಮಹಿಳಾ ಶೋಷಣೆಗೆ ಮಾರ್ಗವಾಗಿದೆ. ತಂತ್ರ–ಮಂತ್ರಗಳ ಬಲದಲ್ಲಿ 'ಭಾನಾಮತಿ' ಎಂಬ ಕುಟಿಲ ವಿದ್ಯೆಯನ್ನು ಪ್ರಯೋಗಿಸುವ ಮೂಲಕ ಮಹಿಳೆಯನ್ನು ಶೋಷಿಸುವಲ್ಲಿ ಬೀದರ್ ಜಿಲ್ಲೆ ಹೆಸರಾಗಿದೆ.

'ಭಾನಾಮತಿ'ಯನ್ನು ಸಾಧಿಸಲು ಬಾಲಕಿಯರನ್ನು ಬಲಿಕೊಡಲಾಗುತ್ತಿದೆ. 'ಜೋಗತಿ' ಪದ್ಧತಿ ದೇವರ ಹೆಸರಲ್ಲಿ ನಡೆಯುತ್ತಿದ್ದು ಹೆಣ್ಣುಗಳನ್ನು ವೇಶ್ಯಾವಾಟಿಕೆಗೆ ದೂಡುವ ಸುಲಭ ಮಾರ್ಗವಾಗಿದೆ. ಕಿತ್ತು ತಿನ್ನುವ ಬಡತನ, ಅಜ್ಞಾನ, ಅನಕ್ಷರತೆ, ಮೂಢನಂಬಿಕೆಗಳಲ್ಲಿ ನರಳುತ್ತಿರುವ ಮಹಿಳೆಯರ ಬದುಕಿನ ವಾಸ್ತವವನ್ನು ಕಥನ ಸಾಹಿತ್ಯ ಪರಿಭಾವಿಸಿದ ಪರಿಯನ್ನು ಅಧ್ಯಯನ ಮಾಡಲಾಗಿದೆ.

ಯಾವುದೇ ಸಂಶೋಧನಾಧ್ಯಯನಕ್ಕೆ ನಿರ್ದಿಷ್ಟ ಉದ್ದೇಶವಿರುವಂತೆ ವ್ಯಾಪ್ತಿಯೂ ಇರುತ್ತದೆ. ಹಾಗಾಗಿ ನಾನು 'ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಅನಾವರಣಕ್ಕೆ ಹೈದರಾಬಾದ ಕರ್ನಾಟಕ ಪ್ರದೇಶದ ಸ್ವಾತಂತ್ರ್ಯೋತ್ತರ ಆರಂಭ ಕಾಲದಿಂದ ಇದುವರೆಗೆ ಅಂದರೆ ಹಿರಿಯರಾದ ಶಾಂತರಸರಿಂದ ಇತ್ತೀಚೆಗೆ ಬರೆಯುತ್ತಿರುವ ಶಿವಕುಮಾರ ನಾಗವಾರರವರೆಗೆ ಹಾಗೂ ಖ್ಯಾತ ಲೇಖಕಿ ಗೀತಾ ನಾಗಭೂಷಣರಿಂದ

ಹೊಸ ತಲೆಮಾರಿನ ಕಥೆಗಾರ್ತಿ ಸಂಧ್ಯಾ ಹೊನಗುಂಟಿಕರವರೆಗೆ ಪುರುಷ ಮತ್ತು ಮಹಿಳಾ ಕಥನಕಾರರ ಮಹಿಳಾ ಕೇಂದ್ರಿತ ಕೃತಿಗಳನ್ನು ಪ್ರಾತಿನಿಧಿಕವಾಗಿ ಅಧ್ಯಯನಕ್ಕೆ ಆಯ್ದುಕೊಂಡಿದ್ದೇನೆ. ಕಥನ ಸಾಹಿತ್ಯವು ಲೌಕಿಕ ಬದುಕನ್ನು ಅರಿಯಲು ಸಹಕಾರಿಯಾದುದರಿಂದ ಕಥನ ಸಾಹಿತ್ಯವನ್ನು ಆಕರವಾಗಿ ಹಾಗೂ ಹೈದರಾಬಾದ ಕರ್ನಾಟಕದ ಕಥನ ಸಾಹಿತ್ಯವನ್ನು ವ್ಯಾಪ್ತಿಯಾಗಿ ಇಟ್ಟುಕೊಳ್ಳಲಾಗಿದೆ. ಈ ಅಧ್ಯಯನವನ್ನು ವಿಶ್ಲೇಷಣಾತ್ಮಕ ವಿಧಾನದಲ್ಲಿ ವಿವರಿಸುತ್ತ, ಆಕರಗಳು ಹೊರ ಹಾಕುವ ಮಹಿಳಾ ಬದುಕನ್ನು ಪ್ರತಿನಿಧೀಕರಣ ಪ್ರತಿಕಲ್ಪನೆಯಲ್ಲಿ ಗ್ರಹಿಸಲಾಗಿದೆ.

ಆಯ್ದುಕೊಂಡ ವಿಷಯವನ್ನು ಅಧ್ಯಯನ ಶಿಸ್ತಿಗೆ ಅಳವಡಿಸಲು ವ್ಯಕ್ತಿನಿಷ್ಠ ದೃಷ್ಟಿಕೋನ ಹಾಗೂ ಸ್ತ್ರೀವಾದಿ ಸೈದ್ಧಾಂತಿಕ ಚೌಕಟ್ಟನ್ನು ಅಳವಡಿಸಿಕೊಳ್ಳಲಾಗಿದೆ. ಸ್ತ್ರೀವಾದಿ ಸಂಶೋಧನೆಯಲ್ಲಿ ವಸ್ತು ನಿಷ್ಠತೆಗಿಂತ ವ್ಯಕ್ತಿನಿಷ್ಠತೆಗೆ ಆದ್ಯತೆ ನೀಡಲಾಗುವುದು. ಹೈದರಾಬಾದ ಕರ್ನಾಟಕದ ಪ್ರದೇಶ-ಪರಿಸರವನ್ನರಿಯಲು ಸಂಶೋಧಕರ ನೇರ ಅನುಭವವೂ ಪೂರಕವಾಗಬಹುದಾದುದರಿಂದ ಸಹಭಾಗಿತ್ವ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ಸಮಾಜದಲ್ಲಿ ಲಿಂಗಾಧಾರಿತ ಅಸಮಾನತೆಯನ್ನು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಎದುರಿಸುವ ತಾರತಮ್ಯದ ಧೋರಣೆ, ಶೋಷಣೆಯನ್ನು ಗುರುತಿಸುತ್ತಾ, ಈ ಪ್ರವೃತ್ತಿಗಳನ್ನು ನಿವಾರಿಸಲು ನಡೆಯುವ ಪ್ರಜ್ಞಾಪೂರ್ವಕ ಹಾಗೂ ಪ್ರಾಮಾಣಿಕ ಪ್ರಯತ್ನವೇ ಸ್ತ್ರೀವಾದ. ಹಾಗಾಗಿ ಅಧ್ಯಯನಕ್ಕೆ ಬಳಸಿಕೊಂಡ ಎರಡನೆಯ ವಿಧಾನ ಸ್ತ್ರೀವಾದಿ ವೈಧಾನಿಕತೆ.

ಈಗಾಗಲೇ ನಡೆದ ಅಧ್ಯಯನಗಳನ್ನು ಕುರಿತು ಚಾರಿತ್ರಿಕ ಸಮೀಕ್ಷೆ ಮಾಡಲಾಗಿದೆ. ಬಿಡಿ ಲೇಖನ, ಮುನ್ನುಡಿ ಹಾಗೂ ಮಹಾ ಪ್ರಬಂಧಗಳಲ್ಲಿ ವಿಶ್ಲೇಷಿಸಲ್ಪಟ್ಟ ಮಹಿಳಾ ಬದುಕನ್ನು ಸಮೀಕ್ಷಿಸಲಾಗಿದೆ. ಈಗಾಗಲೇ ನಡೆದ ಅಧ್ಯಯನಗಳು ವ್ಯಕ್ತಿ ಕೇಂದ್ರಿತ ಹಾಗೂ ಕೃತಿ ಕೇಂದ್ರಿತ ನೆಲೆಯವುಗಳಾಗಿವೆ ಎಂಬುದನ್ನು ವಿಶ್ಲೇಷಿಸುತ್ತ ಪ್ರಸ್ತುತ ಅಧ್ಯಯನ ಸಾಗಬೇಕಾದ ನೆಲೆಗಳನ್ನು ಕುರಿತು ಮುಂದಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಎರಡು ಹೈದರಾಬಾದ ಕರ್ನಾಟಕ ಬದುಕಿನ ಚಾರಿತ್ರಿಕ 'ಅವಲೋಕನ'ವನ್ನು ಕುರಿತದ್ದು, ಹೈದರಾಬಾದ್ ಕರ್ನಾಟಕ ಪ್ರದೇಶದ ಇತಿಹಾಸವು ಹಲವು ಸ್ಥಿತ್ಯಂತರಗಳಿಂದ ಕೂಡಿದೆ. ಕರ್ನಾಟಕದ ಒಂದು ಭಾಗವಾದ ಈ ಪ್ರದೇಶ ಹೈದರಾಬಾದ ನವಾಬನ ಆಡಳಿತಕ್ಕೆ ಒಳಪಟ್ಟು 'ಹೈದರಾಬಾದ ಕರ್ನಾಟಕ' ಎಂದು ಗುರುತಿಸಲ್ಪಟ್ಟಿದೆ. ಈ ಅಧ್ಯಾಯದಲ್ಲಿ ಈ ಪ್ರದೇಶದ ಚಾರಿತ್ರಿಕ ಭೌಗೋಳಿಕ ವಿವರಗಳನ್ನು, ಸಾಮಾಜಿಕ ಶೈಕ್ಷಣಿಕ ಹಾಗೂ ಭಾಷಿಕ ಸ್ಥಿತಿಗತಿಗಳನ್ನು ಪರಿಶೀಲಿಸಲಾಗಿದೆ. ಈ ಯಾವ ಸಂಸ್ಥೆಗಳಲ್ಲೂ ಮಹಿಳೆಯ ಪ್ರವೇಶವಿಲ್ಲದೆ ರೂಪಿತವಾದ ನೀತಿ ನಿಯಮಗಳು ಸಹಜವಾಗಿಯೇ ಪುರುಷ ಪರ ಹಾಗೂ ಮಹಿಳೆಯ ವಿರುದ್ಧವಾಗಿರುವುದನ್ನು ಗುರುತಿಸಲಾಗಿದೆ. ಈ ವಿವರಗಳು ಅಧ್ಯಯನದಲ್ಲಿ ಚರ್ಚಿಸುವ ವಿಷಯದ ಅಧ್ಯಯನಸುವಿಕೆಗೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತವೆ.

ಅಧ್ಯಾಯ ಮೂರರಲ್ಲಿ ಹೈದರಾಬಾದ ಕರ್ನಾಟಕದ ಮಹಿಳಾ ಬದುಕಿನ ಸಾಮಾಜಿಕ ವಾಸ್ತವವನ್ನು ಅಧ್ಯಯನ ಮಾಡಲಾಗಿದೆ. ಮಹಿಳಾ ಬದುಕು ಎಂಬುದು ಒಂದು ಅಖಂಡವಲ್ಲ. ಮಹಿಳೆಯರಲ್ಲೇ ಕೆಳವರ್ಗ,

ಮೇಲ್‌ವರ್ಗ, ಅಲ್ಪಸಂಖ್ಯಾತ, ಉದ್ಯೋಗಸ್ಥೆ, ಕಲಾವಿದೆ, ವೇಶ್ಯೆ, ವಿಧವೆ ಎಂದೆಲ್ಲ ಭಿನ್ನ ಬದುಕಿನ ರೀತಿಗಳಿವೆ. ಹಾಗಾಗಿ ಒಟ್ಟು ಮಹಿಳಾ ಬದುಕನ್ನು ಅರಿಯಲು ಬಹುತ್ವ ಪರಿಕಲ್ಪನೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ವಿವಾಹ ಕೇಂದ್ರಿತ ಸಮಸ್ಯೆಗಳಾಗಿ ಹೆಣ್ಣು ಭ್ರೂಣ ಹತ್ಯೆ, ಶಿಶು ಮಾರಾಟ, ಬಾಲ್ಯ ವಿವಾಹ ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಮೊದಲಾದವುಗಳು ಮಹಿಳಾ ಬದುಕನ್ನು ದಾರುಣವಾಗಿಸಿವೆ. ವೇಶ್ಯ ಹಾಗೂ ಕಲಾವಿದೆಗೆ ವಾಸ್ತವವಾಗಿ ಗೌರವ ಭಾವವಿಲ್ಲದಿರುವುದು ಕಂಡುಬರುತ್ತದೆ. ಈ ಬದುಕಿಗೆ ಒಳಪಟ್ಟವರು ಸಾಮಾನ್ಯವಾಗಿ ಕೆಳವರ್ಗದವರೇ ಆಗಿದ್ದಾರೆ. ಮಹಿಳೆ ದ್ವಿತೀಯ ದರ್ಜೆಯ ಸ್ಥಾನಮಾನವನ್ನು ಹೊಂದುವಲ್ಲಿ, ಚರಿತ್ರೆಯ ಬೆಳವಣಿಗೆಯಲ್ಲಿ ಕಾರಣವಾದ ಅಂಶಗಳಾವುವು ಎಂಬುದನ್ನು ಅರಿಯಲು ಪರಂಪರೆ ಸಂಪ್ರದಾಯ ಹಾಗೂ ನಂಬಿಕೆಗಳ ನೆಲೆಗಳನ್ನು ಶೋಧಿಸಲಾಗಿದೆ. ಮಹಿಳೆಯ ಸುತ್ತ ಹೆಣೆಯಲಾದ ಇಂಥ ವಿಚಾರಗಳು ಪುರುಷ ಪ್ರಧಾನ ಚಿಂತನೆಗಳ ಪರಿಣಾಮಗಳಲ್ಲದೆ ಬೇರಿಲ್ಲವೆಂಬುದನ್ನು ಅಧ್ಯಯನಗಳು ಸ್ಪಷ್ಟಪಡಿಸುತ್ತವೆ.

ನಗರ ಹಾಗೂ ಗ್ರಾಮೀಣ ಮಹಿಳೆಯರ ಸ್ಥಿತಿಗತಿಯನ್ನು ಉದ್ಯೋಗ ಆರ್ಥಿಕತೆಗಳ ಹಿನ್ನಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಉದ್ಯೋಗ ಕ್ಷೇತ್ರವೂ ಅಸಮಾನವಾಗಿ ರೂಪಿತವಾಗಿದ್ದು, ಪುರುಷ ದುಡಿಮೆ ಪ್ರಧಾನವಾಗಿ, ಮಹಿಳಾ ದುಡಿಮೆ ಅನುಬಂಧವಾಗಿ ಪರಿಗಣನೆಗೊಂಡಿರುವುದನ್ನು ಗುರುತಿಸಲಾಗಿದೆ.

ಹೈದರಾಬಾದ ಕರ್ನಾಟಕದಲ್ಲಿ ನಡೆದ ರಜಾಕಾರ ದಾಳಿಗಳನ್ನು ಎದುರಿಸಿ ಹೋರಾಡಿ ಬಲಿಯಾದ, ಸಾಹಸ ಮೆರೆದ, ತಮ್ಮದೇ ಆದ ರೀತಿಯಲ್ಲಿ ಹೋರಾಟಕ್ಕೆ ಬೆಂಬಲ ನೀಡಿದ, ರೊಟ್ಟಿ ಸಂದೇಶದ ಗೂಢಾಚಾರರಾದ ಮಹಿಳೆಯರ ಕೊಡುಗೆಯನ್ನು ಸಂಗ್ರಹಿಸಿ ದಾಖಲಿಸಲಾಗಿದೆ.

ಕರ್ನಾಟಕದ ಇತರ ಪ್ರದೇಶಗಳಿಗಿಂತ ಹೈದರಾಬಾದ ಕರ್ನಾಟಕದ ಮಹಿಳಾ ಬದುಕು ಹಿಂದುಳಿದಿರಲು ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಅಂಶಗಳು ಕಾರಣವಾಗಿರುವುದ್ನು ಕಂಡುಕೊಳ್ಳಲಾಗಿದೆ. ಈ ಎಲ್ಲದರಿಂದ ಪ್ರಭಾವಿತವಾದ ವರ್ತಮಾನದ ಮಹಿಳಾ ಬದುಕು ಏನಾಗಿದೆ ಎಂಬುದನ್ನು ವಿವರಿಸಿಕೊಳ್ಳಲಾಗಿದೆ. ವರ್ತಮಾನದ ಮಹಿಳಾ ಬದುಕು ಭೂತಕ್ಕಿಂತ ತೀರ ಭಿನ್ನವಲ್ಲವೆಂಬುದೇ ವಾಸ್ತವ ಎಂಬುದನ್ನು ಅಧ್ಯಯನ ಸ್ಪಷ್ಟಪಡಿಸುತ್ತದೆ. ಸಮಕಾಲೀನ ಮಹಿಳಾ ಬದುಕಿನ ಸುಧಾರಣೆಗೆ ಇನ್ನೂ ಹೆಚ್ಚಿನ ಪ್ರಯತ್ನಗಳಾಗಬೇಕಾದ ಅವಶ್ಯಕತೆ ಇರುವುದನ್ನು ಅಧ್ಯಯನ ಮನಗಾಣಿಸುತ್ತದೆ.

ಅಧ್ಯಯನ ನಾಲ್ಕು 'ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣ'ದ್ದು. ಈ ಹಿಂದಿನ ಎರಡು ಅಧ್ಯಾಯಗಳಲ್ಲಿ ಚರ್ಚಿಸಲಾದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಪಾರಂಪರಿಕ ಸಂಪ್ರದಾಯ ನಂಬಿಕೆಗಳು ಸಾಹಿತ್ಯದಲ್ಲಿ ಪ್ರತಿನಿಧೀಕರಣಗೊಂಡ ಮಹಿಳಾ ಬದುಕನ್ನು ಹೇಗೆ ಪ್ರಭಾವಿಸಿವೆ. ಹಾಗೆ ಕಥನಗಳು ಹೊರ ಹಾಕಿದ ಮಹಿಳಾ ಬದುಕಿನ ಪ್ರತಿನಿಧೀಕರಣ ಯಾವ ಬಗೆಯದು ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ಮಹಿಳಾ ಕೇಂದ್ರಿತ ವಸ್ತುವಿನಲ್ಲಿ ಮಹಿಳಾ ಬದುಕಿಗೆ ಸಂಬಂಧಿಸಿದ ವಿವರಗಳು ಇರುತ್ತವೆ. ಮಹಿಳೆ ಅನುಭವಿಸುವ ವಿವಿಧ ಸಮಸ್ಯೆಗಳು, ಅವಳ ನೋವು ನಿರಾಸೆಗಳು, ಬದುಕಲು ಅವಳು ನಡೆಸುವ ಪ್ರಯತ್ನಗಳು ಮುಂತಾದವು ಕಾಣಿಸಿಕೊಂಡಿವೆ.

ವಿವಾಹ ಸಮಸ್ಯೆ, ವರ್ಗ ಸಮಸ್ಯೆ, ಲಿಂಗ ಅಸಮಾನತೆ, ಪುರುಷರಿಂದ ಸಮಾಜದಿಂದ ಇತರ ವಲಯಗಳಿಂದ ಹೆಣ್ಣು ಅನುಭವಿಸುವ ಶೋಷಣೆಗಳ ವಿವರಗಳಿಗೆ ಆದ್ಯತೆ ನೀಡಲಾಗಿದೆ. ಮಹಿಳಾ ಕೇಂದ್ರಿತ ವಸ್ತುವನ್ನುಳ್ಳ ಕಥನಗಳು ಸುಧಾರಣಾ ದೃಷ್ಟಿಕೋನವನ್ನು ಹೊಂದಿದ್ದು ಮಹಿಳಾ ಪ್ರಶ್ನೆಗಳಿಂದ ಪ್ರಭಾವಿತರಾದ ಸಮಕಾಲೀನ ಕಥನಕಾರರು ಮಹಿಳಾ ಸಮಸ್ಯೆಗಳಿಗೆ ಕಥನಗಳಲ್ಲಿ ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಕಥನ ಸಾಹಿತ್ಯದ ಧೀರ್ಘ ಅವಲೋಕನ ಮತ್ತು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಿದ ವಿವರಗಳನ್ನು ಅನುಲಕ್ಷಿಸಿ ಕಥನ ಸಾಹಿತ್ಯದ ಅರ್ಥೈಸುವಿಕೆಯನ್ನು ಈ ಕೆಳಗಿನಂತೆ ಸ್ವೀಕರಿಸಲಾಗಿದೆ.

ಕೃತಿಕಾರರು ಮಹಿಳಾ ಬದುಕನ್ನು ಎಷ್ಟೇ ಕಾಲ್ಪನಿಕವಾಗಿ ಗ್ರಹಿಸಿ ಚಿತ್ರಿಸಲು ಯತ್ನಿಸಿದಾಗಲು ವಾಸ್ತವ ಪ್ರಜ್ಞೆಯ ಬರಹಗಳಲ್ಲಿ ವಾಸ್ತವ ಬದುಕು ಕಾಣಿಸಿಕೊಳ್ಳುತ್ತದೆ. ಆರೋಪಿತ ಗುಣಲಕ್ಷಣಗಳನ್ನು ಒಂದು ಹಂತದವರೆಗೆ ಬಳಸಿಕೊಂಡಾಗಲೂ, ನಿಜ ಬದುಕನ್ನು ಮರೆಮಾಡಬಹುದೇ ಹೊರತು ಪೂರ್ಣವಾಗಿ ಅಳಿಸಿ ಹಾಕುವುದು ಸಾಧ್ಯವಾಗುವುದಿಲ್ಲ.

ವಾಸ್ತವತಾವಾದ ಹಾಗೂ ಮಾನವತಾವಾದದ ಪ್ರೇರಣೆ ಪಡೆದ ಕಥನ ಸಾಹಿತ್ಯವು ಮಹಿಳಾ ಬದುಕನ್ನು ವಾಸ್ತವ ನೆಲೆಯಲ್ಲಿಯೇ ಗ್ರಹಿಸಿರುವುದನ್ನು ತಿಳಿಯಲಾಗಿದೆ.

ವ್ಯಕ್ತಿ ನಿಷ್ಠವಾಗಿರುವ ಈ ಪ್ರಕಾರವು ಮಹಿಳಾ ಬದುಕು ಸಂಪ್ರದಾಯ ಪರಂಪರೆ ಮತ್ತು ಸಾಮಾಜಿಕ ವ್ಯವಸ್ಥೆ ಮೊದಲಾದವುಗಳ ನಿಯಂತ್ರಣದ ಅಧೀನ ಸ್ಥಿತಿಯಿಂದ ವಿಮೋಚಿತ ಸ್ಥಿತಿಯನ್ನು ಪಡೆಯುವ, ಸ್ವಾಯತ್ತತೆಗೆ ತುಡಿಯುವುದನ್ನು ಕಥನ ಸಾಹಿತ್ಯ ಸಾಂಕೇತಿಕವಾಗಿ ಅಭಿವ್ಯಕ್ತಿಸುತ್ತದೆ.

ಸಾಮಾಜಿಕ ಕಾಳಜಿಯ ಕಥನ ಸಾಹಿತ್ಯದ ಮಹಿಳಾ ಬದುಕು ಒಟ್ಟು ಸಮಾಜದ ಹಿತದೃಷ್ಟಿಯನ್ನು ಅನುಲಕ್ಷಿಸಿ ಮತ್ತು ಪೂರ್ವಸ್ಥಿತಿಯ ವಿರುದ್ಧ ಹೋರಾಡುವ ದೃಷ್ಟಿಕೋನದ ಮೂಲಕ ವ್ಯಕ್ತವಾಗಿದೆ.

ಕಥನಗಳಲ್ಲಿಯ ಮಹಿಳಾ ಬದುಕು ಸಮಾಜದ ಗ್ರಹಿಕೆಯಲ್ಲಿರುವ ಮಹಿಳಾ ಬದುಕೆ ಆಗಿದೆ. ಗೃಹಿಣಿ, ಪತ್ನಿ, ತಾಯಿ, ವೇಶ್ಯೆ ಹಾಗೂ ವಿಧವೆಯ ಬದುಕು ಸಾಮಾಜಿಕ ನಿರೀಕ್ಷೆಯ ಗುಣಲಕ್ಷಣದ್ದೇ ಆಗಿದೆ.

ಸಮಾಜದ ಮಹಿಳೆಯ ಕುರಿತಾದ ಚಿಂತನೆ ಬದಲಾಗಬೇಕು ಸಮಾಜದಲ್ಲಿಯ ಸ್ತ್ರೀ ಜೀವ ವಿರೋಧಿ ಮೌಲ್ಯಗಳು, ಆಚರಣೆಗಳು ಸಂಪ್ರದಾಯಗಳು ಬದಲಾಗಬೇಕೆಂಬುದು ಕೆಲ ಕಥನಗಳ ಆಶಯವಾಗಿದೆ.

ಈ ಆಶಯವು ಸಮಾಜ ಸುಧಾರಣೆ, ಸಾಂಸ್ಕೃತಿಕ ಪುನರುಜ್ಜೀವನ ಹಾಗೂ ಪ್ರಗತಿಶೀಲತೆ ಮುಂತಾದ ಬಾಹ್ಯ ಅಂಶಗಳಿಂದ ಪ್ರೇರಿತವಾಗಿದೆ. ಇದು ಕೇಶ ಮುಂಡನ, ವೇಶ್ಯಾವೃತ್ತಿ, ಹೆಣ್ಣು ಮಾರಾಟಗಳ ವಿರುದ್ಧ ವಾದಿಸುವುದಾದರೆ, ವಿಧವಾ ವಿವಾಹ ಹಾಗೂ ಪುನರ್ ವಿವಾಹಗಳನ್ನು ಬೆಂಬಲಿಸುತ್ತದೆ. ಮಹಿಳೆಯ ಆಸ್ತಿ ಹಕ್ಕು, ಶ್ರಮ, ದುಡಿಮೆಗಳನ್ನು ಪರಿಗಣಿಸುವಂತೆ ಒತ್ತಾಯಿಸುತ್ತದೆ. ಈ ಅಂಶಗಳು ಕಥನಗಳಲ್ಲಿ ವ್ಯವಸ್ಥೆಯ ವಿರುದ್ಧ ಮಹಿಳೆ ಸೂಚಿಸುವ ಪ್ರತಿಭಟನೆ, ಪ್ರತಿರೋಧಗಳಲ್ಲಿ ವ್ಯಕ್ತವಾಗಿವೆ.

ಕೆಲ ಕಥನಕಾರರು ಮಹಿಳಾ ಬದುಕಿನ ಅಧೀನ ಸ್ಥಿತಿಯನ್ನು ಸಹಾನುಭೂತಿ ಪರವಾಗಿ ಚಿತ್ರಿಸಿದ್ದಾರೆ. ಕುಟುಂಬ ವ್ಯವಸ್ಥೆಯನ್ನು ಆ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು ಗೃಹಿಣಿ ಪತ್ನಿಯರಲ್ಲಿ ಆದರ್ಶ ಗುಣಗಳನ್ನು ಆರೋಪಿಸಿದ್ದಾರೆ. ಗೃಹಾಧೀನತೆಯ ಈ ಬದುಕು ಸಾಮಾಜಿಕ ವಾಸ್ತವವನ್ನೇ ಪ್ರತಿನಿಧಿಸುತ್ತದೆ. ಮಹಿಳೆಗೆ ವಹಿಸಲಾದ ಈ ಮೌಲ್ಯಗಳು ಸಮಾಜದ ಹಿತದೃಷ್ಟಿಯಿಂದ ಸ್ವೀಕೃತವಾಗುವ ಬಗೆಯವಾಗಿವೆ.

ವಿಧವೆ ವೇಶ್ಯೆಯರ ಬದುಕಿನ ದಾರುಣತೆ ನೋವು ದುಗುಡಗಳು ಕಥನಗಳಲ್ಲಿ ವ್ಯಕ್ತವಾಗಿರುವುದು ಸಾಮಾಜಿಕ ಅಸಮಾನತೆಯ ವಿರುದ್ಧವಾಗಿ ಮತ್ತು ಮಹಿಳಾ ಶೋಷಣೆಯ ವಿರುದ್ಧವಾಗಿ.

ಮಹಿಳೆಯ ಶೈಕ್ಷಣಿಕ ಹಾಗೂ ರಾಜಕೀಯ ಪ್ರವೇಶವನ್ನು ಕಥನ ಸಾಹಿತ್ಯ ಬೆಂಬಲಿಸಿದೆ. ಸಂಘರ್ಷ ಸೇಡುಗಳು ಮಹಿಳಾ ಬದುಕಿಗೆ ಮಾರಕವಾಗಿರುವುದನ್ನು ಗುರುತಿಸಿದೆ. ಕಲಾವಿದೆಯರನ್ನು ಶರೀರ ಮೂಲವಾಗಿ ಪರಿಗಣಿಸೆ, ಪ್ರತಿಭೆಯ ನೆಲೆಯಲ್ಲಿ ಗುರುತಿಸಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಲಾಗಿದೆ.

ಸಾಮಾಜಿಕವಾಗಿ ಹೇರಲಾದ ಮೌಲ್ಯಗಳು ಮಹಿಳೆ ಅದರಿಂದ ಹೊರಬರದಂತೆ ಒತ್ತಡ ತರುವುದರಿಂದ, ಮಹಿಳೆ ಮಾನಸಿಕ ಒತ್ತಡ, ಖಿನ್ನತೆಗಳಿಗೆ ಒಳಗಾಗಬೇಕಾಗುತ್ತದೆನ್ನುವುದನ್ನು ಕಥನಗಳು ಸೂಕ್ಷ್ಮವಾಗಿ ಗ್ರಹಿಸಿವೆ. ಮಾನಸಿಕ ಅಸ್ವಸ್ಥತೆಗೆ ಕಾರಣಗಳನ್ನು ಶೋಧಿಸಿವೆ. ದೇವರು–ದೆವ್ವಗಳಂಥ ಅಮೂರ್ತ ಕಲ್ಪನೆಗಳು ಶೋಷಣೆಗೆ, ಆತ್ಮರಕ್ಷಣೆಗೆ ಬಳಕೆಯಾದುದನ್ನು ಕಥನಗಳು ನಿರೂಪಿಸಿವೆ.

ಜನಪದ ಸಾಹಿತ್ಯ ಮಹಿಳಾ ಬದುಕನ್ನು ಸ್ಥಿರ ಮಾದರಿ, ಪ್ರತಿರೋಧ, ಪರ್ಯಾಯಗಳಲ್ಲದೆ ಸಮಾನ ನೆಲೆಯಲ್ಲೂ ಅಭಿವ್ಯಕ್ತಿಸಿದೆ.

ಒಟ್ಟಿನಲ್ಲಿ ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿಯ ಮಹಿಳಾ ಬದುಕು ಅಧೀನ ನೆಲೆಯದಾಗಿದ್ದು, ಪುರುಷ ಪ್ರಧಾನ ವ್ಯವಸ್ಥೆಯ ನಿಯಮಗಳಲ್ಲಿ, ರೂಢಿ–ಆಚರಣೆಗಳಲ್ಲಿ ಬಂಧಿತವಾಗಿದೆ. ಅದರಿಂದ ಬಿಡುಗಡೆಗೊಂಡು ಸಮಾನ ನೆಲೆಯನ್ನು ಹೊಂದುವ ಆಶಯದ್ದಾಗಿದೆ.

ಅಧ್ಯಾಯ ಐದು ಸಮಾರೋಪದಲ್ಲಿ ಈ ಹಿಂದಿನ ಪ್ರತಿ ಅಧ್ಯಾಯದಲ್ಲಿ ಕೈಗೊಂಡ ಅಧ್ಯಯನದ ಸ್ವರೂಪ ಆಯ್ಕೆ ಮಾಡಿಕೊಂಡ ವಿಧಾನ ತಾತ್ವಿಕತೆಗಳಿಗೆ ಅನುಗುಣವಾಗಿ ವಿಶ್ಲೇಷಣೆಯ ಸಮೀಕ್ಷೆಯನ್ನು ಕಟ್ಟಿಕೊಡಲಾಗಿದೆ. ಅನ್ವಯಿಕ ಭಾಗದಲ್ಲಿ ಪ್ರಾತಿನಿಧಿಕವಾಗಿ ಅಧ್ಯಾಯಕ್ಕೆ ಅನುಗುಣವಾಗಿ ಅಂದರೆ ಎರಡನೆಯ ಅಧ್ಯಾಯದಲ್ಲಿ ಚಾರಿತ್ರಿಕ ಅವಲೋಕನವನ್ನು ಮಾಡಲಾಗಿದೆ. ಅಧ್ಯಾಯ ಮೂರರಲ್ಲಿ ಚರಿತ್ರೆ, ಜಾನಪದ ಪರಂಪರೆ ನಂಬಿಕೆಗಳನ್ನಾಧರಿಸಿ ಮಹಿಳಾ ಬದುಕಿನ ಸಾಮಾಜಿಕ ವಾಸ್ತವವನ್ನು ಕಟ್ಟಿಕೊಳ್ಳಲಾಗಿದೆ. ಅಧ್ಯಾಯ ನಾಲ್ಕು ಹೈದರಾಬಾದ ಕರ್ನಾಟಕ ಸಾಹಿತ್ಯದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣಕ್ಕೆ ಕಥನಕಾರರ ಪ್ರಾತಿನಿಧಿಕ ಕಥನಗಳನ್ನು ವಿಶ್ಲೇಷಿಸಲಾಗಿದೆ. ಒಟ್ಟಾರೆ ನನ್ನ ಗ್ರಹಿಕೆಯ ಚೌಕಟ್ಟಿನ ಮಿತಿಯಲ್ಲಿ ಈ ಮಹಾ ಪ್ರಬಂಧ ರಚಿತವಾಗಿದೆ. ಇದು ಹೈದರಾಬಾದ ಕರ್ನಾಟಕದ ಮಹಿಳಾ ಬದುಕಿನ ಸಂಕಥನವೂ ಆಗಿದೆ.

೨. ಅಧ್ಯಯನದ ಫಲಿತಗಳು :

ಕಥನ ಸಾಹಿತ್ಯದ ಧೀರ್ಘ ಅವಲೋಕನ ಮತ್ತು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಿದ ವಿವರಗಳನ್ನು ಅನುಲಕ್ಷಿಸಿ ಕಥನ ಸಾಹಿತ್ಯದ ಅರ್ಥೈಸುವಿಕೆಯನ್ನು ಈ ಕೆಳಗಿನಂತೆ ಸ್ವೀಕರಿಸಲಾಗಿದೆ.

ವಿವಾಹ ಕೇಂದ್ರಿತ ಸಮಸ್ಯೆಗಳು ಮಹಿಳಾ ಬದುಕನ್ನು ಸಂಕಷ್ಟಕ್ಕೆ ದೂಡುತ್ತವೆ. ವಿವಾಹ ಮತ್ತು ಕುಟುಂಬಗಳು ಮಹಿಳೆಯ ಅಧೀನ ಸ್ಥಿತಿಗೆ ಕಾರಣವೆಂದು ಪರಿಭಾವಿಸುವ ಸ್ತ್ರೀವಾದಿಗಳ ನಿಲುವು ಸರಿಯಾದುದು ಎಂಬುದನ್ನು ಕಥನ ಸಾಹಿತ್ಯದ ಮಹಿಳಾ ಬದುಕು ಸಮರ್ಥಿಸುವಂತೆನಿಸುತ್ತದೆ.

ಹೈದರಾಬಾದ ಕರ್ನಾಟಕದ ಕಥನಗಳಲ್ಲಿ ಗಮನಿಸಿದಂತೆ ವಿವಾಹ ಬಾಹಿರ ಸಂಬಂಧ ಗಂಡಿಗೆ ಪ್ರತಿಷ್ಠೆಯದಾದರೆ ಹೆಣ್ಣಿಗೆ ಕಳಂಕದ್ದಾಗಿದೆ.

ವಿಧವಾ ವಿವಾಹ ಅಕ್ಷತ ಕನ್ಯೆ ಹಾಗೂ ಮಕ್ಕಳಿಲ್ಲದ ವಿಧವೆಗೆ ಸುಲಭವಾದರೆ, ಮಕ್ಕಳಿರುವವಳಿಗೆ ಅಪರೂಪ ಜಾತಿ ಕಟ್ಟು ಪಾಡಿನ ಈ ಪ್ರದೇಶದ ಕಥನಗಳಲ್ಲಿ ಅಂತರ್‌ಜಾತಿ ವಿವಾಹಗಳು ವಿಫಲವಾದದ್ದೇ ಹೆಚ್ಚು. ಸಾಮಾಜಿಕವಾಗಿ ವಿಧವಾ ವಿವಾಹ, ಅಂತರ್‌ಜಾತಿ ವಿವಾಹಗಳು ಅಷ್ಟಾಗಿ ಮಾನ್ಯತೆ ಪಡೆದಿಲ್ಲ.

ಕೆಳಜಾತಿಯ ಪುರುಷರು ಕುಡಿತ, ಜೂಜುಗಳ ದಾಸರಾಗಿ ಇಲ್ಲವೆ ತಮ್ಮ ಅಹಂಕಾರದಿಂದ ಹಣವಂತರಿಗೆ ತಮ್ಮ ಹೆಂಡಿರನ್ನೇ ಮಾರಿದ ಸಂಗತಿಯನ್ನು ಕಥನ ಸಾಹಿತ್ಯ ಚಿತ್ರಿಸಿದೆ. ಜೋಗತಿಯರ ಮಾರಾಟ ಸರ್ವೆ ಸಾಮಾನ್ಯವಾದುದಾದರೆ ವಿರಳವಾಗಿ ಮೇಲ್‌ವರ್ಗದ ಮಹಿಳೆಯನ್ನು ಹಣಕ್ಕಾಗಿ ಮಾರಿದ ಸಂದರ್ಭವೂ ಕಾಣಿಸಿಕೊಂಡಿದೆ.

ಆದರೆ ಹಿಂದಿನ ಅಧ್ಯಾಯದಲ್ಲಿ ಈಗಾಗಲೇ ಗಮನಿಸಿರುವಂತೆ ಹೆಣ್ಣು ಶಿಶು ಮಾರಾಟದ ಪ್ರಸ್ತಾಪ ಕಥನಗಳಲ್ಲಾಗಿಲ್ಲ. ಜ್ವಲಂತ ಸಮಸ್ಯೆಯೊಂದರ ಕಡೆಗಿನ ಈ ಮೌನಕ್ಕೆ ಕಾರಣ ತಿಳಿದಿಲ್ಲ.

ವಿವಾಹ ಸಂಸ್ಥೆಯ ಹಲವು ಸಮಸ್ಯೆಗಳಲ್ಲಿ ಬಂಜೆತನವೂ ಒಂದು. ತಾಯ್ತನದ ಪೂರ್ಣತೆಗೆ ಇಲ್ಲಿಯ ಮಹಿಳೆಯರು ವ್ರತ ನಿಯಮಗಳಲ್ಲದೆ ಕೆಲವೊಮ್ಮೆ ಒಳದಾರಿಗಳನ್ನು ಅನುಸರಿಸಿರುವುದನ್ನು ಕಥನ ಸಾಹಿತ್ಯ ದಾಖಲಿಸುತ್ತದೆ. ಹಾಗೆ ಮೀರಬೇಕಾದುದರ ಹಿಂದಿನ ಒತ್ತಡವನ್ನು ನಿರೂಪಿಸುತ್ತದೆ.

ವಿವಾಹವು ಹೆಣ್ಣು-ಗಂಡಿನ ಲೈಂಗಿಕ ಸಂಬಂಧಕ್ಕೆ ಅನುಮತಿಸುವುದೆಂಬುದು ನಿಜವಾದರೂ, ಅದಕ್ಕೆ ಗಂಡಿನ ವಿವಾಹ ಕೇಂದ್ರಿತ ವಿವಾಹ ಬಾಹಿರ ಲೈಂಗಿಕತೆಯೆ ಮುಖ್ಯವಾಗುತ್ತದೆಂಬುದನ್ನು ಕಥನ ಸಾಹಿತ್ಯ ವಿಶ್ಲೇಷಿಸಿದೆ. ವಿವಾಹ ಬಾಹಿರ ಸಂಬಂಧದಲ್ಲಿ ವಿಧವೆಯರು ತಮ್ಮ ಲೈಂಗಿಕ ಬದುಕಿಗೆ ದಾರಿ ಕಂಡುಕೊಳ್ಳುವುದು ಸಮಾನತಾ ಧೋರಣೆಯ ಪರ್ಯಾಯ ಸಾಧ್ಯತೆಯಾಗುತ್ತದೆ. ಇಂಥ ಅಭಿವ್ಯಕ್ತಿ ಮಾನವ ಸಹಜ ಗುಣಗಳಿಂದ, ದೌರ್ಬಲ್ಯಗಳಿಂದ ಕೂಡಿಕೊಂಡು ಅನನ್ಯವೆನಿಸುತ್ತದೆ.

ಅತ್ಯಾಚಾರ ಮಹಿಳಾ ಬದುಕನ್ನು ಘಾಸಿಗೊಳಿಸುವ ಅಮಾನವೀಯ ಹೀನ ಕೃತ್ಯವಾಗಿದೆ. ಮಹಿಳೆಯ ಸಮ್ಮತಿ ಇಲ್ಲದೆ ನಡೆಯುವ ಈ ಕ್ರಿಯೆ ಅಪರಾಧವೆಂದು ಪರಿಗಣನೆಯಾಗಿದ್ದರೂ ಮಹಿಳೆಯ ಮೇಲೆ ನಡೆಯುತ್ತಲೇ ಇರುವುದಕ್ಕೆ ಕಥನ ಸಾಹಿತ್ಯ ತನ್ನ ವಿರೋಧವನ್ನು ಅಭಿವ್ಯಕ್ತಿಸುತ್ತದೆ.

ಊಳಿಗ ಮಾನ್ಯ ವ್ಯವಸ್ಥೆಯಲ್ಲಿ ಬೆಳೆದು ಬಂದ ಜೀತ ಪದ್ಧತಿ, ಕೃಷಿ ಪ್ರಧಾನ ಅಂಶಗಳು ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಶಿಕ್ಷಣಕ್ಕೆ ಆದ್ಯತೆಯನ್ನೀಯಲಿಲ್ಲ. ಮಹಿಳಾ ಶಿಕ್ಷಣವಂತೂ ತೀರ ನಿರ್ಲಕ್ಷಿತವಾಗಿರುವುದನ್ನು ಕಥನ ಸಾಹಿತ್ಯ ಕಾಳಜಿ ಪೂರ್ವಕ ನಿರೂಪಿಸುತ್ತದೆ.

ವೇಶ್ಯೆ ಸಮಾಜದ ಸಂಸ್ಕೃತಿಯ ಭಾಗವಾಗಿದ್ದಾಳೆ. ಜೋಗತಿ ಕೂಡ ದೇವರ ಹೆಸರಲ್ಲಿ ನಡೆವ ವೇಶ್ಯಾವೃತಿಯೇ ಆಗಿದೆ. ಕಥನ ಸಾಹಿತ್ಯದಲ್ಲಿ ಪ್ರತಿನಿಧೀಕರಣಗೊಂಡ ಬಹುತೇಕ ಮಹಿಳೆಯರು ಒತ್ತಾಯದಿಂದ ಜೋಗತಿಯರಾದವರೇ ಆಗಿದ್ದಾರೆ. ಎಲ್ಲೋ ಕೆಲವರು ಬದುಕಿನ ಅನಿವಾರ್ಯತೆಗೆ ಈ ಮಾರ್ಗವನ್ನು ಅನುಸರಿಸಿದ್ದಾರೆ.

ಕಥನ ಸಾಹಿತ್ಯದ ಮಹಿಳೆಯ ದುಡಿಮೆಯನ್ನು ಕುರಿತ ನಿರ್ವಚನ ಅಸಡ್ಡೆಯದೆ ಆಗಿದೆ. ಮಹಿಳೆಯ ದುಡಿಮೆ ಪುರುಷನಿಗಾಗಿ ಎಂಬ ಧೋರಣೆ ಕಂಡು ಬರುತ್ತದೆ. ಮನೆಗೆಲಸವಂತೂ ದುಡಿಮೆಯ ವ್ಯಾಪ್ತಿಯಲ್ಲಿ ಸೇರುವುದೇ ಇಲ್ಲ. ಮಹಿಳೆಯ ದುಡಿಮೆ ಅವಳಿಗೆ ಸುಖ-ನೆಮ್ಮದಿ, ಗೌರವ-ಘನತೆ ತಂದಿರುವುದಕ್ಕಿಂತ ಹೆಚ್ಚಾಗಿ ಒಳ ಹೊರಗೆ ದುಡಿಯುವ ಹೊರೆಯನ್ನು ಹೆಚ್ಚಿಸಿದೆ.

ಹೈದರಾಬಾದ ಕರ್ನಾಟಕ ಕಥನಗಳಲ್ಲಿ ವಿಧವೆಯರಿಗೆ ಕಾನೂನಿನ ಪರಿಧಿಯನ್ನು ಮೀರಿ ಆಸ್ತಿಯ ಮೇಲಿನ ಹಕ್ಕನ್ನು ನಿರಾಕರಿಸುವುದನ್ನು, ಅದನ್ನು ವಿರೋಧಿಸಿ ಮಹಿಳೆಯರು ಕಾನೂನು ಮೊರೆ ಹೋಗುವ, ಕೊನೆಗೆ ತಾವೇ ರಣಚಂಡಿಯರಂತೆ ಹೋರಾಟಕ್ಕಿಳಿದ ಸಂದರ್ಭಗಳು ಚರ್ಚಿಸಲ್ಪಟ್ಟಿವೆ. ಕೆಲ ಮಹಿಳೆಯರು ಪುರುಷರಿಂದ ಮೋಸ ಹೋಗಿ ಆಸ್ತಿಯನ್ನು ಕಳೆದುಕೊಂಡಂತೆ ಕೆಲವರು ದಿಟ್ಟತನದಿಂದ ತಮ್ಮ ಹಕ್ಕನ್ನು ಪಡೆದಿದ್ದಾರೆ.

ಕಥನ ಸಾಹಿತ್ಯದಲ್ಲಿ ದೇವರು –ದೆವ್ವಗಳನ್ನು ಮಹಿಳಾ ಶೋಷಣೆಯ ಅಸ್ತ್ರವಾಗಿ ಬಳಸಿಕೊಂಡಂತೆ ರಕ್ಷಣಾತ್ಮಕವಾಗಿಯೂ ಬಳಸಿಕೊಳ್ಳಲಾಗಿದೆ. ಜೀವ ವಿರೋಧಿ ನಿಯಮಗಳ ಹೇರಿಕೆಯಲ್ಲಿ ಮಹಿಳೆಯರನೇಕರು ಮನೋರೋಗಿಗಳಾಗಿ ಮಾನಸಿಕ ಒತ್ತಡದಲ್ಲಿ ನರಳಿದ್ದಾರೆ.

ಹೈದರಾಬಾದ ಕರ್ನಾಟಕದ ಜನಪದ ಸಾಹಿತ್ಯವೂ ತನ್ನದೇ ಆದ ಅನನ್ಯತೆಯನ್ನು ಪಡೆದಿದ್ದು, ಮಹಿಳಾ ಬದುಕಿನ ಹಲವು ಆಯಾಮಗಳನ್ನು ದರ್ಶಿಸುತ್ತದೆ. ಬದುಕಿನ ಯಥಾ ಸ್ಥಿತಿಯ ಮುಂದುವರಿಕೆ ಇರುವಂತೆ ಪ್ರತಿರೋಧ ವ್ಯಕ್ತವಾದ ಸಂದರ್ಭಗಳಿವೆ. ಪರ್ಯಾಯ ಕಟ್ಟಿಕೊಂಡ ಮಹಿಳೆಯರೂ ಇಲ್ಲ ಕಾಣಿಸಿಕೊಂಡಿದ್ದಾರೆ.

೩. ಅಧ್ಯಯನದ ಸಲಹೆ ಹಾಗೂ ಸಾಧ್ಯಯತೆಗಳು :

ಹೈದರಾಬಾದ ಕರ್ನಾಟಕದ ಮಹಿಳಾ ಬದುಕನ್ನು ಸಾಹಿತ್ಯ ಹಾಗೂ ಸಾಹಿತ್ಯೇಕರವಾಗಿ ಅಧ್ಯಯನಕ್ಕೊಳಪಡಿಸಿದಾಗ, ದಮನಿತ ಅಧೀನ ಸ್ಥಿತಿಯ ವಾಸ್ತವವೇ ಅನಾವರಣಗೊಂಡಿದೆ. ಶೈಕ್ಷಣಿಕವಾಗಿ ಸಾಮಾಜಿಕವಾಗಿ ಒಟ್ಟು ಕರ್ನಾಟಕಕ್ಕಿಂತ ಹಿಂದುಳಿದ ಪರಿಸ್ಥಿತಿಯೆ ಇಲ್ಲಿಯದು.

ಮಹಿಳೆಯ ಅಧೀನತೆಯನ್ನು ಶಾಶ್ವತವಾಗುವಂತೆ ಮಾಡುವ ಅಂಶಗಳೇ ಧಾರ್ಮಿಕ ಶೈಕ್ಷಣಿಕ ಸಾಮಾಜಿಕ ಹಾಗೂ ಬೌದ್ಧಿಕ ರಂಗಗಳಲ್ಲಿ ಜಾರಿಯಲ್ಲಿವೆ. ದೈಹಿಕ ದಾಸ್ಯದ ಹಿಡಿತದಿಂದ ಪಾರಾಗುವುದು ಸುಲಭ. ಮಾನಸಿಕ ಬೌದ್ಧಿಕ ದಾಸ್ಯ ಹೆಚ್ಚು ಪರಿಣಾಮಕಾರಿಯಾದುದು. ಇದರಿಂದ ಮಹಿಳಾ ಬದುಕು ಹೊರಬರಬೇಕಾದ ಅವಶ್ಯಕತೆ ಹೆಚ್ಚಾಗಿ ಇರುವುದರಿಂದ ಅಂಥ ಕಾರ್ಯಕ್ರಮಗಳ ಅವಶ್ಯಕತೆ ಇದೆ.

ಮಹಿಳೆಯ ಬದುಕನ್ನು ಉನ್ನತೀಕರಿಸುವ ನಿಟ್ಟಿನಲ್ಲಿ ಜಾಗೃತಿ ಶಿಬಿರಗಳು ಏರ್ಪಡಬೇಕು.

ಕೌಟುಂಬಿಕವಲಯದಲ್ಲಿ ತಿಳುವಳಿಕೆ ಮೂಡಿಸುವಂತಾಗಬೇಕು.

ಮಹಿಳೆಯ ಹಕ್ಕುಗಳನ್ನು ಕುರಿತು ಅರಿವು ನೀಡುವುದರೊಂದಿಗೆ ಅವು ಅವಳಿಗೆ ಸಿಗುವ ರೀತಿಯಲ್ಲಿ ಪ್ರಯತ್ನಗಳಾಗಬೇಕು.

ಮಹಿಳೆಯರಲ್ಲಿ ಮತ್ತು ಪುರುಷರಲ್ಲಿ ನೆಲೆಗೊಂಡ ತಪ್ಪು ತಿಳುವಳಿಕೆಗಳನ್ನು ನಿವಾರಿಸಲು ಯತ್ನಗಳಾಗಬೇಕು.

ಮಹಿಳಾ ಬದುಕು ಊರ್ಧ್ವಮುಖವಾಗಲು, ಸಮಾಂತರಕ್ಕೆ ತರಲು ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳು ನಿರಂತರ ಕ್ರಿಯಾಶೀಲವಾಗಬೇಕಾದ ಜರೂರನ್ನು ಅಧ್ಯಯನ ಒತ್ತಾಯಿಸುತ್ತದೆ.

ಮಹಿಳೆಯೂ ಸ್ವತಃ ತನ್ನ ಬದುಕಿನ ಸುಧಾರಣೆಗೆ ಶ್ರಮಿಸಬೇಕಾಗುತ್ತದೆ. ತನ್ನಲ್ಲಿಯ ಕೀಳರಿಮೆಯನ್ನು ನೀಗಿ ತನ್ನ ವ್ಯಕ್ತಿತ್ವದ ನಿರ್ಮಾಣಕ್ಕೆ ಕಂಕಣ ಬದ್ಧಳಾಗಬೇಕು.

ಸಾಮಾಜಿಕ ಚಿಂತನೆಗಳು ಮಹಿಳೆಯ ಕುರಿತು ಜಾರಿಗೊಳಿಸಿರುವ ಕಲ್ಪನೆಗಳು ಬದಲಾಗಬೇಕು. ವಾಸ್ತವ ನೆಲೆಯ ಚಿಂತನೆಗಳು ಕಾರ್ಯರೂಪಕ್ಕೆ ಬಂದಾಗ ಬದಲಾವಣೆ ಸಹಜವಾಗಿ ಆಗಬಹುದಾಗಿದೆ.

ಮಹಿಳೆ – ಪುರುಷರೀರ್ವರೂ ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕಾದ ಜರೂರಿದೆ. ಏಕಪಕ್ಷೀಯ ಪ್ರಯತ್ನಗಳು ನಿರೀಕ್ಷಿತ ಪರಿಣಾಮವನ್ನು ನೀಡಲಾರವು.

ಅರಿವಿನ ತರಬೇತಿ ಒಟ್ಟು ಸಮುದಾಯದಲ್ಲಿ ಬಂದಾಗಲೆ ತಾರತಮ್ಯರಹಿತ ಬದುಕು ನೆಲೆಗೊಳ್ಳಬಹುದಾಗಿದೆ.

ಸರ್ವಸಮಾನತೆಯ ಸಾಕಾರಕ್ಕಾಗಿ ಕಾರ್ಯಕ್ರಮಗಳು ರೂಪಗೊಳ್ಳಬೇಕು.

ಹೈದರಾಬಾದ ಕರ್ನಾಟಕದಲ್ಲಿ ಮಹಿಳಾ ಬದುಕಿನ ಪ್ರತಿನಿಧೀಕರಣದ ಈ ಅಧ್ಯಯನವು ನನ್ನದೇ ಮಿತಿಯ ಒಂದು ಪ್ರಯತ್ನವಾಗಿದೆ. ಇಲ್ಲಿಯ ಒಂದೊಂದು ಉಪಶೀರ್ಷಿಕೆಯು ಅಂದರೆ ದೇವದಾಸಿ, ಹೆಣ್ಣು ಮಾರಾಟ, ಬಾಲ್ಯವಿವಾಹ, ಜಮೀನ್ದಾರಿ ವ್ಯವಸ್ಥೆಯಲ್ಲಿ ಸಿಕ್ಕಿ ಹಾಕಿಕೊಂಡಿರುವ ಮಹಿಳಾ ಬದುಕು, ನಗರಗಳ ಕೊಳಚೆ ಪ್ರದೇಶದ ಮಹಿಳಾ ಬದುಕು, ಕೃಷಿ ಮಹಿಳಾ ಬದುಕು ಮುಂತಾದವು ಪ್ರತ್ಯೇಕ ವಿಸ್ತೃತ ಅಧ್ಯಯನಗಳಾಗುವ ಸಾಧ್ಯತೆಯವಾಗಿವೆ. ಪ್ರಸ್ತುತ ಅಧ್ಯಯನದಲ್ಲಿ ಕಥನ ಸಾಹಿತ್ಯ ಹೊರಹಾಕಿದ ಮಹಿಳಾ ಬದುಕಿನ ಸಂಗತಿಗಳನ್ನು ಒಂದೆಡೆ ಸೇರಿಸಿ ಒಟ್ಟು ಬದುಕಿನ ಸ್ಥೂಲ ಚಿತ್ರವನ್ನು ಮಾತ್ರ ಪಡೆಯಲು ಸಾಧ್ಯವಾಗಿದೆ

ಅನುಬಂಧಗಳು

೧. ಮೂಲ ಆಕರಗಳು

೨. ಪರಾಮರ್ಶನ ಗ್ರಂಥಗಳು

ಅನುಬಂಧಗಳು

೧. ಮೂಲ ಆಕರ :

೦೧. ಅಮರೇಶ ನುಗಡೋಣಿ (ದ್ವಿಮು. ೧೯೭೭) 'ಮಣ್ಣುಸೇರಿತು ಬೀಜ' : ನಮ್ಮ ಪ್ರಕಾಶನ, ತಿಪಟೂರು. ೫೭೨೨.೨

೧. ಮಣ್ಣು ಸೇರಿತು ಬೀಜ
೨. ದಾರಿ ಮೂಡಿಸುವ ಹೆಜ್ಜೆಗಳು
೩. ಹೊತ್ತು ಮೂಡಿಸುವ ಸಮಯ
೪. ನೆಲದ ಮರೆಯ ನಿಧಾನ
೫. ಒತ್ತೆ

೦೨. ಗವೀಶ ಹಿರೇಮಠ (ದಿ.ಮು. ೨೦೦೩) 'ಹಕ್ಕಿ ಗೂಡು ಸೇರಿತು' : ಯುವಜನ ಸಾಹಿತ್ಯಾಧ್ಯಯನ ವೇದಿಕೆ, ಇಳಕಲ್. ೫೮೭೩೧೦೩

೦೩. ಗೀತಾ ನಾಗಭೂಷಣ ಜಿ. (೧೯೮೩) 'ಮಾಪುರ ತಾಯಿಯ ಮಕ್ಕಳು' : ಮಯೂರ ಮಾಸ ಪತ್ರಿಕೆ.

೦೪. ಗೀತಾ ನಾಗಭೂಷಣ ಜಿ. (೧೯೮೮) 'ಆಸರೆಗಳು' : ದಿವ್ಯಚಂದ್ರ ಪ್ರಕಾಶನ, ಬೆಂಗಳೂರು. ೫೬೦೦೭೯

೦೫. ಗೀತಾ ನಾಗಭೂಷಣ ಜಿ. (೧೯೯೪) 'ಧುಮಸ್ಸು' : ಮಹಿಳಾ ಸಾಹಿತ್ಯಿಕಾ ನವನಗರ, ಹುಬ್ಬಳ್ಳಿ.

೦೬. ಗೀತಾ ನಾಗಭೂಷಣ ಜಿ. (೧೯೯೫) 'ಏರಿಳಿತಗಳು' : ಗಜಾನನ ಪ್ರಕಾಶನ, ಬೆಂಗಳೂರು.

೦೭. ಗೀತಾ ನಾಗಭೂಷಣ ಜಿ. (೧೯೯೭) 'ದಂಗೆ' : ನವಕರ್ನಾಟಕ ಪ್ರಕಾಶನ, ಬೆಂಗಳೂರು.

೦೮. ಗೀತಾ ನಾಗಭೂಷಣ ಜಿ. (ದ್ವಿಮು. ೧೯೯೮) 'ಹಸಿಮಾಂಸ ಮತ್ತು ಹದ್ದುಗಳು' : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೧೮

೦೯. ಗೀತಾ ನಾಗಭೂಷಣ ಜಿ. (೨೦೦೧) 'ಬದುಕು' : ಲೋಹಿಯಾ ಪ್ರಕಾಶನ, ಬಳ್ಳಾರಿ.

೧೦. ಗೀತಾ ನಾಗಭೂಷಣ ಜಿ. (೧೯೮೬) 'ಸವತಿ ಶ್ರೀಗಂಧ' : ಪ್ರಿಯಾ ಪ್ರಕಾಶನ, ಬೆಂಗಳೂರು.

೧೧. ಗೀತಾ ನಾಗಭೂಷಣ ಜಿ. (೧೯೯೩) 'ಅವ್ವ ಮತ್ತು ಇತರ ಕಥೆಗಳು' : ಬಸವ ಪ್ರಕಾಶನ, ಗುಲಬರ್ಗಾ-೧.

೧. ಅವ್ವ
೨. ಡಾಲು
೩. ಚಿತ್ತಿ ಮತ್ತು ರಿಕ್ಷಾ
೪. ದುರಂತ
೫. ಬೆಳಕಿನೆಡೆಗೆ

೧೨. ಚಂದ್ರಕಾಂತ ಕುಸನೂರ : (೧೯೬೯) 'ಚರ್ಚ್‌ಗೇಟ' : ಸತ್ಯ ಸ್ನೇಹ ಪ್ರಕಾಶನ, ರಾಯಚೂರು.

೧೩. ಚಂದ್ರಕಾಂತ ಕುಸನೂರ : (೧೯೭೫) 'ಯಾತನಾ ಶಿಬಿರ' : ಮನೋಹರ ಗ್ರಂಥಮಾಲಾ ಧಾರವಾಡ-೫೮೦೦೦೧

೧೪. ಚಂದ್ರಕಾಂತ ಕುಸನೂರ : (೧೯೮೬) 'ಗೋಹರಜಾನ್ ಮಾಲತಿ ಮತ್ತು ನಾನು' : ಐ.ಬಿ.ಎಚ್ ಪ್ರಕಾಶನ ಬೆಂಗಳೂರು-೫೬೦೦೦೧

೧೫. ಚಂದ್ರಕಾಂತ ಕುಸನೂರ : (೨೦೦೫) 'ಕೆರೂರ ನಾಮಾ' : ಲೋಹಿಯಾ ಪ್ರಕಾಶನ, ಬಳ್ಳಾರಿ.

೧೬. ಚನ್ನಣ್ಣ ವಾಲಿಕಾರ : (೧೯೮೯) 'ಹುಲಿಗೆಮ್ಮ' : ಪ್ರಜ್ಞಾ ಪ್ರಕಾಶನ, ಗುಲಬರ್ಗಾ.

೧೭. ಚನ್ನಣ್ಣ ವಾಲಿಕಾರ : (೧೯೭೫) 'ಬೆಳ್ಳ' : ಸುಮನಸಾ ವಿಚಾರ ವೇದಿಕೆ ಚೊಕ್ಕಾಡಿ, ದ.ಕ.

೧೮. ಚಿತ್ರಶೇಖರ ಕಂಠಿ (೧೯೯೦) 'ನೇಪಥ್ಯ' : ಗೆಳೆಯರ ಬಳಗ ಪ್ರಕಾಶನ, ಯಾದಗಿರಿ

೧೯. ಜಯತೀರ್ಥ ರಾಜ ಪುರೋಹಿತ (ಎ.ಮು. ೧೯೬೭) 'ಪಾರವ್ವನ ಪಂಚಾಯಿತಿ' ನೃಪತುಂಗ ಪ್ರಕಾಶನ, ಕಲಬುರ್ಗಿ.

೧. ಸಯಿದಾ ಸಮತಿಯಾದಳು

೨. ದೇವಿಯೋ ಹುಚ್ಚಿಯೋ

೩. ಮುಂದೇನು

೪. ದೆವ್ವದ ಬಂಗಾರ

೫. ಪಾರವ್ವನ ಪಂಚಾಯಿತಿ.

೨೦. ಜಯತೀರ್ಥ ರಾಜ ಪುರೋಹಿತ (೧೯೬೯) 'ರೋಹಿಣಿ' : ಪ್ರಕಾಶ ಪ್ರಕಾಶನ, ರಾಯಚೂರು.

೧. ರೋಹಿಣಿ

೨. ಗಂಧವತೀ ಪೃಥಿವಿ

೩. ಬಹಾದ್ದೂರ ನನ ಗಂಡ

೨೧. ಜಯತೀರ್ಥ ರಾಜ ಪುರೋಹಿತ (೧೯೮೩) 'ಸುಳಿಗಾಳಿ' : ವಿಶ್ವ ಕನ್ನಡ ಸಮ್ಮೇಳನ ನೃಪತುಂಗ ರಸ್ತೆ, ಬೆಂಗಳೂರು. ೫೬೦೦೦೨

೨೨. ಜಂಬಣ್ಣ ಅಮರಚಿಂತ (೧೯೯೪) 'ಕುರುಮಯ್ಯ ಮತ್ತು ಅಂಕುಶದೊಡ್ಡಿ' : ಮಾರ್ಕ್ಸಲೆನಿನ್ ವಿಚಾರ ಪ್ರಚಾರ ಸಮಿತಿ, ಗುಲಬರ್ಗಾ-೫೮೫೧೦೫

೨೩. ಜಯದೇವಿ ಗಾಯಕ್‌ವಾಡ (೨೦೦೨) 'ಯಾಜ್ಞಸೇನಿಯ ಆತ್ಮಕಥನ' : ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

೨೪. ದೇಶಪಾಂಡೆ ಎಂ.ಜಿ. (೧೯೮೮) 'ಪಾರಿಜಾತ' : ಖಡ್ಗೆ ಪತ್ರಿಕೆ ಪ್ರಕಾಶನ ಬೀದರ.

೧. ಇದೂ ಒಂದು ಬದುಕು

೨. ಪರಿಣಾಮ

೩. ಆರ್ತನಾದ
೪. ಚಾಂದಿನಿ
೫. ಬಾಳಿನೊಳಗಿನ ರಹಸ್ಯ
೬. ವಿಪರ್ಯಾಸ
೭. ಜಾತಿ ಅರಿಯದ ಪ್ರೀತಿ
೮. ಚರಿತ್ರ ಹೀನ
೨೫. ಪಂಪಯ್ಯಶೆಟ್ಟಿ ಎಚ್.(ಸಂ) (೧೯೯೫) 'ಬಿಸಿಲ ಹನಿಗಳು' : ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರು.
೧. ಹೆಣ್ಣು ಮಕ್ಕಳೆ ಬಲ್ಲರು : ಅಮರಾನಂದ ಬೆಟದೂರ
೨. ಮಣ್ಣಿನ ಗುಣ : ಕೋರಗಲ್ ವಿರೂಪಾಕ್ಷಪ್ಪ
೩. ಮಾಯಕಾರ್ತಿ : ಶರಣಪ್ಪ ವಡಗೇರಿ
೨೬. ಪ್ರಭು ಖಾನಾಪುರೆ (೨೦೦೨) 'ಒಡಲ ಕಿಡಿ ವುರಿಯಾರಿ' : ಸಿ.ವಿ.ಜಿ ಪ್ರಕಾಶನ, ಬೆಂಗಳೂರು.
೧. ನಂಜಾದ ಯಂಜ್‌ಲ್ಲೂಳ್
೨. ಪುರಾಣ ಭಜನಿ ಜಾತ್ರಿ...... ಇತ್ಯಾದಿ
೩. ಗರ್ದಿ ಗಮ್ಮತ್ತು
೪. ಹೆಜ್ಜೆ ಗುರುತು
೨೭. ಬಾಲಚಂದ್ರ ಜಯಶೆಟ್ಟಿ (೧೯೯೧) 'ಕೋಡ್ಗಲ್ಲಿನ ಕೂಗು' : ಪ್ರಜ್ಞಾ ಪ್ರಕಾಶನ, ಗುಲಬರ್ಗಾ.
೧. ಎಲ್ಲಮ್ಮನ ಸೇವೆ
೨. ರಾಚಿ
೩. ಸೋಬಾನ
೪. ತುಂಗಾ
೨೮. ಬಾಲಚಂದ್ರ ಜಯಶೆಟ್ಟಿ (೧೯೯೩) 'ಮಿರ್ಚಿಬಾಬಾ ಮತ್ತು ಇತರ ಕಥೆಗಳು' : ಬಸವ ಪ್ರಕಾಶನ, ಗುಲಬರ್ಗಾ-೧
೧. ಸುಂದರಿ ಎಲ್ಲಿ
೨. ಉಡುಕಿ
೨೯. ಮಲ್ಲಿಕಾರ್ಜುನ ಹಿರೇಮಠ (೨೦೦೧) 'ಹವನ' : ಆನಂದಕಂದ ಗ್ರಂಥ ಮಾಲೆ ಮಲ್ಲಾಡಿಹಳ್ಳಿ ಚಿತ್ರದುರ್ಗ
೩೦. ಮಲ್ಲಿಕಾರ್ಜುನ ಹಿರೇಮಠ (೧೯೯೩) 'ಅಮಿನಪುರದ ಸಂತೆ' ಚೈತನ್ಯ ಪ್ರಕಾಶನ, ಹುನಗುಂದ-೫೮೭೧೧೮
೧. ಲಕ್ಕವ್ವನ ಮಂದಿ
೨. ಮದುವೆ

೩. ಗುಡ್‌ಬೈ

೪. ಅಮಿನ ಪುರದ ಸಂತೆ

೩೧. ಯಶೋದಮ್ಮ ಸಿದ್ದಬಟ್ಟೆ (೧೯೯೫) 'ಮಂಗಳಾ' : ಕಾವ್ಯಶ್ರೀ ಪ್ರಕಾಶನ, ಬೀದರ

೩೨. ರಾಜಶೇಖರ ನೀರಮಾನ್ವಿ (ಮೂ.ಮು. ೧೯೮೮) 'ಹಂಗಿನರಮನೆಯ ಹೊರಗೆ' ಲೋಹಿಯಾ ಪ್ರಕಾಶನ, ಬಳ್ಳಾರಿ.

೧. ವೃತ್ತ

೨. ಬಿಸಿಲು ಕುದುರೆ

೩೩. ರಾಜಶೇಖರ ಹತಗುಂದಿ (೧೯೯೯) 'ಕಾಳಬೆಳದಿಂಗಳ ಸಿರಿ' : ಲೋಹಿಯಾ ಪ್ರಕಾಶನ, ಬಳ್ಳಾರಿ.

೧. ಕಾಳ ಬೆಳದಿಂಗಳ ಸಿರಿ

೨. ರೋರೆ ಕಳಚುವ ಪರಿ

೩. ಮರೀಚಿಕೆ

೪. ರತ್ನಾ ಎಂಬ ಹುಡುಗಿಯ ಸಾವು

೩೪. ಲಲಿತಾನಾಯಕ ಬಿ.ಟಿ. (೧೯೯೧) 'ಗತಿ' : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩೫. ಲಲಿತಾನಾಯಕ ಬಿ.ಟಿ. (೧೯೯೫) 'ನೆಲೆ ಬೆಲೆ' : ಆಶಾ ಸಾಹಿತ್ಯ ಪ್ರಕಾಶನ, ಬೆಂಗಳೂರು.

೩೬. ಲಲಿತಾನಾಯಕ ಬಿ.ಟಿ. (೧೯೮೯) 'ಹಬ್ಬ ಮತ್ತು ಬಲಿ' : ಲಂಬಾಣಿ ಒಕ್ಕೂಟ ಪ್ರಕಾಶನ, ಬೆಂಗಳೂರು.

೧. ಸೋಲು

೨. ಕೊಲೆ

೩. ತಾಯಿ ಸಾಕಿಬಾಯಿ

೪. ಮರು ಮದುವೆ

೫. ಉಣಲುಂಟು ಉಡಲುಂಟು

೩೭. ಲಲಿತಾ ದೇಮಶೆಟ್ಟಿ (೧೯೮೬) 'ಮಾತಂಗಿ ಮತ್ತು ಇತರ ಕಥೆಗಳು' : ಮಮತಾ ಪ್ರಕಾಶನ, ಕೊಪ್ಪಳ.

೧. ಸೋಲು

೨. ಮಮತೆಯ ಕೊಲೆ

೩. ಬೆಲೆವೆಣ್ಣು

೩೮. ಲಲಿತಾ ದೇಮಶೆಟ್ಟಿ (೧೯೯೧) 'ವೈದೇವಿ' : ಮಮತಾ ಪ್ರಕಾಶನ, ಕೊಪ್ಪಳ

೩೯. ಲಕ್ಷ್ಮಿದೇವಿ ಶಾಸ್ತ್ರಿ (೧೯೯೬) 'ಹೃದಯಕ್ಕೆ ಹತ್ತಿರಾದವರು ಮತ್ತು ಇವರ ಕಥೆಗಳು' : ವಿಶ್ವ ಪ್ರಕಾಶನ, ರಾಯಚೂರು.

೧. ದ್ವಂದ

೪೦. ಶಾಂತರಸ (೧೯೯೭) 'ಶಾಂತರಸರ ಸಮಗ್ರ ಕಥೆಗಳು' : ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೧. ಉರಿದ ಬದುಕು
೨. ಕಿಡಿ
೩. ತೋರಣ ಹರಿಯಲಿಲ್ಲ.
೪. ನಾಟ್ಯರಾಣಿಯ ಅಂತ್ಯ
೫. ಬಡೆಸಾಬು ಪುರಾಣ
೬. ಮಲ್ಕಮ್ಮ
೭. ಮಾಯೆ ಅಂದ್ರೆ ಮಾಯೆ
೮. ರೋಗಿ
೯. ಸಂಬಂಧಗಳು
೧೦. ಸುಳಿ
೧೧. ಹಾವಮ್ಮ

೪೧. ಶಾಂತರಸ (೧೯೯೮) 'ಸಣ್ಣ ಗೌಡಸಾನಿ' : ನೃಪತುಂಗನ ಅಧ್ಯಯನ ಕೇಂದ್ರ, ಸೇಡಮ್-೫೮೫೨೨೨

೪೨. ಶಿವಕುಮಾರ ನಾಗವಾರ (೨೦೦೦) 'ಹಣದಿ' : ಲೋಹಿಯಾ ಪ್ರಕಾಶನ, ಬಳ್ಳಾರಿ

೧. ಟುಮ್ಯಾ
೨. ಹರಿದ ಕಾಗದದ ಚೂರುಗಳು
೩. ಬಾಬಡಿ
೪. ಹುಳುಚು
೫. ನೆಲ ಹಿಡಿಯುವ ಮುನ್ನ
೬. ಕಾಮನ ಬಿಲ್ಲು

೪೩. ಶ್ರೀಕಾಂತ ಪಾಟೀಲ್ (೧೯೯೭) 'ಬೆಂಕಿ ಮರೆಯ ತಂಪು' : ಶಶಿ ಪ್ರಕಾಶನ ಬಟಗೇರಾ-೫೮೫೪೧೯

೧. ಮೂಡಲಕ ಕೆಂಪರಾಗಿ ಮೂಡಿತ್ತು
೨. ಗಟ್ಟಿವಿಳಿ

೪೪. ಸರಿತಾ ಕುಸುಮಾಕರ ದೇಸಾಯಿ (೧೯೯೭) 'ಮಿಡಿಗಾದ ಮಿಡುಕು' : ಹಂಸಧ್ವನಿ ಪ್ರಕಾಶನ, ಬೆಂಗಳೂರು-೫೬೦೦೫೩

೪೫. ಸಂಧ್ಯಾ ಹೊನಗುಂಟಿಕರೆ (೨೦೦೨) 'ಕಡು ಒಡಲ ಬಗೆದಷ್ಟು' : ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ-೫೮೫೧೦೧

೧. ಚಿಗುರೊಡೆದ ನೆನಪು
೨. ಜಿಜೀವಿಷಾ

೩. ಕಡಲ ಒಡಲು ಬಗೆದಷ್ಟು

೪. ಬಾಲ ಕತ್ತರಿಸಿದರೆ ಡೊಂಕೆಲ್ಲಿ

೫. ದನಿ ಸತ್ತವಳು

೬. ಇಳಿ ಹೊತ್ತಿನಲ್ಲಿ ಕದ ತಟ್ಟಿದ ಅತಿಥಿ

೭. ತನಗೆಟುಕದಿದ್ದರೇನು?

೪೬. ಸಿದ್ಧರಾಮ ಹೊನ್ಕಲ್ (೧೯೯೮) ಬಯಲ ಬಿತ್ತನೆ : ಜಾಗೃತಿ ಪ್ರಕಾಶನ, ಶಹಪೂರ ಗುಲಬರ್ಗಾ ಜಿಲ್ಲೆ

೧. ಸ್ಯಾಡಿಸ್ಟ್

೨. ಪ್ರಯೋಗ

೪೭. ಸೂಗಯ್ಯ ಹಿರೇಮಠ (೧೯೯೩) ಅಂತರ : ಶ್ರೀ ಚನ್ನ ಬಸವೇಶ್ವರ ಸಂಸ್ಥಾನ ಹಿರೇಮಠ ಹಾರಕೂಡ, ಬೀದರ ಜಿಲ್ಲೆ.

೨. ಪರಾಮರ್ಶನ ಗ್ರಂಥಗಳು :

೦೧. ಅಗ್ರಹಾರ ಕೃಷ್ಣಮೂರ್ತಿ (ಸಂ) (ದ್ವಿಮು. ೨೦೦೭) 'ಸಂಸ್ಕೃತಿ ಕಥನ' : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೦೨. ಅಂದಗೂರು ಶೋಭ, ಶ್ರೀಲಕ್ಷ್ಮಿ ಸಂ. (೧೯೮೮) 'ಮಹಿಳೆಯ ಮುನ್ನಡೆ' : ಮಾನಿನಿ ಪ್ರಕಾಶನ, ಬೆಂಗಳೂರು - ೧೦

೦೩. ಅಮರೇಶ ನುಗಡೋಣಿ (೨೦೦೦) 'ರಾಯಚೂರು ಜಿಲ್ಲೆಯಲ್ಲಿ ಹೈದರಾಬಾದ ಕರ್ನಾಟಕ ವಿಮೋಚನ ಚಳುವಳಿ' : ಪ್ರಸಾರಾಂಗ, ಕ.ವಿ.ಹಂಪಿ.

೦೪. ಅಮರೇಶ ನುಗಡೋಣಿ (೨೦೦೩) 'ನುಡಿವ ಬೆಡಗು' : ಪ್ರಸಾರಾಂಗ, ಕ.ವಿ.ವಿ. ಹಂಪಿ.

೦೫. ಅಕ್ಕಿ. ಡಿ. ಎನ್. (ಸಂ) (೧೯೯೯) 'ಹಡದವ್ವ ಹಾಡ್ಯಾಳ' : ಕ.ವಿ ಕುಂಚ ಪ್ರಕಾಶನ, ಗೋಗಿ.

೦೬. ಅಲ್ಲಪ್ರಭು ಜೆಟ್ಟದೂರ ಎಚ್.ಎಸ್. ಪಾಟೀಲ್ (ಸಂ) (೨೦೦೫) 'ಕೊಪ್ಪಳ ಜಿಲ್ಲಾ ದರ್ಶನ' ಪ್ರಸಾರಾಂಗ, ಗು.ವಿ.ವಿ. ಗುಲಬರ್ಗಾ.

೦೭. ಇಂದಿರಾ ಆರ್. (೧೯೯೪) 'ಸ್ತ್ರೀವಾದ ದಿಕ್ಸೂಚಿ' : ಸಮತಾ ಅಧ್ಯಯನ ಕೇಂದ್ರ, ಮೈಸೂರು.

೦೮. ಇಂದಿರಾ ಆರ್. (೨೦೦೨) 'ಮಹಿಳೆ, ಸಮಾಜ, ಸಂಸ್ಕೃತಿ' : ಪ್ರಸಾರಾಂಗ, ಕ.ವಿ.ವಿ. ಹಂಪಿ.

೦೯. ಎಂಗಲ್ಸ್ ಪ್ರೆಡರಿಕ್ (ಅನು) ಗೋಪಾಲ ಕೃಷ್ಣರಾವ, ಕೆ. ಎಲ್. (೧೯೮೦) 'ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ' : ಪ್ರಗತಿ ಪ್ರಕಾಶನ, ಮಾಸ್ಕೋ.

೧೦. ಒಡೆಯರ್ ಡಿ. ಹೆಗ್ಗಡೆ, ಎನ್ ಅನ್ನಪೂರ್ಣೇಶ್ವರಿ (೨೦೦೩) 'ಮಹಿಳಾ ಅಧ್ಯಯನ ನೆಲೆಗಳು ಮತ್ತು ಆಯಾಮಗಳು' : ಮಾನವಾಭಿವೃದ್ಧಿ ಕೇಂದ್ರ, ಮೈಸೂರು.

೧೧. ಕಮಲಾ ಹಂಪನಾ (೨೦೦೩) 'ಬೊಗಸೆ, ಮಹಿಳೆ, ಸುತ್ತ ಮುತ್ತು' : ಸಿ.ವಿ.ಜಿ ಪಬ್ಲಿಕೇಶನ್, ಬೆಂಗಳೂರು.

೧೨. ಕವಿತಾ ರೈ. ಬಿ.ಆರ್ (೨೦೦೫) 'ಮಹಿಳೆ' : ಆಸ್ತಿತ್ವದ ಸಂಕಥನ ಒಂದು ಪರಿಕಲ್ಪನಾತ್ಮಕ ಅಧ್ಯಯನ, ಸಿ.ವಿ.ಜಿ ಪಬ್ಲಿಕೇಶನ್, ಬೆಂಗಳೂರು.

೧೩. ಕಿಶೋರಿ ನಾಯಕ್ ಕೆ. (೧೯೯೯) 'ಸ್ತ್ರೀವಾದ, ನೆಲೆಗಳು ಮತ್ತು ನಿಲುವುಗಳು' : ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

೧೪. ಕೇಶವಶರ್ಮಾ (೨೦೦೦) 'ಸ್ತ್ರೀ ಮತ್ತು ರಾಜಕಾರಣ' : ಪ್ರಸಾರಾಂಗ, ಕ.ವಿ.ವಿ. ಹಂಪಿ

೧೫. ಖಂಡೋಬಾ. ಪಿ.ಕೆ. ಭಾಸ್ಕರ. ಟಿ.ಎಂ. (ಸಂ) (೨೦೦೪) 'ಜನಪದ ಕಥನ ಗೀತೆಗಳು' ಪ್ರಸಾರಾಂಗ, ಗು. ವಿ. ವಿ. ಗುಲಬರ್ಗಾ.

೧೬. ಗಾಯತ್ರಿ ನಾವಡ (೧೯೯೭) 'ವಿರಚನೆ' : ಎನ್.ಆ.ಎ.ಎ.ಎಚ್ ಪ್ರಕಾಶನ, ಕೋಟೇಶ್ವರ ದಕ್ಷಿಣ ಕನ್ನಡ.

೧೭. ಗಾಯತ್ರಿ ನಾವಡ (೨೦೦೦) 'ಭಾರತೀಯ ಸ್ತ್ರೀವಾದ ಒಂದು ಸಂಕಥನ' : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಗಾಯತ್ರಿ ನಾವಡ (೨೦೦೩) 'ಮಹಿಳಾ ಸಂಕಥನ' : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೯. ಗಾಯಿತ್ರಿ. ಎನ್. (೧೯೯೬) 'ಮಹಿಳೆ ಬಿಡುಗಡೆಯ ಹಾದಿಯಲ್ಲಿ' : ನವ ಕರ್ನಾಟಕ ಪಬ್ಲಿಕೇಶನ, ಬೆಂಗಳೂರು.

೨೦. ಗಿರಿಜಾ ಶಾಸ್ತ್ರೀ (೨೦೦೦) 'ಆಧುನಿಕ ಕನ್ನಡ ಸಣ್ಣಕಥೆಗಳು' : ಒಂದು ಸ್ತ್ರೀವಾದಿ ಅಧ್ಯಯನ, ಕ.ವಿ.ಹಂಪಿ.

೨೧. ಗೀತಾಬಾಲಿ ನಾಯಕ್ (೨೦೦೩) 'ಕನ್ನಡ ಕಥನ ಸಾಹಿತ್ಯ ಮತ್ತು ಸ್ತ್ರೀ ನಿರ್ವಚನ' : ಕನ್ನಡ ವಿಶ್ವವಿದ್ಯಾಲಯ, ಹಂಪಿ. ಸ್ವೀಕೃತ (ಅಪ್ರಕಟಿತ)

೨೨. ಚಂದ್ರಶೇಖರ. ಟಿ. ಆರ್. (೨೦೦೧) 'ಮಹಿಳೆ ಆಥಿಕತೆ ಮತ್ತು ಅಭಿವೃದ್ಧಿ' : ಪ್ರಸಾರಾಂಗ, ಕ.ವಿ. ಹಂಪಿ.

೨೩. ಛಾಯಾ ದಾತಾರ್ (ಅನು) ಸರಸ್ವತಿ ರಿಸಬೂಡ (೧೯೯೨) 'ಸ್ತ್ರೀ-ಪುರುಷ' : ಇಳಾ ಪ್ರಕಾಶನ, ಬೆಂಗಳೂರು.

೨೪. ಜಾಗಿರದಾರ ಆರ್.ಜಿ. ವಿಠ್ಠಲರಾವ ಲಿಂಗಸೂರು (೧೯೯೧) 'ಹೈದರಾಬಾದ ಕರ್ನಾಟಕ' : ಪ್ರೇಮನಗರ, ಹೈದರಾಬಾದ.

೨೫. ಜಯಶ್ರೀ ಯ.ಶ್ರೀ (೨೦೦೨) 'ಮಹಿಳೆ ಮತ್ತು ಕಲೆ' : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೬. ಜ್ಯೋತಿ ಶಶಿಕುಮಾರ (೨೦೦೭) 'ಮಹಿಳಾ ಸಾಮಾಜಿಕತೆ' : ಮಹಿಳಾ ಅಧ್ಯಯನ ಕೇಂದ್ರ, ಹಂಪಿ.

೨೭. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ (೧೯೯೪) 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ' : ಕನ್ನಡ ಸಂಘ, ಕ್ರೈಸ್ಟ್ ಕಾಲೇಜ, ಬೆಂಗಳೂರು.

೨೮. ದೇವಿ ಪ್ರಸಾದ ಚಟ್ಟೋಪಾಧ್ಯಾಯ (ಮೂ.ಮು. ೨೦೦೪) 'ಮಾತೆಯರು ಮಾನ್ಯಯರಾಗಿದ್ದಾಗ' : ನವಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

೨೯. ಧರ್ಮರಾವು ತಾಪಿ (೧೯೮೩) 'ವಿವಾಹ' : ನವ ಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

೩೦. ಧರ್ಮಾರಾವು ತಾಪಿ. (೨೦೦೫) 'ಕಬ್ಬಿಣದ ಕಾಚಾಗಳು' : ನವ ಕರ್ನಾಟಕ ಪಬ್ಲಿಕೇಶನ್, ಬೆಂಗಳೂರು.

೩೧. ನಲವಡಿ ಶ್ರೀಕಂಠಶಾಸ್ತ್ರೀ (೧೯೯೮) 'ಹೈದರಾಬಾದ ರಜಾಕಾರ ಲಾವಣಿ' : ಪ್ರ.ಕ.ವಿ. ಹಂಪಿ.

೩೨. ನಾಗರಾಜ ಡಿ. ಆರ್. (೧೯೯೦) 'ಅಮೃತ ಮತ್ತು ಗರುಡ' : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೩೩. ನಾಗಲಕ್ಷ್ಮಿ ಕೆ.ಜಿ. (೨೦೦೨) 'ಮಕ್ಕಳಿಲ್ಲಿ ಮಾರಾಟಕ್ಕಿವೆ' ಕೆ.ಜಿ. ನಾಗಲಕ್ಷ್ಮಿ ಪ್ರಕಾಶನ, ಬೆಂಗಳೂರು.

೩೪. ನಾಗರಾಜ ಡಿ.ಆರ್. (೧೯೯೦) 'ಅಮೃತ ಮತ್ತು ಗರುಡ' : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೩೫. ನಾಗರಾಜ ಡಿ.ಆರ್. (೨೦೦೨) 'ಶಕ್ತಿ ಶಾರದೆಯ ಮೇಳ' : ಅಕ್ಷರ ಪ್ರಕಾಶನ, ಬೆಂಗಳೂರು.

೩೬. ನಾಗಭೂಷಣ, ಓ.ಎಲ್ (೧೯೯೮) 'ವಿಮರ್ಶೆಯ ಪರಿಭಾಷೆ' : ಅಂಕಿತ ಪ್ರಕಾಶನ, ಬೆಂಗಳೂರು.

೩೭. ನೇಮಿಚಂದ್ರ (೨೦೦೧) 'ಮಹಿಳಾ ಅಧ್ಯಯನ' : ಅಂಕಿತ ಪ್ರಕಾಶನ, ಬೆಂಗಳೂರು.
೩೮. ಪ್ರಭಾಮಣಿ (೨೦೦೨) 'ಮಹಿಳೆ ಮತ್ತು ಧರ್ಮ' : ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
೩೯. ಪಾರ್ವತಿ ಎಚ್.ಎಸ್ ಡಾ. ನಿರುಪಮಾ (೨೦೦೫) 'ಕರ್ನಾಟಕ ಮಹಿಳೆಯರ ಸಾಧನೆ' : ಆರತಿ ಪಬ್ಲಿಕೇಶನ್, ಬೆಂಗಳೂರು.
೪೦. ಪಾಟೀಲ್. ಎಂ.ಬಿ. (೧೯೯೭) 'ಗುಲಬರ್ಗಾ ಜಿಲ್ಲೆ ಗೆಜೆಟಿಯರ್' : ಕರ್ನಾಟಕದ ರಾಜ್ಯ ಸರಕಾರದ ಪ್ರಕಟನೆ.
೪೧. ಬರಗೂರು ರಾಮಚಂದ್ರಪ್ಪ (ಪ್ರ.ಸಂ) (೧೯೮೩) 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ' : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು –೨
೪೨. ಬರಗೂರು ರಾಮಚಂದ್ರಪ್ಪ (೧೯೯೩) 'ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ' : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರ–೨
೪೩. ಬರಗೂರು ರಾಮಚಂದ್ರಪ್ಪ (೧೯೯೮) 'ಸಾಹಿತ್ಯದಲ್ಲಿ ರಾಜಕಾರಣ' ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೪೪. ಬಸವರಾಜ ಸಬರದ (೧೯೯೦) 'ಹೊಸದಿಕ್ಕು' : ಪಲ್ಲವಿ ಪ್ರಕಾಶನ ಬೀದರ
೪೫. ಬಸವರಾಜ ಪೋಲಿಸಪಾಟೀಲ (೨೦೦೨) 'ಬಿಡುಗಡೆ' : ಅಮರ ಪ್ರಕಾಶನ, ಗುಲಬರ್ಗಾ.
೪೬. ಬಸವರಾಜ ಪೋಲಿಸಪಾಟೀಲ (೨೦೦೧) 'ಹೈದರಾಬಾದ ಕರ್ನಾಟಕದ ಜನಪದ ಸಾಹಿತ್ಯ' : ಪ್ರ. ಶಶಿಕಲಾ ಬಿ. ಪಾಟೀಲ್, ಗುಲಬರ್ಗಾ.
೪೭. ಭಾಗ್ಯಲಕ್ಷ್ಮಿ. ಎನ್.ವಿ. (೨೦೦೨) 'ಮಹಿಳಾ ಸ್ವಾತಂತ್ರ್ಯ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೪೮. ಮಂಗಳಾ ಪ್ರಿಯದರ್ಶಿನಿ.ಡಿ. (೨೦೦೭) 'ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ' : ಮಹಿಳಾ ಅಧ್ಯಯನ ಕೇಂದ್ರ. ಕ.ವಿ.ವಿ. ಹಂಪಿ.
೪೯. ಮಹಾಬಲೇಶ್ವರಪ್ಪ.ಬಿ.ಸಿ. (೧೯೯೭) 'ಹೈದರಾಬಾದ ಕರ್ನಾಕಟದಲ್ಲಿ ರಾಜಕೀಯ ಚಳುಯವಳಿಗಳು' : ಪ್ರಸಾರಾಂಗ. ಗು.ವಿ. ಗುಲಬರ್ಗಾ.
೫೦. ಮಹೇಶ್ವರಿ, ಯು (೨೦೦೧) 'ಇದು ಮಾನುಷಿಯ ಓದು' : ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು.
೫೧. ಮಧುಕೇಶ್ವರ (ಅನು) ಮೀರಾ. ಎಲ್.ಜಿ. (೧೯೯೭) 'ಮಾನುಷಿಯ ಮಾತು' : ಅಕ್ಷರ ಪ್ರಕಾಶನ, ಹೆಗ್ಗೋಡು.
೫೨. ಮೃತ್ಯುಂಜಯ ಹೊರಕೇರಿ, ಬಸವಲಿಂಗ ಸೊಪ್ಪಿಮಠ (ಸಂ) (೨೦೦೫) 'ರಾಯಚೂರು ಜಿಲ್ಲಾ ದರ್ಶನ' ಪ್ರಸಾರಾಂಗ, ಗು.ವಿ. ಗುಲಬರ್ಗಾ.
೫೩. ಮುಳುಗುಂದ ಚ.ವಿ. ನಾಗೇಶ.ಎಚ್.ವಿ. (ಸಂ) 'ಆಧುನಿಕ ಮಹಿಳೆ ಮತ್ತು ಸಮಾಜ' : ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ.
೫೪. ರಾಜಶೇಖರ. ಜಿ. (೧೯೮೧) 'ತೆಲಂಗಾಣ ರೈತ ಹೋರಾಟ' : ಸಮುದಾಯ ಪ್ರಕಾಶನ,

ಬೆಂಗಳೂರು.
೫೫. ರಾಹುಲ ಸಾಂಕೃತ್ಯಾಯನ (ಐ.ಮು.. ೨೦೦೨) 'ವೋಲ್ಗಾ-ಗಂಗಾ' : ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು.
೫೬. ರಾಜೇಂದ್ರ ಚನ್ನಿ (೨೦೦೪) 'ಜಾಗತೀಕರಣ ಒಂದು ಸಮಗ್ರ ಮಂಥನ' : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೫೭. ರಾಜೇಂದ್ರ ಯರನಾಳೆ (ಸಂ) (೧೯೯೪) 'ಶೀಗಿ ಹಾಡುಗಳು' : ಸಿದ್ಧಲಿಂಗ ಮಹಾಸ್ವಾಮಿಗಳು ವಿರಕ್ತಮಠ ಕುಶನೂರ, ಬೀದರ.
೫೮. ರಾಜಶ್ರೀ ಕಿಶೋರ (೨೦೦೧) 'ದೇವಸೂಗೂರಿನ ನಾಗರ ಎಲ್ಲಮ್ಮ' : ಶ್ರೀ ಸೂಗೂರೇಶ್ವರ ಸೇವಾ ಸಮಿತಿ ಟ್ರಸ್ಟ, ದೇವಸೂಗೂರ
೫೯. ರಾಮಸ್ವಾಮಿ. ಎಸ್.ಆರ್. (೨೦೦೦) 'ಸರ್ದಾರ ವಲ್ಲಭಾಯಿ ಪಟೇಲ್' : ಸ್ವಪ್ನ ಬುಕ್ ಹೌಸ, ಬೆಂಗಳೂರು.
೬೦. ರಾಮೇಶ್ವರ. ಎ.ಕೆ. (೧೯೯೭) 'ಅಚ್ಚಮಲ್ಲಿಗೆ ಹೂ' : ಕವಿರಾಜ ಮಾರ್ಗ ಪ್ರಕಾಶನ, ಗುಲಬರ್ಗಾ.
೬೧ ರೋಹಿಣಿ. ಬಿ.ಎಮ್ (೧೯೯೫) 'ಸ್ತ್ರೀ ಸಂವೇದನೆ' ಹೇಮಾಂಶು ಪ್ರಕಾಶನ, ಮಂಗಳೂರು.
೬೨. ರೋಹಿಣಿ. ಬಿ.ಎಮ್. (೨೦೦೨) 'ಸ್ತ್ರೀ ಸಂಸ್ಕೃತಿ ಶಿಕ್ಷಣ' : ಹೇಮಾಂಶು ಪ್ರಕಾಶನ, ಮಂಗಳೂರು.
೬೩. ಲಲಿತಾ ಭಟ್ (೨೦೦೨) 'ಮಹಿಳೆ ಮತ್ತು ಕುಟುಂಬ ಯೋಜನೆ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮
೬೪. ವಸಂತ ಬನ್ನಾಡಿ (೧೯೯೫) 'ಸಂಸ್ಕೃತಿ ಚಿಂತನ' : ಅರಿವು ಬರಹ ಪ್ರಕಾಶನ
೬೫. ವಾಲಿಕಾರ ಚನ್ನಣ್ಣ (೧೯೮೮) 'ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ' : ದಲಿತ-ಬಂಡಾಯ ಪ್ರಕಾಶನ ಕೇಂದ್ರ, ಗುಲಬರ್ಗಾ-೧೭
೬೬. ವಾಲಿಕಾರ ಚನ್ನಣ್ಣ (೧೯೮೬) 'ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು' : ಯುನಿವರ್ಸಲ್ ಪಬ್ಲಿಕೇಶನ್ಸ್, ರಾಯಚೂರು.
೬೭. ವಿಜಯಾ ದಬ್ಬೆ (೧೯೮೯) 'ಮಹಿಳೆ ಸಾಹಿತ್ಯ ಸಮಾಜ' : ರಚನಾ ಪ್ರಕಾಶನ, ಮೈಸೂರು-೧೭
೬೮. ವಿಜಯಾ ದಬ್ಬೆ (೧೯೯೭) 'ನಾರಿ, ದಾರಿ-ದಿಗಂತ' : ರಚನಾ ಪ್ರಕಾಶನ, ಮೈಸೂರು - ೧೭
೬೯. ವಿಜಯಾ ದಬ್ಬೆ (೨೦೦೩) 'ಮಹಿಳೆ ಮತ್ತು ಮಾನವತೆ' : ಪ್ರಕಾಶಕರು, ಯಶೋಧ ರಾಗನ್ ಟ್ರಸ್ಟ್, ಮೈಸೂರು-೨
೭೦. ವಿಮಲಾ ರಾಮರಾವ (೨೦೦೨) 'ಮಹಿಳೆ ಮತ್ತು ನಗರ ಜೀವನ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೮
೭೧. ವಿಠಲರಾವ್ ಗಾಯಕವಾಡ್ (೨೦೦೧) 'ಸ್ತ್ರೀವಾದಿ ವಿಮರ್ಶೆ, ಸ್ವರೂಪ ಮತ್ತು ಪರಿಕಲ್ಪನೆಗಳು' : ಪ್ರಸಾರಾಂಗ, ಕ.ವಿ.ವಿ. ಹಂಪಿ.
೭೨. ವಿಜಯಾಶ್ರೀ ಸಬರದ (ಪ್ರ.ಸಂ) (೨೦೦೫) 'ಶೈಲಶ್ರೀ' : ಚೇತನ ಪ್ರಕಾಶನ, ಗುಲಬರ್ಗಾ-೨
೭೩. ವೆಂಕೋಬರಾವ ಡಿ. (೨೦೦೦) 'ನ್ಯಾಯಕ್ಕಾಗಿ ಮಹಿಳೆಯರ ಹೋರಾಟ' : ದಿವ್ಯಚಂದ್ರ ಪ್ರಕಾಶನ, ಬೆಂಗಳೂರ - ೭೯

೭೪. ಶಶಿಕಲಾ ವೀರಯ್ಯ ಸ್ವಾಮಿ (೧೯೯೫) 'ಸಂವೇದನೆ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೮
೭೫. ಶಮಂತ (೨೦೦೦) 'ದುಡಿತ ಮಿಡಿತ' : ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.
೭೬. ಶಾಂತಾ ಇಮ್ರಾಪೂರ (೨೦೦೧) 'ಮಹಿಳಾ ಸಾಹಿತ್ಯ ಸಂಸ್ಕೃತಿ' : ಚೇತನಾ ಪ್ರಕಾಶನ, ಧಾರವಾಡ.
೭೭. ಶಾಲಿನಿ ರಘುನಾಥ (೨೦೦೨) 'ಹಸುಬೆ ಜಾನಪದ ಅಧ್ಯಯನಗಳು' : ಅಕ್ಷರ ಪ್ರಕಾಶನ, ಹೆಗ್ಗೋಡು.
೭೮. ಶ್ರೀಮತಿ ಎಚ್.ಎಸ್. (೨೦೦೪) 'ಹೆಣ್ಣು-ಹೆಂಗಸು' : ಬ್ಯಾಲಕೆರೆ ಪ್ರಕಾಶನ ಬ್ಯಾಲದಕೆರೆ, ಮಂಡ್ಯ ಜಿಲ್ಲೆ.
೭೯. ಶ್ರೀಮತಿ ಎಚ್.ಎಸ್. (೨೦೦೩) 'ಸೇರಿಕೊಂಡ ಎಳೆಗಳು' : ಸಿ.ವಿ.ಜಿ ಪಬ್ಲಿಕೇಶನ್ಸ್, ಬೆಂಗಳೂರು.
೮೦. ಶ್ರೀಮತಿ ಎಚ್.ಎಸ್ (೨೦೦೬) 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ' : ಪ್ರಸಾರಾಂಗ, ಕ.ವಿ. ಹಂಪಿ.
೮೧. ಶ್ರೀಮತಿ ಎಚ್.ಎಸ್. (೨೦೦೪) 'ಸ್ತ್ರೀವಾದ' : ಪ್ರಸಾರಾಂಗ, ಕ.ವಿ. ಹಂಪಿ.
೮೨. ಶ್ರೀಮತಿ ಎಚ್.ಎಸ್. (೧೯೯೯) 'ಚಹರೆ' : ಇಳಾ ಪ್ರಕಾಶನ, ಬೆಂಗಳೂರು.
೮೩. ಶ್ರೀಮತಿ ಎಚ್.ಎಸ್. (ಸಂ) (೨೦೦೭) ಹೆಣ್ಣು ಮತ್ತು ಭಾಷೆ : ಮಹಿಳಾ ಅಧ್ಯಯನ ಕೇಂದ್ರ ಕ.ವಿ. ಹಂಪಿ.
೮೪. ಶ್ರೀಮತಿ ಎಚ್.ಎಸ್. (ಸಂ) (೨೦೦೭) 'ಮಹಿಳಾ ಆರ್ಥಿಕತೆ' : ಮಹಿಳಾ ಅಧ್ಯಯನ ಕೇಂದ್ರ, ಕ.ವಿ.ವಿ. ಹಂಪಿ.
೮೫. ಶ್ರೀಮತಿ ಎಚ್.ಎಸ್. (ಸಂ) (೨೦೦೭) 'ಮಹಿಳೆ ದುಡಿಮೆ ಮತ್ತು ಬಿಡುವು' : ಮಹಿಳಾ ಅಧ್ಯಯನ ಕೇಂದ್ರ, ಕ.ವಿ.ವಿ. ಹಂಪಿ.
೮೬. ಶೀಲತಾ ಪಾಡ್ಲಿವಾಲ ಅನು. ಭಾರ್ಗವಿ ನಾಗರಾಜ, ನಾಗರಾಜ್ ಆತ್ಮವಿಲಾಸ (೧೯೯೮) 'ಅಂತಸ್ತುಗಳ ಅನ್ವೇಷಣೆ' : ಉಚ್ಚ ಅಧ್ಯಯನ ರಾಷ್ಟ್ರೀಯ ಸಂಸ್ಥೆ, ಬೆಂಗಳೂರು.
೮೭. ಶ್ರೀಪತಿ. ಕೆ. (೨೦೦೫) 'ಕನ್ನಡ ಕಾದಂಬರಿಗಳಲ್ಲಿ ವೇಶ್ಯಾ ಜೀವನ' : ಪಿ.ಎಚ್.ಡಿ ಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ ಸ್ವೀಕೃತ (ಅಪ್ರಕಟಿತ)
೮೮. ಸಬಿಹಾ ಭೂಮಿಗೌಡ (೨೦೦೧) 'ಬಗೆ' : ಲೋಹಿಯಾ ಪ್ರಕಾಶನ, ಬಳ್ಳಾರಿ.
೮೯. ಸಂಧ್ಯಾರೆಡ್ಡಿ. ಕೆ.ಆರ್. (೧೯೯೫) 'ಜನಪದ ಸಾಹಿತ್ಯದಲ್ಲಿ ಮಹಿಳೆ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೯೦. ಸಂಧ್ಯಾರೆಡ್ಡಿ ಕೆ.ಆರ್. (ಸಂ) (೨೦೦೩) 'ಮಹಿಳಾ ಜಾನಪದ' : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೨
೯೧. ಸರೋಜ. ಕೆ. (೨೦೦೧) 'ಮಹಿಳೆ ಮತ್ತು ಆರೋಗ್ಯ' : ಪ್ರಸಾರಾಂಗ, ಕ.ವಿ. ಹಂಪಿ

೯೨. ಸಾವಿತ್ರಿ. ಕೆ (೨೦೦೨) 'ಕೊಳಚೆ ಪ್ರದೇಶದಲ್ಲಿ ಮಹಿಳೆ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೯೩. ಸಂ. ಮತ್ತು ಪ್ರ. (೧೯೮೫) 'ಜನಪದ ನೂರೆಂಟು ಕಥೆಗಳು' : ಕನ್ನಡ ಅಧ್ಯಯನ ಸಂಸ್ಥೆ, ಗು.ವಿ.ಗುಲಬರ್ಗಾ.

೯೪. ಸಿದ್ಧಲಿಂಗಯ್ಯ (೧೯೯೭) 'ಗ್ರಾಮದೇವತೆಗಳು' : ಅಂಕಿತ ಪ್ರಕಾಶನ, ಬೆಂಗಳೂರು.

೯೫. ಸಿಂಗಮ್ಮಾಳ್. ಎಂ.ಎ. (೨೦೦೨) 'ರಾಜಕೀಯದಲ್ಲಿ ಮಹಿಳೆ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೮

೯೬. ಸೀತಾ ಲಕ್ಷ್ಮಿ (೨೦೦೪) 'ಮಾಸ್ತಿ ಅವರ ಕತೆಗಳಲ್ಲಿ ಸ್ತ್ರೀ ಪ್ರತಿನಿಧೀಕರಣ ಪಿಎಚ್.ಡಿ ಪ್ರಬಂಧ' ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ)

೯೭. ಸುಮಿತ್ರಾಬಾಯಿ. ಬಿ.ಎನ್. (೧೯೯೫) 'ಸ್ತ್ರೀವಾದ' : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯೮. ಸುಮಿತ್ರಾಬಾಯಿ.ಬಿ.ಎನ್. (೧೯೯೫) 'ಸ್ತ್ರೀವಾದ ಪ್ರವೇಶಿಕೆ' : ಕರ್ನಾಟಕ ಲೇಖಕಿಯ ಸಂಘ, ಬೆಂಗಳೂರು.

೯೯. ಸುನಂದಮ್ಮ ಆರ್. (೨೦೦೫) 'ಮಹಿಳಾ ಸಂಸ್ಕೃತಿ' : ಸಮತಾ ಅಧ್ಯಯನ ಕೇಂದ್ರ, ಮೈಸೂರು.

೧೦೦. ಸೋಮನಾಥ ಯಾಳವಾರ, ಪ್ರೇಮಾ ಸಿರ್ಸೆ(ಸಂ) (೨೦೦೫) ಬೀದರ ಜಿಲ್ಲಾ ದರ್ಶನ ಪ್ರಸಾರಾಂಗ, ಗು.ವಿ.ಗು.

೧೦೧. ಹಲಸಂಗಿ ಗೆಳೆಯರು (೨೦೦೦) 'ಗರತಿಯ ಹಾಡು' : ಸಮಾಜ ಪುಸ್ತಕಾಲಯ ಧಾರವಾಡ ೧

೧೦೨. ಹೇಮಲತಾ. ಎಚ್.ಎಮ್ (೨೦೦೪) 'ಮಹಿಳಾ ಅಧ್ಯಯನ – ೧' : ಡಿ.ವಿ.ಕೆ.ಮೂರ್ತಿ, ಮೈಸೂರು–೪

೧೦೩. ಹೇಮಲತಾ ಎಚ್.ಎಮ್. (೨೦೦೪) 'ಮಹಿಳಾ ಅಧ್ಯಯನ –೨' : ಡ.ವಿ.ಕೆ. ಮೂರ್ತಿ, ಮೈಸೂರು – ೪